

ನ್ನಡದ ದೀಪ
ಟಿ ಚನ್ನಬಸಪ್ಪನವರ ಸ್ಮರಣ ಗ್ರಂಥ

ಕರ್ನಾಟಕ ಮಕ್ಕಳ ಸಾಹಿತ್ಯ ಅಕಾಡೆಮಿ

ರಾಜ್ಯಮಟ್ಟದ ಮಕ್ಕಳ

ದ್ವಿತೀಯ ಸಾಹಿತ್ಯ ಸಮ್ಮೇಳನ ಧಾರವಾಡ

೨೬, ೨೭ ಅಕ್ಟೋಬರ ೧೯೮೫

ನೆನಪಿನ ಕಾಣಿಕೆ

ಕನ್ನಡದ ದೀಪ

ಡೆಪ್ಯೂಟಿ ಚನ್ನಬಸಪ್ಪನವರ ಸ್ಮರಣ ಗ್ರಂಥ

★

ಶ್ರೀ ಶಿವಶಂಕರ ಹಿರೇಮಠ
ಸಹ–ಸಂಪಾದಕರು

ಶ್ರೀ ಮ. ಗು. ಹಂದ್ರಾಳ
ಪ್ರಧಾನ ಸಂಪಾದಕರು

★

ಡೆಪ್ಯೂಟಿ ಚನ್ನಬಸಪ್ಪನವರ ಶತಮಾನೋತ್ಸವ ಸಮಿತಿ
ಶಿಕ್ಷಕರ ಕೇಂದ್ರ, ರೊದ್ದರಸ್ತೆ, ಧಾರವಾಡ-೫೮೦೦೦೧

ಕನ್ನಡದ ದೀಪ

* ಸಂಪಾದಕ ಮಂಡಳದ ಸದಸ್ಯರು :

ಶ್ರೀ ಕೆ. ಬಿ. ತೇರಗಾಂವಕರ,
ನಿವೃತ್ತ ವಿಭಾಗೀಯ ಉಪನಿರ್ದೇಶಕರು, ಧಾರವಾಡ.

ಶ್ರೀ ಎಸ್. ಪಿ. ಪಾಟೀಲ,
ನಿವೃತ್ತ ಶಿಕ್ಷಣ ಯೋಜನಾಧಿಕಾರಿಗಳು, ಧಾರವಾಡ.

ಡಾ. ಎಂ. ಎಂ. ಕಲಬುರ್ಗಿ,
ಪ್ರಾಧ್ಯಾಪಕರು, ಬಸವ ಪೀಠ, ಕನ್ನಡ ಅಧ್ಯಯನ ಸಂಸ್ಥೆ, ಕ. ವಿ., ಧಾರವಾಡ.

ಶ್ರೀ ವ್ಹಿ. ಜಿ. ಮಾರಿಹಾಳ,
ಉಪನ್ಯಾಸಕರು, ಸ್ನಾತಕೋತ್ತರ ಶಿಕ್ಷಣ ಅಧ್ಯಯನ ವಿಭಾಗ, ಕ.ವಿ., ಧಾರವಾಡ

ಶ್ರೀ ಎಸ್. ಜಿ. ಪಾಟೀಲ,
ಉಪನಿರ್ದೇಶಕರು, ಸಾರ್ವಜನಿಕ ವಿದ್ಯಾ ಇಲಾಖೆ, ಧಾರವಾಡ.

ಶ್ರೀ ಆಯ್. ಎಸ್. ಬಿದರಿ,
ನಿವೃತ್ತ ಉಪನಿರ್ದೇಶಕರು, ವಿದ್ಯಾ ಇಲಾಖೆ ಧಾರವಾಡ.

ಶ್ರೀ ಎಸ್. ಎಚ್. ಬಟ್ಟೂರ,
ಅಧೀಕ್ಷಕರು, ಉಪಾಧ್ಯಾಯರ ಸರಕಾರಿ ತರಬೇತಿ ವಿದ್ಯಾಲಯ, ಧಾರವಾಡ.

* ಪ್ರಕಾಶಕರು :
ಡೆಪ್ಯೂಟಿ ಚನ್ನಬಸಪ್ಪನವರ ಶತಮಾನೋತ್ಸವ ಸಮಿತಿ,
ಶಿಕ್ಷಕರ ಕೇಂದ್ರ, ರೊಡ್ಡ ರಸ್ತೆ, ಧಾರವಾಡ.

* ಪ್ರಕಟನೆಯ ಮೂಲ ದಾನಿಗಳು: ವಿಜಯ ಆಯಿಲ್ ಮಿಲ್ ಮಾಲೀಕರುಗಳಾದ
ಚನ್ನಬಸವಪ್ಪನವರ ಮರಿಮೊಮ್ಮಗ
ಶ್ರೀ ಬಾಬಣ್ಣ (ತೋಟಪ್ಪ) ಚಂದ್ರಶೇಖರ ಧಾರವಾಡ.
ಮತ್ತು ಮೊಮ್ಮಕ್ಕಳಾದ
ಶ್ರೀ ಸಿದ್ದಣ್ಣ ಬಸಪ್ಪ ಕಲಾದ
ಶ್ರೀ ಅಣ್ಣಪ್ಪ (ಬಸಪ್ಪ) ಶಂಕರೆಪ್ಪ ಕುಂದಗೋಳ
ಶ್ರೀ ಶಿವಪ್ರಭು ಶಂಕರೆಪ್ಪ ಕುಂದಗೋಳ

* ಬೆಲೆ : ೨೦/– ರೂ.
* ಮುದ್ರಣ : (೧೯೮೨)
ತೋಂಟದಾರ್ಯ ಮುದ್ರಣಾಲಯ, ಕಿಲ್ಲೆ, ಧಾರವಾಡ.

ಮುಖಪುಟ : ಡೆಪ್ಯೂಟಿ ಚನ್ನಬಸಪ್ಪನವರ ಕಂಚಿನ ಪ್ರತಿಮೆ

ಪ್ರತಿಮೆಯ ಶಿಲ್ಪಿ: ಶ್ರೀ ನಾಗೇಶರಾವ ಶಿಲ್ಪಿ, ಬೆಂಗಳೂರು

ಅರಿಕೆ

ಕಳೆದ ಶತಮಾನದಲ್ಲಿ ಉತ್ತರ ಕರ್ನಾಟಕದಲ್ಲಿ ಕನ್ನಡ ಶಾಲಾಮಟ್ಟದಲ್ಲಿ ಸಂಪೂರ್ಣವಾಗಿ ಅಳಿದು ಹೋಗುವ ಸ್ಥಿತಿಯಲ್ಲಿದ್ದಾಗ ಕನ್ನಡವೇ ಮುಂಬೈ ಕರ್ನಾಟಕದ ಜನಭಾಷೆ ಎಂಬ ಅರಿವನ್ನು ಸರಕಾರಕ್ಕೆ ಮತ್ತು ಜನತೆಗೆ ಪ್ರಪ್ರಥಮವಾಗಿ ಮಾಡಿಕೊಟ್ಟ ಶ್ರೇಯಸ್ಸು ಚನ್ನಬಸಪ್ಪನವರದು. ನೂರಿಪ್ಪತ್ತೈದು ವರ್ಷಗಳ ಹಿಂದೆ ಗ್ರಾಮೀಣ ಶಿಕ್ಷಣ ಪ್ರಸಾರ ಕಾರ್ಯವನ್ನು ಚನ್ನಬಸಪ್ಪನವರು ಪ್ರಾರಂಭಿಸಿದರು. ಅವರ ಅವಿಶ್ರಾಂತ ಶ್ರಮ ಮತ್ತು ಸೇವೆಯಿಂದಾಗಿ ಅಂದಿನ ಮುಂಬೈ ಪ್ರಾಂತದಲ್ಲಿ ಶಿಕ್ಷಣ ಪ್ರಸಾರ ಕ್ಷೇತ್ರದಲ್ಲಿ ಧಾರವಾಡ ಜಿಲ್ಲೆ ಇಲಾಖೆಗೇ ಪ್ರಥಮ ಎಂದು ಪರಿಗಣಿಸಲ್ಪಟ್ಟಿತು (೧೮೮೦). ಅವರು ಪ್ರಾರಂಭಿಸಿದ '**ಮಠ ಪತ್ರಿಕೆ**' (೧೮೬೫) ಶತಮಾನದುದ್ದಕ್ಕೂ ಕನ್ನಡದಲ್ಲಿ ಬದುಕುಳಿದಿರುವ ಏಕಮೇವ ಪತ್ರಿಕೆ ಎಂಬ ಕೀರ್ತಿಗೆ ಪಾತ್ರವಾಗಿ ಜೀವನ ಶಿಕ್ಷಣ ಎಂಬ ಹೆಸರಿನಲ್ಲಿ ಇಂದಿಗೂ ಪ್ರಕಟಗೊಂಡು ಶಾಲಾ ರಂಗದಲ್ಲಿ **ಕನ್ನಡದ ದೀಪ**ವನ್ನು ಕಾಯ್ದುಕೊಂಡು ಬಂದಿರುವದೂ ಸಂತೋಷದ ವಿಷಯ.

ಡೆಪ್ಯುಟಿ ಚನ್ನಬಸಪ್ಪನವರ ಶತಮಾನೋತ್ಸವ ಸಮಿತಿಯವರು ಸಮಾರಂಭವನ್ನು ದೊಡ್ಡ ಪ್ರಮಾಣದಲ್ಲಿ ಆಚರಿಸಬೇಕು, ಅವರ ಪುತ್ಥಳಿಯೊಂದನ್ನು ಧಾರವಾಡದಲ್ಲಿ ಪ್ರತಿಷ್ಠಾಪಿಸಬೇಕು, ಹಾಗೂ ಸ್ಮಾರಕ ಗ್ರಂಥವೊಂದನ್ನು ಪ್ರಕಟಿಸಬೇಕು, ಶತಮಾನೋತ್ಸವದ ಅಂಗವಾಗಿ ವಿಶ್ವಸ್ಥ ನಿಧಿಯೊಂದನ್ನು ಏರ್ಪಡಿಸಿ ಅದರ ಮೂಲಕ ಪ್ರಾಥಮಿಕ ಶಾಲಾ ಮಕ್ಕಳಿಗೆ ಉಪಯುಕ್ತವಾಗುವ ಪುಸ್ತಕಗಳ ಪ್ರಕಟನೆಗಾಗಿ ಗ್ರಂಥ ಮಾಲೆಯೊಂದನ್ನು ಪ್ರಾರಂಭಿಸಬೇಕು, ಪ್ರಾಥಮಿಕ ಶಿಕ್ಷಣ ಮತ್ತು ಶಿಕ್ಷಕ ತರಬೇತಿಯ ಗುಣಮಟ್ಟ ಎತ್ತರಿಸುವ ಹಾಗೂ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಕಲ್ಯಾಣ ಕಾರ್ಯಗಳನ್ನು ಕೈಕೊಳ್ಳುವ ಯೋಜನೆ ಹಾಕಿಕೊಳ್ಳಬೇಕೆಂದು ನಿರ್ಣಯಿಸಿ ೧೯೮೦ರಲ್ಲಿ ಕಾರ್ಯನಿರತರಾಗಿ ಸಾರ್ವಜನಿಕರ ಸಹಕಾರದಿಂದ ಉತ್ತಮ ಕಾರ್ಯ ಸಾಧನೆ ಮಾಡಿದುದು ಅಭಿಮಾನದ ಸಂಗತಿ.

ಡೆಪ್ಯುಟಿ ಚನ್ನಬಸಪ್ಪ ಪ್ರಾಥಮಿಕ ಶಿಕ್ಷಣ ಪ್ರತಿಷ್ಠಾನ, ಡೆಪ್ಯುಟಿ ಚನ್ನಬಸಪ್ಪ ಗ್ರಂಥಮಾಲೆ ಈಗಾಗಲೇ ಕಾರ್ಯನಿರ್ವಹಿಸುತ್ತಿವೆ. ಚನ್ನಬಸಪ್ಪನವರ ಪ್ರತಿಮೆಯ ಪ್ರತಿಷ್ಠಾಪನೆ ಶೀಘ್ರದಲ್ಲಿಯೇ ಜರುಗಲಿದೆ. ೧೯ನೆಯ ಶತಮಾನದ ಕರ್ನಾಟಕದ ಶಿಕ್ಷಣರಂಗ ಮತ್ತು ಆಧುನಿಕ ಶಿಕ್ಷಣ ಸಮಸ್ಯೆಗಳನ್ನು ಪರಿಚಯಿಸುವ "**ಕನ್ನಡದ ದೀಪ**" ಚನ್ನಬಸಪ್ಪನವರ ಸ್ಮರಣ ಗ್ರಂಥ ಪ್ರಕಟವಾಗುತ್ತಲಿದೆ. ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗೆ ಸರಕಾರದ ಪ್ರಯತ್ನಗಳ ಜೊತೆಗೆ ಸಾರ್ವಜನಿಕರ, ವಿದ್ವಜ್ಜನರ ಸಹಕಾರವೂ ಬೇಕು. ಡೆಪ್ಯುಟಿ ಚನ್ನಬಸಪ್ಪನವರ ಶತಮಾನೋತ್ಸವ ಸಮಿತಿ, ಡೆಪ್ಯುಟಿ ಚನ್ನಬಸಪ್ಪ ಪ್ರಾಥಮಿಕ ಶಿಕ್ಷಣ ಪ್ರತಿಷ್ಠಾನದ ಮಾತೃ ಸಂಸ್ಥೆಯಾಗಿ, ಪ್ರತಿಷ್ಠಾನ ಕಾಯಿದೆಬದ್ಧ ಸಂಸ್ಥೆಯಾಗಿ ಬೆಳೆಯುವದಕ್ಕೆ ಭದ್ರಬುನಾದಿಯನ್ನು ಹಾಕಿಕೊಟ್ಟು ಶಾಶ್ವತಸ್ವರೂಪದ ಕಾಣಿಕೆಯನ್ನು ಕರ್ನಾಟಕದ ಪ್ರಾಥಮಿಕ ಶಿಕ್ಷಣರಂಗಕ್ಕೆ ನೀಡಿದೆ. ಸಮಿತಿಗೆ ಮತ್ತು ಪ್ರತಿಷ್ಠಾನಕ್ಕೆ ನಾಡಿನ ಜನತೆ ಕ್ರಿಯಾತ್ಮಕ ಸಹಾಯ ನೀಡಲೆಂದು ಹಾರೈಸುತ್ತೇನೆ.

ಧಾರವಾಡ
೨೧-೩-೧೯೮೨

ಜಿ. ಬಿ. ಶಂಕರರಾವ
ಅಧ್ಯಕ್ಷರು
ಡೆಪ್ಯುಟಿ ಚನ್ನಬಸಪ್ಪನವರ ಶತಮಾನೋತ್ಸವ ಸಮಿತಿ
ಹಾಗೂ ವಿದ್ಯಾಮಂತ್ರಿಗಳು ಕರ್ನಾಟಕ ಸರಕಾರ

ಸಂಪಾದಕರ ನುಡಿ

ಡೆಪ್ಯೂಟಿ ಚನ್ನಬಸಪ್ಪನವರು (೧೮೩೩–೧೮೮೧) ಒಬ್ಬ ವ್ಯಕ್ತಿಯಾಗಿರಲಿಲ್ಲ; ಅವರು ಕನ್ನಡದ ಜನಮನವನ್ನು ಬಡಿದೆಬ್ಬಿಸುವ ಶಕ್ತಿಯಾಗಿದ್ದರು. ಅವರು ಸಾರ್ವಜನಿಕ ವಿದ್ಯಾ ಇಲಾಖೆಯ ಕೇವಲ ಓರ್ವ ಅಧಿಕಾರಿಯಾಗಿರಲಿಲ್ಲ; ಕನ್ನಡದ ಸಂಸ್ಕೃತಿ ಪರಂಪರೆಗಳನ್ನು ಶಾಲಾ ಶಿಕ್ಷಣದಲ್ಲಿ ಅಳವಡಿಸಿದ ಧೀಮಂತರಾಗಿದ್ದರು. ಇಂಜನಿಯರಿಂಗ ಕಲಿತ ಚನ್ನಬಸಪ್ಪನವರು ಉತ್ತರ ಕರ್ನಾಟಕದಲ್ಲಿ ಕನ್ನಡವನ್ನೇ ಕಟ್ಟಿದರು. ತಮ್ಮ ವಿಚಾರವಾದದಿಂದ, ಜಾತ್ಯಾತೀತ ದೃಷ್ಟಿಯಿಂದ, ಸುಧಾರಣಾ ಕಳಕಳಿಯಿಂದ, ಆಧುನಿಕ ಪ್ರಜ್ಞೆಯಿಂದ, ಸಾಹಿತ್ಯಾಸಕ್ತಿಯಿಂದ, ವೈಜ್ಞಾನಿಕ ಮನೋಭಾವದಿಂದ, ಗಣಿತ ಮೂಲ ತರ್ಕದಿಂದ, ಶಿಕ್ಷಣ ವಿಚಾರ ಪ್ರಚಾರ ಕಾರ್ಯದಲ್ಲಿ ಸರ್ವಾರ್ಪಣ ಮಾಡಿಕೊಂಡ ವಿಭೂತಿಯಾದರು; ಕನ್ನಡದ ಪರಂಜ್ಯೋತಿಯಾದರು. ರಾಜಾರಾಮ ಮೋಹನ ರಾಯರಂತೆ ಕರ್ನಾಟಕದಲ್ಲಿ ಸುಧಾರಣೆಯ ಬೀಜಾರ್ಪಣೆ ಮಾಡಿದರು. ಸಾದಾಜೀವನ, ಉಚ್ಚವಿಚಾರ, ತ್ಯಾಗ, ಅವಿಶ್ರಾಂತ ದುಡಿಮೆ ಮತ್ತು ಧೀರತನದ ಕಾರ್ಯನಿರ್ವಹಣೆಯಿಂದ ಕನ್ನಡದ ಪುನರುಜ್ಜೀವನದ ಅರುಣೋದಯದಲ್ಲಿ ಬೆಳ್ಳಿ ಚಿಕ್ಕೆಯಂತೆ ಮಿನುಗಿದರು. ಬ್ರಿಟಿಶ ಅಧಿಕಾರಿಗಳ ನಿಸ್ಪೃಹತೆ, ಜ್ಞಾನಪಿಪಾಸೆ, ದರ್ಪಗಳನ್ನು ಮೇಳವಿಸಿಕೊಂಡ ಮಾನವತಾವಾದಿ, ಕನ್ನಡದ ಪ್ರವಾದಿಯಾದರು. ಕರ್ನಾಟಕತ್ವದ ರೂವಾರಿಯಾದರು. ವಿದ್ಯಾ ಪ್ರಸಾರದ ಪಾದ್ರಿಯಾದರು. ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಶಿಕ್ಷಕರ ತರಬೇತಿ ರಂಗದ ಶಕಪುರುಷರಾದರು.

೧೯ನೆಯ ಶತಮಾನದ ಉತ್ತರಾರ್ಧ ಚನ್ನಬಸಪ್ಪನವರ ಕಾಲ. ಚನ್ನಬಸಪ್ಪನವರ ಜೀವನ, ವ್ಯಕ್ತಿತ್ವ ಸಾಧನೆಗಳನ್ನು ಕನ್ನಡಿಗರಿಗೆ ಪರಿಚಯಿಸುವುದರೊಂದಿಗೆ ಅಂದಿನ ಕರ್ನಾಟಕದ ವಿವಿಧ ಭಾಗಗಳ ಶಿಕ್ಷಣರಂಗದ ಸ್ಥೂಲ ಸ್ವರೂಪವನ್ನು ಕನ್ನಡ ಓದುಗರೆದುರು ಇಡಬೇಕೆಂದು ನಮ್ಮ ಆಶಯವಾಗಿದ್ದಿತು. ಅಂತೆಯೇ ಕೆಲವು ಆಧುಸಿಕ ಶಿಕ್ಷಣ ಸಮಸ್ಯೆಗಳನ್ನು ಕುರಿತಾದ ಪರಿಣತ ಲೇಖನಗಳನ್ನು ಶಿಕ್ಷಣಾಭಿಮಾನಿಗಳಿದುರು ಮಂಡಿಸಬೇಕೆಂಬ ಸೂಚನೆಯೂ ಬಂದಿದ್ದುದರಿಂದ 'ಕನ್ನಡದ ದೀಪ' ದಲ್ಲಿ ಈ ಕುರಿತಾದ ಲೇಖನಗಳನ್ನು ಸಂಕಲಿಸಲಾಗಿದೆ. ಲೇಖನಗಳಲ್ಲಿಯ ವಿಚಾರಗಳಿಗೆ ಲೇಖಕರೇ ಹೊಣೆಗಾರರಾಗಿದ್ದಾರೆ. ಅಲ್ಲದೆ ಆಯಾ ಲೇಖನಗಳ ಒಡೆತನ ಆಯಾ ಲೇಖಕರಿಗೇನೆ ಸೇರಿದೆ.

ವೈಚಾರಿಕ, ಅಧ್ಯಯನಶೀಲ, ಸಂಶೋಧನಾತ್ಮಕ, ಚಾರಿತ್ರಿಕ ವಿಶ್ಲೇಷಣೆ ಮಾಡುವ ಲೇಖನಗಳ ಸಂಗ್ರಹ ಕಾರ್ಯದಲ್ಲಿ ಬರುವ ತೊಂದರೆಗಳನ್ನು ನಾವಿಲ್ಲಿ ನಿವೇದಿಸಬೇಕಾಗಿಲ್ಲ. ತಮ್ಮ ಪಾಂಡಿತ್ಯಪೂರ್ಣ ಲೇಖನಗಳೊಂದಿಗೆ ನಮಗೆ ನೆರವನ್ನಿತ್ತ ಲೇಖಕರೆಲ್ಲರಿಗೂ ಕೃತಜ್ಞತೆಗಳು.

ಪ್ರಾಥಮಿಕ ಶಿಕ್ಷಣ ರಂಗದಲ್ಲಿ ಪಠ್ಯ, ಪೋಷಕ ಸಾಹಿತ್ಯ ಪ್ರಕಟನೆಯಲ್ಲಿ ಹೊಸ ಮನ್ವಂತರವನ್ನಾರಂಭಿಸಿದ ಡೆಪ್ಯೂಟಿ ಚನ್ನಬಸಪ್ಪ ಗ್ರಂಥಮಾಲೆ, ಮತ್ತು ಕರ್ನಾಟಕದ ಪ್ರಾಥಮಿಕ ಶಿಕ್ಷಣ ಹಾಗೂ ಶಿಕ್ಷಕರ ತರಬೇತಿಗೆ ಕಾಯಕಲ್ಪ ಚಿಕಿತ್ಸೆನೀಡಿ, ಹೊಸ ಚೈತನ್ಯ ನೀಡುವ ಬಯಕೆಯಿಂದ ಕಾರ್ಯೋನ್ಮುಖವಾಗಿರುವ ಡೆಪ್ಯೂಟಿ ಚನ್ನಬಸಪ್ಪ ಪ್ರತಿಷ್ಠಾನಗಳು ಶತಮಾನೋತ್ಸವ ಸಮಿತಿಯು ಕನ್ನಡಿಗರಿಗೆ ನೀಡಿದ ಕಾಮಧೇನುವಿ-ನಂತಹ ಕೊಡುಗೆ. ಶೈಕ್ಷಣಿಕ ಸಂಶೋಧನೆಗಳನ್ನು ಕೈಕೊಂಡು, ಅವುಗಳ ಪರಿಣಾಮಗಳ ಅನ್ವಯ ಮತ್ತು ಅನುಷ್ಠಾನಗಳನ್ನು ಪ್ರತಿಷ್ಠಾನ ಮಾಡುವಂತಾಗಲಿ; ನಾಡಿನಾದ್ಯಂತ ಚನ್ನಬಸಪ್ಪನವರ ಶತಮಾನೋತ್ಸವವನ್ನು ಉತ್ಸಾಹದಿಂದ ಆಚರಿಸಿದ ಶಿಕ್ಷಕರು ಮತ್ತು ಜನತೆ–ವಿದ್ಯಾಪ್ರೇಮ, ಕನ್ನಡಾಭಿಮಾನಗಳಿಂದ ಕಾರ್ಯವೆಸಗಲಿ ಎಂದು ಹಾರೈಸುತ್ತೇವೆ.

ಡೆಪ್ಯುಟಿ ಚನ್ನಬಸಪ್ಪನವರ ಶತಮಾನೋತ್ಸವ ಸಮಿತಿಯವರು "**ಕನ್ನಡದ ದೀಪ**"ದ ಪ್ರಕಾಶನದ ಹೊಣೆ ಹೊತ್ತುಕೊಂಡಿದ್ದಾರೆ—ಅವರಿಗೆ ನಮ್ಮ ನಮನಗಳು. ಕನ್ನಡದ ದೀಪಕ್ಕೆ ಎಣ್ಣೆ ಎರೆದು ಪ್ರಕಟನೆಗೆ ಧನಸಹಾಯ ನೀಡಿರುವ, ಚನ್ನಬಸಪ್ಪನವರ ವಂಶಸ್ಥರ ಫೋಟೋ ಒದಗಿಸಿದ, ಅವರ ಮರಿಮೊಮ್ಮಕ್ಕಳು ಮತ್ತು ಬಂಧು--ಬಳಗದವರಿಗೆ ವಂದನೆಗಳು. ಅಂದವಾಗಿ ಮುದ್ರಣ ಕಾರ್ಯನಿರ್ವಹಿಸಲು ಸಹಕರಿಸಿದ ತೋಂಟದಾರ್ಯ ಮುದ್ರಣಾಲಯ, ಪ್ರಕಾಶ ಮುದ್ರಣಾಲಯ ಮತ್ತು ಶಾರದಾ ಪ್ರೊಸೆಸ್ ಧಾರವಾಡ, ಇವರಿಗೆ ಒಲುಮೆಯ ನೆನಕೆಗಳು. '**ಕನ್ನಡದ ದೀಪ**'ದ ಪ್ರಕಟನಾ ಸಮಾರಂಭಕ್ಕೆ ಕನ್ನಡದ ಕಟ್ಟಾಳು ಡಾ॥ ಹಾ. ಮಾ. ನಾಯಕ ಅವರು ಅತಿಥಿಗಳಾಗಿ, ಕ್ರಿಯಾಶೀಲ ಅರ್ಥಶಾಸ್ತ್ರಜ್ಞ–ಶಿಕ್ಷಣಾಭಿಮಾನಿ ಡಾ॥ ಡಿ. ಎಂ. ನಂಜುಂಡಪ್ಪ ಅವರು ಅಧ್ಯಕ್ಷರಾಗಿ ಆಗಮಿಸಿ ಚನ್ನಬಸಪ್ಪನವರ ಸೇವೆಯನ್ನು ಸ್ಮರಿಸಿಕೊಂಡಿದ್ದಾರೆ. ಅವರಿಗೂ ನಮ್ಮ ಹಾರ್ದಿಕ ಅಭಿವಂದನೆಗಳು.

ಧಾರವಾಡ
೨೧–೩–೧೯೮೨

ಮ. ಗು. ಹಂದ್ರಾಳ
ಶಿವಶಂಕರ ಹಿರೇಮಠ
ಸಂಪಾದಕರು

ಪ ರಿ ವಿ ಡಿ

ಭಾಗ ೧

ಡೆಪ್ಯೂಟಿ ಚನ್ನಬಸಪ್ಪನವರ ಬಗೆಗೆ ಲೇಖನಗಳು, ಕವನಗಳು

ಭಾಗ ೨

ಕರ್ನಾಟಕ ಶಿಕ್ಷಣ ರಂಗ–೧೯ನೆಯ ಶತಮಾನ

ಭಾಗ ೩

ಕೆಲವು ಆಧುನಿಕ ಶಿಕ್ಷಣ ಸಮಸ್ಯೆಗಳು

ಭಾಗ ೪

ಮುಂಬಯಿ ಕರ್ನಾಟಕದ ಮೂಲ ಶಿಕ್ಷಣ ತರಬೇತಿ ಸಂಸ್ಥೆಗಳು

ಅನುಬಂಧ

ಭಾಗ—೧

ಡೆಪ್ಯೂಟಿ ಚನ್ನಬಸಪ್ಪನವರು

ಅವರ ಬಗೆಗೆ

ಲೇಖನಗಳು—ಕವನಗಳು

ಡೆಪ್ಯೂಟಿ ಚನ್ನಬಸಪ್ಪನವರ ವಂಶಾವಳಿ

ಅಪ್ಪಯ್ಯಪ್ಪ

ಅಪ್ಪಣ್ಣಪ್ಪ   ಬಸವಲಿಂಗಪ್ಪ–ಪತ್ನಿ ತಿಪ್ಪವ್ವ

ಡೆಪ್ಯೂಟಿ ಚನ್ನಬಸಪ್ಪನವರು   ಸಣ್ಣ ಚನ್ನಬಸಪ್ಪ


—ಶಿವಲಿಂಗವ್ವ   ಗುರವ್ವ—

(೧ ನವಂಬರ ೧೮೩೩ – ೪ ಜನೆವರಿ ೧೮೮೧)

ಕಾಶವ್ವ   ಶ್ರೀಮತಿ ರುದ್ರಮ್ಮ   ಬಸವಲಿಂಗಪ್ಪ–ಪತ್ನಿ ಪಾರ್ವತೆವ್ವ

ಚಂದ್ರಶೇಖರ–ಪತ್ನಿ ಪಾರ್ವತಿತಾಯಿ

ತೋಟಪ್ಪ–ಪತ್ನಿ ಸರ್ವಮಂಗಲಾದೇವಿ



ಡೆಪ್ಯೂಟಿ ಚೆನ್ನಬಸಪ್ಪನವರು

ಜನನ
೧-೧೧-೧೮೨೨

ಮರಣ
೪-೧-೧೮೮೧

ಲಿಂಗೈಕ್ಯ ಡೆಪ್ಯೂಟಿ ಚನ್ನಬಸಪ್ಪನವರ ವಂಶಜರು

—ಶ್ರೀ ಸ. ವೀ. ಹಂಜಿ

ಮಹಾಪುರುಷರು ಗತಿಸಿಹೋದನಂತರ ಅವರ ವಂಶಜರು ಯಾರಾದರೂ ಇರುವರೋ ಹೇಗೆ ? ಎಂಬ ಪ್ರಶ್ನೆಯು ಸಾಮಾನ್ಯವಾಗಿ, ಅವರ ಬಗೆಗೆ ತಿಳಿದುಕೊಳ್ಳ-ಬೇಕೆನ್ನುವವರಿಗೆ ಉತ್ಪನ್ನವಾಗುವದು. ಆಗ ಯಾರಾದರೂ ಅವರ ಬಗೆಗೆ ಗೊತ್ತಿದ್ದನ್ನು ಹೇಳಲು ಆಸಕ್ತಿಯಿಂದ ಕೇಳುವರು. ಡೆ. ಚನ್ನಬಸಪ್ಪನವರ ವಂಶಜರ ಬಗೆಗೆ, ನನಗೆ ಗೊತ್ತಿದ್ದ ಮಟ್ಟಿಗೆ ಕೆಲವು ಸಂಗತಿಗಳನ್ನು ವಿವರಿಸಿ, ಅವರ ಶತ-ಮಾನೋತ್ಸವದ ಶುಭ ಸಂಭ್ರಮದಲ್ಲಿ ಪಾಲುಗೊಳ್ಳಲು ಅಲ್ಪ ಸಮಯ ಸಿಕ್ಕದ್ದಕ್ಕಾಗಿ ಧನ್ಯನೆಂದು ಭಾವಿಸುವೆನು.

ನಾನು ೧೯೨೬ ರಲ್ಲಿ, ಧಾರವಾಡದಲ್ಲಿ ಇಂಗ್ಲೀಷ ಶಿಕ್ಷಣವನ್ನು ಮುಂದುವರಿಸಲು ಹೋದಾಗ, ಡೆ. ಚನ್ನಬಸಪ್ಪನವರ ಮನೆತನದ ನಿಕಟ ಸಂಬಂಧ ಬಂದುದು ಯೋಗಾಯೋಗ. ನನ್ನ ದೊಡ್ಡಪ್ಪನ ಹಿರಿಯ ಮಗನಾದ ಬಸಪ್ರಭಪ್ಪ ಎಂಬವನ ತಾಯಿಯು ಧಾರವಾಡದ ಟೆಂಗಿನಕಾಯಿ ಚನ್ನಮಲ್ಲಪ್ಪನವರ ಮನೆತನದವಳು. ಅವಳು ತೀರಿ-ಕೊಂಡ ನೇಲೆ ಅವನ ತಂದೆಯು ಮತ್ತೊಂದು ಲಗ್ನವಾದನು. ಮಲತಾಯಿಗೂ ಬಸಪ್ರಭನಿಗೂ ಕೂಡಿ ನಡೆಯದ್ದರಿಂದ, ಅವನನ್ನು ನನ್ನ ಮತ್ತೊಬ್ಬ ದೊಡ್ಡಪ್ಪನು ನಂದಗಡ (ತಾಲೂಕ ಖಾನಾಪುರ) ದಿಂದ ಧಾರವಾಡಕ್ಕೆ ಕರೆದುಕೊಂಡು ಬಂದನು. ಟೆಂಗಿನಕಾಯಿಯವರ ಸೊಸೆಯಾದ ರುದ್ರಮ್ಮನು ಈತನಿಗೆ ವಾಸಿಸಲು ಮನೆಯನ್ನು ಕೊಟ್ಟಳು. ಕೆ. ಎಲ್. ಇ. ಸೊಸಾಯಿಟಿಯವರು ಈತನಿಗೆ ತೋಂಟದಾರ್ಯ ಮುದ್ರಣಾಲಯದಲ್ಲಿ ನೌಕರಿ ಕೊಟ್ಟರು. ಅವರ ಮನೆಯಲ್ಲಿ ನನ್ನನ್ನು ನಮ್ಮ ತಂದೆಯವರು ಕಲಿಯಲಿಕ್ಕೆ ಇಟ್ಟರು.

ರುದ್ರಮ್ಮನವರೇ ಡೆ. ಚನ್ನಬಸಪ್ಪನವರ ಮಗಳು. ಚನ್ನಬಸಪ್ಪನವರಿಗೆ ಒಬ್ಬ ಪುತ್ರನೂ ಇದ್ದನು. ಅವನ ಹೆಸರು ಬಸವಲಿಂಗಪ್ಪ. ಇವನ ಪತ್ನಿಯು ಪಾರ್ವತೆಮ್ಮ ಎಂಬವಳು ಹುಬ್ಬಳ್ಳಿಯ ತಂಬದ ಎಂಬ ಮನೆತನದ ಹೆಣ್ಣುಮಗಳು. ಈ ದಂಪತಿಗಳಿಗೆ ಒಂದೇ ಒಂದು ಗಂಡು ಮಗು ಜನಿಸಿತ್ತು. ಆತನ ಹೆಸರು ಚಂದ್ರಶೇಖರ, ಆಗ ಇವನ ವಯಸ್ಸು ಸುಮಾರು ೧೨–೧೩. ಈತನೇ ಡೆ. ಚನ್ನಬಸಪ್ಪನವರ ಮೊಮ್ಮಗನು. ಇವನ ಸಹವಾಸವು ನನಗೆ ಹತ್ತು ವರುಷಗಳ ವರೆಗೆ ಇದ್ದುದರಿಂದ, ಅವನ ಬಗೆಗೆ ಕೆಲವು ಸಂಗತಿಗಳನ್ನು ವಿವರಿಸಲು ಸಂತೋಷವೆನಿಸುತ್ತದೆ.

ಶ್ರೀ ಹಂಜಿಯವರು ಬಾಗಲಕೋಟೆಯ ಬಸವೇಶ್ವರ ಹಾಯಸ್ಕೂಲಿನ ನಿವೃತ್ತ ಶಿಕ್ಷಕರು. ಸದ್ಯ ತಮ್ಮ ಊರು ಹಲಸಗಿ (ಖಾನಾಪುರ) ಯಲ್ಲಿ ವಾಸಿಸುತ್ತಿದ್ದಾರೆ. ಕನ್ನಡದಲ್ಲಿ ಇವರ ಹಲವಾರು ಕೃತಿಗಳು ಪ್ರಕಟವಾಗಿವೆ.

ಚಂದ್ರಶೇಖರನ ತಂದೆಯು ತೀರಿಕೊಂಡಿದ್ದನು. ಇವನು ಒಬ್ಬನೇ ಮಗನಾದುದ ರಿಂದ ಬಹು ಪ್ರೇಮದಿಂದ ಲಾಲನ ಪಾಲನವಾಯಿತು. ಇವನ ಸೋದರತ್ತೆಯಾದ ರುದ್ರಮ್ಮನು ಯಾವ ಸಂತಾನವಿಲ್ಲದೆ ವಿಧವೆಯಾಗಿದ್ದಳು. ಟೆಂಗಿನಕಾಯಿ ಮನೆತನಕ್ಕೆ ಗಂಡು ಸಂತಾನವಿಲ್ಲದ್ದರಿಂದ ಇವನನ್ನು ದತ್ತಕ ತೆಗೆದುಕೊಳ್ಳುವ ವಿಚಾರ ಹುಟ್ಟಿತು. ರುದ್ರಮ್ಮನಿಗೆ ಕಲ್ಯಾಣಮ್ಮನೆಂಬ ಸವತಿಯಿದ್ದು ಆಕೆಗೂ ಮಕ್ಕಳಾಗಿದ್ದಿಲ್ಲ. ಆದುದ ರಿಂದ ಆಕೆಯು ಈ ಮೊದಲೇ ಶಿವಪ್ಪನೆಂಬವನನ್ನು ದತ್ತಕ ಮಾಡಿಕೊಂಡಿದ್ದಳು. ಮುಂದೆ ರುದ್ರಮ್ಮನವರು ಚಂದ್ರಶೇಖರನನ್ನು ದತ್ತಕ ಮಾಡಿಕೊಳ್ಳುವ ಕಾರ್ಯ ದಲ್ಲಿಯೇ ಬಹಳ ಹೋರಾಡಿದಳು. ಅವಳು ಹೆಣ್ಣು ಮಗಳಾದರೂ ಪುರುಷರ ಧೈರ್ಯವು ಅವಳಲ್ಲಿತ್ತು. ಕೊನೆಗೆ ಈ ನ್ಯಾಯವು ಮುಂಬಯಿ ಹಾಯಕೋರ್ಟಿನ ವರೆಗೆ ಹೋಯಿತು. ಒಂದೇ ಮನೆತನದಲ್ಲಿ ಇಬ್ಬರಿಗೆ ದತ್ತಕ ತೆಗೆದುಕೊಳ್ಳಲು ಬರುವ ದಿಲ್ಲ; ಹಿರಿಯ ಪತ್ನಿಗೆ ಒಬ್ಬಳಿಗೆ ಮಾತ್ರ ಬರುವದೆಂದು ನಿರ್ಣಯವಾಯಿತು. ಇದರಿಂದ ಅರ್ಧದಷ್ಟು ಆಸ್ತಿಗೆ ಶಿವಪ್ಪನು ವಾರಸದಾರನಾದನು. ಉಳಿದ ಅರ್ಧ ಆಸ್ತಿಗೆ ರುದ್ರಮ್ಮನು ಬಾಧ್ಯಸ್ಥಳಾದಳು.

ರುದ್ರಮ್ಮನವರ ಪಾಲಿಗೆ ಜಿನ್ನಿಂಗ ಫ್ಯಾಕ್ಟರಿ, ವಖಾರ, ಕೆಲವು ಮನೆಗಳು ಮತ್ತು ಕಿಲ್ಲೆಯೊಳಗಿನ ದೊಡ್ಡ ಬಂಗಲೆ, ಮನೆಗಳು, ಖಾಲಿ ಪ್ರದೇಶವೆಲ್ಲ ಬಂದವು. ಊರೊಳಗೆ ಕೆಲವು ಮನೆಗಳೂ ಇದ್ದವು. ಆಗ ಆ ದೊಡ್ಡ ಬಂಗಲೆಯಲ್ಲಿ ಕರ್ನಾಟಕ ಹಾಯಸ್ಕೂಲು ನಡೆಯುತ್ತಿತ್ತು. ಅದು ತನ್ನ ಸ್ವಂತ ಕಟ್ಟಡಕ್ಕೆ ಹೋದ ಮೇಲೆ ಅರ್ಧ ಭಾಗದಲ್ಲಿ ರುದ್ರಮ್ಮನವರು ವಾಸಿಸುತ್ತಿದ್ದರು. ಉಳಿದ ಭಾಗವನ್ನೆಲ್ಲ ಭಾಡಿಗೆ ಕೊಟ್ಟಿದ್ದರು. ಕೆಲವು ಕಾಲ ಜಿನ್ನಿಂಗ ಫ್ಯಾಕ್ಟರಿಯಲ್ಲಿಯೂ ಇರುತ್ತಿದ್ದರು.

ಇಷ್ಟು ಹೊತ್ತಿಗೆ ಚಿ. ಚಂದ್ರಶೇಖರನು ಪ್ರೌಢಾವಸ್ಥೆಗೆ ಬಂದನು. ಅವನ ಅಭ್ಯಾಸವು ಕರ್ನಾಟಕ ಹಾಯಸ್ಕೂಲಿನಲ್ಲಿಯೇ ಆಯಿತು ಅಭ್ಯಾಸದಲ್ಲಿ ಅಷ್ಟೊಂದು ಚುರುಕಾಗಿದ್ದಿಲ್ಲ. ಹೆಚ್ಚಿನ ಅಭ್ಯಾಸ ಮಾಡಿ ಮುಂದೆ ಹೋಗುವ ಲಕ್ಷಣವೂ ಕಾಣಲಿಲ್ಲ. ಅವನ ಲಗ್ನ ಮಾಡಿ, ಜಿನ್ನಿಂಗ ಫ್ಯಾಕ್ಟರಿ ನಡೆಯಿಸಿಕೊಂಡು ಹೋಗ ಬೇಕೆಂದು ರುದ್ರಮ್ಮನವರ ಆಶೆಯಾಯಿತು. ಅವನ ಖಾಸ ತಾಯಿಯೂ ಅವರ ಮನೆಯಲ್ಲಿಯೇ ಇರುತ್ತಿದ್ದು ಯಾವ ಕಾರಣದಿಂದಲೋ ತನ್ನ ಅಡಿಗೆ ಬೇರೆ ಮಾಡಿ ಕೊಳ್ಳುತ್ತಿದ್ದಳು. ಚಂದ್ರಶೇಖರನ ಲಗ್ನದ ಬಗೆಗೆ ಕನ್ಯೆಗಳನ್ನು ನೋಡ ಹತ್ತಿದರು. ಸಾಕಷ್ಟು ಆಸ್ತಿ, ಒಬ್ಬನೇ ಒಬ್ಬ ಮಗ, ಒಳ್ಳೆಯ ಗುಣವಂತ, ಸುಸ್ವಭಾವಿ, ಬೇಕಾದ ಶ್ರೀಮಂತರು ಹೆಣ್ಣು ಕೊಡಬಹುದಾಗಿತ್ತು. ಆದರೆ ಅವನಿಗೆ ಯಾವಾಗಾದರು ಒಮ್ಮೆ ಬವಳಿ ಬರುತ್ತಿತ್ತು. ಇದರಿಂದ ಬೇಗನೆ ಕನ್ಯೆ ಹತ್ತುವದು ಸ್ವಲ್ಪ ತೊಂದರೆಯಾಯಿತು. ಕೊನೆಗೆ ಸಮೀಪದ ಆಪ್ತರಾದ ಬುಡರಕಟ್ಟಿ ಗ್ರಾಮದ ನರಗುಂದ ಶಂಕರೆಪ್ಪ ವೀರಪ್ಪ ಕುಂದಗೋಳ ಎಂಬವರ ಕನ್ಯೆ ಪಾರ್ವತಿದೇವಿ ಎಂಬವಳ ಕೂಡ ನಿಶ್ಚಯವಾಯಿತು.

ಲಗ್ನವನ್ನು ಧಾರವಾಡದಲ್ಲಿಯೇ ಮಾಡಬೇಕೆಂದು ನಿಶ್ಚಿತವಾಯಿತು. ಮನೆಯಲ್ಲಿ ಹಿರಿಯರಾಗೂ ಇಲ್ಲ. ಚಂದ್ರಶೇಖರನ ಗೆಳೆಯರೂ, ಊರೊಳಗಿನ ಇತರರು ಲಗ್ನದ ಸಿದ್ಧತೆ ನಡೆಸಿದರು. ಆಗ ನನಗೊಂದು ವಿಚಾರ ಹೊಳೆಯಿತು. ಆತ್ಮೀಯ ಗೆಳೆಯನಾದ ಚಂದ್ರಶೇಖರನಿಗೆ ಹೇಳಿದೆನು, "ನಿಮ್ಮ ಅಜ್ಜಂದಿರಾದ ಡೆ. ಚನ್ನಬಸಪ್ಪನವರು ಹಿಂದಕ್ಕೆ ಇಲ್ಲಿ ಶಿಕ್ಷಣ ಖಾತೆಯ ಇನ್‌ಸ್ಪೆಕ್ಟರರಾಗಿ ಬಹಳ ಹೆಸರು ಪಡೆದವರು. ಉತ್ತರ ಕರ್ನಾಟಕದಲ್ಲಿ ಕನ್ನಡವನ್ನುದ್ಧರಿಸಿದ ಪುಣ್ಯ ಪುರುಷರಲ್ಲಿ ಗಣ್ಯರು. ಈಗ ನಿನ್ನ ಲಗ್ನದ ಶುಭ ಸಂಭ್ರಮದಲ್ಲಿ ಅವರದೊಂದು ಫೋಟೊ ದೊಡ್ಡದನ್ನಾಗಿ ಮಾಡಿಸೋಣ. ಅವರ ಫೋಟೊ ಲಿಂಗಾಯತ ಟೌನ ಹಾಲಿನಲ್ಲಿದೆ. ಬೇಡಿದರೆ ಅದನ್ನು ಕೊಟ್ಟೇ ಕೊಡುವರು. ಕೆಲಸವಾದ ಮೇಲೆ ಅದನ್ನು ಅವರಿಗೆ ತಿರುಗಿ ಕೊಡೋಣ; ಅದರಂತೆ ನಿನ್ನ ದತ್ತಕ ತಾಯಿಯಾದ ರುದ್ರಮ್ಮನವರದೂ ಒಂದು ದೊಡ್ಡ ಫೋಟೊ ಮಾಡಿಸೋಣ, ಸದ್ಯಕ್ಕೆ ಈ ಸಂಗತಿ ಯಾರಿಗೂ ತಿಳಿಸಬೇಡ. ಮಾಡಿಸಿದ ನಂತರವೇ ಎರಡೂ ಫೋಟೊ ತೋರಿಸೋಣ'' ಅವನು ಕೂಡಲೇ ಒಪ್ಪಿಕೊಂಡನು. ಚನ್ನಬಸಪ್ಪನವರ ಫೋಟೊ ನೆರ್ಲೆಕರ ಸ್ಟುಡಿಯೋದಲ್ಲಿ ಮಾಡಿಸಲಾಯಿತು. ರುದ್ರಮ್ಮನವರ ಫೋಟೊ ಮೊರಬದ ಸ್ಟುಡಿಯೋದಲ್ಲಿ ಶ್ರೀ ಕೆ. ಜಿ. ಭೂಪಾಳಿ ಎಂಬ ನಮ್ಮ ಗೆಳೆಯರು ಮಾಡಿಕೊಟ್ಟರು. ರುದ್ರಮ್ಮನವರ ಫೋಟೊದ ಕೆಳ ಬದಿಗೆ, ಶಿವಶರಣೆ ಮಹಾದೇವಿಯಕ್ಕನ ವಚನವೊಂದನ್ನು ಅಚ್ಚು ಮಾಡಿಸಿದೆವು. ಆ ವಚನವು ಹೀಗಿದೆ–

"ಆರೂ ಇಲ್ಲದವಳೆಂದು ಅಳಿಗೊಳಲು ಬೇಡ ಕಂಡಯ್ಯ,
ಏನು ಮಾಡಿದಡೆಯೂ ನಾನಂಜುವವಳಲ್ಲ;
ತರಗೆಲೆಯ ಮೆಲ್ಲಿದ್ದು ನಾನಿಹೆನು,
ಸುರಿಗೆಯ ಮೇಲೊರಗಿ ನಾನಿಹೆನು,
ಚನ್ನಮಲ್ಲಿಕಾರ್ಜುನಯ್ಯಾ, ಕಲಿಕೆಡೆ ನೋಡಿದೊಡೆ
ಒಡಲನು ಪ್ರಾಣವನು ನಿಮಗೊಪ್ಪಿಸಿ ಶುದ್ಧಳಹೆನು"

ಅವರ ಹೋರಾಟದ ಜೀವನಕ್ಕೆ ಇದು ಸರಿಯಾಗಿದೆಯೆಂದು ಆಗಿನ ನನ್ನ ವಿಚಾರ. ಎರಡೂ ಫೋಟೊಗಳನ್ನು ರುದ್ರಮ್ಮನವರಿಗೆ ತೋರಿಸಿದೆವು. ಆಗ ಅವರು "ನನ್ನದೇಕೆ ಮಾಡಿಸಿದಿರಿ ?" ಎಂದು ಆನಂದದಿಂದ ಉದ್ಗಾರ ತೆಗೆದರು.

ಲಗ್ನ ಸಮಾರಂಭವು ಕಿಲ್ಲೆಯೊಳಗಿನ ಬಂಗಲೆಯಲ್ಲಿ ನೆರವೇರಿತು. ಊರೊಳಗಿನ ಪ್ರತಿಷ್ಠಿತ ನಾಗರಿಕರು ಆಗಮಿಸಿದ್ದರು. ವಧುವರರಿಗೆ ಅಕ್ಷತಾರೋಪಣವಾಯಿತು. ಮುಂದೆ ಮೃಷ್ಟಾನ್ನ ಭೋಜನವು ಆಯಿತು. ಬಂದವರೆಲ್ಲರೂ ತೃಪ್ತರಾಗಿ "ಊಟದ ವ್ಯವಸ್ಥೆಯನ್ನು ಬಹಳ ಚೆನ್ನಾಗಿ ಮಾಡಿದ್ದೀರಿ" ಎಂದು ಹೇಳಿದರು. ಸಂಜೆಯ ಹೊತ್ತಿಗೆ ಸಡಗರದಿಂದ ವಧುವರರ ಮೆರವಣಿಗೆಯೂ ಆಯಿತು. ಈ ವಿವಾಹವು ೧೯೩೪ಳ ನೆಯ

ಎಪ್ರೀಲ ತಿಂಗಳಿನಲ್ಲಿ ಜರುಗಿತು. ಚಿ॥ ಚಂದ್ರಶೇಖರ ಹಾಗೂ ಪಾರ್ವತೀದೇವಿಯ ವೈವಾಹಿಕ ಜೀವನವು ಸುಗಮವಾಗಿ, ಆನಂದದಿಂದ ಸಾಗಿತು. ಮುಂದೆ ಒಂದೆರಡು ವರ್ಷಗಳಲ್ಲಿ ಅವರೆಲ್ಲರೂ ತಮ್ಮ ಜಿನ್ನಿಂಗ ಫ್ಯಾಕ್ಟರಿಯ ಆವಾರದಲ್ಲಿ ನೆಲಿಸಿದರು. ಮತ್ತು ಫ್ಯಾಕ್ಟರಿಯನ್ನು ನಡೆಸಹತ್ತಿದರು. ಮುಂದೆ ನನ್ನ ಬಿ. ಎ. ಕೊನೆಯ ಪರೀಕ್ಷೆಯು ಮುಗಿದ ಮೇಲೆ ೧೯೩೬ ರಲ್ಲಿ, ನಾನು ಧಾರವಾಡ ಬಿಟ್ಟು ನಮ್ಮ ಊರಿಗೆ ಆಗಮಿಸಿದೆನು.

ಅಂದಿನಿಂದ ರುದ್ರಮ್ಮನವರ ಹಾಗೂ ಚಂದ್ರಶೇಖರ ಇವರ ಸಂಪರ್ಕವು ತಪ್ಪಿತು. ದತ್ತಕ ತಪ್ಪಿದ್ದರಿಂದ ರುದ್ರಮ್ಮನವರು ಆಸ್ತಿಯನ್ನೆಲ್ಲ ಚಂದ್ರಶೇಖರನ ಹೆಸರಿನಲ್ಲಿ ಬಕ್ಷೀಸು ಮಾಡಿದರು. ಅವನು ಮೊದಲು ತನ್ನ ಹೆಸರನ್ನು ಟೆಂಗಿನಕಾಯಿ ಎಂದು ಹಚ್ಚಿದ್ದನು. ಈಗ ದತ್ತಕ ಆಗದ್ದರಿಂದ ತನ್ನ ಮೊದಲಿನ ಹೆಸರೇ ಧಾರವಾಡ ಎಂಬುದು ಉಳಿಯಿತು. ಡೆ. ಚನ್ನಬಸಪ್ಪನವರ ಅಡ್ಡ ಹೆಸರು ಧಾರವಾಡ; ಆದರೆ ರೂಢಿಯಲ್ಲಿ ಡೆಪ್ಯೂಟಿ ಚನ್ನಬಸಪ್ಪನವರೆಂದೇ ಪ್ರಸಿದ್ಧರಾಗಿದ್ದಾರೆ.

ಮುಂದೆ ನಾನು ವಿಶೇಷವಾಗಿ ಧಾರವಾಡಕ್ಕೆ ಹೋಗುತ್ತಿದ್ದಿಲ್ಲ. ಚಂದ್ರಶೇಖರನಿಗೆ ೨-೩ ಕನ್ಯಾರತ್ನಗಳು ಜನಿಸಿವೆಯೆಂದು ವಾರ್ತೆ ಕೇಳಿದ್ದೆನು. ೧೯೪೩ ರ ಸುಮಾರಿಗೆ ಚಂದ್ರಶೇಖರನು ಏನೋ ಒಂದು ರೋಗದಿಂದ ಬಳಲುತ್ತಿರುವನೆಂದು ನಮ್ಮ ಊರಲ್ಲಿ ಸುದ್ದಿ ಹೇಳಿದರು. ಔಷಧೋಪಚಾರ ನಡೆದಿವೆಯೆಂದೂ, ಅವನ ಪ್ರಕೃತಿ ಕ್ಷೀಣವಾಗು-ತ್ತಿರುವದೆಂದೂ ಹೇಳುತ್ತಿದ್ದರು. ಆಗ ನಾನು ಬೈಲಹೊಂಗಲದ ಹಾಯಸ್ಕೂಲಿನಲ್ಲಿ ಇದ್ದೆನು. ಧಾರವಾಡಕ್ಕೆ ಹೋಗುವ ಸಮಯವೇ ಒದಗಲಿಲ್ಲ, ಮುಂದೆ ಒಮ್ಮಿಂದೊಮ್ಮೆ ಚಂದ್ರಶೇಖರನು ತೀರಿಕೊಂಡನೆಂದು ತಿಳಿಯಿತು. ಆ ಮೇಲೆಯಂತೂ ಎಷ್ಟೋ ವರುಷಗಳ ವರೆಗೆ ನಾನು ಹೋಗಲೇ ಇಲ್ಲ. ರುದ್ರಮ್ಮನವರೂ ಪಾರ್ವತೆಮ್ಮನವರೂ ನಿಧನರಾದರು. ಚಂದ್ರಶೇಖರನು ಸಾಯುವದಕ್ಕಿಂತ ಮೂರು ದಿನಗಳ ಪೂರ್ವದಲ್ಲಿ ಪತ್ನಿ ಪಾರ್ವತಿದೇವಿಯು ಗಂಡು ಮಗುವನ್ನು ಹೆತ್ತಿದ್ದಳು. ಮುಂದೆ ಅವನ ಲಾಲನೆ ಪಾಲನೆಗಳೆಲ್ಲ ಅವರ ತಾಯಿ ಮತ್ತು ಸೋದರ ಮಾವಂದಿರಿಂದಾದವು.

ಅನೇಕ ವರುಷಗಳು ಗತಿಸಿದವು. ನಾನು ಬಾಗಲಕೋಟೆಯಲ್ಲಿದ್ದಾಗ ಗೋಖಲೆ ಎಂಬವರ ಪರಿಚಯವಾಗಿ ಸ್ನೇಹವು ಬೆಳೆಯುತ್ತ ನಡೆಯಿತು. ಅವರು ಒಂದು ದಿನ ಆಕಸ್ಮಾತ್ ಹೀಗೆ ಮಾತು ತೆಗೆದರು "ನನ್ನ ತಮ್ಮನೊಬ್ಬನು ಧಾರವಾಡದಲ್ಲಿ ವಕೀಲರಿದ್ದಾರೆ, ಅವನ ಮಗನೂ ಸೊಸೆಯೂ ಡಾಕ್ಟರರಿದ್ದಾರೆ. ಆ ಡಾಕ್ಟರನ ಸ್ನೇಹಿತನೊಬ್ಬನು ಬಹಳ ಸಂಭಾವಿತ ಹುಡುಗ. ಒಂದು ವರ್ಷದ ಹಿಂದೆ ಅವನ ಲಗ್ನವಾಗಿತ್ತು. ಪತ್ನಿಯು ತೀರಿಕೊಂಡಳು. ಮಕ್ಕಳೇನೋ ಆಗಿಲ್ಲ. ಇನ್ನೂ ಎಳೆಯ ವಯಸ್ಸು, ಲಗ್ನವಾಗಬೇಕಾಗಿದೆ. ಆದುದರಿಂದ ಒಂದು ಯೋಗ್ಯ ಕನ್ಯೆ ನೋಡಬೇಕು. ನಿಮ್ಮ

ಲಿಂಗಾಯತರಲ್ಲಿ ಯಾರಾದರೂ ಇದ್ದರೆ ಹೇಳಿರಿ", ನಾನು ಹೇಳಿದೆ "ಒಳ್ಳೆಯದು ಅವನನ್ನು ಇಲ್ಲಿ ಕರೆಯಿಸಿರಿ, ಎಲ್ಲವನ್ನು ತಿಳಕೊಂಡು ಕನ್ಯೆಯನ್ನು ಶೋಧಿಸೋಣ". ಮುಂದೆ ಕೆಲವು ದಿನಗಳಲ್ಲಿಯೇ ಡಾ. ಗೋಖಲೆ ಆ ಹುಡುಗನನ್ನು ಕರೆದುಕೊಂಡು ಬಂದರು. ಗೋಖಲೆಯವರು ಅವರ ಪರಿಚಯ ಮಾಡಿಕೊಟ್ಟರು. ಆಗ ನಾನು ಆ ಹುಡುಗನನ್ನು ಪ್ರತ್ಯೇಕವಾಗಿ ನಮ್ಮ ಮನೆಗೆ ಕರೆದುಕೊಂಡು ಹೋಗಿ ಆತನ ಎಲ್ಲ ವೃತ್ತಾಂತವನ್ನು ಕೇಳಿದೆನು. ತಾಯಿ ತಂದೆಗಳ ಹೆಸರು, ಅಡ್ಡಹೆಸರು, ಇರುವ ಸ್ಥಳ ಮೊದಲಾದವುಗಳನ್ನು ಪ್ರಾಮಾಣಿಕದಿಂದ ಹೇಳಿದನು. ಆಗ ಅವನು, ಅಕಾಲ ನಿಧನ ಹೊಂದಿದ ಚಂದ್ರಶೇಖರನ ಪುತ್ರ, ಡೆ. ಚನ್ನಬಸಪ್ಪನವರ ಮರಿಮೊಮ್ಮಗ ಈತನು ಎಂದು ಪೂರ್ಣ ಮನವರಿಕೆಯಾಯಿತು, ಅವನಿಗೆ ಹೇಳಿದೆನು, "ನಿನ್ನ ತಂದೆಯು ನನ್ನ ಬಾಲ್ಯದ ಸ್ನೇಹಿತ ಅವನ ಲಗ್ನವನ್ನು ಮಾಡುವಾಗ ನಾನೇ ಇದ್ದೆನು. ಈಗ ನಿನ್ನ ಲಗ್ನವನ್ನಾದರೂ ನಾನೇ ನೆರವೇರಿಸುವೆನು".

ಬಾಗಲಕೋಟೆಯಲ್ಲಿ ಕನ್ಯೆಗಳನ್ನು ನೋಡಲು ಪ್ರಾರಂಭವಾಯಿತು. ನೋಡಲು ಹೋಗುವ ಪೂರ್ವದಲ್ಲಿ ಒಂದು ಸಂಗತಿಯನ್ನು ಮಾತ್ರ ತಿಳಿಸಲೇಬೇಕೆಂದು ಆತನು ಹೇಳುತ್ತಿದ್ದನು. ಅದೆಂದರೆ, "ನನ್ನ ಮೊದಲಿನ ಪತ್ನಿಯು ತೀರಿಕೊಂಡಿದ್ದಾಳೆ". ಇದು ಅವನ ಪ್ರಾಮಾಣಿಕತೆಗೆ ನಿದರ್ಶನ. ೩-೪ ಕನ್ಯೆಗಳನ್ನು ನೋಡಿದೆವು. ಬಸವೇಶ್ವರ ಎಂಜನೀಯರಿಂಗ ಕಾಲೇಜದಲ್ಲಿ ಪ್ರಾಧ್ಯಾಪಕರಾದ ಎಂ. ಬಿ. ಅಂಗಡಿ ಅವರ ಮಗಳನ್ನು ನೋಡಿದೆವು. ಅಕಸ್ಮಾತ್ತಾಗಿ ಅದೇ ಅವನ ಮನಸ್ಸಿಗೆ ಬಂದಿತು. ಕನ್ಯೆಯು ವರನ ಮನಸ್ಸಿಗೆ ಬಂದುದನ್ನು ಶ್ರೀ ಅಂಗಡಿಯವರಿಗೆ ತಿಳಿಸಿದೆವು. ಅವರೂ ವರನ ಬಗೆಗೆ ಎಲ್ಲವನ್ನು ಕೇಳತೊಡಗಿದರು. ನನಗೆ ಗೊತ್ತಿದ್ದ ಮಟ್ಟಿಗೆ ಅವನ ವಂಶಾವಳಿಯ ಹಿರಿಮೆಯನ್ನೂ, ಆಸ್ತಿಯ ವೈಭವವನ್ನು ತಿಳಿಸಿದೆನು. ಉಳಿದ ಸಂಗತಿಗಳ ಬಗೆಗೆ "ನೀವು ಧಾರವಾಡಕ್ಕೆ ಹೋಗಿ ಕೇಳಿಕೊಳ್ಳಿರಿ" ಎಂದು ಹೇಳಿದೆನು. ಅವರು ೩-೪ ತಿಂಗಳು ವಿಚಾರ ಮಾಡಿ ಕೊನೆಗೆ ಕನ್ಯೆ ಕೊಡುವದಾಗಿ ಒಪ್ಪಿಕೊಂಡರು. ಇದನ್ನು ಧಾರವಾಡಕ್ಕೆ ತಿಳಿಸಲಾಯಿತು. ಆಗ ಅವರೆಲ್ಲರೂ ಬಾಗಲಕೋಟೆಗೆ ಆಗಮಿಸಿದರು. ಮುಂದೆ ಪದ್ಧತಿಯ ಪ್ರಕಾರ ಮನೆತನ ನೋಡಲು ಧಾರವಾಡಕ್ಕೆ ಹೋಗುವದು ನಿಶ್ಚಿತವಾಯಿತು. ನಾವೆಲ್ಲರೂ ಕೂಡಿ ಧಾರವಾಡಕ್ಕೆ ಹೋದೆವು. ಅಲ್ಲಿ ನನ್ನ ಪರಿಚಿತರಾದವರು ಒಬ್ಬಿಬ್ಬರು ಮಾತ್ರ ಕಂಡರು. ಉಳಿದ ಕೆಲವರು ನನಗೆ ನೀವು ಯಾರು ಎಂದು ಕೇಳಿದರು. ಆಗ ನಾನು "ನಿಮ್ಮ ವರನ ತಂದೆಯ ಸ್ನೇಹಿತ; ಹೆಣ್ಣನ್ನು ಕೊಟ್ಟು ಹೋಗುವ ನಿರ್ಧಾರದಿಂದಲೇ ಬಂದಿರುವೆವು, ಏನಾದರೂ ಹೆಚ್ಚು ಕಡಿಮೆಯಾದರೆ ಹೊಂದಿಸಿಕೊಂಡು ಹೋಗಬೇಕು" ಎಂದೆನು. ಮಾತುಕತೆಗಳು ಸುಗಮವಾಗಿ ಸಾಗಿದವು. ಪ್ರತಿಯೊಂದು ಮಾತಿಗೆ ವರನ ಪಕ್ಷದವರು ಒಪ್ಪಿಕೊಂಡರು. ಲಗ್ನವನ್ನು ಧಾರವಾಡದಲ್ಲಿಯೇ ಮಾಡುವದು ನಿಶ್ಚಿತವಾಯಿತು. ಮುಂದೆ ೧೯೭೩ ಮೇ ತಿಂಗಳಿನಲ್ಲಿ

ಡೆ. ಚನ್ನಬಸಪ್ಪನವರ ಮರಿಮೊಮ್ಮಗ ತೋಟಪ್ಪನ ವಿವಾಹವು ಅಂಗಡಿಯವರ ಕನ್ಯೆಯಾದ ಚಿ. ಸೌ. ಕು. ಸರ್ವಮಂಗಲಾದೇವಿಯೊಡನೆ ಟಾಗೋರಹಾಲಿನಲ್ಲಿ ಬಹು ಸಂಭ್ರಮದಿಂದ ಜರುಗಿತು.

ಡೆ॥ ಚನ್ನಬಸಪ್ಪನವರನ್ನು ಆಗಾಗ್ಗೆ ಸ್ಮರಿಸುತ್ತಿದ್ದು, ಧಾರವಾಡದಲ್ಲಿ ಸಾರ್ವ-ಜನಿಕ ಸಭೆಗಳಲ್ಲಿ ಹೇಳುತ್ತಿದ್ದುದು ನನ್ನ ಸ್ಮರಣೆಯಲ್ಲುಂಟು. ಸುಪ್ರಸಿದ್ಧ ದೇಶಭಕ್ತರೂ, ಹೆಸರಾದ ಭಾಷಣಕಾರರೂ ಆದ ಶ್ರೀ ಮುದುವೀಡು ಕೃಷ್ಣರಾಯರು ತಮ್ಮ ಭಾಷಣ ಗಳಲ್ಲಿ ಕನ್ನಡಕ್ಕೆ ದೊಡ್ಡ ಸ್ಥಾನವನ್ನುಂಟು ಮಾಡಿದವರು ಡೆ. ಚನ್ನಬಸಪ್ಪನವರೆಂದು, ತಮ್ಮ ಸ್ವಾಭಾವಿಕ ಸಿಂಹಗರ್ಜನೆಯಿಂದ ಸಾರಿ ಹೇಳುತ್ತಿದ್ದರು. "ಧಾರವಾಡದಂತಹ ಕನ್ನಡದ ಗಂಡು ಮೆಟ್ಟಿನ ಸ್ಥಾನದಲ್ಲಿ ಕನ್ನಡದಲ್ಲಿ ಯಾರಾದರೂ ಮಾತನಾಡಿದರೆ ಅವರನ್ನು ಮರಾಠಿಗರು ಚಂಡು ಹಿಡಿದು ಹೊರಗೆ ದಬ್ಬುತ್ತಿದ್ದರು. ಅವರ ಪ್ರಾಬಲ್ಯ ವನ್ನು ಕಡಿಮೆ ಮಾಡಿದವರು ಡೆ. ಚನ್ನಬಸಪ್ಪನವರು" ಹೀಗೆ ಅವರನ್ನು ಅನೇಕ ಸಲ ಸ್ಮರಿಸುತ್ತಿದ್ದರು. ಜಿಜ್ಞಾಸೆಯುಳ್ಳ ಕನ್ನಡಿಗರು ಅವರು ಬರೆದ **"ಕನ್ನಡವನ್ನುದ್ಧರಿಸಿದ ಪುಣ್ಯ ಪುರುಷರು"** ಎಂಬ ಲೇಖನವನ್ನು ಅವಲೋಕಿಸಿಬಹುದು. ಆಗಿನ ಕಾಲಕ್ಕೆ ಡೆ. ಚನ್ನಬಸಪ್ಪನವರನ್ನು **ಕನ್ನಡದ ಹುಲಿ** ಎಂದು ಕರೆದುದು ಯಥಾ ಯೋಗ್ಯವೇ ಸರಿ ಎನಿಸುವದು.

ಡೆ. ಚನ್ನಬಸಪ್ಪನವರು ವೀರಶೈವರಲ್ಲಿ ಕನ್ನಡದ ಹೆಸರಾದ ಲೇಖಕರೂ ಆಗಿದ್ದ-ರೆಂದು ಜರ್ಮನಿಯ ಸುಪ್ರಸಿದ್ಧ ಕನ್ನಡ ವಿದ್ವಾಂಸರಾದ ರೆ. ಎಫ್. ಕಿಟ್ಟೆಲ ಅವರು, ಶೇಕ್ಸಪೀಯರ ಮಹಾಕವಿ ಮತ್ತು ನಾಟಕಕಾರನ ಕೊಮೆಡಿ ಆಫ್ ಎರರ್ಸ ಎಂಬುದನ್ನು "ನಗದವರನ್ನು ನಗಿಸುವ ಕತೆ" ಎಂದು ಕನ್ನಡದಲ್ಲಿ ಭಾಷಾಂತರಿಸಿರುವ ರೆಂದು ಉಲ್ಲೇಖ ಮಾಡಿದ್ದಾರೆ.*

ಇಂತಹ ಕನ್ನಡದ ಗಂಡುಗಲಿಗಳಾದ ಡೆ. ಚನ್ನಬಸಪ್ಪನವರ ಮೊಮ್ಮಗ ಚಂದ್ರ ಶೇಖರನು ಬಹಳ ಮೃದು ಮತ್ತು ಮುಗ್ಧ ಸ್ವಭಾವದವನು. ಅವನು ಹಾಲುಗಡಬಿನ ಮೇಲೆ ಬಹಳ ಪ್ರೇಮವಿದ್ದುದರಿಂದ ಅವನ ಉಭಯ ತಾಯಂದಿರು ಆಗಾಗ್ಗೆ ಹಾಲು ಗಡಬು ಮಾಡಿ ಸಾಕಷ್ಟು ತುಪ್ಪದೊಡನೆ ಉಣಿಸುತ್ತಿದ್ದರು. ರುದ್ರಮ್ಮನವರು ಬಹಳ

* ChannaBasappa Basalingappa Dharawada as Deputy Educational Inspector ventured on a translation of Shakespeare's Comedy of Errors, 1871 had it printed at Dharwada under the title "A wonderful story that will cause to laugh who do not laugh".

ನಾಗವರ್ಮನ ಕನ್ನಡ ಛಂದಸ್ಸು by Rev. F. Kittel An Essay on Canarese Literature Page L XXI, Mangalore 1875.



ರುದ್ರಮ್ಮ
(ಚನ್ನಬಸಪ್ಪನವರ ಮಗಳು)



ಚನ್ನಬಸಪ್ಪನವರ ವಂಶಜರು.

ಖುರ್ಚಿಯಲ್ಲಿ ಕುಳಿತವರು : ೧) ರುದ್ರಮ್ಮ (ಚನ್ನಬಸಪ್ಪನವರ ಮಗಳು)
೨) ಚಂದ್ರಶೇಖರ (ಚನ್ನಬಸಪ್ಪನವರ ಮೊಮ್ಮಗ)
೩) ಪಾರ್ವತಿತಾಯಿ (ಚಂದ್ರಶೇಖರರ ಹೆಂಡತಿ) ೪) ಪಾರ್ವತೆಮ್ಮ (ಚಂದ್ರಶೇಖರರ ತಾಯಿ)

ಮಠಪತ್ರಿಕೆಯು.

ಪುಸ್ತಕ ೧] ಮಾಹೆ ಜನವರಿ ೧೮೮೮ [೧ ನೇ ಸಂಚಿಕೆ-

ಸಂಪುಟ ೧೦
(ಮುಖಪುಟ)

ನೋಟಿಸು.

ಗೋಕಾಂವಿ, ಸಂಪದತ್ತಿ ಮತ್ತು ಸಂಪಗಾಂವಿ ತಾಲೂಕಿನಲ್ಲಿರುವ ಯಾವತ್ತು ಮಠಸ್ಥರಿಗೆ ತಿಳಿಸುವದೇನಂದರೆ- ನೀವು ನಿಮ್ಮ ದಪ್ತರಗಳನ್ನು ತಪ್ಪದೆ ನಮ್ಮಲ್ಲಿ [illegible] [illegible] [illegible] [illegible] [illegible]

[illegible] ಗೋಕಾಂವಿ

(ಚನ್ನಬಸಪ್ಪನವರ [illegible])

[illegible]

[illegible]

(ಚನ್ನಬಸಪ್ಪನವರ ಸಹಿ)

ದೊಡ್ಡ ಮನಸ್ಸಿನ ಹೆಣ್ಣು ಮಗಳು. ಟೆಂಗಿನಕಾಯಿ ಮನೆತನಕ್ಕೆ ತಕ್ಕ ಸೊಸೆ-ಯಾಗಿದ್ದಳು. ಅವಳ ಜೀವನವೆಲ್ಲ ಆಸ್ತಿಯ ದತ್ತಕದ ಬಗೆಗೆ, ಹೋರಾಟದಲ್ಲಿಯೇ ಹೋಯಿತು. ತನ್ನ ಚಂದ್ರಶೇಖರನಿಗೆ ಏನಾದರೂ ಗಂಡಾಂತರ ಬಂದರೆ, ವಿರೋಧಿಯಾದ ಶಿವಪ್ಪನವರಿಂದ ಎಂದು ಆಗಾಗ್ಗೆ ಅನ್ನುತ್ತಿದ್ದಳು. ಆದರೆ ಅವನಿಂದ ಏನೂ ಬರಲಿಲ್ಲ. ದುರ್ದೈವದಿಂದ ಅಕಾಲ ಮೃತ್ಯುವಿಗೆ ತುತ್ತಾದ ಮೇಲೆ ಉಪಾಯವಿಲ್ಲ. ರುದ್ರಮ್ಮನವರು ಉಳಿದವರಿಗೂ ಜೀವನದ ಬಗೆಗೆ ಮಾರ್ಗದರ್ಶನ ಮಾಡುತ್ತಿದ್ದಳು. ಚಿ॥ ತೋಟಪ್ಪನ ಲಗ್ನದ ಮಾತುಕತೆಗೆ ಹೋದಾಗ, ೧೯೩೩ ರಲ್ಲಿ ಮಾಡಿಸಿದ ಡೆ. ಚನ್ನಬಸಪ್ಪನವರ ಮತ್ತು ರುದ್ರಮ್ಮನವರ ಫೋಟೋಗಳು ಎಲ್ಲಿವೆಯೆಂದು ಕೇಳಲು, ಅವುಗಳನ್ನು ಜಿನ್ನಿಂಗ ಫ್ಯಾಕ್ಟರಿಯ ಆವಾರದಲ್ಲಿಯ ಒಂದು ದೊಡ್ಡ ಕೋಣೆಯಲ್ಲಿ ಹಾಕಿದ್ದನ್ನು ತೋರಿಸಿದರು. ಆಗ ನನ್ನ ಮನಸ್ಸಿಗೆ ಬಹಳ ಆನಂದವಾಯಿತು.

ಡೆ. ಚನ್ನಬಸಪ್ಪನವರ ಸೊಸೆ ಪಾರ್ವತೆಮ್ಮ ಮತ್ತು ಮಗಳು ರುದ್ರಮ್ಮ ಇವರ ಕೊನೆಯ ದಿನಗಳು ಸುಖದಿಂದ ಸಾಗಲಿಲ್ಲ. ಪಾರ್ವತೆಮ್ಮನ ಹತ್ತಿರ ಸುವರ್ಣದ ಅನೇಕ ಅಲಂಕಾರಗಳಿದ್ದವು. ಅವುಗಳನ್ನು ಅವಳು ಬಹಳ ಜತನದಿಂದ ಕಾಯು-ತ್ತಿದ್ದಳು. ದುರ್ದೈವದಿಂದ ಅವುಗಳನ್ನು ಯಾರೋ ಅಪಹರಿಸಿ ಹಿತ್ತಾಳೆಯ ವಡವೆಗಳನ್ನಿಟ್ಟಿದ್ದರು. ಹೀಗೆ ಚಿಂತೆ ಮುಪ್ಪಿನಿಂದ ಬಳಲಿ ತೀರಿಕೊಂಡಳು. ರುದ್ರಮ್ಮನವರು ಆಸ್ತಿಯನ್ನೆಲ್ಲ ಚಂದ್ರಶೇಖರನ ಹೆಸರಿನಿಂದ ಮಾಡಿದಳು. ಅವನ ಪಾಲಿಗೆ ಜಿನ್ನಿಂಗ ಫ್ಯಾಕ್ಟರಿಯ ಆವಾರವೆಲ್ಲ ಬಂದಿತು. ದಕ್ಷಿಣ ಭಾಗದೊಳಗಿನ ಮನೆಗಳು ಆಗಲೇ ಗದಗಿನ ಮಾನವಿಯವರಿಗೆ ಮಾರಾಟವಾಗಿದ್ದವು. ಕಿಲ್ಲೆಯೊಳಗೆ ಮೇಲಿನ ವಿಶಾಲ ಬಂಗಲೆ, ಮನೆಗಳು, ತಗ್ಗು ದಿನ್ನೆಗಳುಳ್ಳ ಸ್ಥಳ ಇವೆಲ್ಲ ಇವರದೇ ಆಗಿತ್ತು. ಮುಂದೆ ಏನೋ ಅಡಚಣಿಯ ಮೂಲಕ ಇವೆಲ್ಲ ಮಾರಾಟವಾದವು.

ಡೆ. ಚನ್ನಬಸಪ್ಪನವರ ಮರಿಯುವೊಮ್ಮಗ ತೋಟಪ್ಪನನ್ನು, ಅವನ ತಾಯಿ ಪಾರ್ವತೆಮ್ಮ, ಸೋದರ ಮಾವಂದಿರಾದ ಬಸಪ್ಪ (ಅಣ್ಣಪ್ಪ,) ಕುಂದಗೋಳ, ಸಿದ್ಧಣ್ಣ ಕಲಾದಗಿ ಇವರೆಲ್ಲರೂ ಧಾರವಾಡದಲ್ಲಿಯೇ ನೆಲಿಸಿ ಜೋಪಾನ ಮಾಡಿದ್ದಾರೆ. ಸದ್ಯಕ್ಕೆ ಇವರು ಜಿನ್ನಿಂಗ ಫ್ಯಾಕ್ಟರಿಯ ಆವಾರದಲ್ಲಿಯೇ ಒಂದು ಆಯಿಲ್‌ಮಿಲ್ಲ ನಡೆಸಿದ್ದಾರೆ. ಮಾರ್ಕೆಟಿನಲ್ಲಿ ಒಂದು ದೊಡ್ಡ ಕಿರಾಣಿ ಅಂಗಡಿಯನ್ನು ಇಟ್ಟಿದ್ದಾರೆ. ಒಟ್ಟಿನಲ್ಲಿ, ಸದ್ಯಕ್ಕೆ ತೋಟಪ್ಪನ ಜೀವನವು ನೆಮ್ಮದಿಯಾಗಿ ಸಾಗಿದೆ. ಅವನಿಗೆ ೧೯೭೪ ರಲ್ಲಿ ಒಂದು ಕನ್ಯಾರತ್ನವು ಜನಿಸಿದೆ. ಇನ್ನು ಮುಂದಾದರೂ ಡೆ. ಚನ್ನಬಸಪ್ಪನವರಂತಹ ಕೀರ್ತಿ ತರುವಂತಹ ಮಕ್ಕಳು ಅವರಿಗೆ ಜನಿಸಲೆಂದು ಪರಮಾತ್ಮನಲ್ಲಿ ಅನನ್ಯ ಭಾವದಿಂದ ಪ್ರಾರ್ಥಿಸೋಣ.

◎◎◎

ಕನ್ನಡ ಕುಲದೀಪಕ

ಲಿಂಗೈಕ್ಯ ಡೆಪ್ಯೂಟಿ ಚನ್ನಬಸವಪ್ಪನವರು

(ಜೀವನ–ಸಾಧನೆ–ವ್ಯಕ್ತಿತ್ವ ೧–೧೧–೧೮೩೩, ೪–೧–೧೮೮೧)

—ಶ್ರೀ ಮ. ಗು. ಹಂದ್ರಾಳ

ಐತಿಹಾಸಿಕ ಹಿನ್ನೆಲೆ:

ಕರ್ನಾಟಕಕ್ಕೆ ಪ್ರಾಚೀನ ಇತಿಹಾಸ, ಉಜ್ವಲ ಸಂಸ್ಕೃತಿ ಉಂಟೆಂಬುದು ಹೆಮ್ಮೆಯ ಮಾತು. ಕ್ರಿಸ್ತಶಕಪೂರ್ವ ನಾಲ್ಕನೆಯ ಶತಮಾನದಲ್ಲಿ ಮೌರ್ಯ ವಂಶದ ಚಂದ್ರಗುಪ್ತ ಚಕ್ರವರ್ತಿ, ತನ್ನ ಗುರುವಿನ ಜೊತೆಗೆ ಕರ್ನಾಟಕಕ್ಕೆ ಬಂದನೆಂದು ಚರಿತ್ರೆ ಸಾರುತ್ತಿದೆ. ಈ ವಂಶದ ಶ್ರೇಷ್ಠ ಚಕ್ರವರ್ತಿ ಅಶೋಕ. ಆತನ ಶಿಲಾ ಶಾಸನಗಳು ಕರ್ನಾಟಕದಲ್ಲಿ ಲಭಿಸಿವೆ. ಆಮೇಲೆ, ಕರ್ನಾಟಕದಲ್ಲಿ ಶಾತವಾಹನ ವಂಶಜರ ಆಳ್ವಿಕೆ ನಡೆಯಿತು. ೪ ನೆಯ ಶತಮಾನದಿಂದ ೧೬ ನೆಯ ಶತಮಾನದ ವರೆಗೆ— ಕದಂಬ, ಗಂಗ, ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ, ವಿಜಯನಗರ ರಾಜ್ಯಗಳು, ಕರ್ನಾಟಕ ಶಿಲ್ಪ, ಚಿತ್ರ, ಸಂಗೀತ, ಸಾಹಿತ್ಯ, ಸಂಸ್ಕೃತಿಗಳಿಗೆ ಈ ರಾಜ-ವರ್ಗಗಳ ಜೊತೆಗೆ ಪ್ರಜಾವರ್ಗವೂ ಇವುಗಳ ಪೋಷಕಶಕ್ತಿಗಳಾಗಿದ್ದವು. ಒಟ್ಟಿನಲ್ಲಿ ಪೂರ್ವಕಾಲದಿಂದಲೂ ಕರ್ನಾಟಕಕ್ಕೆ, ಕನ್ನಡ ನುಡಿಗೆ ಚರಿತ್ರೆಯುಂಟೆಂಬುದು ಅಭಿಮಾನದ ವಿಷಯ.

ಕ್ರಿ. ಶ. ೧೫೬೫ರಲ್ಲಿ ವಿಜಯನಗರ ಸಾಮ್ರಾಜ್ಯಕ್ಕೆ ಅಳಿಗಾಲ. ಆ ಬಳಿಕ ಚಿಕ್ಕಪುಟ್ಟ ಅರಸುಮನೆತನಗಳು ಅಲ್ಲಲ್ಲಿ ಆಡಳಿತ ನಡೆಸಿದವು. ಉತ್ತರ ಕರ್ನಾಟಕ ದಲ್ಲಿ ಆದಿಲಶಾಹಿ, ಮರಾಠಾ ಹಾಗೂ ನಿಜಾಮ ವಂಶಜರ ಆಡಳಿತಗಳ ಪ್ರಭಾವ ಕಂಡುಬಂದಿತು. ಆಗ ಕನ್ನಡ ಭಾಷೆಗೆ ಇಳಿಗಾಲ ಬಂದಿತು. ದಕ್ಷಿಣ ಕರ್ನಾಟಕ ದಲ್ಲಿ ಮೈಸೂರು ಅರಸುಮನೆತನವು ಉಳಿದು ಬೆಳೆಯಿತು. ಅಲ್ಲಿ ಕನ್ನಡವೂ ಉಳಿಯಿತು, ಬೆಳೆಯಿತು. ಉತ್ತರ ಕರ್ನಾಟಕದಲ್ಲಿ ಕನ್ನಡಿಗರ ರಾಜ್ಯಗಳು ಪ್ರಭಾವಿಯಾಗಿ ಉಳಿಯಲಿಲ್ಲ; ಕನ್ನಡವೂ ಉಳಿಯಲಿಲ್ಲ. ಅಲ್ಲಲ್ಲಿ ಕನ್ನಡದ ಇಳಿಗಾಲ, ಅಳಿಗಾಲದ ಕರಾಳ ಸ್ವರೂಪ. ಕನ್ನಡಿಗರ ಕೊನೆಯ ಹುಲಿ ಟೀಪುಸುಲ್ತಾನ! ಆತ ೧೭೯೯ರಲ್ಲಿ ಶ್ರೀರಂಗಪಟ್ಟಣದ ಯುದ್ಧದಲ್ಲಿ ಸೋತ, ಮಡಿದ. ಅಂದಿನಿಂದ ಕರ್ನಾಟಕ ರಾಜ್ಯದ ಪ್ರದೇಶಗಳು ಛಿದ್ರಛಿದ್ರವಾದವು. ಇಪ್ಪತ್ತು ಹೋಳುಗಳಾಗಿ ಹಂಚಿಹೋದವು. ಕನ್ನಡಿಗರ ಭವ್ಯತೆಗೆ ರಾಹುಕಾಲವದು. ಅಷ್ಟೇ! ಮುಂಬಯಿ, ಮದ್ರಾಸ, ಹೈದ್ರಾ-ಬಾದ ಪ್ರಾಂತಗಳಲ್ಲಿ ಮೈಸೂರು, ಕೊಡಗು, ಮರಾಠಾ ಸಂಸ್ಥಾನಗಳಲ್ಲಿ ಕರ್ನಾಟಕ

ಶ್ರೀ ಮ. ಗು. ಹಂದ್ರಾಳ ಅವರು ನುರಿತ ಶೈಕ್ಷಣಿಕ ಲೇಖಕರು ದಕ್ಷ ಆಡಳಿತಗಾರರು ಸಾರ್ವಜನಿಕ ವಿದ್ಯಾ ಇಲಾಖೆಯಲ್ಲಿ ವಿಭಾಗೀಯ ಉಪನಿರ್ದೇಶಕರಾಗಿ ಸೇವೆಮಾಡಿ ನಿವೃತ್ತಿ ಹೊಂದಿದ ಮೇಲೆ ಶಿಕ್ಷಕರ ಕ್ಷೇತ್ರದಿಂದ ಕರ್ನಾಟಕದ ವಿಧಾನ ಪರಿಷತ್ತಿನ ಸದಸ್ಯರೆಂದು ಆಯ್ಕೆ ಯಾಗಿದ್ದರು.

ರಾಜ್ಯದ ತುಂಡುಗಳು ಸೇರಿಕೊಂಡವು. ಇದೊಂದು ಐತಿಹಾಸಿಕ ಗಾಳಿಯ ಪ್ರಚಂಡ ಪ್ರಭಾವ. ಈ ಸಮಯದಲ್ಲಿ ಕನ್ನಡ ಭಾಷೆಯು ಬೆಳೆಯುವುದೆಂತು? ಉತ್ತರ ಕರ್ನಾಟಕದಲ್ಲಂತೂ ಕನ್ನಡದ ಕತ್ತಲೆ!

೧೯ನೆಯ ಶತಮಾನದಲ್ಲಿ ರಾಜಕೀಯ ಸ್ಥಿತ್ಯಂತರಗಳು ಕಂಡುಬಂದವು. ೧೮೧೮ರ ವರೆಗೆ ಧಾರವಾಡ ಪ್ರದೇಶವೆಲ್ಲ ಪೇಶ್ವೆಯರ ಆಡಳಿತದಲ್ಲಿತ್ತು. ಅವರ ಭಾಷೆ ಮರಾಠಿ. ಆಡಳಿತದ ಭಾಷೆ ಆಳುವವರ ಭಾಷೆಯೇ ಅಲ್ಲವೆ? ಪೇಶ್ವೆಯವರ ನಂತರ ಬ್ರಿಟಿಶರ ಆಳ್ವಿಕೆ ಆರಂಭವಾಯಿತು. ಆದಾಗ್ಯೂ, ಮರಾಠಿ ಭಾಷೆಯ ಪ್ರಾಬಲ್ಯವೇ ಎಷ್ಟೋ ವರ್ಷಗಳ ವರೆಗೆ ಮುಂದು ವರಿಯಿತು. ಆ ಕಾಲದಲ್ಲಿದ್ದ ಅಧಿಕಾರಿಗಳೆಲ್ಲ ಮರಾಠಿಗರೇ ಆಗಿದ್ದುದು ಇದಕ್ಕೆ ಕಾರಣ. ಅದರಿಂದಾಗಿ ಆಡಳಿತ ಭಾಷೆ, ವ್ಯವಹಾರದ ಭಾಷೆ, ವಿದ್ಯೆ ಕಲಿಯುವ ಭಾಷೆ–ಎಲ್ಲವೂ ಮರಾಠಿಯಾಗಿದ್ದಿತು.

ಧಾರವಾಡದ ಗಂಡುಮಕ್ಕಳ ಸರಕಾರೀ ಟ್ರೇನಿಂಗ್ ಕಾಲೇಜಿನ ಶತಮಾನೋತ್ಸವ ಸಂದರ್ಭದಲ್ಲಿ (೧೯೫೭) ನಮ್ಮ ನಾಡಿನ ಹಿರಿಯ ಸಾಹಿತಿಗಳೂ ಶಿಕ್ಷಣ ತಜ್ಞರೂ ಆಗಿದ್ದ ಡಾ. ಶಿ. ಚ. ನಂದೀಮಠ ಅವರು ನೀಡಿದ ಸಂದೇಶದಲ್ಲಿ ಹೀಗೆ ಹೇಳಿದ್ದಾರೆ:

"ಉತ್ತರಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಧಾರವಾಡದ ಗಂಡುಮಕ್ಕಳ ಸರಕಾರೀ ಟ್ರೇನಿಂಗ್ ಕಾಲೇಜು ಬಹು ಮಹತ್ವದ ಪಾತ್ರವನ್ನಾಡಿದೆ. ಸುಮಾರು ಒಂದು ಒಂದೂವರೆ ಶತಮಾನದ ಹಿಂದೆ ಉತ್ತರಕರ್ನಾಟಕದ ಈ ಭಾಗದಲ್ಲಿ ಮರಾಠಿಯ ಪ್ರಭಾವ ವಿಶೇಷವಾಗಿದ್ದಿತು. ಕೋರ್ಟು ಕಚೇರಿಗಳ ಭಾಷೆ ಮರಾಠಿ. ಸರಕಾರಿ ನೌಕರರು ವಿಶೇಷವಾಗಿ ಮಹಾರಾಷ್ಟ್ರದಿಂದ ಬಂದುದರಿಂದ ಮರಾಠಿಯನ್ನೇ ಮಾತಾಡುತ್ತಿದ್ದರು. ಆದುದರಿಂದ ಆ ಕಾಲದ ಬ್ರಿಟಿಷ್ ಅಧಿಕಾರಿಗಳಿಗೆ ಇದು ಕನ್ನಡದ ಭಾಗ, ಇಲ್ಲಿಯ ಜನರ ಮಾತೃಭಾಷೆ ಕನ್ನಡ ಎಂಬ ಕಲ್ಪನೆ ಬಾರದೆ, ಮರಾಠಿಯೇ ಇಲ್ಲಿಯ ಭಾಷೆಯೆಂದು ಭ್ರಮಿಸಿ, ಈ ಭಾಗವನ್ನು ದಕ್ಷಿಣಮಹಾರಾಷ್ಟ್ರವೆಂದು ಕರೆದು, ಮರಾಠಿಗೆ ಮುಖ್ಯ ಸ್ಥಾನವನ್ನು ಕೊಟ್ಟಿದ್ದರು. ಕನ್ನಡಿಗರ ಸುದೈವದಿಂದ, ರಸೆಲ್ ಅವರ ನಿಷ್ಪಕ್ಷಪಾತ ದೃಷ್ಟಿ, ಡೆಪ್ಯೂಟಿ ಚೆನ್ನಬಸವಪ್ಪನವರ ಕನ್ನಡ ಅಭಿಮಾನ— ಇವು ಒಂದುಗೂಡಿ ಕನ್ನಡದ ನಂದಾದೀವಿಗೆ ಮತ್ತೆ ಬೆಳಗುವಂತಾಯಿತು. ಧಾರವಾಡ, ಬೆಳಗಾಂವಿ ಜಿಲ್ಲೆಗಳಲ್ಲಿ ಕನ್ನಡ ಶಾಲೆಗಳನ್ನು ಭರದಿಂದ ಪ್ರಾರಂಭಿಸಲಾಯಿತು. ತರಬೇತು ಹೊಂದಿದ ಶಿಕ್ಷಕರ ಅವಶ್ಯಕತೆಯೆನಿಸಿ, ಅದನ್ನು ಪೂರೈಸಲು ಈ ಟ್ರೇನಿಂಗ್ ಕಾಲೇಜು ಆರಂಭವಾಯಿತು. ಮೇಧಾವಿಗಳೂ ಕರ್ತೃತ್ವಶಾಲಿಗಳೂ ಆಡಳಿತೆಯಲ್ಲಿ ನಿಪುಣರೂ ಆದ ಡೆ. ಚೆನ್ನಬಸವಪ್ಪನವರು ಈ ಸಂಸ್ಥೆಗೆ ಪ್ರಪ್ರಥಮ ಪ್ರಿನ್ಸಿಪಾಲರಾಗಿ ಬಂದು, ಅದಕ್ಕೆ ಒಳ್ಳೇ ಪರಂಪರೆಯನ್ನೂ ಹಾದಿಯನ್ನೂ ಹಾಕಿಕೊಟ್ಟರು".

ಇದೇ ಶುಭಸಮಯದಲ್ಲಿ ಖ್ಯಾತ ಕನ್ನಡ ಸಾಹಿತಿಗಳಾಗಿದ್ದ ರೆ. ಚನ್ನಪ್ಪ ಉತ್ತಂಗಿ ಅವರು ಹೀಗೆ ಹೇಳಿದ್ದಾರೆ. :

“ಕಳೆದ ಒಂದು ಶತಮಾನ ಕಾಲದಲ್ಲಿ ಕನ್ನಡ ನಾಡನುಡಿಗಳಿಗೆ ಅಮೋಘವಾದ ಸೇವೆಯನ್ನು ಸಲ್ಲಿಸಿ, ಕನ್ನಡ ಭಾಷೆಯನ್ನು ಉಳಿಸಿ ಬೆಳೆಸಿದ ಮಹಾ ಶ್ರೇಯಸ್ಸು ನಿಮ್ಮ ಕಾಲೇಜಕ್ಕೆ ಯಥೇಚ್ಛವಾಗಿ ಸಲ್ಲುತ್ತದೆ. ಕನ್ನಡ ನಾಡಿನಲ್ಲಿ ಕನ್ನಡತನವು ಅಳಿದು ಹೋಗುವ ಕಾಲದಲ್ಲಿ ನಿಮ್ಮ ಸಂಸ್ಥೆಯು ಜನ್ಮ ತಾಳಿ, ಅದ್ವಿತೀಯ ಸಾಹಸಿಗಳಾದ ದಿ. ಡೆ. ಚೆನ್ನಬಸವಪ್ಪನವರು ಆಗಿನ ಇನಸ್ಪೆಕ್ಟರರಾದ ರಸೆಲ್ ಸಾಹೇಬರು ಮುಂತಾದ ಮಹಾನುಭಾವರ ಪರಿಶ್ರಮದಿಂದ ಪೋಷಿಸಲ್ಪಟ್ಟು, ಕರ್ನಾಟಕ ಕಾಲೇಜು ಪ್ರಾರಂಭ-ವಾಗುವವರೆಗೆ ಇದೊಂದೇ ಉಚ್ಚ ಶಿಕ್ಷಣ ಸಂಸ್ಥೆಯಾಗಿ ಆಧುನಿಕ ಕನ್ನಡ ಸಾಹಿತ್ಯಕ್ಕೆ ಕನ್ನಡಿಗರ ಜಾಗ್ರತೆಗೆ ಭದ್ರವಾದ ಅಡಿಗಲ್ಲನ್ನು ಹಾಕಿತು”.

ಧಾರವಾಡ ಪ್ರದೇಶದಲ್ಲಿ ಕನ್ನಡವು ಅಳಿದುಹೋದ ಸಮಯದಲ್ಲಿ ಕನ್ನಡದ ಸಸಿಯನ್ನು ಮತ್ತೆ ನೆಟ್ಟು ನೀರೆರೆದ ಶ್ರೇಯಸ್ಸು ಡೆ. ಚನ್ನಬಸವಪ್ಪನವರಿಗೆ ಸಲ್ಲುತ್ತದೆ. ಕನ್ನಡದ ದೀಪವನ್ನು ಮತ್ತೆ ಹಚ್ಚಿ, ಅದು ಪ್ರಕಾಶಮಾನವಾಗಿ ಬೆಳಗುವಂತೆ ಮಾಡಿದ ಕೀರ್ತಿ ಅವರದು. ಧಾರವಾಡವು ಕನ್ನಡ ಪ್ರದೇಶದ ಗಂಡುಮೆಟ್ಟಿನ ಸ್ಥಳ. ಅಲ್ಲಿಯೇ ಕನ್ನಡದ ದೀಪ ನಂದಿಹೋಗಿತ್ತು. ಅಲ್ಲಿಂದಲೇ ಕನ್ನಡದ ದೀಪವು ಮರಳಿ ಪ್ರಜ್ವಲಿಸುವ ಸುವರ್ಣ ಸಮಯ ಸಂದಿತು. ಪ್ರೊ. ಸ. ಸ. ಮಾಳವಾಡ ಅವರು ಹೀಗೆ ಬರೆಯುತ್ತಾರೆ. :

“ಹೀಗಿತ್ತು ಅಂದಿನ ಪರಿಸ್ಥಿತಿ. ಈ ಪ್ರದೇಶದಲ್ಲಿ ಸರಕಾರಿ ಶಾಲೆಗಳು ಆರಂಭ-ವಾಗಿ ಒಂಬತ್ತು ವರುಷಗಳು ಕಳೆದಿದ್ದವು. ಆದರೂ ಇಲ್ಲಿಯ ಜನರ ಭಾಷೆಯು ಕನ್ನಡವೆಂಬ ಸಂಗತಿಯು ಸರಕಾರಕ್ಕೆ ತಿಳಿದಿರಲಿಲ್ಲ. ಅದನ್ನು ತಿಳಿಸಿಕೊಡುವ ಪ್ರಭಾವ ಶಾಲಿ ಜನರೂ ಆಗ ಇಲ್ಲಿ ಇರಲಿಲ್ಲ. ಅಂತೆಯೇ ೧೮೬೫ ರ ವರೆಗೆ ಧಾರವಾಡ ಪ್ರದೇಶ ದಲ್ಲಿ ಕನ್ನಡದ ಬಗೆಗೆ ಕತ್ತಲೆಯು ಹಬ್ಬಿತ್ತು. ಅಂತಹ ಕತ್ತಲೆಯಲ್ಲಿ ಕನ್ನಡದ ದೀಪ ಹಚ್ಚಿದ ಪುಣ್ಯಪುರುಷ ಡೆಪ್ಯೂಟಿ ಚೆನ್ನಬಸವಪ್ಪ”.

ಲಿಂಗೈಕ್ಯ ಡೆಪ್ಯೂಟಿ ಚೆನ್ನಬಸವಪ್ಪನವರು ಧಾರವಾಡದ ಕನ್ನಡ ಗಂಡುಮಕ್ಕಳ ಸರಕಾರಿ ಟ್ರೇನಿಂಗ್ ಕಾಲೇಜಿನ ಪ್ರಪ್ರಥಮ ಪ್ರಿನ್ಸಿಪಾಲರಾಗಿದ್ದರು. ಕನ್ನಡ ಶಿಕ್ಷಕರ ತರಬೇತಿಯ ದಿಸೆಯಲ್ಲಿ ನೂತನ ದಿಗ್ದರ್ಶನ ಮಾಡಿದರು. ಕನ್ನಡ ಬರಹಗಾರರನ್ನು ಗುರುತಿಸಿ, ಸರಕಾರದಿಂದ ಅವರಿಗೆ ಸೂಕ್ತ ಪ್ರೋತ್ಸಾಹ ದೊರೆಯುವಂತೆ ಮಾಡಿದರು. ಈ ಭಾಗಗಳಲ್ಲಿ ಕನ್ನಡ ಶಾಲೆಗಳನ್ನು ಹೆಚ್ಚಿಸಿ, ಕನ್ನಡ ಶಿಕ್ಷಕರಿಗೆ ತಕ್ಕ ಮಾರ್ಗದರ್ಶನ ನೀಡಿದರು. ವಿದ್ಯಾ ಇಲಾಖೆಯಲ್ಲಿ ಹೆಚ್ಚು ಕಾಲ ಡೆಪ್ಯೂಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಹುದ್ದೆಯಲ್ಲಿ ಶ್ರೀ ಚೆನ್ನಬಸಪ್ಪನವರು ಕಾರ್ಯ ನಿರ್ವಹಿಸಿದರು. ಈ ಸ್ಥಾನದಲ್ಲಿಯೇ ಇದ್ದಾಗ, ಈ ಪ್ರದೇಶದಲ್ಲಿ ಕನ್ನಡ ಚಳವಳಿಯನ್ನು ಆರಂಭಿಸಿದರು.

ಕನ್ನಡದ ಕೀರ್ತಿ ಸುತ್ತಲೂ ಹರಡುವಂತೆ ಮಾಡಿದರು. ಆದಕಾರಣ ಡೆಪ್ಯೂಟಿ ಚೆನ್ನಬಸವಪ್ಪ ಎಂಬ ಹೆಸರಿನಿಂದಲೆ ಜನರು ಅವರನ್ನು ಕರೆಯತೊಡಗಿದರು. ಜನವಾಣಿ ರೂಢವಾಯಿತು. ಅವರ ಮನೆತನದ ಅಂದರೆ ಅಡ್ಡ ಹೆಸರು (Surname) 'ಧಾರವಾಡ' ಎಂಬುದು. ಆದರೆ ಚೆನ್ನಬಸವಪ್ಪನವರು ಧಾರವಾಡ– ಎಂದು ಕರೆಯುವ ರೂಢಿ ತಪ್ಪಿಹೋಯಿತು. ಅವರು ಅಲಂಕರಿಸಿದ್ದ ಅಧಿಕಾರದ ಹುದ್ದೆ ಎದ್ದು ಕಾಣಿಸಿತು. ಆ ಕಾಲದಲ್ಲಿ ಆ ಹುದ್ದೆಗೆ ಬಹಳ ಮನ್ನಣೆ ಇತ್ತು. ಈ ಬದಲಾದ ರೂಢಿಗೆ ಇದೇ ಕಾರಣವಾಗಿರಬೇಕು. ಅಲ್ಲದೆ, ಧಾರವಾಡ ಭಾಗದಲ್ಲಿ ಕನ್ನಡಕ್ಕೆ ಕತ್ತಲೆ ಆವರಿಸಿದ ಸಮಯ ಅದು! ಈ ಕತ್ತಲೆಯನ್ನು ನಿವಾರಿಸಲು ಕನ್ನಡದ ದೀಪ ಹಚ್ಚಿದರು. ಕನ್ನಡದ ಪಣತಿಗೆ ತೈಲ ಎರೆದರು. ಬತ್ತಿ ಇಟ್ಟರು, ಪ್ರಕಾಶ ನೀಡಿದರು, ೧೯ ನೆಯ ಶತಮಾನದ ಉತ್ತರಾರ್ಧದಲ್ಲಿ, ಬ್ರಿಟಿಶರ ಆಳ್ವಿಕೆಯ ಪ್ರಭಾವದಲ್ಲಿ! ಇದೆಲ್ಲ ಅಂದಿನ ಸಮಯದಲ್ಲಿ ಘನವಾದ ಕಾರ್ಯ, ಕನ್ನಡದ ನೆಲದಲ್ಲಿ ನೆಲೆಯೂರಿದ ಮರಾಠಿಯ ಪ್ರಭಾವವನ್ನು ಹತ್ತಿಕ್ಕಿದ ಕಾರ್ಯ ಕಿರಿದಲ್ಲ. **ಕನ್ನಡದ ಪುನರ್‌ಜನ್ಮದ ಕಾಲ. ಕನ್ನಡಕ್ಕೆ ಸಂಜೀವಿನಿ ತಂದುಕೊಟ್ಟವರು ಡೆಪ್ಯೂಟಿ ಚೆನ್ನಬಸವಪ್ಪನವರು.** ಅವರನ್ನು ಕನ್ನಡಿಗರು ಹೇಗೆ ಮರೆತಾರು ? ಮರೆಯಲು ಸಾಧ್ಯವೂ ಇಲ್ಲ, ಸಾಧುವೂ ಅಲ್ಲ.

"ದೊಡ್ಡ ಮನುಷ್ಯರ ಚರಿತ್ರೆಗಳು ಯಾವಾಗಲೂ ಬೋಧಪ್ರದವಾದವುಗಳು. ಇಂಥ ಜನರು ಕಾಲಕಾಲಕ್ಕೆ ಹುಟ್ಟುವದರಿಂದಲೇ ಜನಾಂಗವು ಮುಂದರಿಸುವದು. ಇವರು ತಮ್ಮ ಕೃತಿಗಳಿಂದಲೂ ಬೋಧದಿಂದಲೂ ಉದಾತ್ತ ವಿಚಾರಗಳನ್ನು ಹುಟ್ಟಿಸಿ, ಅದನ್ನು ತಕ್ಕ ಕಾರ್ಯಗಳನ್ನು ಮಾಡಲಿಕ್ಕೆ ಹಚ್ಚುವರು. ಇವರುಗಳ ಸುಪರಿಣಾಮಗಳು ಅವರಿದ್ದ ಕಾಲದಲ್ಲಷ್ಟೇ ಅಲ್ಲ, ಅವರ ಮುಂದಿನ ಕಾಲದಲ್ಲಿಯೂ ಜನರಲ್ಲಿ ಶಾಶ್ವತವಾಗಿ ಉಳಿಯುವವು. ಆದ್ದರಿಂದ ಇಂಥ ಜನರ ಚರಿತ್ರೆಗಳನ್ನು ಲಕ್ಷ್ಯಗೊಟ್ಟು ಅಭ್ಯಾಸಿಸುವದು ಬಹು ಮಹತ್ವವಾದದ್ದು". (ಪುಟ–೧ ಶ್ರೀ ಹಳಕಟ್ಟಿ, ಫ. ಗು.)

ಬಾಲ್ಯ ಮತ್ತು ಶಿಕ್ಷಣ :

ಚೆನ್ನಬಸವಪ್ಪನವರ ಅಜ್ಜಂದಿರ ವಾಸಸ್ಥಳವು ಗೋಕಾಕ. ಬೆಳಗಾವಿ ಜಿಲ್ಲೆಯ ಒಂದು ತಾಲೂಕಿನ ಸ್ಥಳ. ಆಗ ಅದಕ್ಕೆ ಗೋಕಾವಿ ಎಂಬ ಹೆಸರು ಇತ್ತು. ಅವರ ಅಜ್ಜನ ಹೆಸರು ಅಪ್ಪಯ್ಯಪ್ಪ. ಅವರು ವೀರಶೈವ ಮನೆತನದವರು, ವ್ಯಾಪಾರಿಗಳು. ಅವರ ಮನೆತನದ ಹೆಸರು ಧಾರವಾಡ. ಅವರಿಗೆ ಇಬ್ಬರು ಮಕ್ಕಳಿದ್ದರು : ಅಪ್ಪಣ್ಣಪ್ಪ ಮತ್ತು ಬಸಲಿಂಗಪ್ಪ ಚೆನ್ನಬಸವಪ್ಪನವರ ತಂದೆಯೇ ಶ್ರೀ ಬಸವಲಿಂಗಪ್ಪನವರು. ಅವರ ತಾಯಿಯ ಹೆಸರು ಶ್ರೀಮತಿ ತಿಪ್ಪವ್ವ, ಶಿವಶರಣೆ. ಈ ದಂಪತಿಗಳಿಗೆ ಇಬ್ಬರು ಪುತ್ರರು, ಅವರಿಬ್ಬರಿಗೂ ಒಂದೇ ಹೆಸರು, ಚೆನ್ನಬಸವಪ್ಪ. ಆದಕಾರಣ ಜನರು

ದೊಡ್ಡಚೆನ್ನಬಸವಪ್ಪ, ಸಣ್ಣಚೆನ್ನಬಸವಪ್ಪ ಎಂದು ಅವರನ್ನು ಕರೆಯುತ್ತಿದ್ದರು. ದೊಡ್ಡಚೆನ್ನಬಸವಪ್ಪನವರೇ ನಮ್ಮ ಡೆಪ್ಯೂಟಿ ಚೆನ್ನಬಸವಪ್ಪನವರು. ಸಣ್ಣಚೆನ್ನಬಸಪ್ಪನವರು ಪ್ರಾಥಮಿಕ ಶಾಲೆಯ ಶಿಕ್ಷಕರಾಗಿ ನಿವೃತ್ತಿ ಹೊಂದಿದರು. ದೊಡ್ಡಚೆನ್ನಬಸವಪ್ಪ ದೊಡ್ಡವರಾಗಿಯೇ ಬಾಳಿ ಬೆಳಗಿದರು. ಅದೊಂದು ದೈವೀ ಸಂಕಲ್ಪ.

ಶ್ರೀ ಬಸವಲಿಂಗಪ್ಪನವರು ವ್ಯಾಪಾರಕ್ಕೋಸುಗ ಗೋಕಾವಿಯನ್ನು ಬಿಟ್ಟು ಧಾರವಾಡಕ್ಕೆ ಬಂದರು. ಅಲ್ಲಿಯೇ ನೆಲೆಸಿದರು. ಅವರು ವ್ಯಾಪಾರವನ್ನೇ ಮುಂದು-ವರಿಸಿದರು. ಅವರ ಹಿರಿಯ ಮಗ ಚೆನ್ನಬಸವಪ್ಪ ದಿನಾಂಕ ೧-೧೧-೧೮೫೨ ರಂದು ಧಾರವಾಡದಲ್ಲಿಯೇ ಜನಿಸಿದರು. ಕನ್ನಡ ಕುಲಪುತ್ರನ ಜನ್ಮವೂ ಕರ್ನಾಟಕ ರಾಜ್ಯೋದಯದ ದಿನವೂ ಒಂದೇ. ಈಶ ಸಂಕಲ್ಪವಾದ ಇದು ಉಜ್ವಲ ಕರ್ನಾಟಕದ ಭವಿಷ್ಯದ ಜನ್ಮೋತ್ಸವವೂ ಅಹುದು. ಚೆನ್ನಬಸವಪ್ಪನ ಬಾಲ್ಯದ ಲೀಲೆಗಳನ್ನು ಕಂಡು ತಂದೆ-ತಾಯಂದಿರು ಆನಂದಿಸಿದರು. ಆರು ವರ್ಷದ ಬಾಲಕನಿದ್ದಾಗ, ಚೆನ್ನಬಸವಪ್ಪನ ತಂದೆ ಶ್ರೀ ಬಸವಲಿಂಗಪ್ಪನವರು ಲಿಂಗೈಕ್ಯರಾದರು. ಅವರು ಆಗ ಅಷ್ಟೊಂದು ಸಿರಿವಂತರಾಗಿರಲಿಲ್ಲ. ಮಕ್ಕಳ ಲಾಲನೆ-ಪಾಲನೆ, ಶಿಕ್ಷಣದ ವ್ಯವಸ್ಥೆ ಮೊದಲಾದ ಕಾರ್ಯ ಭಾರವನ್ನು ಅವರ ತಾಯಿ ತಿಪ್ಪಮ್ಮನವರೇ ನಿರ್ವಹಿಸಬೇಕಾಯಿತು. ಆದರೂ ತಿಪ್ಪಮ್ಮನವರು ಎದೆಗುಂದಲಿಲ್ಲ. ಬಂದ ತೊಡಕುಗಳನ್ನೆಲ್ಲ ತೊಡೆದು ಹಾಕಿದರು. ಅವರ ಎದೆಗಾರಿಕೆ ಪ್ರಶಂಸನೀಯವಾದುದು. ಎಂಥ ಕಷ್ಟಗಳು ಬಂದರೂ ಮಕ್ಕಳಿಗೆ ಒಳ್ಳೇ ಶಿಕ್ಷಣ ಕೊಡಿಸಬೇಕೆಂದು ಅವರು ದೃಢನಿರ್ಧಾರ ಮಾಡಿದರು. ನಿರ್ಮಲ ಹೃದಯದ ತಾಯಿಯ ಸುಮಂಗಲ ಸಂಕಲ್ಪ ಅದು !

ತುಂಟ ಬಾಲಕ :

ಚನ್ನಬಸವಪ್ಪನವರ ಗುರುಗಳ ಹೆಸರು ಶಿವರುದ್ರಯ್ಯನವರು. ಅವರ ಕೈಕೆಳಗೆ ಚನ್ನಬಸವಪ್ಪನವರ ಶಿಕ್ಷಣವು ಪ್ರಾರಂಭವಾಯಿತು. ಆದರೆ ಚನ್ನಬಸವಪ್ಪನವರು ಬಹಳೇ ಕಿಡಿಗೇಡಿಸ್ವಭಾವದವರಾಗಿದ್ದರು. ಉಡಾಳತನದಲ್ಲಿ ಅವರನ್ನು ಸರಿಗಟ್ಟುವವರು ಯಾರೂ ಇರಲಿಲ್ಲ. ಶಾಲೆಗೆ ಹೋಗುವದನ್ನು ತಪ್ಪಿಸಿ ತುಂಟ ಹುಡುಗರನ್ನು ಕೂಡಿಕೊಂಡು ಜಗಳ ತೆಗೆಯುವದು, ಹುಡುಗರ ಬಹುದೊಡ್ಡ ಪಾಟಿಗಳನ್ನು ಹುಡುಕಿ ಅವುಗಳನ್ನು ಗುದ್ದಿ ಒಡೆಯುವದೂ, ಸಿಟ್ಟುಬಂದರೆ ಮನೆಯೊಳಗಿನ ಸಾಮಾನುಗಳನ್ನು ಬೀದಿಯ ಮೇಲೆ ಬೀಸಾಡುವದೂ, ಇವೇ ಮೊದಲಾದ ದುರ್ಗುಣಗಳು ಇವರಲ್ಲಿ ಸಂಪೂರ್ಣವಾಗಿದ್ದವು. ಆದ್ದರಿಂದ ಅವರ ಅಭ್ಯಾಸವು ಚನ್ನಾಗಿ ನಡೆಯಲಿಲ್ಲ. ಆದರೆ ಅವರಲ್ಲಿದ್ದ ಚುರುಕು ಬುದ್ಧಿಯನ್ನು, ಜ್ಞಾಪಕ ಶಕ್ತಿಯನ್ನು, ಅವರ ಗುರುಗಳೂ ತಾಯಿಯವರೂ ಕಂಡು ಅವರಿಗೆ ಚನ್ನಾಗಿ ವಿದ್ಯೆಕಲಿಸಬೇಕೆಂದು ಅಪೇಕ್ಷಿಸಿದರು. ತಾಯಿಯವರು ಅವರ ತುಂಟತನಕ್ಕಾಗಿ ಅವರನ್ನು ಮೇಲಿಂದ ಮೇಲೆ ದಂಡಿಸುತ್ತಿದ್ದರು.

ಶಿವರುದ್ರಯ್ಯನವರಾದರೂ ಅವರನ್ನು ಹಾದಿಗೆ ತರಲು ತಮ್ಮಿಂದಾದಷ್ಟು ಯತ್ನಿಸು-ತ್ತಿದ್ದರು. ಆದರೆ ಅವೆಲ್ಲವು ನಿಷ್ಫಲವಾದವು. ಕಟ್ಟಕಡೆಗೆ ಒಂದು ದಿವಸ ಗುರುಗಳು ಚನ್ನಬಸವಪ್ಪನವರಿಗೆ ಚನ್ನಾಗಿ ಸಿಟ್ಟುಮಾಡಿ ಒಳಿತಾಗಿ ಹೊಡೆದರು. ಅಂದಿನಿಂದ ಮಾತ್ರ ಅವರು ತಮ್ಮ ಕಿಡಿಗೇಡಿತನವನ್ನು ಬಿಟ್ಟು ಕೊಟ್ಟರೆಂದು ಹೇಳುತ್ತಾರೆ.

ಆ ಕಾಲದಲ್ಲಿ ಸರಕಾರಿ ಶಾಲೆಗಳಾಗಲಿ, ಸರಕಾರದಿಂದ ಮನ್ನಣೆ ಪಡೆದ ಶಾಲೆಗಳಾಗಲಿ ಇರಲಿಲ್ಲ. ಮಠದ ಅಯ್ಯನವರೇ ತಮ್ಮ ಮನೆ-ಮಠಗಳಲ್ಲಿಯೇ ಮಕ್ಕಳಿಗೆ ವಿಧ್ಯಾಭ್ಯಾಸ ಮಾಡಿಸುತ್ತಿದ್ದರು.ಓದು,ಬರಹ,ಗಣಿತ ಈ ವಿಷಯಗಳಿಗೆ ಮಹತ್ವ ಕೊಡಲಾಗುತ್ತಿತ್ತು. ಬಾಲಕ ಚನ್ನಬಸವಪ್ಪನ ಆರಂಭದ ಶಿಕ್ಷಣವು ಮಠದ ಅಯ್ಯನವರ ಶಾಲೆಯಲ್ಲಿಯೇ ನಡೆಯಿತು. ಮಗು ಬುದ್ಧಿವಂತ, ಆದರೆ ತುಂಟ, ತುಸು ಹಟಮಾರಿ ಎಂದು ಅಯ್ಯನವರು ಹೇಳುತ್ತಿದ್ದರು. ಸಾಮಾನ್ಯವಾಗಿ ಚುರುಕುಬುದ್ಧಿಯ ಬಾಲಕರಲ್ಲಿ ತುಂಟತನ ಇರುತ್ತದೆ ಎಂಬುದು ಅನುಭವಕ್ಕೆ ಬಂದ ಮಾತು. ‘ಚಿಕ್ಕತಕ್ಕಡಿಯ ನೆಂಟುತನವನ್ನು ಬಿಟ್ಟ, ಪಾಟಿ–ಪುಸ್ತಕಗಳನ್ನು ಅಲಕ್ಷಿಸಿದ, ಚಿಣಿ–ಬಗುರಿಗಳ ಆಟದಲ್ಲಿ ತೊಡಗಿದ ಗೆಳೆಯರ ಗುಂಪಿನಲ್ಲಿ **ಆತನೇ “ಹುಲಿ.”** ಇವು ಆತನು ಬಾಲ್ಯದಲ್ಲಿ ತೋರಿದ ಒಲವುಗಳು, ಹೀಗೆಂದು ಒಬ್ಬರು ವರ್ಣಿಸಿದ್ದಾರೆ. ಹಾಗಿದ್ದರೂ ಬಾಲಕನಲ್ಲಿ ಎಷ್ಟೊಂದು ಜ್ಞಾಪಕಶಕ್ತಿಯಿದೆ ಎಂದು ಅಯ್ಯನವರು ಅಚ್ಚರಿಪಟ್ಟದ್ದೂ ಉಂಟು. ಅಯ್ಯನವರು ಆತನನ್ನು ಬಹುವಾಗಿ ಮೆಚ್ಚಿಕೊಂಡರು. ತಾಯಿಯ ವಾತ್ಸಲ್ಯ, ಅಯ್ಯನವರ ಮಮತೆ ಬಾಲಕನ ಮೇಲೆ ಪ್ರಭಾವ ಬೀರಿದವು. ಬರಬರುತ್ತ ಆತ ತುಂಟತನವನ್ನು ಕಡಿಮೆ ಮಾಡಿದ, ವಿದ್ಯಾಭ್ಯಾಸದ ಕಡೆಗೆ ಮನಸ್ಸು ಮಾಡಿದ. ತನ್ನ ಮಗು ಜಾಣನಾಗಬೇಕೆಂಬ ತಾಯಿಯ ಹಂಬಲಕ್ಕೆ ಬೆಂಬಲ ದೊರೆಯಿತು. ಆತನ ಗುರು, ಶ್ರೀ ಶಿವರುದ್ರಯ್ಯನವರು ಕನ್ನಡ, ಮರಾಠಿ (ಮೋಡಿ), ಗಣಿತ ಈ ವಿಷಯಗಳನ್ನು ಬಾಲಕ ಚನ್ನಬಸವಪ್ಪನಿಗೆ ಚೆನ್ನಾಗಿ ಕಲಿಸಿದರು. ಹಳಗನ್ನಡ ಕಾವ್ಯಗಳ ಪಠಣದ ಪರಿಣಾಮವಾಗಿ ಕನ್ನಡದ ಬಗೆಗೆ ಆಸ್ಥೆ, ಅಭಿಮಾನ ಆತನಲ್ಲಿ ಮೂಡಿ ಬಂದವು. ಅಂತೂ ಅತ ಪ್ರಾಥಮಿಕ ಶಿಕ್ಷಣದ ಅಭ್ಯಾಸವನ್ನು ಮುಗಿಸಿದ. ಕನ್ನಡದ ಕೆಚ್ಚು ಅಚ್ಚಳಿಯದೆ ಆತನ ಹೃನ್ಮಂದಿರವನ್ನು ಹೊಕ್ಕಿತು. ಇದುವೆ ಆತನ ಮುಂದಿನ ಕನ್ನಡದ ಚಳವಳಿಗೆ ನಾಂದಿಯಾಯಿತು.

ಇಲ್ಲಿಗೆ ಬಾಲಕ ಚನ್ನಬಸವಪ್ಪನ ಜ್ಞಾನದ ಹಸಿವು ಹಿಂಗಲಿಲ್ಲ. ಆತ ಇಂಗ್ಲೀಷ ಕಲಿಯಬೇಕೆಂದು ಹಂಬಲಿಸಿದ. ಆಗ ಇಂಗ್ಲೀಷ ಕಲಿಸುವ ಶಾಲೆಗಳು ಧಾರವಾಡದಲ್ಲಿ ಇರಲಿಲ್ಲ. ಮುಂಬಯಿ, ಪುಣೆ ಪಟ್ಟಣಗಳಿಗೆ ಹೋಗಬೇಕಾಗುತ್ತಿತ್ತು. ಈಗಿನಂತೆ ರೈಲುಗಾಡಿಗಳ ವ್ಯವಸ್ಥೆ ಆಗ ಇರಲಿಲ್ಲ. ಯಾವ ವಾಹನ ಸೌಕರ್ಯಗಳಿಲ್ಲದ ಸಮಯದಲ್ಲಿ ಜನರು ಅನಿವಾರ್ಯವಾಗಿ ಕಾಲುನಡಿಗೆಯ ಪ್ರವಾಸವನ್ನು ಕೈಕೊಳ್ಳಬೇಕಾಗು-ತ್ತಿತ್ತು. ಇಂಥ ಸಂದರ್ಭದಲ್ಲಿಯೂ ಬಾಲಕ ಚನ್ನಬಸವಪ್ಪ ತನ್ನ ಪ್ರೌಢ

ವಿದ್ಯಾಭ್ಯಾಸಕ್ಕಾಗಿ ಪುಣೆಗೆ ಹೋಗಲು ನಿರ್ಧರಿಸಿದ. ಆಗ ಅವನಿಗೆ ೧೩ ವರ್ಷ ಮಾತ್ರ ಆಗಿತ್ತು. ಮೊದಲಿನಿಂದಲೂ ಸಾಹಸಿ, ಹಟಮಾರಿ, ದಿಟ್ಟ ಎಂದು ಆತ ಹೆಸರಾಗಿದ್ದ. ಇಂಗ್ಲೀಷ ಕಲಿಯಲೇಬೇಕೆಂಬ ಹಂಬಲ, ಆತುರ, ಕುದಿ ಅವನಲ್ಲಿ ಹೆಚ್ಚಾದವು.

ಒಮ್ಮೆ ಊಟಕ್ಕೆ ಕುಳಿತಾಗ ತಾಯಿಯ ಮುಂದೆ ಮನಬಿಚ್ಚಿ ಈ ವಿಷಯವನ್ನು ಕುರಿತು ಆತ ಪ್ರಸ್ತಾಪಿಸಿದ. ತಿಪ್ಪಮ್ಮನಿಗೆ ಆಶ್ಚರ್ಯವೆನಿಸಿತು. ಭಯವೂ ಉಂಟಾ-ಯಿತು. ಏಕೆ ಗೊತ್ತೇ? ಪುಣೆ ನಗರವು ಧಾರವಾಡದಿಂದ ಬಹುದೂರ. ಸುಮಾರು ೪೦೦ ಕಿಲೋಮೀಟರ ಅಂತರ. ಅಲ್ಲಿಯವರೆಗೆ ತನ್ನ ಮಗ ನಡೆದುಕೊಂಡೇ ಹೋಗ ಬೇಕು. ಇದು ಚಿಕ್ಕ ಬಾಲಕನಿಗೆ ಹೇಗೆ ಸಾಧ್ಯ? ಇದು ಅವರ ಪ್ರಥಮ ಸಮಸ್ಯೆ. ಅಲ್ಲದೆ, ಅವರ ಹತ್ತಿರ ಸಾಕಷ್ಟು ಹಣವೂ ಇರಲ್ಲಿಲ್ಲ. ಮೇಲಾಗಿ ಪುಣೆಯಲ್ಲಿ ಅವರ ನೆಂಟರು ಯಾರೂ ಇರಲ್ಲಿಲ್ಲ. ಹೀಗಾಗಿ ಚಿಕ್ಕಬಾಲಕ ಯಾರ ಆಶ್ರಯದಿಂದ ವಿದ್ಯಾಭ್ಯಾಸ ಮಾಡಬಹುದೆಂಬ ಯೋಚನೆ ಬಾಧಿಸತೊಡಗಿತು. ಈ ಸಮಸ್ಯೆಗಳ ಮಧ್ಯೆ ತಿಪ್ಪಮ್ಮನವರು ಚಿಂತಿಯ ಸಂತೆಯಲ್ಲಿ ಸಿಲುಕಿಕೊಂಡರು. ನೊಂದು ಬೆಂಡಾ ದರು. ಆದಕಾರಣ ಮಗನಿಗೆ ಯಾವ ಉತ್ತರವನ್ನೂ ಹೇಳದೆ ಮೌನ ತಳೆದರು. ತಾಯಿಯ ಮೌನವು ಬಾಲಕ ಚನ್ನಬಸವಪ್ಪನಿಗೆ ಅರ್ಥವಾಯಿತು. ತಾನು ಪುಣೆಗೆ ಹೋಗಲು ತಾಯಿಯು ಅಪ್ಪಣೆ ಕೊಡುವದಿಲ್ಲ ಎಂಬ ವಿಚಾರವೂ ಹೊಳೆಯಿತು.

ಅಂದು ರಾತ್ರಿ ಚನ್ನಬಸವಪ್ಪನಿಗೆ ನಿದ್ದೆಯ ಸುಳಿವೇ ಇಲ್ಲ. ಪುಣೆಗೆ ಹೋಗುವ ಯೋಚನೆಯೇ ಸುಳಿಯುತ್ತಿದೆ. ಮಧ್ಯರಾತ್ರಿಯಲ್ಲಿ ಹಾಸಿಗೆಯಿಂದ ಎದ್ದು, ತಾಯಿ ಮಲಗಿದ ಕೋಣೆಗೆ ಹೋದ. ಆಕೆಯ ಹತ್ತಿರವಿದ್ದ ಪೆಟ್ಟಿಗೆಯನ್ನು ತೆರೆದು ನೋಡಿದ, ಅದರಲ್ಲಿ ೩ ರೂಪಾಯಿ ೧೦ ಆಣೆಗಳು ಮಾತ್ರ ಇದ್ದವು. ಅಷ್ಟೊಂದು ಹಣ ತೆಗೆದು ಕೊಂಡ. ಮನೆ ಬಿಟ್ಟು ಹೊರಟ. ಪುಣೆಯ ಹಾದಿ ಹಿಡಿದ. ಎರಡು ಮೂರು ದಿನ ನಡೆದುಹೋದ. ತನ್ನ ಹತ್ತಿರವಿದ್ದ ಹಣವೂ ತೀರಿತು. ಹೇಗೆ ಹೇಗೊ ತಮ್ಮ ಮೊದಲಿನ ಊರಾದ ಗೋಕಾವಿಗೆ ಬಂದು ತಲುಪಿದ. ತಾನು ವಿದ್ಯಾಭ್ಯಾಸಕ್ಕಾಗಿ ಪುಣೆಗೆ ಹೊರಟಿದ್ದ ಸುದ್ಧಿಯನ್ನು ಆಪ್ತರಿಗೂ, ಚಿಕ್ಕಪ್ಪನ ಮಗ ಅಮರಪ್ಪನವರಿಗೂ ತಿಳಿಸಿದ. ಆದರೆ ಅವರಾರೂ ಆತನಿಗೆ ಸಹಾಯ ಮಾಡಲಿಲ್ಲ. ಅಷ್ಟರಲ್ಲಿ ಆತನ ತಂದೆಯ ಸ್ನೇಹಿತರೊಬ್ಬರು, ನಾಗಪ್ಪ ಗಿರಾಪುರ ಎಂಬವರು ಈ ಬಾಲಕನ ಧೈರ್ಯ, ಸಾಹಸಗಳನ್ನು ಮೆಚ್ಚಿ, ಆತನಿಗೆ ೫೦ ರೂಪಾಯಿ ಧನಸಹಾಯ ನೀಡಿ ಆಶೀರ್ವದಿಸಿ ದರು. ಈ ಪ್ರೋತ್ಸಾಹವೇ ಆತನು ಪುಣೆ ಸೇರುವಂತೆ ಮಾಡಿತು. ದಾರಿಯಲ್ಲಿ ಬಂದ ಕಷ್ಟಗಳ ಪರಿವೇ ಆತನಿಗೆ ಇರಲಿಲ್ಲ. ತನ್ನ ಛಲ ಫಲಿಸಿತು ಎಂಬುದೊಂದೇ ಹಿಗ್ಗು.

ಪುಣೆ ನಗರವು ವಿದ್ಯಾಪ್ರೇಮಿಗಳ ತವರೂರು. ಅಪರಿಚಿತ ಸ್ಥಳವಾದರೂ ಚನ್ನಬಸವಪ್ಪ ಅಲ್ಲಲ್ಲಿ ಸುತ್ತಾಡಿದ. ವಿದ್ಯಾವಂತರ ಹೃದಯದ ಆಳ–ಅಗಲ ಅರಿಯಲು ಯತ್ನಿಸಿದ. ಪುಣೆಯಲ್ಲಿ ಕಲಿಯಲು ಬಂದ ಹೊರಗಿನ ವಿದ್ಯಾರ್ಥಿಗಳಿಗೆ ಸಹಾಯ ಮಾಡುವಂಥ ವಿದ್ಯಾಪ್ರೇಮಿಗಳೂ ಇದ್ದರು. ಅಂಥ ಸದ್ಗೃಹಸ್ಥರಲ್ಲಿ ಒಬ್ಬರಾಗಿದ್ದ, ಶ್ರೀಮಂತರೂ ಉದಾರಿಗಳೂ ಆಗಿದ್ದ ಶ್ರೀ ಗೋವಿಂದರಾವ ಮೆಹಂದಳೀಕರ ಎಂಬವರ ಪರಿಚಯವು ಬಾಲಕ ಚನ್ನಬಸವಪ್ಪನಿಗೆ ಲಭಿಸಿತು. ಆತನ ಸುದೈವ! ಈ ಬಾಲಕನು ಪಟ್ಟ ಕಷ್ಟ, ಆತನಲ್ಲಿ ಕಂಡುಬಂದ ಜ್ಞಾನದ ಹಸಿವು, ಧೈರ್ಯ, ಸಾಹಸ, ಛಲ ಇವೆಲ್ಲವುಗಳನ್ನು ಮನವಾರೆ ಮೆಚ್ಚಿದರು; ಆತನ ವಿದ್ಯಾಭ್ಯಾಸಕ್ಕಾಗಿ ಎಲ್ಲ ನೆರವನ್ನೂ ನೀಡಲು ಆ ಸಿರಿವಂತರು ಒಪ್ಪಿದರು. ಇದೆಲ್ಲವೂ ದೈವಲೀಲೆ! ಮುಂಬರುವ ಹೆಮ್ಮರದ ಜೋಪಾನ, ಬೆಳೆಯುವ ಕನ್ನಡಿಗನ ಸೋಪಾನ.

ಇತ್ತ ಆತನ ತಾಯಿ ತಿಪ್ಪಮ್ಮ, ಮೆಚ್ಚಿನ ಮಗನ ಅಗಲುವಿಕೆಯಿಂದ, ಚಿಂತೆಯಿಂದ ಕೊರಗುತ್ತಿದ್ದಳು. ಅಷ್ಟರಲ್ಲಿ ಅದೇ ಮಗನ ಸುದ್ದಿ! ತಾನು ಪುಣೆಯನ್ನು ತಲುಪಿದ ಸುದ್ದಿ, ಶ್ರೀಮಂತ ಗೋವಿಂದರಾವ ಅವರು ನೀಡಿದ ಪ್ರೋತ್ಸಾಹ, ತಾಯಿಯೂ ಪುಣೆಗೆ ಬರಬೇಕೆಂಬ ಕರೆ, ಇದೆಲ್ಲವೂ ಚಮತ್ಕಾರಿಕ ಸಮಾಚಾರ, ತಾಯಿಗೆ ಹಿಗ್ಗೇ ಹಿಗ್ಗು! ಅಂದು ಮಧ್ಯರಾತ್ರಿ ಮನೆ ಬಿಟ್ಟು ಹೋದ ಮಗ ಬದುಕಿದ್ದಾನೆ. ಪುಣೆಯಲ್ಲಿ ಇಂಗ್ಲೀಷ ಶಾಲೆಯಲ್ಲಿ ಹೆಸರು ಹಚ್ಚಿದ್ದಾನೆ, ಜಾಣನಾಗುತ್ತಾನೆ. ಇದೆಲ್ಲ ತಿಪ್ಪಮ್ಮನ ಮುಂದಿನ ಕನಸಿನ ನೋಟ! ತಾನೂ ಪುಣೆಗೆ ಹೊರಡಲು ನಿಶ್ಚಯಿಸುತ್ತಾಳೆ. ಆಕೆಯ ಧೈರ್ಯವೂ ಮೆಚ್ಚುವಂತಹದೇ! ಆ ಕಾಲದಲ್ಲಿಯ ಕಾಲ್ನಡಿಗೆಯ ಪ್ರವಾಸ, ದಾರಿಯ ದಣಿವು, ೩೦೦ ಮೈಲು ದೂರದ ಪ್ರಯಾಣ, ಯಾವದಕ್ಕೂ ತಿಪ್ಪಮ್ಮ ಹಿಂಜರಿಯಲಿಲ್ಲ. ಮುಂದೆ ಸಾಗಿ ಪ್ರಯಾಸದ ಪ್ರವಾಸವನ್ನು ಮುಗಿಸಿ, ಪುಣೆಯಲ್ಲಿ ತನ್ನ ಮಗನನ್ನು ಕಂಡಳು. ಮುದ್ದಿಟ್ಟು ಅಪ್ಪಿಕೊಂಡಳು. ತಾಯಿಯ ಕಕ್ಕುಲಾತಿ, ಮಗನ ಮಮತೆ, ಹಿಗ್ಗಿನ ಹೊಳೆ, ಸಂತಸದ ಸುಗ್ಗಿ! ತಾಯಿ, ಮಗ ಜೊತೆಯಾಗಿ ಪುಣೆಯಲ್ಲಿ ವಾಸಮಾಡತೊಡಗಿದರು. ಚನ್ನಬಸವಪ್ಪನಿಗೆ ವಿದ್ಯಾಭ್ಯಾಸದಲ್ಲಿ ಆಸಕ್ತಿ, ತಿಪ್ಪಮ್ಮನಿಗೆ ಮಗನ ಆರೈಕೆಯಲ್ಲಿ ಆಸಕ್ತಿ. ಹೀಗೆ ಇಬ್ಬರು ತಮ್ಮ ಕಾರ್ಯಗಳನ್ನು ಅಕ್ಕರೆಯಿಂದ ನಿರ್ವಹಿಸುತ್ತಿದ್ದರು.

ಚನ್ನಬಸವಪ್ಪ ಬಡವ, ಆದರೆ ಮೇಧಾವಿ. ಆತನ ಚುರುಕುತನ, ಕರ್ತವ್ಯದಕ್ಷತೆ, ವಿದ್ಯಾಪ್ರೇಮ ಇವು ಎಲ್ಲರನ್ನೂ ಆಕರ್ಷಿಸಿದವು. ತಾನು ತೋರಿಸಿದ ಪ್ರಗತಿಯ ಫಲವಾಗಿ, ಆತನಿಗೆ ಬಡವಿದ್ಯಾರ್ಥಿಗಳ ನಿಧಿಯಿಂದ ಸಹಾಯ ಸಿಕ್ಕಿತು. ಪರ ಊರು ಪರಭಾಷೆಯ ಪುಣೆ ನಗರ, ಬಡತನದ ಬವಣೆ! ತಾಯಿ ತಿಪ್ಪಮ್ಮ ಕಡಿಮೆ ವೆಚ್ಚದಲ್ಲಿ ಸಾದಾಜೀವನ ಸಾಗಿಸಿ, ಮಗನ ಜೋಪಾನ ಮಾಡಿದಳು. ಮಗನಂತೂ ವಿದ್ಯಾಭ್ಯಾಸದಲ್ಲಿ ಸತತ ನಿರತ. ಅದೊಂದು ಆತನಿಗೆ ತಪಸ್ಸು!

ಚೆನ್ನಬಸವಪ್ಪನಿಗೆ ಗಣಿತ ವಿಷಯದಲ್ಲಿ ಹೆಚ್ಚು ಆಸಕ್ತಿ, ವಿಜ್ಞಾನ ವಿಷಯ-ಗಳಲ್ಲೂ ಅಧಿಕ ಗತಿ. ಹೈಸ್ಕೂಲ ವಿದ್ಯಾಭ್ಯಾಸವನ್ನು ಮುಗಿಸಿದ. ಹೆಚ್ಚು ಗುಣಗಳನ್ನೂ ಪಡೆದ. ತನಗೆ ಸಹಾಯ ಮಾಡಿದವರೆಲ್ಲರಿಗೂ ಹೆಸರು ತಂದ. ಅವನಿಗೆ ವಿದ್ಯಾ-ರ್ಜನೆಯ ಚಿಂತೆಯೇ ಚಿಂತೆ! ಪುಣೆಯಲ್ಲಿಯೇ ನಿಂತು, ಎಂಜನೀಯರಿಂಗ ವ್ಯಾಸಂಗವನ್ನು ಮುಂದುವರಿಸಲು ಹವಣಿಸಿದ. ಅವನ ಪರಿಶ್ರಮಕ್ಕೆ ತಕ್ಕ ಫಲವೂ ದೊರೆಯಿತು. ಎಂಜನೀಯರಿಂಗ್ ಕಾಲೇಜದಲ್ಲಿ ೧೦ ರೂಪಾಯಿಯ ಶಿಷ್ಯವೇತನವೂ ಲಭಿಸಿತು. ತಾಯಿಯೂ ತನ್ನಲ್ಲಿದ್ದ ಧನವನ್ನೆಲ್ಲ ಮಗನ ವಿದ್ಯಾಭ್ಯಾಸಕ್ಕೆ ಬಳಸಲು ನಿರ್ಧರಿಸಿದಳು.

ಚೆನ್ನಬಸವಪ್ಪನ ವಿದ್ಯಾಭ್ಯಾಸವು ದಿನೇದಿನೇ ಕಳೆ ಏರುತ್ತ ನಡೆಯಿತು. ಗಣಿತ ವಿಷಯದಲ್ಲಿಯ ಕಠಿಣ ಸಮಸ್ಯೆಗಳನ್ನು ಬಿಡಿಸುವಲ್ಲಿ ಆತನದು ಎತ್ತಿದ ಕೈ. ವಿಜ್ಞಾನ ವಿಷಯಗಳಲ್ಲಿಯೂ ಅಭಿರುಚಿ ಹೆಚ್ಚು. ಪಠ್ಯಪುಸ್ತಕಗಳನ್ನಂತೂ ಚೆನ್ನಾಗಿ ಅರಗಿಸಿಕೊಳ್ಳುವ ಹದ ಆತನಲ್ಲಿತ್ತು. ಪೂರಕಪುಸ್ತಕಗಳನ್ನು ಓದುವ ಹವ್ಯಾಸವೂ ಇತ್ತು. ಅಧಿಕ ಜ್ಞಾನಸಂಗ್ರಹ, ಅಸಾಧಾರಣ ಬುದ್ಧಿಸಾಮರ್ಥ್ಯ, ಕಾರ್ಯಕ್ಷಮತೆ, ಗಂಭೀರ ಸ್ವಭಾವ ಇವು ಆತನಲ್ಲಿ ಅಂದು ಅಭಿವ್ಯಕ್ತವಾದ ಗುಣಗಳು. ಇವೆಲ್ಲ ಉಜ್ವಲ ಜೀವನದ ಭವಿಷ್ಯದ ಲಕ್ಷಣಗಳು. ಆ ಕಾಲದಲ್ಲಿ ಹೆಸರುವಾಸಿಯಾಗಿದ್ದ, ಗಣಿತ ವಿಷಯದಲ್ಲಿ ಪಾರಂಗತರಾಗಿದ್ದ ಪ್ರೊ. ಛತ್ರೆ ಅವರ ಅಚ್ಚುಮೆಚ್ಚಿನ ವಿದ್ಯಾರ್ಥಿಯಾಗಿದ್ದುದು ಗುಣವಿಶೇಷ. ಸ್ನೇಹಿತನಾದ ದಾಜಿ ನೀಲಕಂಠ ಎಂಬವನೂ ಗಣಿತದಲ್ಲಿ ವಿಚಕ್ಷಣನಾಗಿದ್ದನು.

ಅಂದು ಪುಣೆ ವಿದ್ಯಾಪ್ರೇಮಿಗಳ ನಗರ. ವಿದ್ಯಾವಂತರ ಧಾಮ, ಬಡವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುತ್ತಿದ್ದ ತಾಣ. ಆಗಾಗ ಸಾರ್ವಜನಿಕ ಚಟುವಟಿಕೆಗಳೂ, ಸಾಂಸ್ಕೃತಿಕ ಸಮಾರಂಭಗಳೂ ಅಲ್ಲಿ ನಡೆಯುತ್ತಿದ್ದವು. ಅಂಥ ಸಂದರ್ಭಗಳಲ್ಲಿ ವಿದ್ಯಾರ್ಥಿ ಚೆನ್ನಬಸವಪ್ಪ ತನ್ನ ಪ್ರಭಾವ ಬೀರಲು ಯತ್ನಿಸಿದ. ವಿದ್ವತ್ತು, ವಕ್ತೃತ್ವ-ಕಲೆ ಇವೆರಡೂ ಆತನ ಭವಿಷ್ಯಜೀವನವನ್ನು ರೂಪಿಸಲು ಕಳೆಕಟ್ಟಿದವು. ಇದೊಂದು ಆತನಿಗೆ ಸಾರ್ವಜನಿಕ ಜೀವನದ ತರಬೇತು, ಸಮಾಜಸೇವೆಯ ಪುರಸ್ಕಾರದ ಅರುಣೋದಯ. ಪುಣೆಯ ಪರಿಸರವು ಆತನ ವ್ಯಕ್ತಿತ್ವವನ್ನು ರೂಪಿಸಲು ಸಹಾಯಕವಾಗಿತ್ತು. ಹೆಸರಾಂತ ಸಮಾಜ ಸುಧಾರಕ ಜ್ಯೋತಿಬಾ ಫುಲೆ ಅವರ ಸೇವೆಯ ಪರಿಣಾಮವೂ ಆಗಿತ್ತು.

ಚೆನ್ನಬಸವಪ್ಪನವರು ಎಂಜಿನೀಯರಿಂಗ ಕಾಲೇಜಿನಲ್ಲಿಯ ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿದರು. ಕೊನೆಯ ಪರೀಕ್ಷೆಯಲ್ಲಿ ಉತ್ತಮ ಗುಣಗಳನ್ನು ಪಡೆದು, ಮೇಲಿನ ದರ್ಜೆಯಲ್ಲಿ ತೇರ್ಗಡೆ ಹೊಂದಿದರು. ತಾವು ಕಲಿತ ಕಾಲೇಜಿನಲ್ಲಿಯೇ ಅವರು ಅಧ್ಯಾಪಕರಾಗಿ ಕಾರ್ಯ ಮಾಡುವ ಅವಕಾಶ ದೊರೆಯಿತು. ಅವರೆ ಅಲ್ಪ ಅವಧಿ.

ಯದೂ, ತಾತ್ಪೂರ್ತಿಕ ವ್ಯವಸ್ಥೆಯದೂ ಆದಾಗಿತ್ತು. ಇನ್ನು ಅವರು ತಾಯಿಯೊಡನೆ ಧಾರವಾಡಕ್ಕೆ ಮರಳಿ ಬರುವ ಯೋಚನೆ ಮಾಡಿದರು.

ಚೆನ್ನಬಸವಪ್ಪನವರ ದೈವದಲ್ಲಿ ಇನ್ನೊಂದು ದೆಶೆ ಮೂಡಿ ಬಂದಿತ್ತು. ಅದೇ ಆಗ ಇಂಗ್ಲೆಂಡಿನಲ್ಲಿ 'ಕೂಪರ್ಸ ಹಿಲ್' ಎಂಬ ಎಂಜನೀಯರಿಂಗ ಕಾಲೇಜ ಸ್ಥಾಪನೆಯಾಗಿತ್ತು. ಭಾರತ ದೇಶದಿಂದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಅಲ್ಲಿಗೆ ಕರೆಯಿಸಿಕೊಂಡು ಅವರಿಗೆ ಚೆನ್ನಾಗಿ ತರಬೇತು ನೀಡಿ, ಅವರಿಗೆ ಉತ್ತಮ ದರ್ಜೆಯ ಉದ್ಯೋಗಾವಕಾಶಗಳನ್ನು ಕಲ್ಪಿಸುವ ಯೋಜನೆಯೊಂದು ಅದೇ ಆಗ ರೂಪುಗೊಂಡಿತ್ತು. ಆಗ ಭಾರತ ದೇಶದ ಸುಪ್ರಸಿದ್ಧ ಮುಂದಾಳು ಶ್ರೀ ದಾದಾಭಾಯಿ ನವರೋಜಿ ಅವರು ಈ ಕಾರ್ಯದಲ್ಲಿ ಆಸ್ಥೆವಹಿಸಿದ್ದರು. ಐದು ಜನ ಪ್ರತಿಭಾವಂತ ಯುವಕರನ್ನು ಆಯ್ಕೆ ಮಾಡಿದ್ದರು. ಆ ಐವರಲ್ಲಿ ಚೆನ್ನಬಸಪ್ಪನವರೂ ಒಬ್ಬರಾಗಿದ್ದರು. ಇದು ಹೆಮ್ಮೆಯ ವಿಷಯ; ಅಭಿಮಾನದ, ಆನಂದದ ಸಂಗತಿ. ಆದರೆ ಆ ಯೋಜನೆಯು ಕಾರ್ಯಗತವಾಗಲಿಲ್ಲ. ಒಂದುವೇಳೆ ಅದು ಫಲಿಸಿದ್ದರೆ, ಚೆನ್ನಬಸವಪ್ಪನವರು ಇಂಗ್ಲೆಂಡಿಗೆ ಹೋಗಬಹುದಾಗಿತ್ತು. ಉತ್ತಮದರ್ಜೆಯ ಎಂಜನೀಯರ್ ಆಗಬಹುದಾಗಿತ್ತು. ಉದ್ಯಮ ರಂಗದಲ್ಲಿ ಅವರು ಹೊಸ ದಾಖಲೆ ಮೂಡಿಸಬಹುದಾಗಿತ್ತು. ಡಾ. ಎಂ. ವಿಶ್ವೇಶ್ವರಯ್ಯನವರಂತೆ ಹೆಸರಾಂತ ಕಾರ್ಯಗಳನ್ನು ಫಲಪ್ರದವಾಗುವಂತೆ ಮಾಡಿ, ಅಖಂಡ ಭಾರತಕ್ಕೇನೇ ಕೀರ್ತಿ ತರಬಲ್ಲ ಪ್ರತಿಭಾವಂತ ವ್ಯಕ್ತಿ ಆಗಬಹುದಿತ್ತು. ಸಿರಿವಂತಿಕೆ ಅವರ ಬಾಗಿಲಿಗೆ ತಾನಾಗಿಯೇ ಪ್ರವೇಶ ಮಾಡುತ್ತಿತ್ತು. ಅದೆಲ್ಲ ಊಹೆಗೆ ಬಿಟ್ಟುಕೊಟ್ಟ ವಿಷಯ, ನಿಖರಕ್ಕೆ ನಿಲುಕುವಂತಹದಲ್ಲ. ಇದೆಲ್ಲ ಒಂದು ರೀತಿಯ ವಿಚಾರಸರಣಿ. ಈಶ್ವರನ ಸಂಕಲ್ಪವೇ ಬೇರೆಯದಾಗಿತ್ತು. ಧಾರವಾಡ ಪ್ರದೇಶದಲ್ಲಿ ಕನ್ನಡಕ್ಕೆ ಕತ್ತಲೆ ಆವರಿಸಿತ್ತು. ಅಲ್ಲಿ ಕನ್ನಡದ ದೀಪವನ್ನು ಹಚ್ಚುವ ಮಹಾಕಾರ್ಯ ಅವರಿಗೆ ಕಾದಿತ್ತು. ಇದು ಪರಮಾತ್ಮನ ಸಂದೇಶ. ಅದನ್ನು ಈಡೇರಿಸುವುದು ಅವರ ಜನ್ಮದ ಸಾಧನೆ, ಸಾರ್ಥಕತೆ, ಸಫಲತೆ.

೧೮೫೮ರಲ್ಲಿ ಪುಣೆ ಬಿಟ್ಟು, ತಮ್ಮ ಹುಟ್ಟೂರಾದ ಧಾರವಾಡಕ್ಕೆ ತಾಯಿಯೊಡನೆ ಚೆನ್ನಬಸಪ್ಪನವರು ಮರಳಿಬಂದರು. ತಕ್ಷಣ ಅವರು ಪೋಸ್ಟ ಖಾತೆಯಲ್ಲಿ ನೌಕರಿ ಸೇರಿದರು. ಆ ಕಾಲದಲ್ಲಿ ಎಂಜನೀಯರಿಂಗ್ ಕ್ಷೇತ್ರದಲ್ಲಿ ಅಷ್ಟೊಂದು ಪ್ರೋತ್ಸಾಹ ದೊರೆತಿರಲಿಕ್ಕಿಲ್ಲ. ಇದಲ್ಲದೆ, ಪುಣೆಯಲ್ಲಿ ಅಲ್ಪಕಾಲ ಅಧ್ಯಾಪಕರಾಗಿ ಕೆಲಸ ಮಾಡಿದ್ದರು. ಆದಕಾರಣ ವಿದ್ಯಾಇಲಾಖೆಯಲ್ಲಿ ಸೇವೆ ಮಾಡುವ ಒಲವು ಹೆಚ್ಚಿತು.

ಶಿಕ್ಷಕರ ತರಬೇತಿ ಶಾಲೆಯ ಆರಂಭ:

೧೯ನೇ ಶತಮಾನದ ಆರಂಭದಲ್ಲಿ (Feb. ೧೮೫೬) ನಮ್ಮ ದೇಶದಲ್ಲಿ ಶಿಕ್ಷಣವು Board of Education ಎಂಬ ಸಂಸ್ಥೆಯ ಆಧೀನದಲ್ಲಿತ್ತು. ಕ್ರಿ. ಶ. ೧೮೪೨ ರವರೆಗೆ

ಪ್ರಾಥಮಿಕ ಶಿಕ್ಷಕರ ತರಬೇತಿಯು ಬಗೆಗೆ ಸರಕಾರ ಗಮನ ಕೊಟ್ಟಿರಲಿಲ್ಲ. ಪ್ರಾಥಮಿಕ ಶಾಲೆಗಳು ಬಹಳ ಕಡಿಮೆ ಇದ್ದವು. ೧೮೫೫ಕ್ಕೆ ೨೦೮ ಕನ್ನಡ ಮತ್ತು ೫ ಇಂಗ್ಲೀಷ್ ಶಾಲೆಗಳು ಮಾತ್ರ ಇದ್ದವೆಂದು ತಿಳಿಯುತ್ತದೆ, ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ೧೩,೭೮೪ ಇತ್ತು. ಹೆಣ್ಣುಮಕ್ಕಳಿಗಾಗಿ ಒಂದು ಶಾಲೆ, ಹಿಂದುಳಿದವರಿಗೆ ೨ ಶಾಲೆಗಳಿದ್ದವು. ಇಂಥ ಶಾಲೆಗಳಲ್ಲಿ ಕೆಲಸ ಮಾಡುವ ಶಿಕ್ಷಕರು ಪರಂಪರಾಗತವಾಗಿ ಬೋಧ ಮಾಡುತ್ತ ಬಂದ ಪುರೋಹಿತ ವರ್ಗದವರೇ ಆಗಿದ್ದರು. ಶಿಕ್ಷಕರಿಗೆ ಅಯ್ಯನವರು ಪಂತೋಜಿ ಎಂಬ ಹೆಸರುಗಳು ಇದ್ದವು. ಅವರು ತಮ್ಮ ಹಿರಿಯರಿಂದ ಮನೆಯಲ್ಲಿಯೇ ವಿದ್ಯಾಭ್ಯಾಸ ಮಾಡಿಕೊಳ್ಳುತ್ತಿದ್ದರು. ೧-೫-೧೮೫೫ಕ್ಕೆ Directorate of Public Instruction ಎಂಬ ಕಛೇರಿ ಆರಂಭವಾಯಿತು. ಆಗ ಶಿಕ್ಷಣದ ದಕ್ಷಿಣ ವಿಭಾಗದಲ್ಲಿ (ನಮ್ಮ ವಿಭಾಗದಲ್ಲಿ) ಕ್ಯಾಪ್ಟನ್ ಜೆ. ಎಫ್. ಲಿಸ್ಟರ್ ಎಂಬವರು ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಆಗಿದ್ದರು. ಅವರು ಮುಂಬಯಿ ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ೧೮೫೫-೫೬ ವರುಷದ ವರದಿಯಲ್ಲಿ (ಪುಟ ೨೪೦) ಹೀಗೆ ಹೇಳಿದ್ದುಂಟು :

"Until we have a better set of teachers, there will be very little real use in rapidly expanding our Vernacular Schools. What we want is most Normal Schools and candidates for Teachers classes".

ವೇಗದಿಂದ ದೇಶಿಯ ಶಾಲೆಗಳನ್ನು (Native Schools) ತೆರೆಯುವದಕ್ಕಿಂತ ಮೊದಲು ಶಿಕ್ಷಕರ ತರಬೇತಿ ಶಾಲೆಗಳನ್ನು ತೆರೆಯುವ ಅಗತ್ಯತೆಯನ್ನು ಕಂಡು ಹಿಡಿಯಲಾಯಿತು. ಏಕೆಂದರೆ ಆಗ ಶಿಕ್ಷಕರಿಗೆ ನಿರ್ದಿಷ್ಟ ಅರ್ಹತೆಗಳು ಇರಲಿಲ್ಲ. ಆಗಿನ ಮುಂಬಯಿ ರಾಜ್ಯದಲ್ಲಿ ಮೂರು ಪ್ರಾದೇಶಿಕ ವಿಭಾಗಗಳಿದ್ದವು. ಆದಕಾರಣ ಭಾಷಾವಾರ-ಮರಾಠಿ, ಗುಜರಾತಿ, ಕನ್ನಡ-ವಿಭಾಗಗಳಲ್ಲಿ Normal Schools ಪ್ರಾಥಮಿಕ ಶಿಕ್ಷಕರ ತರಬೇತಿಗಾಗಿ ೧೮೫೬ ಫೆಬ್ರುವರಿ ತಿಂಗಳಲ್ಲಿ ತೆರೆಯಲಾಯಿತು. ಧಾರವಾಡದಲ್ಲಿ ತೆರೆದ ಇಂಥ ಸಂಸ್ಥೆಯಲ್ಲಿ ೧೦ ವಿದ್ಯಾರ್ಥಿಗಳು ಇರಬೇಕು. ಅವರಿಗೆ ಪ್ರತಿತಿಂಗಳು ೩ ರೂಪಾಯಿ ಶಿಷ್ಯವೇತನ ದೊರೆಯಬೇಕು. ಎಂದು ಸರಕಾರ ನಿರ್ಣಯಿಸಿತು. D. P. I. S. Report P. ೨೪೨ನಲ್ಲಿ ಹೀಗೆ ಬರೆಯಲಾಗಿದೆ : (೧೮೫೫-೫೬)

"The third School is at Dharwar and is immediately under the direction of the E. I. or his Deputy. It was about a month before the close of the official year (i. e. 1855-56) under report. The number of Students in it is limited to ten. These are all stipendary, receiving each three Rupees per mensem."

೧೮೫೭ ನೇ ಫೆಬ್ರುವರಿ ತಿಂಗಳಲ್ಲಿ ಧಾರವಾಡದಲ್ಲಿ ಪ್ರಾಥಮಿಕ ಶಿಕ್ಷಕರ ತರಬೇತಿಗಾಗಿ– **ನಾರ್ಮಲ್ ಸ್ಕೂಲ್** ಆರಂಭವಾಯಿತು. ಅದರ ಮುಖ್ಯಸ್ಥರಾಗಿ ಧಾರವಾಡ ಚನ್ನಬಸವಪ್ಪನವರು ನೇಮಕ ಹೊಂದಿದರು.ಆಗ ದಕ್ಷಿಣ ವಿಭಾಗದ ವಿದ್ಯಾ ಇಲಾಖೆಯ ಇನಸ್ಪೆಕ್ಟರರ ಕಚೇರಿಯು ಬೆಳಗಾಂವಿಯಲ್ಲಿ ಇತ್ತು. ಆದಕಾರಣ ಈ ನಾರ್ಮಲ್ ಕ್ಲಾಸ್ ಬೆಳಗಾಂವಿಗೆ ೧೮೬೧ ರಲ್ಲಿ ಸ್ಥಳಾಂತರಿಸಲ್ಪಟ್ಟಿತು. ಬೆಳಗಾವಿಯು ಮಹಾರಾಷ್ಟ್ರಕ್ಕೆ ಸಮೀಪವಾಗಿದ್ದುದರಿಂದ ಕನ್ನಡ ಶಾಲೆಗಳಲ್ಲಿ ದುಡಿಯುವ ಶಿಕ್ಷಕರನ್ನು ತರಬೇತಿಗಾಗಿ ಪಡೆಯುವದು ಒಂದು ಸಮಸ್ಯೆಯಾಗಿ ಪರಿಣಮಿಸಿತು. ೧೮೬೪ರಲ್ಲಿ ಈ ಟ್ರೇನಿಂಗ್ ಸ್ಕೂಲಿನ ಪ್ರಿನ್ಸಿಪಾಲ್ ಎಂದು ಚೆನ್ನಬವಸಪ್ಪನವರು ನೇಮಿಸಲ್ಪಟ್ಟರು. ಇದನ್ನು ಟ್ರೇನಿಂಗ್ ಕಾಲೇಜ ಸ್ಥಾನಕ್ಕೆ ಏರಿಸಬೇಕೆಂದು ಸರಕಾರಕ್ಕೆ ಒತ್ತಾಯ ಮಾಡಿದವರೂ ಅವರೇ.

೧೮೬೫ರಲ್ಲಿ ವಿಲಿಯಮ್ ಅಲೆನ್ ರಸೆಲ್ ಎಂಬವರು ದಕ್ಷಿಣ ವಿಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರ ಹುದ್ದೆಗೆ ವರ್ಗವಾಗಿ ಬಂದರು. ಅದೊಂದು ದೈವೀ ಘಟನೆಯೇ! ಏಕೆಂದರೆ, ರಸೆಲ್ ಸಾಹೇಬರ ಕನ್ನಡದ ಸೇವೆ ಸಂಸ್ಮರಣೀಯವಾಗಿದೆ. ಈ ಬಾಗದಲ್ಲಿಯೇ ಇಪ್ಪತ್ತು (೨೦) ವರ್ಷಗಳ ವರೆಗೆ ಸೇವೆ ಮಾಡಿ ಕನ್ನಡವನ್ನು ಪೋಷಿಸಿದ ಪುಣ್ಯಪುರುಷ ಅವರು. ಉತ್ತರ ಕರ್ನಾಟಕದಲ್ಲಿ ಪೇಶ್ವೆಯವರ ಆಳ್ವಿಕೆಯು ನಿಂತುಹೋಗಿದ್ದರೂ, ಮರಾಠಿ ಭಾಷೆಯ ಪ್ರಭಾವ ಇನ್ನೂ ಸಾಕಷ್ಟು ಇತ್ತು. ಮಳೆ ನಿಂತರೂ ಮಳೆ ಹನಿ ನಿಲ್ಲಲಿಲ್ಲ ಎಂಬಂತೆ. ಈ ಭಾಗಕ್ಕೆ ಆಗ ದಕ್ಷಿಣ ಮಹಾರಾಷ್ಟ್ರ ಎಂದೂಕರೆಯುತ್ತಿದ್ದರು. ಬ್ರಿಟಿಷ್ ಅಧಿಕಾರಿಗಳಿಗೆ ಮರಾಠಿಯೇ ಈ ಭಾಗದ ಜನತೆಯ ಪ್ರದೇಶ ಭಾಷೆಎಂಬ ಕಲ್ಪನೆಯು ಇತ್ತು.ನಿಜಸ್ಥಿತಿ ಹಾಗಿಲ್ಲವೆಂದೂ,ಕನ್ನಡವೇ ಇಲ್ಲಿಯ ಜನತೆಯ ಪ್ರಾದೇಶಿಕ ಭಾಷೆಯೆಂದೂ ಚೆನ್ನಬಸಪ್ಪನವರೇ ರಸೆಲ್ ಸಾಹೇಬರಿಗೆ ಮನವರಿಕೆ ಮಾಡಿಕೊಟ್ಟರು. ಇದುವೇ ಚೆನ್ನಬಸವಪ್ಪನವರ ಪ್ರಪ್ರಥಮ ಕನ್ನಡ ನುಡಿಯ ಸೇವೆ. ಆಗ ಸರಕಾರಿ ಶಾಲೆಗಳಲ್ಲಿ ಮರಾಠಿಯನ್ನೇ ಕಲಿಸುತ್ತಿದ್ದರು. ಸುಧಾರಿಸಿದ ಜನರೆಲ್ಲ ತಮ್ಮ ಮಕ್ಕಳು ಮರಾಠಿಯನ್ನೇ ಕಲಿಯಬೇಕೆಂದು ಇಚ್ಛಿಸುತ್ತಿದ್ದರು. ಇದು ಅವರ ತಪ್ಪಲ್ಲ. ಪರಿಸ್ಥಿತಿಯ ಪರಿಣಾಮ ಕನ್ನಡಕ್ಕೆ ಸಾಹಿತ್ಯ ಉಂಟು. ಸಂಸ್ಕೃತಿ ಉಂಟು ಎಂಬುದರ ತಿಳುವಳಿಕೆಯು ಯಾರಿಗೂ ಆ ಕಾಲದಲ್ಲಿ ಇರಲಿಲ್ಲವೆಂದು ತೋರುತ್ತದೆ. ಈ ವಿಷಯವನ್ನೂ ಚೆನ್ನಬಸವಪ್ಪನವರೇ ರಸೆಲ್ ಸಾಹೇಬರಿಗೆ ತಿಳಿಸಿ ಕೊಟ್ಟರು.

ಡಾ. ಆರ್. ಸಿ. ಹಿರೇಮಠ ಅವರು ತಮ್ಮ ಲೇಖನದಲ್ಲಿ ಹೀಗೆ ಹೇಳಿದ್ದುಂಟು : ‘‘ರಸೆಲ್ ಅವರು ಮಾಡಿದ ಮೊಟ್ಟಮೊದಲನೆಯ ಮಹಾಕಾರ್ಯವೆಂದರೆ ಈ ಭಾಗದ ಜನತೆಯ ಭಾಷೆ ಕನ್ನಡವೆಂಬುದನ್ನು ಕಂಡುಹಿಡಿದುದು; ಕನ್ನಡ ಸಾಹಿತ್ಯ, ಸಂಸ್ಕೃತಿ

ಗಳ ಹಿರಿಮೆಯನ್ನು ಅರಿತುದು ಡೆಪ್ಯೂಟಿ ಚೆನ್ನಬಸವಪ್ಪನವರಂತಹ, ಪ್ರಭಾವಶಾಲಿ ಕನ್ನಡಾಭಿಮಾನಿಗಳನ್ನು ಕಂಡುಹಿಡಿದುದು. ಈ ತ್ರಿಕೂಟ ಯೋಗದಿಂದಲೇ ಕನ್ನಡ ಉಳಿಯಿತು! ಬಾಳಿತು!! ಬೆಳೆಯಿತು!!! ರಸೆಲ್ ಸಾಹೇಬರು ಕನ್ನಡಕ್ಕೆ ನೀಡಿದ ಸೇವೆಯನ್ನು ಬಣ್ಣಿಸುವ ಶಕ್ತಿ ಶಬ್ದಕ್ಕಿಲ್ಲ. ಕಂಡುಗವನ್ನು ಬಳ್ಳದಲ್ಲಿ ಅಳೆದಂತೆ."

ಕನ್ನಡ ಶಿಕ್ಷಕರ ತರಬೇತಿಗಾಗಿ ತೆರೆದಿದ್ದ ಬೆಳಗಾವಿಯಲ್ಲಿಯ ನಾರ್ಮಲ್ ಸ್ಕೂಲಿನ ದರ್ಜೆಯನ್ನು ಎತ್ತರಿಸಲು ರಸೆಲ್ ಸಾಹೇಬರು, ಬೆಂಬಲ ನೀಡಿದರು. ತಮ್ಮ ೧೮೬೫-೬೬ ನೇ ಸಾಲಿನ ವರದಿಯಲ್ಲಿ ಅವರು ಹೀಗೆ ಬರೆದಿದ್ದಾರೆ:

"ಕನ್ನಡವನ್ನು ಕಲಿಸಲು ಯೋಗ್ಯರಾದ ಶಿಕ್ಷಕರನ್ನು ನಾನು ಹುಡುಕುತ್ತಿದ್ದೇನೆ. ಈ ತಿಂಗಳು ಬೆಳಗಾವಿಯಲ್ಲಿಯ ಟ್ರೇನಿಂಗ್ ಸ್ಕೂಲಿನಲ್ಲಿ ಕನ್ನಡ ಮಾಸ್ತರರ ಸ್ಥಾನಕ್ಕೆ ಅತ್ಯಂತ ಯೋಗ್ಯರಾದ ಒಬ್ಬ ಶಿಕ್ಷಕರನ್ನು ನಿಯಮಿಸಿದ್ದೇನೆ. ಬೆಳಗಾವಿಯ ಟ್ರೇನಿಂಗ್ ಸ್ಕೂಲನ್ನು ಪುಣೆ, ಅಹಮ್ಮದಾಬಾದಗಳಲ್ಲಿರುವ ಟ್ರೇನಿಂಗ್ ಕಾಲೇಜುಗಳ ಮಟ್ಟಕ್ಕೆ ಏರಿಸಲು ಬೇಕಾದ ಹಣದ ಯೋಜನೆಯನ್ನು ಮಾಡಿದ್ದೇನೆ."

("I have this year budgeted for means to put the Belgaum Training School on the same footing as a Vernacular College as those of Poona and Ahmedabad".)

೧೮೫೬ ರಿಂದ ೧೮೬೩ ರ ವರೆಗೂ ಈ ನಾರ್ಮಲ್ ಸ್ಕೂಲಿನಲ್ಲಿ ಮರಾಠಿ ಉಮೇದವಾರರೇ ಹೆಚ್ಚಾಗಿದ್ದರು. ಏಕೆಂದರೆ, ಕನ್ನಡ ಬಲ್ಲ ಯುವಕರು ಶಿಕ್ಷಕರಾಗಲು ಮುಂದೆ ಬರುತ್ತಿರಲಿಲ್ಲ. ಪ್ರಿನ್ಸಿಪಾಲ ಚೆನ್ನಬಸವಪ್ಪನವರೇ ಹೀಗೆ ಹೇಳಿದ್ದುಂಟು:

"ನಾನು ೧೮೬೪ ರ ಜಾನೆವರಿ ತಿಂಗಳ ೨೧ ರಂದು ಇಲ್ಲಿ ಹಾಜರ ಆದಾಗ ೧೨ ಹಾಗೂ ೧೪ ಜನ ವಿದ್ಯಾರ್ಥಿಗಳ ಎರಡು ವರ್ಗಗಳಿದ್ದವು. ಇವರಲ್ಲಿ ಅರ್ಧದಷ್ಟು ವಿದ್ಯಾರ್ಥಿಗಳು ಕೊಂಕಣಿಗಳಾಗಿದ್ದು ಅವರಲ್ಲಿ ಕೆಲವರು ೧ ವರ್ಷದವರೆಗೆ ಶಾಲೆಯಲ್ಲಿದ್ದರೂ ಮೊದಲಿನ ೯ ಅಂಕಿಗಳನ್ನು ಎಣಿಸಲು ಸಹ ಬಾರದಿರುವದು ನನಗೆ ಆಶ್ಚರ್ಯಕರವಾಗಿ ತೋರಿತು. ಕನ್ನಡ ಶಿಕ್ಷಕರನ್ನು ತಯಾರಿಸುವ ಈ ಸಂಸ್ಥೆಯಲ್ಲಿ ಇಂಥವರಿಗೆ ಹೇಗೆ ಪ್ರವೇಶ ದೊರೆಯಿತೆಂದು ತಿಳಿಯದಾಯಿತು. ವಿಚಾರಿಸಲಾಗಿ ಕನ್ನಡ ಮಾತೃಭಾಷೆಯಾದ ಉಮೇದವಾರರು ಸಿಗುವುದು ಕಠಿಣವಾಗಿತ್ತೆಂದು ಕಾಣಿಸಿತು. ಆದರೆ ನಾನು ಇಲ್ಲಿಗೆ ಬಂದ ನಂತರ ಶುದ್ಧ ಕನ್ನಡಿಗರಾದ ೨೫ ಉಮೇದವಾರರು ದೊರೆತರೆಂದು ಹೇಳಲು ಸಂತೋಷವೆನಿಸುತ್ತದೆ."

೧೮೫೬ ರಲ್ಲಿ ಈ ಸಂಸ್ಥೆಯು ಧಾರವಾಡದಲ್ಲಿ ಜನ್ಮವೆತ್ತಿತು. ೧೮೬೧ ರಲ್ಲಿ ಬೆಳಗಾವಿಗೆ ಸ್ಥಳಾಂತರಿಸಲ್ಪಟ್ಟಿತು. ಮುಂದೆ ಅದೇ ಸಂಸ್ಥೆಯು ೧೮೬೪ ರಲ್ಲಿ

ಧಾರವಾಡಕ್ಕೆ ವರ್ಗಾಯಿಸಲ್ಪಟ್ಟಿತು. ಆರಂಭದಿಂದ ಈ ಸಂಸ್ಥೆಯ ಮುಖ್ಯಸ್ಥರಾಗಿ ಇದರ ಉತ್ಕರ್ಷೆಗೆ ಚೆನ್ನಬಸವಪ್ಪನವರು ಹೆಣಗಿದರು. ಅಷ್ಟೇ ಅಲ್ಲ, ಈ ಸಂಸ್ಥೆಯು ಮುಂದೆ ಕನ್ನಡ ಟ್ರೇನಿಂಗ್ ಕಾಲೇಜು ಎಂದು ಪರಿವರ್ತನೆ ಹೊಂದಿ, ಕನ್ನಡ ಶಿಕ್ಷಕರ ತರಬೇತಿಗೆ ಉತ್ತಮ ಸಂಸ್ಕರಣ ನೀಡಿತು. ಕನ್ನಡ ಅಭಿವೃದ್ಧಿಯ, ಕನ್ನಡಿಗರ ಕನ್ನಡ ಸಂಸ್ಕೃತಿಯ ಸ್ಫೂರ್ತಿಯ ಸೆಲೆಯಾಯಿತು. ಈ ಸಂಸ್ಥೆಯ ಪ್ರಗತಿ, ಕನ್ನಡ ಶಿಕ್ಷಕರ ತರಬೇತಿ, ಕನ್ನಡದ ಉದ್ಧಾರ, ಕನ್ನಡ ಸಂಸ್ಕೃತಿಯ ರಕ್ಷಣೆ, ಪೋಷಣೆ, ಶಿಕ್ಷಣದ ಬುನಾದಿಯಾದ ಪ್ರಾಥಮಿಕ ಶಿಕ್ಷಣದ ಭದ್ರರಚನೆ–ಇವೆಲ್ಲವೂ ಪ್ರಪ್ರಥಮ ಪ್ರಿನ್ಸಿಪಾಲರಾಗಿದ್ದ ಚೆನ್ನಬಸವಪ್ಪನವರ ಸೇವಾಫಲಗಳು.

ಮಠಪತ್ರಿಕೆಯ ಆರಂಭ :

ಬೆಳಗಾವಿಯ ನಾರ್ಮಲ್ ಸ್ಕೂಲಿನ ಪ್ರಿನ್ಸಿಪಾಲರಾಗಿದ್ದಾಗ 'ಮಠಪತ್ರಿಕೆ' ಎಂಬ ಮಾಸಿಕ ಪತ್ರಿಕೆಯನ್ನು ಚೆನ್ನಬಸವಪ್ನನವರೇ ೧–೫–೧೮೬೫ ರಂದು ಆರಂಭಿಸಿದರು. ಆ ಕಾಲದಲ್ಲಿ ಮುದ್ರಣಾಲಯಗಳು ಇರಲಿಲ್ಲ. ಲಿಥೋಗ್ರಾಫ್–ಕಲ್ಲಚ್ಚಿನ ಪದ್ಧತಿಯಂತೆ ಕೈಯಿಂದ ಬರೆಯಲ್ಪಟ್ಟು ಛಾಪಿಸಲ್ಪಡುತ್ತಿತ್ತು. ೧೮೮೧ ರಲ್ಲಿ ಈಗಿನ ಮುದ್ರಣ ಸೌಕರ್ಯ ಲಭಿಸಿತು. ಈ ಶೈಕ್ಷಣಿಕ ಮಾಸಪತ್ರಿಕೆ–ಮಠಪತ್ರಿಕೆ, ಶಾಲಾ ಪತ್ರಿಕೆ, ಪ್ರಾಥಮಿಕ ಶಿಕ್ಷಣ–ಈಗ ಜೀವನ ಶಿಕ್ಷಣ ಎಂಬ ಹೆಸರುಗಳನ್ನು ಬದಲಿಸಿದರೂ, ತಾಯಿ ಸಂಸ್ಥೆಯಿಂದ ಇಂದಿಗೂ ನಡೆಯುತ್ತಿದೆ. ಕರ್ನಾಟಕದಲ್ಲಿ ಬಹುಶಃ ಶತಮಾನೋತ್ಸವವನ್ನು ಆಚರಿಸಿದ ಕನ್ನಡ ಪತ್ರಿಕೆಯು ಇದೇ ಮೊದಲಿನದು ಎಂದು ಹೇಳಿದರೆ ಅತ್ಯುಕ್ತಿಯಲ್ಲ. ಶತಮಾನೋತ್ಸವವನ್ನು ಆಚರಿಸಿದ ಕನ್ನಡ ಶಿಕ್ಷಕರ ತರಬೇತಿಯ ಸಂಸ್ಥೆಯು ಚೆನ್ನಬಸವಪ್ಪನವರ ಕೀರ್ತಿ ಕಲಶವಾಗಿ ಧಾರವಾಡದಲ್ಲಿ ಈಗಲೂ ಮೆರೆಯುತ್ತಲಿದೆ. ಅಂದು ೧೮೫೭ ರಲ್ಲಿ ಚಿಕ್ಕ ಪ್ರಮಾಣದಲ್ಲಿ ಆರಂಭವಾದ ಈ ಸಂಸ್ಥೆಯು ಇಂದಿಗೂ ಬೆಳೆಯುತ್ತಲಿದೆ. ಅಂದು ಹಚ್ಚಿದ ಕನ್ನಡದ ನಂದಾದೀಪ ಇಂದಿಗೂ ಪ್ರಜ್ವಲಿಸುತ್ತಲೇ ಇದೆ.

ಮಠಪತ್ರಿಕೆಯು ಕರ್ನಾಟಕದಲ್ಲಿಯ ಪತ್ರಿಕೋದ್ಯಮಕ್ಕೆ ನಾಂದಿ. 'ಮಠ' ಎಂದರೆ ಆ ಕಾಲದಲ್ಲಿ ಶಾಲೆ ಎಂದು ಅರ್ಥ ಶಾಲೆಗಳೆಲ್ಲ ಮಠಗಳಲ್ಲಿಯೇ ಇರುತ್ತಿದ್ದವು. ಮಠದ ಅಯ್ಯನವರೇ ಅಂದಿನ ಶಿಕ್ಷಕರು. ಈಗಿನಂತೆ ಸಾಂಪ್ರದಾಯಿಕ ಶಾಲೆಗಳು ಇರಲಿಲ್ಲ. ಅಂದಿನ ಶಾಲೆಗಳೆಲ್ಲ ಗುರುಕುಲಗಳಿದ್ದಂತೆ. ಅಲ್ಲಿ ಜಾತಿ, ಮತ, ಪಂಥ ಇವುಗಳ ಭೇದಭಾವ ಇರಲಿಲ್ಲ ವಿದ್ಯಾರ್ಜನೆಗೆ ಬಂದ ಬಾಲಕರೆಲ್ಲ ಅಯ್ಯನವರ ಶಿಷ್ಯರೇ! ಅಲ್ಲಿ ಕನ್ನಡ, ಮರಾಠಿ,ಗಣಿತ ಈ ವಿಷಯಗಳನ್ನು ಕಲಿಸಲಾಗುತ್ತಿತ್ತು. ಚನ್ನಬಸವಪ್ಪನವರ ವಿದ್ಯಾಭ್ಯಾಸವೂ ಧಾರವಾಡದಲ್ಲಿಯೇ ಶ್ರೀ ಸಾಲಿಮಠ ಶಿವರುದ್ರಯ್ಯನವರ ಮಠದಲ್ಲಿಯೇ ನಡೆಯಿತೆಂಬುದನ್ನು ಸ್ಮರಿಸಿಕೊಳ್ಳಬಹುದು. ಆದುದರಿಂದ

ಮಠಪತ್ರಿಕೆ ಅಂದರೆ ಶಾಲಾ ಪತ್ರಿಕೆ ಎಂಬುದು ಸುಸ್ಪಷ್ಟ ಆ ಕಾಲದಲ್ಲಿ ಕನ್ನಡದ ಅಭ್ಯಾಸವನ್ನು ಧಾರವಾಡ ಭಾಗದಲ್ಲಿ ನಿರಂತರವಾಗಿ ನಡೆಸಿಕೊಂಡು ಬಂದವರು ವೀರಶೈವರೇ! ಇದೊಂದು ಗಮನಾರ್ಹ ವಿಷಯ. ಎಷ್ಟೋ ದಿವಸಗಳ ವರೆಗೆ ಕನ್ನಡದ ಅಭ್ಯಾಸವು ವೀರಶೈವ ಮಠಗಳಿಗೆ ಮಾತ್ರ ಮೀಸಲಾಗಿತ್ತೆಂದು ಶ್ರೀ ವೆಂಕಟ ರಂಗೋ ಕಟ್ಟಿ ಅವರು ತಮ್ಮ ಒಂದು ವರದಿಯಲ್ಲಿ ಹೀಗೆ ಬರೆಯುತ್ತಾರೆ ;

The study of Kannada was confined to a few Lingayat priests.

ಇನ್ನೊಂದು ಸಂದರ್ಭದಲ್ಲಿ ಶ್ರೀ ವೆಂಕಟ ರಂಗೋ ಕಟ್ಟಿ ಅವರು ಹೀಗೂ ಬರೆದಿದ್ದಾರೆ :

"ರಸೆಲ್‌ರ ಆಡಳಿತದಿಂದ ವೀರಶೈವರಿಗೆ ವಿಶೇಷ ಲಾಭವಾಗಿದೆ. ಅವರು ರಸೆಲ್‌ರ ಚಿರಸ್ಮರಣೆಗಾಗಿ ಒಂದು ಸ್ಮಾರಕ ನಿರ್ಮಿಸುವದು ಅವಶ್ಯ".

ರಸೆಲ್‌ರ ಕನ್ನಡದ ಸೇವೆ ಅಮೋಘವಾದುದು. ಆಗ ಕನ್ನಡವನ್ನು ಉಳಿಸಿ ಕೊಂಡು ಬಂದವರು ವೀರಶೈವರೇ ಎಂಬುದನ್ನು ಗಮನಿಸಬಹುದು. ಶ್ರೀ ವೆಂಕಟ ರಂಗೋ ಕಟ್ಟಿ ಹೀಗೆ ಹೇಳಿದ್ದೂ ಉಂಟು.

"The best illustration however of Mr. Russel's sound judgement and keen perception is to be seen in his encouragement who were totally ignored by his predecessors though they (the Lingayats) formed the greater part of the population of this division".

ರಸೆಲ್ ಸಾಹೇಬರ ಯೋಗ್ಯ ನಿರ್ಣಯ, ಸೂಕ್ಷ್ಮ ನಿರೀಕ್ಷಣೆ ಇವು ಪ್ರಶಂಸನೀಯ ವಾಗಿದ್ದುವೆಂಬುದು ನಿಜ. ಈ ಪ್ರದೇಶದಲ್ಲಿ ನೇರವಾಗಿ ವಾಸಿಸಿ ಉಳುವವರೂ, ವರ್ತಕರೂ ಆಗಿದ್ದ ವೀರಶೈವರು ಆ ಕಾಲದಲ್ಲಿ ಕನ್ನಡ ನುಡಿಯನ್ನು ಉಳಿಸಿಕೊಂಡು ಬಂದರು. ಆದರೆ ಕನ್ನಡವು ವೀರಶೈವರ ಮನೆಮಾತು ಅಷ್ಟೇ ಅಲ್ಲ; ಅದು ಕನ್ನಡ ನೆಲದಲ್ಲಿ ಬಾಳುವ, ಬೆಳೆಯುವ ಸಮಸ್ತ ಕನ್ನಡಿಗರ ಸೊತ್ತು. ಆದುದರಿಂದ ಡಾ. ಆರ್. ಸಿ. ಹಿರೇಮಠ ಅವರು ಹೀಗೆ ಉತ್ತರ ನೀಡಿದ್ದಾರೆ :

"ವೀರಶೈವರಷ್ಟೇ ಏಕೆ ? ಸಮಸ್ತ ಕನ್ನಡಿಗರೂ ಆಗ ಕನ್ನಡವನ್ನುಳಿಸಿದ ಪುಣ್ಯ ಪುರುಷರಾದ ರಸೆಲ್ ಹಾಗೂ ಡೆಪ್ಯೂಟಿ ಚೆನ್ನಬಸವಪ್ಪನವರಿಗೆ ವಿಶೇಷ ಋಣಿ ಯಾಗಿದ್ದಾರೆ. ಇಂದು ಬೆಳಗುತ್ತಿರುವದು ಅಂದು ಹಚ್ಚಿದ ಕನ್ನಡದ ನಂದಾದೀಪ ! ಆದುದರಿಂದ ಆ ಪುಣ್ಯ ಪುರುಷರನ್ನು ಸ್ಮರಿಸುವದು ನಮ್ಮೆಲ್ಲರ (ಕನ್ನಡಿಗರ) ಪ್ರಥಮ ಕರ್ತವ್ಯವು".

ವಿದ್ಯಾಧಿಕಾರಿ ಮತ್ತು ಕನ್ನಡದ ಸೇವೆ :

ಮುಂಬಯಿ ಪ್ರಾಂತದ ಮಹಾರಾಷ್ಟ್ರ ಮತ್ತು ಗುಜರಾತ ಭಾಗಗಳಲ್ಲಿ ಅಲ್ಲಿಯ ಪ್ರದೇಶ ಭಾಷೆಗಳಾದ ಮರಾಠಿ, ಗುಜರಾತಿ ಭಾಷೆಗಳಿಗೆ ಮಹತ್ವದ ಸ್ಥಾನ ಕೊಡ ಲಾಗಿತ್ತು. ಅಂತಹದೇ ಸ್ಥಾನವು ದಕ್ಷಿಣಭಾಗದಲ್ಲಿ ಕನ್ನಡಕ್ಕೆ ದೊರೆಯಬೇಕೆಂಬುದು ಆಗಿನ ಎಜ್ಯುಕೇಶನಲ್ ಇನಸ್ಪೆಕ್ಟರ ರಸೆಲ್‌ರ ಅಭಿಮತವಾಗಿತ್ತು. ಆದಕಾರಣ ೧೮೬೬ ರಲ್ಲಿ ರಸೆಲ್‌ರು ಕನ್ನಡದ ಪುಣ್ಯಪುರುಷ ಚನ್ನಬಸವಪ್ಪನವರನ್ನು ಬೆಳಗಾವಿಯ ಡೆಪ್ಯೂಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರ್ ಎಂದು ನೇಮಿಸಿದರು. ಆಮೇಲೆ ೧೮೬೯ ರಲ್ಲಿ ಅವರನ್ನು ಧಾರವಾಡ ಜಿಲ್ಲೆಯ 'ಡೆಪ್ಯೂಟಿ' ಎಂದು ವರ್ಗ ಮಾಡಿದರು. ಇದೇ ಹುದ್ದೆ ಯಲ್ಲಿ ೧೮೮೧ ರ ವರೆಗೆ ಅಂದರೆ ಅವರ ಮರಣದ ವರೆಗೆ ಮುಂದುವರೆದರು. ಹೀಗೆ ದೀರ್ಘಕಾಲ ಡೆಪ್ಯೂಟಿ ಹುದ್ದೆಯಲ್ಲಿ ಕನ್ನಡದ ಸೇವೆಯನ್ನು ಬಹುಮುಖವಾಗಿ ಚನ್ನಬಸವಪ್ಪನವರು ಮಾಡಿದರು. ಅದನ್ನೇ ಸ್ಮರಿಸಿಕೊಂಡು 'ಡೆಪ್ಯೂಟಿ' ಎಂಬ ಹೆಸರಿನಿಂದಲೇ ಅವರನ್ನು ಕರೆಯತೊಡಗಿದರು. ಕಾರ್ಯಕ್ಷೇತ್ರದ ಹುದ್ದೆ ಜನರ ಸ್ಮರಣೆಯಲ್ಲಿ ಉಳಿಯಿತು. ಅವರ ಮನೆಯ ಹೆಸರು 'ಧಾರವಾಡ' ಎಂಬುದು ಮರೆ ಯಾಯಿತು. ಆಗಿನ ಕನ್ನಡ ಪಠ್ಯ ಪುಸ್ತಕಗಳು ಕನ್ನಡೇತರ ಅಧಿಕಾರಿಗಳಿಂದ ಬರೆಯಿಸಲ್ಪಡುತ್ತಿದ್ದವು; ಅವು ಪರಭಾಷೆಗಳ ನಿರ್ಜೀವ ರೂಪಾಂತರಗಳಾಗಿದ್ದವು. 'ಕನ್ನಡ ಮಕ್ಕಳಿಗೆ ನಾಟದ, ಬುದ್ಧಿಗೆ ನಿಲುಕದ, ಅಂಥ ಪುಸ್ತಕಗಳನ್ನು ಬದಲಿಸದೆ ಗತ್ಯಂತರವಿಲ್ಲ'ವೆಂದು, ಚನ್ನಬಸವಪ್ಪನವರು ತಿಳಿದರು. ರಸೆಲ್ ಸಾಹೇಬರಿಗೆ ಈ ಸಂಗತಿಯನ್ನು ತಿಳಿಸಿದರು. ಅವರೂ ಕನ್ನಡ ಪಠ್ಯ ಪುಸ್ತಕಗಳೂ ಮರಾಠಿ ಮತ್ತು ಗುಜರಾತಿ ಪಠ್ಯಪುಸ್ತಕಗಳ ಮಟ್ಟಕ್ಕೆ ಬರಬೇಕೆಂಬ ಅಭಿಲಾಷೆಯುಳ್ಳವರಾಗಿದ್ದರು. ಚನ್ನಬಸವಪ್ಪನವರ ಸೂಚನೆಯನ್ನು ಕೂಡಲೆ ಒಪ್ಪಿಕೊಂಡರು. ಚನ್ನಬಸವಪ್ಪನವರ ನೇತೃತ್ವದಲ್ಲಿ, ಅವರ ಸಲಹೆಯ ಮೇರೆಗೆ, ರಸೆಲ್‌ರು ಕನ್ನಡ ಪಂಡಿತರ, ಅಭಿಮಾನಿ ಗಳ ಒಂದು ತಂಡವನ್ನೇ ರಚಿಸಿದರು; ಅಂಥವರನ್ನು ಟ್ರೇನಿಂಗ್ ಸಂಸ್ಥೆಗಳಿಗೆ, ಹಾಯ್ ಸ್ಕೂಲುಗಳಿಗೆ ಶಿಕ್ಷಕರೆಂದು ನೇಮಣೂಕಿ ಮಾಡಿದರು. ಹಳಗನ್ನಡದ ಪ್ರಥಮ ನಿಘಂಟನ್ನು ರಚಿಸಿದ, ಬಾಣ ಕಾದಂಬರಿಯನ್ನು ಅನುವಾದಿಸಿದ ಕನ್ನಡ ವಿದ್ವಾಂಸ ರಾಗಿದ್ದ ಶ್ರೀ ಗಂಗಾಧರ ಮಡಿವಾಳೇಶ್ವರ ತುರಮರಿ ಅವರು, ಹಳಗನ್ನಡದಲ್ಲಿ ಪಂಡಿತ ರಾಗಿದ್ದ ಶ್ರೀ ಶಾಂತವೀರ ರಾಚಿದೇವ ಕಿತ್ತೂರ ಅವರು, ಕಾಳಿದಾಸನ ಶಾಕುಂತಲ ನಾಟಕವನ್ನು ಅನುವಾದಿಸಿದ ಶ್ರೀ ಚುರಮುರಿ ಶೇಷಗಿರಿರಾಯರು, ಕನ್ನಡ ಟ್ರಾನ್ಸ- ಲೇಟರ ಆಗಿದ್ದ ಶ್ರೀ ವೆಂಕಟ ರಂಗೋ ಕಟ್ಟಿ ಅವರು, ಟ್ರೇನಿಂಗ ಸಂಸ್ಥೆಯ ಪ್ರಿನ್ಸಿಪಾಲ ರಾಗಿದ್ದ ಶ್ರೀ ಹುಯಿಲಗೋಳ ಭುಜಂಗರಾಯರು, ಶ್ರೀ ಪಾಂಡುರಂಗ ಚಿಂತಾಮಣಿ ಪೇಟಕರ, ಶ್ರೀ ವೀರಭದ್ರ ಮಡಿವಾಳೇಶ್ವರ ಪಂಡಿತ ಇವರೆಲ್ಲರೂ ಕನ್ನಡ ಪಠ್ಯಪುಸ್ತಕ- ಗಳನ್ನೂ, ಪೂರಕ ಪುಸ್ತಕಗಳನ್ನೂ ರಚಿಸಲು ನೆರವಾದರು. ಇವರೆಲ್ಲ ಚೆನ್ನಬಸವಪ್ಪ

ನವರ ಶಿಷ್ಯೋತ್ತಮರು. ಕನ್ನಡದ ಸೇವೆಗೆ ಬದ್ಧಕಂಕಣರಾದವರು. ಇವರ ಅಂದಿನ ಸೇವೆ ಸ್ಮರಣೀಯವಾದುದು. ಇದಲ್ಲದೆ, ಆ ಸಮಯದಲ್ಲಿ ಧಾರವಾಡದಲ್ಲಿ ಕ್ರಿಶ್ಚಿಯನ್ ಪಾದ್ರಿ (Father) ರೆ. ಕಿಟ್ಟೆಲ್ಲರ ಅವರ ಸಂಪರ್ಕವನ್ನು ಬೆಳಿಸಿ, ಇಂಗ್ಲಿಷ್–ಕನ್ನಡ ನಿಘಂಟನ್ನು ರಚಿಸಲು ಚೆನ್ನಬಸವಪ್ಪನವರು ಅವರನ್ನು ಪ್ರೋತ್ಸಾಹಿಸಿದರು. ಆದುದರಿಂದ **ಕನ್ನಡ ನುಡಿಯ ಪುನರುಜ್ಜೀವನದ ಜನಕ** ಎಂದು ಅಭಿಮಾನದಿಂದ ಶ್ರೀ ಶಿಂತ್ರಿ ಬಸವಪ್ಪನವರು ಶ್ರೀ ಚನ್ನಬಸವಪ್ಪನವರನ್ನು ತಮ್ಮ ಲೇಖನದಲ್ಲಿ ಸಂಬೋಧಿಸಿದ್ದಾರೆ. ಇದು ಅವರ ನೋಟ !

ಡೆಪ್ಯೂಟಿ ಇನಸ್ಪೆಕ್ಟರ ಹುದ್ದೆಯಲ್ಲಿ ಬೆಳಗಾವಿ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಚೆನ್ನಬಸವಪ್ಪನವರು ಮಾಡಿದ ಸೇವೆ ಅಪ್ರತಿಮವಾದುದು. ಆಡಳಿತದಲ್ಲಿ ದಕ್ಷತೆ, ಕಾರ್ಯಕ್ಷಮತೆ, ನ್ಯಾಯ ನಿಷ್ಠುರತೆ, ಸಮಯನಿಷ್ಠೆ, ಕಾಯಕ ದೃಷ್ಟಿ ಇವು ಅವರಲ್ಲಿ ತೋರಿಬಂದ ಗುಣವಿಶೇಷಗಳು. ಹಳ್ಳಿಹಳ್ಳಿಗಳಲ್ಲಿ ಶ್ರಮವಹಿಸಿ ಸಂಚಾರ ಮಾಡುತ್ತಿದ್ದರು. ಶಾಲೆಯ ಕೆಲಸಗಳನ್ನಷ್ಟೇ ಮಾಡುತ್ತಿರಲಿಲ್ಲ. **ಶ್ರೀ ವೆಂಕಟೇಶ ಸಾಂಗಲಿ** ಎಂಬವರು 'ಕನ್ನಡ ನುಡಿ' ಮಾಸಪತ್ರಿಕೆಯಲ್ಲಿ ಪ್ರಕಟವಾದ ಒಂದು ಲೇಖನದಲ್ಲಿ ಹೀಗೆ ಹೇಳಿದ್ದಾರೆ:

"ನಾಲ್ಕು ಜನರ ಗುಂಪು ಕೂಡಿಸಿ ಅವರೊಂದಿಗೆ ಮಾತಾಡುವದರಲ್ಲಿ ಚನ್ನಬಸವಪ್ಪ ಅವರಿಗೆ ತುಂಬಾ ಚಪಲ. ಎತ್ತರವಾದ ಮೈಕಟ್ಟು, ನಸುಗೆಂಪಿನ ಮೈಬಣ್ಣದ ಚೆನ್ನಬಸವಪ್ಪನವರು ಅದ್ಭುತವಾದ ವಾಚನ ಶಕ್ತಿಯನ್ನು ಪಡೆದವರಾಗಿದ್ದರು. ಅವರ ವೇಷ–ಭೂಷಣಗಳೂ, ರೀತಿ-ನಡತೆಗಳೂ ಅತ್ಯಂತ ಸಾದಾತರವಾಗಿದ್ದು, ಅವರೊಬ್ಬ ವರ್ತಕರ ಮನೆತನದವರು ಎಂಬುದನ್ನು ಸೂಚಿಸುತ್ತಿದ್ದವು. ಈ ಕಾರಣದಿಂದಲೆ ಅತ್ಯಲ್ಪ ಸಮಯದಲ್ಲಿ ಅವರು ಕನ್ನಡ ಜನಮನವನ್ನು ಗೆದ್ದುಕೊಂಡರು."

ಜನಸಾಮಾನ್ಯರು ಮರಾಠೀ ಭಾಷೆಯನ್ನೇ ಹೆಚ್ಚಾಗಿ ಬಳಸುತ್ತಿದ್ದರು. ಮೋಡಿ ಲಿಪಿಯಲ್ಲಿ ಸಹಿ ಮಾಡುವ ರೂಢಿ ಹೆಚ್ಚಾಗಿತ್ತು. ಲೆಕ್ಕ-ಪತ್ರಗಳನ್ನು ಮರಾಠಿಯಲ್ಲಿ ಬರೆಯುತ್ತಿದ್ದರು. ಅಂಕಿ–ಮಗ್ಗಿಗಳನ್ನು ಮರಾಠಿಯಲ್ಲಿಯೇ ಅನ್ನುತ್ತಿದ್ದರು. ಇದನ್ನೆಲ್ಲ ಚೆನ್ನಬಸವಪ್ಪನವರು ತಡೆಗಟ್ಟಿದರು. ಕನ್ನಡವನ್ನೇ ಬಳಸಬೇಕೆಂದು ಶಾಲಾ ಶಿಕ್ಷಕರಿಗೂ ವ್ಯಾಪಾರಸ್ಥರಿಗೂ ತಿಳಿಸಿ ಹೇಳುತ್ತಿದ್ದರು. ಶಾಲಾ ಶಿಕ್ಷಕರಲ್ಲಿ, ಜನಸಾಮಾನ್ಯರಲ್ಲಿ ಕನ್ನಡದ ಬಗೆಗೆ ಪ್ರೇಮ, ಅಭಿಮಾನ, ಆದರ, ಆಸಕ್ತಿಗಳನ್ನು ಹುಟ್ಟಿಸಲು ಅಹೋರಾತ್ರಿ ಶ್ರಮಿಸಿದರು. **"ಕನ್ನಡದಲ್ಲಿ ಅಂಕಿ–ಮಗ್ಗಿಗಳನ್ನು ಕಲಿಸಿದರೆ ಮಾತ್ರ ಕನ್ನಡ ದೇಶದ ಅನ್ನವನ್ನು ಉಂಡದ್ದು ಸಾರ್ಥಕ"** ಎಂದು ಶಿಕ್ಷಕರಿಗೆ ಚನ್ನಬಸವಪ್ಪನವರು ಬೋಧಿಸುತ್ತಿದ್ದರು.

ಹಿರಿಯರೂ, ಕನ್ನಡದ ಕಟ್ಟಾಳೂ, ಶ್ರೇಷ್ಠ ರಾಷ್ಟ್ರಪ್ರೇಮಿಗಳೂ ಆಗಿದ್ದ **ಶ್ರೀ ಮುದವೀಡು ಕೃಷ್ಣರಾಯರು** ಹೀಗೆ ಬರೆದಿದ್ದಾರೆ:

*"ಇಂತಹ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಕನ್ನಡವನ್ನು ಬದುಕಿಸಲು ಮಿತಿ ಮೀರಿ ಹೆಣಗಿದ ಸತ್ಪುರುಷರ ಸಾಹಸವೆಂತಹದಿರಬಹುದೆಂಬುದನ್ನು ನಾವು ತಿಳಿದು ನೋಡಬೇಕು. ಹೊಸಗನ್ನಡದ 'ಆದಿಪುರುಷ' ಚೆನ್ನಬಸವಪ್ಪನವರು ಆಗಲೂ 'ಕನ್ನಡದ ಹುಲಿ' ಎಂದು ಹೆಸರಾಗಿದ್ದರು. ಕೈಕೆಳಗಿನ ಶಿಕ್ಷಕರು ತಮ್ಮ ಸಂಬಳದ ಹೆಚ್ಚಳವನ್ನು ಬೇಡಿಕೊಳ್ಳಲು ಬಂದಾಗ, 'ಪಗಾರ' ಅಂದರೆ 'ಸಂಬಳ ಅನ್ನು' ಎಂದು ಅವರು ಹೇಳುತ್ತಿದ್ದರು. ಸಂಬಳದ ಸಂಖ್ಯೆಯನ್ನು 'ದಹಾ' 'ಬಾರಾ' ಎಂದು ಮರಾಠಿ ಅಂಕಿಗಳಲ್ಲಿ ಹೇಳಿದರೆ 'ಹತ್ತು' 'ಹನ್ನೆರಡು' ಎಂದು ಹೇಳಲು ಕಲಿಸುತ್ತಿದ್ದರಂತೆ! ನಾಲ್ಕೆಂಟು ಬಾರಿ ಎಚ್ಚರ ಕೊಟ್ಟರೂ ನ್ಯೈಮರೆತ ಶಿಕ್ಷಕರಿಗೆ ಒಂದೆರಡು ಆಣೆಗಳ ದಂಡವನ್ನು ಕಟ್ಟೆ ಅವರನ್ನು ಹಾದಿಗೆ ತರುತ್ತಿದ್ದರಂತೆ!"

೧೮೬೮ರಲ್ಲಿ ಶ್ರೀ ಭುಜಂಗರಾವ ಹುಯಿಲಗೋಳರು ಬೆಳಗಾವಿಯ ಟ್ರೇನಿಂಗ ಸಂಸ್ಥೆಯ ಪ್ರಿನ್ಸಿಪಾಲರಾಗಿದ್ದರು. ಆಗ ರಂಗೋ ಗೋಪಾಲ ಎಂಬ ವಿದ್ಯಾರ್ಥಿ ತಾನು ಹಾಜರಾದ ರಿಪೋರ್ಟಿನಲ್ಲಿ ಮರಾಠಿಯಲ್ಲಿ ಸಹಿ ಮಾಡಿದ್ದನು. ಆ ರಿಪೋರ್ಟ ಚೆನ್ನಬಸವಪ್ಪನವರ ಕೈಗೆ ಬಂದಾಗ, ಅವರು ಮರಳಿ ಹೀಗೆ ಪತ್ರ ಬರೆದರು.

ನಂ. ೭೩೩/೧೮೬೮/೬೯

ಪ್ರಿಯ ಭುಜಂಗರಾವ,

ಮರಾಠಿಯಲ್ಲಿ ಸಹಿ ಮಾಡುವುದು ಅವಶ್ಯವಿಲ್ಲವೆಂದು ನಿಮ್ಮ ವಿದ್ಯಾರ್ಥಿಗಳಿಗೆ ತಿಳಿಸಿ ಹೇಳಬೇಕು. ಅವರ ಅಂಕಿತವು ಕನ್ನಡದಲ್ಲಿಯೇ ಇರುವದು ಅವಶ್ಯವಿದೆ.

ನಿಮ್ಮ

ಬೆಳಗಾವ **ಚೆನಬಸಪ್ಪ ಧಾರವಾಡ**

೨೨-೮-೧೮೬೮ ಡೆ. ಎ. ಇ. ಬೆಳಗಾವ

ಈ ಪ್ರಕಾರ ಶ್ರೀ ಭುಜಂಗರಾಯರು ಸರ್ಕೂಲರ ಮೂಲಕ ತಮ್ಮ ಎಲ್ಲ ವಿದ್ಯಾರ್ಥಿಗಳಿಗೆ ತಿಳಿಸಿದರು. ಅವರ ಇನ್ನೊಂದು ಪತ್ರ ಹೀಗಿದೆ:

೨/೩/೭೦ **ಧಾರವಾಡ**

ಪ್ರಿಯ ಭುಜಂಗರಾವ,

ಈಗ ನಿಮ್ಮ ಶಾಲೆಗಳಲ್ಲಿ ಮರಾಠಿಯನ್ನು ಕಲಿಸುವದು ಅವಶ್ಯವಿಲ್ಲ. ಶಿಕ್ಷಕರ ಯಶಸ್ಸು ಕೇವಲ ಅವರು ಕನ್ನಡವನ್ನು ಹೇಗೆ ಕಲಿಸುವರೆಂಬುದರ ಮೇಲೆಯೇ ಅವಲಂಬಿಸಿರುತ್ತದೆ. ಇದನ್ನು ನಿಮ್ಮ ಎಲ್ಲ ವಿದ್ಯಾರ್ಥಿಗಳ ಗಮನಕ್ಕೆ ಸ್ಪಷ್ಟವಾಗಿ ತಂದುಕೊಡಬೇಕು.

ನಿಮ್ಮ

ಚೆನಬಸಪ್ಪ ಧಾರವಾಡ

ಡೆ. ಎ. ಇ. ಧಾರವಾಡ

---

* 'ಕನ್ನಡವನ್ನುದ್ಧರಿದ ಪುಣ್ಯಪುರುಷರು' ಎಂಬ ಅವರ ಲೇಖನದಿಂದ.

ಪ್ರಿನ್ಸಿಪಾಲ ಭುಜಂಗರಾಯರು ಈ ಬಗೆಗೆ ಪರಿಪತ್ರ ಹೊರಡಿಸಿ, ಎಲ್ಲ ಶಿಕ್ಷಕ ವಿದ್ಯಾರ್ಥಿಗಳಿಗೆ ಕಳಿಸಿಕೊಟ್ಟರು. ಕನ್ನಡದ ಉಳಿವು, ಬೆಳಿಗೆಗಳ ವಿಷಯಕ್ಕೆ ಚೆನ್ನ-ಬಸವಪ್ಪನವರ ಜಾಗರೂಕತೆಯ ನಿದರ್ಶನಗಳು ಈ ಓಲೆಗಳು.

ಹಳೆಯ ದಾಖಲೆಗಳಿಂದ ಕಂಡುಬಂದ ಎರಡು ನೋಟೀಸುಗಳನ್ನು ಇಲ್ಲಿ ಉದಾಹರಿಸಲಾಗಿದೆ. ಕಲ್ಲಚ್ಚಿನ ಮೇಲೆ ಪ್ರಕಟವಾಗುತ್ತಿದ್ದ ಅಂದಿನ "ಶಾಲಾಪತ್ರಿಕೆ" ಯಲ್ಲಿಯ ಅವತರಣಿಕೆಗಳು.

ನೋಟೀಸು (೧೮೬೮)

ಬೆಳಗಾವಿ ಜಿಲ್ಹೆಯ ಡಿಪ್ಯೂಟಿ ಎಜ್ಯುಕೇಶನಲ್ ಇನಸ್ಪೆಕ್ಟರರ ಕಡೆಯಿಂದ ಬೆಳಗಾವಿ ಜಿಲ್ಹೆದೊಳಗಿನ ಯಾವತ್ತೂ ಸ್ಕೂಲ ಮಾಸ್ತರರಿಗೆ ಈ ನೋಟೀಸಿನಿಂದ ತಿಳಿಯಪಡಿಸುವದೇನಂದರೆ—

ನಾವು ಸಾಲಿಗಳ ಪರೀಕ್ಷಾ ತೆಗೆದುಕೊಳ್ಳಲಿಕ್ಕೆ ಹೋದ ಸಮಯದಲ್ಲಿ ಕೆಲವು ಸಾಲಿಗಳ ರಜಿಸ್ಟರನಲ್ಲಿ ೫೦ ಹುಡುಗರು ಇದ್ದು ಸರಾಸರಿ ಹಾಜರಿ ೪೦ ಅಥವಾ ೪೫ ಇರುತ್ತದೆ. ಪರಂತು ಸಾಲಿಯ ಪರೀಕ್ಷಾ ನೆಟ್ಟಗೆ ಉಳಿಯದಿದ್ದರೆ ಮಾಸ್ತರರು— "ಈ ಊರು ಹಳ್ಳಿ ಊರು ಹುಡುಗರು ನೇಮದಿಂದ ಸಾಲಿಗೆ ಬರುವದಿಲ್ಲ. ಒಂದು ದಿನ ಬಂದರೆ ನಾಲ್ಕು ದಿವಸ ಬರುವದಿಲ್ಲ. ಅದರಿಂದ ಅಭ್ಯಾಸ ನೆಟ್ಟಗೆ ನಡೆಯುವ ದಿಲ್ಲ"ವೆಂದು ಹೇಳುತ್ತಾರೆ. ಇದರ ಮೇಲಿಂದ ಸಾಲಿಗೆ ಹುಡುಗರು ನಿತ್ಯನೇಮದಿಂದ ಬರದಿದ್ದರೆ ಸರಾಸರಿ ಹಾಜರಿ ಕಡಿಮೆಯಾಗಬೇಕು. ಸರಾಸರಿ ಹಾಜರಿ ಖರೆಯಿದ್ದರೆ ದಿನಂಪ್ರತಿಯಲ್ಲಿ ಹುಡುಗರು ಬರುವದಿಲ್ಲವೆಂಬುದು ಸುಳ್ಳು. ಆದಕಾರಣ ಹೀಗೆ ಹೇಳುವ ಮಾಸ್ತರರು ಖುಲ್ಲಾ ಸುಳ್ಳು ಹೇಳುತ್ತಾರೆ. ಇಲ್ಲಾ ಹಾಜರಿ ಖೊಟ್ಟಿ ಹಾಕುತ್ತಾರೆಂಬುವದರಲ್ಲಿ ಏನೇನೂ ಸಂಶಯವಿಲ್ಲಾ. ಇದಲ್ಲದೆ ಮಾಸ್ತರರು ನಿತ್ಯ ಹಾಜರಿ ತೆಗೆದುಕೊಳ್ಳದೆ ಮನಸಿಗೆ ಬಂದಾಗೊಮ್ಮೆ ಮನಸಿಗೆ ಬಂದಂತೆ ಹಾಜರಿ ತೆಗೆದುಕೊಂಡು ನಮ್ಮ ಕಡಿಗೆ ಸುಳ್ಳು ಲೆಖ್ಖಾ ಕಳುಹಿಸುತ್ತಾರೆಂಬುವದರಲ್ಲೇನೇನೂ ಸಂಶಯುವಿಲ್ಲಾ. ಇದರ ಹೊರ್ತು ಕೆಲವು ರಜಿಸ್ಟರಗಳನ್ನು ತಪಾಸ ಮಾಡಿ ನೋಡಿದರೆ ಈ ಮೇಲಿನ ಸಂಶಯಕ್ಕೆ ಕಾರಣಗಳು ಕಾಣಬರುತ್ತವೆ. ಅಂದರೆ ಮುಂದಿನ ವರ್ಷ ಪರೀಕ್ಷೆಯ ಸಮಯದಲ್ಲಿ ಇಂಥಾ ಅಪರಾಧಗಳು ನಮ್ಮ ದೃಷ್ಟಿಗೆ ಬಿದ್ದರೆ ನಾವು ಅವುಗಳ ವಿಷಯಕ್ಕೆ ನೆಟ್ಟಗೆ ಬಂದೋಬಸ್ತ ಮಾಡುವೆವು.

ತಾರೀಖು : ೮ನೇಯ ಫೆಬ್ರುವರಿ ಸನ್ ೧೮೬೮ನೇ ಇಸ್ವಿ ಮುಕ್ಕಾಂ ಮುಧೋಳ.

ಚನಬಸಪ್ಪ ಬ. ಧಾರವಾಡ
ಡಿ. ಎ. ಇ. ಜಿಲ್ಹಾ ಬೆಳಗಾವಿ

ಮೇಲಿನ ಪರಿಪತ್ರ ಎಷ್ಟು ಕಟುವಾಗಿದೆ, ಸ್ಪಷ್ಟವಾಗಿದೆ ಎಂಬುದನ್ನೂ, ಚೆನ್ನ-ಬಸವಪ್ಪನವರು ತಮ್ಮ ನಿರೀಕ್ಷಣ, ಪರೀಕ್ಷಣಗಳ ಚಾಕಚಕ್ಯತೆಯನ್ನು ಹೇಗೆ ತೋರಿಸುತ್ತಿದ್ದರೆಂಬುದನ್ನೂ ತಿಳಿಯಬಹುದು. ಆಲಸಿ ಶಿಕ್ಷಕರ ಹೇಳಿಕೆಗಳನ್ನು ಖಂಡಿಸುತ್ತಿದ್ದರು. ಅವರ ಕಳವಳ, ಕಳಕಳಿ ಶಿಕ್ಷಣದ ಬಗೆಗೆ ಇದ್ದುವೆಂಬುದಕ್ಕೆ ಈ ಪರಿ-ಪತ್ರವೇ ಸಾಕ್ಷಿ.

— ಮಾರ್ಚ, ೧೮೬೯ರ 'ಶಾಲಾಪತ್ರಿಕೆ' ಸಂಚಿಕೆಯಿಂದ —

ಮತ್ತೆರಡು ನೋಟೀಸುಗಳು

ಯಮಕನಮರ್ಡಿಯ ಪಂತೋಜಿ ಮನಸಿಗೆ ಬಂದಾಗ್ಗೆ ಸಾಲಿಯ ಕೆಲಸ ಬಂದ ಮಾಡಿ ಯರಡನೇ ಕಡಿಗೆ ಹೋದದ್ದು ತಿಳಿಯಬಂದದರಿಂದ ಆತನ ಪಗಾರ ೧೫ ರಿಂದ ೧೨ ಮಾಡುವ ಬಗ್ಗೆ ಮೆ॥ ಇನ್‌ಸ್ಪೆಕ್ಟರ ಸಾಹೇಬರ ಕಡೆಗೆ ಬರದು ಕಳುಹಿಸಲಾಗಿ ಸಾಹೇಬರು ನಮ್ಮ ಬರಿಯೋಣ ಮಾನ್ಯಮಾಡಿದ್ದರಿಂದ ಸದರ ಮಾಸ್ತರನ ಪಗಾರ ೧೨ ಮಾಡಿದೆ. ತಾರೀಖು ೨೨ ಮಾರ್ಚ ಸನ್ ೧೮೬೮.

ಚೆನಬಸಪ್ಪಾ ಬಿ. ಡಿ.

ಡಿ. ಎ. ಇ. ಜಿಲ್ಹಾ ಬೆಳಗಾವಿ

ಕಾಲಕುಂದ್ರಿ, ಸತ್ತಿಗೇರಿ, ಶೇಡಬಾಳ ಮತ್ತು ಅಂಕಲಗಿ ಇಲ್ಲಿಯ ಮಾಸ್ತರರು ರಜಿಸ್ಟರ ಬುಕ್ಕುಗಳನ್ನು ತಿಳಿದು ತಿಳಿದು ತಪ್ಪು ಇಟ್ಟದ್ದು ವಾರ್ಷಿಕ ಪರೀಕ್ಷಾದ ಸಮಯದಲ್ಲಿ ಕಂಡುಬಂದುದರಿಂದ ಈ ಮಾಸ್ತರರನ್ನು ಕಡಿಮೆ ಪಗಾರದ ಮೇಲೆ ನೇಮಿಸಬೇಕೆಂದು ಮೆ॥ ಇನ್‌ಸ್ಪೆಕ್ಟರ ಸಾಹೇಬರ ಕಡೆಗೆ ನಮ್ಮ ಕಡಿಯಿಂದ ಬರದು ಹೋಗಲಾಗಿ ಸಾಹೇಬರವರು ನಾವು ಬರದದ್ದನ್ನು ಮಾನ್ಯ ಮಾಡಿದರು. ಆದರಿಂದ ಅವರನ್ನೆಲ್ಲಾ ಆರಾರು ರೂಪಾಯದ ಶಿಕ್ಷಕರ ಕೆಲಸದ ಮೇಲೆ ನೇಮಿಸುವದರಲ್ಲಿ ಬಂದಿದೆ.

ತಾರೀಖು ೨೨ ಮಾರ್ಚ ಸನ್ ೧೮೬೮ ಯಿ॥

ಯಿದನ್ನು ಯಾವತ್ತು ಮಾಸ್ತರರು ಲಕ್ಷಪೂರ್ವಕವಾಗಿ ಓದಿನೋಡಿ ಬಹು ಹುಷಾರಿಯಿಂದ ಕೆಲಸ ನಡಿಸಬೇಕು.

ಚನಬಸಪ್ಪ ಬಿ. ಡಿ:

ಡಿ. ಎ. ಇ. ಜಿಲ್ಹಾ ಬೆಳಗಾವಿ

ಶಿಕ್ಷಣದ ಪ್ರಗತಿಗೆ ಆತಂಕ ಒಡ್ಡಿದ ಶಿಕ್ಷಕರನ್ನು ಅವರು ನಿರ್ದಾಕ್ಷಿಣ್ಯವಾಗಿ ದಂಡಿಸಿದ ರೀತಿಯನ್ನು ಇಲ್ಲಿ ತಿಳಿಯಬಹುದಾಗಿದೆ. ಕರ್ತವ್ಯದಲ್ಲಿ ಚ್ಯುತಿ, ಮೋಸ

ಇವೆರಡನ್ನೂ ಬಲವಾಗಿ ಖಂಡಿಸುತ್ತಿದ್ದರು. ಶಿಕ್ಷಕರು ತಮ್ಮ ಸ್ಥಾನ ಮತ್ತು ಹೊಣೆ ಅರಿತವರಾಗಿರಬೇಕೆಂಬುದು ಅವರ ಖಂಡಿತ ಅಭಿಪ್ರಾಯ. ಆಡಳಿತದಲ್ಲಿ ಬಿಗುವು, ತಪ್ಪಿತಸ್ಥರನ್ನು ತಿದ್ದುವುದು, ಅಗತ್ಯವೆನಿಸಿದಾಗ ದಂಡಿಸುವುದು ಅವರ ವಿಧಾನಗಳು. ಅವೆಲ್ಲ ಶಿಕ್ಷಣದ ಪ್ರಗತಿಯ ಸಾಧನೆಗಳು. ಶಿಕ್ಷಕರನ್ನು ಹತೋಟಿಯಲ್ಲಿ ಇಟ್ಟುಕೊಳ್ಳಲು ಅನುಕರಿಸಿದ ಅಂದಿನ ರೀತಿ. ಈಗಲೂ ಈ ದಿಸೆಯಲ್ಲಿ ಆವಶ್ಯಕ ನಿಯಮಾವಳಿಗಳನ್ನು (C. C. A. Rules) ರಚಿಸಿದ್ದಾರೆ.

ಕನ್ನಡದ ಉದ್ಧಾರ, ಶಿಕ್ಷಣದ ಮುನ್ನಡೆ, ಮಕ್ಕಳ ಕಲ್ಯಾಣ, ಮುಂಬರುವ ಕರ್ನಾಟಕದ ರಚನೆ–ಇವು ಡೆಪ್ಯೂಟಿ ಚನ್ನಬಸವಪ್ಪನವರು ಸಾಧಿಸಿದ, ಇರಿಸಿಕೊಂಡಿದ್ದ ಧ್ಯೇಯೋದ್ದೇಶಗಳು. ಕನ್ನಡ ಟ್ರೇನಿಂಗ ಸಂಸ್ಥೆಯ ಪ್ರಿನ್ಸಿಪಾಲರಾಗಿ, ಡೆಪ್ಯೂಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಆಗಿ, ಅವನ್ನು ಈಡೇರಿಸಲು ಹೆಣಗಿದರು. ಕನ್ನಡದ ಪುನರುತ್ಥಾನ ಅವರ ಹೋರಾಟ!

ಚನ್ನಬಸವಪ್ಪನವರ ಭಗೀರಥ ಪ್ರಯತ್ನಗಳ ಫಲವಾಗಿ ಕನ್ನಡ ಪ್ರಾಥಮಿಕ ಶಿಕ್ಷಣದ ಪ್ರಸಾರವಾಯಿತು. ೧೮೫೫–೫೬ನೇ ಸಾಲಿನಲ್ಲಿ ಬೆಳಗಾವಿ, ವಿಜಾಪುರ, ಧಾರವಾಡ ಜಿಲ್ಲೆಗಳಲ್ಲಿ ಅನುಕ್ರಮವಾಗಿ ೧೩, ೯, ೧೨ ಕನ್ನಡ ಶಾಲೆಗಳಿದ್ದವು. ೧೮೬೭ ರಲ್ಲಿ ಅವುಗಳ ಸಂಖ್ಯೆ ಅನುಕ್ರಮವಾಗಿ, ೧೬೬, ೧೫೦ ಮತ್ತು ೩೪೧ ಕ್ಕೆ ಏರಿತು. ಒಳ್ಳೆಯ ಕೆಲಸ ಮಾಡುವವರಿಗೆ ಪ್ರೋತ್ಸಾಹ, ಸುಳ್ಳು ಹೇಳುವ, ಮೋಸ ಮಾಡುವ, ಸೋಮಾರಿ ಶಿಕ್ಷಕರಿಗೆ ದಂಡನೆ— ಈ ವಿಧಾನಗಳ ಮೂಲಕ ಶಿಕ್ಷಣದ ಗುಣಮಟ್ಟ ಎತ್ತರಿಸಲು ಅವರು ಯತ್ನಿಸಿದರು.

ಒಂದು ಶಾಲೆಯ ತಪಾಸಣೆಯ ಸಮಯದಲ್ಲಿ ಒಬ್ಬ ಕವಿ ಶಿಕ್ಷಕ ಚನ್ನಬಸವಪ್ಪನವರ ಬಗೆಗೆ ಒಂದು ಚಿಕ್ಕ ಕವಿತೆ ರಚಿಸಿದ್ದನ್ನು ಹಾಡಿ ತೋರಿಸಿದ. ಚನ್ನಬಸವಪ್ಪನವರು ಅದನ್ನು ಮೆಚ್ಚುವರೆಂದು ಆತ ಭಾವಿಸಿದ್ದ. ಅದಕ್ಕೆ ಪ್ರತಿಯಾಗಿ ಅವರು ಹೀಗೆ ಹೇಳಿದರು:

“ನನ್ನ ಮೂಗು ಸಂಪಿಗೆಯ ಹೂವಿನಂತಿದೆ ಎಂದು ನೀವು ಬರೆದಿದ್ದೀರಿ. ಆದರೆ ಅದು ತೊಂಡೆಕಾಯಿಗಿಂತ ದಪ್ಪವಾಗಿದೆ. ಇಂಥ ಸುಳ್ಳು ಸಂಗತಿಗಳನ್ನು ಬರೆದು, ಭಾಷೆಯನ್ನೂ ನಿಮ್ಮ ಕವಿತಾ ಸಾಮರ್ಥ್ಯವನ್ನೂ ಅವಮಾನ ಮಾಡಬೇಡಿರಿ. ಅದಕ್ಕಿಂತಲೂ ಮನೆಗೆ ಹೋಗಿ ಒಂದು ಪಾವು ಜೋಳ ಬೀಸಲು ಸಹಾಯ ಮಾಡಿರಿ. ಅವರ ಶ್ರಮವಾದರೂ ಕಡಿಮೆಯಾಗುತ್ತದೆ.”

ಇದು ಅವರ ಕಹಿ ಉತ್ತರ. “ಆತ್ಮಸ್ತುತಿ, ಪರನಿಂದೆ ಇವನ್ನು ಕೇಳಿಸದಿರಯ್ಯಾ” ಎಂದು ಬಸವಣ್ಣನವರು ನುಡಿದಿರುವರು. ಆ ನುಡಿಮುತ್ತು ಚೆನ್ನಬಸವಪ್ಪನವರ ನಿತ್ಯದ ನಡೆಯಲ್ಲಿ ಕಾಣಿಸಿತು.

ಚನ್ನಬಸಪ್ಪನವರು ಕನ್ನಡಪ್ರೇಮಿ ಹಾಗೂ ವಿದ್ಯಾಪ್ರೇಮಿ ಆಗಿದ್ದರೆಂಬುದನ್ನು ಅವರ ಜೀವನ ಚರಿತ್ರೆ ಸಾರುತ್ತಿದೆ.

ಅವರು ಕೈಕೊಂಡ ವಿದ್ಯಾಪ್ರಸಾರದ ಫಲ ಇಂತಿದೆ:*

ಜಿಲ್ಹೆ	ವರ್ಷ	ಶಾಲೆಗಳು	ವಿದ್ಯಾರ್ಥಿಗಳು
ಧಾರವಾಡ	೧೮೫೫–೫೬	೧೨	೧೩೪೧
	೧೮೬೫–೬೬	೪೮	೪೧೬೪
	೧೮೮೨–೮೩	೩೪೧	೨೯೭೧೧
ಬೆಳಗಾವ	೧೮೫೫–೫೬	೧೩	೧೪೯೮
	೧೮೬೫–೬೬	೫೫	೪೩೭೪
	೧೮೮೨–೮೩	೧೭೭	೧೫೮೧೯
ವಿಜಾಪುರ	೧೮೫೫–೫೬	೯	೩೯೫
	೧೮೬೫–೬೬	೪೬	೨೮೭೭
	೧೮೮೨–೮೩	೧೫೦	೯೯೬೪

ಕನ್ನಡ ಭಾಷೆಯ ಪ್ರಚಾರ:

ಚನ್ನಬಸವಪ್ಪನವರು ಕನ್ನಡ ಭಾಷೆಯನ್ನು ಪ್ರೋತ್ಸಾಹಿಸಿದರು. ಜನರಲ್ಲಿ ಅದರ ಬಗ್ಗೆ ಅಭಿಮಾನವನ್ನು ಹುಟ್ಟಿಸಿದರು. ಶಿಕ್ಷಕರು ಮರಾಠೀ ಭಾಷೆ ಮಾತನಾಡುತ್ತಿದ್ದರೆ, ಅವರಿಗೆ ಸಿಟ್ಟುಮಾಡಿ, ಹಿತೋಕ್ತಿಗಳನ್ನು ನೀಡುತ್ತಿದ್ದರು. ಅಶುದ್ಧ ಕನ್ನಡ ಭಾಷೆಯನ್ನು ಬಳಸುತ್ತಿದ್ದ ಶಿಕ್ಷಕರ ತಪ್ಪುಗಳನ್ನು ತಿದ್ದಿ, ಅವರಿಗೆ ಮಾರ್ಗದರ್ಶನ ಮಾಡುತ್ತಿದ್ದರು. ಮರಾಠಿ ಭಾಷೆಯಲ್ಲಿ ಅಂಕಿ ಮಗ್ಗಿಗಳನ್ನು ಕಲಿಸುವುದನ್ನು ನಿಲ್ಲಿಸಿದರು. ಇದೊಂದು ಆಗ ಮಹತ್ವದ ಕಾರ್ಯವಾಗಿತ್ತು. ಯಾಕಂದರೆ, ಪೇಶ್ವೆಯವರ ಆಳ್ವಿಕೆಯ ಪ್ರಭಾವದಿಂದ ಕನ್ನಡದ ಸ್ಥಾನವನ್ನು ಮರಾಠೀ ಭಾಷೆಯು ಆಕ್ರಮಿಸಿಕೊಂಡಿತ್ತು. ಶಿಕ್ಷಕರು ಮರಾಠಿಯಲ್ಲಿ ಪತ್ರ ಬರೆಯುವುದನ್ನು ತಪ್ಪಿಸಬೇಕೆಂದು ತಮ್ಮ ಕಛೇರಿಯಿಂದ ಸುತ್ತೋಲೆಗಳನ್ನು ಕಳಿಸುತ್ತಿದ್ದರು. ಇದರ ಪರಿಣಾಮವಾಗಿ, ಅವರಲ್ಲಿ ಸ್ವಭಾಷೆಯ ಪ್ರೇಮ ಪುನಃ ಜಾಗ್ರತವಾಯಿತು. ವ್ಯಾಪಾರಸ್ಥರೂ

* ಫ. ಗು. ಹಳಕಟ್ಟಿ ಅವರ ಪುಸ್ತಕ, ಪುಟ ೧೧.

ತಮ್ಮ ಅಂಗಡಿ ಲೆಕ್ಕಪತ್ರಗಳನ್ನೆಲ್ಲ ಮರಾಠಿಯಲ್ಲಿ ಬರೆಯುವುದನ್ನು ತಪ್ಪಿಸಬೇಕೆಂದೂ ಕನ್ನಡವನ್ನೇ ಉಪಯೋಗಿಸಬೇಕೆಂದೂ ಸಾರ್ವಜನಿಕ ಭಾಷಣಗಳಲ್ಲಿ ತಿಳಿವಳಿಕೆ ಕೊಡುತ್ತಿದ್ದರು. ಹೀಗೆ ಧಾರವಾಡ ಜಿಲ್ಲೆಯಲ್ಲಿ ಕನ್ನಡ ಭಾಷೆಯ ಪ್ರಸಾರ ದಿನೇ ದಿನೇ ಹೆಚ್ಚತೊಡಗಿತು. **ದಿ. ಫ. ಗು. ಹಳಕಟ್ಟಿ** ಅವರು ತಮ್ಮ ಪುಸ್ತಕದಲ್ಲಿ ಹೀಗೆ ಬರೆದಿದ್ದಾರೆ: (ಪುಟ ೧೪)

"ಚೆನ್ನಬಸವಪ್ಪನವರು ಆ ಕಾಲಕ್ಕೆ ಒಬ್ಬ ದೊಡ್ಡ ವಿದ್ಯಾಧಿಕಾರಿಗಳಿದ್ದು ಅವರು ಈ ವಿಷಯಗಳ ಬಗ್ಗೆ ಮೇಲಿಂದಮೇಲೆ ಪ್ರಸ್ತಾಪಿಸಿ ಜನರಲ್ಲಿ ಅವುಗಳನ್ನು ಬಿಂಬಿಸಲು ಸದಾ ತತ್ಪರರೂ ಸಮರ್ಥರೂ ಇದ್ದದರಿಂದ, ಅವರ ಉಪದೇಶದ ಪರಿಣಾಮವು ಜನರ ಮೇಲೆ ಬಹಳವಾಗುತ್ತಿತ್ತು........"

"ಪ್ರಥಮದಲ್ಲಿ ಚೆನ್ನಬಸವಪ್ಪನವರಿಗೆ ಈ ಕೆಲಸದಲ್ಲಿ ಅನೇಕ ತೊಂದರೆಗಳು ತಟ್ಟಿದವು. ಅವರ ದೇಶಬಾಂಧವರೇ (ಕನ್ನಡಿಗರೇ) ಅವರನ್ನು ಮೊದಲು ಹೀಯಾಳಿಸ ತೊಡಗಿದರು. ಮತ್ತು ಅನೇಕರಂತೂ ಅವರಿಗೆ ಹಗೆಗಳಾದರು. ಆದರೆ ಚೆನ್ನಬಸವಪ್ಪ ನವರು ಸ್ವಾಭಾವಿಕವಾಗಿ ಬಹಳ ಗಟ್ಟಿಗರೂ ಸಾಹಸಿಗರೂ ಇದ್ದದರಿಂದ, ಅವರೇ ಯಾವದನ್ನೂ ಲಕ್ಷಿಸುತ್ತಿದ್ದಿಲ್ಲ. ಅವರು ತಮ್ಮ ಕರ್ತವ್ಯ ಕರ್ಮವನ್ನು ತಿಳಿದವ-ರಾಗಿದ್ದುದರಿಂದ, ಅವರು ಅಂಜದೆ ಅದರಲ್ಲಿ ಎಡೆಬಿಡದೆ ತೊಡಗುತ್ತಿದ್ದರು. ಇಂಥ ನಿರಂತರ ಪ್ರಯತ್ನಗಳಿಂದಲೇ ಸುಕಾರ್ಯಗಳ ಸುಖಾವಹ ಪರಿಣಾಮಗಳು ಮೊದಲು ಮೆಲ್ಲಮೆಲ್ಲಗೆ ಜನರಲ್ಲಿ ತಲೆದೋರ ಹತ್ತುತ್ತವೆ. ಆಮೇಲೆ ಸ್ವಲ್ಪ ಕಾಲದಲ್ಲಿ ಅವು ಹೆಚ್ಚಾಗಿ ಪಸರಿಸಿ, ಅವುಗಳ ಸುಪರಿಣಾಮಗಳು ಸ್ಪಷ್ಟವಾಗಿ ಕಂಗೊಳಿಸಹತ್ತುತ್ತವೆ".

ಚನ್ನಬಸವಪ್ಪನವರ ಈ ಮಹಾಕಾರ್ಯದ ಸುಪರಿಣಾಮ ಒಂದೊಂದಾಗಿ ತಲೆದೋರಿದವು. ಕನ್ನಡ ಶಾಲೆಗಳು ಪಸರಿಸ ಹತ್ತಿದವು. ಲೇಖಕರೂ ಹೊರಬೀಳ ಹತ್ತಿದರು. ಗ್ರಂಥಕರ್ತರೂ ಕಾಣಿಸಿಕೊಂಡರು. ಅವರೆಲ್ಲರಿಗೂ ಚನ್ನಬಸವಪ್ಪನವರು ಸೂಕ್ತ ಪ್ರೋತ್ಸಾಹ ಕೊಟ್ಟರು. ಗ್ರಾಮಗಳಲ್ಲಿದ್ದ ಬರೆಹಗಾರರಿಗೂ ಉತ್ತೇಜನ ನೀಡಿದರು. **ಕನ್ನಡ ಕ್ರಮಿಕ ಪುಸ್ತಕಗಳ ಅವಶ್ಯಕತೆ ಇತ್ತು.** ಅವುಗಳನ್ನು ಗಂಗಾಧರ ಮಡಿವಾಳೇಶ್ವರ ತೂರಮರಿ ಅವರಿಂದ ಬರೆಯಿಸಿದರು. ಆ ಪುಸ್ತಕಗಳು ಅನೇಕ ವರ್ಷಗಳ ವರೆಗೆ ಶಾಲೆಗಳಲ್ಲಿ ಬಳಸಲ್ಪಟ್ಟವು. ಆ ಕಾಲದಲ್ಲಿ ಹಳಗನ್ನಡ ಭಾಂಡಾರದ ಪರಿಚಯವು ಬಹಳ ಜನರಿಗೆ ಇರಲಿಲ್ಲ. ಮರಾಠೀ ಪದ್ಧತಿಯ ಕವಿತೆ ಗಳನ್ನು ಜೋಡಿಸಿ, ಕನ್ನಡ ಕವಿತೆಗಳನ್ನು ರಚಿಸುತ್ತಿದ್ದರು. ಆದರೆ ಗಂಗಾಧರಯ್ಯ ನವರು ಮಾತ್ರ ಹಳಗನ್ನಡವನ್ನು ಅರಿತವರಾಗಿದ್ದರು. ಆದಕಾರಣ ಅವರು ಹಳಗನ್ನಡ ಮಹಾಕವಿಗಳ, ದಾಸರ ಮತ್ತು ಶರಣರ ನೀತಿಪದ್ಯಗಳನ್ನು ಕ್ರಮಿಕ ಪುಸ್ತಕಗಳಲ್ಲಿ ಸೇರಿಸಿದರು. ಅವರು ಕರ್ನಾಟಕಸ್ಥರಿಗೆ ಹಳಗನ್ನಡದ ಮಹತ್ವವನ್ನು ಮೊದಲು ಅರಿಕೆ ಮಾಡಿಕೊಟ್ಟರೆಂದೂ, ಹಳಗನ್ನಡ ಅಭ್ಯಾಸ ಮಾಡುವವರಿಗೆ ನೆರವಾಗಲೆಂದು

ಒಂದು ನಿಘಂಟನ್ನು (Dictionary) ಪ್ರಪ್ರಥಮವಾಗಿ ರಚಿಸಿದರೆಂದೂ, ಅದಕ್ಕಾಗಿ ಸರಕಾರದವರು ಅವರಿಗೆ ನಾಲ್ಕು ಸಾವಿರ ರೂಪಾಯಿಗಳ ಇನಾಮನ್ನು ಕೊಟ್ಟರೆಂದೂ ದಿ. ಫ. ಗು. ಹಳಕಟ್ಟಿ ಅವರು ತಮ್ಮ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ. ಇದರಂತೆಯೇ ಶಾಂತವೀರ ರಾಚಿದೇವ ಕಿತ್ತೂರ ಅವರೂ ಹಳಗನ್ನಡದಲ್ಲಿ ಸಮರ್ಥರಾಗಿದ್ದರು. ಈ ಕಾಲಕ್ಕೆ ಕೆಲವು ಗ್ರಂಥಕಾರರೂ ಬೆಳೆದುಬಂದರು. ಇಂಥವರಲ್ಲಿ ಶೇಷೋ ರಾಮುಚಂದ್ರ ಚೂರಮರಿ, ವೆಂಕಟ ರಂಗೋ ಕಟ್ಟಿ, ಭುಜಂಗರಾವ ಹುಯಿಲಗೋಳ, ಪಾಂಡುರಂಗ ಚಿಂತಾಮಣಿ ಪೇಟಕರ, ವೀರಭದ್ರ ಮಡಿವಾಳೇಶ್ವರ ಪಂಡಿತ—ಈ ಮಹನೀಯರು ಮುಖ್ಯರು. ಇವರೆಲ್ಲರೂ ಚನ್ನಬಸವಪ್ಪನವರಿಂದ ಪ್ರೋತ್ಸಾಹಿತರೂ, ಸ್ನೇಹಿತರೂ, ಕನ್ನಡಾಭಿಮಾನಿಗಳೂ ಆಗಿದ್ದರು. ವೀರಭದ್ರ ಮಡಿವಾಳೇಶ್ವರ ಪಂಡಿತ ಇವರು ಬೆಳಗಾವಿಯ ಸರಕಾರಿ ಹೈಸ್ಕೂಲಿನಲ್ಲಿ ಶಿಕ್ಷಕರಾಗಿದ್ದರು. ಬಳಿಕ ಅವರು ಮುನಸಿಫ್ ಪರೀಕ್ಷೆ ಪಾಸಾಗಿ ಸಬ್‌ಜಜ್ಜರಾದರು. ಚನ್ನಬಸವಪ್ಪನವರು ಇವರಿಗೆ ಎರಡು ಕ್ರಮಿಕ ಪುಸ್ತಕಗಳನ್ನು ರಚಿಸಲು ಪ್ರೋತ್ಸಾಹಿಸಿದರು. ಈ ಪುಸ್ತಕಗಳು ಪ್ರಾಥಮಿಕ ಶಾಲೆಗಳಲ್ಲಿ ಬಹಳ ದಿವಸಗಳವರೆಗೆ ಉಪಯೋಗಿಸಲ್ಪಟ್ಟವು. ವೆಂಕಟ ರಂಗೋ ಕಟ್ಟಿಯವರು ಅರೇಬಿಯನ್ ನೈಟ್ಸ ಎಂಬ ಪುಸ್ತಕವನ್ನು ಭಾಷಾಂತರಿಸಿದರು. ಕನ್ನಡ ಕ್ರಮಿಕ ಪುಸ್ತಕಗಳನ್ನು ರಚಿಸಿದರು. ಮತ್ತು ಪದಾರ್ಥವಿಜ್ಞಾನಶಾಸ್ತ್ರಗ್ರಂಥ-ವನ್ನು ಬರೆದರು. ಭುಜಂಗರಾವ ಹುಯಿಲಗೋಳರು ಖಗೋಲಶಾಸ್ತ್ರ ಗ್ರಂಥ ಬರೆದರು. ಪಾಂಡುರಂಗ ಚಿಂತಾಮಣಿ ಪೇಟಕರ ಇವರು ಶಾಲೋಪಯೋಗೀ ಪುಸ್ತಕಗಳನ್ನು ಬರೆದರು. ಗಂಗಾಧರಯ್ಯನವರ ಕಾದಂಬರಿಯಂತೂ ಬಹಳ ಸೊಗಸಾಗಿದೆ. ಶೇಷೋ-ರಾಮುಚಂದ್ರ ಚೂರಮರಿ ಅವರು ಶಾಕುಂತಲ ನಾಟಕವನ್ನು ಸಂಸ್ಕೃತದಿಂದ ಕನ್ನಡಕ್ಕೆ ಪರಿವರ್ತಿಸಿದ್ದಾರೆ. ಅದನ್ನು ಡೆ. ಚನಬಸವಪ್ಪನವರಿಗೆ ಬಹಳ ಅಭಿಮಾನದಿಂದ ಅರ್ಪಣ ಮಾಡಿದ್ದಾರೆ. ಆಗ ಧಾರವಾಡದಲ್ಲಿದ್ದ ಪ್ರಸಿದ್ಧ ಮಿಶನರಿ ಝಿಗ್ಲರ ಅವರು ಒಂದು ಇಂಗ್ಲೀಷ-ಕನ್ನಡ ನಿಘಂಟನ್ನು ಬಹಳ ಪರಿಶ್ರಮ ವಹಿಸಿ ರಚಿಸಿದರು. ಈ ಕಾರ್ಯದಲ್ಲಿ ಚನ್ನಬಸವಪ್ಪನವರೂ ಬಹಳಷ್ಟು ನೆರವಾದರು. ಶೇಕ್ಸಪಿಯರ್‌ನ 'ಕಾಮೆಡಿ ಆಫ್ ಎರರ್ಸ'ನ್ನು 'ನಗದವರನ್ನು ನಗಿಸುವ ಕಥೆ' ಹೆಸರಿನಲ್ಲಿ ಕನ್ನಡಕ್ಕೆ ತಂದರು. ಅವರ ಈ ಕೃತಿಯನ್ನು ರೆ. ಎಫ್. ಕಿಟೆಲ್ ಅವರು ಬಹಳ ಮಾರ್ಮಿಕವಾಗಿ ಪ್ರಶಂಸೆ ಮಾಡಿದ್ದಾರೆ. ಅದು ರೆ. ಕಿಟೆಲ್‌ರ 'ಕನ್ನಡ ಸಾಹಿತ್ಯ ಕುರಿತು'– ಎಂಬ ಇಂಗ್ಲೀಷ ಪ್ರಬಂಧದಲ್ಲಿ ಉಲ್ಲೇಖಿಸಲ್ಪಟ್ಟಿದೆ. ಇದಲ್ಲದೆ, ಶೇಕ್ಸಪಿಯರನ 'ಮ್ಯಾಕ್-ಬೆತ್' ಎಂಬ ನಾಟಕವನ್ನು ಭಾಷಾಂತರಿಸಿದರು. ಗಣಿತ ವಿಷಯದಲ್ಲಂತೂ ಇವರದು ಎತ್ತಿದ ಕೈ. ಇವರು ರಚಿಸಿದ ಎರಡು ಗಣಿತ ಪುಸ್ತಕಗಳು ಬಹಳ ವರ್ಷ ಪಠ್ಯ ಪುಸ್ತಕಗಳಾಗಿದ್ದವು. ಮರಾಠೀ ಭಾಷೆಯನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದರು. ಈ ಭಾಷೆಯಲ್ಲಿಯೂ ಎರಡು ಪುಸ್ತಕಗಳನ್ನು ಬರೆದಿದ್ದಾರೆ :

(೧) **ಸಮೀಕರಣ ಸಂಗ್ರಹ** (೨) **ಸ್ನೇಹಾ ವಿಷಯೀ ನಿಬಂಧ:** ಈ ಸಂಗತಿಯನ್ನು **ಡಾ. ಶ್ರೀನಿವಾಸ ಹಾವನೂರ** ಅವರು ಪರಿಶ್ರಮವಹಿಸಿ ಪತ್ತೆ ಹಚ್ಚಿದ್ದಾರೆ. ಪುಣೆಯಲ್ಲಿಯ ವಿಶ್ರಾಮ ಭಾಗದಲ್ಲಿರುವ ಸರಕಾರೀ ವಿಭಾಗೀಯ ಗ್ರಂಥಾಲಯದಲ್ಲಿ ಈ ಪುಸ್ತಕಗಳು ಇವೆ ಎಂದು ತಿಳಿದು ಬಂದಿದೆ. **ಡೆ. ಚನ್ನಬಸವಪ್ಪನವರು ಬರೆದ ಕನ್ನಡ ಪುಸ್ತಕಗಳು ಇದುವರೆಗೆ ನಮಗೆ ಲಭ್ಯವಾಗಿಲ್ಲ.** ಈ ವಿಷಯದ ಬಗ್ಗೆ ಡಾ. ಎಂ. ಎಂ. ಕಲಬುರ್ಗಿ ಅವರು ಒಮ್ಮೆ ಸಂಯುಕ್ತ ಕರ್ನಾಟಕ ದಿನ ಪತ್ರಿಕೆಯಲ್ಲಿ ಪ್ರಕಟಿಸಿದ್ದೂ ಉಂಟು. ಮುಂದೆಯಾದರೂ ಈ ಗ್ರಂಥಗಳು ಎಲ್ಲಿ ಇವೆ ಎಂಬುದನ್ನು ನಮಗೆ ತಿಳಿಸಿದರೆ ಬಹಳ ಉಪಕಾರವಾಗುತ್ತದೆ. ಅವುಗಳ ಪುನರ್ ಮುದ್ರಣದ ಕಾರ್ಯವನ್ನು ಧಾರವಾಡದಲ್ಲಿಯ ಗಂಡು ಮಕ್ಕಳ ಸಹಕಾರೀ ಟ್ರೇನಿಂಗ್ ಕಾಲೇಜದ ಆವರಣದಲ್ಲಿರುವ ಡೆ. ಚೆನ್ನಬಸವಪ್ಪನವರ ಪ್ರತಿಷ್ಠಾನ ಸಂಸ್ಥೆಯು–ಕೈಕೊಳ್ಳಲಿದೆ.

ಇನ್ನೊಂದು ಮಹತ್ವದ ವಿಷಯ. ಕನ್ನಡದ ಅಚ್ಚು ಕೂಟಗಳೂ ವರ್ತಮಾನ ಪತ್ರಗಳೂ ನಿಧಾನವಾಗಿ ಹೊರಬರಲಾರಂಭಿಸಿದವು. ದಿ. **ಫ. ಗು. ಹಳಕಟ್ಟಿ** ಅವರು ಹೀಗೆ ಬರೆದಿದ್ದಾರೆ: (ಪುಟ ೧೭–೧೮).

"ಮೊದಲು ಕನ್ನಡ ಅಚ್ಚುಕೂಟ ತೆಗೆದವರು ಮಾದನಶೆಟ್ಟಿ ಕಲ್ಯಾಣಪ್ಪನವರು. ಅವರು ಅದರ ಬಗ್ಗೆ ಬಹಳ ಕಷ್ಟಪಟ್ಟರು, ಆದರೆ ಅದು ಸಿದ್ಧಿಸಲಿಲ್ಲ. ಆಮೇಲೆ ಹುಚ್ಚಯ್ಯಾ ವಿಭೂತಿಯವರು ಒಂದು ಕನ್ನಡ ಅಚ್ಚುಕೂಟನ್ನು ಇಟ್ಟು, ಅದರಲ್ಲಿ ಚಂದ್ರೋದಯವೆಂಬ ಒಂದು ವರ್ತಮಾನ ಪತ್ರವನ್ನು ಪ್ರಸಿದ್ಧಿಸಹತ್ತಿದರು. ಇದೇ ಕಾಲಕ್ಕೆ ಪುರಂದರದಾಸ, ಕನಕದಾಸ, ನಿಜಗುಣ ಶಾಸ್ತ್ರಗಳು, ಬತ್ತೀಸ ಪುತ್ಥಳಿ ಮೊದಲಾದ ಹಳೇ ಧಾರ್ಮಿಕ ಮತ್ತು ಪೌರಾಣಿಕ ಗ್ರಂಥಗಳು ಅಚ್ಚುಕೂಟಗಳಲ್ಲಿ ಹೊರಬೀಳಹತ್ತಿದವು. ಈ ಮೇರೆಗೆ ಉತ್ತರಕರ್ನಾಟಕದಲ್ಲಿ ನಡೆದ ಜ್ಞಾನ ಪ್ರಸಾರದ ಪ್ರಯತ್ನಗಳಿಗೆ ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷವಾಗಿ ಚನ್ನಬಸವಪ್ಪನವರೇ ಕಾರಣರಾದರು". ಇದೆಲ್ಲ ಚನ್ನಬಸವಪ್ಪನವರು ವಿದ್ಯಾಪ್ರಸಾರ ಹಾಗು ಕನ್ನಡ ಪ್ರಸಾರ ಕಾರ್ಯದಲ್ಲಿ ನೀಡಿದ ಅಮೋಘ ಕೊಡುಗೆ.

ಧಾರ್ಮಿಕ ವಿಚಾರಗಳು:

ಚನ್ನಬಸವಪ್ಪನವರು ನಾಸ್ತಿಕರಾಗಿದ್ದರೆಂದು ಕೆಲವು ಜನರು ತಿಳಿಯುವರು. ಉದಾಹರಣೆ: ಒಮ್ಮೆ ಅವರಿಗೆ ಕೋರ್ಟಿನಲ್ಲಿ ಸಾಕ್ಷಿ ಹೇಳುವ ಪ್ರಸಂಗ ಬಂತು. ಆಗ ದೇವರ ಹೆಸರಿನಿಂದ ಆಣೆ ಮಾಡಿ ನಿಜ ಹೇಳುತ್ತೇನೆ ಎಂದು ಅನ್ನಲಿಲ್ಲ: ನಾನು ಸತ್ಯವಾಗಿ ಮತ್ತು ಪ್ರಾಮಾಣಿಕವಾಗಿ ನಿಜ ಹೇಳುತ್ತೇನೆ ಎಂದು ಪ್ರತಿಜ್ಞೆ ಮಾಡಿ, ಸಾಕ್ಷಿ ಹೇಳಲಾರಂಭಿಸಿದರು. ಅಂದರೆ ಚನ್ನಬಸವಪ್ಪನವರು ಯಾವುದನ್ನು ಅಂಥ

ಶ್ರದ್ಧೆಯಿಂದ ಸ್ವೀಕರಿಸುತ್ತಿರಲಿಲ್ಲ, ಮೂಢ ಸಂಪ್ರದಾಯಗಳನ್ನೂ ಒಪ್ಪುತ್ತಿರಲಿಲ್ಲ. ದೇಶವಿದೇಶದ ತತ್ವಜ್ಞಾನಿಗಳ ಗ್ರಂಥಗಳನ್ನೂ ಅವಲೋಕಿಸಿದ್ದರು. ಇದರಿಂದಾಗಿ ಅವರು ದೇವರೆಂದರೆ ಸತ್ಯ ಎಂದು ತಿಳಿದವರಾಗಿದ್ದರು.

ಇನ್ನೊಂದು ಉದಾಹರಣೆ: ಒಮ್ಮೆ ಅವರು ಒಬ್ಬ ಶಾಸ್ತ್ರಿಯೊಡನೆ ಊಟ ಮಾಡುತ್ತಿದ್ದರು. ಆಗ ಎಡಗೈಯಿಂದ ತಂಬಿಗೆಯನ್ನು ಎತ್ತಿ ನೀರು ಕುಡಿದಾಗ ಶಾಸ್ತ್ರಿಗಳು ಹೀಗೆ ಅಂದರು: "ಅಣ್ಣನವರೇ ಎಡಗೈ ಮಾತ್ರ ಹಚ್ಚಿ ಹೀಗೆ ನೀರು ಕುಡಿದರೆ ಅದು ಶರೆ ಕುಡಿದ ಹಾಗಾಗುತ್ತದೆ. ಅದಕ್ಕೆ ಬಲಗೈ ಹಚ್ಚಿ ಕುಡಿಯ-ತಕ್ಕದ್ದು". ತಕ್ಷಣ ಚನ್ನಬಸವಪ್ಪನವರು—"ಅದು ಹಾಗೆ ಹೇಗಾದೀತು? ಒಂದು ತಂಬಿಗೆಯಲ್ಲಿ ಶರೇ ಹಾಕಿ ಬಲಗೈಯಿಂದ ಕುಡಿದರೆ, ನೀರು ಕುಡಿದಂತೆ ಆಗುವದೋ ಹ್ಯಾಗೆ?" ಎಂದು ಮರುಪ್ರಶ್ನೆ ಹಾಕಿದರು. ಆಗ ಶಾಸ್ತ್ರಿಗಳು—"ಅದು ಹೇಗಾದೀತು" ಅಂದರು. ಆಮೇಲೆ ಚನ್ನಬಸವಪ್ಪನವರು—"ಹಾಗಾದರೆ ನೀರು ಎಡಗೈಯಿಂದ ಕುಡಿದ ಮಾತ್ರಕ್ಕೆ ಅದು ಶರೆ ಹೇಗಾದೀತು? ಎಡಗೈಯಿಂದ ಕುಡಿದರೇನು? ಬಲಗೈ-ಯಿಂದ ಕುಡಿದರೇನು? ನೀರು ನೀರೆ, ಶರೆ ಶರೆಯೇ! ನೀರು ಇದ್ದದ್ದು ಶರೆಯಾಗಲಾರದು. ಶರೆ ಇದ್ದದ್ದು ನೀರಾಗಲಾರದು" ಎಂದು ತಿಳಿಸಿದರು. ಆದಕಾರಣ ಚನ್ನಬಸವಪ್ಪನವರು ಮೂಢ ರೂಢಿಗಳನ್ನು ತೀಕ್ಷ್ಣವಾಗಿ ಖಂಡಿಸುತ್ತಿದ್ದರು. ವಾದವಿವಾದದಲ್ಲಿ ಅವರು ಎತ್ತಿದ ಕೈಯೆನಿಸಿದ್ದರು.

ಮತ್ತೊಂದು ದೃಷ್ಟಾಂತ: ಧಾರವಾಡದಲ್ಲಿ ತೋಳಮಟ್ಟಿ ಸ್ವಾಮಿರಾಯರ ಮನೆಯಲ್ಲಿ ಲಗ್ನ ಸಮಾರಂಭ ನಡೆದಿತ್ತು. ಆಗ ಉತ್ತರಾದಿ ಮಠದ ಸ್ವಾಮಿಗಳೂ, ಶಾಸ್ತ್ರಿಗಳೂ ಪಂಡಿತರೂ ಬಂದಿದ್ದರು. ಆ ಸಮಯದಲ್ಲಿ ಚನ್ನಬಸವಪ್ಪನವರು (೧) ದೇವರ ಅಸ್ತಿತ್ವ (೨) ದೇವರ ನಾಸ್ತಿತ್ವ (೩) ಇಂದ್ರಿಯಗಳಲ್ಲಿ ಯಥಾರ್ಥ ಜ್ಞಾನವಿಲ್ಲ—ಎಂಬ ವಿಷಯಗಳನ್ನು ಕುರಿತು ವಾದ ಮಾಡಲು ಆಹ್ವಾನ ಕೊಟ್ಟರು. ಗೆದ್ದವರಿಗೆ ೨೦೦ ರೂಪಾಯಿಗಳ ಬಹುಮಾನವನ್ನೂ ಸಾರಿದರು. ನಿಯಮಿತ ವೇಳೆಗೆ ಚನ್ನಬಸಪ್ಪನವರು ವಿಠೋಬದೇವರ ಗುಡಿಯಲ್ಲಿ ವಾದಕ್ಕೆ ಕುಳಿತು ಕೊಂಡರು. ಆಗ ವಾದಕ್ಕೆ ಯಾರೂ ಬರಲಿಲ್ಲ. ಇದರಿಂದ ಚನ್ನಬಸವಪ್ಪನವರು ವಿದ್ವಾಂಸರೂ ವಾಕ್‌ಚತುರರೂ ಆಗಿದ್ದರು; ತಮ್ಮ ವಿಚಾರಗಳನ್ನು ಪ್ರಕಟ ಮಾಡಲಿಕ್ಕೆ ಹಿಂಜರಿಯುತ್ತಿದ್ದಿಲ್ಲ ಎಂದು ಸ್ಪಷ್ಟವಾಗುತ್ತದೆ.

ಒಂದು ಸಾರೆ ಜಿಗ್ಲರ ಪಾದ್ರಿ ಮನೆಯಲ್ಲಿ ಮುಸಲ್ಮಾನರ ಹಾಗು ಕ್ರೈಸ್ತರ ಒಂದು ಸಭೆ ಸೇರಿತ್ತು. ಆಗ ಚನ್ನಬಸವಪ್ಪನವರು—"ಕುರಾನವು ದೇವರಿಂದ ಆದುದೆಂದು ನನಗೆ ಮುಸಲ್ಮಾನರು ಸಿದ್ಧಮಾಡಿಕೊಟ್ಟರೆ ನಾನು ಮುಸಲ್ಮಾನನಾಗುವೆನು. ಕ್ರಿಶ್ಚನ್ನರು ತಮ್ಮ ಬೈಬಲ್ಲು ದೇವರಿಂದ ಪ್ರಣೀತವಾದುದೆಂದು ಸಿದ್ಧಪಡಿಸಿದರೆ,

ನಾನು ಕ್ರಿಶ್ಚನ್ನನಾಗುವೆನು" ಎಂಬ ಸವಾಲು ಹಾಕಿದರು. ಆದರೆ ಅವರ ಜೊತೆ ಯಾರೂ ವಾದಕ್ಕೆ ಸಿದ್ಧರಾಗಲಿಲ್ಲ.

ಒಂದು ಸಲ ಒಬ್ಬರು ಜಗತ್ತಿನಲ್ಲಿಯ ಧರ್ಮಗಳಲ್ಲಿ ಯಾವದು ಸತ್ಯ? ಎಂದು ಪ್ರಶ್ನಿಸಿದರು. ಆಗ ಚನ್ನಬಸವಪ್ಪನವರು, "ಅವೆಲ್ಲವೂ ಸಣ್ಣ ದೊಡ್ಡ ತೂತುಗಳುಳ್ಳ ಡೋಣಿಗಳಂತಿವೆ" ಎಂದು ಹೇಳಿದರು. ಎಲ್ಲ ಧರ್ಮಗಳಲ್ಲಿಯೂ ಕೆಲವೊಂದು ಲೋಪ ಗಳಿವೆ ಎಂಬುದು ಅವರ ಸ್ಪಷ್ಟ ಅಭಿಪ್ರಾಯ. ಹೀಗೆ ಚನ್ನಬಸವಪ್ಪನವರು ತಮಗೆ ಸರಿಕಂಡದ್ದನ್ನು ಸರಿ ಎಂತಲೂ, ಸುಳ್ಳು ಅನಿಸಿದ್ದನ್ನು ಸುಳ್ಳು ಎಂತಲೂ ಹೇಳುವ ಸ್ಪಷ್ಟವಾದಿಯಾಗಿದ್ದರು. ಅವರ ಕಾಲದಲ್ಲಿ ಇಂಥ ಧಾರ್ಮಿಕ ವಿಷಯಗಳ ಚರ್ಚೆಗಳು ಧಾರವಾಡದ ಓಣಿಓಣಿಗಳಲ್ಲಿ ಆಗಾಗ ನಡೆಯುತ್ತಿದ್ದವು.

ಸಾಮಾಜಿಕ ವಿಚಾರಗಳು :

ಚನ್ನಬಸವಪ್ಪನವರು ಸಾಮಾಜಿಕ ಬಂಧನಗಳನ್ನೂ ನೈತಿಕ ಕಟ್ಟುಗಳನ್ನೂ ಸಡಿಲಿಸಲು ಯತ್ನಿಸಲಿಲ್ಲ. ಸ್ವಧರ್ಮ ನಿಷ್ಠೆಯುಳ್ಳವರಾಗಿದ್ದರೂ, ಜನಹಿತ ಕಾರ್ಯ ಗಳಲ್ಲಿ ಸಮತೂಕ ಬುದ್ಧಿಯವರಾಗಿದ್ದರು. ಕೆಲವು ಜನರು ಉಣಕಲ್ ಗ್ರಾಮದಲ್ಲಿ ಕ್ರಿಶ್ಚನ್ನರಾಗಲು ಸಿದ್ಧರಾಗಿದ್ದರು. ಅದನ್ನು ಕೇಳಿ, ಚನ್ನಬಸವಪ್ಪನವರು ಅಲ್ಲಿಗೆ ಹೋದರು, ಆ ಜನರಿಗೆ ತಿಳಿವಳಿಕೆ ಕೊಟ್ಟು ಅವರ ಮನಸ್ಸನ್ನು ಬದಲಿಸಿದರು. ಹೀಗೆ ಹೋದ ಹೋದಲ್ಲಿ ಜನರಿಗೆ ನೀತಿಬೋಧೆ ಮಾಡುತ್ತಿದ್ದರು. ಪ್ರಸಂಗಕ್ಕನು ಸರಿಸಿ ಮಾತಾಡುವ ಚಾಣಾಕ್ಷತನ ಅವರಲ್ಲಿತ್ತು.

ಒಂದು ದಿನ ಅವರು ತಮ್ಮ ಮನೆಯ ಕಟ್ಟೆಯ ಮೇಲೆ ಕುಳಿತಿದ್ದರು. ಆಗ ಇಬ್ಬರು ಹೆಣ್ಣು ಮಕ್ಕಳು ಪರಸ್ಪರ ಬೈದಾಡ ಹತ್ತಿದರು. ಈ ಜಗಳ ಕೇಳಿ ಅವರು ಇಬ್ಬರಿಗೂ ಹೀಗೆ ಹೇಳಿದರು— "ಅವ್ವಾ, ನಿನ್ನಲ್ಲಿದ್ದ ಅತಿ ಹೆಚ್ಚಿನ ಬೈಗಳನ್ನು ಬಳಸು, ಇಲ್ಲವಾದರೆ ಬೇಡ", ಅವರಿಬ್ಬರೂ ಈ ಮಾತು ಕೇಳಿ ಸ್ತಬ್ಧರಾದರು. ಹೀಗೆ ಜನರಿಗೆ ತಿಳಿವಳಿಕೆ ಕೊಡುವಲ್ಲಿ ಅವರ ಮಾರ್ಮಿಕ ಮಾತುಗಳು ಪರಿಣಾಮಕಾರಿ ಯಾಗಿದ್ದವು. ಅವರು ಫಿರ್ತಿಯಲ್ಲಿ ಹಳ್ಳಿಗಳ ಜನಸಮುದಾಯವನ್ನು ಆಕರ್ಷಿಸು-ತ್ತಿದ್ದರು. ನಾನಾ ವಿಷಯಗಳ ಬಗ್ಗೆ ಬೋಧೆ ಮಾಡುತ್ತಿದ್ದರು. ದುರ್ಗುಣಿಗಳು ಅವರ ಹತ್ತಿರ ಸುಳಿಯುತ್ತಿದ್ದಿಲ್ಲ. ಆಕಸ್ಮಾತ್ತಾಗಿ ಅಂಥವರು ಬಂದರೆ, ಹರಿತಾದ ಶಬ್ದ ಗಳಿಂದ ಅವರನ್ನು ತಿರಸ್ಕರಿಸುತ್ತಿದ್ದರು.

ಒಬ್ಬ ಸ್ವಾಮಿಗಳು ಚನ್ನಬಸವಪ್ಪನವರನ್ನು ಕಾಣಲು ಬಂದರು. ಆಗ ಅವರು— "ಸಕ್ಕರೀಕರಣಿಯು ಪಾಯಖಾನೆಯಲ್ಲಿ ಬಿತ್ತು" ಎಂದು ವ್ಯಂಗ್ಯವನ್ನು ನುಡಿದರು. ಸ್ವಾಮಿಗಳು ಸಮಾಜ ಸುಧಾರಣಾ ಕಾರ್ಯಗಳನ್ನು ಮಾಡುತ್ತಿರಲಿಲ್ಲ

ಎಂಬುದೇ ಅವರ ಮನಸ್ಸಿನ ಒಳನೋಟ. ಹೀಗಾಗಿ ಅವರು ಹೋದಲ್ಲಿ ಮಠದ ಅಯ್ಯನವರಂತೂ ಊರು ಬಿಟ್ಟೇ ಹೋಗುತ್ತಿದ್ದರು. ಅವರ ದರ್ಪ ವಿಲಕ್ಷಣವಾಗಿತ್ತು. ಆದರಿಂದ ಆವರಿಗೆ "ಹುಲಿ ಚನಬಸಪ್ಪ" ಎಂದೂ ಕರೆಯತೊಡಗಿದರು.

ದಿ. ಫ. ಗು. ಹಳಕಟ್ಟಿಯವರು ಹೀಗೆ ಹೇಳಿದ್ದಾರೆ: (ಪುಟ ೨೫–೨೬).

"ಚನ್ನಬಸವಪ್ಪನವರು ಸಾಧಾರಣ ಒಬ್ಬ ಶಾಲೆಯ ಇನ್‌ಸ್ಪೆಕ್ಟರರು: ಅವರಿಗೆ ದೇಹ ದಂಡನೆಯ ಯಾವ ಅಧಿಕಾರವೂ ಇರಲಿಲ್ಲ. ಆದರೆ ಯಾವನು ಮನುಷ್ಯರಲ್ಲಿಯ ಶ್ರೇಷ್ಠ ಮನೋವೃತ್ತಿಗಳಿಗೆ ಉತ್ತೇಜನ ಕೊಟ್ಟು, ಅವರಲ್ಲಿ ಸದಸದ್ವಿಚಾರ–ವಿವೇಕ–ಸ್ವಾಭಿಮಾನಗಳನ್ನು ಹುಟ್ಟಿಸಿ, ಅವುಗಳ ಬಲದಿಂದ, ಅವರನ್ನು ತನ್ನ ಕಡೆಗೆ ಸೆಳೆದುಕೊಳ್ಳಲು ಸಮರ್ಥನಾಗುವನೋ ಅವನು ಬಡವನಿರಲಿ, ಬಲ್ಲಿದವನಿರಲಿ, ಉಚ್ಚನಿರಲಿ, ನೀಚನಿರಲಿ ಅವನ ಅಧಿಕಾರವು ಜನತೆಯ ಮೇಲೆ ಶಾಶ್ವತವಾಗಿ ಉಳಿಯುವದು, ಮತ್ತು ಇಂಥವನೇ ಸಮಾಜ ಚಾಲಕನಾಗಿ ದೇಶೋದ್ಧಾರಕನಾಗುವನು. ಇಂಥವರ ವರ್ಗದಲ್ಲಿ ಚೆನ್ನಬಸವಪ್ಪನವರನ್ನು ನಾವು ಎಣಿಸಬಹುದಾಗಿದೆ".

ಇನ್ನು ಲಿಂಗಾಯತ ಸಮಾಜ ಸುಧಾರಣೆಗೋಸ್ಕರ ಚನ್ನಬಸವಪ್ಪನವರು ಮಾಡಿದ ಪ್ರಯತ್ನಗಳನ್ನು ನೋಡಬಹುದು. ಕರ್ನಾಟಕದಲ್ಲಿ ಲಿಂಗಾಯತರ ಸಮಾಜ ದೊಡ್ಡದು. ಚನ್ನಬಸವಪ್ಪನವರು ಒಳ ಜಾತಿಭೇದಗಳನ್ನು ಮುರಿದು, ಸಮಭಾವ ಮೂಡಿಸಲು ಯತ್ನಿಸಿದರು. ಈ ಸಮಾಜದಲ್ಲಿಯ ಶಿಕ್ಷಣದ ಪ್ರಗತಿಗೂ ಕಾರಣರಾದರು. ಹಳ್ಳಿಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆಗಳು ಸ್ಥಾಪಿಸಲ್ಪಟ್ಟವು. ಲಿಂಗಾಯತ ವಿದ್ಯಾರ್ಥಿಗಳ ಸಂಖ್ಯೆಯೂ ಭರದಿಂದ ಬೆಳೆಯತೊಡಗಿತು. ದಿ. ಫ. ಗು. ಹಳಕಟ್ಟಿ ಅವರು ಬರೆದ ಪುಸ್ತಕದ ಆಧಾರದಿಂದ (ಪುಟ ೨೭) ಕೆಳಗಿನ ತುಲನಾತ್ಮಕ ಅಂಕಿ–ಅಂಶಗಳನ್ನು ನೋಡಬಹುದು. (೧೮೮೨–೮೩).

ಜಿಲ್ಲೆ	ಒಟ್ಟು ವಿದ್ಯಾರ್ಥಿಗಳ ಸಂಖ್ಯೆ	ಲಿಂಗಾಯತ ವಿದ್ಯಾರ್ಥಿಗಳ ಸಂಖ್ಯೆ	ಬ್ರಾಹ್ಮಣ ವಿದ್ಯಾರ್ಥಿಗಳ ಸಂಖ್ಯೆ
ಧಾರವಾಡ	೨೯೭೧೧	೧೩೫೫೮	೩೪೫೫
ಬೆಳಗಾಂವ	೧೦೧೮೧	೫೨೨೪	೨೭೧೯
ವಿಜಾಪುರ	೧೫೮೬೮	೩೩೩೬	೨೦೬೧

ಈ ಸಂಖ್ಯೆಗಳು–ಲಿಂಗಾಯತ ಸಮಾಜದಲ್ಲಿ, ಉತ್ತರ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣವು ಚೆನ್ನಾಗಿ ಬೆಳೆದದ್ದನ್ನು ತೋರಿಸುತ್ತಿವೆ. ಇದು ಚನ್ನಬಸವಪ್ಪನವರ ವಿಶೇಷ ಪ್ರಯತ್ನದ ಫಲ. ಅವರು ಪಾಶ್ಚಿಮಾತ್ಯ ಶಿಕ್ಷಣ ಪಡೆದವರಾದ್ದರಿಂದ ಅಂಥ

ಶಿಕ್ಷಣವನ್ನು ತಮ್ಮ ಸಮಾಜದಲ್ಲಿಯೂ ಬೆಳೆಸಬೇಕೆಂಬ ಹಂಬಲವನ್ನಿಟ್ಟುಕೊಂಡಿದ್ದರು. ಅದೇ ಕಾಲಕ್ಕೆ ಜಿಲ್ಲಾ ಸ್ಥಳಗಳಲ್ಲಿ ಸರಕಾರೀ ಹೈಸ್ಕೂಲುಗಳು ಮತ್ತು ಮಿಶನ್ ಸ್ಕೂಲುಗಳು ಆರಂಭವಾಗತೊಡಗಿದವು. ಲಿಂಗಾಯತ ವಿದ್ಯಾರ್ಥಿಗಳ ಸಂಖ್ಯೆ ಇಂಥ ಹೈಸ್ಕೂಲುಗಳಲ್ಲಿ ಹೆಚ್ಚಾಗಬೇಕೆಂದು ಅವರು ಬಯಸಿದರು.

ಆ ಕಾಲಕ್ಕೆ ಚಿತ್ರಕಲ್ಲದುರ್ಗದ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳ ಬೃಹನ್ಮಠದ ಪೀಠದಲ್ಲಿ ಶ್ರೀ ಮಹಾಲಿಂಗ ಸ್ವಾಮಿಗಳು ಆರೂಢರಾಗಿದ್ದರು. ಅವರು ದೇಶ ಸಂಚಾರಕ್ಕಾಗಿ ಹೊರಟರು. ಹೋದ ಹೋದಲ್ಲಿ ಅವರಿಗೆ ಸಂಭ್ರಮದ ಸ್ವಾಗತ, ಉತ್ಸವಗಳು ನಡೆದುವು. ಭಕ್ತಾದಿಗಳು ದರ್ಶನಕ್ಕಾಗಿ ಗುಂಪು ಗುಂಪಾಗಿ ಬರುತ್ತಿದ್ದರು, ದೊಡ್ಡ ಮೊತ್ತದ ಕಾಣಿಕೆಗಳನ್ನೂ ಸಲ್ಲಿಸುತ್ತಿದ್ದರು. ಸ್ವಾಮಿಗಳೂ ಉದಾರ ಮನಸ್ಸಿನಿಂದ ಗಣಾರಾಧನೆ, ಅನ್ನಸಂತರ್ಪಣೆ, ದಾನ-ಧರ್ಮಾದಿ ಕಾರ್ಯಗಳನ್ನು ಮಾಡುತ್ತಿದ್ದರು. ಮಹಾಸ್ವಾಮಿಗಳ ಸಂಚಾರ ದಲ್ಲಿ ಅನವಶ್ಯಕ ವೆಚ್ಚಗಳು ನಡೆದುವು. ಇದು ಚನ್ನಬಸವಪ್ಪನವರಿಗೆ ಸರಿದೋರಲಿಲ್ಲ. ಅವರು ಒಮ್ಮೆ ಮಹಾಸ್ವಾಮಿಗಳ ಸಂದರ್ಶನಕ್ಕೆ ಹೋದಾಗ ನಿರರ್ಥಕ ವೆಚ್ಚ ಮಾಡುವದರ ಅನವಶ್ಯಕತೆಯನ್ನೂ ಇಂಗ್ಲೀಷ ಶಿಕ್ಷಣದ ಅವಶ್ಯಕತೆಯನ್ನೂ ಒತ್ತಿ ಹೇಳಿದರು. ಮಹಾಸ್ವಾಮಿಗಳ ಹತ್ತಿರದ ಭಕ್ತರಿಗೆ ಈ ವಿಚಾರ ಹಿಡಿಸಲಿಲ್ಲ. ಅವರು "ಮ್ಲೇಂಛ ಭಾಷೆಯನ್ನು ಲಿಂಗಾಯತರಿಗೆ ಕಲಿಸಿ, ಚನ್ನಬಸವಪ್ಪನವರು ಧರ್ಮವನ್ನು ಕೆಡಿಸಿಬಿಡುವರು" ಎಂದು ನುಡಿದರು. ಚನ್ನಬಸವಪ್ಪನವರ ಹಿತನುಡಿ ಫಲಿಸಲಿಲ್ಲ.

ಆಮೇಲೆ ಮಹಾಸ್ವಾಮಿಗಳು ಉಳವಿ ಕ್ಷೇತ್ರದಲ್ಲಿ ಒಂದು ದೊಡ್ಡ ಗಣಾರಾಧನೆ ಯನ್ನು ಮಾಡಿಸುವ ಸಂಕಲ್ಪ ಮಾಡಿದರು. ಧಾರವಾಡದಿಂದ ಉಳವಿಗೆ ವೈಭವದ ಸವಾರಿ ಹೊರಟಿತು. ಅಲ್ಲಲ್ಲಿ ಸಂಭ್ರಮದ ಸ್ವಾಗತ, ಭಕ್ತರು ಕಾಣಿಕೆಗಳನ್ನು ಕೊಡು ತ್ತಿದ್ದರು. ಉಳವಿಯಲ್ಲಂತೂ ಅದ್ದೂರಿಯ ಮೆರವಣಿಗೆ ನಡೆಯಿತು. ವಾಸ್ತವ್ಯಕ್ಕಾಗಿ ಗುಡಾರ ಬಿಡಾರಗಳು ಸಾಲು ಸಾಲಾಗಿ ಹಾಕಲ್ಪಟ್ಟಿದ್ದವು. ಇಂಥ ದೊಡ್ಡ ಉತ್ಸವ ಆ ಪ್ರದೇಶದಲ್ಲಿ ಹಿಂದೆ ಆಗಿರಲೇ ಇಲ್ಲ, ಇಂಥ ವೈಭವದ ಸಮಾರಂಭಕ್ಕೆ ಲಿಂಗಾಯತ ಸಮಾಜದ ಗಣ್ಯವ್ಯಕ್ತಿಯಾಗಿದ್ದ ಚನ್ನಬಸವಪ್ಪನವರು ಹೋಗಲಿಲ್ಲ. ಆಮೇಲೆ ಸ್ವಾಮಿಗಳು ಅವರಿಗೆ ಹೇಳಿ ಕಳಿಸಿ, ಅವರನ್ನು ಉಳವಿಗೆ ಬರಮಾಡಿಕೊಂಡರು. ಮೃಷ್ಟಾನ್ನ ಭೋಜನ, ಆಡಂಬರದ ಸಭೆ, ಇವೆಲ್ಲವೂ ಚನ್ನಬಸವಪ್ಪನವರಿಗೆ ಸರಿ ದೋರಲಿಲ್ಲ. ಅವರು ಹೀಗೆ ಅಂದರು:

"ಇಷ್ಟು ಜನ ಸೇರಿ ಭೋಜನ ಸಮಾರಂಭದಲ್ಲಿ ತೊಡಗುವುದರಿಂದ ಉಳವಿ ಕ್ಷೇತ್ರವನ್ನು ಹೊಲಸು ಮಾಡುವದಲ್ಲದೆ, ಬೇರೆ ಏನನ್ನು ಸಾಧಿಸಿದಂತಾಯಿತು? ಅಗತ್ಯವಿಲ್ಲದವರಿಗೆ ಊಟ ಮಾಡಿಸುವದು ಹಣದ ಅಪವ್ಯಯ. ಹಾಗೆ ವೆಚ್ಚವಾಗುವ

ಹಣವನ್ನು ವೀರಶೈವ ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ವೆಚ್ಚಮಾಡಬೇಕು ವಿದ್ಯಾರ್ಥಿನಿಲಯ ಸ್ಥಾಪಿಸಬೇಕು-"

ಆಗ ಮಹಾಸ್ವಾಮಿಗಳ ಮನಸ್ಸು ಬದಲಾಯಿತು. ಚನ್ನಬಸವಪ್ಪನವರ ವಿಚಾರ ಮೆಚ್ಚಿಕೊಂಡರು. ಬೆಳಗಾಂವಿಯಲ್ಲಿ ವೀರಶೈವ ಬಡ ವಿದ್ಯಾರ್ಥಿಗಳಿಗಾಗಿ ಒಂದು ಬೋರ್ಡಿಂಗ್ (ವಿದ್ಯಾರ್ಥಿಗೃಹ) ತೆರೆಯುವ ಸಮಾಚಾರವನ್ನು ಜಗದ್ಗುರುಗಳು ಒಪ್ಪಿ, ಪ್ರತಿ ತಿಂಗಳು ೩೦೦ ರೂಪಾಯಿ ಧನ ಸಹಾಯ ನೀಡುವದಾಗಿ ತಿಳಿಸಿದರು. ಶ್ರೇಷ್ಠ ವಿಚಾರವುಳ್ಳ ಸಮಾಜದ ಹಿತಚಿಂತಕರು ಜನರ ದೂಷಣೆಗೆ ಅಂಜುವುದಿಲ್ಲ. ಅವರಲ್ಲಿ ಅಸದೃಶವಾದ ನೈತಿಕಧೈರ್ಯ ಇರುತ್ತದೆ. ಇದೊಂದು ಅಂಥ ಆದರ್ಶದ ದೃಷ್ಟಾಂತ. ಬಳಿಕ ಚನ್ನಬಸವಪ್ಪನವರು ಸಂತೋಷ ಭರಿತರಾಗಿ ಬೆಳಗಾವಿಗೆ ಮರಳಿ ಬಂದರು. ಒಂದು ಬಾಡಿಗೆ ಮನೆ ಹಿಡಿದು, ವಿದ್ಯಾರ್ಥಿಗೃಹವನ್ನು ಸ್ಥಾಪಿಸಿದರು. ಇದು ಕನ್ನಡನಾಡಿನಲ್ಲಿಯೇ ವೀರಶೈವ ಬಡವಿದ್ಯಾರ್ಥಿಗಳ ಪ್ರಪ್ರಥಮ ಬೋರ್ಡಿಂಗ್. ಅದರ ಸಂಸ್ಥಾಪಕರು ಚನ್ನಬಸವಪ್ಪನವರೇ ! ಮೊದಲು ಯೋಗ್ಯ ವಿದ್ಯಾರ್ಥಿಗಳನ್ನು ಹುಡುಕಿ ತರುವುದು ಕಷ್ಟದ್ದೆನಿಸಿತು. ಏಕೆಂದರೆ, ಉತ್ತರ ಕರ್ನಾಟಕದಲ್ಲಿಯ ಲಿಂಗಾಯತರಿಗೆ ಆಂಗ್ಲ ಭಾಷಾಭ್ಯಾಸದ ಆರಂಭದ ಕಾಲ. ಆದಾಗ್ಯೂ ಚನ್ನಬಸವಪ್ಪನವರು ವಿದ್ಯಾಧಿಕಾರಿಯಾಗಿದ್ದುದರಿಂದ, ಅವರು ಮಿಂಚಿನ ಸಂಚಾರ ಕೈಕೊಂಡು ೫೦ ವಿದ್ಯಾರ್ಥಿಗಳನ್ನು ಕೂಡ ಹಾಕಿದರು. ಲಿಂಗಾಯತ ಸಮಾಜವು ಪಾಶ್ಚಾತ್ಯ ವಿದ್ಯಾಭ್ಯಾಸದಲ್ಲಿ ಎಂದೂ ಮುಂದುವರಿಯಲಾರದು ಎಂಬ ಕಲ್ಪನೆಯ ಜನರೂ ಇದ್ದರು. ಕೆಲವರು ಹೀಗೂ ಕೇಳಿದ್ದುಂಟು : ಚನ್ನಬಸವಪ್ಪನವರು ೫೦ ಕತ್ತೆಗಳನ್ನು ಕೂಡಿ ಹಾಕಿ, ಅವುಗಳಿಗೆ ದಿನಾಲು ಕರಾರೀ ಮಾಡಿಸಿ, ದಾಣೇ ತಿನಿಸಿ, ಜೋಪಾನ ಮಾಡಿದ ಮಾತ್ರದಿಂದ ಅವು ಎಂದಾದರೂ ಕುದುರೆಗಳಾಗಬಹುದೋ ?" ಹೀಗೆ ಹಾಸ್ಯ ಮಾಡುವವರೂ ಇದ್ದರು. ಚನ್ನಬಸವಪ್ಪನವರು ಮಾತ್ರ ಇಂಥ ಮಾತುಗಳಿಗೆ ಕಿವಿಗೊಡಲಿಲ್ಲ. ತಮ್ಮ ಕಾರ್ಯದಲ್ಲಿ ಸದಾ ತತ್ಪರರಾಗಿ ವಿದ್ಯಾರ್ಥಿಗೃಹದ ವ್ಯವಸ್ಥೆಯನ್ನು ಚೆನ್ನಾಗಿ ನೋಡಿಕೊಂಡರು. ಗಂಗಾಧರ ಮಡಿವಾಳೇಶ್ವರ ತೂರಮರಿ ಮತ್ತು ಮಡಿವಾಳಯ್ಯ ಪಂಡಿತ ಇವರು ಅದರ ಮೇಲ್ವಿಚಾರಣೆ ಮಾಡುತ್ತಿದ್ದರು. ಚಿತ್ರಕಲ್ಲ-ದುರ್ಗದ ಮಹಾಸ್ವಾಮಿಗಳು ಪ್ರತಿ ತಿಂಗಳು ೩೦೦ ರೂಪಾಯಿಗಳನ್ನು ಚನ್ನಬಸವಪ್ಪನವರಿಗೆ ಕಳಿಸಿಕೊಡುತ್ತಿದ್ದರು. ವಿದ್ಯಾರ್ಥಿನಿಲಯವು ಉತ್ತಮ ಸ್ಥಿತಿಯಲ್ಲಿತ್ತು. ಮುಂದೆ ೨ ವರ್ಷಗಳಲ್ಲಿಯೇ ಮಹಾಸ್ವಾಮಿಗಳು ಲಿಂಗೈಕ್ಯರಾದರು. ಬಳಿಕ ಆ ನಿಲಯವನ್ನು ನಡೆಸುವ ಸಂಪೂರ್ಣ ಭಾರವು ಚನ್ನಬಸಪ್ಪನವರ ಮೇಲೆಯೇ ಬಿತ್ತು. ಈ ವಿದ್ಯಾರ್ಥಿನಿಲಯಕ್ಕಾಗಿ ಅವರು ತ್ಯಾಗವನ್ನೂ ಮಾಡಬೇಕಾಯಿತು. ಏಕೆಂದರೆ ಚನ್ನಬಸವಪ್ಪನವರು ಧನಿಕರಾಗಿದ್ದಿಲ್ಲ. ಅದರ ವ್ಯವಸ್ಥೆ ಮಾಡುವದಕ್ಕಾಗಿ ಸಾಲ ಮಾಡಿಕೊಂಡರು. ಸಾಲದ ಬಗ್ಗೆ ಕೋರ್ಟಿನ ಡಿಕ್ರಿಗಳೂ ಬಂದವು. ಆದಕಾರಣ

ಅವರು ತಮ್ಮ ಮನೆಯನ್ನು ಮಾರಿ ಸಾಲ ತೀರಿಸಿದರು. ಅಷ್ಟರಲ್ಲಿ ಅವರಿಗೆ ಧಾರವಾಡಕ್ಕೆ ವರ್ಗವಾಯಿತು. ವಿದ್ಯಾರ್ಥಿನಿಲಯವು ನಿಂತುಹೋಯಿತು. ಹೀಗೆಂದು ದಿ. ಫ. ಗು. ಹಳಕಟ್ಟಿ ಅವರು ಬರೆದಿದ್ದಾರೆ. ಇದರ ಬಗ್ಗೆ ದಿ. ಅರಟಾಳ ರುದ್ರಗೌಡರ ಟಿಪ್ಪಣೆಗಳಲ್ಲಿ ಹೀಗಿದೆ: "ಚನ್ನಬಸವಪ್ಪನವರು ತಮ್ಮ ಸ್ವಂತ ಖರ್ಚಿನಿಂದ ಬೋರ್ಡಿಂಗನ್ನು ನಡೆಸಿದರು. ಅದರ ಸಲುವಾಗಿ ಅವರು ಸಾಲ ಮಾಡಿಕೊಂಡರು. ತಮ್ಮ ಮನೆ ಮಾರಿದರು. ಅವರಿಗೆ ಇಬ್ಬರು ಹೆಂಡತಿಯರು ಇದ್ದರು. ಮೊದಲನೆಯ ಹೆಂಡತಿಯು ಸಾಲ ತೀರಿಸುವದಕ್ಕಾಗಿ ತನ್ನ ಆಭರಣಗಳನ್ನೆಲ್ಲ ಚನ್ನಬಸವಪ್ಪನವರಿಗೆ ಕೊಟ್ಟಳು. ಎರಡನೆಯ ಹೆಂಡತಿಯು ಮಾತ್ರ ಆಭರಣಗಳನ್ನು ಕೊಡಲಿಲ್ಲ ಆಗ ನಾನು ಮಧ್ಯಸ್ಥಿಕೆ ವಹಿಸಿ ಆಭರಣಗಳನ್ನು ಕೊಡಲು ಮನವೊಲಿಸಿದೆ. ಆಮೇಲೆ ಅವೆಲ್ಲ ಆಭರಣಗಳನ್ನು ಮಾರಿ ಚನ್ನಬಸವಪ್ಪನವರು ಸಾಲದ ಭಾರವನ್ನು ಇಳಿಸಿ ಕೊಂಡರು".

ಒಟ್ಟಿನಲ್ಲಿ ಚನ್ನಬಸವಪ್ಪನವರು ವಿದ್ಯಾರ್ಥಿನಿಲಯಕ್ಕೋಸ್ಕರ ತಮ್ಮ ಆಸ್ತಿ-ಪಾಸ್ತಿಗಳನ್ನೂ ಕಳೆದುಕೊಂಡರು. ಎಷ್ಟೊಂದು ಕಷ್ಟಗಳನ್ನು ಸಮಾಜದ ಹಿತಕ್ಕಾಗಿ ಅವರು ಅನುಭವಿಸಿದರು. ತ್ಯಾಗ ಮಾಡಿದರು ಎಂಬುದಕ್ಕೆ ಇದೇ ಸಾಕ್ಷಿ! ಚನ್ನಬಸವಪ್ಪ ನವರು ಬಡವರೇ ಆಗಿ ಬಾಳಿದರು. ಅವರ ಸಾಹಸದ ಫಲ ಸಮಾಜಕ್ಕೆ ದೊರೆಯಿತು. ಆ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳು ಬಡವರಾಗಿದ್ದುದರಿಂದ ತಮ್ಮ ವಿದ್ಯಾಭ್ಯಾಸ-ವನ್ನು ಹೇಗಾದರೂ ಮುಗಿಸಬೇಕೆಂಬ ಹಂಬಲವುಳ್ಳವರಾಗಿದ್ದರು. ಇವರಲ್ಲಿ ಅನೇಕರು ಮ್ಯಾಟ್ರಿಕ್ ಪರೀಕ್ಷೆ ಇಲ್ಲವೆ ಶಿಕ್ಷಕರ ಟ್ರೇನಿಂಗ ಪರೀಕ್ಷೆ ಪಾಸಾಗಿ, ಬೇರೆ ಬೇರೆ ಖಾತೆ ಗಳಲ್ಲಿ ಸೇರಿಕೊಂಡರು, ಕೆಲವರು ಶಾಲಾ ಶಿಕ್ಷಕರೂ ಆದರು. ಮುಂದೆ ೧೮೮೩ ರಲ್ಲಿ ಶ್ರೀ ಗುರುಸಿದ್ದಪ್ಪ ಬಸವಣ್ಣೆಪ್ಪ ಗಿಲಗಂಚಿ, ರಾ. ಬ. ರುದ್ರಗೌಡ ಚನವೀರಗೌಡ ಅರಟಾಳ— ಇವರು ಧಾರವಾಡದಲ್ಲಿಯ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯನ್ನು ಸ್ಥಾಪಿಸಿದರು. ಇವರು ಚನ್ನಬಸವಪ್ಪನವರ ಸತ್‌ಕಾರ್ಯಗಳಿಂದ ಪ್ರೇರಿತರಾದವರು.

ಚೆನ್ನಬಸಪ್ಪನವರ ಕಾಲಕ್ಕೆ ಧಾರವಾಡದಲ್ಲಿ ಒಂದು ಸರಕಾರೀ ಬುಕ್ ಡಿಪೋ ಇತ್ತು. ಅದರ ಮೇಲ್ವಿಚಾರಣೆಯು ಅವರ ಕಡೆಗೆ ಇತ್ತು. ಅದರ ಕಾರಕೂನನು ಚೆನ್ನಬಸಪ್ಪನವರಿಗೆ ತಿಳಿಯದಂತೆ ೪–೬ ವರ್ಷಗಳಲ್ಲಿ ೪–೫ ಸಾವಿರ ರೂಪಾಯಿಗಳ ಅಪರಾತಪರಾ ಮಾಡಿದ್ದನು. ಈ ಡಿಪೋದ ಜಮಾಖರ್ಚಿನ ಪುಸ್ತಕದಲ್ಲಿ ಚೆನ್ನ ಬಸಪ್ಪನವರ ಸಹಿ ಇರುತ್ತಿತ್ತು. ಕಾರಕೂನನು ತಾನು ಮಾಡಿದ ಮೋಸವು ಜನತೆಗೆ ಗೊತ್ತಾದ ಮೇಲೆ, ಎಲ್ಲಿಯೋ ಓಡಿಹೋಗಿಬಿಟ್ಟನು. ಅವನ ಜಾಮೀನದಾರರಿಂದಲೂ ಹಣ ವಸೂಲು ಮಾಡುವುದಾಗಲಿಲ್ಲ. ಚೆನ್ನಬಸಪ್ಪನವರು ಸರಕಾರಕ್ಕೆ ಈ ರೀತಿ ತಿಳಿಸಿದರು. (ದಿ. ಫ. ಗು. ಹಳಕಟ್ಟಿ ಅವರ ಪುಸ್ತಕದಿಂದ):

"ಈ ಡಿಪೋದ ತಪಾಸಣೆಯು ನನ್ನ ಕಡೆಗೆ ಇದ್ದು, ನಾನು ನನ್ನ ಹೆಡ್‌ಕ್ಲಾರ್ಕ ನನ್ನು ನಂಬಿ, ಈ ಜಮಾಖರ್ಚಿನ ಪುಸ್ತಕಗಳ ಮೇಲೆ ಸಹಿ ಮಾಡಿದ್ದು ನನ್ನ ತಪ್ಪು ಇರುತ್ತದೆ. ನಾನು ಸ್ವತಃ ಈ ಲೆಖ್ಖವನ್ನು ತಪಾಸು ಮಾಡದಿದ್ದರೂ ಕಳೆದುಹೋದ ಹಣಕ್ಕೆ ನಾನೇ ಜವಾಬುದಾರನಾಗಿದ್ದೇನೆ. ಆದ್ದರಿಂದ ನನಗೆ ಸಲ್ಲತಕ್ಕ ಪಗಾರದಲ್ಲಿ ನನ್ನ ಮನೆತನದ ವೆಚ್ಚಕ್ಕೆ ೬೦ ರೂ. ಮಾತ್ರ ಬಿಟ್ಟುಕೊಟ್ಟು, ಉಳಿದದ್ದನ್ನೆಲ್ಲ ಕಡಿಮೆ ಬಿದ್ದ ಹಣವನ್ನು ಮುಟ್ಟಿಸಿಕೊಳ್ಳುವುದಕ್ಕಾಗಿ ಉಪಯೋಗಿಸಬೇಕು." ಆದರೆ ಚೆನ್ನಬಸವಪ್ಪನವರು ವಿದ್ಯಾಖಾತೆಗೆ ಸಲ್ಲಿಸುತ್ತಿದ್ದ ಮಹತ್ ಕಾರ್ಯಗಳನ್ನೂ, ಅವರ ಸತ್ಯನಿಷ್ಠೆ, ಪ್ರಾಮಾಣಿಕತನ, ಸರಳತೆ ಮೊದಲಾದ ಸದ್ಗುಣಗಳನ್ನೂ ಮೆಚ್ಚಿಕೊಂಡು ಆ ಹಣವನ್ನು ಅವರಿಂದ ಪಡೆಯಲಿಲ್ಲ. ಇದು ಸರಕಾರವು ಅವರಲ್ಲಿಟ್ಟ ವಿಶ್ವಾಸದ ಕುರುಹು ಅಲ್ಲವೇ?

ಚೆನ್ನಬಸವಪ್ಪನವರು ಬಹುಕಾಲ ಬಾಳಲಿಲ್ಲ. ತಮ್ಮ ೪೬ನೇ ವಯಸ್ಸಿನಲ್ಲಿಯೇ ಶಿವಾಧೀನರಾದರು. ಬಹಳಷ್ಟು ಜನರು ಅತಿಯಾಗಿ ಹಳಹಳಿಸಿದರು. ಒಬ್ಬ ದೊಡ್ಡ ಮನುಷ್ಯನಿಗೆ ಕೊಡಬೇಕಾದ ಮಾನ ಮರ್ಯಾದೆಗಳನ್ನು ಧಾರವಾಡದ ಎಲ್ಲ ಜಾತಿಯ ಜನರು ಕೊಟ್ಟು, ತಮ್ಮ ಪ್ರೀತಿ, ಆದರಗಳನ್ನು ವ್ಯಕ್ತಪಡಿಸಿದರು. ಈ ಮಹಾ ಪುರುಷನ ಅಂತ್ಯಯಾತ್ರೆ ಕಣ್ಣೀರಕೋಡಿ ಹರಿಸಿತು. ಅಂದಿಗೆ ಕನ್ನಡ ಕುಲದೀಪ ನಂದಿದರೂ, ಅವರು ಹಚ್ಚಿದ ಕನ್ನಡದ ದೀಪ ಇಂದಿಗೂ ಪ್ರಜ್ವಲಿಸುತ್ತಿದೆ. ಅದು ಎಂದೂ ನಂದಲಾರದ ದೀಪ!

ಚನ್ನಬಸವಪ್ಪನವರ ಕಾರ್ಯದ ಘನತೆ ಮತ್ತು ವ್ಯಕ್ತಿತ್ವ:

ದಿ. ಡೆ. ಚನ್ನಬಸವಪ್ಪನವರು ವಿದ್ಯಾಖಾತೆಯಲ್ಲಿ ೨೪ ವರ್ಷ ಸೇವೆ ಸಲ್ಲಿಸಿದರು. ಅದರಲ್ಲಿ ೧೪ ವರ್ಷ ಡೆಪ್ಯೂಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಎಂದು ಕಾರ್ಯ ನಿರ್ವಹಿಸಿದರು. 'ಡೆಪ್ಯೂಟಿ' ಹುದ್ದೆಯಲ್ಲಿ ಅವರು ಮಾಡಿದ ಕಾರ್ಯವು ಜನಮನ ಸೆಳೆಯಿತು. ಅಂತೆಯೇ 'ಡೆಪ್ಯೂಟಿ ಚನ್ನಬಸವಪ್ಪನವರು' ಎಂಬ ಹೆಸರೇ ಜನತೆಯ ಸ್ಮರಣೆಯಲ್ಲಿ ಉಳಿಯುವಂತಾಯಿತು. ಮುಂಬಯಿ ಕರ್ನಾಟಕದ ಪ್ರದೇಶದಲ್ಲಿ ಕನ್ನಡವು ಮಾತೃಭಾಷೆ ಎಂಬ ಅರಿವೂ ಜನತೆಯಲ್ಲಿ ಅಷ್ಟೊಂದು ಇರಲಿಲ್ಲ. ಅದು ಪೇಶ್ವೆಯರ ಆಳ್ವಿಕೆಯ ಪ್ರಭಾವದ ದ್ಯೋತಕ. ಬ್ರಿಟಿಷ್‌ರ ಆಳ್ವಿಕೆಯು ಆರಂಭವಾಗಿದ್ದರೂ, ಮರಾಠಿ ಭಾಷೆಯೇ ಜನರ ಬಾಯಲ್ಲಿ, ಬರಹಗಳಲ್ಲಿ ಉಳಿದುಕೊಂಡಿತ್ತು. ಮರಾಠಿ ಮಾತಾಡುವದು, ಕಲಿಯುವದು ಗೌರವದ ಲಕ್ಷಣಗಳೆಂಬ ಭ್ರಮೆ ಆವರಿಸಿತ್ತು. ೧೯ ನೇ ಶತಮಾನದಲ್ಲಿ ಕನ್ನಡಕ್ಕೆ ಕತ್ತಲೆ ಕವಿದಿತ್ತು. ಇಂಥ ಗ್ರಹಣವನ್ನು ಬಿಡಿಸಬಲ್ಲ ಒಬ್ಬ ವ್ಯಕ್ತಿಯ ಜನನ ಅಗತ್ಯವಾಗಿತ್ತು. ಅದು ಈಶ್ವರನ ಸಂಕಲ್ಪವೋ ಏನೋ ಕನ್ನಡ ಭುವನೇಶ್ವರಿಯ ಕರೆಯೋ ಏನೋ? ಕಾಲಮಹಿಮೆಯೋ ಕನ್ನಡದ ಕೆಚ್ಚಿನ

ಹಿರಿಮೆಯೋ ? ಯಾವುದೋ ಅವ್ಯಕ್ತಸ್ವರೂಪದ ಶಕ್ತಿ ಪುರುಷರಾಗಿ, ಕೆಚ್ಚಿದೆಯ ಕನ್ನಡಿಗರಾಗಿ ಅಹೋರಾತ್ರಿ ಕನ್ನಡದ ಸೇವೆ ಮಾಡಿದ ಪುಣ್ಯ ಪುರುಷರು ಡೆ. ಚನ್ನಬಸವಪ್ಪನವರು. ಕನ್ನಡದ ನೆಲದಲ್ಲಿಯೇ ಆಳಿಯುತ್ತಿರುವ ಕನ್ನಡದ ನಂದಾ-ದೀಪವನ್ನು ಮತ್ತೆ ಹಚ್ಚಿದ ಶ್ರೇಯಸ್ಸು ಅವರದು. ಕನ್ನಡಿಗರ ಹೃನ್ಮಂದಿರದಲ್ಲಿ ಕನ್ನಡ ಜ್ಯೋತಿ ಮತ್ತೆ ಬೆಳಗುವಂತೆ ಮಾಡಿದ ಆಧುನಿಕ ಕನ್ನಡದ ಆದಿಪುರುಷ ! ಈ ಭಾಗದ ಜನತೆಯ ಮಾತೃಭಾಷೆಯು ಕನ್ನಡ ಎಂಬ ಮಾತನ್ನು ರಸೆಲ್ ಸಾಹೇಬರಿಗೆ ಮನ-ವರಿಕೆ ಮಾಡಿಕೊಟ್ಟ ಕೀರ್ತಿ ಅವರದು. ರಸೆಲ್ ಸಾಹೇಬರೂ ಅವರ ಅಭಿಪ್ರಾಯ ಗಳಿಗೆಲ್ಲ ಮನ್ನಣೆ ನೀಡಿದರು. ಕನ್ನಡದ ಪ್ರಗತಿಗೆ ನಾನಾಮುಖಗಳಿಂದ ಅವರೂ ನೆರವು ನೀಡಿದರು. ರಸೆಲ್‌ರ ಪ್ರೋತ್ಸಾಹ, ಚನ್ನಬಸವಪ್ಪನವರ ಅಮಿತ ಉತ್ಸಾಹ ಕನ್ನಡಿಗರ ಜೀವನಕ್ಕೆ ನೂತನ ಚೇತನ ಕೊಟ್ಟವು. ಕನ್ನಡಕ್ಕೆ ಸಂಜೀವನಿ ಲಭಿಸಿತು ಇದುವೆ ಕನ್ನಡದ ಅರುಣೋದಯ ಧಾರವಾಡ ಪ್ರದೇಶದಲ್ಲಿ !

ಮುಂಬಯಿ ಪ್ರಾಂತದ ದಕ್ಷಿಣ ಭಾಗದ ವಿದ್ಯಾಧಿಕಾರಿ (ಎ. ಇ.) ರಸೆಲ್ ಸಾಹೇಬರು ಡೆ. ಚನ್ನಬಸವಪ್ಪನವರ ಕಾರ್ಯ ಭಾರವನ್ನೂ, ಅದರ ಹಿಂದೆ ಪ್ರೇರಕ ಶಕ್ತಿಯಾಗಿದ್ದ ಅವರ ಕಳಕಳಿಯನ್ನೂ ಚೆನ್ನಾಗಿ ಅರಿತುಕೊಂಡಿದ್ದರು. ಅಂತೆಯೇ ದೀರ್ಘಕಾಲದ ರಜೆಯ ಮೇಲೆ ವಿಲಾಯಿತಿಗೆ ಹೋಗುವಾಗ, ಸರಕಾರಕ್ಕೆ ಶಿಫಾರಸ ಮಾಡಿ, ಅವರು ಚನ್ನಬಸವಪ್ಪನವರನ್ನೇ ತಮ್ಮ ಸ್ಥಾನದಲ್ಲಿ ನೇಮಿಸುವಂತೆ ಏರ್ಪಾಡು ಮಾಡುತ್ತಿದ್ದರು. ಅಷ್ಟೊಂದು ವಿಶ್ವಾಸ ಅವರೀರ್ವರಲ್ಲಿ ! ಆಗಿನ ಕಾಲದಲ್ಲಿ ಮುಂಬಯಿ ಸರಕಾರದ ವಿದ್ಯಾಖಾತೆಯಲ್ಲಿ ಉಚ್ಚಸ್ಥಾನ ಪಡೆದ ಪ್ರಥಮ ಕನ್ನಡಿಗ ಅಧಿಕಾರಿ ಚನ್ನಬಸವಪ್ಪನವರು !

ಕನ್ನಡ ಪಂಡಿತರನ್ನು ಗುರುತಿಸಿ, ರಸೆಲ್‌ರ ಒಪ್ಪಿಗೆ ಪಡೆದು, ಅವರನ್ನು ಕನ್ನಡ ಪಠ್ಯಪುಸ್ತಕಗಳ ರಚನಾ ಕಾರ್ಯದಲ್ಲಿ ತೊಡಗಿಸಿದರು. ಅಲ್ಲದೆ, ಅವರೂ ಗಣಿತ ವಿಷಯದಲ್ಲಿ ಉತ್ತಮ ಪುಸ್ತಕಗಳನ್ನು ಬರೆದಿದ್ದಾರೆ. ಆಂಗ್ಲ ಶ್ರೇಷ್ಠ ಕವಿ, ಷೇಕ್-ಸ್ಪಿಯರ ಬರೆದ 'ಮ್ಯಾಕ್‌ಬೆತ್' ಮತ್ತು 'ಕಾಮೆಡಿ ಆಫ್ ಎರರ್ಸ್' ಎಂಬ ಎರಡು ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿದರು. 'ನಗದವರನ್ನು ನಗಿಸುವ ಕತೆ' ಎಂಬ ಪುಸ್ತಕವು ಹೆಸರಾಗಿದೆ. ಹೀಗೆ ತಾವೂ ಬರೆಯುತ್ತಿದ್ದರು. ಬರಹಗಾರರ ಬಳಗವನ್ನೂ ಕಟ್ಟಿದರು. ಇದು ಅವರ ಸಂಘಟನಾ ಶಕ್ತಿಯ ನಿದರ್ಶನ. ಮುಂಬಯಿ ಸರಕಾರದ ವಿದ್ಯಾ ಇಲಾಖೆಯ ಮುಖ್ಯ ಅಧಿಕಾರಿ ಅಂದರೆ ಡೈರೆಕ್ಟರ ಆಗಿ ನಿವೃತ್ತಿ ಹೊಂದಿದ, ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಯ ಸ್ಥಾನದಲ್ಲಿಯೂ ಸೇವೆ ಸಲ್ಲಿಸಿದ, ಪಂಜಾಬದ ರಾಜ್ಯಪಾಲರಾಗಿ ನಿವೃತ್ತಿ ಪಡೆದ, ಪದ್ಮಶ್ರೀ ಡಾ. ಡಿ. ಸಿ. ಪಾವಟೆ ಅವರು ಗೋಕಾಕದ ನಾಡಿನವರೇ ! ೧೮೦೭ರಲ್ಲಿ ಅವರು ಪ್ರಾಥಮಿಕ ಶಾಲೆಯ ವಿದ್ಯಾರ್ಥಿ ಯಾಗಿದ್ದರು. ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದುದರಿಂದ, ಅವರಿಗೆ ಚನ್ನಬಸವಪ್ಪ

ನವರ ಗಣಿತ ಪುಸ್ತಕವು ಪಾರಿತೋಷಕವಾಗಿ ದೊರೆಯಿತು. ಇದು ಪಾವಟೆಯವರಿಗೆ ಪ್ರೇರಕ ಶಕ್ತಿಯಾಗಿ ಪರಿಣಮಿಸಿತು. ಏಕೆಂದರೆ, ಪಾವಟೆಯವರು ಮುಂದೆ ಖ್ಯಾತ ಗಣಿತ ಶಾಸ್ತ್ರಜ್ಞರೂ ಆದರು. ಇದನ್ನು ಅವರು ತಮ್ಮ ಆತ್ಮಚರಿತ್ರೆಯಲ್ಲಿ ಹೆಮ್ಮೆಪಟ್ಟು ಬರೆದಿದ್ದಾರೆ. ಚನ್ನಬಸವಪ್ಪನವರು ಮುಂಬರುವ ಖ್ಯಾತ ವ್ಯಕ್ತಿಗಳಿಗೆ ಸ್ಫೂರ್ತಿಯ ಸೆಲೆಯಾಗಿದ್ದರೆಂಬುದಕ್ಕೆ ಇದೂ ಒಂದು ನಿದರ್ಶನ.

ಚನ್ನಬಸವಪ್ಪನವರು ಧಾರವಾಡದ ಕನ್ನಡ ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜಿನ ಪ್ರಪ್ರಥಮ ಪ್ರಿನ್ಸಿಪಾಲರು. ಶಿಕ್ಷಕರಿಗೆ ಯೋಗ್ಯದೀಕ್ಷೆಕೊಟ್ಟ ಆದ್ಯ ಪುರೋಹಿತರೂ ಚನ್ನಬಸವಪ್ಪನವರೇ! ಕನ್ನಡದ ಸೇವೆಯಲ್ಲಿ ತೊಡಗುವ ಕನ್ನಡಿಗರ ಗುಂಪನ್ನು ಅವರು ಸಿದ್ಧಗೊಳಿಸಿದರು. ಕನ್ನಡ ಶಾಲೆಗಳನ್ನು ಹೆಚ್ಚಿಸಿದರು. ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಲು ಪ್ರೇರಣೆ ನೀಡಿದರು. ಕನ್ನಡ ಸಾಹಿತಿಗಳಿಗೆ ಸೂಕ್ತ ಸ್ಥಾನಮಾನ ಒದಗಿಸಿಕೊಟ್ಟರು. ಇದೆಲ್ಲ ಕನ್ನಡ ಭಾಷೆಯ ಹೆಚ್ಚಳದ ಹೋರಾಟದ ಸಂಸ್ಮರಣೆ. ಅದರ ಅಧ್ವರ್ಯು ಚನ್ನಬಸವಪ್ಪನವರು. ಧಾರವಾಡದ ಕನ್ನಡ ಪ್ರಾಥಮಿಕ ಟ್ರೇನಿಂಗ ಕಾಲೇಜು ಆ ಕಾಲದಲ್ಲಿ ಶಿಕ್ಷಣದ ಮಹಾಸಂಸ್ಥೆ. ಕನ್ನಡ ಸೈನಿಕರ ಅಂದರೆ ನಿಸ್ವಾರ್ಥ ಸೇವಕರ ಪಡೆಯನ್ನೇ ರೂಪುಗೊಳಿಸಿದ ಸಂಸ್ಥೆ. ಚನ್ನಬಸವಪ್ಪನವರು ಅಂದು ಹಚ್ಚಿದ ಕನ್ನಡ ನಂದಾದೀಪವು ಎಂದಿಗೂ ಪ್ರಜ್ವಲಿಸುವಂತೆ ಮಾಡಿದ ಶ್ರೇಯಸ್ಸು ಅವರ ಶಿಷ್ಯವೃಂದಕ್ಕೆ ಸಲ್ಲುತ್ತದೆ. ಅವರಿಂದ ಪ್ರೇರಣೆ ಪಡೆದ ವ್ಯಕ್ತಿಗಳು ಅನೇಕ.

ಬೆಳಗಾವಿಯಲ್ಲಿ ಬಡ ವಿದ್ಯಾರ್ಥಿಗಳಿಗಾಗಿ ಒಂದು ವಿದ್ಯಾರ್ಥಿ ನಿಲಯವನ್ನು ಸ್ಥಾಪಿಸಿದರು. ಈ ದಿಸೆಯಲ್ಲಿಯೂ ಅವರು ಮೊಟ್ಟ ಮೊದಲಿಗರು. ಅವರಿಂದ ಬೆಳಗಾವಿಯ ಶ್ರೀ ಅರಟಾಳ ರುದ್ರಗೌಡರು, ಶ್ರೀ ಗಿಲಗಂಚಿ ಗುರುಸಿದ್ಧಪ್ಪನವರೂ ಪ್ರೇರಿತರಾದರು. ಅವರೂ ಮುಂದೆ ಸಾಮಾಜಿಕ, ಶೈಕ್ಷಣಿಕ ಕಾರ್ಯಗಳನ್ನು ಮಾಡಿ, ಕೀರ್ತಿ ಪಡೆದರು. ಶ್ರೀ ಅರಟಾಳರೂ ಶ್ರೀ ರೊದ್ದರೂ ಕರ್ನಾಟಕ ಕಾಲೇಜ ಸ್ಥಾಪನೆಯ ಕಾರ್ಯದಲ್ಲಿ ಮುಂದಾಳತ್ವ ವಹಿಸಿದ್ದರೆಂದು ಕೇಳುತ್ತೇವೆ. ಕನ್ನಡ ಟ್ರೇನಿಂಗ ಕಾಲೇಜ ಕಟ್ಟಡದಲ್ಲಿಯೇ ಕರ್ನಾಟಕ ಕಾಲೇಜು ಆರಂಭವಾಯಿತು. ಅದೇ ಕಟ್ಟಡದಲ್ಲಿಯೇ ಕರ್ನಾಟಕ ವಿಶ್ವವಿದ್ಯಾಲಯವೂ ಪ್ರಾರಂಭವಾಯಿತು. ಹೀಗೆ ಕನ್ನಡ ಟ್ರೇನಿಂಗ ಕಾಲೇಜು ಉಚ್ಚಶಿಕ್ಷಣ ಸಂಸ್ಥೆಗಳಿಗೆ ಆಶ್ರಯಕೊಟ್ಟಿತು. ಅಂದು ಪ್ರೇರಿತರಾದ ಕನ್ನಡಿಗರು ಶಿಕ್ಷಣ ಕ್ಷೇತ್ರದಲ್ಲಿ ಮಹತ್ವದ ಕಾರ್ಯಗಳನ್ನು ಸಂಘಟಿಸಿದರು.

ಧಾರವಾಡವು ಕರ್ನಾಟಕ ನವೋದಯಕ್ಕೆ ಸ್ಫೂರ್ತಿಯನ್ನು ನೀಡಿದೆ. ಇಲ್ಲಿ ೧೯ನೇ ಶತಮಾನದ ಕೊನೆಯಲ್ಲಿ ಕನ್ನಡ ಪ್ರೇಮಿಗಳ ಬಳಗ ರೂಪುಗೊಂಡಿತು. ೧೮೯೦ ರಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘವು ಸ್ಥಾಪನೆಯಾಯಿತು. ಕರ್ನಾಟಕ

ಅವರೇ ಮೊದಲಿಗರು. ಶ್ರೀ ಹುಯಿಲಗೋಳ ಭುಜಂಗರಾಯರೂ ಈ ದಿಸೆಯಲ್ಲಿ ಯತ್ನಿಸಿದ ದ್ವಿತೀಯರು. ಪುಣೆಯ ಎಂಜನಿಯರಿಂಗ ಕಾಲೇಜದಲ್ಲಿ ಒಂದು ವರ್ಷ ಪ್ರಾಧ್ಯಾಪಕರಾಗಿ ಅಧ್ಯಾಪನದಲ್ಲಿ ಡೆ. ಚೆನ್ನಬಸವಪ್ಪನವರು ಅನುಭವ ಗಳಿಸಿದ್ದರು. ಅಧ್ಯಯನ, ಅಧ್ಯಾಪನ-ಇವೆರಡೂ ಅವರ ಮೆಚ್ಚುಗೆಯ ಹವ್ಯಾಸಗಳಾಗಿ ಅವರಲ್ಲಿ ಬೆಳೆದು ಬಂದಿದ್ದವು. ಅವರು ಸ್ಥಾಪಿಸಿದ ವಿದ್ಯಾರ್ಥಿ ನಿಲಯದಲ್ಲಿ ಗಣಿತ, ವಿಜ್ಞಾನ ವಿಷಯಗಳನ್ನು ವಿದ್ಯಾರ್ಥಿಗಳಿಗೆ ಸ್ವಸಂತೋಷದಿಂದ ಬೋಧಿಸುತ್ತಿದ್ದರು.

(೩) **ದಕ್ಷ ಆಡಳಿತಗಾರ : ದಿ. ಫ. ಗು. ಹಳಕಟ್ಟಿ ಅವರು ಹೀಗೆ ಬರೆದಿದ್ದಾರೆ :** "ಚನ್ನಬಸವಪ್ಪನವರು ತಮ್ಮ ಶಾಳಾ ಸುಧಾರಣೆಯ ಕಾರ್ಯದಲ್ಲಿ ಬಹು ದಕ್ಷರಾಗಿದ್ದರು. ಅವರು ತಮ್ಮ ವೇಳೆಯನ್ನು ಸೋಮಾರಿತನದಲ್ಲಿ ಎಂದೂ ಕಳೆಯಲಿಲ್ಲ. ಮೇಲಿಂದ ಮೇಲೆ ಶಾಲೆಗಳಿಗೆ ಹೋಗಿ ಮಾಸ್ತರರು ತಮ್ಮ ಕಾರ್ಯದಲ್ಲಿ ತತ್ಪರರಾಗಿರುವರೋ ಇಲ್ಲವೋ ಎಂಬುದನ್ನು ಪರೀಕ್ಷಿಸುತ್ತಿದ್ದರು. ಆದರೆ ಅವರು ತಮ್ಮ ಅಧಿಕಾರದಲ್ಲಿ ಯಾರಿಗೂ ಅಹಿತ ಮಾಡಲಿಲ್ಲ. ಅವರು ಸಿಟ್ಟಿನ ಸ್ವಭಾವದವರೂ ಬಿರಿಸು ಮಾತಿನವರೂ ಆಗಿದ್ದರು. ಆದರೂ ಅವರು ಸ್ವಭಾವತಃ ದಯಾರ್ದ್ರ ಹೃದಯ ಉಳ್ಳವರಾಗಿದ್ದುದರಿಂದ, ಮಾಡಿದ ತಪ್ಪುಗಳನ್ನು ಕೂಡಲೇ ಕ್ಷಮಿಸುತ್ತಿದ್ದರು. ಮಾಸ್ತರರಲ್ಲಿ ಯಾರಾದರೂ ಚೆನ್ನಾಗಿ ಕೆಲಸ ಮಾಡುವವರಿದ್ದರೆ ಅವರು ಅವರನ್ನು ಬಹಳ ಪ್ರೋತ್ಸಾಹಿಸುತ್ತಿದ್ದರು". ಡೆಪ್ಯೂಟಿ ಇನ್‌ಸ್ಪೆಕ್ಟರ ಹುದ್ದೆಯಲ್ಲಿದ್ದಾಗ, ಅವರು ಹೊರಡಿಸಿದ ಸುತ್ತೋಲೆಗಳು (Circulars) ಮತು ಆಜ್ಞೆಗಳು (Orders) ಅವರು ಕರ್ತವ್ಯ ಪ್ರಜ್ಞೆಯನ್ನು, ದಕ್ಷತೆಯನ್ನು, ನಿಷ್ಠುರತೆಯನ್ನು ಪ್ರತಿಬಿಂಬಿಸುತ್ತವೆ. ಅವರನ್ನು ಹೊಗಳಿ ಒಂದು ಕವಿತೆ ರಚಿಸಿ ಹಾಡಿದ ಮಾಸ್ತರನನ್ನು ಛೀ ಹಾಕಿದ ಉದಾಹರಣೆಯೂ ಉಂಟು. ಸುಳ್ಳು ಹಾಜರಿ ಹಾಕಿದ ಪಂತೋಜಿಗಳಿಗೂ, ನಿರ್ಲಕ್ಷ್ಯದಿಂದ ಕೆಲಸ ಮಾಡುವ ಮಾಸ್ತರರಿಗೂ ದಂಡ ವಿಧಿಸಿದ, ಹಿಂಬಡ್ತಿ ಮಾಡಿದ ದೃಷ್ಟಾಂತಗಳೂ ಉಂಟು. ಹೀಗೆ ಶಿಕ್ಷಕರನ್ನು ಎಚ್ಚರಿಸಿ, ಅವರನ್ನು ಕಾರ್ಯೋನ್ಮುಖರನ್ನಾಗಿ ಮಾಡಲು ಬಹುಮುಖವಾಗಿ ಹೆಣಗಿದ್ದಾರೆ. ತಾವೂ ದುಡಿಯುತ್ತಿದ್ದರು, ಮಾಸ್ತರರನ್ನೂ ದುಡಿಯ ಹಚ್ಚುತ್ತಿದ್ದರು. ಅಂದಿನ ಅವರ ಆಡಳಿತದ ವೈಖರಿ ಶಾಳಾ ಸುಧಾರಣೆಗೆ ಪೋಷಕವಾಗಿದ್ದಿತು. ಅವರು ಎರಡು ಸಾರೆ ದಕ್ಷಿಣ ವಿಭಾಗದ ಇನ್‌-ಚಾರ್ಜ ಇನ್‌ಸ್ಪೆಕ್ಟರ ಆಗಿದ್ದರು. **ಇಂಥ ಉಚ್ಚ ಹುದ್ದೆಗೆ ಏರಿದ ಕನ್ನಡಿಗರಲ್ಲಿ ಪ್ರಪ್ರಥಮರು.**

(೪) **ವಿದ್ಯಾಪ್ರೇಮಿ :** ಚನ್ನಬಸವಪ್ಪನವರು ನೌಕರಿಗಾಗಿ ಸರಕಾರಿ ಕೆಲಸ ಮಾಡಿದ್ದರೆ, ಅವರನ್ನು ಯಾರೂ ಸ್ಮರಿಸುತ್ತಿದ್ದಿಲ್ಲ. ಅವರು ವಿದ್ಯಾ ಪ್ರೇಮಿಯಾಗಿದ್ದರು. ವಿದ್ಯಾಪ್ರಸಾರಕ್ಕಾಗಿ ಬಿಡುವಿಲ್ಲದೆ ದುಡಿಯುತ್ತಿದ್ದರು. ಊರೂರು ಸುತ್ತಾಡಿ, ಶಾಲೆಗಳನ್ನು ಸ್ಥಾಪಿಸಲು ಉತ್ತೇಜನ ಕೊಡುತ್ತಿದ್ದರು. ಅವರು ವಾಕ್ ಚತುರರೂ

ಆಗಿದ್ದರು. ಅವರ ಪ್ರಯತ್ನಗಳಿಂದ ಸರಕಾರದ ಸಹಾಯದಿಂದ ಹೆಚ್ಚು ಶಾಲೆಗಳು ತೆರೆಯಲ್ಪಟ್ಟವು, ಉತ್ತರ ಕರ್ನಾಟಕದಲ್ಲಿ ತೀವ್ರವಾಗಿ ವಿದ್ಯಾಪ್ರಸಾರ ಕಾರ್ಯ ನಡೆಯಿತು. ವಿದ್ಯೆಯ ಮಹತ್ವ ಹಾಗು ನೀತಿ ಬೋಧೆ ಮಾಡುತ್ತಿದ್ದರು.

(೫) **ಕನ್ನಡದ ಸೇವಕರು :** ಕನ್ನಡ ಶಾಲೆಗಳನ್ನು ತೆರೆಯಲು ಪ್ರೋತ್ಸಾಹಿಸಿ, ಮಾಸ್ತರರಿಗೆ ಶುದ್ಧ ಕನ್ನಡ ಬರೆಯಲು ಮತ್ತು ಮಕ್ಕಳಿಗೂ ಶುದ್ಧ ಕನ್ನಡ ಕಲಿಸಲು ಪ್ರೇರಣೆ ನೀಡಿದರು. ಹಳ್ಳಿ ಹಳ್ಳಿಗಳಿಗೆ ಹೋಗಿ, ರಾತ್ರಿ ಸಮಯದಲ್ಲಿ ಸಭೆ ಸೇರಿಸಿ, ಕನ್ನಡದಲ್ಲಿಯೇ ಲೆಕ್ಕ ಪತ್ರಗಳನ್ನು ಇಡುವಂತೆ ತಿಳಿವಳಿಕೆ ಕೊಡುತ್ತಿದ್ದರು. ಏಕೆಂದರೆ, ಆಗ ವ್ಯಾಪಾರಸ್ಥರು ಮರಾಠೀ ಭಾಷೆ ಬಳಸುತ್ತಿದ್ದರು, ಮೋಡಿಯಲ್ಲಿ ಸಹಿ ಮಾಡುತ್ತಿದ್ದರು. ಅವರ ವಾಕ್ ಪ್ರಭಾವವು ಜನತೆಯಲ್ಲಿ ಕನ್ನಡ ಭಾಷೆಯ ಬಗ್ಗೆ ಅಭಿಮಾನ ತಳೆಯಲು ಪ್ರೋತ್ಸಾಹಿಸಿತು.

(೬) **ಶಿಕ್ಷಣ ತಜ್ಞರು :** ಅವರು ಶಿಕ್ಷಣ ಮತ್ತು ತತ್ವಜ್ಞಾನ ವಿಷಯಗಳಲ್ಲಿ ಅಪಾರ ಆಸ್ಥೆಯುಳ್ಳವರಾಗಿದ್ದರು. ಅವರ ಸ್ವಂತ ಗ್ರಂಥಾಲಯವು ದೊಡ್ಡದಾಗಿತ್ತು. ಅವರು ಸ್ವತಃ ಗ್ರಂಥಗಳನ್ನು ಬರೆದರು, ಅಲ್ಲದೆ ಬರಹಗಾರರನ್ನು ಕಲೆಹಾಕಿ, ಕನ್ನಡ ಪಠ್ಯಪುಸ್ತಕಗಳನ್ನೂ ಪೂರಕ ಪುಸ್ತಕಗಳನ್ನು ಬರೆಯಿಸುವ ಪ್ರಥಮ ಪ್ರಯತ್ನ ಮಾಡಿದರು. ಆಗ ಕನ್ನಡದಲ್ಲಿ ಪಠ್ಯ ಪುಸ್ತಕಗಳೇ ಇರಲಿಲ್ಲ. ಕನ್ನಡ ವಾಙ್ಮಯ ಪ್ರಸಾರಕ್ಕಾಗಿ ಬಹು ವಿಧವಾಗಿ ಪರಿಶ್ರಮಿಸಿದರು.

(೭) **ಶೈಕ್ಷಣಿಕ ಮಾಸ ಪತ್ರಿಕೆಯ ಜನಕರು :** ಮಠ ಪತ್ರಿಕೆ ಎಂಬ ಶಿಕ್ಷಣದ ಮಾಸಿಕ ಪತ್ರಿಕೆಯನ್ನು ಪ್ರಪ್ರಥಮವಾಗಿ ಆರಂಭಿಸಿದರು. ಈಗಿನಂತೆ ಆಗ ಅಚ್ಚುಕೂಟಗಳು ಇರಲಿಲ್ಲ. ಕಲ್ಲಚ್ಚಿನ ಮೇಲೆ ಕೈಯಿಂದ ಬರೆಯುವ ಸಾಹಸ ಮೆಚ್ಚುವಂತಹದಲ್ಲವೇ ? ಕನ್ನಡದ ಅಚ್ಚುಕೂಟ ಪ್ರಾರಂಭಿಸಲು ಸರಕಾರದಿಂದ ಧನಸಹಾಯವನ್ನೂ ಕೊಡಿಸಿದರು. ಅಂದಿನ ಮಠ ಪತ್ರಿಕೆಯೇ ಇಂದು 'ಜೀವನ ಶಿಕ್ಷಣ' ಎಂಬ ಹೆಸರಿನಿಂದ ಪ್ರಕಟವಾಗುತ್ತಿದೆ. ಅದರ ಶತಮಾನೋತ್ಸವವು ಜರುಗಿದೆ. ಇದು ಹೆಮ್ಮೆಯ ವಿಷಯವಲ್ಲವೇ ?

(೮) **ಬೋರ್ಡಿಂಗಿನ ಸಂಸ್ಥಾಪಕರು :** ಬಡವಿದ್ಯಾರ್ಥಿಗಳಿಗಾಗಿ ಆಗ ವಸತಿ ಗೃಹಗಳಿರಲಿಲ್ಲ. ಅಂಥ ಬೋರ್ಡಿಂಗನ್ನು ಸ್ಥಾಪಿಸುವಲ್ಲಿ ಇವರೇ **ಮೊದಲಿಗರು** ಈ ಭಾಗದ ಕನ್ನಡ ನಾಡಿನಲ್ಲಿ! ಅದಕ್ಕೆ ಸಮಾಜದ ಸಹಾಯ ನಿಂತು ಹೋದಾಗ, ಅದನ್ನು ಸ್ವಂತ ಖರ್ಚಿನಿಂದ ನಡೆಸಿದರು. ಅಷ್ಟೇ ಅಲ್ಲ! ಅದಕ್ಕಾಗಿ ಸಾಲ ಮಾಡಿ ಕೊಂಡರು. ಸಾಲ ತೀರಿಸುವದಕ್ಕಾಗಿ ತಮ್ಮ ಆಸ್ತಿಪಾಸ್ತಿಗಳನ್ನೆಲ್ಲ ಕಳೆದುಕೊಂಡರು. ಸಮಾಜಕ್ಕಾಗಿ ಅವರು ತಮ್ಮನ್ನೇ ತೆಯ್ದುಕೊಂಡು **ಮಹಾತ್ಯಾಗಿ**ಯೆಂದು ಹೆಸರು ವಾಸಿಯಾದರು. ಇದು ಅರ್ಪಣಭಾವದಿಂದ ಮಾಡಿದ ಸಮಾಜಸೇವೆಯ ದ್ಯೋತಕ.

(೯) **ಹೊಣೆಯ ಪ್ರಜ್ಞೆ :** ಸರಕಾರೀ ಬುಕ್ ಡಿಪೋದಲ್ಲೊಬ್ಬ ಗುಮಾಸ್ತನು ಹಣದ ಅಪರಾತಪರಾ ಮಾಡಿದ್ದನು. ಆ ಹಣವು ವಸೂಲ ಆಗುವಂತಿದ್ದಿಲ್ಲ. ಆಗ ಸರಕಾರಕ್ಕೆ ಹೀಗೆ ವರದಿ ಮಾಡಿದ್ದುಂಟು : "ನಾನು ಗುಮಾಸ್ತನ ಮೇಲೆ ನಂಬಿ, ನಾನೂ ಸಹಿ ಮಾಡಿದ್ದೇನೆ. ಆದಕಾರಣ ನನ್ನ ಮನೆತನದ ಖರ್ಚಿಗಾಗಿ ರೂ. ೬೦/–ನ್ನು ಬಿಟ್ಟು, ನನ್ನ ಸಂಬಳದಲ್ಲಿಯ ಹೆಚ್ಚಿನ ಹಣವನ್ನು ಈ ಲುಕ್ಸಾನ ಭರಿಸುವವರೆಗೆ ಮುರಿದುಕೊಳ್ಳಬೇಕು." ಸರಕಾರದವರು ಡೆ. ಚನ್ನಬಸವಪ್ಪನವರ ಕಾರ್ಯದಕ್ಷತೆಯನ್ನೂ ಪ್ರಾಮಾಣಿಕತೆಯನ್ನೂ ಪ್ರಶಂಸಿಸಿ, ಈ ಹಣ ಸೂಟಬಿಟ್ಟರು.

(೧೦) **ಸತ್ಯ ಸಂಶೋಧಕರು :** ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ ಹಾಗು ಸಾಹಿತ್ಯಿಕ ಚಟುವಣಿಕೆಗಳಲ್ಲಿ ಸತ್ಯಶೋಧನೆಯೇ ಅವರ ಸೂತ್ರವಾಗಿತ್ತು. ಅಂತೆಯೇ ಅವರು ಅಮರಜೀವಿಗಳಾಗಿ ಉಳಿದಿರುವರು.

ದಿ. ೪ ಜನೇವರಿ ೧೯೮೧ ಲಿಂಗೈಕ್ಯ ಡೆಪ್ಯೂಟಿ ಚೆನ್ನಬಸಪ್ಪನವರ ನೂರನೆಯ ಪುಣ್ಯತಿಥಿ ಮುಂಬಯಿ ಕರ್ನಾಟಕದಲ್ಲಿ ಕನ್ನಡದ ಪುನರುಜ್ಜೀವನ ಮತ್ತು ಶಿಕ್ಷಣ ಪ್ರಸಾರ ಕಾರ್ಯದ ಶಕಪುರುಷನಾಗಿ ನಾಡಿನ ಏಳಿಗೆಗೆ ತಮ್ಮನ್ನೇ ಅರ್ಪಿಸಿಕೊಂಡ ಕನ್ನಡ ಭಾಷಾಭೂಷಣ ಚೆನ್ನಬಸವಪ್ಪನವರ ನೆನಹು ಕನ್ನಡಿಗರಿಗೆ ಸ್ಫೂರ್ತಿದಾಯಕವಾಗಿದೆ. ಆದಕಾರಣ ಕನ್ನಡ ಕುಲದೀಪಕ ಲಿಂಗೈಕ್ಯ ಡೆಪ್ಯೂಟಿ ಚೆನ್ನಬಸವಪ್ಪನವರ ಶತಮಾನೋತ್ಸವವನ್ನು ಜರುಗಿಸುವದಕ್ಕಾಗಿ ಒಂದು ಸಮಿತಿಯನ್ನು ರಚಿಸಿಕೊಂಡು ಕಾರ್ಯೋನ್ಮುಖರಾಗಿದ್ದೇವೆ. ಅಲ್ಲದೆ, **ಡೆ. ಚೆನ್ನಬಸವಪ್ಪ ಪ್ರಾಥಮಿಕ ಶಿಕ್ಷಣ ಪ್ರತಿಷ್ಠಾನ**– ಎಂಬ ಸಂಸ್ಥೆಯನ್ನೂ ಸ್ಥಾಪಿಸಲಾಗಿದೆ. ಪ್ರಾಥಮಿಕ ಶಿಕ್ಷಣದ ಗುಣಮಟ್ಟವನ್ನು ಎತ್ತರಿಸುವದಕ್ಕಾಗಿ– ವಿಚಾರಗೋಷ್ಠಿ, ಉಪನ್ಯಾಸಗಳು, ಪೂರಕ ಪುಸ್ತಕಗಳ ಪ್ರಕಟಣೆ, ಸಂಶೋಧನೆ– ಮುಂತಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ. ಅಲ್ಲದೆ, ಡೆ. ಚೆನ್ನಬಸವಪ್ಪನವರ ಕಂಚಿನ ಮೂರ್ತಿ ಪ್ರತಿಷ್ಠಾಪನೆ, ಭವನ ನಿರ್ಮಾಣ, ಗ್ರಂಥಾಲಯ– ಇತ್ಯಾದಿಗಳ ಸ್ಮಾರಕಗಳೂ ಬರಲಿವೆ. ಇಂಥ ಸ್ಮಾರಕಗಳು ಕನ್ನಡನಾಡಿನ ಪ್ರಮುಖ ಪ್ರದೇಶಗಳಲ್ಲಿ ಮೂಡಿಬರಲೆಂದು ಹಾರೈಸಲಾಗಿದೆ.

ಕವಿಗಳು ಕಂಡ ಡೆಪ್ಯೂಟಿ ಚನ್ನಬಸವಪ್ಪನವರು

ದಿವ್ಯ ಪುರುಷ

ಕನ್ನಡದ ಭೂಮಿಯಲಿ ನೂರು ವರುಷಗಳಾಚೆ
ಮೂಡಿ ಬಂದನು ನೋಡು, ದಿವ್ಯ ಪುರುಷ
ಕನ್ನಡದ ಕುಲತಿಲಕ ಸೀಮಂತ ಧೀಮಂತ
ನಾಡ ಪುಣ್ಯೋದಯವೆ ಜನಿಸಿದಂತೆ........ ॥ ೧ ॥

ಶಿಕ್ಷಣದ ಹಸಿವಿನಲಿ ಸೀಮೆಯನು ದಾಟಿ
ಪುಣ್ಯ ಪಟ್ಟಣ ಸೇರಿ ಅಭಯ ಶಿಕ್ಷಣ ಪಡೆದು
ತಾಯ್ನುಡಿಯ ಸೇವೆಯನು ಮಾಡಲೆಂದು
ಕುಶಲ ಶಿಲ್ಪಿಯ ತೆರದಿ ದೀಕ್ಷೆಯಂ ತಳೆದು........ ॥ ೨ ॥

ಶ್ರೇಷ್ಠ ಶಿಕ್ಷಕರೆಂದು ಅಭಿದಾನವೆತ್ತು
ನಾಡ ಶಿಲ್ಪಿಗರಲ್ಲಿ ವರವರೇಣ್ಯರು ಆಗಿ
ತರಬೇತಿ ಮಂದಿರದ ಪ್ರಾಚಾರ್ಯರಲ್ಲಿ
ಪ್ರಮುಖರೆಂಬುವ ಸ್ಥಾನ ಅವರದಾಯ್ತು........ ॥ ೩ ॥

ಶಿಕ್ಷಣದ ಏಳ್ಗೆಗೆ ಶ್ರಮಿಸಿದರು ಅವರು
ನಾಡು-ನುಡಿ ವೃದ್ಧಿಯಂ ಗೈದರವರು
ಕನ್ನಡವೆ ಅವರುಸಿರು ಅದುವೆ ನರ-ನಾಡಿ
ನಾಡವರ ರಕ್ತದಲಿ ಅದನೆ ಬಿತ್ತಿದರು........ ॥ ೪ ॥

ಚೆನ್ನಬಸವರೆ ನೀವು ಮಾಡಿದಾ ಸೇವೆ
ಕನ್ನಡ ಭೂಮಿಯಲಿ ಸ್ಥಿರತೆಯಂ ಪಡೆದು
ಸೂರ್ಯ-ಚಂದ್ರರ ತೆರದಿ ಅಮರವಾಯ್ತು
ನಾಡ ಮಕ್ಕಳಿಗದುವೆ ಜೀವ ತಾನಾಯ್ತು........ ॥ ೫ ॥

ತಾಯಿ ಭುವನೇಶ್ವರಿಯ ಮುಕುಟದಲಿ ನೀವು
ದೇದೀಪ್ಯವೆನಿಸುವಾ ರತ್ನವಾದಿರಿ ಅಲ್ತೆ
ಆ ನಿಮ್ಮ ಪ್ರತಿಭೆಯಲಿ ನಾಡೋಜರೆಲ್ಲ
ನಾಡ ಗುಡಿ ಮೆರಸಲ್ಕೆ ನುಗ್ಗಿ ಬರಲಿ........ ॥ ೬ ॥

—ಆಯ್. ಎಸ್. ಬಿದರಿ

✲ ಈ ನಾಡ ನಿಜಕುವರ ✲

ಡೆಪ್ಯೂಟಿ ನಾಮದ–
ಕೀರ್ತಿವೆತ್ತ ಕನ್ನಡದ ಕೈವಾರಿ,
ಓ....ನಾಡ ಜನಮನ ಚೇತೋಹಾರಿ !
ಈ ನಾಡ ಶಿಕ್ಷಣದ ರಂಗಮಂಚದ ಮೇಲೆ
ಹಲವು ಜನ ಡೆಪ್ಯೂಟಿಗಳು ನಡೆದು ಹೋಗಿರಬಹುದು.
ಅವರೊಳಗೆ ಮೇಲೆದ್ದು
ಮಿಂಚಿ ಮೆರೆವವ ನೀನು !
ಚೆನ್ನುಡಿಯ ಚೆಂಬೆಳಕು
ಚಲ್ಲಿದಡಿಯಲಿ ನಿನ್ನ–
ಚನ್ನಾದ ಹೆಸರೊಂದೆ ಮಿಂಚಿ ಮೆರೆವುದು ನೋಡು !
ಚೆನ್ನುಡಿಯ ಚೆಲುವನ್ನೆ ನಿನ್ಹೆಸರಿಗೆರೆದರೋ !
ಚೆನ್ನ, ನಿನ್ನಯ ಹೆಸರೆ ಚೆನ್ನುಡಿಯಿಗಾಯ್ತೋ !!
ನೀ ದುಡಿದ ನುಡಿಗಡಲು,
ಉಕ್ಕೇರಿ ಹರಿಯುತಿದೆ.
ನಿನ್ನ, ನಿರ್ಮಿತ ದೋಣಿ, ದಡ ಕಂಡು ಸಾಗುತಿದೆ.
ನೀನು ಆಡಿದ ನೆಲ, ನೀನು ತೋರಿದ ಛಲ
ನಮ್ಮ ಗುರಿಸಾಧನೆಗೆ ನಿತ್ಯ ನೂತನ ಬಲ.
ಪರಭಾಷೆ ದಾಸ್ಯದೊಳು,
ನಿತ್ಯ ತೊಳಲಿದ ನುಡಿಗೆ,
ನೆಮ್ಮದಿಯ ಉಸಿರನ್ನು ಕರುಣಿಸಿದ ಧೀರ,
ನೀನಹುದು ಹಮ್ಮೀರ, ಈ ನಾಡ ನಿಜಕುವರ.
" ಶಿಕ್ಷಣದ ಮಾಧ್ಯಮಕೆ ಮಾತೃಭಾಷೆಯೆ ಸಾಜ "
ಭರತವಾಕ್ಯವನುಲಿದ ಕನ್ನಡದ ಮೊದಲಿಗ !
ನಮ್ಮೆಲ್ಲರೆದೆಬಾನ, ಓ ಪೂರ್ಣ ಚಂದ್ರ

ನೀ ಪಡೆದ ಹಿರಿಮೆಗೆ ನಾಚುವನು ಇಂದ್ರ
ಇಂದದಕೆ ಸಾಕ್ಷಿ ಈ ತರಬೇತಿ ಕೇಂದ್ರ!
ನೂರು ವರುಷದ ಹಿಂದೆ, ನೀ ನೆಟ್ಟ ಸಸಿಯಿಂದು
ಬೆಳೆದು ಹೆಮ್ಮರವಾಗಿ
ನೆರಳಿನಾಗರವಾಗಿ,
ಆಶ್ರಯಿಸಿ ಬಂದವರು ತಂಪು ಮನಸನು ಹೊಂದಿ,
ಜೀವನದ ಸಾರ್ಥ್ಯಕ್ಯ ಪಡೆದು ಬಾಳುವರಯ್ಯ!
ಓ....ಡೆಪ್ಯೂಟಿ ಚನ್ನಬಸಪ್ಪ....
ಕನ್ನಡ ಕುಲತಿಲಕ, ಕನ್ನಡ ಕುಲದೀಪ,
ಏನೆಂದು ಉಸುರಲಿ!?
ಈ ಮಣ್ಣ ಕಣದಲ್ಲಿ ನಿನ್ನ ಉಸುರಿದೆ ನೋಡು,
ನಮ್ಮ ರಕ್ತದ ಕಣವು, ನಿನ್ನ ಧ್ಯೇಯದ ಸಿರಿಯು
ನಿನ್ನಾತ್ಮ ಜ್ಯೋತಿಯೇ ನಮ್ಮ ದಾರಿಯ ದೀಪ!
ಸಗ್ಗದಲಿ ನೀ ನಿಂತು
ನೋಡುತಿಹೆ ನಮ್ಮನು
ನಿನ್ನ ಕೆಳೆಯರು ಅಲ್ಲಿ, ನಿನ್ನ ಹಿರಿಮೆಯ ಕಂಡು
ಹೊಗಳಿ ಹಾಡುವ ತೆರದಿ ದುಡಿಸಯ್ಯ ನಮ್ಮನು!

—ರಾಮಚಂದ್ರ ಪಾಟೀಲ,
'ಸತ್ಯಾಶ್ರಯ'

ಕೊಳ್ಳೆನ್ನ ನಮನ

ನಮನವಂ ಕೊಳ್ಳಯ್ಯ ಓ-ಮಹಾಚೇತನವೆ
ಕನ್ನಡದ ಭೂಮಿಯಿದು ನೆನೆಯುತಿದೆ ನಿನ್ನ॥

ದಿಕ್ಕು–ದೆಸೆಯಿಲ್ಲದೆಯೆ
ಹರಿದು ಹೋಗುತಲಿರುವ
ಯುವ ಜನಾಂಗವನಿಂದು
ಹರಸಯ್ಯ ಗುರುವೆ....

ಕಾರ್ಯದಕ್ಷತೆಗೊಂದು
ಹೆಸರಾದ ಮಾಪುರುಷ
ಧೈರ್ಯ–ಶೌರ್ಯವ ತುಂಬು
ಈ ನಾಡ ಮಕ್ಕಳಲಿ....

ರಾಷ್ಟ್ರಸೇವೆಯ ದೀಕ್ಷೆ
ತೊಟ್ಟು ಬಾಳಿದ ಗುರುವೆ
ನಿನ್ನಾತ್ಮ ಸಕಲರಲಿ–
ನೆಲಸುವೊಡೆ ಹರಸು....

ಏನೆ ಮಾಡಲಿ ಚೆನ್ನು
ಎನುವಂತೆ ಬಾಳಿದೈ
ಚನ್ನಬಸವನೆ ನೀನು
ಕೊಳ್ಳೆನ್ನ ನಮನ....

ಗುರುಕುಲಪಿತಾಮಹನೆ
ನೀ ಕೊಳ್ಳೆನ್ನ ನಮನ....

—ಜಿ. ಎಸ್. ಭಟ್ಟಿ

◎◎◎

ಕನ್ನಡದ ಜಟ್ಟಿ....

ನೂರು ವರುಷದ ಹಿಂದೆ, ಧಾರವಾಡದಲೊಬ್ಬ
ಗಂಡುಗಲಿ ಇದ್ದ.
ಯಾರು ಬಂದರು ಆತ ಕನ್ನಡದ ಉನ್ನತಿಗೆ
ಸಿದ್ಧನಿದ್ದ........ ॥ ಪ ॥

ಓದು ಕಲಿಯುವ ಇಚ್ಛೆ ಸಾಮಾನ್ಯ ಮನೆತನ
ಆದರೂ ಮುನ್ನುಗ್ಗಿ, ನಡೆದನವ ಕೊನೆತನ
ಪುಣೇ ಶಹರಕೆ ಹೋಗಿ, ಓದಿ ಬಂದ....
ನೆನಿಸಿ ಕನ್ನಡ ಸಿರಿಯ, ಕಾದು ನಿಂದ.... ॥ ೧ ॥

ಕಲಿತು ಬಂದದ್ದೊಂದು, ಕೈಹಾಕಿದುದು ಬೇರೊಂದು
ಮಲೆತು ನಿಂತಿಹ ಕನ್ನಡದ ಸ್ಥಿತಿಗೆ ಮನನೊಂದು
ಕನ್ನಡವ ಕಲಿಸೆಂದು, ಪಾಠ ಶಾಲೆಗೆ ಹೋಗಿ
ಕಣ್ಣು ತೆರೆಸಿದನಾತ, ದೊಡ್ಡ ಗುರುವಾಗಿ.... ॥ ೨ ॥

ಅನ್ಯಭಾಷೆಯ ಬಲಿಗೆ, ಸಿಕ್ಕ ಕನ್ನಡವನ್ನು
ತನ್ನ ಜಾಣ್ಮೆಯ ಬಲದಿ, ಬದುಕಿಸಿದ ಬಂಟ
ಕನ್ನಡದ ಏಳಿಗೆಗೆ, ಕಟ್ಟಿದನು ಸೊಂಟ
ನೆನಪು ಬಂದಾಗೊಮ್ಮೆ, ಬಿಗಿಯುವದು ಕಂಠ.... ॥ ೩ ॥

ಚತುರ ಹೆಸರು...., ಚೆನ್ನಬಸಪ್ಪ ಡೆಪ್ಯೂಟಿ
ಇತರಾರು ಇರಲಿಲ್ಲ, ನಿಮ್ಮೊಡನೆ ಪೈಪೋಟಿ
ಮತ್ತೊಮ್ಮೆ ತುಂಬು, ಈ ಜನರ ಎದೆಮೀಟಿ
ಕತ್ತು ಬಗ್ಗಿಸಿ ನಮಿಪೆ, ನಿನಗಾರು ಸಾಟಿ.... ॥ ೪ ॥

—ಎಚ್. ವ್ಹಿ. ತುಂಗಳ

೧೧೧

ಕೆಚ್ಚೆದೆಯ ಕುಲಪುತ್ರ

ಅಬ್ಬರದಿ ಪರಭಾಷೆಯಾಕ್ರಮಕ್ಕೊಳಗಾಗಿ
ಕೊರಗುತಿಹ ಕನ್ನಡ ಭಾಷೆಯ ಕರೆಗಾಗಿ
ಶಿವಶರಣ ಜನಕರಾ ತಪಗೈದ ಫಲವಾಗಿ
ಜನಿಸಿಹುದು ಮಗುವೊಂದು ಕನ್ನಡದ ಏಳ್ಗೆಗಾಗಿ.... ॥ ೧ ॥

ಲೆಕ್ಕಿಸದೆ ಬಡತನವ ಕೆಚ್ಚೆದೆಯ ತೋರುತಲಿ
ಬಾಲ್ಯದಲಿ ಜಾಣ್ಮೆಯಾ ಪ್ರತಿಭೆಯನು ಹರಡುತಲಿ
ಉಚ್ಚತಮ ವಿದ್ಯೆಯನು ಪಡೆದನವ ಪುಣೆಯಲ್ಲಿ
ತಾಯ್ನುಡಿಯ ಕೀರ್ತಿಯು ಬೆಳಗುವ ಸ್ಮರಣೆಯಲಿ.... ॥ ೨ ॥

ಬೇರಾವ ಪ್ರಭಾವಕ್ಕೊಳಗಾಗದೆ ಮರಳಿದನು
ಅಂಜದೆಯೆ ಅಳುಕದೆಯೆ ಕೆಚ್ಚೆದೆಯ ತೋರಿದನು
ಮುಚ್ಚುಮರೆ ಇಲ್ಲದೆಯೆ ಅನ್ಯಾಯ ದೂಡಿದನು
ತಾಯ್ನಾಡ ಸೇವೆಯಲಿ ಅಣಿಯಾದನವನು.... ॥ ೩ ॥

ಓ.... ಎನ್ನ ಕೆಚ್ಚೆದೆಯ ಕನ್ನಡದ ಕುಲಪುತ್ರ
ಶ್ರೀಚೆನ್ನಬಸವಪ್ಪ ನೀ ನೀಡಿದೀ ಛತ್ರ-
ಸಾರುತಿದೆ ಕನ್ನಡದ ಪ್ರಗತಿಯು ಚಕ್ರ
ಬೆಳಗುತಿದೆ ನಿನ್ನಯ ಕೀರ್ತಿ ಮುಗಿಲೆತ್ತರ.... ॥ ೪ ॥

ಕೊನೆಯುಸಿರು ಕೊನೆಗಳಿಗೆ ಮೀಸಲಾಗಿ ಸಾರಿದವ
ನರವೀರ ಸ್ಥಿರನಾಗಿ ಕೀರ್ತಿಯನು ಪಡೆದವ
ಕನ್ನಡದ ಜನಕೆಂದು ಪೂಜ್ಯತಾತನಾದವ
ಅವಗಿಂದು ನಾವೆಲ್ಲ ಅರ್ಪಿಸುವ ನಮನವ.... ॥ ೫ ॥

—ವ್ಹಿ. ಎನ್. ನಾಡಗೇರ

ಕನ್ನಡಾಭಿಮಾನಿ

ಪೆಸರಿಹುದು ಚಿನ್ನಭಸಪ್ಪ, ಬೆರೆಸಿದೊಲು, ಹಾಲು ಸಕ್ಕರೆ ತುಪ್ಪ
ಹೃದಯಾಂತರಾಳದಲಿ ಜೇನುತುಪ್ಪ, ಸವಿದ ಜನ ಮರೆತಿಲ್ಲವಪ್ಪ ॥೧॥

ಊದಿದಿರಿ ಕನ್ನಡದ ಕಹಳೆ, ಆಲಿಸಿತು ಕನ್ನಡದ ಹಸುಳೆ
ಬೀರಿತು ಮೊಗದಲಿ ಸಂತಸ ಕಳೆ, ಚಿಗುರೊಡೆಯಿತು ಕನ್ನಡದ ಬೆಳೆ ॥೨॥

ಮರೆಯದ ಜನ ಬೆರೆತು, ಆವುದೋ ದೇವವಾಣಿಯ ಅರಿತು
ಪಾಡುತಿದೆ ನಿಮ್ಮನು ಕುರಿತು, ಭಾಷಾ ಬಾಂಧವ್ಯದಲಿ ಬೆರೆತು ॥೩॥

ಆಚರಿಸುತಿದೆ ನಿಮ್ಮ ಶತಮಾನ, ನೀಡುವರೆಂದು ಹೊಗಳಿಕೆಯ ಬಹುಮಾನ
ಕನ್ನಡಾಂಬೆಯ ಸತ್ಪುತ್ರ ಬಲು ಜಾಣ, ತಮ್ಮ ಮನವಿತ್ತು ಮೃದುಮೇಣ ॥೪॥

ಮೇಲ್ನೋಟಕೆ ಸಾದಾ ವೇಷಭೂಷಣ, ಅನವರತ ಕನ್ನಡದ ಅನ್ವೇಷಣ
ಕಾಯುವಳಿದರೂ ನಾಡಿಗೆ ಭೂಷಣ, ನರನರದಿ ಹರಿಯಿತು ಕನ್ನಡ
ರಕ್ತಕಣ ॥೫॥

ನೀವು ಜನಿಸಿದ ನಾಡು ಚಿನ್ನದ ಬೀಡು, ಹಗಲಿರುಳು ಪಾಡಿದಿರಿ ಕನ್ನಡದ ಹಾಡು
ನಿಮ್ಮ ಕನ್ನಡದಾ ನಾಡು, ಇಂದಾಯ್ತು ನಂದನದ ಗೂಡು ॥೬॥

ಕುಡಿದ ಜಲ ನಡೆದ ನೆಲ ಕನ್ನಡ, ಸೇವಿಸಿದ ಗಾಳಿ ಉಸಿರಿದ ನುಡಿ, ಕನ್ನಡ
ನಡೆದನಡೆ ನೋಡಿದನೋಟ ಕನ್ನಡ, ಅಡಿ ಇಟ್ಟೆಡೆಯಲಿ ಹಾರಿಸಿದಪತಾಕೆ
ಕನ್ನಡ ॥೭॥

ಸಾಗರದ ಆಳವ ಅಳೆಯಬಹುದು, ಗಗನೆತ್ತರವ ಅರಿತ್ಹೇಳಬಹುದು
ರವಿಯ ಪ್ರಖರತೆಯ ಗುರುತಿಸಬಹುದು, ತಮ್ಮಾಳ ಅಗಲತೆಯ
ಅರಿತಿಲ್ಲವೆನಬಹುದು ॥೮॥

ನಾಡ ಉದ್ದಗಲಕ್ಕೆಲ್ಲ ಜನ ಸ್ಮರಿಸುತಿದೆ, ಹಾಡಿಹಾಡಿ ನೋಡಿ ನೋಡಿ
ಕುಣಿಯುತಿದೆ
ಜನರೆ ತಾವ್ ಹೇಳಿದಾ ಮಾತನು ಮರೆತಿದೆ, ಕನ್ನಡ ನುಡಿಯಲಿ
ಕೈಲಾಸವಡಗಿದೆ ॥೯॥

ಗುಣವರಿತು ಗುರುತಿಸುವ ಜನ ಮಾಡುತಿದೆ ಪುತ್ಥಳಿಯ ಅನಾವರಣ
ಇದೆ ಸಾವಿರ ಪಟ್ಟು ಶ್ರೇಷ್ಠ ಗುಣ ಕನ್ನಡವೆ ಹಾಡುತ್ತಿತ್ತು ನಿಮ್ಮ ಮನ ॥೧೦॥

—ಎಂ. ಎಫ್. ಉಪನಾಳ

ಕನ್ನಡದಾರುತಿ

ಕನ್ನಡಕೆ ದುಡಿದ ಮಹಾ ಮನುಜ
ಕರುನಾಡ ಕಟ್ಟಿದಾ ಮಹತಿ ನಾಡೋಜ.... ॥ ಪ ॥

ಕವಿದ ಪರಭಾಷೆ ಕಾರ್ಮೋಡ ಸರಿಸಿ,
ಕಂಪನಿ ಸರಕಾರದ ಕಣ್ಣನು ತೆರಿಸಿ,
ಕನ್ನಡದ ಕಸ್ತೂರಿ ಕಂಪನು ಸೂಸಿ,
ದುಡಿದಿರಿ ಕನ್ನಡದ ಬಾವುಟವನೇರಿಸಿ.... ॥ ೧ ॥

ನಿಮ್ಮಿಂದ ಮೊದಲುಗೊಂಡ ಮಠಪತ್ರಿಕೆ
"ಜೀವನ ಶಿಕ್ಷಣ" ವಾಗಿದೆ ಗುರುವೃಂದಕೆ
ಹಿರಿಯ ಕನ್ನಡ ಮಾಸಿಕ ಪತ್ರಿಕೆಯೆನಿಸಿದೆ
'ಶತಮಾನ'ವ ಕಳೆದು ಮುನ್ನಡೆದಿದೆ.... ॥ ೨ ॥

ಸ್ವಾರ್ಥತ್ಯಾಗವ ಮಾಡಿ ಪಾರಮಾರ್ಥವ ಹಿಡಿದೆ
ಅಧಿಕಾರಿ ನೀನಾದರೂ ಶರಣ ಮಾರ್ಗದಿ ನಡಿದೆ
ಶಿಕ್ಷಣದ ಪ್ರಗತಿಗೆ ಹಗಲಿರುಳು ದುಡಿದೆ
ನಿದ್ರಿಸುವ ನಮ್ಮನು ಬಡಿದು ಎಚ್ಚರಿಸಿದೆ ॥ ೩ ॥

ತರಬೇತಿ ಸಂಸ್ಥೆಯದು ನಿಮಗುಂಟು ಕೀರುತಿ
ನೀವಾದಿರಿ ಪ್ರಪ್ರಥಮ ಪ್ರಾಚಾರ್ಯ 'ಮೂರುತಿ'
ನಮ್ಮ ಹೃದಯದಿ ನಿಂತಿದೆ ನಿಮ್ಮ "ಸ್ಫೂರ್ತಿ"
ಎತ್ತುವೆವು ನಾವು 'ಮತ್ತೆ' ಕನ್ನಡದಾರುತಿ.... ॥ ೪ ॥

ಪಣವಗೈಯುವೆವಿಂದು ನಿಮ್ಮನು ಸಂಸ್ಮರಿಸಿ
"ದುಡಿಯುವೆವು ನಾವಿನ್ನು ನಿಮ್ಮನನುಸರಿಸಿ"
ಬಲ–ಛಲವ ನಮಗಿತ್ತು ಸಗ್ಗದಿಂದಲೆ ಹರಿಸಿರಿ
ಕರುಣೆಯಲಿ ನಮಗಿಂದು ಸನ್ಮಾರ್ಗ ತೋರಿಸಿರಿ.... ॥ ೫ ॥

—ಬಸವರಾಜ ಕುರುಬೇಟ್

✱ ತ್ಯಾಗ ಜೀವಕೆ ನಾಡು ಶಿರಬಾಗಿದೆ ✱

ಕನ್ನಡದ ಶಿರಿಗುಡಿಗೆ ಹೊನ್ನಕಳಸವನಿಟ್ಟು
ನುಡಿಯ ಮಂಗಲ ಗೀತೆ- ಹಾಡಿದಾಗ।
ನಿದ್ದೆ ಹೋದವರೆಲ್ಲಾ ಎಚ್ಚತ್ತು ನಮಿಸಿದರು
ನಿಮ್ಮ ಮಮತೆಯ ಸವಿಯ ಸವಿದರಾಗ

ನಸಿಸಿ ಹೋಗದ ಮುನ್ನ ನೀರೆರೆದು ನಲುವಿಂದ
ನುಡಿಯ ಸಸಿಯನು ಬೆಳಿಸಿ ನೀನುಳಿಸಿದೆ।
ನಾಡ ಹಿರಿಮೆಯನರುಹಿ ತನುವ ಅಳಿಸಿದಿರಂದು
ನಾಡಿಗರ ಎದೆಯಲ್ಲಿ ನಲಿದಾಡಿದೆ॥

ಭಾವಾಭಿವ್ಯಕ್ತಿಂಗೆ ತಾಯ್ನುಡಿಯೆ ಆಸರವು
ಎಂಬ ನೀತಿಯ ಬೆಳಕು ನೀ ಚೆಲ್ಲಿದೆ।
ಶಿಕ್ಷಕರ ಶಿಶುತನಕೆ ನುಡಿಗಲಿಪ ಗುರುವಾಗಿ
ಆಸಕ್ತಿ ಅನುಕಂಪ ಎದೆ ತುಂಬಿದೆ॥

ಹೃದಯದಾಳದೆ ಚಿಗುರಿದಭಿಮಾನ ನುಡಿಯಲ್ಲಿ
ನೂರು ವರ್ಷದ ಹರೆಯ ತುಂಬಿರುವದು।
ಸುಪ್ತ ಚೇತನವಿಂದು ಜಾಗ್ರತೆಯ ಪಡೆದಿಹುದು
ನೆನಪಿನಂಗಳದಲ್ಲಿ ನಲಿ ನಲಿದಿದೆ॥

ಆಡುನುಡಿಯಮೃತವ ಉಣಿಸಿ ತಣಿಸಿದ ಬಗೆಯ
ಅನುಭವದ ಹಾದಿಯನು ನೀ ತೋರಿದೆ।
ನೂರು ಯುಗದಾಳದಲಿ ಗಳಿಗೆಯಾದರು ನಿಮ್ಮ
ತ್ಯಾಗ ಜೀವಕೆ ನಾಡು ಶಿರಬಾಗಿದೆ॥

—ಎಚ್. ಆರ್. ಬಂಡೀವಡ್ಡರ

ಪುಣ್ಯ ಪುರುಷ

ಚನ್ನಬಸವನೆ ಪುಣ್ಯ ಪುರುಷನೆ
ಜನ್ಮಾಯ್ತೆ ನಿನ್ನ ಕನ್ನಡಕೆ ಪುರುಷನೇ ।
ನೀನಂದುದಿಸದಿರಿ ಕನ್ನಡವೆ ಕಲುಷವೆ
ನಿನ್ನ ನೆನೆವ ದಿನವಿಂದು ಕನ್ನಡಕೆ ಹರುಷವೇ ॥ ೧ ॥

ನೀನಾಗಿ ಕನ್ನಡವು ನೀನೆಲ್ಲ ಕನ್ನಡಕೆ ।
ನಿನ್ನುದಯ ಸೂಚನೆ ಕನ್ನಡದ ರಾಜ್ಯೋದಯಕೆ
ಚನ್ನಬಸವಾ ದಣಿದೆ ಕನ್ನಡದ ಪುನರುತ್ಥಾನಕೆ ।
ಅನ್ನವನೀವಂತೆ ಜ್ಞಾನದಾನಿ ನೀ ಜನಕೆ ॥ ೨ ॥

ಅನ್ಯಭಾಷಾ ಕೆಸರಲಿ ಹೂತ ಕನ್ನಡ ಕಮಲಂದು
ನಿನ್ನ ಬಲದಿಂದ ಹೊರಬಂದು ಗಂಧ ಬೀರಿಂದು ।
ತನ್ನೊಡನೆ ಚೆನ್ನಬಸವೆಂಬ ಪರಿಮಳ ಹೊತ್ತಂದು ।
ನಿನ್ನ ಶ್ರಮ ಸಾರ್ಥಕತೆಗೆ ಸಾಕ್ಷಿಯಾಗಿಹುದಿಂದು ॥ ೩ ॥

ಚಿಗುರಿಸಿದೆ ಕನ್ನಡವ ಚೇತನದ ನೀರೆರೆದು
ಮುಗುಳೊಡೆದು ಪಸರಿಸಿದೆ ತಾ ಬೆಳೆದು ।
ಮೊಗ್ಗು ತಾನರಳಿ ಕನ್ನಡದ ಕಮಲಿಂದು ।
ಹಿಗ್ಗಿನಾ ಗಂಧ ಸೂಸುತಿದೆ ಚೆನ್ನಬಸವನೆಂದು ॥ ೪ ॥

ಖಂಡಿಸಿ ದಂಡಿಸಿ ಕನ್ನಡ ದುಂಡಾಗಿಸಿದೆ ।
ಕಂಡಿತು ವೈಭವ ಸಂಜೀವಿನಿ ಅದಕಾದೆ ।
ಖಂಡಿತ ಕನ್ನಡದ ಪುಣ್ಯಪುರುಷ ನೀನಾದೆ ।
ನುಡಿವುದೆಮ್ಮದೆ ಡೆಪ್ಯುಟಿ ಚನ್ನಬಸಪ್ಪನೆಂದೆ ॥ ೫ ॥

ಕಾಣುತಿದೆ ಚಿರಹಸಿರಾಗಿ ಕನ್ನಡ ಮಾಮರವು ।
ಗಿಣಿ ಕೋಗಿಲೆ ಕೂಗುತಿವೆ ನಿನ್ನ ನಾಮವ ।
ಪುಣ್ಯಪುರುಷನೆ ಕನ್ನಡಕೆ ಚಿತ್ರಭಿಯೆ ।
ಚೆನ್ನಬಸವ ಡೆಪ್ಯುಟಿ ಚೆನ್ನಬಸವ ॥ ೬ ॥

ಕರಗಿರುವೆ ನೀ "ಮಠ ಪತ್ರಿಕೆ"ಯಲ್ಲಂದು
ಸ್ಮರಿಸುವೆ "ಜೀವನ ಶಿಕ್ಷಣದಿ" ನಾನಿಂದು ।
ಮರೆಯೆನು "ಡೆಪ್ಯುಟಿ ಚೆನ್ನಬಸವ"ನೆಂದೆಂದು ।
ಕರೆವೆನಾ "ಪುಣ್ಯಪುರುಷ" ನೀನೆಂದು ॥ ೭ ॥

—ಬಿ. ಶಿವಶಂಕರ

◎◎◎

ಸವ್ಯಸಾಚಿ

ಕನ್ನಡ ನಾಡು ನುಡಿ ನಡೆಯ।
ತ್ರಿವೇಣಿ ಸಂಗಮದಿ ನಿಮ್ಮ॥
ಜೀವನಕೆ ಹಿರಿದಾದ ಮೆರಗು।

ಚತುರ ನಯ ವಿನಯ ನಿಧಿ।
ಕನ್ನಡ ಮಾತೆಯ ವಿದ್ಯಾವಾರಿಧಿ॥

ಕನ್ನಡ ಬೆಳಗಿದ ಕಾರಣೀಭೂತ।
ಚಿರಋಣಿ ತಮಗೆ ಅನವರತ॥

ನಯ ವಿನಯ ಗಾಂಭೀರ್ಯ ಬೀರಿ।
ಶಿಕ್ಷಕ ಬಳಗದ ಗಮನವ ಹೀರಿ॥

ಕಬ್ಬಿನ ಮೇಲೆ ಜೇನು ಇಟ್ಟಂತೆ।
ಶಿಕ್ಷಕರಿಗಾಯಿತು ತಮ್ಮ ಜೊತೆ॥

ಕನ್ನಡಕೆ ಜೀವನ ಸವೆಯಿಸಿ।
ಶಿಕ್ಷಣ ರಂಗಕೆ ಸವ್ಯಸಾಚಿಯೆನಿಸಿ॥

ನೀನು ಕಂಡ ಕನಸು ನನಸಾಯಿತು।
ನಾಡ ನುಡಿಯ ಸನ್ಮಾನದಂದು॥

—ಕೊತ್ತಲ ಮಹಾದೇವಪ್ಪ

✾ ಪುಷ್ಪಹಾರ ✾

೧

ಬಸವಲಿಂಗಣ್ಣಾರ್ಯರಣುಗನೆ
ಹಸನ ಮನಸಿನ "ಚೆನ್ನಬಸವನೆ"
ವಸುಧೆಯೊಳ್ ನೆಗೆಗೊಂಡ ಗೋಗವಿಪುರದಿ ಜನ್ಮಿಸುತ ।
ವ್ಯಸನಗೊಳ್ಳುತ ಮನೆಯ ಕಷ್ಟಕೆ
ಎಸೆವ "ಧಾರಾಪುರ"ವ ಸೇರುತ
মಿಸುಪ "ಕನ್ನಡ ಭಾಷೆ"ಯಭ್ಯಾಸವನು ಪೂರ್ಣಿಸಿದ್ದೈ ॥

೨

ಹಿರಿಮೆಯಂ ಪಡೆದಾಂಗ್ಲಭಾಷೆಯ–
ನರಿಯಲೋಸುಗ ನಿಶ್ಚಯಾತ್ಮದಿ
ಚರಿಸುತಂ "ಪುಣೆ"ಯೊಳಗೆ ವಾಸವ್ಗೈದು ಧೈರ್ಯದೊಳು ।
ಹಿರಿಯಜನರಾಶ್ರವನಾರ್ಜಿಸಿ,
ಹುರುಪಿನಿಂದಿಂಗ್ರೇಜಿ ಭಾಷೆಯ
ನರಿತುಕೊಳ್ಳುತ ಪಡೆದೆ ವಿದ್ಯಾಸಂಸ್ಥೆಯೊಳ್ ಪದಮಂ ॥

೩

ಗಣಿತದೊಳ್ ಘನ ಜ್ಞಾನ ಗಳಿಸುತ
ಗುಣಿಜನರ ಗುಣಗಳಿಗೆ ಮೆಚ್ಚುತ
ದಣಿವೆಯಿಲ್ಲದಲವರ್ಗೆ ನೆರವಂ ಸಲ್ಲಿಸುತ ಜನರೊಳ್ ।
ಎಣಿಕೆಗಸದಳಮೆಣಿಪ ಗೌರವ–
ಧನವನಾರ್ಜಿಸಿ, ಕನ್ನಡಾಂಬೆಯ
ಫಣಿಯ ತಿಲಕದ ತಾಣಕೇರಿದ "ಚೆನ್ನಬಸವಾರ್ಯ !" ॥

೪

ಅಂದು ಕರ್ನಾಟಕದಿ ನೆಲಿಸಿರು-
ವೊಂದು ಪರಭಾಷೆಯನು ನೀಗುತ
ಲಂದ "ಕನ್ನಡ ಭಾಷೆಯಂ" ಪಸರಿಸುತ ಜನರೊಳಗೆ ।
ಕುಂದುಕೊರತೆಗಳೆಡರು ಬಿಡಿಸಲು,
ಹೊಂದಿಕೆಯ ಗ್ರಂಥಗಳ ನಿರ್ಮಿಸು-
ತೊಂದೆ ಮನದಿಂ "ಚೆನ್ನಬಸವನೆ" ದುಡಿದೆ ನೀಂ ಧನ್ಯಂ ॥

೫

ಕನ್ನಡಾಂಬೆಯ ವೀರ ಭೃತ್ಯನೆ,
ಕನ್ನಡಕೆ ತನು, ಮನವ ನೀಡುತ,
ಚೆನ್ನಬಸವನೆ ಕರಿಯನಾಡಿನ ಭಾಗ್ಯನಿಧಿಯೆಂದುಂ ।
ಮನ್ನಣೆಯ ಪಡೆದನುದಿನದಿ ನೀಂ
ಕನ್ನಡಾಮೃತ ಸವಿಯ ಜನರಿಗೆ
ಉಣ್ಣಿಸಲು ಬಾ ಧರೆಗಿಳಿದು ಹೊಸ ಜನ್ಮವಂ ತಳೆದುಂ ॥

—ಹಂ. ವೀ. ಕುಲಕರ್ಣಿ,

ಮಾದರಿಯ ಪುರುಷ

ಅಂದು ಕನ್ನಡದ ತೇರನೆಳೆದೆ
ಇಂದು ಕನ್ನಡಿಗರಿಗೆ ಪ್ರಮಥನಾದೆ
ಶಿಕ್ಷಣದ ಕ್ಷೇತ್ರಕ್ಕೆ ನೀನೆ ಮೇಟಿ
ಛಲದಲ್ಲಿ ಯಾರಿಲ್ಲ ನಿನಗೆ ಸರಿ ಸಾಟಿ
ಬಸವ ಭೂಮಿಯಲಿ ಯಶಪಡೆದ ಪುರುಷ
ಹಸನಾಗಿ ಬಾಳಿದ ಮಾದರಿಯ ಪುರುಷ
'ಕನ್ನಡವೆ ಉಸುರೆನಗೆ, ತಾಯೆಂ'ದು ನಂಬಿ
ಕನ್ನಡದ ಧ್ವನಿಯಲ್ಲಿ ಚೈತನ್ಯ ತುಂಬಿ,
ಶಿಕ್ಷಣದ ತುಕ್ಕು, ತಿಕ್ಕಿ ತೊಳೆದವ ನೀನು
ಕುಂಟುತಿಹ ಕನ್ನಡಕೆ
ಕಾಲುಕೊಟ್ಟವ ನೀನು !
ಓ.... ಧಾರವಾಡದ ಅರವಿಂದ,
ಕನ್ನಡ ಸ್ವಾತಂತ್ರ್ಯ, ಸಂಸ್ಕೃತಿಯ ಕೇಂದ್ರ !
ಗೆಳೆತನಕೆ ಎಳೆತನದ ಮುಗ್ಧಮನ ಮೆರೆದು,
ತಿರುಳುಗನ್ನಡದ ಕಾವ್ಯಗಳ ಮೊರೆದು,
ಕನ್ನಡಿಗರೆದೆಯಲ್ಲಿ ತುಂಬಿದೆ ಸತ್ವ !
ಆಹ್ ! ಧಾರವಾಡದಲೊಂದು....
ಮಾಸ್ತರರ ಮಹಾಮನೆಯ ಕಟ್ಟಿ,
ಶಿಸ್ತುಗಾರರ ಕಂಬಗಳ ನೆಟ್ಟ
ಎಂದೆಂದೂ ಅಲುಗದ ಅಂದದಲಿ
ಮಾಡಿದೆ ಅದನು ಗಟ್ಟಿಮುಟ್ಟ.

—ನಿಂಗಣ್ಣ ಕುಂಟಿ

೦೦೦

ಕರುನಾಡ ಸಿರಿಗುವರ

ಕನ್ನಡದ ಕೆಲಸಕ್ಕೆ ನೀ ನಡೆದ ದಾರಿ
ಒಂದಲ್ಲ, ಎರಡಲ್ಲ, ನೂರು ಹರದಾರಿ
ಪ್ರತಿಯೊಂದು ಹೃದಯದಲಿ ಕನ್ನಡದ ದೀಪ
ಹಚ್ಚಿ ಉರಿಸಿದ ಹಿರಿಯ ನೀವೆ ಬಸವಾರ್ಯ ॥ ೧ ॥

"ಡೆಪ್ಯುಟಿ" ಎಂದರು ಜನರು ನಿನಗೆ ಸಾರ್ಥಕ್ಯ
ನಿನಗಿಂತ ಹಿರಿದಾದ ಕನ್ನಡಿಗನಿಲ್ಲ
ನಿನ್ನ ಸ್ಥಾನವು ನಿನಗೆ ನೀನೇ ಅನನ್ಯ
ಕನ್ನಡದ ನಾಡಿನಲಿ ನೀ ಅಗ್ರಮಾನ್ಯ ॥ ೨ ॥

ಚೆನ್ನಬಸವಣ್ಣನಂತೆಯೇ ನೀನೂ ಕೂಡ
ಕ್ರಾಂತಿ ಕಹಳೆಯ ಮೊಳಗಿ ನಡೆದಿರುವೆ ನೋಡು !
ನಿನ್ನಂಥ ಗುರು–ಹಿರಿಯ ಹುಟ್ಟಿರುವದೇ ಪುಣ್ಯ
ಕನ್ನಡದ ನಾಡು ಇದು ಭೂಮಿಯಲಿ ಗಣ್ಯ ॥ ೩ ॥

ನಿಮ್ಮ ಹೃದಯವು ವಿದ್ಯೆ ವಿನಯಕ್ಕೆ ತವರು
ನಾಡು–ನುಡಿಗಳಿಗಾಗಿ ಸುರಿಸಿದಿರಿ ಬೆವರು
ನೀವು ಅಡಿಯಿಟ್ಟ ನೆಲ ಬೆಸನಾಯ್ತು–ಧನ್ಯ
ಕರುನಾಡ ಸಿರಿಗುವರನೀ ಅಸಾಮಾನ್ಯ ॥ ೪ ॥

ನೀನು ದುಡಿದಿಹ ದುಡಿಮೆ ಎಲ್ಲರಿಗೂ ವೇದ್ಯ
ನಿನ್ನ ಋಣ ಮುಕ್ತಿಯದು ನಮಗಿಲ್ಲ ಸಾಧ್ಯ
ನಿನ್ನ ಶತಮಾನವನು ಆಚರಿಸಿ ನಾವು
ನಿನ್ನ ಪದತಲಕೆರಗಿ —ಇಡುತಿಹೆವು ಹೂವು ॥ ೫ ॥

—ನಾರಾಯಣ ಅಂಗಡಿಕೇರಿ

ಕನ್ನಡದ ಕಲ್ಪತರು

ನಿನ್ನ ಹೆಸರು ಚೆನ್ನಬಸವ ಕನ್ನಡಾಂಬೆ ಕಂದನೆ
ನಿನ್ನ ಬೆವರ ಬಾವುಟದಡಿ ನಮ್ಮ ನೂರು ವಂದನೆ
ನಿನ್ನ ಶ್ರಮದ ಫಲವನಿಂದು ಉಂಬುತಿಹೆವು ವಂದ್ಯನೆ
ಸಹಿಸಲಿಲ್ಲ ನೀನು ಎಂದು ಕನ್ನಡದ ನಿಂದನೆ

ಬುದ್ಧಿಯಿಂದ ಯುಕ್ತಿಯಾಗಿ ತುಂಬಿ ತಂದೆ ಚಿಂತನ
ಹುದ್ದೆಯಿಂದ ಶಕ್ತಿಯಾಗಿ ಮುಕ್ತಿಗೈದೆ ಬಂಧನ
ವಿದ್ಯೆಯಿಂದ ಕಡೆದು ಕಡೆದು ಕನ್ನಡದ ಮಂಥನ
ಮುದ್ದೆಯಾಗಿ ಮೂಲೆ ಹಿಡಿದ ಕನ್ನಡಿಗನ ಸಾಂತ್ವನ
ನಾಡ ಪುನರ್ಜೀವನ

ಹಂಡಬಂಡ ಇಂಗ್ಲೀಷ ಮರಾಠಿಯ ಮಾಲೀಶ
ತೊಡೆದು ಹಾಕಿ ಪಡೆದೆಯಿದೊ ಕನ್ನಡದ ಕಲಶ
ಪತ್ರಕರ್ತನಾಗಿ ಗೈದೆ ನಾಡ ಹಿರಿಮೆ ದರ್ಶನ
ಉತ್ತರ ಕರ್ನಾಟಕದಲ್ಲಿ ನಿನ್ನ ಮಾರ್ಗದರ್ಶನ

ಅಂದು ನೀನು ಬಿತ್ತಿದಂಥ ಬೀಜ ಮೊಳೆತ ರೀತಿಯ
ಇಂದು ನೋಡು ವಿಶ್ವದಲ್ಲಿ ಕನ್ನಡದ ಖ್ಯಾತಿಯ
ಶಿಲ್ಪಿಯಾಗಿ ಕಲಿತರೂ ಕನ್ನಡಕೆ ಕಲ್ಪತರು
ನಿನ್ನ ದೂರ ದೃಷ್ಟಿಯಿಂದ ಕನ್ನಡದ ವೃಷ್ಟಿಯು

—ಮಹಮದಲಿ ಗೋಗೇರಿ

ಕನ್ನಡದ ಆದಿಗುರು

ಕನ್ನಡಾಂಬೆಯ ಸಿರಿಯ ಸೊಬಗ ಹೆಚ್ಚಿಸ ಬಂದ
ನಿಜಹುತಾತ್ಮರಲಿ, ನೀವಹುದು ಅಗ್ರಗಣ್ಯ
ಕಂಕಣವ ಕಟ್ಟಿ, ನಾಡಸೇವೆಗೈದಿಹ ಮಾನ್ಯ
ನಿಮ್ಮ ಪಡೆದ ತಾಯಿ ಧನ್ಯಳಾದಳು ತಂದೆ!
ಅವಳ ಶ್ರೀಮುಖದಮಲಕಾಂತಿ ಬೆಳಗಿತಂದೆ.
ಗೆಲವು ಸಿರಿಗನ್ನಡಕೆ, ನಲಿವು ಹೊಸಗನ್ನಡಕೆ,
ನಾಡ ಬಾವುಟವೇರಿ ಹಾರಿತದೋ ಗಗನಕೆ
ಕನ್ನಡದ ತೇರು ಮೈಕೊಡವಿ ನಡೆಯಿತು ಮುಂದೆ.

ಹಲವು ವಿಧದಲಿ ಮಾತೆಯನು ಸೇವಿಸಿದ ಭಕ್ತ,
ಪ್ರಿನ್ಸಿಪಾಲ, ಡೆಪ್ಯೂಟಿ, ವಾಗ್ದೇವಿಯಾ ಭಕ್ತ,
ಕನ್ನಡದ ಕುವರರಿಗೆ ಬೋಧಿಸಿದ ಪರಮಗುರು;
ಇಂದಿನೀ ಕನ್ನಡಕೆ ನೀವಹುದು ಆದಿಗುರು
ನಿಮ್ಮಗೆಯ್ಮೆಯು, ಸಿದ್ಧಿಯ ತೇಜ ಅಮರ ಹೊಳಪ
ಅನುಪಮದ ಚರಿತವದು ಶ್ರೀಚನ್ನಬಸವಪ್ಪ.

—ಡಾ || ಗುರುಲಿಂಗ ಕಾಪಸೆ

ಕನ್ನಡ ಕುಲದೀಪಕ

ಮುತ್ತಿ ಮುಸುಗಿದ ಅನ್ಯಭಾಷೆಯ ಮಂಜಸೊತ್ತಿ

ಕತ್ತೆತ್ತಿ, ಕನ್ನಡದ ಹೊಂಗಿರಣಗಳ ಚಾಚಿ
ಎಚ್ಚರಿಸಿ, ತನ್ನತನದರಿವ ಮೂಡಿಸಿ, ಮೊಳಗಿ

ಮೂಲೆ ಮೂಲೆಗು ಶಾಲೆ : ಚಿಲಿಪಿಲಿಯ ದನಿಯೆತ್ತಿ
ಉದಯ ಕಾಲದ ಸ್ಫೂರ್ತಿಕೇಂದ್ರವಾಗುತ, ನೂರು—

ಹೃದಯದೊಳ ಹೊಕ್ಕು ಹೊರಹೊಮ್ಮಿಸಿದ ಕೃತಿಯಾಗಿ,
ಕೆರಳಿ ಆತ್ಮಸ್ತುತಿಗೆ, ಗುಡುಗಿದರು ಹುಲಿಯಾಗಿ,

ಕರ್ತವ್ಯಕ್ಕೆ ಕಲಿ; ವಾದಿ, ವಾಗ್ಮಿ, ನಿಸ್ಪೃಹರು
ಸಾಹಿತ್ಯ–ಶಿಕ್ಷಣವು ಒಡವೆರೆದು ತಾಯ್ನುಡಿಗೆ—

ಗುಡಿಯಾಗಿ, ಕೋಟಿ ಕೊತ್ತಳ ಭದ್ರವಾಗಿಡಲು
ಧಾರವಾಡೆತ್ತರ ಬಿತ್ತರದ ಅಡಿಗಲ್ಲು.

ಆ ಗಣಿತದ ಗುಣಾಕಾರ ವರ್ಧಿಸಿತು ಹೀಗೆ.

ನೂರು ವರುಷದ ಮೇಲೆ ಮೂಲಪುರುಷನ ಕಂಡು
ಕೈಮುಗಿದೆ : ಇದ್ದರಿರಬೇಕಪ್ಪ ಇಂಥ ಗಂಡು.

—ಚೆನ್ನವೀರ ಕಣವಿ

೦೦೦

ಚನ್ನಬಸಪ್ಪನವರ ಕಾಲ

ಕೆಲವು ದಾಖಲೆಗಳು

—ಶಿವಶಂಕರ ಹಿರೇಮಠ

ದಾಖಲೆಗಳ ವರ್ಗೀಕರಣ:

I. ಚನ್ನಬಸಪ್ಪನವರ ಪರಿಪತ್ರಗಳು :

(i) ಕನ್ನಡಾಭಿಮಾನ
(ii) ಸುಧಾರಣೆಯ ಕಳಕಳಿ
(iii) ನಿಷ್ಠುರ ನಿಸ್ಪೃಹ ಅಧಿಕಾರಿ.

II. ಇತರ ದಾಖಲೆಗಳು :

(i) ಉಚಿತ ಪ್ರಸಾದ ನಿಲಯದ ಪ್ರಾರಂಭ
(ii) ಹೊಸ ಪುಸ್ತಕ
(iii) ಧಾರವಾಡದಲ್ಲಿ ಕಾಲೇಜ ಸ್ಥಾಪನೆಯ ಪ್ರಯತ್ನ
(iv) ಗದಗಿನಲ್ಲಿ ಇಂಗ್ಲಿಷ ಶಾಲೆ

I. ಚನ್ನಬಸವಪ್ಪನವರ ಪರಿಪತ್ರಗಳು

(i) ಕನ್ನಡಾಭಿಮಾನ

(೧)

ಬೆಳಗಾವಿ ಜಿಲ್ಹೆಯೊಳಗಿನ ಯಾವತ್ತು ಕನ್ನಡ ಸ್ಕೂಲ ಮಾಸ್ತರರಿಗೆ— ತಿಳಿಯ ಪಡಿಸುವದೇನೆಂದರೆ ನಿಮ್ಮ ಕಡಿಯಿಂದ ನಂಮ ಕಡಿಗೆ ಬರುವ ಪತ್ರಿಕೆಗಳೆಲ್ಲಾ ಕನ್ನಡ ದಲ್ಲಿ ಬರಿಯಬೇಕು.

ತಾ॥ ೧೬ ಮಾಹೆ ಜನೇವರಿ ಸಂ. ನ ೧೮೬೬ ಇಸ್ವಿ.,
ಮಠಪತ್ರಿಕೆಯ ಪುಸ್ತಕ . ಸಂಚಿಕೆ ೧೦, ಫೆಬ್ರುವರಿ ೧೮೬೬, ಪುಟ ೨೬೦.

ಡೆ. ಚನ್ನಬಸವಪ್ಪನವರ ಕುರಿತು ದಾಖಲೆಗಳನ್ನು ಸಂಗ್ರಹಿಸಿದ ಶ್ರೀ ಶಿವಶಂಕರ ಹಿರೇಮಠರು ಸದ್ಯ ಧಾರವಾಡದ ಶಿಕ್ಷಕರ ಕೇಂದ್ರದ ಪ್ರಾಚಾರ್ಯರೆಂದು ಕಾರ್ಯನಿರ್ವಹಿಸುತ್ತಿದ್ದಾರೆ.

(೨)

ಬೆಳಗಾವಿ ಜಿಲ್ಹೆದಲ್ಲಿರುವ ಯಾವತ್ತು ಕನ್ನಡ ಸಾಲಿಗಳ ಪಂತೋಜಿಯವರಿಗೆ— ಕೆಳಗೆ ಸಹಿ ಮಾಡುವವರ ಕಡಿಯಿಂದ ತಿಳಿಸುವದೇನೆಂದರೆ- ಈಗ ಎರಡು ತಿಂಗಳ ಮುಂದೆ ನಮ್ಮ ಕಡಿಗೆ ಕಳುಹಿಸುವ ಕಾಗದ ಪತ್ರಗಳನ್ನು ಕನ್ನಡಿನಲ್ಲಿ ಬರದು ಕಳಸುತ್ತ ಹೋಗಬೇಕೆಂದು ನೋಟೀಸು ಕೊಟ್ಟಿರಲಿಕ್ಕಾಗಿ ನಿಂಮುಲ್ಲಿಯು ಕೆಲವರ ಕಡಿಯಿಂದ ಕನ್ನಡದಲ್ಲಿ ಕಾಗದ ಪತ್ರಗಳು ಬರುವದಿಲ್ಲ. ಅಂದರೆ ಇನ್ನುಮೇಲೆ ಹೀಗೆ ಮಾಡದೆ ಕನ್ನಡದಲ್ಲಿ ಬರದು ಕಳಸುತ್ತ ಹೋಗಬೇಕು. ಯಾರಿಗೆ ಕನ್ನಡ ಬರೆಯಲಿಕ್ಕೆ ಬರುವದಿಲ್ಲ, ಅವರು ಕನ್ನಡ ಬರಿಯಲಿಕ್ಕೆ ಕಲಿಯಬೇಕು.

ತಾ॥ ೧೨, ಅಗಷ್ಟ ೧೮೬೭ ಇಸವಿ, ಬೆಳಗಾವಿ.

(೩)

ಬೆಳಗಾವಿ ಜಿಲ್ಹೆಯೊಳಗಿನ್ನ ಯಾವತ್ತು ಸ್ಕೂಲಮಾಸ್ತರರಿಗೆ ಈ ನೋಟೀಸಿನಿಂದ ತಿಳಿಸುವದೇನಂದರೆ— ನಿಮಗೆ ಸಾಲಿಗಳಲ್ಲಿ ನೀವು ಹುಡುಗರಿಗೆ ಯಾವತ್ತು ವಿಷಯ ಗಳನ್ನು ಕನ್ನಡದಲ್ಲಿ ಕಲಿಸಬೇಕು. ಮತ್ತು ಕನ್ನಡ ಅಂಕಿಗಳಲ್ಲಿ ಲೆಖ್ಖ ಮಾಡಿಸಬೇಕು. ಇದರಂತೆ ಹಿಂದಕ್ಕೆ ನೋಟೀಸು ಕೊಟ್ಟಿದ್ದು ಕೆಲವು ಮಾಸ್ತರರು ಅದರಂತೆ ನಡೆಯುವ ದಿಲ್ಲವೆಂತ ಕೇಳುತ್ತೇವೆ. ಅದರಿಂದ ತಿರುಗಿ ಈ ನೋಟೀಸು ಛಾಪಿಸಿದೆ.

ತಾರೀಖು ೨೬ ಅಗಷ್ಟ ೧೮೬೭ ಇಸ್ವಿ., ಮುಕ್ಕಾಂ ಬೆಳಗಾಂವ.

(೪)

ಬೆಳಗಾವಿ ಜಿಲ್ಹೇದ ಡೆಪ್ಯುಟಿ ಎಜ್ಯುಕೇಶನಲ್ ಇನಸ್ಪೆಕ್ಟರ ಕಡಿಯಿಂದ ಗೋಕಾಂವಿ, ಪರಸಗಡ ಮತ್ತು ಸಂಪಗಾವಿ ಈ ಮೂರು ತಾಲೂಕಗಳಲ್ಲಿರುವ ಯಾವತ್ತು ಸ್ಕೂಲ ಮಾಸ್ತರರಿಗೆ ತಿಳಿಸುವದೇನಂದರೆ— ಹಿಂದಕ್ಕೆ ನಮ್ಮ ನಮ್ಮ ಸಾಲಿಗಳಲ್ಲೆಲ್ಲ ಬಾಳಬೋಧ ಪುಸ್ತಕಗಳನ್ನು ಓದಲಿಕ್ಕೆ ಕಲಿಸದೆ ಕನ್ನಡ ಕಲಿಸ ಬೇಕೆಂದು ಹೇಳಿದ್ದಿವಿ, ಅದರಂತೆ ವಹಿವಾಟು ನಡೆಸಿದ್ದೀರಾದೀತು. ಯಲ್ಲೆ ಇನ್ನೂ, ವಹಿವಾಟು ನಡದಿರಲಿಕ್ಕಿಲ್ಲಾ, ಅಲ್ಲೆ ಈ ನೋಟೀಸ ಕಂಡ ದಿವಸದಿಂದ ಬಾಳಬೋಧ ಓದಿಸುವದನ್ನು ಖಂದಮಾಡಬೇಕು. ಮತ್ತು ಯಾವತ್ತು ವಿಷಯಗಳನ್ನು ಕನ್ನಡಿನಿಂದ ಕಲಿಸಬೇಕು.

ತಾರೀಖು ೧೧ ಸಪ್ಟಂಬರ ೧೮೬೭, ಸಪ್ಟಂಬರ ೧೮೬೭ ಪುಸ್ತಕ ೩
ಸಂಚಿಕೆ–೬ ಪುಟ–೧೭೪.

(೫)

ಗೋಕಾಂವಿ, ಸೌಂದತ್ತಿ ಮುತ್ತು ಸಂಪಗಾಂವಿ ತಾಲೂಕಿನಲ್ಲಿರುವ ಯಾವತ್ತು ಮಾಸ್ತರರಿಗೆ ತಿಳಿಸುವದೇನಂದರೆ— ನೀವು ನಮ್ಮ ದಪ್ತರುಗಳನ್ನು ಕನ್ನಡಿನಲ್ಲಿ ಇಡ್ರಿ.

ಯಿತ್ತ ಕಡಿಯಿಂದಾಗಲಿ, ಅಥವಾ ಮತ್ತಾವ ಕಡಿಯಿಂದಾಗಲಿ ನಿಮಗೆ ಆರೇ ಬರದು ಬಂದರೂ ಸಹಾ ನೀವು ಕನ್ನಡಿನಲ್ಲಿ ಉತ್ತರ ಕೊಡುತ್ತ ಬರ್ರಿ. ಯಿನ್ನಮೇಲೆ ನಮ್ಮ ಕಡಿಗೆ ಬರುವ ಕಾಗದಗಳು ಆರೇದಲ್ಲಿ ಬರಬಾರದು.

ತಾರೀಖು ೧೬ ಸಪ್ಟಂಬರ ೧೮೬೭ ಇಸ್ವಿ ಬೆಳಗಾವಿ.

(೬)

ಬೆಳಗಾವಿ ಜಿಲ್ಹೇದ ಡೆಪ್ಯುಟಿ ಎಜ್ಯುಕೇಶನಲ್ ಇನಸ್ಪೆಕ್ಟರರ ಕಡಿಯಿಂದ ಆ ಜಿಲ್ಹೆದೊಳಗಿನ ಯಾವತ್ತು ಕನ್ನಡ ಸಾಲಿಗಳ ಮಾಸ್ತರರಿಗೆ ತಿಳಿಸುವದೇನಂದರೆ— ನಿಮ್ಮಲ್ಲಿ ಕೆಲವರು ಇತ್ತ ಕಡೆಗೆ ಕಳುಹಿಸುವ ಕಾಗದ ಪತ್ರಗಳನ್ನು ನೆಟ್ಟಗೆ ಲಕ್ಷ ಕೊಟ್ಟು ಬರಿಯದ ಕಾರಣ ಅವುಗಳಲ್ಲಿ ನಾನಾ ಪ್ರಕಾರದ ತಪ್ಪುಗಳು ಇರುತ್ತವೆ. ಹೀಗೆ ತಪ್ಪುಗಳನ್ನು ಬರಿಯಬಾರದೆಂದು ನಾವು ಹಿಂದಕ್ಕೆ ಎರಡು ಸಾರೆ ನೋಟೀಸು ಕೊಟ್ಟದ್ದು ಸಹ ಇನ್ನೂ ಕೆಲವು ಕಾಗದ ಪತ್ರಗಳು ಅಶುದ್ಧ ಬರೆದವು ಬರುತ್ತವೆ. ಆದರೆ ಇನ್ನು ಮುಂದೆ ನಮ್ಮ ಕಡಿಗೆ ಕಳುಹಿಸುವ ಯಾವತ್ತು ಪತ್ರಗಳನ್ನು ಕನ್ನಡಿನಲ್ಲಿ ಬರದು ತಿರುಗಿ ಓದಿ ನೋಡಿ ತಿದ್ದಿ ಇತ್ತ ಕಡಿಗೆ ಕಳುಹಿಸುತ್ತ ಹೋಗಬೇಕು.

ತಾರೀಖು ೧೬ ಸಪ್ಟಂಬರ ೧೮೬೭.

(೭)

ಮಹಾರಾಜ ರಾಜಮಾನ್ಯ ರಾಜಶ್ರೀ ಸ್ಕೂಲ ಪೇಪರ ಎಡಿಟರ್ ಇವರಿಗೆ—

ನಾನು ಬರೆದ ಕಳುಹಿಸಿದಂಥ ಪತ್ರವನ್ನು ತಮ್ಮ ಸ್ಕೂಲ ಪೇಪರಿನಲ್ಲಿ ಛಾಪಿಸಿ ಪ್ರಕಟ ಮಾಡಬೇಕೆಂದು ವಿಜ್ಞಾಪಿಸಿದ್ದೇನೆ. ಈ ಪತ್ರದಲ್ಲಿ ಇರುವಂಥ ಮಜಕೂರು ಸತ್ಯವೆಂಬುದಾಗಿ ನಾನು ಪುರಾವೆ ಮಾಡಿಕೊಡಲಿಕ್ಕೆ ಸಿದ್ಧನಿದ್ದೇನೆ.

ಮೇಹರಬಾನ ನಾಗೇಶ ವಿನಾಯಕ ಬಾಪಟ ಡಿ. ಎ. ಇ. ಜಿಲ್ಹಾ ಬೆಳಗಾಂವ ಇವರು ಮಾಡಿದ ಅವ್ಯವಸ್ಥೆ :

೧. ಸಂವದತ್ತಿ ಸಾಲಿಯೊಳಗೆ ನಾನು, ಇಂಗ್ಲೀಷ ಕ್ಲಾಸಕ್ಕೆ ಅಭ್ಯಾಸ ಮಾಡಿಸುವಾಗ್ಯೆ, ಕೆಲವು ಸಾಮಾನುಗಳೂ, ಕೆಲವು ಬುಕ್ಕುಗಳೂ ಅವಶ್ಯವಾಗಿ ಬೇಕಾಗುತ್ತವೆ. ದಯಮಾಡಿ ಕಳುಹಿಸಿಕೊಡಬೇಕೆಂಬುದಾಗಿ ರಿಪೋರ್ಟ ಬರ ಕೊಂಡದ್ದಕ್ಕೆ "ನಾಗೇಶಪ್ಪನವರು" ನಿಮಗೆ ಕೆಲಸ ಮಾಹಿತಿ ಏನೇನು ಇಲ್ಲಂತ ಹುಕುಂ ಕೊಟ್ಟಿರುತ್ತಾರೆ. ಅಂದ ಬಳಿಕ ನಾನು ಕೇಳುವದೇನು ? ಇವರು ಹೇಳುವದೇನು ? ಇದನ್ನು ಬಲ್ಲವರು ವಿಚಾರ ಮಾಡಬೇಕು.

೨. ಮೆ॥ ನಾಗೇಶಪ್ಪನವರು ದೇಶ ಭಾಷೆಯಲ್ಲಿ ಪರೀಕ್ಷೆ ಕೊಟ್ಟಿಲ್ಲ. ಹಾಗೂ ದೊಡ್ಡ ಕಾಲೇಜದಲ್ಲಿ ಕಲಿತಿಲ್ಲ. ನಾನು ಪುಣೇದ ಇಂಜನಿಯರಿಂಗ ಕಾಲೇಜದಲ್ಲಿ

ಇದ್ದವನು, ಹಾಂಗು ಬೆಳಗಾಂವಿ ಟ್ರೇನಿಂಗ ಕಾಲೇಜದಲ್ಲಿ ಕೆಲವು ದಿವಸ ಶಿಕ್ಷಕ ಕೆಲಸ ನೋಡಿದವನು, ಹೀಗಿದ್ದು ನನಗೆ ಕೆಲಸದ ಮಾಹಿತಿ ಇಲ್ಲ ಅಂತಾರೆ, ಇದು ಬಹು ಆಶ್ಚರ್ಯವದೆ.

೩. ಕೈದ ಅನುಭವಿಸಿದಂಥ ಜನರಿಗೆ ನಾಗೇಶರಾಯರು ಶಿಕ್ಷಕ ಕೆಲಸಗಳನ್ನು ಕೊಟ್ಟಿರುತ್ತಾರೆ. ಇವರಿಗೆ ಕೆಲಸ ಕೊಡುವಾಗ ನಾನು ಜಾಹೀರ ಮಾಡಿದೆನು. ಅಂದಾಗ್ಯೂ ನನ್ನ ಮಾತು ಲಕ್ಷಕ್ಕೆ ತರದೆ. ಶಕ್ತಮಜ್ಯರಿ ಕೈದ ಆದಂಥ ಜನರಿಗೆ ವಿದ್ಯಾಖಾತೆಯಲ್ಲಿ ಕೆಲಸಕೊಟ್ಟ ಬಳಿಕ ಇವರು ಕೆಲಸ ನೋಡುವ ಪದ್ಧತಿ ಹ್ಯಾಗಿರತ ದೆಂಬುವದು ಮೆ॥ ರಸಲ ದೊರೆಗಳು ವಿಚಾರ ಮಾಡಬೇಕು. ಕೈದಾದ ಜನರು ವಿದ್ಯಾ ಖಾತೆಯಲ್ಲಿ ಇರುವದರಿಂದ ವಿದ್ಯಾಖಾತೆಕ್ಕೆ ಲಾಂಛನವದೆ.

೪. ವರಿಷ್ಟ ಕಾಮದಾರರು ಏನಾದರೂ ತಪ್ಪು ಮಾಡಿದರೆ ಅದನ್ನ ಅವರ ಕೈಕೆಳಗಿನ ಕಾಮದಾರರು ಸರಕಾರಕ್ಕೆ ಜಾಹೀರ ಮಾಡಬೇಕು. ತಿಳಿದು ತಿಳಿದು ಜಾಹೀರ ಮಾಡದೆ ಹೋದರೆ ಕೈಕೆಳಗಿನ ಕಾಮದಾರರು ಗುನ್ಹೆಗಾರರಾಗುತ್ತಾರೆ. ಹೀಗಿದ್ದು ಸವದತ್ತಿ ಸಾಲಿಯ ಹೆಡ್ಡಮಾಸ್ತರ ರಾಜಶ್ರೀ ಬಾಳಪ್ಪ ವಿನಾಯಕಪ್ಪ ಕಾಳಿನವರ ಕೆಲವು ತಪ್ಪುಗಳ ವಿಷಯದಲ್ಲಿ ಖಾತ್ರಿ ಮಾಡಿಕೊಡುವ ಬಗ್ಗೆ ಚೋಪಡಿ ಯನ್ನೂ, ಕೆಲವು ಕಾಗದ ಪತ್ರಗಳನ್ನೂ ನಾಗೇಶರಾಯರ ಕಡಿಗೆ ನಾನು ಕಳುಹಿಸಿರ ಲಾಗಿ, ಅವುಗಳನ್ನು ಏನೂ ನೋಡದೆ, ಆದರೊಳಗಿನ ಮಜಕೂರವನ್ನು ತಿಳಕೊಳ್ಳದೆ, ನನ್ನ ಮೇಲಿನ ಶಿಟ್ಟಿನಿಂದಲೂ, ನನ್ನ ಲುಕಸಾನ ಮಾಡುವ ಇರಾದೆಯಿಂದಲೂ ಸರ-ಕಾರ ಕಾಯದೆಯನ್ನು ಒತ್ತಟ್ಟಿಗೆ ಇಟ್ಟು ಆ ಕಾಗದಪತ್ರಗಳನ್ನು ವ ಚೋಪಡಿಯನ್ನು ತಿರುಗಿ ನಾಟಪೇಡ ಮಾಡಿ ಕಳಿಸಿರುತ್ತಾರೆ. ಅಂದ ಬಳಿಕ ಯಾರಿಗೆ ತಿಳಸಬೇಕು.

೫. ನಾನು ಸವದತ್ತಿ ಸಾಲಿಯ ಇಂಚಾರ್ಜ ಕೆಲಸ ನೋಡುವಾಗ್ಗೆ ನಾಗೇಶ ರಾಯರು ಹೀಗೆ ಹುಕಂ ಕೊಟ್ಟಿರುತ್ತಾರಲ್ಲಾ— ಸಾಲಿ ಚಾರ್ಜ ನಿಮ್ಮ ಕಡಿಗೆ ಇರುವ ತನಕ ನೀವು ಯಾವ ಬಗ್ಗೆ ರಿಪೋರ್ಟ ಮಾಡಬಾರದು. ಅಂದ ಬಳಿಕ ನನ್ನನ್ನು ಇಂಚಾರ್ಜ ಕೆಲಸದ ಮೇಲೆ ನೇಮಿಸಿ ಫಲವೇನು ? ಬಲ್ಲವರು ನೋಡಿರಿ.

೬. ಮೆ॥ ನಾಗೇಶರಾಯರು ಒಮ್ಮೆ ಅಂತಾರಲ್ಲ— ೨ನೇಯತ್ತಾ ಕಲಿಯುವ ವರು ಚೀಟಿ ಓದಬೇಕು. ಮತ್ತೊಮ್ಮೆ ಅಂತಾರಲ್ಲಾ ೩ನೇಯತ್ತಾ ಕಲಿಯುವವರು ಚೀಟಿ ಓದಬೇಕು. ಇದರ ಮೇಲಿಂದ ಹೀಗೆ ಸ್ಪಷ್ಟ ಮಾಡತಾರಲ್ಲಾ— ೨ನೇಯತ್ತಾ ಕಲಿಯುವವರು ಚೀಟಿ ಓದಬೇಕು. ಅಂದ ಬಳಿಕ ಯಾವ ಪ್ರಕಾರ ನಡಿಯಬೇಕು ? ಈಗ ಮಾರ್ಚ ತಿಂಗಳ ಮತಪತ್ರಿಕೆಯಲ್ಲಿ ಅಂತಾರಲ್ಲಾ ೩ನೇಯತ್ತಾದವರು ಚೀಟಿ ಓದದೇ ೧ನೇಯತ್ತಾದವರು ಚೀಟಿ ಓದಬೇಕೆಂಗು. ಎಲ್ಲಿಂದ ತಗದರೋ ಏನೋ ? ದೇವರಿಗೆ ಗೊತ್ತು ಅಂದ ಬಳಿಕ ಒಂದು ಗೊತ್ತು ಇಲ್ಲದಾಂಗೆ ಆಯಿತು. ಹೌದೋ ಅಲ್ಲೋ ನೀವೇ ತಿಳಿಯಿರಿ.

೭. ಸಂವದತ್ತಿ ಸಾಲಿಯಲ್ಲಿ ಕನ್ನಡ ಕವಿತೆಯ ೧ನೇ ಪುಸ್ತಕವನ್ನು ಕಲಿಸುವ ಬಗ್ಗೆ ಹಾಗು ೨ ನೇ ಪುಸ್ತಕಗಳನ್ನು ಕಲಿಸುವ ಬಗ್ಗೆ ಮೆ॥ ಚನಬಸಪ್ಪ ಡಿ. ಯಿ. ಇ. ಇವರು ಹುಜುರು ಹುಕುಮು ಪ್ರಕಾರ, ಹೂಲಿಯ ವೆಂಕಣಗೌಡರೆಂಬ ಚಲೋ ಕನ್ನಡ ಬಲ್ಲಂಥ ಹುಶಾರ ಶಿಕ್ಷಕರನ್ನೇ ನೇಮಿಸಿದ್ದರು (ಇವರಿಗೆ ಜೈಮಿನಿ ಬರತಿದ್ದು ಖಾತ್ರಿ ಮಾಡಿಕೊಂಡು) ನಾಗೇಶರಾಯರು ಅಂಥಾ ಹುಶಾರಿಯುಳ್ಳ ವೆಂಕನಗೌಡರನ್ನು ಅನ್ಯಾಯದಿಂದ ತೆಗೆದು, ಆ ಕೆಲಸದ ಮೇಲೆ ಏನೇನು ಕನ್ನಡ ತಿಳಿಯದಂಥ ಒಬ್ಬ ಕೊಂಕಣಸ್ಥನನ್ನು ನೇಮಿಸಿದ್ದಾರೆ. ಈ ಕೊಂಕಣಸ್ಥನಿಗೆ ಕನ್ನಡ ಅಂತ ಗೊತ್ತಿಲ್ಲ. ಇಂಥವನು ಜೈಮಿನಿಯನ್ನು ಕನ್ನಡ ಕವಿತಾದ ಬುಕ್ಕುವನ್ನು ಹಾಗೂ ಎರಡನೇ ವಿಷಯಗಳನ್ನು ಹ್ಯಾಗೆ ಕಲಸತಿದ್ದಾನು ! ಇದನ್ನು ನೋಡಬೇಕು.

ಹೀಗೆ ಮಾಡಿದ ಬಳಿಕ ನಮ್ಮ ಕನ್ನಡ ಭಾಷೆಯ ವಿಷಯದಲ್ಲಿ ನಾಗೇಶರಾಯರ ಮನಸಿನೊಳಗೆ ಎಷ್ಟು ಬೇಸರವಿದ್ದೀತು ? ಬಲ್ಲವರು ನೋಡತಕ್ಕದ್ದು ಇವರು ತಮ್ಮ ಜಿಲ್ಹೆಯೊಳಗೆಲ್ಲಾ ಇದೇ ಪ್ರಕಾರ ಪ್ರತ್ಯೇಕ ದೊಡ್ಡ ದೊಡ್ಡ ಸಾಲಿಯಲ್ಲಿ ಕನ್ನಡ ಕವಿತಾ ಕಲಿಸುವದಕ್ಕೆ, ಕನ್ನಡ ಅಗದಿ ಅರೇದವರನ್ನು ಇಟ್ಟರೆ ನಮ್ಮ ಕನ್ನಡ ಭಾಷೆಯು ಬೇಗನೆ ಸುಧಾರಿಸಿತು... (?) ಹಾಗು ಕನ್ನಡ ಟ್ರಾನ್ಸಲೇಟರವರು ಶ್ರಮಪಟ್ಟು ಪುಸ್ತಕಗಳನ್ನು ಮಾಡಿದ ಶ್ರಮವು ಸಫಲವಾದೀತು (?) ಹಾಗು ಮೆ॥ ರಸಲ್ಲ ಧೊರೆಯವರಿಗು ಕೀರ್ತಿ ಬಂದೀತು. (?)

೮. ಸ್ಕೂಲ ಮಾಸ್ತರರೆಲ್ಲ ಕನ್ನಡ ಕಾಗದ ಪತ್ರ ವ್ಯವಹಾರವನ್ನೂ ಇಟ್ಟರೆ ದೇಶಭಾಷೆಯು ಸುಧಾರಿಸುವದಕ್ಕೆ ಮುಖ್ಯ ಕಾರಣವು ಎಂಬುದಾಗಿ ಹಿಂದಿನ ಡಿ. ಇ. ಇ. ರವರು ಇದರಂತೆ ಮತ ಪತ್ರಿಕೆಯಲ್ಲಿ ಸರಕ್ಯೂಲರ ಕೊಟ್ಟಿದ್ದರು. ಮೆ॥ ನಾಗೇಶಪ್ಪನವರು ಕನ್ನಡ ಕಾಗದ ಪತ್ರಗಳ ವ್ಯವಹಾರ ಬಿಟ್ಟು ಮರಾಠಿಯಿಂದ ನಡಸುತ್ತಾರೆ. ಇದರಂತೆ ಬೆಳಗಾಂವ ಜಿಲ್ಹೆದ ಪಂತೋಜಿಯವರು ಸಹಾ ಮರಾಠಿ ಯಿಂದಲೇ ನಡಿಸ ಹತ್ತಿದ್ದಾರೆ. "ಯಥಾ ರಾಜಾ ತಥಾ ಪ್ರಜಾ" ಈ ಗಾದಿಯಂತೆ ಹಾಗೂ ಸ್ಕೂಲ ಪೇಪರಿನಲ್ಲಿ ನಾಗೇಶರಾಯರು ಮರಾಠಿಯಿಂದಲೇ ಸರಕ್ಯೂಲರ ಕೊಡುತ್ತಾರೆ. ಹೀಗಾದ ಬಳಿಕ ದೇಶ ಭಾಷೆಯು ಹ್ಯಾಗೆ ಸುಧಾರಿಸೀತು ? ಇದನ್ನು ಮೆ॥ ರಸೆಲ್ಲ್ ಧೊರೆಗಳವರು ಪರಾಮರಿಸಬೇಕು. ಇನಾಮು ಕೊಡುವದಕ್ಕೆ ಬಹಳ ಮಾಡಿ ಇವರು ಮರಾಠಿ ಬುಕ್ಕುಗಳನ್ನು ತರಿಸಿ (ರತ್ನಾಗಿರಿ ವಗೈರೆ ಕಡಿಯಿಂದ) ನಮ್ಮ ಕನ್ನಡ ದೇಶದಲ್ಲಿ ಹರವುತ್ತಾರೆ. ಅಂದ ಬಳಿಕ ಇವರು ದೇಶಭಾಷೆಯ ವಿಷಯದಲ್ಲಿ ದುರ್ಲಕ್ಷ ಮಾಡಿದ ಹಾಗೆ ಆಯಿತೋ ಇಲ್ಲೊ ? ನಮ್ಮ ಕನ್ನಡ ವಿದ್ಯಾರ್ಥಿಗಳಿಗೆ ಕನ್ನಡ ಬುಕ್ಕು ಕೊಟ್ಟರೆ ಎಷ್ಟು ಉಪಯೋಗವಾದೀತು ಅಷ್ಟು ಉಪಯೋಗ ಅನ್ಯ ಭಾಷೆಯ ಪುಸ್ತಕದಿಂದ ಆಗಲಾರದು.

೯. ಮೆ॥ ರಸಲ್ಲ ಥೊರೆಗಳವರು ದರ ತಿಂಗಳಿಗೆ ಇಂಗ್ಲೀಷ ಕಲಿಯುವಂಥ ಹಾಗು ದೇಶಭಾಷೆಯ ಹೆಚ್ಚಿನ ವಿಷಯ ಕಲಿಯುವಂಥ ಹುಡುಗರನ್ನು ಇಂಥಿಂಥ ತಿಂಗಳಲ್ಲಿ ತಕ್ಕೊಳ್ಳಬೇಕೆಂದು ಸರಕ್ಯೂಲರ ಕೊಟ್ಟರಲಿಕ್ಕೆ ಅದನ್ನು ಲಕ್ಷ್ಯದಲ್ಲಿ ಇಡದೆ ಮೆ॥ ನಾಗೇಶರಾಯರು ಅಂಥ ಹುಡುಗರನ್ನು ಬೇಕಾದಾಗ್ಗೆ ಸಾಲಿಯಲ್ಲಿ ತೆಗೆದುಕೊಳ್ಳಲಿಕ್ಕೆ ಅಡ್ಡಿ ತಕ್ಕೊಳ್ಳುವದಿಲ್ಲವು ಅಂದಬಳಿಕ ಮೆ॥ ನಾಗೇಶರಾಯರು ಹುಜೂರು ಹುಕುಮು ಲಕ್ಷ್ಯದಲ್ಲಿ ಅಗದಿ ಇಡುವದಿಲ್ಲವೆಂದು ಸ್ಪಷ್ಟವಾಯಿತು. 'ದುಸರ್‍ಯಾಸ ಸಾಂಗೇವೇದ ಪುರಾಣ, ಆಪಣ ಕೋರಡೆ ಪಾಷಾಣ' ಈ ಗಾದಿಯಂತೆ ಆಯಿತು.

೧೦. ಮಠಪತ್ರಿಕೆ ಕರ್ತರು ಮೇಲೆ ಬರದದ್ದೆಲ್ಲಾ ತಮ್ಮ ವಿಚಾರವುಳ್ಳ ಬೆಳಗಾಂವಿಯ ಸ್ಕೂಲ ಪೇಪರಿನಲ್ಲಿ ಪ್ರಸಿದ್ಧ ಮಾಡಿ ಬೆಳಗಾಂವಿ ಜಿಲ್ಹೆಯನ್ನು ಕನ್ನಡ ನಿಂದ ತುಂಬುವವರೆಂದು ಅಪೇಕ್ಷಿಸುತ್ತೇನೆ.

ಚ. ಬ. ಧಾ.

(ಡಿ. ಇ. ಇ. ಧಾರವಾಡ)

ಮುಕ್ಕಾಂ ಬೆಳಗಾಂವ ತಾ. ೫ನೇ ಎಪ್ರೀಲ್ ೧೮೭೦.

(ಶಾಲಾ ಪತ್ರಿಕೆ ಎಪ್ರೀಲ್ ೧೮೭೦ ಪುಟ ೨೫ ರಿಂದ ೩೨)

(ii) ಸುಧಾರಣೆಯ ಕಳಕಳಿ

(i) ಈ ನೋಟಿಸಿನಿಂದ ನಮ್ಮ ಕೈಕೆಳಗಿರುವ ಯಾವತ್ತು ಸ್ಕೂಲ ಮಾಸ್ತರರಿಗೆ ತಿಳಿಸುವದೇನಂದರೆ— ಚಿಕ್ಕ ಹುಡುಗರಿಗೆ ಸಸಾರ ಶಬ್ದಗಳನ್ನು ಬರಿಯಲಿಕ್ಕೂ, ಓದುವದಕ್ಕೂ ಕಲಿಸುವದನ್ನು ಬಿಟ್ಟು ಆಕರಕ್ಕೆ ಜಾಟಕ್ಕೆಯೆಂಬ ತಿಳಿಯದಂಥಾವುಗಳನ್ನು ಕಲಿಸುವುದು ನಮ್ಮ ದೃಷ್ಟಿಗೆ ಬಿತ್ತು ಮತ್ತು ಕಲಿಸುತ್ತೀರೆಂಬುವದು ನಮಗೆ ಗೊತ್ತು ಅದೆ. ಆದರೆ ಈ ರೀತಿಯಿಂದ ಕಲಿಸುವುದು ನಮಗೆ ನೆಟ್ಟಗೆ ಕಾಣುವದಿಲ್ಲ. ಮೊದಲು ಹುಡುಗರಿಗೆ ಸಸಾರ ಹೆಸರುಗಳನ್ನು ಬರಿಯಲಿಕ್ಕೂ ಕಲಿಸಿದ ಬಳಿಕ ಮೆಲ್ಲ ಮೆಲ್ಲನೆ ಇಂಥಾ ವಿಷಯುಗಳನ್ನೂ ಕಲಿಸಲಿಕ್ಕೆ ಆರಂಭ ಮಾಡಬೇಕು. ತಿಳಿಯದಂಥಾದನ್ನು ಕಲಿಸುವ ಗೊಡವೆಗೆ ಹೋಗಬಾರದು. Feb. 1866. ಪುಟ ೨೬೦.

(ii) ಬೆಳಗಾವಿ ಜಿಲ್ಹೇದ ಡೆಪ್ಯೂಟಿ ಎಜ್ಯುಕೇಶನಲ್ ಇನಸ್ಪೆಕ್ಟರರು ತಮ್ಮ ತಾಬೆದಲ್ಲಿರುವ ಯಾವತ್ತು ಕನ್ನಡ ಪಂತೋಜಿಗಳಿಗೆ ಮತ್ತು ಅಸಿಸ್ಟಂಟ ಪಂತೋಜಿಗಳಿಗೆ ತಿಳಿಸುವದೇನಂದರೆ—

ನಾವು ಈ ವರ್ಷ ಸಾಲಿಗಳ ಪರೀಕ್ಷಾ ತೆಗೆದುಕೊಳ್ಳುವಾಗ್ಗೆ ನಮ್ಮ ದೃಷ್ಟಿಗೆ ಈ ಕೆಳಗೆ ಬಂದಿರುವ ತಪ್ಪುಗಳು ಬಿದ್ದವು. ಅಂದರೆ ಪಂತೋಜಿಗಳು ಮುಂದೆ ನೆಟ್ಟಗೆ ಕಲಿಸಲಿಕ್ಕೆ ಆರಂಭ ಮಾಡಬೇಕು. ಯಾವ ಪಂತೋಜಿಗಳಾದರೂ ಮೆಹನತಿನಿಂದ ಮನಸ್ಸುಕೊಟ್ಟು ಕಲಿಸಿದ್ದು ಮುಂದಿನ ವರ್ಷ ಪರೀಕ್ಷೆದ ಸಮಯಕ್ಕೆ ಕಂಡು ಬಂದರೆ ಅದರ ವಿಷಯಕ್ಕೆ ಯೋಗ್ಯ ತಜವೀಜು ಮಾಡಲಾಗುವದು.

೧. ಏ ಕ್ಕೆ ಸಣ್ಣ ಎ ಮತ್ತು ಏ ಕ್ಕೆ ದೊಡ್ಡ ಎ ಎಂದು ಹುಡುಗರು ಅನ್ನು-ತ್ತಾರೆ. ಹಾಗೆ ಪಂತೋಜಿಗಳು ಕಲಿಸಬಾರದು. ಶಿಕ್ಷಕರು ಕಲಿಸುತ್ತಿದ್ದರೆ ಕಲಿಸಗೊಡಬಾರದು.

೨. ದ್ವಿತ್ತ ಅಕ್ಷರಗಳು ಅಂದರೆ ಕ್ವ, ತ್ವ, ನ್ವ ಇತ್ಯಾದಿ ಅಕ್ಷರಗಳನ್ನು ಕವ, ತವ, ಇನವು ಎಂತಾ ಉಚ್ಚಾರ ಮಾಡುತ್ತಾರೆ. ಹೀಗೆ ಉಚ್ಚಾರ ಮಾಡಿ ಗೊಡಬಾರದು. ಮತ್ತು ಬರಿಯಗೊಡಬಾರದು.

೩. 'ಶ' ಬರಿ ಅಂದರೆ ಹುಡುಗರು ಸ ಆಗಲಿ, ಅಥವಾ ಷ ಆಗಲಿ ಬರಿದು ತೋರಿಸುತ್ತಾರೆ. ಹಾಗೆ ಬರಿಯಗೊಡಬಾರದು. ಶ, ಸ, ಮತ್ತು ಷ ಇವುಗಳಲ್ಲಿಯ ಭೇದವನ್ನು ನೆಟ್ಟಗೆ ತಿಳಿಸಿಕೊಡಬೇಕು.

೪. ಹುಡುಗರು ಸಪ್ತಮಿ ಎಂಬುವದನ್ನು ಸತ್ತಮಿ ಎನ್ನುತ್ತಾರೆ. ಬಹುವಚನವೆಂಬುದನ್ನು ಬಉ ವಚನ ಎನ್ನುತ್ತಾರೆ. ಈಶ್ವರ ಎಂಬುವದನ್ನು ಈಸ್ವರ ಈಸ್ವರ ಎಂತಾ ಅನ್ನುತ್ತಾರೆ. ಆದರೆ ಹೀಗೆ ಅನ್ನಗೊಡಬಾರದು.

೫. ಕನ್ನಡ ಮೊದಲನೇ, ಎರಡನೇ, ಮೂರನೇ, ಮೊದಲಾದ ಪುಸ್ತಕಗಳನ್ನು ಸುಮ್ಮನೆ ಉದ್ದಕ ಓದಲಿಕ್ಕೆ ಕಲಿಸುತ್ತಾರೆ. ಹುಡುಗರಿಗೆ ಓದಿದ ವಾಕ್ಯಗಳ ಅರ್ಥ ತಿಳಿಯುವದಿಲ್ಲ. ಅಂದರೆ, ಹೀಗೆ ಕಲಿಸದೆ ವಾಕ್ಯಗಳ ಅರ್ಥವನ್ನು ಕಲಿಸಬೇಕು. ಅಂದರೆ ಕಲಿಸಿದ ಹಾಗಾದೀತು.

೬. ಧೂಳಾಕ್ಷರಗಳ ಕಲಿಯುವ ಹುಡುಗರ ಕಡೆಗೆ ಮುಖ್ಯ ಪಂತೋಜಿಗಳು ಬಿಲ್‌ಕುಲ್ ಲಕ್ಷಕೊಡುವದಿಲ್ಲ. ಇದು ಬಹಳ ಗೈರ ಶಿಸ್ತು. ಮುಂದೆ ಹೀಗೆ ಮಾಡಬಾರದು.

೭. ಕನ್ನಡ ಸಾಲಿಗಳಲ್ಲಿ ಯಾವತ್ತು ವಿಷಯುಗಳನ್ನು ಕನ್ನಡಿನಲ್ಲಿ ಕಲಿಸುವದಿಲ್ಲ. ಇದು ಬಂದು ಮಾಡಿ ಯಾವತ್ತು ವಿಷಯುಗಳನ್ನು ಕನ್ನಡದಲ್ಲಿ ಕಲಿಸಬೇಕು. ಲೆಖ್ಖಮಾಡುವಾಗ್ಗೆ ಕನ್ನಡ ಅಂಕಿಗಳನ್ನು ಹಾಕಬೇಕು. ಆರೆ ಅಂಕಿಗಳನ್ನು ಹಾಕಗೊಡಬಾರದು.

೮. ಕೆಲವು ಸಾಲಿಗಳಲ್ಲಿ ೩ ಅಥವಾ ೪ ಹುಡುಗರದೊಂದು ವರ್ಗ ಮಾಡು-ತ್ತಾರೆ. ಹೀಗೆ ಇರಬಾರದು. ಒಂದು ವರ್ಗದಲ್ಲಿ ೨೦ ಕ್ಕಿಂತಲೂ ಕಡಿಮೆ ಹುಡುಗರು ಇರಬಾರದು.

೯. ಒಂದೇ ವರ್ಗದಲ್ಲಿ ಬೇರೆ ಬೇರೆ ಅಭ್ಯಾಸ ಮಾಡುವ ಹುಡುಗರನ್ನು ಹಾಕಿರುತ್ತಾರೆ. ಹೀಗೆ ಮಾಡಬಾರದು. ಒಂದೇ ಪ್ರಕಾರದ ವಿಷಯುಗಳನ್ನು ಕಲಿಯುವ ಹುಡುಗರನ್ನು ಒಂದು ವರ್ಗದಲ್ಲಿ ಇಡಬೇಕು.

೧೦. ಕೆಲವು ಪಂತೋಜಿಗಳಿಗೆ ೧ ಮತ್ತು ೨ ನೇಯ ಪುಸ್ತಕದೊಳಗಿನ ಶಬ್ದ-ಗಳು ಬರುವದಿಲ್ಲ. ಅಂದರೆ ಯಾರಿಗೆ ಯಾವ ಶಬ್ದಗಳು ಬರುವದಿಲ್ಲ ಅವರು ಆ ಶಬ್ದಗಳನ್ನು ಬರೆದು ಇತ್ತ ಕಡೆ ಕಳುಹಿಸಿ ಕೊಟ್ಟರೆ ಅವುಗಳ ಅರ್ಥವನ್ನು ಬರೆದು ಕಳುಹಿಸುವೆವು.

೧೧. ಕೆಲವು ಪಂತೋಜಿಗಳು ತಮಗೆ ಶುದ್ಧ ಬರೆಯಲಿಕ್ಕೆ ಬರದ ಕಾರಣ ದಿಂದಾಗಲಿ ಅಥವಾ ಮನಸುಗೊಟ್ಟು ಬರೆಯುದ ಕಾರಣದಿಂದಾಗಲಿ, ನಮ್ಮ ಕಡೆಗೆ ಕಳುಹಿಸುವ ಕನ್ನಡ ಕಾಗದ ಪತ್ರಗಳಲ್ಲಿ ನಾನಾ ಪ್ರಕಾರದ ತಪ್ಪುಗಳನ್ನು ಮಾಡುತ್ತಾರೆ. ಅಂದರೆ, ಇಂಥವರು ನೆಟ್ಟಗೆ ಬರಿಯಲಿಕ್ಕೆ ಕಲಿಯಬೇಕು.

ತಾರೀಖು ೨೪ ಜೂನ ೧೮೬೭ ಇಸ್ವಿ. ಮುಕ್ಕಾಂ ಬೆಳಗಾವಿ

ಶಾಲಾಪತ್ರಿಕೆ ಪುಸ್ತಕ ೩ ಸಂಚಿಕೆ ೨ ಮೇ ೧೮೬೭, ಜೂನ ೧೮೬೮.

(iii) ಬೆಳಗಾವಿ ಜಿಲ್ಹೆದೊಳಗಿನ ಯಾವತ್ತು ಮಾಸ್ತರರಿಗೆ ಈ ನೋಟಿಸಿ-ನಿಂದ ತಿಳಿಯಪಡಿಸುವದೇನಂದರೆ ನಾವು ಸಾಲಿಯಲ್ಲಿ ಪರೀಕ್ಷೆ ತೆಗೆದುಕೊಳ್ಳುವ ಬಗ್ಗೆ ಒಬ್ಬ ಹುಡುಗನಿಗೆ ಏನಾದರೊಂದು ಪ್ರಶ್ನೆ ಕೇಳಿದರೆ ಆ ಹುಡುಗನ ಹತ್ರ ಇದ್ದ ಹುಡುಗರು ಆ ಪ್ರಶ್ನೆದ ಉತ್ತರ ಹೇಳುತ್ತಾರೆ. ಇಲ್ಲವೆ ಬಾಯಿಲೆ ಸುಮ್ಮನೆ ವಟ ವಟ ಅನ್ನುತ್ತಾರೆ. ಅಥವಾ ಮೆಲ್ಲಗೆ ಆ ಹುಡುಗನಿಗೆ ಹೇಳುತ್ತಾರೆ. ಅಂದರೆ ಮಾಸ್ತರರು ಹೀಗೆ ಆಗದಂತೆ ಮೊದಲಿನಿಂದ ಅಭ್ಯಾಸ ಮಾಡಿಸಬೇಕು. ಇದಲ್ಲದೆ ಹುಡುಗರು ಓದುವಾಗ್ಗೆ ಪುಸ್ತಕವನ್ನು ಬಾಯಿ ಹತ್ತಿರ ಹಿಡಿಯುತ್ತಾರೆ. ಅಥವಾ ಪುಸ್ತಕವನ್ನು ಮುಟ್ಟಿ ಅತ್ತ ಇತ್ತ ನೋಡುತ್ತ ಮನಸಿಗೆ ಬಂದಂತೆ ನಿಂದರುತ್ತಾರೆ. ಹೀಗೆ ಆಗದಂತೆ ಬಂದೋಬಸ್ತು ಇಡಬೇಕು.

ತಾರೀಖು ೨೦ ನೇಯ ಡಿಶಂಬರ ೧೮೬೭,

ಶಾಲಾಪತ್ರಿಕೆ ಪುಸ್ತಕ ೨ ಸಂಚಿಕೆ ೧೦ ಮಾಹೆ ಜನೇವರಿ ೧೮೬೮.

(iv) ಬೆಳಗಾವಿ ಜಿಲ್ಹೆದಲ್ಲಿರುವ ಯಾವತ್ತೂ ಸ್ಕೂಲ ಮಾಸ್ತರರಿಗೆ ಬೆಳಗಾವಿ ಜಿಲ್ಹೇದ ಡೆಪ್ಯುಟಿ ಎ. ಇ. ಯವರ ಕಡೆಯಿಂದ ತಿಳಿಸುವದೇನೆಂದರೆ— ನಾವು ವಾರ್ಷಿಕ ಪರೀಕ್ಷೆ ತೆಗೆದುಕೊಂಬುವದಕ್ಕೆ ಕೆಲವು ಸ್ಥಳಗಳಲ್ಲಿ ಹೋದಾಗ್ಗೆ ಸಾಲಿಯ ಹತ್ತರ ಅತಿಶಯ ಹೊಲಸು ಇರುವದರಿಂದ ಸಾಲಿಯಲ್ಲಿ ದುರ್ಗಂಧವಾಸ ಬರುತ್ತಿದ್ದರೂ ಆ ಮಾಸ್ತರರು ನಮ್ಮ ಕಡಿಗೆ ರಿಪೋರ್ಟ ಮಾಡಿ ತಜವಿಜ ಮಾಡಲಿಲ್ಲ. ಇದು ಬಹಳ ಮುಗ್ಗಲಗೇಡಿತನವು. ಇನ್ನು ಮುಂದೆ ಈ ಪ್ರಕಾರ ಆಗದಂತೆ ಮಾಸ್ತರರು ಎಚ್ಚರಿಕೆ ಯನ್ನು ಇಡಬೇಕು.

ತಾರೀಖು ೨೨ ಫೆಬ್ರವರಿ ೧೮೬೮.

(v) ಬೆಳಗಾವಿ ಜಿಲ್ಹೆಯ ಯಾವತ್ತು ಮಾಸ್ತರರಿಗೆ ಈ ಮೂಲಕ ತಿಳಿಸುವ ದೇನಂದರೆ— ಹುಡುಗರು ಮೂರನೆಯ ಸ್ಟ್ಯಾಂಡರಡಿನ ಪ್ರಕಾರ ಅಭ್ಯಾಸ ಮಾಡಲಿಕ್ಕೆ

ಹತ್ತಿದಾಕ್ಷಣವೇ ಅವರಿಗೆ ಕನ್ನಡ ಮತ್ತು ಆರೆ ಕಾಗದಗಳನ್ನು ದಿನಾ ಒಂದು ತಾಸು ಓದಲಿಕ್ಕೆ ಕಲಿಸಬೇಕು.

ತಾರೀಖು ೧೬ ಮಾರ್ಚ ೧೮೬೯ ಇಸ್ವಿ,
ಪುಟ-೨೭, ಮುಕ್ಕಾಂ ಸವದತ್ತಿ

(vi) ಧಾರವಾಡ ಜಿಲ್ಲೆದೊಳಗಿನ ಯಾವತ್ತು ಮಾಸ್ತರರಿಗೆ ಈ ನೋಟಿಸಿ-ನಿಂದ ತಿಳಿಸುವದೇನಂದರೆ— ಮೆಹರಬಾನ ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬರರು ಇಂದಿಗೆರಡು ವರ್ಷಗಳ ಮುಂದೆ ಸಾಲೆಯಲ್ಲಿರುವ ಯಾವತ್ತೂ ಹುಡುಗರ ಹತ್ತಿರ ಸ್ಲೇಟ ಪಾಟಿಗಳು ಮತ್ತು ಅವರು ಕಲಿಯುವ ಪುಸ್ತಕಗಳು ಇರಲಿಕ್ಕೆ ಬೇಕು ಎಂದು ನೋಟಿಸು ಕೊಟ್ಟದ್ದು ಆದರಂತೆ ಕೆಲವು ಸಾಲಿಗಳಲ್ಲಿ ವಹಿವಾಟು ಇಲ್ಲದ್ದನ್ನು ನಾವು ನೋಡಿದಿವಿ, ಆದರೆ ಇಂದಿನಿಂದ ಯಾರು ಇನಸ್ಪೆಕ್ಟರ ಸಾಹೇಬರ ನೋಟಿಸಿನಂತೆ ನಡೆಯಲಿಕ್ಕಿಲ್ಲ ಅವರಿಗೆ ಏನೇನೂ ಕಾರಣ ಕೇಳದೆ ದಂಡ ಮಾಡುವೆವು. ಯಾವತ್ತೂ ಹುಡುಗರ ಹತ್ರಕ ಸ್ಲೇಟುಗಳು ಇರಬೇಕು. ಮತ್ತು ಓದುವ ಪುಸ್ತಕಗಳು ಇರಬೇಕು. ಈ ನೋಟಿಸಿನಂತೆ ನಡೆಯದೇ ಇದ್ದರೆ ಮಾಸ್ತರರಿಗೂ ಮತ್ತು ಆ ವರ್ಗದ ಶಿಕ್ಷಕನಿಗೂ ದಂಡವಾಗುವದು.

ತಾ॥ ೯ ಮಾಹೆ ನವಂಬರ ೧೮೬೯ ಇಸ್ವಿ, ಮುಕ್ಕಾಂ ಹುಬ್ಬಳ್ಳಿ.

(vii) ಧಾರವಾಡ ಜಿಲ್ಲೆದೊಳಗಿನ ಯಾವತ್ತೂ ಸ್ಕೂಲ ಮಾಸ್ತರರಿಗೆ ಈ ನೋಟಿಸಿನಿಂದ ತಿಳಿಯ ಪಡಿಸುವದೇನಂದರೆ— ಸಾಲಿಯ ಹುಡುಗರು ಅಂಕೆಗಳನ್ನು ಕಂಡ ಕಂಡಂತೆ ಬರಿಯುತ್ತವೆ. ಅಂದರೆ ಅವರನ್ನು ಆ ಪ್ರಕಾರ ಬರಿಯಗೊಡದೆ ನೆಟ್ಟಗೆ ಅಂಕಿಗಳನ್ನು ಬರಿಯಲಿಕ್ಕೆ ಕಲಿಸಬೇಕು.

ಎರಡನೇ ಸ್ಟ್ಯಾಂಡರಡಿನಂತೆ ಕಲಿಯುವ ಹುಡುಗರು ತಾವು ಓದುವ ಪುಸ್ತಕಗಳೊಳಗಿನ ಕಠಿಣ ಶಬ್ದಗಳ ಅರ್ಥಗಳನ್ನು ಬರೆದು ಬಾಯಿಪಾಠ ಮಾಡುವದರ ದಶಿಯಿಂದಾ ಕಾಗದ ವಹಿಗಳನ್ನು ಕಟ್ಟಿರಬೇಕು. ಮತ್ತು ಮಾಸ್ತರರು ಈ ವಹಿಗಳನ್ನು ಎಂಟು ದಿವಸಕ್ಕೊಮ್ಮೆ ತಪಾಸ ಮಾಡಬೇಕು. ಈಗ ಈ ಪ್ರಕಾರದಂತೆ ವಹಿವಾಟು ಇಲ್ಲದ ಕಾರಣ ಹುಡುಗರಿಗೆ ಶಬ್ದದ ಅರ್ಥಗಳು ಗೊತ್ತಿರುವದಿಲ್ಲ.

ತಾರೀಖು ೨೨ ಮಾಹೆ ಡಿಶಂಬರ ೧೮೬೯, ಶಾಲಾ ಪತ್ರಿಕೆ ಪುಸ್ತಕ ೫
ಸಂಚಿಕೆ ೧೦ ಮಾಹೆ ಜನೆವರಿ ೧೮೭೦, ಪುಟ-೨೧೬.

(viii) ಜನರಿಗೆ ತಿಳಿಯದ ಶಬ್ದಗಳನ್ನು ಹಾಕಿ ಬರಿಯುವದೊಂದು ಶಾಹಣೆತನವೆಂದು ತಿಳಕೊಂಡು ಕೆಲವರು ಸಾಧಾರಣ ಶಬ್ದಗಳನ್ನು ಬಿಟ್ಟುಕೊಟ್ಟು ಜನರಿಗೆ ತಿಳಿಯದ ಶಬ್ದಗಳನ್ನು ಉಪಯೋಗ ಮಾಡುತ್ತಾರೆ.

ಈ ಕೆಳಗೆ ಬರೆದಿರುವ ಪತ್ರವು ಈ ಮಾಸಲೇದ್ದು ಇದನ್ನು ಓದಿದಾಕ್ಷಣವೇ ನಮಗೆ ನಗಿ ಬಂತು ಮತ್ತು ಪರೀಕ್ಷಾಕ್ಕೆ ಹೋದ ಸಮಯದಲ್ಲಿ ಈ ಮಾಸ್ತರರಿಗೆ ನಾವು ಛಿ ಹಾಕುವವರಿದ್ದೇವೆ.

ಶಾಲಾಪತ್ರಕವು ಪುಸ್ತಕ ೭ ಸಂಚಿಕೆ ೭ ಮಾಹೆ ಆಕ್ಟೋಬರ ೧೮೭೧.

(ix) ಧಾರವಾಡ ಜಿಲ್ಹೇದಲ್ಲಿರುವ ಯಾವತ್ತೂ ಸ್ಕೂಲ ಮಾಸ್ತರರಿಗೆ ಧಾರವಾಡ ಜಿಲ್ಹೇದ! ಡೆಪ್ಯೂಟಿ ಎಜ್ಯುಕೇಶನಲ್ ಇನಸ್ಪೆಕ್ಟರರ ಕಡಿಂದಾ ಬರೆದು ತಿಳಿಸುವದೇನಂದರೆ— ನಾವು ಸಾಲಿಗಳ ಪರೀಕ್ಷಾಕ್ಕೆ ಹೋದ ಸಮಯದಲ್ಲಿ ಸಾಲಿಯ ಸ್ಥಾಪನವಾದ ತಾರೀಖು ಹೋದ ವರ್ಷ ಪರೀಕ್ಷೆಯಾದ ತಾರೀಖು ಇತ್ಯಾದಿ ಮಾಹಿತಿ ಯನ್ನು ಮಾಸ್ತರರಿಗೆ ಕೇಳಿದರೆ ಅವರಿಗೆ ಗೊತ್ತಿಲ್ಲದೆ ಇರುವದರಿಂದ ನಮ್ಮ ವೇಳೆ ವ್ಯರ್ಥವಾಗಿ ಖರ್ಚು ಆಗುತ್ತದೆ. ಆದರೆ ಎಲ್ಲಾ ಮಾಸ್ತರರು ತಂಮ ತಂಮ ಸಾಲಿಗಳ ಎಲ್ಲ ಇತಿಹಾಸನನ್ನು ಗೊತ್ತು ಮಾಡಿಕೊಂಡು ಇರಬೇಕು. ಸಾಲಿಯ ಸ್ಥಾಪನವಾದ ತಾರೀಖು ಹೋದ ವರ್ಷ ಪರೀಕ್ಷೆಯಾದ ತಾರೀಖು ಸಾಲಿಯ ಸ್ಥಾಪನವಾದಂದಿನಿಂದ ಎಷ್ಟು ಮಂದಿ ಮಾಸ್ತರರಾಗಿ ಹೋದರು. ಯಾವ ಯಾವ ಮಾಸ್ತರರ ಕಾಲದಲ್ಲಿ ಸಾಲಿಯ ಸ್ಥಿತಿಯ ಹ್ಯಾಗೆಹ್ಯಾಗೆ ಇತ್ತು. ಈ ಬಗ್ಗೆ ಎಲ್ಲ ಮಾಹಿತಿಯನ್ನು ಪಾಠ ಮಾಡಿ ಇಟ್ಟದ್ದರೆ ಬಹಳ ಉಪಯೋಗವಾಗುತ್ತದೆ.

ತಾ॥ ೧೩ ಮಾಹೆ ನವಂಬರ ೧೮೭೨. ಮುಕ್ಕಾಂ ನರೇಂದ್ರ.
ಶಾಲಾಪತ್ರಿಕೆ ಪುಸ್ತಕ ೮ ಸಂಚಿಕೆ ೯ ಡಿಶಂಬರ ೧೮೭೨. ಪುಟ—೨೦೪

III. ನಿಷ್ಠುರ ನಿಸ್ಪೃಹ ಅಧಿಕಾರಿ

(i) ಬೆಳಗಾಂವಿ ಜಿಲ್ಹೇದ ಡೆಪುಟಿ ಎಜ್ಯುಕೇಶನಲ್ ಇನೆಸ್ಪೆಕ್ಟರರ ಕಡಿಯಿಂದ ನೋಟಿಸು ಕೊಡುವದೇನಂದರೆ— ನಂದಗಡ ಸಾಲಿಯ ಹೆಡ್‌ಮಾಸ್ತರರಾದ ವಿನಾಯಕ ಮೋರೇಶ್ವರ ಪಾಟಣಕರ ಯಿವರು ತಂಮ ಕೆಲಸವನ್ನು ಲಕ್ಷಗೊಟ್ಟು ಮಾಡದ್ದರಿಂದಲೂ, ಬೆಳಗಾವಿಗೆ ತಂಮ ಮನಸ್ಸಿಗೆ ಬಂದು ಮನಸ್ಸಿಗೆ ಬಂದಾಗ್ಗೆ ತಿರುಗಿ ನಂದಗಡಕ್ಕೆ ಹೋಗಿದ್ದು ತಿಳಿದು ಬಂದುದರಿಂದಲೂ, ತಿಂಗಳ ಅಖೈರಕ್ಕೆ ನಂಮ ಕಡಿಗೆ ಕಳುಹಿಸುವ ಲೆಖ್ಖವನೆಲ್ಲಾ ಮನಸಿಗೆ ಬಂದಂತೆ ತಯಾರು ಮಾಡಿ ಕಳುಹಿಸಿದ್ದು ನಮಗೆ ತಿಳಿದದರಿಂದಲೂ ಶಿಕ್ಷಕರ ಪಗಾರ ಕೊಡುವದರಲ್ಲಿ ಧಾಂದಲೇ ಮಾಡಿದರಿಂದಲೂ ಮತ್ತು ನಮಗೆ ಗೈರ ಶಿಸ್ತ ಜವಾಬ ಕೊಟ್ಟದರಿಂದಲೂ ನಾವು ಮೆಹರಬಾನ ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬ ಬಾಹದ್ದೂರ ದಕ್ಷಿಣ ಭಾಗ ಇವರ ಕಡಿಗೆ ಇವರನ್ನು ಕೆಲಸದಿಂದ ದೂರಮಾಡುವ ಬಗ್ಗೆ ರಿಪೋರ್ಟ ಮಾಡಲಾಗಿ ಮೆಹರಬಾನ ಸಾಹೇಬರವರು ಸದರ ಮಾಸ್ತರರಂನ ಕೆಲಸದಿಂದ ದೂರಮಾಡಿ

ಯೀಪ್ರಕಾರದ ನೋಟಿಸು ಶಾಲಾ ಪತ್ರಿಕೆಯಲ್ಲಿ ಛಾಪಿಸುವ ಬಗ್ಗೆ ನಂಮ ಕಡಿಗೆ ಬಿರದು ಕಳುಹಿಸಿದ್ದಾರೆ.

ತಾರೀಖು ೨೩ ಅಕ್ಟೋಬರ ೧೮೬೭ ಇಸವಿ ಮುಕ್ಕಾಂ ಬೆಳಗಾಂವಿ
ಶಾಲಾ ಪತ್ರಿಕೆ ಪುಸ್ತಕ ೨ ಸಂಚಿಕೆ ೫ ಅಕ್ಟೋಬರ ೧೮೬೭.

(ii) ಬೆಳಗಾಂವಿ ಜಿಲ್ಹೇದ ಡಿಪುಟಿ ಎಜುಕೇಶನಲ್ ಇನಸ್ಪೆಕ್ಟರರ ಕಡಿಯಿಂದ ಬೆಳಗಾಂವಿ ಜಿಲ್ಹಿಯೊಳಗಿನ ಯಾವತ್ತೂ ಸ್ಕೂಲ ಮಾಸ್ತರರಿಗೆ ಈ ನೋಟಿಸಿ-ನಿಂದ ತಿಳಿಯಪಡಿಸುವದೇನಂದರೆ—

ನಾವು ಸಾಲಿಗಳ ಪರೀಕ್ಷಾ ತೆಗೆದುಕೊಳ್ಳಲಿಕ್ಕೆ ಹೋದ ಸಮಯದಲ್ಲಿ ಕೆಲವು ಸಾಲಿಗಳ ರಜಿಸ್ಟರಿನಲ್ಲಿ ೫೦ ಹುಡುಗರು ಇದ್ದು ಸರಾಸರಿ ಹಾಜರಿ ೪೦ ಅಥವಾ ೪೫ ಯಿರುತ್ತದೆ. ಪರಂತು ಸಾಲಿಯ ಪರೀಕ್ಷಾ ನೆಟ್ಟಗೆ ಉಳಿಯದಿದ್ದರೆ ಮಾಸ್ತರರು 'ಈ ಊರು ಹಳ್ಳಿಊರು ಹುಡುಗರು ನೇಮದಿಂದ ಸಾಲಿಗೆ ಬರುವದಿಲ್ಲ ಅದರಿಂದ ಅಭ್ಯಾಸ ನೆಟ್ಟಗೆ ನಡಿಯುುವದಿಲ್ಲವೆಂದು ಹೇಳುತ್ತಾರೆ. ಇದರ ಮೇಲಿಂದ ಸಾಲಿಗೆ ಹುಡುಗರು ನಿತ್ಯ ನೇಮದಿಂದ ಬಾರದೆ ಯಿದ್ದರೆ ಸರಾಸರಿ ಹಾಜರಿ ಕಡಿಮೆ ಯಿರಬೇಕು ಸರಾಸರಿ ಖರೆಯಿದ್ದರೆ ದಿನಂಪ್ರತಿಯಲ್ಲಿ ಹುಡುಗರು ಬರುವದಿಲ್ಲವೆಂಬುದು ಸುಳ್ಳು. ಆದಕಾರಣ ಹೀಗೆ ಹೇಳುವ ಮಾಸ್ತರರು ಯಿಲ್ಲಾ ಸುಳ್ಳು ಹೇಳುತ್ತಾರೆ ಯಿಲ್ಲಾ ಹಾಜರಿ ಖೊಟ್ಟಿ ಇಡುತ್ತಾರೆಂಬುವದರಲ್ಲಿ ಏನೇನೂ ಸಂಶಯವಿಲ್ಲ. ಇದಲ್ಲದೆ ಮಾಸ್ತರರು ನಿತ್ಯ ಹಾಜರಿ ತೆಗೆದುಕೊಳ್ಳದೆ ಮನಸಿಗೆ ಬಂದಾಗೊಮ್ಮೆ ಮನಸಿಗೆ ಬಂದಂತೆ ಹಾಜರಿ ತೆಗೆದುಕೊಂಡು ನಂಮ ಕಡಿಗೆ ಸುಳ್ಳು ಲೆಖ್ಖಾ ಕಳಿಸುತ್ತಾರೆಂಬುವ ದರಲ್ಲೇನೂ ಸಂಶಯವಿಲ್ಲಾ ಇದರ ಹೊರ್ತು ಕೆಲವು ರಜಿಷ್ಟರುಗಳನ್ನು ತಪಾಸ ಮಾಡಿ ನೋಡಿದರೆ ಈ ಮೇಲಿನ ಸಂಶಯಕ್ಕೆ ಕಾರಣಗಳು ಕಾಣ ಬರುತ್ತವೆ. ಅಂದರೆ ಮುಂದಿನ ವರ್ಷ ಪರೀಕ್ಷೆದ ಸಮಯದಲ್ಲಿ ಯಿಂಥಾ ಅಪರಾಧಗಳು ನಂಮ ದೃಷ್ಟಿಗೆ ಬಿದ್ದರೆ ನಾವು ಅವುಗಳ ವಿಷಯಕ್ಕೆ ನೆಟ್ಟಗೆ ಬಂದೋಬಸ್ತ ಮಾಡುವೆವು.

ತಾರೀಖು ೮ನೇ ಫೆಬ್ರುವರಿ ಸನ್ ೧೮೬೮ ಯಿಸವಿ ಮುಕಾಮು ಮುಧೋಳ
ಶಾಲಾಪತ್ರಿಕೆ ಪುಸ್ತಕ ೩ ಸಂಚಿಕೆ ೧೧ ಫೆಬ್ರುವರಿ ೧೮೬೮ ಪುಟ....

iii) ಕಾಲಕುಂದ್ರಿ, ಸತ್ತಿಗೇರಿ, ಶೇಡಬಾಳ ಮತ್ತು ಅಂಕಲಗಿ ಇಲ್ಲಿಯ ಮಾಸ್ತರರು ರಜಿಸ್ಟರ ಬುಕ್ಕುಗಳನ್ನು ತಿಳಿದು ತಿಳಿದು ತಪ್ಪು ಇಟ್ಟಿದ್ದು ವಾರ್ಷಿಕ ಪರೀಕ್ಷಾದ ಸಮಯದಲ್ಲಿ ಕಂಡು ಬಂದದರಿಂದ ಈ ಮಾಸ್ತರರನ್ನು ಕಡಿಮೆ ಪಗಾರದ ಮೇಲೆ ಶಿಕ್ಷಕರನ್ನು ನೇಮಿಸಬೇಕೆಂದು ಮೆಹರಬಾನ ಯಿನಸ್ಪೆಕ್ಟರ ಸಾಹೇಬರ ಕಡಿಗೆ ನಮ್ಮ ಕಡಿಯಿಂದ ಬರೆದು ಹೋಗಲಾಗಿ ಸಾಹೇಬರವರು ನಾವು ಬರಿದದ್ದನ್ನು ಮಾನ್ಯಮಾಡಿದರು. ಅದರಿಂದ ಅವರನ್ನೆಲ್ಲಾ ಆರಾರ ರೂಪಾಯಿ ಶಿಕ್ಷಕ ಕೆಲಸದ

ಮೇಲೆ ನೇಮಿಸುವದರಲ್ಲಿ ಬಂದಿದೆ. ತಾರೀಖು ೨೨ ಮಾರ್ಚ ಸಂನ ೧೮೬೮ ಯಿ. ಯಿದನ್ನು ಯಾವತ್ತು ಮಾಸ್ತರರು ಲಕ್ಷ್ಯಪೂರ್ವಕವಾಗಿ ಓದಿ ನೋಡಿ ಬಹು ಹುಷಾರಿಯಿಂದ ಕೆಲಸ ನಡಿಸಬೇಕು. ಮಾರ್ಚ ೧೮೬೮.

(iv) ಯಮುಕನ ಮಡ್ಡಿಯ ಶಂಕರೋಜಿ ಮನಸಿಗೆ ಬಂದಾಗ್ಗೆ ಸಾಲಿಯ ಕೆಲಸ ಬಂದ ಮಾಡಿ ಯಂಡನೆಯ ಕಡಿಗೆ ಹೋದನ್ನು ತಿಳಿಯ ಬಂದದರಿಂದ ಆತನ ಪಗಾರ ೧೫ ರಿಂದ ೧೨ ಮಾಡುವ ಬಗ್ಗೆ ಮುಹಂಬಾನ ಯಿನಸ್ಪೆಕ್ಟರ ಸಾಹೇಬರ ಕಡಿಗೆ ಬರದು ಕಳಿಸಲಾಗಿ ಸಾಹೇಬರು ನಮ್ಮ ಬರಿಯೋಣವನ್ನು ಮಾನ್ಯ ಮಾಡಿದರಿಂದ ಸದರ ಮಾಸ್ತರನ ಪಗಾರ ೧೨ ಮಾಡಿದೆ.

ತಾರೀಖು ೨೨ ಮಾರ್ಚ ೧೮೬೮

ಶಾಲಾಪತ್ರಿಕೆ ಪುಸ್ತಕ ೩ ಸಂಚಿಕೆ ೧೨ ಮಾರ್ಚ ೧೮೬೮ ಪುಟ ೩೬೬.

(v) ಬೆಳಗಾಂವಿ ಜಿಲ್ಹೆಯೊಳಗಿನ ಯಾವತ್ತು ಸ್ಕೂಲ ಮಾಸ್ತರರಿಗೆ ತಿಳಿಸುವದೇನಂದರೆ— ಯಿತ್ತ ಕಡಿಯ ನೋಟೀಸುಗಳನ್ನು ಮತ್ತು ಸರಕ್ಯೂಲರುಗಳನ್ನು ಕೆಲವು ಮಾಸ್ತರರು ತಾವು ಓದುವದಿಲ್ಲಾ ಮತ್ತು ಕೆಲವರು ತಂಮ ಕೈ ಕೆಳಗಿರುವ ಶಿಕ್ಷಕರಿಗೆ ಈ ನೋಟೀಸುಗಳನ್ನು ಮತ್ತು ಸರಕ್ಯೂಲರಗಳನ್ನು ತಿಳುಹಿಸುವದಿಲ್ಲಾ. ಇದರಿಂದ ಸಾಲಿಗಳ ಕೆಲಸ ನೆಟ್ಟಗೆ ನಡಿಯುವದಿಲ್ಲಾ. ಅದಕಾರಣ ಯಾವತ್ತೂ ಮಾಸ್ತರರು ಇತ್ತ ಕಡಿಯ ಸರಕ್ಯೂಲರಗಳಂನು ನೆಟ್ಟಗೆ ಓದಿ ನೆನಪಿನಲ್ಲಿಡಬೇಕು. ಮತ್ತು ಮೇಲಿಂದ ಮೇಲೆ ಶಿಕ್ಷಕರಿಗೆ ತಿಳುಹಿಸುತ್ತಿರಬೇಕು. ಈ ಪ್ರಕಾರ ವಹಿವಾಟ ನಡದದೆಯೋ ಇಲ್ಲವೋ ಎಂಬುದಂನು ಪರೀಕ್ಷದ ಸಮಯದಲ್ಲಿ ಚೌಕಸಿ ಮಾಡುವೆವು.

ತಾರೀಖು ೫-೧೦-೧೮೬೮

(vi) ಬೆಳಗಾಂವಿ ಜಿಲ್ಹೆದೊಳಗಿನ ಯಾವತ್ತು ಮಾಸ್ತರರಿಗೆ— ಬೆಳಗಾಂವಿ ಜಿಲ್ಹೇದ ಡಿಪುಟಿ ಇನಸ್ಪೆಕ್ಟರವರ ಕಡಿಯಿಂದ ತಿಳಿಸುವದೇನಂದರೆ– ಕೆಲವು ಮಾಸ್ತರರು ನಂಮ ಕಡಿಗೆ ಕಳುಹಿಸಿಕೊಡುವ ಕಾಗದ ಪತ್ರಗಳನ್ನು ಹೊಲಸು ಅಕ್ಷರಗಳಿಂದ ಬರೆದು ಕಳುಹಿಸುತ್ತಾರೆ. ಆದರೆ ಇನ್ನು ಮುಂದೆ ಯಾವತ್ತು ಮಾಸ್ತರರು ಛಾಪಿಸಿದ ಅಕ್ಷರಗಳಂತೆ ವಿರಳವಾಗಿಯೂ, ಶುದ್ಧವಾಗಿಯೂ ಬರದು ಕಳುಹಿಸುವದಕ್ಕೆ ತಮ್ಮ ಕೈಲಾದ ಮಟ್ಟಿಗೆ ಶ್ರಮ ತೆಗೆದುಕೊಳ್ಳಬೇಕು ತಿಳಿಯುವದು.

ತಾ ೬ ೧೨ ನವ್ಹಂಬರ ೧೮೬೮ ಇಸವಿ, ಬೆಳಗಾವಿ ನವೆಂಬರ ೧೮೬೮.

(vi) ಬೆಳಗಾವಿ ಜಿಲ್ಹೆದೊಳಗಿನ ಯಾವತ್ತು ಹೆಡ್ಡಮಾಸ್ತರ ಮತ್ತು ಅಸಿಸ್ಟಂಟ ಮಾಸ್ತರರಿಗೆ– ಕೆಳಗೆ ಸಹಿ ಮಾಡುವವರು ತಿಳಿಸುವದೇನಂದರೆ—

ಕೆಲವು ಮಾಸ್ತರರು ಕಾರಣವಿಲ್ಲದೆ ಕಚೇರಿ ಜಬಾನಿ ಮುಂತಾದವುಗಳ ಮೇಲೆ ಸಾಕ್ಷಿಯನ್ನು ಹಾಕಿ ಮುಂದೆ ಶಿಮನ್ ಬಂದ ಕಚೇರಿಗೆ ಹೋಗುವದರಿಂದ ಸರಕಾರಿ

ಕೆಲಸ ನಡೆಯುವದಿಲ್ಲ. ಆದರೆ ಇನ್ನು ಮುಂದೆ ಯಾವತ್ತು ಮಾಸ್ತರರು ತಮ್ಮ ಕೈಲಾದ ಮಟ್ಟಿಗೆ ಸಾಕ್ಷಿಯನ್ನು ಹಾಕುವದು ಕಡಿಮೆ ಮಾಡಬೇಕು. ಮತ್ತು ಯಾವ ಮಾಸ್ತರರು ಹಗಲೆಲ್ಲ ಸಾಕ್ಷಿಯ ನಿಮಿತ್ಯವಾಗಿ ಕಚೇರಿಗೆ ಹೋಗುವರೋ ಅವರನ್ನು ಕೆಲಸದಿಂದ ತೆಗೆಯಬೇಕಾಗುವದು ತಿಳಿಯುವದು.

ಬೆಳಗಾವಿ ತಾರೀಖು ೧೨ ನವೆಂಬರ ೧೮೬೮ ಇಸವಿ.

(viii) ಧಾರವಾಡ ಜಿಲ್ಹೆದೊಳಗಿನ ಯಾವತ್ತೂ ಸ್ಕೂಲ ಮಾಸ್ತರರಿಗೆ—
ಈ ನೋಟಿಸಿನಿಂದ ತಿಳಿಯ ಪಡಿಸುವದೇನಂದರೆ ಮಾಸ್ತರ ಜನರು ತಂಮ ಸಾಲಿಯ ಹುಡುಗರ ಕಡೆಯಿಂದ ತಮ್ಮ ಮನಿಯ ಕೆಲಸಗಳನ್ನು ಮಾಡಿಸುತ್ತಿರುತ್ತಾರೆ. ಹುಡುಗರಂನ ಪ್ಯಾಟಿಗೆ ಕರಕೊಂಡ ಹೋಗಿ ಅವರ ಮೇಲೆ ಕಾಳುಕಡಿ ಹೊರಸಿಕೊಂಡ ಬರುತ್ತಾರೆ. ಮನಿಯಲ್ಲಿ ನೀರು ತರಿಸುತ್ತಾರೆ. ಹಾಗು ಧೋತ್ರ ಮುಂತಾದವುಗಳನ್ನು ಒಗಿಸುತ್ತಾರೆ. ಇದು ಬಹಳ ಕೆಟ್ಟದ್ದು. ಇಂಥಾ ತಪ್ಪನ್ನು ಯಾವ ಮಾಸ್ತರನು ಮಾಡಿದ್ದು ನಾವು ಕೇಳಿದರೆ ಅವರಿಗೆ ಶಿಕ್ಷೆ ಮಾಡುವೆವು. ತಿಳಿಯುವುದು.

ತಾರೀಖು ೧೪ನೇ ಡಿಶೆಂಬರ ೧೮೭೧. ಶಾಲಾಪತ್ರಿಕೆ ಪುಸ್ತಕ ೭
ಸಂಚಿಕೆ ೯ ಡಿಶೆಂಬರ ೧೮೭೧ ಪುಟ-೭೯.

(ix) ಧಾರವಾಡ ಜಿಲ್ಹೆದೊಳಗಿನ ಯಾವತ್ತು ಸ್ಕೂಲ ಮಾಸ್ತರರಿಗೆ—

ಈ ನೋಟಿಸಿನಿಂದ ತಿಳಿಯಪಡಿಸುವದೇನಂದರೆ– ಕಸಬಾ ಗುತ್ತಲ ತಾಲೂಕ ಕರ್ಜಗಿ ಇಲ್ಲಿಯ ಮಾಸ್ತರರಾದ ಮೋರೋ ವಿನಾಯಕ ಜೋಶಿ ಇವರು ತಮ್ಮ ರಾಜೀನಾಮೆಯನ್ನು ಮಂಜೂರ ಮಾಡುವದಕ್ಕೆ ಮುಂಚೆ ತಮ್ಮ ಚಾರ್ಜವಂನು ಶಿಕ್ಷಕನಿಗೆ ಕೊಟ್ಟು ಹೋದ ಕಾರಣ ಮೆಹರಬಾನ ಎಜ್ಯುಕೇಶನಲ್ ಇನಸ್ಪೆಕ್ಟರ ಪ್ರಾಂತ ದಕ್ಷಿಣ ಭಾಗ ಇವರು ಸದರ ಮಾಸ್ತರರ ರಾಜೀನಾಮೆಯನ್ನು ಮಂಜೂರ ಮಾಡದೆ ಅವರಂನು ಈ ಖಾತೆಯಿಂದ ತೆಗೆದು ಹಾಕಿದ್ದಾರೆ. ಆದಕಾರಣ ಯಾವತ್ತೂ ಮಾಸ್ತರರು ಈ ಪ್ರಕಾರ ಮಾಡದೆ ಹುಷಾರಿಯಿಂದ ಕೆಲಸ ಮಾಡಬೇಕು. ಮತ್ತು ಯಾವ ಮಾಸ್ತರರಾದರೂ ಇದರಂತೆ ವರ್ತಿಸಿದರೆ ಇದೇ ಶಿಕ್ಷೆಗೆ ಪಾತ್ರರಾಗುವರು.

ತಾ. ೨೧ ಜನೇವರಿ ಸಂನ ೧೮೭೨ ಇ., ಶಾಲಾಪತ್ರಿಕೆ ಪುಸ್ತಕ ೪ ಸಂಚಿಕೆ- ೧೧.

(x) ಕಸಬೆ ಅತ್ತಿಗೇರಿ ತಾಲೂಕ ಬಂಕಾಪುರ ಇಲ್ಲಿಯ ಸಾಲಿಯ ಹೆಡ್ಡ-ಮಾಸ್ತರರಾದ ಪರಪ್ಪ ಮೂಕಪ್ಪ ಎಂಬವರ ರಾಜೀನಾಮೆಯು ಮಂಜೂರ ಆಗದ-ಕ್ಕಿಂತ ಮುಂಚೆ ಇವರು ತಮ್ಮ ಕೆಲಸದ ಚಾರ್ಜಕೊಟ್ಟು ಹೊರಟುಹೋದ ಕಾರಣ ಮೆಹರಬಾನ ಎಜ್ಯುಕೇಶನಲ್ ಇನೆಸ್ಪೆಕ್ಟರ ಇವರ ಹುಕುಮಿನ ಮೇಲಿಂದ ಸದರ ಮಾಸ್ತರನನ್ನು ಶಾಲಾ ಖಾತೆಯಿಂದ ತೆಗೆದಿದ್ದೇನೆ.

ತಾ॥ ೬ ನೇ ಮಾಹೆ ಮಾರ್ಚ ೧೮೭೨ ಇ., ಮುಕ್ಕಾಂ ಸವನೂರ.

(xi) ಧಾರವಾಡ ಜಿಲ್ಹಿದೊಳಗಿನ ಯಾವತ್ತು ಸ್ಕೂಲ ಮಾಸ್ತರರಿಗೆ ತಿಳಿಯಪಡಿಸುವದೇನಂದರೆ— ಕೆಲವು ಮಾಸ್ತರರು ನಂಮ ಕಡಿಗೆ ವಿನಹಕಾರಣ ರಿಪೋರ್ಟಗಳನ್ನು ಮಾಡುತ್ತಾರೆ. ಇದರಿಂದ ನಮ್ಮ ಕಚೇರಿಯಲ್ಲಿ ವ್ಯರ್ಥ ಕೆಲಸವು ಬೆಳೆಯುತ್ತದೆ. ಇಂನ ಮುಂದೆ ವಿನಹಕಾರಣ ರಿಪೋರ್ಟ ಮಾಡಿದವರ ವಿಷಯವಾಗಿ ತಜವೀಜ ಮಾಡುವೆವು. ತಿಳಿಯುವದು.

ತಾರೀಖು ೧೯ ಮಾಹೆ ಮೇ ಸನ್ ೧೮೭೩ ಇಸ್ವಿ.... ಧಾರವಾಡ.

Regd No. 24
1872
June 1873

II. ಇತರ ದಾಖಲೆಗಳು

ಸಂತೋಷದ ವರ್ತಮಾನ

(i) ನಾವು ಬಹು ಸಂತೋಷದಿಂದ ಸಮಸ್ತ ಜನರಿಗೆ ವಿಶೇಷವಾಗಿ ಲಿಂಗವಂತರಿಗೆ ತಿಳಿಸುವದೇನಂದರೆ ಬೆಳಗಾಂವಿ ಜಿಲ್ಲೆಯ ಡಿಪುಟಿ ಇನ್‌ಸ್ಪೆಕರರಾದ ಚನ್ನಬಸವಪ್ಪನವರು ಕೇಳಿಕೊಂಡದ್ದರಿಂದ ಚಿತ್ರದುರ್ಗದ ಮುರಗಿ ಜಗದ್ಗುರು ಸ್ವಾಮಿಗಳವರು ಬಹು ದಯಾಳುಗಳಾಗಿ ಅನಾಥರಾದ ವಿದ್ಯಾರ್ಥಿಗಳಿಗೆ ಬೆಳಗಾಂವಿಯಲ್ಲಿ ಅನ್ನ ಕೊಡುವದೋಸ್ಕರ ಪ್ರತಿ ತಿಂಗಳಿಗೆ ೩೦೦ ರೂಪಾಯಿ ಕೊಡುವದಕ್ಕೆ ಒಪ್ಪಿಕೊಂಡಿದ್ದಾರೆ. ಈ ಹಣದಿಂದ ಒಂದು ಮನೆಯನ್ನು ಬಾಡಿಗೆಯಿಂದ ತೆಗೆದುಕೊಂಡು ಅಡಿಗೆಯವರು ಮೊದಲಾದ ಚಾಕರರನ್ನು ಇಟ್ಟು ಸುಮಾರು ೫೦ ನಿರಾಶ್ರಿತರಾದ ವಿದ್ಯಾರ್ಥಿಗಳಿಗೆ ಯೆರಡು ಹೊತ್ತು ಊಟ ಯಿರುವದಕ್ಕೆ ಸ್ಥಳ ಕೊಡತಕ್ಕ ಬಗ್ಗೆ ಈಗ ತಜವೀಜ ನಡೆದಿದೆ.

ಈ ಕಾರಖಾನೆಯು ಯೆಂದು ಆರಂಭವಾಗುವದು ಇದರಲ್ಲಿ ಎಷ್ಟು ಜನ ಯಾವ ಜಾತಿಯ ವಿದ್ಯಾರ್ಥಿಗಳು ತೆಗೆದುಕೊಳ್ಳಲ್ಪಡುವರು ಅವರು ಏನೇನು ಕಲಿತಿರಬೇಕು ಎಂಬ ಮೊದಲಾದ ಸಂಗತಿಗಳು ತೀವ್ರವೇ ಒಂದು ಜಾಹಿರಾತಿನಿಂದ ತಿಳಿಸಲ್ಪಡುವವೆಂದು ಕೇಳುತ್ತೇವೆ.

ಶಾಲಾಪತ್ರಿಕೆ ಅಗಸ್ಟ ೧೮೬೮ ಪುಸ್ತಕ ೪ ಸಂಚಿಕೆ ೫ ಪುಟ ೧೫೯–೬೦.

(ii) ನೋಟಿಸು

ಸಪ್ಟಂಬರ ೧೮೬೮ ॥ ದುರ್ಗದ ಮಹಾಸ್ವಾಮಿಗಳು ॥
ಪುಸ್ತಕ ೪ ಸಂಚಿಕೆ ೬

ದಕ್ಷಿಣ ಭಾಗದ ಯಾವತ್ತು ಸ್ಕೂಲ ಮಾಸ್ತರರಿಗೆ ತಿಳಿಸುವದೇನಂದರೆ— ೫೦ ಲಿಂಗಾಯತ ಹುಡುಗರಂನು ಬೆಳಗಾವಿಯಲ್ಲಿ ಇಂಗ್ರೇಜ ಕಲಿಯುವದರ ದಶಿಯಿಂದ

ಇಡುವ ನಿಶ್ಚಯ ಶ್ರೀ ॥ ॥ ಮಾಡಿದ ವಿಷಯವಾಗಿ ಸರಕ್ಯೂಲರಗಳು ಇವೊತ್ತಾಗಲಿ ಅಥವಾ ನಾಳ್ಯಾಗಲಿ ನಿಮ್ಮ ಕಡಿಗೆ ಕಳುಹಿಸುವೆವು. ಆ ಸರಕ್ಯೂಲರಗಳ ಮೇಲೆ ನಂಮ ಮತ್ತು ಡಿಪ್ಯೂಟಿ ಇ. ಇನಸ್ಪೆಕ್ಟರ ಚೆಂನಬಸಪ್ಪ ಇವರ ಸಹಿಗಳಿವೆ. ಆದರೆ ಈ ಸರಕ್ಯೂಲರಗಳು ನಿಂಮ ಕಡಿಗೆ ಮುಟ್ಟಿದಾಕ್ಷಣವೇ ಅವುಗಳೊಳಗಿನ ಮಜಕೂರು ಹುಡುಗರಿಗೆ ತಿಳುಹಿಸಿ ನಿಂಮ ಊರನ್ನ ಶೆಟ್ಟಿ ಸಾವಕಾರರಿಗೆ ಸಹ ತಿಳುಹಿಸಬೇಕು.

ತಾರೀಖು ೨೯ ಮಾಹೆ ಸಪಟೆಂಬರ ೧೮೬೮ ಯಿಸವಿ ಮುಕಾಂ ಬೆಳಗಾಂವಿ.

W. A. ರಸೆಲ್
ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣ ಭಾಗ

(iii) ನೋಟಿಸು

ಚಿತ್ರಕಲ್ಲದುರ್ಗದ ಮಹಾಸ್ವಾಮಿಗಳು

ಯಾವತ್ತು ಲಿಂಗಾಯುತ ಜನರಿಗೆ ತಿಳಿಯುವದರ ದಶಿಯಿಂದ ಪ್ರಕಟ ಮಾಡು-ವದೇನಂದರೆ— ಲಿಂಗಾಯುತ ಹುಡುಗರು ಇಂಗ್ರೇಜಿ ಕಲಿತು, ಶಾಹ್ಯಣೆರಾಗಿ ಸರಕಾರ ಕೆಲಸಗಳಲ್ಲಿ ಶೇರಬೇಕೆಂಬುವ ಉದ್ದೇಶದಿಂದ ಬೆಳಗಾಂವಿಯಲ್ಲಿ ೫೦ ಲಿಂಗಾಯುತ ಹುಡುಗರಂನು ಇಟ್ಟು ಆ ಹುಡುಗರಿಗೆ ಲಿಂಗ ವಸ್ತ್ರ ಮೊದಲಾದವುಗಳನ್ನು ತಾಂವು ತಮ್ಮ ಸ್ವಂತ ಖರ್ಚಿನಿಂದ ಪೂರೈಸುವ ನಿಶ್ಚಯ ಶ್ರೀ॥ ... . ॥ ಮಾಡಿದ್ದಾರೆ.

೨. ಈ ಹುಡುಗರ ಊಟ ಉಪಚಾರದ ದಶಿಯಿಂದ ಒಂದು ದೊಡ್ಡ ಮನೆಯನ್ನು ಬಾಡಗೀಲೆ ತೆಗೆದುಕೊಂಡಿದೆ. ಈ ಹುಡುಗರೆಲ್ಲಾ ಆ ಮನಿಯಲ್ಲಿ ಇರಬೇಕಾ-ಗುವದು. ಊಟ ಉಪಚಾರಗಳು ನೆಟ್ಟಗೆ ಆಗುವದರ ದಶಿಯಿಂದ ಒಬ್ಬ ಸಂಭಾವಿತ ಲಿಂಗಾಯುತನಂನು ಇದರ ಮೇಲೆ ನೇಮಿಸಿದೆ. ಇವರು ಹುಡುಗರ ಮೇಲೆ ಎಲ್ಲಾ ಪ್ರಕಾರದ ಬಂದೋಬಸ್ತ ಇಡುವರು. ಹೈಸ್ಕೂಲಿಗೆ ಹೋಗಲಿಕ್ಕೆ ಯೋಗ್ಯರಿದ್ದವರಂನ ಹೈಸ್ಕೂಲಿಗೆ ಕಳುಹಿಸುವೆವು ಮತ್ತು ಸಂಣ ಸಾಲಿಗೆ ಹೋಗಲಿಕ್ಕೆ ತಕ್ಕವರಿದ್ದರೆ ಅವರನ್ನು ಮೊದಲು ಅಲ್ಲಿಗೆ ಕಳುಹಿಸಿ ಬಳಿಕ ಹೈಸ್ಕೂಲಿಗೆ ಕಳುಹಿಸುವೆವು. ಈ ಹುಡುಗರಿಗೆ ಕಲಿಯುವದರ ಹೊರ್ತು ಮತ್ತಿನ್ನೇನು ಯರಡನೇ ಕೆಲಸ ಮಾಡುವದು ಬೀಳಲಿಕ್ಕಿಲ್ಲ. ಅಡಗೀ ಮಾಡುವದರ ದಶಿಯಿಂದ ಮತ್ತು ನೀರು ತರುವದರ ದಶಿಯಿಂದ ಬೇರೆ ಮನುಷ್ಯರಂನ ಯಿಡುವೆವು.

೩. ಯಾವ ಹುಡುಗರ ಮನಸ್ಸಿನಲ್ಲಿ ಇಂಗ್ರೇಜಿ ಕಲಿತು ಸರಕಾರದ ಕೆಲಸಗಳಲ್ಲಿ ಶೇರಬೇಕೆಂಬುವದದೆ ಅವರು ತಾರೀಖು ೨ ನವ್ಹೆಂಬರ ೧೮೬೮ ದಿವಸ ೧೦ ಘಂಟೆಕ್ಕೆ ಕೆಳಗೆ ಸಹಿ ಮಾಡಿದವರ ಕಡಿಗೆ ಬೆಳಗಾಂವಿಯಲ್ಲಿ ಹಾಜರಾಗಬೇಕು.

೪. ಹಂನೆರಡು ವರ್ಷದೊಳಗಿನವರು ಮತ್ತು ಹದಿನೆಂಟು ವರುಷ, ಮೀರಿದವರು ಬರಬಾರದು. ಮತ್ತು ತಂಮ ನಡತಿ ನೆಟ್ಟಗಿರುವ ಬಗ್ಗೆ ಸಂಭಾವಿತ ಜನರ ಕಡೆಯಿಂದ ಸರಟಿಫಿಕೇಟು ತರಬೇಕು. ಸರಕಾರದ ಸಾಲಿಗಳಲ್ಲಿ ಕಲಿಯುತ್ತಿರುವ ಹುಡುಗರು ತಮ್ಮ ತಮ್ಮ ಪಂತೋಜಿಗಳ ಕಡಿಯಿಂದ ಸರಟಿಫಿಕೇಟು ತರಬೇಕು. ಆ ಸರಟಿಫಿಕೇಟುಗಳಲ್ಲಿ ಈ ಹುಡುಗರಿಗೆ ಪರೀಕ್ಷೆದಲ್ಲಿ ಪಾಸಾಗುವಷ್ಟು ಬರುತ್ತದೆಂದು ಬರದಿರಬೇಕು. ಕೆಳಗೆ ಬರದ ವಿಷಯಗಳಲ್ಲಿ ಪರೀಕ್ಷಾ ಆಗುವದು. ಪರೀಕ್ಷೆದಲ್ಲಿ ಇಳಿದವರ ಹೊರ್ತು ಯೆರಡನೆಯವರಂನ ತೆಗೆದುಕೊಳ್ಳಲಿಕ್ಕಿಲ್ಲಾ. ಇಂಗ್ರೇಜಿ ಕಲಿತವರಿದ್ದರೆ ಮುಂಚೆ ಅವರನ್ನ ತೆಗೆದುಕೊಂಡ ಬಳಿಕ ಇಂಗ್ರೇಜಿ ಬಾರದವರಂನ ತೆಗೆದುಕೊಳ್ಳುವೆವು. ತಮ್ಮ ಹತ್ರ ಈಗಿರುವ ಅಭ್ಯಾಸದ ಪುಸ್ತಕಗಳಂನು ಮತ್ತು ಸ್ಲೇಟ ಪಾಟಿಯಂನು ತೆಗೆದುಕೊಂಡು ಬರಬೇಕು.

(iv) ಲಿಂಗಾಯತರಿಗೆಲ್ಲಾ ಬಿಂನಹಾ ಪತ್ರಾ,

ಚಿತ್ರಕಲ್ಲದುರ್ಗದ ಮಹಾಸ್ವಾಮಿಗಳು

೧. **ಈ ಕರ್ನಾಟಕ ಪ್ರಾಂತದಲ್ಲಿ** ಲಿಂಗಾಯತ ಜನರು ಅನೇಕರು ಮತ್ತು ಬಹಳಮಾಡಿ ಅವರೇ ಸಾವಕಾರರು ಉಳಿದ ಜನರು ಬಹಳ ಕಡಿಮೆ, ಮತ್ತು ಬಡವರು ಹೀಗಿದ್ದು ಲಿಂಗಾಯತರು ಕನ್ನಡ ಮತ್ತು ಇಂಗ್ರೇಜಿ ಮೊದಲಾದ ವಿದ್ಯೆಗಳನ್ನು ಕಲಿತು ಶಾಹಣೆರಾಗಿ ಸರಕಾರದ ಕೆಲಸಗಳಲ್ಲಿ ಸೇರದೆ ಇದ್ದದರಿಂದ, ಅವರು ಎಷ್ಟು ಶ್ರೀಮಂತರಾದಾಗ್ಯೂ ಅವರಿಗೆ ತಕ್ಕ ಮಾನಪಾನಗಳು ಸರಕಾರದಲ್ಲಿ ಆಗುವದಿಲ್ಲಾ.

೨. ಏನಕೆ ಲಿಂಗಾಯತರಿಗೆ ಪೇಶವಾಯಿ ಸರಕಾರ ಹೋಗಿ ಇಂಗ್ಲೀಷ ಸರಕಾರ ಬಂದದೆಂಬುವದು ಗೊತ್ತುಯಿಲ್ಲಾ. ಅವರಿಗೆ ಇಂಗ್ರೇಜಿ ಸರಕಾರಕಿ ಆಗಲಿಕ್ಕಿಲ್ಲವೆಂದು ತಿಳಿದು, ಸರಕಾರ ಕೆಲಸಗಳನ್ನು ಸಂಪಾದಿಸುವ ಯತ್ನ ಮಾಡುವದಿಲ್ಲಾ, ಅಂದರೆ ಇದು ಅವರ ತಪ್ಪು. ಇಂಗ್ರೇಜಿ ಸರಕಾರದಲ್ಲಿ ಜಾತಿಯನ್ನು ನೋಡಿ ಕೆಲಸಗಳನ್ನು ಕೊಡುವದಿಲ್ಲ. ಇದಲ್ಲದೆ ಸಾಹೇಬ ಜನರಿಗೆ ನಂಮ ದೇಶದ ಮಾತು ತಿಳಿಯುವದರಿಂದ, ಯಾವತ್ತು ಜನರ ದಾದು ಹತ್ತುತ್ತದೆ. ಅನ್ಯಾಯವಾಗದ ಹಾಗೆ ಸರಕಾರದವರು ಬಂದೋಬಸ್ತು ಮಾಡಿದ್ದಾರೆ. ಅಂದರೆ ನಂಮ ಜನರಿಗೆ ಇದು ನೆಟ್ಟಗೆ ತಿಳಿಯದ ಕಾರಣ ಯಾವ ಪ್ರಕಾರದ ಅನ್ಯಾಯವಾದರೂ ಪ್ರಯತ್ನ ಮಾಡದೆ ಸುಮ್ಮನೆ ಮನೆಯಲ್ಲಿ ಕೂತುಬಿಡುತ್ತಾರೆ.

೩. ಇಷ್ಟು ದಿವಸ ಆಗಿದ್ದು ಆಗಿ ಹೋಯಿತು. ಇಂನ ಮುಂದೆ ಲಿಂಗಾಯತರ ಸ್ಥಿತಿ ನೆಟ್ಟಗಾಗಿ ಅವರು ಸರಕಾರದ ಕೆಲಸಗಳಲ್ಲಿ ಶೇರಬೇಕೆಂಬುವ ಉದ್ದೇಶದಿಂದ ಬೆಳಗಾಂವಿಯಲ್ಲಿ ೫೦ ಹುಡುಗರಿಗೆ ಅಂನ ವಸ್ತ್ರ ಮೊದಲಾದವುಗಳನ್ನು ಕೊಟ್ಟು ಸಂವರಕ್ಷಣೆಯಂನು ಮಾಡಿ ಅವರಿಗೆ ಇಂಗ್ರೇಜಿ ವಿದ್ಯಾ ಕಲಿಸಬೇಕೆಂಬುವ ನಿಶ್ಚಯವಂನು ಶ್ರೀ॥............ ಮಾಡಿದ್ದಾರೆ.

೪. ಈ ಹುಡುಗರು ಇಲ್ಲಿ ಮೂರು ಅಥವಾ ನಾಲ್ಕು ವರ್ಷಗಳತನಕ ಕಲಿತು ಮುಂದೆ ಮುಂಬಯಿಗೆ ಹೋಗಿ ಅಲ್ಲೀ ಮ್ಯಾಟ್ರಿಕುಲೇಶನ್ ಪರೀಕ್ಷಾ ಕೊಡಬೇಕು. ಅಲ್ಲಿ ಪರೀಕ್ಷೆ ಇಳಿದವರಂನ ಪುಣೆದಲ್ಲಿ ಇಟ್ಟು, ಮುಂದೆ ನಾಲ್ಕಾರು ವರ್ಷಗಳ ತನಕ ಇಂಗ್ರೇಜಿ ಮೊದಲಾದ ವಿದ್ಯಗಳ ಅಭ್ಯಾಸ ಮಾಡಿಸುವರು. ಇದರಿಂದ ಲಿಂಗಾಯತರ ಹುಡುಗರು ಶ್ಯಾಹಣೆರಾಗುವರು. ಅದರಿಂದ ಅವರಿಗೆ ಸರಕಾರದಲ್ಲಿ ದೊಡ್ಡ ದೊಡ್ಡ ಕೆಲಸಗಳು ಶಿಗುವವು. ಬ್ರಾಹ್ಮರು ಮೊದಲಾದವರಿಗೆ, ಕಲೆಕಟರ, ಜಡಿಜ, ಡಿಪುಟಿ ಕಲೆಕಟರ, ದಪ್ತರದಾರ, ಸದರ ಅಮಿನ, ಪ್ರಿನಸಿಪಾಲ ಸದರ ಅಮಿನ, ಮೊದಲಾದ ದೊಡ್ಡ ದೊಡ್ಡ ಜಾಗೆಗಳು ಸಿಕ್ಕದ್ದು ಗೊತ್ತಿದ್ದ ಮಾತೇ ಸರಿ. ಅಂದರೆ ಬ್ರಾಹ್ಮರಂತೆ ಲಿಂಗಾಯತರು ಕಲಿತು ಶ್ಯಾಣೇರಾದರೆ ಇವರಿಗೂ ಅಂಥಾ ಕೆಲಸಗಳು ಸಿಗುವವು.

೫. ಈ ಮಹತ್ಕಾರ್ಯಕ್ಕೆ ಶ್ರೀ॥ ॥ ತಿಂಗಳಿಗೆ ೩೦೦ ರೂಪಾಯಿಗಳು ಕೊಡುತ್ತೆವೆಂತ ಒಡಂಬಟ್ಟಿದ್ದಾರೆ. ಇದರಂತೆ ಚಿಕ್ಕೋಡಿ ಮುನಿಸಿಫರಾದ ವೀರಭದ್ರಯ್ಯನವರು ಒಬ್ಬ ಹುಡುಗನ ಖರ್ಚು ನಡಿಸುವವರಿದ್ದಾರೆ. ಮತ್ತು ಇಟ್ಟಗಿಯಲ್ಲಿರುವ ಸಾಣೆಕೊಪ್ಪದ ಮಲ್ಲಪ್ಪಣ್ಣವರು ಒಬ್ಬ ಹುಡುಗನ ಖರ್ಚು ನಡಿಸುತ್ತೇವೆಂದು ಹೇಳಿದ್ದಾರೆ. ಮತ್ತು ನಾನು ಒಬ್ಬನ ಖರ್ಚು ನಡಿಸುತ್ತೇನೆಂದು ಮಹಾಸ್ವಾಮಿಗಳವರಿಗೆ ಬರಕೊಂಡಿದ್ದೇನೆ. ಇದರಂತೆ ದೊಡ್ಡ ದೊಡ್ಡ ಶೆಟ್ಟಿ ಸಾವಕಾರರವರು ತಂಮ ಕೈಲಾದ ಮಟ್ಟಿಗೆ ಈ ಮಹಾತ್ಕಾರ್ಯಕ್ಕೆ ಸಹಾಯ ಮಾಡಿದರೆ, ಅವರಿಗೆ ಜಾತಿ ಉದ್ಧಾರ ಮಾಡಿದ ಪುಣ್ಯ ಬಂದು ಕೀರ್ತಿ ಉಂಟಾಗುವದು. **ಘಳಿಸಿದ ದುಡ್ಡು ಎಂದಾದರೂ ಹಾಳಾಗಿ ಹೋಗುತ್ತದೆ. ಲಕ್ಷ್ಮೀಸ್ಥಿರವಲ್ಲವೆಂತ ಶಾಸ್ತ್ರ ಕೂಗುತ್ತದೆ. ಮತ್ತು ಯಾವತ್ತರೂ ನೋಡಿದ್ದಡೆ. ಅಂದರೆ ಸತ್ಕಾರ್ಯಗಳಿಗೆ ಖರ್ಚು ಮಾಡಿ ಪುಣ್ಯ ಮತ್ತು ಕೀರ್ತಿಗಳನ್ನು ಘಳಿಸುವದು ಶ್ಯಾಹ-ಣೆರ ಕೆಲಸ.**

೬. ಈ ಮಹತ್ಕಾರ್ಯಕ್ಕೆ ಬೇಕಾಗುವ ಭಾಂಡೆ ಜೀನಸುಗಳನ್ನು ಕೊಳ್ಳುವದಕ್ಕೆ ಬೆಳಗಾಂವಿ, ಶಾಹಪೂರದಲ್ಲಿರುವ ಕೆಲವು ಲಿಂಗಾಯತ ಸಾವಕಾರರು ೪೦೦ ರೂಪಾಯಿ ಪಟ್ಟಿಕೊಟ್ಟಿದ್ದಾರೆ. ಇಂನು ಉಳಿದ ಜನರ ಕಡಿಯಿಂದ, ಹಾಸಕಿ ಮುಂತಾದವುಗಳ ದಶಿಯಿಂದ ಪಟ್ಟಿ ಮಾಡಿಸುವದಿದೆ. ಈಗ ವಸೂಲಾದ ರೂಪಾಯಿಗಳೀದ ಭಾಂಡೆ ಜೀನಸುಗಳನ್ನು ಖರೀದಿ ಮಾಡಿ ಅವುಗಳ ಮೇಲೆ ಶ್ರೀ ಮುರಗ್ಯಾ ಜಗದ್ಗುರು ಸ್ವಾಮಿಗಳವರ ವಿದ್ಯಾಲಯವೆಂತ ವಿಳಾಸ ಹಾಕಿಸಿದ್ದೇವೆ.

೭. ಈ ಮಹತ್ಕಾರ್ಯದಿಂದ ಲಿಂಗಾಯತ ಜನರು ಬೆಳಕಿಗೆ ಬರುವರು. ಈಗ ದೊಡ್ಡ ದೊಡ್ಡ ವಿರಕ್ತರು ಮತ್ತು ಸಾವಕಾರರು ಕಚೇರಿಯಲ್ಲಿ ಹೋದರೆ ಅವರಿಗೆ ತಕ್ಕ ಮಾನಪಾನಗಳು ಆಗುವದಿಲ್ಲಾ. ಅದೇ ಬ್ರಾಹ್ಮರು ಸರಕಾರದಲ್ಲಿ

ದೊಡ್ಡ ದೊಡ್ಡ ಕೆಲಸದಲ್ಲಿ ಇರುವದರಿಂದ ಆ ಜನರಿಗೆ ಶಕ್ಕ ಮರ್ಯಾದೆಗಳು ಆಗುತ್ತವೆ.

೮. ಈ ಮಹತ್ಕಾರ್ಯಕ್ಕೆ ಸಹಾಯ ಮಾಡುವವರ ಹೆಸರುಗಳನ್ನು ಬೇರೆ ಛಾಪಿಸಿ ನಾಲ್ಕು ಕಡೆಗೂ ಪ್ರಸಿದ್ಧ ಮಾಡುವೆವು.

ಇಂತಿ ಅನೇಕ ಶರಣಾರ್ಥಿಗಳು

ತಾರೀಖು ೧ ನೇ ಮಾಹೆ ಆಗಟೋಬರ,
ಸಂನ ೧೮೬೮ ನೇ ಯಿಸವಿ

ಚನಬಸಪ್ಪಾ ಬಸಲಿಂಗಪ್ಪಾ ಧಾರವಾಡ
ಡಿಪುಟಿ ಎಜ್ಯುಕೇಶನಲ್ ಇನಸ್ಪೆಕ್ಟರ
ಜಿಲ್ಹಾ ಬೆಳಗಾಂವಿ.

“ ಬೆಳಗಾಂವ ಸಮಾಚಾರ ಛಾಪಖಾನೆಯಲ್ಲಿ ಛಾಪಿಸಿದೆ ”

(v) **ಈ ಕರ್ನಾಟಕ ದೇಶದಲ್ಲಿ** ಲಿಂಗಾಯತ ಜನರು ಬಹಳ ಮಂದಿ ಇದ್ದು ಯಾರೂ ವಿದ್ವಾಂಸರಾಗಿಲ್ಲ. ಒಬ್ಬಿಬ್ಬರ ಹೊರ್ತು ಯಾರೂ ಕಾಮದಾರ ರಾಗಿಲ್ಲ, ಇದರ ಕಾರಣವೇನಂದರೆ ಇವರಿಗೆ ಇಂದಿನ ತನಕ ಯಾರೂ ತಿಳಿಹೇಳಲಿಲ್ಲ. ಈಗ ರಾ॥ ರಾಜಶ್ರೀ ಚೆನ್ನಬಸಪ್ಪಾ ಡಿ. ಇ. ಇ. ಜಿಲ್ಹಾ ಬೆಳಗಾಂವ ಇವರು ತಮ್ಮ ಇಲಾಖೆಯ ಸಾಲಿಗಳ ಪರೀಕ್ಷೆಯ ಸಲುವಾಗಿ ಊರೂರಿಗೆ ಹೋದಾಗ ಲಿಂಗವಂತ ಜನರಿಗೆ ವಿದ್ಯೆ ಕಲಿಯೋಣದರಿಂದ ಇಂಥಿಂಥಾ ಲಾಭಗಳಾಗುತ್ತವೆಂದು ಉಪದೇಶ ಮಾಡಿ, ಅವರನ್ನು ಹುರುದುಂಬಿಸಿ, ಚಿತ್ರಕಲ್ಲದುರ್ಗದ ಮುರಿಗ್ಯೆ ಸ್ವಾಮಿಗಳಿಗೆ ಹೇಳಿ-ಕೊಂಡದರಿಂದ ಅವರು ತಿಂಗಳೊಂದಕ್ಕೆ ೩೦೦ ರೂಪಾಯಿಗಳನ್ನು ಕೊಡುತ್ತೇವೆ ೫೦ ಲಿಂಗವಂತ ಹುಡುಗರನ್ನು ಬೆಳಗಾಂವಿಯಲ್ಲಿಟ್ಟು ಇಂಗ್ರೇಜಿ ಕಲಿಸಬೇಕೆಂದು ಹೇಳಿದರು. ಆ ಸ್ವಾಮಿಗಳ ವಚನ ತಕ್ಕೊಂಡು ಸದರ ಡಿ. ಇ. ಇ. ಇವರು ಮೆ॥ ರಸಲಸಾಹೇಬ ಬಹದ್ದೂರ ಇ. ಇ. ದಕ್ಷಿಣ ಭಾಗ ಇವರ ಬಳಿಗೆ ಬಂದು ಯಾವತ್ತು ಸಂಗತಿಗಳನ್ನು ಅರಿಕೆ ಮಾಡಿಕೊಳ್ಳಲಾಗಿ ಅವರು ದಕ್ಷಿಣ ಭಾಗದ ನಾಲ್ಕೂ ಜಿಲ್ಹೆಗಳೊಳಗಿನ ಲಿಂಗ ವಂತ ವಿದ್ಯಾರ್ಥಿಗಳಿಗೆ ನೋಟಿಸು ಕೊಟ್ಟದ್ದೇನಂದರೆ ೧೨ ವರ್ಷದಿಂದ ೧೮ ವರ್ಷಗಳ ತನಕ ವಯಸ್ಸುಳ್ಳ ಲಿಂಗವಂತ ಹುಡುಗರು ತಾ॥ ೧ ನೇ ನವೆಂಬರ ದಿವಸ ಬೆಳಗಾಂವಿಗೆ ಬಂದು ಮೂರನೇ ಸ್ಟ್ಯಾಂಡ ಪ್ರ॥ ಪರೀಕ್ಷೆಯ ಕೊಡಬೇಕಾದ ಪರೀಕ್ಷೆಯೊಳಗೆ ಪಾಸ ಆದವರನ್ನು ಸ್ವಾಮಿಗಳ ಅನ್ನ ಛತ್ರದಲ್ಲಿ ಆವರಿಗೆ ಇಂಗ್ರೇಜಿ ಕಲಿಸಲಾದೀತೆಂದು ನೋಟಿಸು ಕೊಟ್ಟರು. ಅದರಂತೆ ತಾ. ೧ ನವೆಂಬರ ದಿವಸ ೧೮೮ ಹುಡುಗರು ಪರೀಕ್ಷೆ ಕೊಡುವದಕ್ಕೆ ಹಾಜರಾದರು. ಮೊದಲನೇ ದಿವಸ ಪರೀಕ್ಷೆಯನ್ನು ತಕ್ಕೊಳ್ಳು

ಕಲ್ಲಪ್ಪನ ಮುದ್ರಣ ಚನ್ನಮ್ಮನ ಕಿತ್ತೂರಿನ ಶ್ರೀ ಯೋಗಪ್ಪ ಚನ್ನಪ್ಪ ಮಾರಿಹಾಳ ಇವರ ಸಂಗ್ರಹದಿಂದ— ಪ್ರೊ. ವ್ಹಿ. ಜಿ. ಮಾರಿಹಾಳರು ಈ ದಾಖಲೆಯನ್ನು ಒದಗಿಸಿದರು.

ವದಕ್ಕೆ ಮಿ॥ ರಸಲ ಸಾ॥ ಬಾ॥ ಇ॥ ಇ॥ ಮತ್ತು ಮಿ॥ ಷ್ಟೋಕ ಸಾ॥ ಬಾ॥ ಅ॥ ಕಲೆಕಟರ್ ಮತ್ತು ಮಿ॥ ಜಾರ್ಡನ್ ಸಾ॥ ಬಾ॥ ಅಸಿಸ್ಟಂಟ ಜಡ್ಜ ಈ ಮೂರು ಮಂದಿ ದೊರೆಗಳು ಮತ್ತು ಕಾಮದಾರರು ಮತ್ತು ಶೆಟ್ಟಿ ಸಾವಕಾರರು ಕೂತಿದ್ದರು. ಎರಡನೇ ದಿವಸ ರಸೆಲ್ ದೊರೆಗಳು ಷ್ಟೋಕ ದೊರೆಗಳು ಕೂತಿದ್ದರು. ಈ ಮೇರೆಗೆ ಪರೀಕ್ಷೆಯನ್ನು ತಕ್ಕೊಳ್ಳಲಾಗಿ ಪಾಸ ಆದ ಹುಡುಗರ ವಿವರ :

ಯಾವ ಜಿಲ್ಹೆದವರು	ಎಷ್ಟು ಹುಡುಗರು	ಪಾಸ ಆದವರು
ಬೆಳಗಾಂವ	೧೧೩	೪೧
ಧಾರವಾಡ	೩೧	೯
ಕಲಾದಗಿ	೪	೦
ಒಟ್ಟು	೧೪೮	೫೦

ಈ ಮೇರಿಗೆ ಪಾಸ ಆದ ೫೦ ಹುಡುಗರನ್ನು ಇಟ್ಟುಕೊಂಡು ಇಂಗ್ರೇಜಿ ಕಲಿಯಲಿಕ್ಕೆ ಶೇಖರಿಸುತ್ತಾರೆ. ಈ ಹುಡುಗರಿಗೆ ಅನ್ನ ವಸ್ತ್ರ ಪುಸ್ತಕ ಮುಂತಾದ ಖರ್ಚು ಮುರಿಗ್ಯ ಸ್ವಾಮಿಗಳು ನಡಿಸುತ್ತಾರೆ. ಈ ೫೦ ಹುಡುಗರು ಇರುವದಕ್ಕೂ ಮಲಗಿ ಕೊಳ್ಳುವದಕ್ಕೂ ಊಟ ಮಾಡುವದಕ್ಕೂ ಬೆಳಗಾವಿಯಲ್ಲಿ ಕೇಳಕರ ಬಾಗದಲ್ಲಿ ಒಂದು ದೊಡ್ಡ ಮನಿಯನ್ನು ಬಾಡಗಿ ತಕ್ಕೊಂಡು ಅಲ್ಲಿ ಅಡಗೀ ಮಾಡುವವರನ್ನು ಇಟ್ಟು ಅದರ ಮೇಲೆ ಯಾವತ್ತು ಬಂದೋಬಸ್ತಿಯ ಸಲುವಾಗಿ ಡಾ॥ ಮಡಿವಾಳಯ್ಯ ಪಂಡಿತ ಇವರನ್ನು ನೇಮಿಸಿ ಇವರ ಕೈಯೊಳಗೆ ಇಬ್ಬರು ಕಾರಕೂನರನ್ನು ಕೊಟ್ಟು ಗೊತ್ತುಮಾಡಿರುತ್ತಾರೆ.

ಮೊದಲನೇ ದಿವಸ ಸಭೆಯೊಳಗೆ ಚನ್ನಬಸವಪ್ಪನವರು ಲಿಂಗವಂತ ಜನರನ್ನು ಹುರಿದುಂಬಿಸುವದಕ್ಕಾಗಿ ಸಂಭಾಷಣೆಯ ಮಾಡಿದರು. ಆಗ ಬೆಳಗಾವಿಯ ಗಣಾಚಾರಿ ಪಟ್ಟದಪ್ಪನವರೂ, ಶಾಪೂರ ಬೋಳಮಲ್ಲಿ ಶಿವಲಿಂಗಪ್ಪನವರೂ, ಬೈಲಹೊಂಗಲದ ಜವಳೀ ಉಳವಪ್ಪನವರೂ ಒಬ್ಬೊಬ್ಬ ವಿದ್ಯಾರ್ಥಿಗೆ ಆಗುವಷ್ಟು ಖರ್ಚು ನಾವು ನಮ್ಮ ಪದರನಿಂದ ನಡಿಸುತ್ತೇವೆಂದು ಎದ್ದು ಹೇಳಿದರು. ಇದೇ ಮೇರಿಗೆ ಮತ್ತು ಕೆಲವು ಗೃಹಸ್ಥರು ಹೇಳಿರುತ್ತಾರೆ.

ಶಾಲಾಪತ್ರಿಕೆ ಪುಸ್ತಕ ೪ ಸಂಚಿಕೆ ೮ ನವ್ಹಂಬರ ೧೮೬೮.

(vi) **ಹೊಸ ಪುಸ್ತಕವು** ಧಾರವಾಡ ಜಿಲ್ಹೆಯ ಡಿ. ಇನಸ್ಪೆಕ್ಟರರಾದ ರಾ. ರಾ. ಚನಬಸವಪ್ಪ ಬಸಲಿಂಗಪ್ಪ ಇವರು ಇಂಗ್ಲೀಷದಿಂದ ಕನ್ನಡ ಭಾಷೆಯೊಳಗೆ ಭಾಷಾಂತರ ಮಾಡಿ, ಧಾರವಾಡದೊಳಗೆ ಶಿಲಾಯಂತ್ರದಲ್ಲಿ ಛಾಪಿಸಿದ "ನಗದವರನ್ನು ನಗಿಸುವಂಥ ಒಂದು ಬಹು ಚಮತ್ಕಾರವಾದ ಕಥೆಯು" ಯೆಂಬ ಪುಸ್ತಕದ್ದೊಂದು ಪ್ರತಿಯನ್ನು ನಮಗೆ ಕಳುಹಿಸಿದಂತೆ ನಾವು ಅತ್ಯಾದರಪೂರ್ವಕವಾಗಿ ಅದನ್ನು ಸ್ವೀಕರಿಸುತ್ತೇವೆ. ಈ ಪುಸ್ತಕದ ಬಗ್ಗೆ ನಮ್ಮ ಅಭಿಪ್ರಾಯವನ್ನು ಬೇಗ ಪ್ರಕಟಿಸುವೆವು.

ಶಾಲಾ ಪತ್ರಕವು ಜ್ಯೂನ ೧೮೬೩ ಪುಸ್ತಕ ೮ ಸಂಚಿಕೆ ೩ ಪುಟ ೬೦.

(vii) ಧಾರವಾಡ ಜಿಲ್ಹೇಯ ಗದಗ ಇಂಗ್ರೇಜಿ ಸಾಲಿಯ ಉಪಯೋಗದ ಸಲುವಾಗಿ ಖುರ್ಚಿ, ಮೇಜು ಮುಂತಾದ ಸಾಮಾನುಗಳನ್ನು ಕೊಳ್ಳುವದಕ್ಕೆ ಪಟ್ಟಿ ಹಾಕಿದವರ ಹೆಸರುಗಳು ಕೆಳಗೆ ಬರೆದಂತೆ...........

ರಕಮು	ಹೆಸರು
೫	ಮಿ. ಕಾಂಡಿ ಸಾಹೇಬ ಎ. ಇ. ದ. ಭಾ.
೧೦	ರಾ. ಬಾಳಕೃಷ್ಣಗೋವಿಂದ ಮಾಮಲೇದಾರ
೧೦	ರಾ. ಚನಬಸಪ್ಪಾ ಬಸಲಿಂಗಪ್ಪ ಡಿ. ಎ. ಇ.

ಸಪ್ಟಂಬರ ೧೮೬೩.

ವಿದ್ಯಾಸುಧಾರಣಾ ಸಂಬಂಧವಾದ ವೃತ್ತಾಂತಗಳು :

ನಾಮದಾರ ಗವ್ಹರ್ನರ ದೊರೆಗಳವರು ಕಳೆದ ತಿಂಗಳಲ್ಲಿ ಧಾರವಾಡಕ್ಕೆ ಬಂದಾಗ ಸ್ವಲ್ಪ ದಿವಸದೊಳಗೆ ಇಲ್ಲಿವೊಂದು ಕಾಲೇಜವು ಸ್ಥಾಪಿಸಲ್ಪಡುವದೆಂದು ಕೇಳುತ್ತೇವೆ. ಇದೇ ಮೇರೆಗೆ ಅಮದಾಬಾದಿನಲ್ಲಿಯೂ ವೊಂದು ಕಾಲೇಜವು ಸ್ಥಾಪಿಸಲ್ಪಡುವದೆಂದು ಕೇಳುತ್ತೇವೆ. ಆದರೆ ಪುಣೆಯ ಡೆಕ್ಕನ್ ಕಾಲೇಜವನ್ನು ಮುರಿಯತಕ್ಕವರಿದ್ದಾರಂತೆ.

ಶಾಲಾಪತ್ರಕೆ ೧೮೬೭.

.......ಉತ್ತರ ಕರ್ನಾಟಕಕ್ಕೆ ಒಂದು ಕಾಲೇಜು ಬೇಕು ಎನ್ನುವ ಬೇಡಿಕೆ ನೂರು ವರ್ಷಗಳಷ್ಟು ಹಳೆಯದಾದರೂ ೧೯೧೭ ರ ವರೆಗೆ ಕನ್ನಡಿಗರು ಕಾಯಬೇಕಾಯಿತು. ಡೆಪ್ಯೂಟಿ ಚನ್ನಬಸವಪ್ಪನವರು ವಿದ್ಯಾ ಇಲಾಖೆ ಮತ್ತು ಸಾರ್ವಜನಿಕರೊಂದಿಗೆ ಸ್ವತಂತ್ರ ಕಾಲೇಜಿನ ಬೇಡಿಕೆಯನ್ನು ೧೮೬೭ ರಲ್ಲಿಯೇ ಮುಂದಿಟ್ಟಿದ್ದರು. (ಇದು ಸಮಾಜ ಶಿಕ್ಷಣ ಪ್ರಗತಿಗಾಗಿ ಡೆ. ಚನ್ನಬಸವಪ್ಪನವರ ಕಳಕಳಿ ಮತ್ತು ಮುಂದೋರಣೆಯನ್ನು ಎತ್ತಿ ತೋರಿಸುತ್ತದೆ.)

—ಸಂ. ಜೀವನಶಿಕ್ಷಣ

ಫೆಬ್ರುವರಿ ೧೯೬೮ ಸಂಚಿಕೆ ಪುಟ ೩ ಶತಸಂವತ್ಸರಗಳ ಹಿಂದೆ ಅವತರಣಿಕೆ

ಭಾಗ—೨

ಕರ್ನಾಟಕದ ಶಿಕ್ಷಣರಂಗ

೧೯ ನೆಯ ಶತಮಾನ

ಮುಂಬೈ ಕರ್ನಾಟಕದಲ್ಲಿ ಶೈಕ್ಷಣಿಕ ಸ್ಥಿತ್ಯಂತರಗಳು

(೧೮೧೮-೧೮೩೫)

—ಡಾ॥ ವರದರಾಜ ಉಮರ್ಜಿ

ಪ್ರಾಸ್ತಾವಿಕ :— ಲೇಖನದ ವ್ಯಾಪ್ತಿಯು ಮುಂಬೈ ಕರ್ನಾಟಕಕ್ಕೆ ಸೀಮಿತ-ವಾಗಿದೆ. ಮುಂಬೈ ಕರ್ನಾಟಕವೆಂದರೆ ಈಗಿನ ಉತ್ತರ ಕರ್ನಾಟಕ— ಬೆಳಗಾಂವ, ಧಾರವಾಡ, ವಿಜಾಪುರ, ಕಾರವಾರ ಜಿಲ್ಹೆಗಳು. ಅವುಗಳಿಗೆ ದಕ್ಷಿಣ ಮಹಾರಾಷ್ಟ್ರ ವೆಂತಲೂ ಕರೆಯುತ್ತಿದ್ದರು. ಇದೊಂದು ಅದರ ವೈಶಿಷ್ಟ್ಯ. ಅದರಂತೆ ಕಾಲ ವ್ಯಾಪ್ತಿಯು ೧೭ ವರ್ಷಕ್ಕೆ (೧೮೧೮–೧೮೩೫) ಕ್ಕೆ ಸೀಮಿತ. ಈ ೧೭ ವರ್ಷಗಳು ಪರಿಮಿತ ಕಾಲಾವಧಿಯಾದರೂ ಮಹತ್ವ ಪೂರ್ಣವಾಗಿವೆ. ಅದರಲ್ಲಿಯ ಘಟನೆಗಳು ಲಿಂಗೈಕ್ಯ ಡೆಪ್ಯುಟಿ ಚೆನ್ನಬಸಪ್ಪನವರ ಶೈಕ್ಷಣಿಕ ಚಟುವಟಿಕೆಗಳಿಗೆ ಪೀಠಿಕೆಯಾಗಿವೆ; ಹಿನ್ನೆಲೆ ಯಾಗಿವೆ. ಯಾಕಂದರೆ ನಾಲ್ಕು ಜಿಲ್ಹೆಗಳಲ್ಲಿ ಘಟಿಸಿದ ಶೈಕ್ಷಣಿಕ ಸ್ಥಿತ್ಯಂತರಗಳು ಅವರ ಸಂಸ್ಮರಣ ಗ್ರಂಥದಲ್ಲಿ ಮಹತ್ವದ ಸ್ಥಾನವನ್ನು ಪಡೆಯಲು ಅರ್ಹವಾಗಿವೆ. ಇನ್ನು ಶೈಕ್ಷಣಿಕ ಸ್ಥಿತ್ಯಂತರಗಳು. ೧. ರಾಜಕೀಯ ಸ್ಥಿತ್ಯಂತರ, ೨. ಭೌಗೋಲಿಕ ಸ್ಥಿತ್ಯಂತರ, ೩. ಸಾಮಾಜಿಕ ಸ್ಥಿತ್ಯಂತರಗಳನ್ನು ಅವಲಂಬಿಸಿವೆ ಎಂಬುದನ್ನು ಮರೆಯಕೂಡದು. ಡೆ. ಚೆನ್ನಬಸಪ್ಪನವರು ಮಾಡಿದ ಕಾರ್ಯಗಳ ಮಹತಿಯನ್ನು ಮತ್ತು ಅವರು ಸಂಪಾದಿಸಿದ ಸಾಧನೆಗಳ ಮಹತಿಯನ್ನು ಮನಗಾಣಬೇಕಾದರೆ ಅವರ ಚಟುವಟಿಕೆಗಳಿಗೆ ಹಿನ್ನೆಲೆಯಾಗಿ ಬಂದ, ಬಳುವಳಿಯ ಸಮಗ್ರ ಜ್ಞಾನವಿರಬೇಕಷ್ಟೆ ?

೧) ರಾಜಕೀಯ ಸ್ಥಿತ್ಯಂತರ :— ಪೇಶ್ವೆಯರ ಆಡಳಿತವು ಹೋಗಿ ಬ್ರಿಟಿಷರ ಆಡಳಿತದ ಆಗಮನ ೧೮೧೮ ರಲ್ಲಿ ಎಂಬುದು ಒಂದು ಗಮನಾರ್ಹ ಘಟ್ಟ. ಮುಂಬೈ ಕರ್ನಾಟಕದ ಈ ನಾಲ್ಕು ಜಿಲ್ಹೆಗಳು ಮಹಾರಾಷ್ಟ್ರೀಯ ಪ್ರಭಾವಕ್ಕೆ ಒಳಗಾಗಿ ಬಂದುದು ಶಿವಾಜಿಯ ಕಾಲದಿಂದಲೂ ಅಂದರೆ ೧೭ ನೆಯ ಶತಮಾನ ದಿಂದಲೂ. ಪೇಶ್ವೆಯುರು ಶಾಹೂರಾಯನ ವಿಶೇಷ ಕಾರ್ಯಭಾರಿ. ೧೭೭೪ ರಲ್ಲಿ ಬಾಳಾಜಿ ವಿಶ್ವನಾಥ ಪೇಶ್ವೆ ಅವನ ಕೈಯಲ್ಲಿ ಕಾರ್ಯಭಾರ ಪ್ರಾಪ್ತವಾಯಿತು.

ಡಾ॥ ವರದರಾಜ ಉಮರ್ಜಿಯುವರು ಸಾ. ವಿ. ಇಲಾಖೆಯ ನಿವೃತ್ತ ಅಧಿಕಾರಿಗಳು. ಕರ್ನಾಟಕ ಇತಿಹಾಸ ಮಂಡಳದ ಕ್ರಿಯಾತ್ಮಕ ಸದಸ್ಯರು ಸಂಶೋಧಕರು. ಸಧ್ಯ ಧಾರವಾಡ ದಲ್ಲಿ ರಜತಗಿರಿ ವಿಭಾಗದಲ್ಲಿ ವಾಸಮಾಡುತ್ತಾರೆ.

ಹಿರೇಬಾಜಿರಾಯನು ನಂತರ ಸ್ವತಂತ್ರವಾಗಿ ಆಳಹತ್ತಿದನು. ಸವಣೂರ ನವಾಬನ ಬೆಳವಣಿಗೆಯನ್ನು ಮುರಿದು ದಕ್ಷಿಣ ಮಹಾರಾಷ್ಟ್ರವನ್ನು ಪೂರ್ಣವಾಗಿ ಆಕ್ರಮಿಸಿದನು. ಮುಂದೆ ಅವನ ಮಕ್ಕಳು ಮೊಮ್ಮಕ್ಕಳು, ಹಿರೇಮಾಧವರಾಯ, ನಾರಾಯಣರಾಯ, ಸವಾಯಿ ಮಾಧವರಾಯ, (೧೭೭೩) ಎರಡನೇಯ ಬಾಜೀರಾಯ (೧೮೫೫) ಹೀಗೆ ನಾಲ್ವರು ದಕ್ಷಿಣ ಮಹಾರಾಷ್ಟ್ರವನ್ನು ಪುಣೆಯಲ್ಲಿದ್ದುಕೊಂಡು, ಪುಣೆಯನ್ನು ರಾಜ್ಯಧಾನಿಯನ್ನು ಮಾಡಿಕೊಂಡು ಆಳಿದರು. ೧೮೧೮ ರಲ್ಲಿ ಬಾಜೀರಾಯನ ರಾಜ್ಯವನ್ನು ಇಂಗ್ಲೀಷರು ಕಸಿದುಕೊಂಡರು. ಈ ಮೊದಲು ಬಾಜೀರಾಯನು ಇಂಗ್ಲೀಷರ ಕೂಡ ಸ್ನೇಹ ಒಡಂಬಡಿಕೆಯನ್ನು ಮಾಡಿ ಅವರ ಸೈನ್ಯವನ್ನು ಚಾಕರಿಗೆ ಇಟ್ಟು-ಕೊಂಡು ಧಾರವಾಡ ಸೀಮೆಯನ್ನು ಇಂಗ್ಲೀಷರಿಗೆ ಕೊಟ್ಟನು. ಕಡೆಗೆ ಬಾಜೀರಾಯನು ಇಂಗ್ಲೀಷರನ್ನು ವಿರೋಧಿಸಿ ಪುಣೆಯಲ್ಲಿ ದಂಡು ಕೂಡಿಸಿ, ಖಡಿಕಿ ಹತ್ತಿರ ಅವನಿಗೂ ಇಂಗ್ಲೀಷರಿಗೂ ಯುದ್ಧವಾಗಿ ಅದರಲ್ಲಿ ಬಾಜೀರಾಯನು ಸೋತು ಓಡಿ ಹೋದನು (೧೮೧೭ ರಲ್ಲಿ). ಈ ಪ್ರಕಾರವಾಗಿ ಪೇಶ್ವೆಯವರ ದೊಡ್ಡ ರಾಜ್ಯವು ಇಂಗ್ಲೀಷರ ಕೈಸೇರಿತು (೧೮೧೮ ರಲ್ಲಿ). [ಕಟ್ಟಿ ಗ್ಯಾ. ಪುಟ ೩೬೧]. ಕಿತ್ತೂರ ದೇಸಾಯಿ ಶಿವಲಿಂಗ ರುದ್ರಪ್ಪನವರು ೧೮೨೪ ರಲ್ಲಿ ತೀರಲಾಗಿ ಥ್ಯಾಕರೆ ಎಂಬ ಇಂಗ್ಲೀಷ ಅಧಿಕಾರಿಯು ಬಂದೋಬಸ್ತಿಗಾಗಿ ಕಿತ್ತೂರಿಗೆ ಹೋದನು. ಆದರೆ ದೇಸಾಯಿಯ ಹೆಂಡತಿ ಚೆನ್ನಮ್ಮನು ಅಗಸೆಯ ಬಾಗಿಲು ಇಕ್ಕಿಸಿ ದಂಡು ಕೂಡಿಸಿ ಆಕಸ್ಮಾತ್ತಾಗಿ ಆ ಸಣ್ಣ ದಂಡನ್ನು ಊರ ಹೊರಗೆ ಕಳಿಸಿ ಥ್ಯಾಕರೆ ಮುಂತಾದ ಸಾಹೇಬರನ್ನು ಕೊಲ್ಲಿಸಿದಳು. ಆದ್ದರಿಂದ ಸರ್ಕಾರದವರು ಬೇರೆ ದಂಡು ಕಳಿಸಿ ಕಿತ್ತೂರ ಸಂಸ್ಥಾನವನ್ನು ನಿರ್ನಾಮ ಮಾಡಿ ತಮ್ಮ ರಾಜ್ಯ ಸ್ಥಾಪಿಸಿದರು. (ಕಟ್ಟಿ–ಗ್ಯಾ)

೨) **ಭೌಗೋಲಿಕ ಸ್ಥಿತ್ಯಂತರ :—** ಇಂಗ್ಲೀಷ ಸರಕಾರದ ಕೈಸೇರಿದ್ದು ವಿಜಾಪುರ, ಬೆಳಗಾವಿ, ಧಾರವಾಡ ಮೂರು ಜಿಲ್ಹೆಗಳು ಮುಖ್ಯವಾಗಿ ೧೮೧೮ ರಲ್ಲಿ, ಬಾಜೀರಾಯ ಓಡಿ ಹೋದ ಮೇಲೆ. ಕಾನಡಾ ಜಿಲ್ಹೆ (ಕಾರವಾರ ಜಿಲ್ಹೆ) ಸನ್ ೧೮೯೯ ರಲ್ಲಿ ಟಿಪೂವಿನ ರಾಜ್ಯಭಾಗವಾಗಿ, ಇಂಗ್ಲೀಷ ಸರಕಾರಕ್ಕೆ ಸೇರಿದವು. ಕಾರವಾರದ ಹೊರತಾಗಿ ಉಳಿದ ಮೂರು ಜಿಲ್ಹೆಗಳಲ್ಲಿಯ ಕೆಲವು ಗ್ರಾಮುಗಳು ಸನ್ ೧೮೧೮ ರ ಈಚೆಯಲ್ಲಿ ಖಾಲಸಾತಿಗೆ ಬಂದವು. ಉಳಿದ ಗ್ರಾಮುಗಳು ಹೇಗೆ ಬ್ರಿಟೀಷರ ವಶಕ್ಕೆ ಬಂದವು ಎಂಬುದನ್ನು ವೆಂಕಟ ರಂಗೋ ಕಟ್ಟಿಯವರ ಗೆಜೆಟಿಯರ ಭಾಗ ೮ ಪುಟ ೩೬೫ ರಲ್ಲಿ ವಿವರಿಸಲಾಗಿದೆ; ನೋಡಬೇಕು. ಹೀಗೆ ನಾಲ್ಕು ಜಿಲ್ಹೆಗಳೂ ಧಾರವಾಡ ಬೆಳಗಾಂವ, ವಿಜಾಪುರ, ಧಾರವಾಡ ಅಸ್ತಿತ್ವದಲ್ಲಿ ಬಂದವು.

೩) **ಸಾಮಾಜಿಕ ಸ್ಥಿತ್ಯಂತರಗಳು :—** ಉತ್ತರ ಕರ್ನಾಟಕವೆಂಬ ಈ ಭಾಗವನ್ನು ದಕ್ಷಿಣ ಮಹಾರಾಷ್ಟ್ರವೆಂದು ಕರೆಯುತ್ತಿದ್ದರಷ್ಟೇ? ನಾಡು, ನುಡಿ ಜನತೆಯ ಭಾಷೆಯು ಕನ್ನಡವಾಗಿದ್ದರೂ ಮರಾಠಿಯ ಪ್ರಭಾವ ಎಲ್ಲ ಕಡೆಯಲ್ಲಿಯೂ

ಕಂಡು ಬರುತ್ತಿತ್ತು. ಇದು ಪೇಶ್ವೆಯವರ ಆಳ್ವಿಕೆಯ ಪ್ರಭಾವ ಎಂದು ಬೇರೆ ಹೇಳಬೇಕಾಗಿಲ್ಲ. ಮಳೆ ನಿಂತರೂ ಮಳೆ ಹನಿ ನಿಲ್ಲದೆಂಬಂತೆ ಪೇಶ್ವೆಯ ಆಳ್ವಿಕೆಯು ನಿಂತು ಬ್ರಿಟಿಷರ ಆಳ್ವಿಕೆಯು ಪ್ರಾರಂಭವಾದರೂ ಮರಾಠಿಯ ಪ್ರಭಾವ ನಿಂತಿರಲಿಲ್ಲ. ಎಲ್ಲ ಅಧಿಕಾರಿಗಳು ಮಹಾರಾಷ್ಟ್ರೀಯರು. ಮಕ್ಕಳು ಶಾಲೆಯಲ್ಲಿ ಕಲಿಯುವ ಭಾಷೆ ಮರಾಠಿ, ಕೋರ್ಟು ಕಚೇರಿಗಳ ಭಾಷೆ ಮರಾಠಿ, ವ್ಯಾಪಾರಸ್ಥರು ಲೆಖ್ಖವನ್ನು ಇಡುವ ಭಾಷೆ ಮರಾಠಿ. ಯುರೋಪಿಯನ ಅಧಿಕಾರಿಗಳೊಡನೆ ಮತ್ತು ಅವರ ಕೈಕೆಳಗಿನವರೊಡನೆ ಮಾತನಾಡುವ ಭಾಷೆ ಮರಾಠಿ. ಸರಕಾರಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳಿಸುತ್ತಿದ್ದ ಪಾಲಕರು ಅವರು ಮರಾಠಿ ಶಾಲೆಗೆ ಹೋಗಬೇಕೆಂದು ಅಪೇಕ್ಷಿಸುತ್ತಿದ್ದರು. ಕೆಲವು ಪಂಗಡಗಳು ಕನ್ನಡದ ಕಡೆಗೆ ಹೊರಡ ಹತ್ತಿದ್ದು ಕಂಡು ಬರುವದು. ಆದರೆ ಕನ್ನಡ ಅಭ್ಯಾಸವನ್ನು ನಿರಂತರವಾಗಿ ನಡೆಸಿಕೊಂಡು ಬಂದವರೆಂದರೆ ವೀರಶೈವ ಅಯ್ಯನವರು. ವೆಂಕಟ ರಂಗೋ ಕಟ್ಟಿಯವರು ಹೇಳುವಂತೆ ಲಿಂಗವಂತರು ಮಾತ್ರ ಕನ್ನಡವನ್ನು ಅಭ್ಯಸಿಸುತ್ತಿದ್ದರು. "The study of Kannada was confined to a few lingayat priests". ಕನ್ನಡಿಗರು ಸಹಿಗಾಗಿ ಸಹ ಮರಾಠಿಯನ್ನೇ ಬಳಸುತ್ತಿದ್ದರು. "ಆರೇ ಅರಸು ಮುಸಲ್ಮಾನಿ ಸರಸು ಕನ್ನಡ ಬಿರಸು" ಎಂಬುದು ಮನೆ ಮಾತಾಗಿತ್ತು. (ಶಿಂತ್ರಿ ಬಸಪ್ಪನವರು ಶ. ಸಂ. ಪುಟ ೨೭). ಈ ಸ್ಥಿತಿಯು ೧೮೫೭ ರಲ್ಲಿಯೇ ಇಷ್ಟು ಪ್ರಖರವಾಗಿದ್ದಾಗ ೧೮೧೮–೧೮೩೫ ರ ಅವಧಿಯಲ್ಲಿ ಇನ್ನೆಷ್ಟು ಪ್ರಖರವಾಗಿರಬೇಕೆಂಬುದನ್ನು ಊಹಿಸಿಯೇ ತಿಳಿದುಕೊಳ್ಳಬೇಕು. ಇದೇನು ಆಶ್ಚರ್ಯವಲ್ಲ, ರಾಜರ ಭಾಷೆ ಮತ್ತು ಲಿಪಿಗಳಲ್ಲಿ ಬರೆಯುವದು ಇತ್ತೀಚಿನವರೆಗೂ ನಮ್ಮ ಎಲ್ಲ ವ್ಯವಹಾರಗಳೂ ಇಂಗ್ಲೀಷಿನಲ್ಲಿಯೇ ನಡೆಯುತ್ತಿಲ್ಲವೇ ಅದರಂತೆ ಆಗ ಮರಾಠಿಯಲ್ಲಿಯೂ ಕೂಡ ನಡೆಯುತ್ತಿದ್ದವು. ಬ್ರಿಟಿಷರ ಆಳಿಕೆ ಪ್ರಾರಂಭವಾದಂದಿನಿಂದ ಸಾಮಾಜಿಕ ವಿಚಾರದಲ್ಲಿ ಸ್ವಲ್ಪ ಪರಿವರ್ತನೆಯಾಯಿತು. ಕನ್ನಡದ ಕಡೆಗೆ ಹೊರಳಿತು.

೪) **ಬ್ರಿಟಿಷ ಆಗಮನ ಪೂರ್ವ :—** (೧೮೧೮ ರ ಪೂರ್ವ)ದಲ್ಲಿ ಶಿಕ್ಷಣದ ಸ್ಥಿತಿ : ಕರ್ನಾಟಕದಲ್ಲಿ (ಸಂಬಂಧಿಸಿದ ನಾಲ್ಕು ಜಿಲ್ಹೆಗಳಲ್ಲಿ) ಶತಮಾನದಿಂದಲೂ ಶಿಕ್ಷಣದ ಭವ್ಯ ಪರಂಪರೆ ಇತ್ತು ಎಂದು ಶಾಸನಗಳಿಂದ ಗೊತ್ತಾಗುತ್ತದೆ. ಅವುಗಳ ಬಗ್ಗೆ ಅನೇಕ ಉಲ್ಲೇಖಗಳಿವೆ.

ಶಿಕ್ಷಣ ಸಂಸ್ಥೆಗಳು :— ಬಾಲ್ಯ ಶಿಕ್ಷಣ, ಉಚ್ಚ (ಪ್ರಶಿಕ್ಷಣ) ವಿದ್ಯಾಕೇಂದ್ರಗಳು, ತಪೋವನಗಳು, ಘಟಕಗಳು, ಅಗ್ರಹಾರಗಳು, ಬ್ರಹ್ಮಪುರಿ, ಮಠಗಳು, ದೇವಸ್ಥಾನಗಳು, ಗುರುಗ್ರಹಗಳು, ಪಾಠಶಾಲೆಗಳು ಕರ್ನಾಟಕದಲ್ಲಿ ಇದ್ದವು (ದಿಕ್ಷಿತ–ಪ್ರಾಚೀನ ಕರ್ನಾಟಕದ ಶಿಕ್ಷಣ ಕ್ರಮ ಪು. ೯–೩೫). ಶಾಲೆಗಳನ್ನು ಸ್ಥಾಪಿಸುವ ರೀತಿಯೂ ಕೂಡ ಕುತೂಹಲಕಾರಿಯಾಗಿದೆ. ಉದಾ: ಶಾಲೆಯನ್ನು ಸ್ಥಾಪಿಸಲು ಎಲೆಯ ಪುರ್ಬಳ್ಳಿ

(ಹುಬ್ಬಳ್ಳಿ)ಯ ಮಹಾಜನರು ಧಾರವಾಡದ ಹತ್ತಿರದ ನವಲೂರಿನ ಕುರುಬರ ಸಂಘ-ದವರು ಮುಂದೆ ಬಂದರು. ಈ ಶಾಲೆಯನ್ನು ಹುಬ್ಬಳ್ಳಿಯ ಹತ್ತಿರದ ಉಣಕಲ್ಲಿನ ಒಂದು ದೇವಸ್ಥಾನದಲ್ಲಿ ೨೬ ಅಂಕಣದ ಉದ್ದ ೨೦ ಅಂಕಣದ ಅಗಲವಿರುವ ಕೊಠಡಿಯಲ್ಲಿ ನಡೆಸಲು ಅನುಕೂಲ ಮಾಡಿಕೊಟ್ಟರು. ದೇವಸ್ಥಾನ ಅಥವಾ, ಮಠದ ಒಂದು ಭಾಗದಲ್ಲಿ ಶಾಲೆ ನಡೆಸುವ ಪದ್ಧತಿ ಸರ್ವ ಸಾಮಾನ್ಯವಾಗಿತ್ತು. (ಅದೇ ಪುಸ್ತಕ ಪು ೧೧). ಕರ್ನಾಟಕದಲ್ಲಿ ಧಾರವಾಡ ಜಿಲ್ಹೆಯಲ್ಲಿ ಹುಬ್ಬಳ್ಳಿಯಿಂದ ಹೊರಟರೆ ಹಾವೇರಿಯವರೆಗೂ ಈಗಿನ ಒಂದೊಂದು ರೇಲ್ವೆ ಸ್ಟೇಶನ್ನಿನ ಹಿಂದೆ ಒಂದೊಂದು ಅಗ್ರಹಾರ, ಮತ್ತು ಕುಂದಗೋಳ, ಸಂಶಿ, ಗುಡಿಗೇರಿ, ಸವಣೂರ, ಹತ್ತಿಮತ್ತೂರು ಮುಂತಾದವುಗಳಲ್ಲಿಯೂ ವಿದ್ಯಾಕೇಂದ್ರಗಳು ಇದ್ದವು. ಗಾವಟಿ ಶಾಲೆ, ಮತ್ತು ಗ್ರಾಮ್ಯ ಶಾಲೆಗಳನ್ನು ಗುಡಿ ಗುಂಡಾರಗಳಲ್ಲಿ ಇತ್ತೀಚಿನವರೆಗೆ ನಡೆಸುತ್ತಿದ್ದರೆಂಬುದು ಸರ್ವ ವಿದಿತ. ಶಾಲೆಗಳಿಗೆ ವಿದ್ಯಾಮಂದಿರ ಎಂದು ಕರೆಯುತ್ತಿದ್ದರು. ಶಿಕ್ಷಕರಿಗೆ ಗುರು, ಅಯ್ಯನವರು,ಪಂತೋಜಿ ಎಂದು ಕರೆಯುತ್ತಿದ್ದರು. ಶಾಲೆಯನ್ನು ನಡೆಸುತ್ತಿರುವವರಿಗೆ ಸಾಲಿ ಎಂದು ಅಡ್ಡಹೆಸರು ಬರುತ್ತಿತ್ತು. ಉದಾ: ಸಾಲಿ ರಾಮಚಂದ್ರರಾಯರ ಅಜ್ಜಂದಿರು ಶಿರಸಂಗಿಯಲ್ಲಿ ಶಾಲೆಯನ್ನು ನಡೆಸುತ್ತಿದ್ದುದರಿಂದ ಅವರಿಗೆ ಸಾಲಿ ಎಂದು ಅಡ್ಡ ಹೆಸರು ಬಂದಿತು. ಪಾಠಶಾಲೆಗಳಲ್ಲಿ ಸಂಸ್ಕೃತ ಶಿಕ್ಷಣ ಕೊಡುತ್ತಿದ್ದರು. ಮಠಗಳಲ್ಲಿ ಅಯ್ಯನವರು ಧಾರ್ಮಿಕ ಶಿಕ್ಷಣ ಕೊಡುತ್ತಿದ್ದರು. ಶಿಕ್ಷಣದ ವಿಷಯ ಬುನಾದಿಯಿಂದ ನಡೆದುಬಂದ ಕ್ರಮದಂತೆ ಮೊದಲು ಧೂಳಾಕ್ಷರ, ಬಿಡಿ ಅಕ್ಷರಗಳನ್ನು ಕಲಿಸಿದ ಮೇಲೆ ದೊಡ್ಡ ಅಕ್ಷರಗಳನ್ನು ಕಲಿಸುತ್ತಿದ್ದರು. ಧೂಳಾಕ್ಷರಗಳನ್ನು ಬರೆಯುವ ರೀತಿಗೆ ಮರಾಠಿಯಲ್ಲಿ ಬಾರಾಖಡಿ (ಹನ್ನೆರಡು ಅಕ್ಷರ) ಅನ್ನುತ್ತಾರೆ. ಧೂಳಾಕ್ಷರದ ಜೊತೆಗೆ ಮಗ್ಗಿ ಮತ್ತು ಗಣಿತ ಕಲಿಸುತ್ತಿದ್ದರು. ಮರಾಠಿಯ ಅಂಕಿ ಮಗ್ಗಿಗಳನ್ನು 'ದೀಡೆ' 'ಅಡಚೆ'ಗಳನ್ನು ಪಾಠ ಮಾಡಿಸುತ್ತಿದ್ದರು.

ಗ್ರಾಮ್ಯಶಾಲೆಗಳು : "ಸದರಿ ಶಾಲೆಗಳಲ್ಲಿ (ಗ್ರಾಮ್ಯ ಶಾಲೆಗಳಲ್ಲಿ) ಇತ್ತೀಚಿನವರೆಗೆ ಅದರಂತೆ ಹಿಂದೆಯೂ ಎಲ್ಲ ಕಡೆಯಲ್ಲಿಯೂ ಅದೇ ಕ್ರಮ ನಡೆದು ಬಂದಿರುತ್ತದೆ. ಈ ಶಾಲೆಗಳಲ್ಲಿ ಛಾಪಿ ಪುಸ್ತಕಗಳನ್ನು, ಕೈ ಬರಹದ ಕಾಗದಗಳನ್ನು ಓದುವದು, ಖರಡು ಓದುವದು, ಮೋಡಿ ಮರಾಠಿ ಬರಹಗಳನ್ನು ಓದುವದು— ಈ ಪಾಠ್ಯಕ್ರಮ ಎಲ್ಲ ಶಾಲೆಗಳಲ್ಲಿಯೂ ಪ್ರಚಾರದಲ್ಲಿತ್ತು ".

ಶಿಕ್ಷಕರು : " ಶಿಕ್ಷಕರ, ಉಪಾಧ್ಯಾಯರ ಉಪಜೀವನದ ಸಾಧನದ ಬಗ್ಗೆಯೂ ಉಲ್ಲೇಖಗಳಿವೆ. (ಕಟ್ಟಿ–ಗ್ಯಾ. ಪು. ೧೧) ಗಾವಟಿ ಶಾಲೆಯಲ್ಲಿ ಶಿಕ್ಷಕರಿಗೆ ಸಾರ್ವ-ಜನಿಕರಿಂದ ಸಹಾಯ ದೊರೆಯುತ್ತಿತ್ತು. ಹುಡುಗರು ಎರಡು ಆಣೆಯಿಂದ ನಾಲ್ಕು ಆಣೆಯವರೆಗೆ ಫೀ ಕೊಡುತ್ತಿದ್ದರು. ಅದೇ ಶಿಕ್ಷಕನ ಆದಾಯ; ಅದರ ಹೊರತು ಹಲಗೆ ಪೂಜೆಯ ದಿವಸ (ಚತುರ್ದಶಿ ದಿವಸ) ಒಂದು ದುಡ್ಡು ಮತ್ತು ಸಂತೆಯ

ದಿವಸ ಕೆಲವು ಕಾಳುಗಳು ಮಾಸ್ತರನಿಗೆ ದೊರೆಯುತ್ತಿದ್ದವು. ಅಲ್ಲದೆ ಮಾಸ್ತರನು ವಿದ್ಯಾರ್ಥಿಗಳ ಮನೆಗೆ ವಾರ ಹಚ್ಚಿಕೊಂಡು ಊಟಕ್ಕೆ ಹೋಗುತ್ತಿದ್ದನು. ವಾಡಿಕೆಯಾಗಿ, ಎರಡನೇ ಯಾವ ಹೋರೆ ಇಲ್ಲದಂಥವನು ಈ ಶಾಲೆಯನ್ನು ನಡೆಸುತ್ತಿದ್ದನು. ಆದರೂ ತಿಳುವಳಿಕೆಯ ಮನುಷ್ಯನಿಗೆ ಈ ಶಾಲೆಯಿಂದ ಬಡತನದ ರೀತಿಯಿಂದ ಅವನ ಕುಟುಂಬದ ಯೋಗಕ್ಷೇಮ ಆಗುವಷ್ಟು ಆದಾಯವಾಗುತ್ತಿತ್ತು. ಆದರೆ ಹಳ್ಳಿಗಳಲ್ಲಿ ಸರಕಾರಿ ಶಾಲೆಗಳಾದ ಹಾಗೆ ಗ್ರಾಮ್ಯ ಶಾಲೆಗಳು ದಿನದಿನಕ್ಕೆ ಕಡಿಮೆ ಆಗಹತ್ತಿದವು" (ಕಟ್ಟಿ ಗ್ಯಾ. ಪು. ೪೧೩) ಒಟ್ಟಿನ ಮೇಲೆ ಶಿಕ್ಷಕನು ಸಮಾಜ ಪೋಷಿತನು. ಶಿಕ್ಷಕನಿಗೆ ತರಬೇತಿ ಇಲ್ಲವೆಂದು ತೋರುತ್ತದೆ.

೫) ಶಿಕ್ಷಣದ ಸ್ಥಿತ್ಯಂತರ:— (೧೮೧೮ ರ ನಂತರ) ಬ್ರಿಟಿಷ ಆಗಮನದ ನಂತರ ಕ್ರಮೇಣ ಶಿಕ್ಷಣದ ದಿಸೆಯು ಅಲ್ಪ ಸ್ವಲ್ಪ ಬದಲಾಗತೊಡಗಿತು. ಪೇಶ್ವೆಯವರ ಪ್ರಭುತ್ವದಲ್ಲಿ ಮರಾಠಿ ಒಲವಿನ ಶಿಕ್ಷಣವು ಸಾಗಿ ಬಂದಿತ್ತು. ೧೮೧೮ ರ ವರೆಗೆ ಬ್ರಿಟಿಷರು ರಾಜ್ಯವನ್ನು ವಸಪಡಿಸಿಕೊಂಡ ಮೇಲೆ ಅವರು ಸಾರ್ವಜನಿಕ ಶಿಕ್ಷಣ (Public Instruction) ವನ್ನು ಹಿಡಿದು ಎಲ್ಲ ಸ್ಥಿರೀಕರಿಸುವ ಯೋಜನೆ (Conso-idation Measures) ಗಳನ್ನು ಕೈಗೊಂಡರು. (ಮೈ. ಗ್ಯಾ. ಬಿಜಪೂರ ಜಿಲ್ಹೆ ಪು. ೪೦೦–೪೦೦೬) ಮೊಟ್ಟ ಮೊದಲು ಅವರು ಕಾಯಿದೆ ವ್ಯವಸ್ಥೆ, ಕಂದಾಯ ಮತ್ತು ಸಂಪರ್ಕ ಯೋಜನೆಗಳಲ್ಲಿ ತಮ್ಮ ಸಮಯವನ್ನು ವ್ಯಯಿಸಿದರು. ೧೮೧೮ ರ ನಂತರ ಈ ನಾಡಿನಲ್ಲಿ ಪೇಶ್ವೇಯವರ ಆಳ್ವಿಕೆಯು ಮುಗಿದಿದ್ದರೂ, ಉತ್ತರ ಕರ್ನಾಟಕವನ್ನು ಅನೇಕ ಮರಾಠಿ ಸಂಸ್ಥಾನಿಕರು ಇಲ್ಲಿನ ಪ್ರದೇಶಗಳನ್ನು ಹಂಚಿಕೊಂಡ ರೀತಿ ಆಶ್ಚರ್ಯಕರವಾಗಿದೆ. ಒಂದು ಊರು ಪಟವರ್ಧನರದು ಆದರೆ, ಇನ್ನೊಂದು ಊರು ಘೋರ್ಪಡೆಯವರಿಗೆ. ಹುಬ್ಬಳ್ಳಿ ಗಣೇಶ ಪೇಟೆಯ ಭಾಗ ಸಾಂಗ್ಲಿ ಸಂಸ್ಥಾನಕ್ಕೆ ಸೇರಿದ ಸಂದರ್ಭಗಳೂ ಉಂಟು. ಈ ನಾಡಿನಲ್ಲಿ ಆಡುವ ಭಾಷೆ ಕನ್ನಡವೆಂದು ತಿಳಿಯಲು ಆಗಿನ ಸರಕಾರಕ್ಕೆ ೧೦ ೧೫ ವರ್ಷ ಹಿಡಿಯಿತು. ಡೆಪ್ಯೂಟಿ ಚನ್ನಬಸಪ್ಪನಂತಹ ವ್ಯಕ್ತಿಗಳ ಪ್ರಯತ್ನದಿಂದಾಗಿ ೧೮೭೬ ರಲ್ಲಿ ಅಂದಿನ ವಿದ್ಯಾಧಿಕಾರಿ ರಸೆಲ್ಲರು ತಮ್ಮ ವರದಿಯಲ್ಲಿ ಈ ಮಾತನ್ನು ಬರೆದಿರುವರು (ಅ. ನ. ಹು. ಪು. ೧೮) ಶಿಕ್ಷಣದ ಬಲವನ್ನು ಸೂಚಿಸುವ ಕೆಲವು ಅಂಕಿ ಸಂಖ್ಯೆಗಳು ೧೮೧೮ ರಿಂದ ೧೮೩೦ ರ ಅವಧಿಯು ಸಂಧಿಕಾಲವಾದ್ದರಿಂದ ಶಿಕ್ಷಣದ ಬೆಳವಣಿಗೆಯನ್ನು ಸೂಚಿಸುವ ಹೆಚ್ಚಿನ ನಿರ್ದಿಷ್ಟ ಅಂಕಿ ಸಂಖ್ಯೆಗಳು ಲಭ್ಯವಿಲ್ಲ. ಆದರೂ ಅಲ್ಲಲ್ಲಿ ದಾಖಲೆಗಳಲ್ಲಿ ದೊರೆಯುವ ಕೆಲವು ಅಂಕಿ ಸಂಖ್ಯೆಗಳನ್ನು ಇಲ್ಲಿ ಕೊಡುವದು ಸೂಕ್ತವಾಗಿದೆ.

(೧) ಪರಿಮಿತ ಕ್ಷೇತ್ರ ಮತ್ತು ಪರಿಮಿತ ಅವಧಿಗೆ ಸಂಬಂಧಿಸಿದಂತೆ ಶಾಲೆಗಳ ಸಂಖ್ಯೆ (ಕಟ್ಟಿ ಗ್ಯಾ. ಪು. ೪೦೬).

೧೮೨೬ ರಲ್ಲಿ	ಧಾರವಾಡ-ಹುಬ್ಬಳ್ಳಿಗಳಲ್ಲಿ ಮರಾಠಿ ಶಾಲೆಗಳಿದ್ದವು.
೧೮೩೦ ರಲ್ಲಿ	ಬೆಳಗಾವಿಯಲ್ಲಿ ಒಂದು ಮರಾಠಿ ಸಾಲೆಯಾಯಿತು.
೧೮೩೫ ರಲ್ಲಿ	ಧಾರವಾಡ-ಹುಬ್ಬಳ್ಳಿಗಳಲ್ಲಿ ಒಂದೊಂದು ಕನ್ನಡ ಶಾಲೆಗಳಾದವು.

ಮುಂದಿನ ೩೫ ವರ್ಷಗಳಲ್ಲಿ ರಾಣಿಬೆನ್ನೂರಿನಲ್ಲಿ ಕನ್ನಡ ಶಾಲೆಯಾಯಿತು. (ಕಟ್ಟಿ. ಗ್ಯಾ. ಪು. ೪೦೮) ಕಿತ್ತೂರ ಸಂಸ್ಥಾನ ವಶವಾದನಂತರ ಧಾರವಾಡದ ಪ್ರಸ್ಥವು ಬೆಳೆಯಿತು. ೧೮೨೬ ರ ಸುಮಾರಿಗೆ ಮರಾಠಿ ಶಾಲೆಗಳು ಸ್ಥಾಪಿತಗೊಂಡರೆ ಮುಂದೆ ಕೇವಲ ೯ ವರ್ಷಗಳಲ್ಲಿ ೧೮೩೫ ರಲ್ಲಿ ಎರಡು ಕನ್ನಡ ಶಾಲೆಗಳು ಸ್ಥಾಪಿತಗೊಂಡಿವೆ. (ಅ. ನ. ಹು. ಧಾ. ಪು. ೯) ಮುಂದೆ ೧೮೫೯ ರ ನಂತರ ಧಾರವಾಡದ ಶಾಲೆಗಳಲ್ಲಿ ಮರಾಠಿ ಶಾಲೆಗಳು ಕನ್ನಡ ಶಾಲೆಗಳು ಎಂದು ವಿಭಾಗಿಸಲ್ಪಟ್ಟವು. ಆದರೂ ಮರಾಠಿ ಕಡ್ಡಾಯವಾಗಿ ಕಲಿಸಬೇಕೆಂದು ಆಜ್ಞೆ ಹೊರಟಿದೆ. (ಅದೇ ಪುಸ್ತಿಕೆ ಪು. ೧೯)

(೨) ಗುಡಿ ಗುಂಡಾರಗಳಲ್ಲಿ ಶಾಲೆಗಳು-ವಿಜಾಪುರದಲ್ಲಿ ೧೮೬೪ ರ ವರೆಗೆ ಶಾಲೆಗಳನ್ನು ಗುಡಿಗುಂಡಾರಗಳಲ್ಲಿ ನಡೆಸುತ್ತಿದ್ದರು. (ಕಟ್ಟಿ ಗ್ಯಾ. ಪು. ೪೦೬) ಮೊನ್ನೆ ಮೊನ್ನಿನವರೆಗೂ ಗಾವಟಿ ಶಾಲೆಗಳನ್ನು ಮಠ, ಗುಡಿ, ಮುಂತಾದವುಗಳಲ್ಲಿ ನಡೆಸುತ್ತಿದ್ದರು. ಆದರೂ ಹೊಸ ಶಿಕ್ಷಣ ೧೮೧೮ ರ ನಂತರ ಅಸ್ತಿತ್ವದಲ್ಲಿ ಬಂದನಂತರ ಶಾಲೆಗಳು ಸರಕಾರಿ ಶಾಲೆಗಳು ಸರಕಾರಿ ಕಟ್ಟಡಗಳಲ್ಲಿ ಪ್ರಾರಂಭವಾದವು.

(೩) ಶಿಕ್ಷಕರಿಗೆ ಸರಕಾರಿ ಶಾಲೆಯಲ್ಲಿ ಕೆಲಸ ಮಾಡುವವರಿಗೆ ವೇತನ (ಸಂಬಳ) ದೊರೆಯಹತ್ತಿತು.

(೪) ಪಾಠ್ಯ ಪುಸ್ತಕಗಳು :— ಕನ್ನಡ ಪಾಠ್ಯ ಪುಸ್ತಕಗಳು ರಸೆಲರು ಬರುವ ಮೊದಲು ಇರಲಿಲ್ಲ. ಮೊದಲು ಮೂರು ಪುಸ್ತಕಗಳನ್ನು ಮಾತ್ರ ರಚಿಸಲಾಗಿದ್ದಿತು. ಕೆಲವು ಶಾಲೆಗಳಲ್ಲಿ ಮರಾಠಿಯೊಡನೆ ಕನ್ನಡವನ್ನು ಕಲಿಸುವ ಶಾಲೆಗಳಲ್ಲಿ ಮಂಗಳೂರಿನ ಮಿಶನರಿಗಳು ತಯಾರಿಸಿದ ಕನ್ನಡ ಪುಸ್ತಕಗಳನ್ನು ಉಪಯೋಗಿಸುತ್ತಿದ್ದರು. ಈಗಾಗಲೆ ಮರಾಠಿ ಪಾಠ್ಯವಾಗಿದ್ದ ಪುಸ್ತಕಗಳ ಭಾಷಾಂತರವನ್ನು ಮುಂದುವರೆಸಲು ರಸೆಲ್‌ರು ಆಜ್ಞಾಪಿಸಿದರು. (ಶಿಂಘ್ರಿ ಶ. ಸಂ. ಪು. ೩೦)

(೫) ಬೋರ್ಡ ಆಫ್ ಎಜುಕೇಶನ್ ಪ್ರಾರಂಭ-೧೯ ನೇ ಶತಮಾನದ ಆರಂಭದಲ್ಲಿ ಶಿಕ್ಷಣವು ಬೋರ್ಡ ಆಫ್ ಎಜುಕೇಶನ್ ಎಂಬ ಸಂಸ್ಥೆಯ ಆಧೀನಕ್ಕೆ ಒಳಪಟ್ಟಿತು. ಅದು ೧೮೪೩ ರಲ್ಲಿ ಮುಂಬೈಯಲ್ಲಿ ಪ್ರಾರಂಭವಾಯಿತು. ಅಂದು ಮೊದಲು ಮರಾಠಿ ಶಾಲೆಗಳೇ ಇದ್ದವು. ಕನ್ನಡ ಗಂಡು ಮೆಟ್ಟಿನ ಸ್ಥಳವಾದ ಹುಬ್ಬಳ್ಳಿ ಧಾರವಾಡಗಳಲ್ಲಿ ಮೊಟ್ಟ ಮೊದಲು ಪ್ರಾರಂಭವಾದ ಶಾಲೆಯು ಮರಾಠಿ ಭಾಷೆಯದು. (ಅ. ನ. ಹು. ದಾ. ಪು. ೧೮) ೧೮೪೮ ರಲ್ಲಿ ಧಾರವಾಡದಲ್ಲಿ ಇಂಗ್ಲೀಷ ಶಾಲೆ ಯಾಯಿತು. ಮತ್ತು ೧೮೫೦ ರಲ್ಲಿ ಬೆಳಗಾವಿಯಲ್ಲಿ ಸರದಾರ ಹೈಸ್ಕೂಲ ಶಾಲೆಯಾ ಯಿತು. (ಕಟ್ಟಿ ಗ್ಯಾ. ಪು. ४೦೮) ಮತ್ತು ಇದೇ ಸಂಬಂಧದಲ್ಲಿ ಪುಣೆಯಿಂದ ವಿಜಿಟರ ಅಧಿಕಾರಿಯು ದಕ್ಷಿಣ ಮಹಾರಾಷ್ಟ್ರ ಶಾಲೆಗಳನ್ನು (ಮುಂಬೈ ಕರ್ನಾಟಕದ ಶಾಲೆ ಗಳನ್ನು ತಪಾಸಿಸಲಿಕ್ಕೆ ಬರುತ್ತಿದ್ದನು. ೧೮೫೩ ರ ವರೆಗೆ (ಕಟ್ಟಿ ಗ್ಯಾ. ಅದೇ)

(೬) ಶಿಕ್ಷಕರ ತರಬೇತಿ (ಅ) ಕ್ರಿ. ಶ. ೧೮೪೨ರವರೆಗೆ ಪ್ರಾಥಮಿಕ ಶಿಕ್ಷಕರ ತರಬೇತಿಯ ಬಗ್ಗೆ ವಿಶೇಷ ಲಕ್ಷ ಕೊಟ್ಟದ್ದು ಕಂಡುಬರಲಿಲ್ಲ. ಈ ಭಾಗದ ಶಿಕ್ಷಕರು ಪುಣೆ ಮೊದಲಾದ ದೊಡ್ಡ ಊರುಗಳಿಗೆ ಹೋಗಿ ತರಬೇತಿ ಹೊಂದಿ ಬರುತ್ತಿದ್ದರು ಬಹುಶಃ ಅವರ ತರಬೇತಿ ಮರಾಠಿಯಲ್ಲಿಯೇ ಆಗುತ್ತಿತ್ತು. (ಬ) ಧಾರವಾಡದಲ್ಲಿ ಕನ್ನಡ ಗಂಡು ಮಕ್ಕಳ ತರಬೇತಿ ಪ್ರಾರಂಭವಾದ ಮೇಲೆ ಮರಾಠಿಯೂ ಒಂದು ವಿಷಯವಾಗಿತ್ತೆಂಬುದನ್ನು ನಾವು ಇಲ್ಲಿ ಮರೆಯಕೂಡದು (ಜೇವೂರು-ಶ. ಸಂ. ಪು ೫೭)

(೭) ಶಿಕ್ಷಣದ ಬಗ್ಗೆ ಜನರಲ್ಲಿ ಅನಾಸ್ಥೆ:— ಬಾಲಕರ (ವಿದ್ಯಾರ್ಥಿಗಳ) ಸಂಖ್ಯೆ ಶಾಲೆಗಳಲ್ಲಿ ಸಾಕಷ್ಟು ಇರಲಿಲ್ಲ. ಇದು ಶಿಕ್ಷಣದ ಬಗ್ಗೆ ಆಗಿನ ಜನರ ಅನಾಸ್ಥೆ. ಯನ್ನು ತೋರಿಸುತ್ತದೆ. ಕೆಲವು ವರ್ಗದ ಜನರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸು- ತ್ತಿರಲಿಲ್ಲ. ಇದನ್ನು ಕಟ್ಟಿಯವರ ಗೆಜೆಟಿಯರ್ ಮತ್ತು ಕ್ಯಾಂಬೆಲ್‌ರ ಗೆಜೆಟಿಯರ ೧೮೮४ Vol IV Part I ದಲ್ಲಿ ವಿವರಿಸಲಾಗಿದೆ ನೋಡಿರಿ. ಈ ಸ್ಥಿತಿಯು, ಮುಂದು ವರೆಯಿತು. ಸು. ಕ್ರಿ. ಶ. ೧೮೫೦ರಷ್ಟರವರೆಗೂ ಕೂಡ ಬೋರ್ಡ ಆಫ ಎಜ್ಯುಕೇಶನ ಅಂದಾಜಿನ ಪ್ರಕಾರ ನಾಲ್ಕು ಜಿಲ್ಲೆಗಳಲ್ಲಿಯೂ ಕೂಡಿ ೨೦೮ ಕನ್ನಡ ಮತ್ತು ಮರಾಠಿ ಶಾಲೆಗಳು; ವಿದ್ಯಾರ್ಥಿಗಳ ಸಂಖ್ಯೆ ೧೩೭೮೪ ಇದ್ದಿತ್ತೆಂದು ತಿಳಿದು ಬರುತ್ತದೆ. ಈಗ ಒಂದೊಂದು ತಾಲೂಕಿನಲ್ಲಿಯೂ ಇದಕ್ಕಿಂತ ಹೆಚ್ಚು ಶಾಲೆಗಳ ಮತ್ತು ವಿದ್ಯಾರ್ಥಿಗಳ ಸಂಖ್ಯೆಗಳು ಇರುತ್ತವೆ ಎಂಬುದನ್ನು ಗಮನಿಸಬೇಕು (ಜೇವೂರ ಶ. ಸಂ. ಪು. ೫೭) ಆದರೆ ನಿರ್ದಿಷ್ಟ ಅಂಕಿ ಸಂಖ್ಯೆಗಳ ಬಗ್ಗೆ ನಾವು ಸು. ೧೮೫೫ರವರೆಗೆ ಕಾಯ ಬೇಕಾಗುವದು.

ಉಪಸಂಹಾರ :— ೧೮೧೮ ರಿಂದ ೧೮೩೫ ರ ಅವಧಿಯು ಬ್ರಿಟಿಷ ಪ್ರಭುತ್ವದ ಪ್ರಾರಂಭ ಕಾಲವಾದ್ದರಿಂದ ಆದರಲ್ಲಿಯ ಶಾಲೆಗಳ ಸಂಖ್ಯೆ,ಮಕ್ಕಳ ಸಂಖ್ಯೆ,ಪಾಠ್ಯಕ್ರಮ

ಶಿಕ್ಷಕರ ತರಬೇತಿಗಳ ಬಗ್ಗೆ ಸರಿಯಾದ ಅಂಕಿ ಸಂಖ್ಯೆಗಳು ಸಾಕಷ್ಟು ಲಭ್ಯವಿಲ್ಲ. ಅದು ಶಿಕ್ಷಣದ ಅಜ್ಞಾತಾವಸ್ಥೆ-ಅನಾಸ್ಥಾವಸ್ಥೆ-ಕಾಲ ಎಂದು ಹೇಳಬಹುದು. ಆದರೂ ಪೇಶ್ವೆಯವರ ಕಾಲದ ಹಳೆಯ ಯುಗ (Order) ಹೋಗಿ ಹೊಸ ಯುಗ (Order) ಸ್ಥಾಪಿತವಾಗಿದೆ. ಆದರೆ ಹಳೆಯ ಯುಗ (Order) ಸುಮ್ಮಸುಮ್ಮನೆ ಹೋಗುವದಿಲ್ಲ. ಅದು ತನ್ನ ಅವಶೇಷಗಳನ್ನು ಹಿಂದೆ ಬಿಟ್ಟು ಹೋಗುತ್ತದಲ್ಲವೆ? ಅವುಗಳ ಮೇಲಿಂದ ೧೮೧೮–೧೮೩೫ರ ಅವಧಿಯ ಶಿಕ್ಷಣದ ಸ್ಥಿತ್ಯಂತರವನ್ನು ಗುರುತಿಸಬಹುದು. "Old order changeth yielding place to new". But old order does not simply pass away. It leaves its relics behind it. ಅವುಗಳಲ್ಲಿ ಹೊಸಯುಗದ ಒಲವು ಸುಳಿವುಗಳು ಅಭಿವ್ಯಕ್ತವಾಗುತ್ತವೆ. ೧೮೧೮–೧೮೩೫ ರ ಅವಧಿಯು ಹಳೆ ಯುಗ ಹೊಗಿ ಹೊಸ ಯುಗ ರೂಪಗೊಳ್ಳುವ ಸ್ಥಿತ್ಯಂತರ ಸಂಧಿಕಾಲ.

ರಾಜಕೀಯ ಆಡಳಿತ : ಪೇಶ್ವೆಯವರ ಆಡಳಿತದಿಂದ ಬ್ರಿಟಿಷರ ಆಡಳಿತಕ್ಕೆ ಸ್ಥಿತ್ಯಂತರವಾಗಿದೆ. ತತ್ಪರಿಣಾಮವಾಗಿ ಅನೇಕ ಶಿಕ್ಷಣ ಸ್ಥಿತ್ಯಂತರಗಳು ಸಂಭವಿಸಿವೆ.

ಮೊದಲನೆಯದಾಗಿ ಶಿಕ್ಷಣದ ಧ್ಯೇಯೋದ್ದೇಶಗಳು ರೂಪಗೊಳ್ಳುವ ಸ್ಥಿತ್ಯಂತರದ ಸಂಧಿಕಾಲ. ಧಾರ್ಮಿಕ ಶಿಕ್ಷಣವು ಮಠ, ಗುಡಿಗಳಲ್ಲಿ ನಡೆಯುವ ಶಿಕ್ಷಣವು ವ್ಯವಹಾರಿಕ (ಪ್ರಾಪಂಚಿಕ-Secular) ಶಿಕ್ಷಣವಾಗುವ ಸ್ಥಿತ್ಯಂತರದ ಸಂಧಿಕಾಲ. ಎರಡನೆಯದಾಗಿ, ಪೇಶ್ವೆಯ ಮರಾಠಿ ಪ್ರಭಾವದಿಂದ ಮುಕ್ತವಾಗಿ ಹೊಸ ಬ್ರಿಟಿಷ ವಿಚಾರ ಪ್ರಣಾಲಿಯನ್ನು ಸೂಚಿಸುವ ಸ್ಥಿತ್ಯಂತರ ಸಂಧಿಕಾಲ.

ಮೂರನೆಯದಾಗಿ, ಅಸಂಪ್ರದಾಯಿಕ (ನಿಯಮನಿಷ್ಠವಲ್ಲದ–informal) ಶಾಲೆಗಳು ಹೋಗಿ ಸಾಂಪ್ರದಾಯಿಕ (ಈಗಿನನಿಯಮನಿಷ್ಠ–Formal) ಶಾಲೆಗಳು ಅಸ್ತಿತ್ವದಲ್ಲಿ ಬಂದ ಸ್ಥಿತ್ಯಂತರ ಸಂಧಿಕಾಲ.

ನಾಲ್ಕನೆಯದಾಗಿ, ಸಾರ್ವಜನಿಕ ಕೃಪಾಪೋಷಿತ ಶಿಕ್ಷಣವು ಹೋಗಿ ಸರಕಾರಿ ವೇತನ ಶಿಕ್ಷಣವು ಅಸ್ತಿತ್ವದಲ್ಲಿ ಬಂದ ಸ್ಥಿತ್ಯಂತರದ ಸಂಧಿಕಾಲ.

ಐದನೆಯದಾಗಿ, ಮರಾಠಿ ಪ್ರಭಾವದಿಂದ ಮುಕ್ತವಾಗಿ ಕನ್ನಡ ಶಿಕ್ಷಣದ ಕಡೆಗೆ ಒಲವು ತೋರಿಸುವ ಶಿಕ್ಷಣದ ಸ್ಥಿತ್ಯಂತರದ ಸಂಧಿಕಾಲ. ಅದು ಸಂಧಿಕಾಲವಾದ್ದರಿಂದ ಸ್ಥಿತ್ಯಂತರಗಳನ್ನು ಸೂಚಿಸುವ ದಾಖಲೆಗಳು ಸಾಕಷ್ಟು ಇರುವುದಿಲ್ಲ. ಲಭ್ಯವಿರುವ ಅಂಕಿ ಸಂಖ್ಯೆಗಳನ್ನು ಅವಲಂಬಿಸಿ ಮೇಲಿನ ವಿವೇಚನೆಯನ್ನು ಮಾಡಲಾಗಿದೆ.

ಇನ್ನು ಕೊನೆಯಲ್ಲಿ ಶ್ರೀ ಮ. ಗು. ಹಂದ್ರಾಳರು ಹೇಳಿದ್ದಾರೆ: ರಸೆಲ್ ಮತ್ತು ಚೆನ್ನಬಸಪ್ಪನವರು ಕನ್ನಡ ಭಾಷೆಯ ಅಭ್ಯಾಸವನ್ನು ಸಾಂಪ್ರದಾಯಿಕ ಶಾಲೆಗಳಲ್ಲಿ

ಆರಂಭಿಸಿದರು ಮತ್ತು ಅವರು ಆ ಕಾಲವನ್ನು "**ಕನ್ನಡದ ಅರುಣೋದಯ-ಕಾಲವೆಂದು**" ಕರೆದಿದ್ದಾರೆ. (ಹಂದ್ರಾಳ—ಡೆ. ಚೆನ್ನಬಸಪ್ಪನವರು ಪುಟ ೬೦) ಆದರೆ ನಾವು ಅದಕ್ಕೆ ಮೊದಲಿನ ಸಮಯದ ೧೮೧೮-೧೮೩೫ರ ಅವಧಿಯನ್ನು "ಕನ್ನಡ ಅರುಣೋದಯದ ಪೂರ್ವಕಾಲ"ವೆಂದು ಹೆಸರಿಸಬಹುದು. ಆಗ ಎಲ್ಲೆ-ಲ್ಲಿಯೂ ಕಗ್ಗತ್ತಲೆಯಾಗಿರದಿದ್ದರೂ, ಮಬ್ಬುಕತ್ತಲೆ ಪಸರಿಸಿತ್ತು. ಅಲ್ಲೊಂದು ಇಲ್ಲೊಂದು ನಕ್ಷತ್ರ ಮಾತ್ರ ಮಿನುಗುತ್ತಿದ್ದವು. ಅವುಗಳ ಬೆಳಕಿನಲ್ಲಿ ಮುಂಬಯಿ ಕರ್ನಾಟಕದ ೧೮೧೮-೧೮೩೫ರ ಅವಧಿಯ (ಸಂಧಿಕಾಲದ) ಶೈಕ್ಷಣಿಕ ಸ್ಥಿತ್ಯಂತರಗಳನ್ನು ಸಾಧ್ಯವಾದ ಮಟ್ಟಿಗೆ ಗುರುತಿಸಲಾಗಿದೆ.

ಸಂದರ್ಭ ಗ್ರಂಥಗಳು

೧) ಮುಂಬಯಿ ಕರ್ನಾಟಕ (ನಾಲ್ಕು ಜಿಲ್ಲೆಗಳು) ವೆಂಕಟ ರಂಗೋ ಕಟ್ಟಿ. ಗ್ಯಾಜೆಟಿಯರ ೧೮೯೩—(ಕಟ್ಟಿ ಗ್ಯಾ.)

೨) ಕಾನಡಾ ಜಿಲ್ಲೆಯ ಗ್ಯಾಜೆಟಿಯರ ೧೮೮೩
ಮುಂಬಯಿ ಇಲಾಖೆ (Vol. IV Part I)—ಕ್ಯಾ.ಗ್ಯಾ. ಜೇಮ್ಸ ಕ್ಯಾಂಬೆಲ್.

೩) ಮೈಸೂರ ಸ್ಟೇಟ ಗ್ಯಾಜೆಟಿಯರ್ ೧೯೬೬ ಬಿಜಾಪೂರ ಡಿಸ್ಟ್ರಿಕ್ಟ (ಮೈ. ಗ್ಯಾ.).

೪) ಡೆ. ಚೆನ್ನಬಸಪ್ಪನವರು. ಮ. ಗು. ಹಂದ್ರಾಳ.

೫) ಪ್ರಾಚೀನ ಕರ್ನಾಟಕದ ಶಿಕ್ಷಣ ಕ್ರಮ (ಪ್ರಾ. ಕ. ಶಿ.) ಪ್ರೊ. ಜಿ. ಎಸ್. ದಿಕ್ಷಿತ.

೬) ಸರಕಾರಿ ಗಂಡುಮಕ್ಕಳ ತರಬೇತಿ ಮಹಾವಿದ್ಯಾಲಯದ (ಶ.ಸಂ.) ಶತಮಾನೋತ್ಸವ ಸಂಚಿಕೆ ೧೯೫೬ರಲ್ಲಿಯ ಲೇಖನಗಳು :

i] ಲಿಂಗೈಕ್ಯ ಡೆ. ಚೆನ್ನಬಸಪ್ಪನವರು —ಸಿಂತ್ರಿ ಬಸಪ್ಪನವರು

ii] ಸರಕಾರಿ ಕನ್ನಡ ಗಂಡು ಮಕ್ಕಳ ತರಬೇತಿ ಮಹಾವಿದ್ಯಾಲಯದ ಶತಾಬ್ದಿ ಸಮಾರಂಭ
—ಎಸ್. ವಿ. ಜೇವೂರ

೭) ಅವಳಿ ನಗರಗಳು—ಹುಬ್ಬಳ್ಳಿ-ಧಾರವಾಡ
—ಧಾರವಾಡ ಜಿಲ್ಹೆಯ ಪ್ರಶಿಕ್ಷಕ ಸಂಘ ಧಾರವಾಡ.

◎◎◎

೧೯ನೆಯ ಶತಮಾನದಲ್ಲಿ ಮುಂಬಯಿ-ಕರ್ನಾಟಕದಲ್ಲಿಯ ಪ್ರಾಥಮಿಕ ಶಿಕ್ಷಣದ ಸಮೀಕ್ಷೆ

—ಡಾ. ಸದಾನಂದ ನಾಯಕ

೧. ಪ್ರಸ್ತಾವನೆ :

ಮುಂಬಯಿ–ಕರ್ನಾಟಕದಲ್ಲಿಯ ಕಳೆದ ಶತಮಾನದ ಪ್ರಾಥಮಿಕ ಶಿಕ್ಷಣದ ಒಂದು ಸಮೀಕ್ಷೆಯನ್ನು ಕೈಕೊಳ್ಳುವ ಪೂರ್ವದಲ್ಲಿ ಕೆಲವು ಅಂಶಗಳ ಬಗೆಗೆ ನಿರ್ದಿಷ್ಟ-ವಾದ ತಿಳುವಳಿಕೆಯಿಂದ ಮುಂದುವರೆಯುವುದು ಅವಶ್ಯವೆನಿಸುವುದು. ಅವುಗಳಲ್ಲಿ ಮುಖ್ಯವಾದ ಅಂಶವೆಂದರೆ, 'ಮುಂಬಯಿ–ಕರ್ನಾಟಕ'ವೆಂಬ ಪ್ರದೇಶದ ಬದಲಾಗುತ್ತ ನಡೆದ ಆಯಾಮ. ಆದುದರಿಂದ ಭೌಗೋಲಿಕವಾಗಿ ಹಾಗು ಐತಿಹಾಸಿಕವಾಗಿ ಈ ಹೆಸರಿನ ಪ್ರದೇಶವು ಹೇಗೆ ಹೇಗೆ ರೂಪುಗೊಳ್ಳುತ್ತ ಹೋಗಿ, ಈಗ ಕರ್ನಾಟಕ ರಾಜ್ಯದ **ಬೆಳಗಾಂವ ವಿಭಾಗ**ವಾಗಿರುವದೆಂಬುದನ್ನು ಗಮನಕ್ಕೆ ತಂದು ಕೊಡುವುದು ಮೊಟ್ಟ ಮೊದಲನೆಯ ಅವಶ್ಯಕತೆಯಾಗಿರುವುದು.

ಅದರಂತೆಯೇ, 'ಪ್ರಾಥಮಿಕ ಶಿಕ್ಷಣ'ವೆಂಬ ಪದಪ್ರಯೋಗದಲ್ಲಿಯೂ ವಿಭಿನ್ನ-ವಾದ ತಿಳುವಳಿಕೆಗಳು ಭಿನ್ನ ಭಿನ್ನ ಪ್ರಾಂತಗಳಲ್ಲಿಯಷ್ಟೇ ಅಲ್ಲ, ಬೇರೆ ದೇಶಗಳಲ್ಲಿಯೂ ಅಂಥ ತಿಳುವಳಿಕೆಗಳಿದ್ದುದು ಕಂಡು ಬರುತ್ತದೆ. ಮುಂಬಯಿ–ಕರ್ನಾಟಕದಲ್ಲಿ, ವಿಶೇಷ ವಾಗಿ ಕಳೆದ ಶತಮಾನದಲ್ಲಿಯ ಬ್ರಿಟಿಶ ಸರಕಾರದ ಆಡಳಿತದಲ್ಲಿ, ಮೊದಲು ೧ ವರ್ಷ ಬಿನ್ ಇಯತ್ತೆ (Infant Class), ಆ ಮೇಲೆ ಏಳು ಇಯತ್ತೆಗಳು, ಹೀಗೆ ಎಂಟು ವರ್ಷಗಳ ಅಭ್ಯಾಸಕ್ರಮ, ಎಂಬ ತಿಳುವಳಿಕೆ ಪ್ರಬಲವಾಗಿತ್ತು. ಆದರೆ ಎಷ್ಟೋ ಕಡೆ ಗಳಲ್ಲಿ ಅದರ ವ್ಯಾಪ್ತಿ ಹೆಚ್ಚೆಂದರೆ ನಾಲ್ಕು ವರ್ಷ; ಬ್ರಿಟಿಶರ ಪೂರ್ವದಲ್ಲಿಯಂತೂ ಮೂರು ವರ್ಷಗಳೊಳಗೇ ಓದು–ಬರಹ–ಲೆಕ್ಕ ಇವು ಬರುವಂತಾದರೆ, ಅದೇ ಪ್ರಾಥಮಿಕ ಶಿಕ್ಷಣದ ಪರಿಪೂರ್ತಿ ಎಂದು ತಿಳಿಯಲಾಗುತ್ತಿತ್ತು. ಏಕೋಪಾಧ್ಯಾಯ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಬೆಳೆದಂತೆ, ಒಂದೊಂದೇ ಇಯತ್ತೆಯನ್ನು ಮುಂದುವರಿಸುತ್ತ ಹೋಗಿ ಪೂರ್ಣ ಪ್ರಾಥಮಿಕ ಶಾಲೆಯನ್ನಾಗಿ ಮಾರ್ಪಡಿಸುವುದು ಅಂದಿನ ಪರಿಪಾಠವಾಗಿತ್ತು.

ಡಾ॥ ಸದಾನಂದ ನಾಯಕರು ಜಿಲ್ಲಾ ಶಿಕ್ಷಣಾಧಿಕಾರಿಗಳೆಂದು ಸೇವಾ ನಿವೃತ್ತರಾಗಿದ್ದಾರೆ. ಚಿಂತನ ಶೀಲ, ಸಂಶೋಧನಾತ್ಮಕ ಬರಹಗಳಿಂದ, ಸಾಹಿತ್ಯ ವಿಮರ್ಶೆಗಳಿಂದ ನಾಡಿಗೆ ಪರಿಚಿತ-ರಾಗಿದ್ದಾರೆ. ಸದ್ಯ ಇವರು ಧಾರವಾಡದ ಸಾಧನಕೇರಿಯಲ್ಲಿ ವಾಸಿಸುತ್ತಾರೆ.

ಈ ಚಿಕ್ಕ ಲೇಖನದಲ್ಲಿ ಪೂರ್ವ ಭಾವಿಯಾಗಿ ಮುಂಬಯಿ--ಕರ್ನಾಟಕದ ಭೌಗೋಲಿಕ ವ್ಯಾಪ್ತಿ ಹಾಗು ಐತಿಹಾಸಿಕ ಬೆಳವಣಿಗೆಗಳನ್ನು ಮೊದಲು ಗುರುತಿಸಿ, ಆ ಮೇಲೆ ಕಳೆದ ಶತಮಾನದ ಪ್ರಾಥಮಿಕ ಶಿಕ್ಷಣದ ಪ್ರಗತಿಯ ಕ್ರಮದಲ್ಲಿ ನಾಲ್ಕು ಘಟ್ಟಗಳನ್ನು ಗುರುತಿಸಲಾಗಿದೆ. ಆ ಘಟ್ಟಗಳೆಂದರೆ : (ಅ) ೧೮೨೫ ರ ಪೂರ್ವದ ಪರಿಸ್ಥಿತಿ; (ಆ) ೧೮೨೫ ರಿಂದ ೧೮೫೫ ರ ವರೆಗಿನ ಸಾಧನೆ; (ಇ) ೧೮೫೫ ರಿಂದ ೧೮೮೨ ರ ವರೆಗಿನ ಪ್ರಗತಿ ಮತ್ತು (ಈ) ೧೮೮೨ ರಿಂದ ೧೯೦೦ ರ ವರೆಗಿನ ಮುಂದಿನ ಸ್ಥಿತಿಗತಿ— ಇವುಗಳ ಪರಾಮರ್ಶೆಯನ್ನು ಐತಿಹಾಸಿಕವಾಗಿ, ವಾಸ್ತವಿಕಾಂಶಗಳ ಪ್ರಮಾಣಗಳನ್ನು ಪರಾಂಬರಿಸಿ, ಸಂಕ್ಷಿಪ್ತವಾಗಿ ಇಲ್ಲಿ ಸಾದರಪಡಿಸಲಾಗಿದೆ.

ಉಪಸಂಹಾರದಲ್ಲಿ, ಈ ಸಾಕ್ಷ್ಯಾಧಾರಗಳ ಸಮೀಕ್ಷೆಯಿಂದ ಕಂಡು ಬಂದ ಫಲಿತಾಂಶಗಳ ವಿವೇಚನೆಯನ್ನು ಮಾಡಲಾಗಿದೆ. ವಿಷಯ ಸಂಗ್ರಹಣೆಯ ಮೂಲಗಳು ವಿಪುಲವಾಗಿದ್ದರೂ ಲೇಖನದ ಪುಟ ಸಂಖ್ಯೆಗೆ ಪರಿಮಿತಿ ಇರುವುದರಿಂದ, ಹಾಗು ಬೇರೆ ಲೇಖಕರೂ ಪರ್ಯಾಯದಿಂದ ಅವುಗಳನ್ನು ಪ್ರಸ್ತಾಪಿಸುವುದು ಅನಿವಾರ್ಯವಾಗಿ ಪುನರುಕ್ತಿಯಾಗುವ ಸಂಭವವಿರುವುದರಿಂದ ವಿಶಿಷ್ಟವಾದ ಅಂಶಗಳನ್ನಷ್ಟೇ ಈ ಲೇಖನದಲ್ಲಿ ಎತ್ತಿ ತೋರಿಸಲಾಗಿದೆ.

೨. ಭೌಗೋಲಿಕವಾಗಿ ಇಂದಿನ ಮುಂಬಯಿ–ಕರ್ನಾಟಕದ ವ್ಯಾಪ್ತಿ :

ಇಂದಿನ ಕರ್ನಾಟಕ ರಾಜ್ಯದ ನಾಲ್ಕು ವಿಭಾಗಗಳಲ್ಲಿ ಮುಂಬಯಿ-ಕರ್ನಾಟಕವು ಬೆಳಗಾಂವ ವಿಭಾಗಕ್ಕೆ ಸೇರಿದುದಾಗಿದೆ. ಅದರಲ್ಲಿ ನಾಲ್ಕು ಜಿಲ್ಹೆಗಳು ಸಮಾವೇಶವಾಗಿವೆ :ಬೆಳಗಾಂವಿ,ಧಾರವಾಡ,ವಿಜಾಪುರ ಮತ್ತು ಉತ್ತರ ಕನ್ನಡ.ಮುಖ್ಯ ಪಟ್ಟಣವೇ ಜಿಲ್ಹೆಯ ಹೆಸರಾಗಿರುವ, ಕರ್ನಾಟಕ ರಾಜ್ಯದ ಇತರ ಜಿಲ್ಹೆಗಳಿಗೆ ಇರುವ ಸಾಮಾನ್ಯ ನಿಯಮಕ್ಕೆ, ಉತ್ತರ ಕನ್ನಡ ಜಿಲ್ಹೆಯು ಅಪವಾದವಾಗಿದೆ. ಅದರ ಮುಖ್ಯ ಪಟ್ಟಣವು ಕಾರವಾರ. ಒಂದೇ ಜಿಲ್ಹೆಯಾಗಿದ್ದು ಹಿಂದಿನ ಮದ್ರಾಸ ಇಲಾಖೆಗೆ ಸೇರಿದ್ದ ಕಾನಡಾ (Canara) ಜಿಲ್ಹೆಯು ಆಡಳಿತದ ಅನುಕೂಲಕ್ಕಾಗಿ ದಕ್ಷಿಣ ಕಾನಡಾ ಮತ್ತು ಉತ್ತರ ಕಾನಡಾ ಎಂಬ ಎರಡು ಜಿಲ್ಹೆಗಳಾಗಿ ಮಾರ್ಪಟ್ಟು, ಉತ್ತರ ಕಾನಡಾ ಜಿಲ್ಹೆಯನ್ನು ೧೮೬೨ ರಲ್ಲಿ ಮುಂಬಯಿ ಇಲಾಖೆಗೆ ಸೇರಿಸಲಾಗಿತ್ತು. ರಾಜ್ಯ ವಿಂಗಡಣೆಯ ಕಾನೂನು ಜಾರಿಯಲ್ಲಿ ಬರುವ ವರೆಗೆ (೧೯೫೬), ಈ ಮುಂಬಯಿ...ಕರ್ನಾಟಕ ವಿಭಾಗವು ದಕ್ಷಿಣ ಭಾಗವೆಂಬ ಹೆಸರಿನಿಂದ ಮುಂಬಯಿ ರಾಜ್ಯಕ್ಕೆ ಸೇರಿದುದಾಗಿತ್ತು. ಮತ್ತು ಆ ಭಾಗದ ಶಿಕ್ಷಣಾಧಿಕಾರಿಯ ಮುಖ್ಯ ಸ್ಥಳವು ಧಾರವಾಡ ಪಟ್ಟಣವಾಗಿತ್ತು. ಶೈಕ್ಷಣಿಕವಾಗಿ ಧಾರವಾಡ ವಿಭಾಗವೆಂತಲೂ ಆ ಕಾಲದಲ್ಲಿ ಅದನ್ನು ಕರೆಯಲಾಗುತ್ತಿತ್ತು.

ಮುಂಬಯಿ–ಕರ್ನಾಟಕ (ಈಗಿನ ಬೆಳಗಾಂವ ವಿಭಾಗ)ವೂ ಮೇಲೆ ಹೇಳಿದ ನಾಲ್ಕು ವಿಭಾಗಗಳನ್ನು ಒಳಗೊಂಡಿದ್ದು, ಅದರ ಕ್ಷೇತ್ರಫಲವು ೫೪, ೪೫೫ ಚೌರಸ

ಕಿಲೋ ಮೀಟರುಗಳು. ಇಡಿಯ ಕರ್ನಾಟಕ ರಾಜ್ಯದ ಕ್ಷೇತ್ರಫಲವು ೧,೯೨,೨೦೮ ಚ. ಕಿ. ಮಿ. ಎಂಬುದನ್ನು ಗಮನಿಸಿದರೆ, ಈ ವಿಭಾಗದ ಕ್ಷೇತ್ರಫಲವು ೧/೪ ಕ್ಕಿಂತ ಹೆಚ್ಚಾಗಿಯೇ ಇರುವದೆಂಬುದನ್ನು ಗಮನಿಸಬಹುದು. ಅದೇ ರೀತಿ ಜನಸಖ್ಯೆಯ ಪ್ರಮಾಣವೂ ಹೆಚ್ಚಾಗಿಯೇ ಇರುವುದೆಂಬುದನ್ನು ೧೮೮೧ ರ ಜನಗಣತಿಗೆ ಹೋಲಿಸಿ ನೋಡಬಹುದು.

ಸದ್ಯ ಕರ್ನಾಟಕ ರಾಜ್ಯದಲ್ಲಿ ಒಟ್ಟಿಗೆ ೧೭೪ ತಾಲೂಕುಗಳಿದ್ದು, ಈ ನಾಲ್ಕು ಜಿಲ್ಹೆಗಳಲ್ಲಿ ಕ್ರಮವಾಗಿ : ಬೆಳಗಾಂವಿ ೧೦, ಧಾರವಾಡ ೧೭, ವಿಜಾಪುರ ೧೧, ಮತ್ತು ಕಾರವಾರ ೧೧; ಹೀಗೆ ಒಟ್ಟು ೪೯ ತಾಲೂಕುಗಳು ಇರುವವು. ಇದು ಇಂದಿನ ಮುಂಬಯಿ–ಕರ್ನಾಟಕದ ವಿಸ್ತಾರವು.

೩. ಐತಿಹಾಸಿಕವಾಗಿ ಮುಂಬಯಿ–ಕರ್ನಾಟಕದ ವಿಚಾರ :

೧೭೯೯ರಲ್ಲಿ ಮೈಸೂರು ಸಂಸ್ಥಾನವು ಬ್ರಿಟೀಶರ ಕೈವಶವಾದದ್ದು ಇತಿಹಾಸದ ಮಾತಾಗಿದೆ. ಆಗ ಬ್ರಿಟೀಶ ಅಧಿಕಾರಿಗಳು ಕಾನಡಾ ಜಿಲ್ಹೆಯ ಪ್ರದೇಶವನ್ನು ತಮ್ಮ ವಶಕ್ಕೆ ತೆಗೆದುಕೊಂಡು ಅದನ್ನು ಮದ್ರಾಸ ಆಧಿಪತ್ಯಕ್ಕೆ ಸೇರಿಸಿದ್ದರು. ಅದನ್ನು ಮುಂದೆ ದಕ್ಷಿಣ ಕಾನಡಾ ಮತ್ತು ಉತ್ತರ ಕಾನಡಾ ಎಂದು ಇಬ್ಭಾಗ ಮಾಡಿ ಉತ್ತರದ ಭಾಗವನ್ನು ಮುಂಬಯಿ ಇಲಾಖೆಗೆ ಸೇರಿಸಿದ್ದುದನ್ನು (ಡಿಸೆಂಬರ ೧೮೬೨) ಮೇಲೆ ನಮೂದಿಸಲಾಗಿದೆ.

೧೮೧೮ರಲ್ಲಿ ಬ್ರಿಟೀಷರು ಪೇಶ್ವೆಯರ ರಾಜ್ಯವನ್ನು ಗೆದ್ದುಕೊಂಡರು. ಅದು ಮುಂಬಯಿ ಇಲಾಖೆಯಾಗಿ ಮಾರ್ಪಟ್ಟಿತು. ಅದರಲ್ಲಿ ಮೂರು ಭಾಗಗಳನ್ನು ಏರ್ಪ-ಡಿಸಲಾಯಿತು : ಗುಜರಾಥ, ಕೊಂಕಣ ಮತ್ತು ಡೆಕ್ಕನ್. ಡೆಕ್ಕನ್ ಭಾಗದ ಮುಖ್ಯ ಸ್ಥಳವು ಪುಣೆ ಎಂದು ನಿರ್ಧರಿಸಲಾಯಿತು. ಧಾರವಾಡ ಪ್ರದೇಶವು ಆಗ ಡೆಕ್ಕನ್ (ಪುಣೆ) ಭಾಗದ ಆಧೀನವಾಗಿತ್ತು. ಮೇಜರ ಥ್ಯಾಕರೇ ಎಂಬವರು ಧಾರವಾಡ ಪ್ರದೇಶದ ಕಲೆಕ್ಟರ ಹಾಗು ಪೊಲಿಟಿಕಲ್ ಏಜಂಟರೆಂದು ನೇಮಕಗೊಂಡಿದ್ದರು. ಮೌಂಟ ಸ್ಟುವರ್ಟ ಎಲ್ಫಿನ್‌ಸ್ಟನ್ ಎಂಬವರು ಮುಂಬಯಿ ಇಲಾಖೆಯ ಮೊದಲ-ನೆಯ ಗವ್ಹರ್ನರರಾಗಿದ್ದರು.

೧೮೨೪ರಲ್ಲಿ ಕಿತ್ತೂರ ಸಂಸ್ಥಾನವು ಧಾರವಾಡ ಜಿಲ್ಹೆಯಲ್ಲಿ ಸಮಾವೇಶವಾಯಿತು. ೧೮೨೫ರ ಒಂದು ದಾಖಲೆಯಂತೆ ಧಾರವಾಡ ಪ್ರದೇಶ (ಸುಭೆ)ದಲ್ಲಿ ಮೂರು ಉಪವಿಭಾಗಗಳಿದ್ದವು. ಮುಖ್ಯ ಉಪವಿಭಾಗ (Principal Subdivison) ದಲ್ಲಿ ೧೨ ತಾಲೂಕುಗಳು : ಧಾರವಾಡ, ಮಿಶ್ರಿಕೋಟಿ, ಪರಸಗಡ, ನವಲಗುಂದ, ಬದಾಮಿ, ಡಮ್ಮಲ, ಬಾಗಲಕೋಟೆ, ಬಂಕಾಪುರ, ಹಾನಗಲ್ಲ, ಹೊಸಹುಬ್ಬಳ್ಳಿ, ಪಾದಶಾಪೂರ, ಮತ್ತು

ರೋಣ; ಭೀಮಾನದಿಯ ದಕ್ಷಿಣದ ಉಪವಿಭಾಗದಲ್ಲಿ ೩ ತಾಲೂಕುಗಳು : ಇಂಡಿ, ಮುದ್ದೇಬಿಹಾಳ, ಮತ್ತು ಹುನಗುಂದ; ಹಾಗು ರಾಣೇಬೆನ್ನೂರು ಉಪವಿಭಾಗದಲ್ಲಿ ೩ ತಾಲೂಕುಗಳು : ರಾಣೇಬೆನ್ನೂರ, ಹಾವೇರಿ, ಮತ್ತು ಗದಗ–ಹೀಗೆ ಒಟ್ಟಿಗೆ ೧೮ ತಾಲೂಕುಗಳು ಧಾರವಾಡ ಸುಭೆಯಲ್ಲಿ ಇದ್ದವು. ಆ ಕಾಲದಲ್ಲಿ ಕನ್ನಡದ ಕೆಲವು ಪ್ರದೇಶವು ಸಾತಾರಾ ಜಿಲ್ಹೆಗೂ, ಇನ್ನೂ ಕೆಲವು ಪ್ರದೇಶವು ಸೊಲ್ಲಾಪುರ ಜಿಲ್ಹೆಗೂ ಸೇರಿತ್ತು. ೧೮೩೬ರ ಸುಮಾರಿಗೆ ಧಾರವಾಡ ಮತ್ತು ಬೆಳಗಾಂವಿ ಜಿಲ್ಹೆಗಳು ಪ್ರತ್ಯೇಕವಾಗಿ ರೂಪಗೊಂಡಿದ್ದುವೆಂದು ಕಂಡುಬರುತ್ತದೆ.

ಮುಂಬಯಿ ಇಲಾಖೆಯಲ್ಲಿ ಮೇ ೧೮೫೫ರಲ್ಲಿ ಸರಕಾರದ ಶಿಕ್ಷಣಖಾತೆಯು ಮೊಟ್ಟ ಮೊದಲು ಅಸ್ತಿತ್ವದಲ್ಲಿ ಬಂದಿತು. ಆಗ ಡೆಕ್ಕನ್ ಭಾಗದಲ್ಲಿ ಪುಣೆ, ಸಾತಾರಾ, ಸೊಲ್ಲಾಪುರ, ಅಹಮ್ಮದನಗರ, ಖಾನದೇಶ ಈ ಜಿಲ್ಹೆಗಳ ಜೊತೆಗೆ ಧಾರವಾಡ ಮತ್ತು ಬೆಳಗಾಂವ ಜಿಲ್ಹೆಗಳು ಸಮಾವೇಶಗೊಂಡಿದ್ದುದು ಕಂಡುಬರುತ್ತದೆ. ಮೊದಲಿಗೆ ಸೀವರ್ಡ ಎಂಬುವರು ಡೆಕ್ಕನ್ ಭಾಗಕ್ಕೆ ಡಿವ್ಹಿಜನಲ್ ಇನ್‌ಸ್ಪೆಕ್ಟರರಾಗಿಯೂ, ಎಫ್. ಪಿ. ಬೇಕರ್ ಎಂಬವರು ಧಾರವಾಡ–ಬೆಳಗಾಂವ ಹಾಗು ಸಾತಾರಾ ಸೊಲ್ಲಾಪುರ ಜಿಲ್ಹೆಗಳೊಳಗಿನ ಕನ್ನಡ ಪ್ರದೇಶಕ್ಕೆ ಡೆಪ್ಯೂಟಿ ಇನ್‌ಸ್ಪೆಕ್ಟರರಾಗಿಯೂ ನೇಮಕಗೊಂಡಿದ್ದರು.

ಜುಲೈ ೧೮೬೯ರಲ್ಲಿ ಡೆಕ್ಕನ್ ಭಾಗದಿಂದ ಧಾರವಾಡ ಮತ್ತು ಬೆಳಗಾಂವ ಜಿಲ್ಹೆಗಳನ್ನು ಬೇರ್ಪಡಿಸಿ, ದಕ್ಷಿಣ ಭಾಗವೆಂಬ ಹೊಸವಿಭಾಗವನ್ನು ರೂಪಿಸಲಾಯಿತು. ಮತ್ತು ಆ ಭಾಗದ ಶಿಕ್ಷಣಾಧಿಕಾರಿಯ ಆಧೀನಕ್ಕೆ ಸಾತಾರ–ಸೊಲ್ಲಾಪುರ ಜಿಲ್ಹೆಗಳೊಳಗಿನ ಕನ್ನಡ ಪ್ರದೇಶವನ್ನು ಸೇರಿಸಲಾಯಿತು. ೧೮೬೨ರಲ್ಲಿ ಉತ್ತರ ಕನ್ನಡವು ಮುಂಬಯಿ ಇಲಾಖೆಗೆ ಬಂದಮೇಲೆ, ಅದನ್ನು ಈ ಭಾಗದಲ್ಲಿ ಜೋಡಿಸಲಾಯಿತು. ತರುವಾಯ ಆಡಳಿತದ ಅನುಕೂಲತೆಗಾಗಿ, ೧೮೬೪ರಲ್ಲಿ ಸಾತಾರಾ–ಸೊಲ್ಲಾಪುರ ಜಿಲ್ಲೆಗಳೊಳಗಿನ ಕನ್ನಡ ಪ್ರದೇಶಗಳ ಜೊತೆಗೆ ಆಗಿನ ಬೆಳಗಾಂವಿ ಜಿಲ್ಹೆಯೊಳಗಿನ ಹುನಗುಂದ, ಬಾದಾಮಿ ಮತ್ತು ಬಾಗಲಕೋಟೆ ತಾಲೂಕುಗಳನ್ನು ಸೇರಿಸಿ ಕಲಾದಗಿ ಜಿಲ್ಹೆ ಎಂಬ ಹೊಸ ಜಿಲ್ಹೆಯನ್ನು ನಿರ್ಮಿಸಲಾಯಿತು. ೧೮೮೪–೮೫ರಲ್ಲಿ ಈ ಜಿಲ್ಹೆಯ ಮುಖ್ಯಸ್ಥಳವನ್ನು ಕಲಾದಗಿಯಿಂದ ವಿಜಾಪುರಕ್ಕೆ ವರ್ಗಾಯಿಸಿ, ಆ ಜಿಲ್ಹೆಗೆ ವಿಜಾಪುರ ಜಿಲ್ಹೆ ಎಂದು ಹೊಸ ನಾಮಕರಣ ಮಾಡಿದರು. ಹೀಗೆ ದಕ್ಷಿಣ ಭಾಗವು : ಧಾರವಾಡ, ಬೆಳಗಾಂವಿ, ಕಾರವಾರ ಮತ್ತು ವಿಜಾಪುರ ಜಿಲ್ಹೆಗಳಿಂದ ಕೂಡಿದ ಪ್ರದೇಶವೆಂದು, ಒಂದು ನಿರ್ದಿಷ್ಟ ಸ್ವರೂಪವು ಅಂದಿನಿಂದ ಅದಕ್ಕೆ ಪ್ರಾಪ್ತವಾಯಿತು.

ಆದಾಗ್ಯೂ ಮುಂಬಯಿ–ಕರ್ನಾಟಕದ ಈಗಿದ್ದ ಸಮಗ್ರ ಪ್ರದೇಶವು ಆ ಭಾಗದಲ್ಲಿ ಆಗ ಸಮಾವೇಶಗೊಂಡಿರಲಿಲ್ಲ. ಪೇಶ್ವೆಯವರ ರಾಜ್ಯವನ್ನು ಬ್ರಿಟೀಶರು ಕೈವಶ ಮಾಡಿಕೊಂಡಾಗ, ಪುಣೆಯ ದಕ್ಷಿಣ ಪ್ರದೇಶದಲ್ಲಿರುವ ಎಷ್ಟೋ ಸರದಾರರು ಹಾಗು ಜಹಾಗಿರದಾರರು ಬ್ರಿಟೀಶ ಸರಕಾರದೊಂದಿಗೆ ಒಪ್ಪಂದ ಮಾಡಿಕೊಂಡು ತಮ್ಮ

ಆಡಳಿತವನ್ನು ಮುಂದುವರಿಸಿದ್ದರು. ಅಂಥ ಎಷ್ಟೋ ಸಣ್ಣ ದೊಡ್ಡ ಸಂಸ್ಥಾನಗಳು ಆ ಪ್ರದೇಶದಲ್ಲಿ ಇದ್ದವು. ಅವುಗಳಿಗೆ ದಕ್ಷಿಣದ ಮರಾಠಾ ಸಂಸ್ಥಾನಗಳು (Southern Maratha States) ಎಂದು ಬ್ರಿಟೀಷರು ಕರೆಯುತ್ತಿದ್ದರು. ಮದ್ರಾಸದಿಂದ ಪುಣೆಯವರೆಗೆ ರಚಿಸಲಾದ ರೇಲ್ವೆಗೂ Madras and Southern Maratha Railway ಎಂದು ಅವರು ಹೆಸರಿಟ್ಟಿದ್ದರು.

ಕರ್ನಾಟಕ ಏಕೀಕರಣ ಚಳುವಳಿಯು ಆರಂಭವಾದ ಮೇಲೆ, ಕನ್ನಡ ಪ್ರದೇಶವು ಇಪ್ಪತ್ತು ಬೇರೆ ಬೇರೆ ಆಡಳಿತಗಳಲ್ಲಿ ಹಂಚಿ ಹೋಗಿರುವುದೆಂಬ ಅಂಶವು ಬೆಳಕಿಗೆ ಬಂದಿತು. ಅವುಗಳಲ್ಲಿ ಬೇರೆ ಬೇರೆ ಸುಮಾರು ಹದಿನಾಲ್ಕು ಭಿನ್ನವಾದ ಆಡಳಿತಗಳು ಮುಂಬಯಿ ಕರ್ನಾಟಕ ಪ್ರದೇಶದಲ್ಲಿಯೇ ಒಳಗೊಂಡಿದ್ದಿತೆಂಬುದು ಉಲ್ಲೇಖನೀಯ ವಾಗಿರುವುದು. ಅವುಗಳೆಂದರೆ, ಬ್ರಿಟಿಶರ ಆಡಳಿತಕ್ಕೊಳಪಟ್ಟ ಆ ನಾಲ್ಕು ಜಿಲ್ಲೆಗಳ ಅಕ್ಕ ಪಕ್ಕದಲ್ಲಿಯೇ ನೆಲಿಸಿದ ಈ ಕೆಳಗಿನ ಹದಿಮೂರು ಆಡಳಿತದ ಸಂಸ್ಥಾನ ಪ್ರದೇಶ ಗಳಾಗಿದ್ದುವೆಂಬುದನ್ನು ನೆನಪಿನಲ್ಲಿಡಬೇಕು. ಪ್ರತಿಯೊಂದು ಜಿಲ್ಹೆಯೊಳಗಿನ ದೇಶೀಯ ಸಂಸ್ಥಾನಗಳ ಪ್ರದೇಶಗಳು ಈ ಕೆಳಗಿನಂತೆ ಇದ್ದುವು:

೧) ಧಾರವಾಡ ಜಿಲ್ಹೆ:— ಸವಣೂರು ಸಂಸ್ಥಾನ, ಸಾಂಗಲಿ ಸಂಸ್ಥಾನದ ಶಿರಹಟ್ಟಿ, ಮಿರಜ ಸಂಸ್ಥಾನದ ಲಕ್ಷ್ಮೇಶ್ವರ, ಜಮಖಂಡಿ ಸಂಸ್ಥಾನದ ಕುಂದಗೋಳು, ಮತ್ತು ಬುಧಗಾಂವ ಸಂಸ್ಥಾನದ ಗುಡಗೇರಿ–ಶಿಗ್ಗಲಿ.

೨) ಬೆಳಗಾಂವ ಜಿಲ್ಹೆ:— ರಾಮದುರ್ಗ ಸಂಸ್ಥಾನ, ಕುರಂದವಾಡ ಸಂಸ್ಥಾನದ ವಡ-ಗಾಂವ, ಸಾಂಗಲಿ ಸಂಸ್ಥಾನದ ಶಹಾಪುರ–ದೊಡ್ಡವಾಡ, ಮತ್ತು ಕೊಲ್ಹಾಪುರ ಸಂಸ್ಥಾನದ ರಾಯಬಾಗ, ತೊರಗಲ್ಲು, ಕಟಕೋಳ.

೩) ವಿಜಾಪುರ ಜಿಲ್ಹೆ:— ಮುಧೋಳ, ಜಮಖಂಡಿ ಸಂಸ್ಥಾನಗಳು, ಔಂಧ ಸಂಸ್ಥಾನದ ಗುಣದಾಳ, ಮತ್ತು ಸಾಂಗಲಿ ಸಂಸ್ಥಾನದ ತೇರದಾಳ.

ಈ ಎಲ್ಲ ಸಂಸ್ಥಾನಿ ಪ್ರದೇಶಗಳ ಜನಸಂಖ್ಯೆ ೧೮೮೨ರ ವರದಿಯಲ್ಲಿ ನಮೂದಿ ಸಿದಂತೆ ೫,೦೭,೯೭೫ ಇತ್ತು ಭಾರತಕ್ಕೆ ಸ್ವಾತಂತ್ರ್ಯವು ಪ್ರಾಪ್ತವಾದ ಕೂಡಲೆ, ಮೇಲೆ ಕಾಣಿಸಿದ ಎಲ್ಲ ಸಂಸ್ಥಾನಗಳೂ ವಿಲೀನವಾದವು. ಅಂದರೆ, ಈ ಎಲ್ಲ ೧೪ ವಿಭಿನ್ನ ಆಡಳಿತದ ಕ್ಷೇತ್ರಗಳು ಒಂದುಗೂಡಿ, ಮುಂಬಯಿ ಕರ್ನಾಟಕ ಪ್ರದೇಶವು ಸಮಗ್ರರೂಪವನ್ನು ತಾಳಿತು. ಹಾಗು ಭಾಷಾವಾರ ರಾಜ್ಯರಚನೆಯ ಕಾಲಕ್ಕೆ (೧೯೫೬) ಏಕೀಕೃತ ಕರ್ನಾಟಕ ರಾಜ್ಯವಾಗಲು ಅದು ಸಿದ್ಧವಾಯಿತು.

೪. ಹತ್ತೊಂಬತ್ತನೆಯ ಶತಮಾನದ ಸಾ. ಶಿ ದ ಬೆಳವಣಿಗೆಯಲ್ಲಿ ನಾಲ್ಕು ಘಟ್ಟಗಳು :

(ಅ) ೮೨೫ರ ಪೂರ್ವದ ಶಿಕ್ಷಣದ ಪರಿಸ್ಥಿತಿ :

ಬ್ರಿಟಿಶ ಸರಕಾರವು ತಮ್ಮ ಆಡಳಿತದ ಅನುಕೂಲತೆಗಾಗಿ ಮೊಟ್ಟಮೊದಲು ಮೂರು ಆಧಿಪತ್ಯಗಳನ್ನು ರೂಪಿಸಿಕೊಂಡರು. ಅವುಗಳೆಂದರೆ: ಬಂಗಾಲ, ಮದ್ರಾಸ

ಮತ್ತು ಮುಂಬಯಿ. ಮುಂಬಯಿ ನಡುಗಡ್ಡೆಯನ್ನು ಇಂಗ್ಲಂಡದ ರಾಜನಿಂದ ಈಸ್ಟ ಇಂಡಿಯಾ ಕಂಪನಿಯವರು ಮೊದಲೇ ಪಡೆದುಕೊಂಡಿದ್ದರು. ವ್ಯಾಪಾರಕ್ಕಾಗಿ ಹಾಗು ಇನ್ನಿತರ ಕಾರಣಗಳಿಗಾಗಿ ಬಂದ ಇಂಗ್ಲೀಷರ ವಸತಿ ಅಲ್ಲಿ ಬೆಳೆಯತೊಡಗಿತು. ತಮ್ಮ ದೇಶದಲ್ಲಿರುವಂತೆ ಅವರ ಮಕ್ಕಳ ವಿದ್ಯಾಭ್ಯಾಸದ ಕ್ರಮವನ್ನು ಕೈಕೊಳ್ಳುವುದು ಅನಿವಾರ್ಯವಾಯಿತು. ೧೮೧೫ರಲ್ಲಿ ಅದಕ್ಕಾಗಿ ಅವರು Bombay Education Society ಎಂಬ ಸಂಸ್ಥೆಯನ್ನು ಸ್ಥಾಪಿಸಿಕೊಂಡಿದ್ದರು. ಶಾಲೆಗಳನ್ನು ನಡಿಸಹತ್ತಿದರು. ಮುಂಬಯಿಯ ಇತರ ನಾಗರಿಕರೂ ಉತ್ಸುಕತೆಯಿಂದ ತಮ್ಮ ಮಕ್ಕಳನ್ನು ಅಲ್ಲಿಗೆ ಕಳಿಸತೊಡಗಿದರು. ೧೮೨೦ರ ಸುಮಾರಿಗೆ ಇಂಥ ಮಕ್ಕಳ ಸಂಖ್ಯೆ ೨೫೦ಕ್ಕೆ ಏರಿತು. ಆಗ ಇಲಾಖೆಯೊಳಗಿನ ದೊಡ್ಡ ಪಟ್ಟಣಗಳಿಗೆ ಈ ಸೊಸಾಯಿಟಿಯ ಕಾರ್ಯಕ್ಷೇತ್ರ-ವನ್ನು ವಿಸ್ತರಿಸಲಾಯಿತು. ಇಂಥ ಮಕ್ಕಳಿಗಾಗಿ ಪಠ್ಯ ಪುಸ್ತಕಗಳನ್ನು ಸಿದ್ಧಪಡಿಸುವುದೂ ಅವಶ್ಯಕವೆನಿಸಿತು. ಆಗ ಗವ್ಹರ್ನರರಾಗಿದ್ದ ಎಲ್‌ಫಿನ್‌ಸ್ಟನ್ನರ ಅಧ್ಯಕ್ಷತೆಯಲ್ಲಿ The Native School Book and School Committee ಎಂಬ ಕಮೀಟಿಯನ್ನು ಮೇಲಿನ ಸೊಸಾಯಿಟಿಯು ರೂಪಿಸಿತು. ೧೮೨೨ರಲ್ಲಿ ಇವೆರಡರ ಕಾರ್ಯವೂ ಸುಸಂಗತವಾಗಿ ಸಾಗಲು, The Bombay Native School Book and School Socity ಎಂಬ ಹೆಸರಿನಿಂದ ಅವುಗಳನ್ನು ರೂಪಾಂತರಿಸಿ, ಅದರ ಕಾರ್ಯಕ್ಷೇತ್ರವನ್ನು ಇಡಿಯ ಇಲಾಖೆಗೆ ವಿಸ್ತರಿಸಲಾಯಿತು.

ಈ ಸೊಸಾಯಿಟಿಯು ತನ್ನ ಮೊದಲನೆಯ ವಾರ್ಷಿಕ ವರದಿಯನ್ನು ೧೮೨೩ರಲ್ಲಿ ಸಲ್ಲಿಸಿತು. ಅದನ್ನು ಈಸ್ಟ ಇಂಡಿಯಾ ಕಂಪನಿಯ ಬೋರ್ಡ ಆಫ್ ಡಾಯರೆಕ್ಟರರಿಗೆ ರವಾನಿಸುವಾಗ ಎಲ್‌ಫಿನ್‌ಸ್ಟನ್ನರು ತಮ್ಮ ಇಲಾಖೆಯಲ್ಲಿ ಶಿಕ್ಷಣ ಪ್ರಚಾರಕ್ಕಾಗಿ ಕೈಕೊಳ್ಳಬೇಕಾದ ಕ್ರಮಗಳನ್ನು ಕುರಿತು ಸುದೀರ್ಘವಾದ (೮೩ ಪ್ಯಾರಾಗ್ರಾಫುಗಳ) ತಮ್ಮ ಅಭಿಮತವನ್ನು (Minutes) ಬರೆದು ಕಳುಹಿಸಿದರು. ಅದು ಬಹು ಅಮೌಲ್ಯವಾದ ವಿಚಾರಗಳಿಂದ ಕೂಡಿದುದಾಗಿತ್ತು. ಆದರೆ ಬೋರ್ಡ ಆಫ್ ಡಾಯರೆಕ್ಟರರಿಗೆ ಅದು ಒಪ್ಪಿಗೆಯಾಗಲಿಲ್ಲ.

ಮುಂಬಯಿ ಇಲಾಖೆಯೊಳಗಿದ್ದ ದೇಶೀಯ ಶಾಲೆಗಳ ಮತ್ತು ಅವುಗಳನ್ನು ನಡಿಸುತ್ತಿದ್ದ ಶಿಕ್ಷಕರ ಗಣತಿಯನ್ನು ಮಾಡಿ ವರದಿಯನ್ನು ಸಲ್ಲಿಸಬೇಕೆಂದು ಮುಂಬೈ ಸರಕಾರದ ಆದೇಶವು ೧೮೨೪ ರಲ್ಲಿ ಎಲ್ಲ ಕಲೆಕ್ಟರರಿಗೆ ಹೋಯಿತು. ಆ ಆದೇಶದ ಮೇರೆಗೆ ಬೇರೆ ಬೇರೆ ಜಿಲ್ಹೆಗಳ ಕಲೆಕ್ಟರರು ಸಂಗ್ರಹಿಸಿದ ಮಾಹಿತಿಯ ಮುಖ್ಯಾಂಶಗಳನ್ನು ಕ್ರೋಢೀಕರಿಸಿ, ಪುಣೆಯ ಪೋಲಿಟಿಕಲ್ ಏಜಂಟರಾದ ವಿಲಿಯಮ್ ಚಾಪ್ಲಿನ್ ಎಂಬವರು ದಿನಾಂಕ ೨೦-೧೧-೧೮೨೫ ರಂದು ಸರಕಾರಕ್ಕೆ ತಮ್ಮ ವರದಿಯನ್ನು ಸಲ್ಲಿಸಿದರು. ಅದರೊಳಗೆ ಧಾರವಾಡ ಸಭೆಗೆ ಸಂಬಂಧಪಟ್ಟ ಅಂಶಗಳು ಈ ಕೆಳಗಿನಂತೆ ಇರುತ್ತವೆ :

ಪೆರಾ ೨೫: ಧಾರವಾಡ ಸುಭೆಯ ಮುಖ್ಯ ವಿಭಾಗದಲ್ಲಿ ೧೨ ತಾಲೂಕು (ಕಿತ್ತೂರು ಪ್ರದೇಶವನ್ನು ಬಿಟ್ಟು)ಗಳಲ್ಲಿ ೧೪೪೧ ಗ್ರಾಮಗಳು. ಅವುಗಳಲ್ಲಿ ೧೫೦ ಶಾಲೆಗಳು ಇರುವವು; ೭೯ ಮರಾಠಾ (೧೩೧೩ ಬಾಲಕರು), ೫೯ ಕನ್ನಡ (೯೮೦ ಬಾಲಕರು), ೭ ಎರಡೂ ಭಾಷೆಯವು ಮತ್ತು ೫ ಪರ್ಷಿಯನ್ (೫೫ ಬಾಲಕರು). ಒಟ್ಟು ಶಿಕ್ಷಕರಲ್ಲಿ ಹೆಚ್ಚಾಗಿ ಬ್ರಾಹ್ಮಣರು (೯೪) ಮತ್ತು ಲಿಂಗಾಯತರು (೬೭) ಇರುವರು. ಒಟ್ಟು ೨೩೪೮ ವಿದ್ಯಾರ್ಥಿಗಳಲ್ಲಿ: ೧೧೬೪ ಲಿಂಗಾಯತರು, ೬೪೯ ಬ್ರಾಹ್ಮಣರು, ೬೪ ಪಂಚಾಳರು, ೯೯ ಮುಸಲ್ಮಾನರು, ೬೧ ಸೇಕಾರರು, ೪೮ ಜೈನರು, ೬೫ ಮರಾಠಾ ಮತ್ತು ಇನ್ನಿತರರು ಇರುವರು. ಈ ಪ್ರದೇಶದ ಮಕ್ಕಳಲ್ಲಿ ಕಲಿತವರ ಹಾಗು ಕಲಿಯದಿದ್ದವರ ಪ್ರಮಾಣ ೧ : ೧೫೪ ಇರುವುದು.

ಪೆರಾ ೨೬: ಭೀಮಾ ನದಿಯ ದಕ್ಷಿಣದ ತಾಲೂಕುಗಳ ವಿಭಾಗದಲ್ಲಿ ೮೪೯ ಶಾಲೆಗಳು (೧೦೪೯ ಬಾಲಕರು); ಮತ್ತು ರಾಣೇಬಿನ್ನೂರು ವಿಭಾಗದಲ್ಲಿ ೩೪ ಶಾಲೆಗಳು (೫೪೧ ಬಾಲಕರು) ಇರುವರು.

ಪೆರಾ ೨೭: ವೇದ ಮತ್ತು ಶಾಸ್ತ್ರಗಳಲ್ಲಿ ಬ್ರಾಹ್ಮಣರು ತಾವೇ ಶಿಕ್ಷಣ ಕೊಡುವರು. ಅದು ಉಚಿತವಾಗಿರುವುದು.

ಪೆರಾ ೨೮: ಮೇಲೆ ಹೇಳಿದ ವಿದ್ಯಾರ್ಥಿಗಳ ಒಟ್ಟು ಸಂಖ್ಯೆಯಲ್ಲಿ ೧೪೯೦ ಮಕ್ಕಳು ಧೂಳಾಕ್ಷರಗಳನ್ನು ಬರೆಯುವುದು, ಓದುವುದು ಇಷ್ಟನ್ನೇ ಮಾಡುವರು. ಮುಖ್ಯ ವಿಭಾಗದಲ್ಲಿ ೫೦, ಭೀಮಾದ ದಕ್ಷಿಣ ವಿಭಾಗವಲ್ಲಿ ೧, ಹಾಗು ರಾಣೇಬಿನ್ನೂರ ವಿಭಾಗದಲ್ಲಿ ೮ ವಿದ್ಯಾರ್ಥಿಗಳು ಮಾತ್ರ ಜೈಮಿನಿ, ಅಮರಕೋಶ, ವಿದುರನೀತಿ ಮತ್ತು ಸೋಮೇಶ್ವರ ಶತಕ ಇವುಗಳನ್ನು ಓದುವರು. ಉಳಿದವರು ಕಲಿಯುತ್ತಿದ್ದುದು ಪ್ರಾರಂಭದ ಓದು-ಬರಹ-ಲೆಕ್ಕ ಮಾತ್ರ.

ದೇಶೀಯ ಶಿಕ್ಷಣದ (indigenous education) ಈ ಪರಿಸ್ಥಿತಿ ಇತರ ಜಿಲ್ಹೆಗಳಲ್ಲಿಯೂ ಭಿನ್ನವಾಗಿರಲಿಲ್ಲ. ಇಷ್ಟೇ ಅಲ್ಲ, ಮನ್ರೋ ಮತ್ತು ಎಡೆಮ್ ಇವರಿಬ್ಬರೂ ಮದ್ರಾಸ ಮತ್ತು ಬಂಗಾಲಿ ಇಲಾಖೆಗಳಲ್ಲಿ ನಡಿಸಿದ ಗಣತಿಯಲ್ಲಿಯೂ ದೇಶೀ ಶಿಕ್ಷಣದ ಪರಿಸ್ಥಿತಿ ಇದೇ ಪ್ರಕಾರವಾಗಿದ್ದಿತೆಂಬುದು ಕಂಡು ಬಂದಿತ್ತು.

ಮುಂಬಯಿ ಇಲಾಖೆಯಲ್ಲಿ ನಡಿಸಿದ ಶಾಲಾಗಣತಿಯ ಪರಿಣಾಮವಾಗಿ ದೇಶೀಯ ಶಾಲೆಗಳಿಗೆ ಪ್ರೋತ್ಸಾಹನವಿತ್ತು ಅವುಗಳನ್ನು ಬಲಪಡಿಸಬೇಕೆಂಬ ಗವ್ಹರ್ನರರ ಶಿಫಾರಸು ಕಂಪನಿಯ ಡಾಯರೆಕ್ಟರರಿಗೆ ಮಾನ್ಯವಿರಲಿಲ್ಲ. ಅದರ ಬದಲಾಗಿ ಶಿಕ್ಷಣ ಕ್ರಮವನ್ನು ವ್ಯವಸ್ಥಿತಗೊಳಿಸಿ, ತರಬೇತಿ ಪಡೆದ ಅಥವಾ ಚನ್ನಾಗಿ ಕಲಿತ ಶಿಕ್ಷಕರನ್ನೇ ನೇಮಿಸಿ, ಸರಕಾರವೇ ಶಿಕ್ಷಣದ ಸೂತ್ರಗಳನ್ನು ಕೈಯಲ್ಲಿ ತೆಗೆದುಕೊಳ್ಳಬೇಕೆಂಬ ಧೋರಣೆಯು ಪ್ರಬಲವಾಯಿತು. ಈ ವಿಚಾರವಿನಿಯಮಕ್ಕೆ ಒಂದು ನಿರ್ಣಾಯಕ ಸ್ವರೂಪವು ಬರಲು ಐದಾರು ವರ್ಷಗಳೇ ಹೋದವು. ಜುಲೈ ೧೮೩೯ರಲ್ಲಿ ಧಾರವಾಡದ ಕಲೆಕ್ಟರರಾದ Nisbet ಇವರ ವರದಿಯ ಪ್ರಕಾರ, ಧಾರವಾಡ ಜಿಲ್ಹೆಯಲ್ಲಿದ್ದ ಒಟ್ಟಿಗೆ ೩೦೦ ಶಾಲೆಗಳಲ್ಲಿ (೪೧೪೫ ವಿದ್ಯಾರ್ಥಿಗಳು) ಎರಡು ಮಾತ್ರ ಸರಕಾರೀ ಶಾಲೆಗಳು ಇದ್ದವು; ಅವುಗಳೊಳಗಿನ ವಿದ್ಯಾರ್ಥಿಗಳ ಸಂಖ್ಯೆ ೯೪. ಸರಕಾರಿ ಶಾಲೆಗಳ ಪ್ರಾರಂಭವು ಅವುಗಳಿಂದಲೇ ಆಗಿರುವುದೆಂಬುದು ಅದರಿಂದ ಸ್ಪಷ್ಟವಾಗುವುದು.

(ಆ) ೧೮೨೫ ರಿಂದ ೧೮೫೫ ರ ವರೆಗಿನ ಸಾಧನೆ :

೧೮೨೪ ರಲ್ಲಿ ಪ್ರಾರಂಭವಾದ ದೇಶೀ ಶಿಕ್ಷಣದ ಗಣತಿಯ ಪರಾಮರ್ಶೆಯಿಂದ ತಮ್ಮದೇ ಆದ ಧೋರಣೆಯನ್ನು ರೂಪಿಸಲು ಸರಕಾರಕ್ಕೆ ಕೆಲವು ವರ್ಷಗಳೇ ಹಿಡಿದಿರಬೇಕು. ರಾಜಕೀಯ ಒತ್ತಡದ ಮುಂದೆ ಶಿಕ್ಷಣದ ಸಾಧನೆಯು ಸರಕಾರದ ಗಮನದಲ್ಲಿ ಆಗ ಅಷ್ಟಾಗಿ ಇರಲಿಲ್ಲ. ಶೈಕ್ಷಣಿಕ ಗಣತಿಯಿಂದ ಯಾವ ಇಲಾಖೆಯಲ್ಲಿಯೂ ಸರಕಾರವು ಪ್ರಜೆಗಳಿಗಾಗಿ ಶಾಲೆಗಳನ್ನು ನಡೆಸುತ್ತಿತ್ತೆಂಬುದು ಕಂಡು ಬಂದಿರಲಿಲ್ಲ. ಆ ಎಲ್ಲ ಶಿಕ್ಷಣವೂ ಪ್ರಾರಂಭಿಕವಾಗಿತ್ತು. ಅಲ್ಪಸ್ವಲ್ಪ ಹೆಚ್ಚಿಗೆ ಕಲಿತ ಬ್ರಾಹ್ಮಣರಿಗೂ ಅಯ್ಯನವರಿಗೂ ಶಿಕ್ಷಕರಾಗುವುದು ಅನುಕೂಲಸಿಂಧುವಾಗಿತ್ತು. ವೈದಿಕರಾಗುವವರಿಗೂ, ವೈದ್ಯ–ಶಾಸ್ತ್ರ–ಜ್ಯೋತಿಷ್ಯಗಳನ್ನು ಕಲಿಯುವವರಿಗೂ ಅವುಗಳನ್ನು ಬಲ್ಲವರು ಉಮೇದವಾರರಾಗಿ ಬಂದವರಿಗೆ ತಮ್ಮ ತಮ್ಮ ಮನೆಗಳಲ್ಲಿಯೇ ಇಟ್ಟುಕೊಂಡು ಕಲಿಸುತ್ತಿದ್ದರು.

ಈ ಮೊದಲೇ ೧೮೨೩ ರಲ್ಲಿ ತಮ್ಮ ಇಲಾಖೆಯಲ್ಲಿ ಶಿಕ್ಷಣ ಕಾರ್ಯವನ್ನು ಕೈಕೊಳ್ಳುವ ವಿಷಯವಾಗಿ ಎಲ್‌ಫಿನ್‌ಸ್ಟನ್ ಅವರು ಅರ್ಪಿಸಿದ ಅಭಿಮತವನ್ನು ಕುರಿತು ಮೇಲೆ ಹೇಳಲಾಗಿದೆ. ಆ ಕಾಲದ ಅವರ ಉದಾರವಾದ ವಿಚಾರಗಳನ್ನು ತಿಳಿದುಕೊಳ್ಳಲು ಅದರೊಳಗಿನ ಒಂದು ಪ್ಯಾರಾ ಇಲ್ಲಿ ಉದ್ಧರಿಸಲಾಗಿದೆ:

ಪ್ಯಾರಾ ೬: The following are the principal measures required for the diffusion of knowledge among the natives. 1st, to **improve** the mode of teaching at the native schools, and to **increase** the number of schools; 2nd, to supply them with school-books; 3rd, to hold out some encouragement to the lower orders of natives to avail themselves of the means of instruction thus afforded them; 4th, to establish schools for teaching the European sciences and improvements in the higher branches of education; 5th, to provide for the preparation and publication of books of moral and physical sciences in native languages; 6th, to establish schools for the purpose of teaching English to those disposed to pursue it as a classical language, and as a means of acquiring a knowledge of the European discoveries; 7th, to hold forth encouragement to the natives in the pursuit of those last branches of knowledge.

ಅವರ ಅಭಿಮತವು ಡಾಯರೆಕ್ಟರರಿಗೆ ಸಮ್ಮತವಿರಲಿಲ್ಲ—೧೮೨೭ ರಲ್ಲಿ ಅವರು ರಾಜೀನಾಮೆಯನ್ನು ಕೊಟ್ಟ ಮೇಲಂತೂ, ಸರಕಾರವು ಬೇರೆ ಧೋರಣೆಯನ್ನೇ ತಾಳಿತು. ಅಷ್ಟರಲ್ಲಿ ಎರಡು ಶಾಲೆಗಳನ್ನು ಸರಕಾರದವರು ಧಾರವಾಡ–ಹುಬ್ಬಳ್ಳಿಗಳಲ್ಲಿ

ತೆರೆದಿದ್ದುದನ್ನು ಮೇಲೆ ಹೇಳಲಾಗಿದೆ. ತರಬೇತಿ ಹೊಂದಿದ್ದ ಶಿಕ್ಷಕರನ್ನೇ ಅವುಗಳಿಗಾಗಿ ನೇಮಿಸಲಾಗಿತ್ತು. ಆದರೆ ಅವರು ಮರಾಠಾ ಶಿಕ್ಷಕರಾಗಿದ್ದರು.

ಪೇಶವೆಯವರಿಂದ ವಶಪಡಿಸಿಕೊಂಡಿದ್ದ ಪ್ರದೇಶಗಳ ಜನಗಣತಿಯನ್ನು ಬ್ರಿಟಿಶರು ೧೮೨೧ ರಲ್ಲಿ ನಡೆಸಿದ್ದರು. ಆಗ ಧಾರವಾಡ ಸುಭೆಯ ಮೂರು ಉಪವಿಭಾಗಗಳ ಜನಸಂಖ್ಯೆ ೬ ಲಕ್ಷ ಇತ್ತು. ಅದರ ತಪಶೀಲವಾರ ಮಾಹಿತಿ ಈ ಪ್ರಕಾರವಾಗಿ ಇರುವುದು:—(i) ಲಿಂಗಾಯತರು ೧,೯೫,೦೦೦, (ii) ಮುಸಲಮಾನರು ೪೫,೦೦೦, (iii) ಮರಾಠಾ ೪೨,೦೦೦, (iv) ಬ್ರಾಹ್ಮಣರು ೩೨,೦೦೦, (v) ಪಂಚಾಳರು ೨೦,೦೦೦, (vi) ಜೈನರು ೮,೦೦೦, (vii) ರಜಪೂತರು ೫,೦೦೦, (viii) ವೈಶ್ಯರು ೧,೫೦೦ ಮತ್ತು (ix) ಶೂದ್ರರು ೨,೪೦,೦೦೦ (ಕನ್ನಡ ಮಾತಾಡುವ ಬಹುಸಂಖ್ಯಾಕರು). ಮುಂದಿನ ದಶವಾರ್ಷಿಕ ಜನಗಣತಿಯಲ್ಲಿ ಈ ಮಾಹಿತಿ ಇನ್ನೂ ನಿರ್ದಿಷ್ಟವಾಗಿರಬೇಕು. ಈ ಸುಭೆಯ ಆಡುಮಾತಿನ ವಿಷಯವಾಗಿ ಹೆಚ್ಚು ಸ್ಪಷ್ಟವಾದ ಕಲ್ಪನೆ ಮೂಡಿರಬೇಕು. ಅದರ ಪರಿಣಾಮವಾಗಿ ೧೮೩೬ ರಲ್ಲಿ ಧಾರವಾಡ ಮತ್ತು ಬೆಳಗಾವಿ ಜಿಲ್ಹೆಗಳ ಮುಖ್ಯ ಭಾಷೆ ಕನ್ನಡವೆಂಬುದಾಗಿ ಸರಕಾರದ ಆದೇಶವು ಹೊರಟಿತು. ಆ ಜಿಲ್ಹೆಗಳಲ್ಲಿ ಹೊಸದಾಗಿ ಸ್ಥಾಪಿಸಬೇಕಾದ ಶಾಲೆಗಳು ಕನ್ನಡವಾಗಬೇಕೆಂಬುದು ಸ್ಪಷ್ಟವಾಯಿತು.

ದೇಶೀ ಶಾಲೆಗಳ ಶಿಕ್ಷಕರ ಅಸಮರ್ಥತೆ, ತರಬೇತಿಯ ನ್ಯೂನತೆ, ಅನಿಯಮಿತತೆ, ಪಠ್ಯ ಪುಸ್ತಕಗಳ ಅಭಾವ ಮತ್ತು ವಿದ್ಯಾರ್ಥಿಗಳ ಅನಾಸ್ಥೆ— ಇವು ಅಧಿಕಾರಿಗಳಿಗೆ ಎದ್ದು ಕಾಣುವ ಲಕ್ಷಣಗಳಾಗಿದ್ದವು. ಸರಕಾರವು ಹೊಸ ಶಾಲೆಗಳನ್ನು ಪ್ರಾರಂಭಿಸುವ ಒಲವು ಬೆಳೆಯಹತ್ತಿತು. ೧೮೩೫ರಲ್ಲಿ ಧಾರವಾಡ ಮತ್ತು ಹುಬ್ಬಳ್ಳಿಗಳಲ್ಲಿ ಕನ್ನಡ ಶಾಲೆಗಳನ್ನು ತೆರೆಯಲಾಯಿತು. ಅದೇ ವರ್ಷ Bombay Native School Book and School Society ಯು ಇಸಾಫನ ಕಥೆಗಳು, ಅಂಕಗಣಿತ ಮತ್ತು ಶಾಲೆಯ ಆಡಳಿತದ ಕೈಪಿಡಿ ಈ ಪುಸ್ತಕಗಳ ಒಂದೊಂದು ಸಾವಿರ ಪ್ರತಿಗಳನ್ನು ಪ್ರಕಟಿಸಿತು. ಇವೇ ಮುಂಬಯಿ ಇಲಾಖೆಯು ಕನ್ನಡದಲ್ಲಿ ಪ್ರಕಟಿಸಿದ ಮೊಟ್ಟಮೊದಲಿನ ಶಾಲೋಪಯೋಗೀ ಪುಸ್ತಕಗಳು.

ಮುಂದೆ ಕ್ರಮೇಣ ತಾಲೂಕಿನ ಸ್ಥಳಗಳಲ್ಲಿ, ಆ ಮೇಲೆ ದೊಡ್ಡ ಗ್ರಾಮಗಳಲ್ಲಿ Societyಯ ಕನ್ನಡ ಶಾಲೆಗಳು ಸ್ಥಾಪನೆಯಾದವು. ಆದರೆ ಅವುಗಳ ಪ್ರಾರಂಭದ ಪರಿಸ್ಥಿತಿ ಕುಂಟುತ್ತಲೇ ಇತ್ತು. ೧೮೪೦ ರಲ್ಲಿ ಒಟ್ಟಿಗೆ ೧೧೫ ಕನ್ನಡ ಶಾಲೆಗಳು ಹೊಸದಾಗಿ ಸ್ಥಾಪನೆಯಾಗಿದ್ದುವೆಂಬ ದಾಖಲೆ ದೊರೆಯುತ್ತದೆ. ಸೊಸಾಯಿಟಿಯು Vernacular Schools ಎಂದು ಅವುಗಳಲ್ಲಿ ಕೆಲವನ್ನು ಪುರಸ್ಕರಿಸಿತು. ವಿಜ್ಞಾನದ ಶಿಕ್ಷಣವನ್ನು ಪ್ರಚುರಗೊಳಿಸುವುದು ಅವುಗಳ ಮುಖ್ಯ ಲಕ್ಷಣವಾಗಿತ್ತು. ಅವು ಪೂರ್ಣ ಪ್ರಾಥಮಿಕ ಶಾಲೆಗಳಾಗಿದ್ದವು. ಅಂಥ ೧೨ ಶಾಲೆಗಳು ಆಗಿನ ಧಾರವಾಡ ಸುಭೆಯಲ್ಲಿದ್ದುವು.

ಧಾರವಾಡ–ಬೆಳಗಾಂವ ಜಿಲ್ಲೆಗಳ ಭಾಷೆ ಕನ್ನಡವೆಂದು ಜಾಹೀರ ಮಾಡಲಾಗಿದ್ದರೂ, ಕನ್ನಡ ಶಾಲೆಗಳ ವಿಷಯವಾಗಿ ಕೆಲವೊಂದು ವರ್ಗದ ಜನರಲ್ಲಿ ಆಸ್ಥೆ ಇರಲಿಲ್ಲ. ಹಿಂದಿನ ರಾಜಭಾಷೆಯಾದ ಮರಾಠಿಯ ಪ್ರಭಾವವು ಅಷ್ಟು ಪ್ರಬಲವಾಗಿತ್ತು. ಹೊಸದಾಗಿ ಸ್ಥಾಪಿಸಿದ ಶಾಲೆಗಳ ಪ್ರಗತಿಯ ವಿಷಯವಾಗಿಯೂ ಮುಖ್ಯವಾದ ಎರಡು ತೊಡಕುಗಳಿದ್ದವು. ಅವುಗಳ ಉಲ್ಲೇಖವು ಹೀಗೆ ಬರುತ್ತದೆ :

The teachers are of 2 classes, viz. Those whose varnacular language is Canarese and those Brahmins whose language is Marathi, but who have acquired a knowledge of Canarese. The former have no proper training in a Normal School and the latter have no mastry over the Canarese language.

ಹೀಗಾಗಿ ಕನ್ನಡ ಶಾಲೆಗಳು ಬೇಡವೆಂಬ ಅಪಸ್ವರವೂ ಜನರಲ್ಲಿ ಕಂಡುಬರುತ್ತಿತ್ತು. ಆದರೆ ಮೇಲಾಧಿಕಾರಿಗಳು ಕನ್ನಡದ ಬಗೆಗೆ ದೃಢವಾಗಿ ನಿಲುಮೆಯುಳ್ಳವರಾಗಿದ್ದರು. ಸುಮಾರು ಹತ್ತು ವರ್ಷಗಳಾದ ಮೇಲೆ ವಾತಾವರಣ ತಿಳಿಯಾದಂತೆ ತೋರುತ್ತದೆ. ೧೮೪೬ ರ Board of Education ದ ವರದಿಯಲ್ಲಿ ಈ ವಾಕ್ಯವೂ ಕಂಡುಬರುತ್ತದೆ :—

Since lingayats and other castes whose varnacular is Canarese have become more interested in education, and since more books have been prepared in this language, the objections seem to be subsiding.

೧೮೪೦ ರಲ್ಲಿ Bombay Native Education Society ಯನ್ನು ರದ್ದುಗೊಳಿಸಿ, ಇಲಾಖೆಯೊಳಗಿನ ಶಾಲೆಗಳ ಆಡಳಿತಕ್ಕಾಗಿ Bombay Board of Education ಎಂಬ ಸಂಸ್ಥೆಯನ್ನು ನಿರ್ಮಿಸಲಾಯಿತು. ಅದು ೧೮೫೫ ರ ವರೆಗೆ ಕಾರ್ಯವನ್ನು ಸಾಗಿಸಿತು. Sir Erskine Peary ಎಂಬವರು ಅದರ ಅಧ್ಯಕ್ಷರಾಗಿ ೧೮೫೨ ರ ವರೆಗೂ ಮುಂದುವರೆದರು. Downward Filtration Theory ಎಂಬ ಧೋರಣೆ ಅವರಿಂದಲೇ ದೃಢವಾಯಿತು. Board of Education ದ ಕಾಲದಲ್ಲಿ ೧೮೪೦ ರಿಂದ ೧೮೫೫ ರ ವರೆಗೆ ಧಾರವಾಡ ಮತ್ತು ಬೆಳಗಾಂವ ಜಿಲ್ಲೆಗಳಲ್ಲಿ ಸ್ಥಾಪನೆಯಾದ ಶಾಲೆಗಳ ವಿವರವು ಈ ಕೆಳಗಿನಂತೆ ಇರುವುದು :—

(೧) ಧಾರವಾಡ ಜಿಲ್ಲೆ (೧೧ ಶಾಲೆಗಳು) : ಧಾರವಾಡ (ಕನ್ನಡ ಮತ್ತು ಮರಾಠಿ) ಮೊರಬ, ನವಲಗುಂದ, ಬಂಕಾಪುರ, ಹಾನಗಲ್ಲ, ಹುಬ್ಬಳ್ಳಿ (ಕನ್ನಡ ಮತ್ತು ಮರಾಠಿ), ರಾಣೇಬೆನ್ನೂರು, ಕಲಘಟಗಿ, ಮಿಶ್ರಿಕೋಟಿ (ವಿದ್ಯಾರ್ಥಿಗಳು : ೧೩೨೯).

(೨) ಬೆಳಗಾವಿ ಜಿಲ್ಹೆ (೧೩ ಶಾಲೆಗಳು): ಬೆಳಗಾವ (ಕನ್ನಡ ಮತ್ತು ಮರಾಠಿ), ಸಂಪಗಾಂವ, ಬೈಲಹೊಂಗಲ, ಗೋಕಾಕ, ಸಡಲಗಾ ಜಾಂಬೋಟಿ, ಖಾನಾಪುರ, ಸವದತ್ತಿ, ಇಟಗಿ, ಬೀಡಿ, ಚಿಕ್ಕೋಡಿ, ಹುಕ್ಕೇರಿ (ವಿದ್ಯಾರ್ಥಿಗಳು: ೧೩೯೨).

(೩) ಸೊಲ್ಲಾಪುರ ಕನ್ನಡ ಪ್ರದೇಶ (೧೦ ಶಾಲೆಗಳು): ಚಡಚಣ, ಮನಗೂಳಿ, ಬಾಗೇವಾಡಿ, ಮುದ್ದೇಬಿಹಾಳ, ಹಿಪ್ಪರಗಿ, ಸಿಂದಗಿ, ಆಲಮೇಲ, ಇಂಡಿ, ತಾಳಿಕೋಟಿ, ವಿಜಾಪುರ (ವಿದ್ಯಾರ್ಥಿಗಳು : ೮೩೮)

ಒಟ್ಟು ಶಾಲೆಗಳು : ೩೮; ವಿದ್ಯಾರ್ಥಿಗಳ ಸಂಖ್ಯೆ : ೩೧೩೫ Board of Edn. ದ ವರದಿ ೧೮೫೮-೫೫).

ಇದೇ ಅವಧಿಯಲ್ಲಿ ಎರಡು ಇಂಗ್ಲೀಷ ಸ್ಕೂಲುಗಳು ಪ್ರಾರಂಭವಾದವು. ಮೊದಲನೆಯದು ಧಾರವಾಡದ ಸರಕಾರೀ ಇಂಗ್ಲೀಷ ಸ್ಕೂಲು (೧೮೪೮). ಎರಡನೆಯದು ಬೆಳಗಾವಿಯ ಸರದಾರ ಇಂಗ್ಲೀಷ ಸ್ಕೂಲು (೧೮೫೦). ಇದು ಮೊದಲು ದಕ್ಷಿಣ ಮಹಾರಾಷ್ಟ್ರದ ಜಹಾಗೀರದಾರರಿಂದ ಸ್ಥಾಪಿತವಾಗಿ ಮುಂದೆ ಅದು ಸರಕಾರೀ ಶಾಲೆಯಾಯಿತು (೧೮೫೭-೫೮).

(ಇ) ೧೮೫೫ ರಿಂದ ೧೮೮೨ ರ ವರೆಗಿನ ಪ್ರಗತಿ :

ಹಿಂದುಸ್ತಾನದಲ್ಲಿ ಬ್ರಿಟಿಶ ಶಿಕ್ಷಣ ಪದ್ಧತಿಗೆ ವ್ಯವಸ್ಥಿತವಾದ ಮೂರ್ತಸ್ವರೂಪವನ್ನು ತಂದು ಕೊಡಲು ಕಾರಣವಾದ ಬೋರ್ಡ್ ಆಫ್ ಡಾಯರೆಕ್ಟರರ ನಿರ್ದೇಶವೆಂದರೆ: Wood's Education Despatch (1854). ಆ ನಿರ್ದೇಶದ ಪರಿಣಾಮವಾಗಿ ಎರಡು ಮಹತ್ವದ ಸರಕಾರೀ ಸಂಸ್ಥೆಗಳು ಮುಂಬಯಿ ಇಲಾಖೆಯಲ್ಲಿ ಏರ್ಪಟ್ಟವು. ಮೊದಲನೆಯದೆಂದರೆ : Department of Public Instruction (1855) —ಸಾರ್ವಜನಿಕ ಶಿಕ್ಷಣ ಇಲಾಖೆ–ಇದು ಪ್ರಾಥಮಿಕ ಮತ್ತು ಹಾಯಸ್ಕೂಲುಗಳ ಆಡಳಿತಕ್ಕಾಗಿ; ಎರಡನೆಯದೆಂದರೆ : ಮುಂಬಯಿ ವಿಶ್ವವಿದ್ಯಾಲಯ (೧೮೫೭) –ಇದು ಉಚ್ಚ ಶಿಕ್ಷಣದ ಸಂಘಟನೆಗಾಗಿ.

ಮೇ, ೧೮೫೫ ರಲ್ಲಿ ಏರ್ಪಟ್ಟ ಸಾರ್ವಜನಿಕ ಶಿಕ್ಷಣ ಖಾತೆಯ ಅಧಿಕಾರ ವ್ಯಾಪ್ತಿಯನ್ನು ನಾಲ್ಕು ಭಾಗಗಳಲ್ಲಿ ವಿಸ್ತರಿಸಲಾಗಿತ್ತು : ಸಿಂಧ, ಗುಜರಾಥ, ಪ್ರೆಸಿಡೆನ್ಸಿ ಡಿವ್ಹಿಜನ್ (ಮುಂಬಯಿ) ಮತ್ತು ಡೆಕ್ಕನ್ ಇಂಥ ಭಾಗ (Division) ದ ಮುಖ್ಯಾಧಿಕಾರಿ : ಎಜ್ಯುಕೇಶನಲ್ ಇನ್ಸ್‌ಪೆಕ್ಟರರು, ಅವರ ಡೆಪ್ಯೂಟಿ ಇನ್ಸ್‌ಪೆಕ್ಟರರು. ಆಗ ಧಾರವಾಡ–ಬೆಳಗಾವಿ ಜಿಲ್ಹೆಗಳಿಗೆ ಎಫ್. ಪಿ. ಬೇಕರ್ ಎಂಬವರು ಡೆಪ್ಯೂಟಿ ಇನ್ಸ್‌ಪೆಕ್ಟರರಾಗಿ ನೇಮಕವಾಗಿ ಬಂದರು. ಅವರು ಮುಂದೆ ಬೆಳಗಾವದ ಸರದಾರ ಇಂಗ್ಲೀಷ

ಸ್ಕೂಲಿನ ಹೆಡ್‌ಮಾಸ್ತರರಾಗುವ ವರೆಗೆ (೧೮೬೨) ಈ ಸುಭೆಯ ಆಡಳಿತವನ್ನು ಆಸ್ಥೆಯಿಂದ ನೋಡಿಕೊಂಡರು.

೧೮೫೭ ರಲ್ಲಿ ಸ್ಥಾಪಿಸಲಾದ ಮುಂಬಯಿ ವಿಶ್ವವಿದ್ಯಾಲಯಕ್ಕೆ ಇಲಾಖೆಯೊಳಗಿನ ಆಗಿನ ಎಲ್ಲ ಕಾಲೇಜುಗಳನ್ನು ಸೇರಿಸಲಾಯಿತು. ಆ ವಿಶ್ವವಿದ್ಯಾಲಯ ಮೆಟ್ರಿಕ್ಯುಲೇಶನ್ ಪರೀಕ್ಷೆಯು ೧೮೫೯ ರಿಂದ ಮೊದಲಾಯಿತು. ೧೮೬೪ ರಲ್ಲಿ ಬೆಳಗಾವಿಯ ಸರದಾರ ಹಾಯ್‌ಸ್ಕೂಲಿನ ಮೊದಲನೆಯ ವಿದ್ಯಾರ್ಥಿ ಆ ಪರೀಕ್ಷೆಯಲ್ಲಿ ತೇರ್ಗಡೆಯಾದನು. ಧಾರವಾಡದ ಹಾಯಸ್ಕೂಲು ಅದಕ್ಕಿಂತ ಮೊದಲೇ ಸ್ಥಾಪಿತವಾಗಿದ್ದರೂ ಅಲ್ಲಿಯ ವಿದ್ಯಾರ್ಥಿಗಳು ಆ ಪರೀಕ್ಷೆಯಲ್ಲಿ ಮೊದಲನೆಯ ಸಲ ತೇರ್ಗಡೆಯಾದುದು ೧೮೭೩ ರಲ್ಲಿ. ಉಳಿದ ಭಾಗಗಳ ದೃಷ್ಟಿಯಿಂದ ಈ ಸುಭೆಯ ಇಂಗ್ಲೀಷ ಮಾಧ್ಯಮಿಕ ಶಿಕ್ಷಣದ ಪ್ರಗತಿಯು ತುಂಬ ಅಸಮಾಧಾನಕರವಾಗಿತ್ತು.

೧೮೬೨ ರಲ್ಲಿ ಮದ್ರಾಸ ಇಲಾಖೆಯಿಂದ ಉತ್ತರ ಕನ್ನಡ ಜಿಲ್ಲೆಯು ಧಾರವಾಡ ಸುಭೆಗೆ ಸೇರಿದ ಮೇಲೆ, ಈ ಸುಭೆಯನ್ನು ದಕ್ಷಿಣ ಭಾಗವೆಂದು ಕರೆದು ಡೆಕ್ಕನ್ ಭಾಗದಿಂದ ಪ್ರತ್ಯೇಕಿಸಲಾಯಿತು (೧೮೬೩). ಮೊದಲು ಆ ಜಿಲ್ಹೆಯಲ್ಲಿ ಮದ್ರಾಸ ಇಲಾಖೆಯು ಎರಡು ಶಾಲೆಗಳನ್ನು ಮಾತ್ರ (ಸಿರಸಿಯಲ್ಲೊಂದು, ಹೊನ್ನಾವರದಲ್ಲಿ ಮತ್ತೊಂದು) ತೆರೆದಿತ್ತು. ಆದರೆ ಧಾರವಾಡದ ಡೆಪ್ಯೂಟಿ ಇನ್ಸ್‌ಪೆಕ್ಟರರು ಪ್ರತ್ಯಕ್ಷ ಭೆಟ್ಟಿಯಿತ್ತಾಗ ಅವುಗಳಲ್ಲಿ ಒಂದೂ ಇರಲಿಲ್ಲ. ಅದೇ ಸುಮಾರಿಗೆ ಕಲಾದಗಿ ಜಿಲ್ಹೆಯನ್ನು ರೂಪಿಸಲಾಗಿದ್ದಿತೆಂಬುದನ್ನು ಹಿಂದೆ ಹೇಳಲಾಗಿದೆ. ಆ ಕಾಲದಲ್ಲಿ ದಕ್ಷಿಣ ಭಾಗದ ಪ್ರಗತಿಯನ್ನು ಕುರಿತು D. P. I. ಅವರ ೧೮೬೩-೬೪ ರ ವರದಿಯಲ್ಲಿ ಈ ವಾಕ್ಯವು ಕಂಡುಬರುವುದು :—

Throughout the Southern Division but few native-born Canarese are to be found who have received even a five middle class education North Canara (which was taken over from the Madras Presidency in Dec. 1862) is specially backward.

೧೮೬೯ ರಲ್ಲಿ ಪಾಸಾದ ಲೋಕಲ್ ಫಂಡ್ಸ ಕಾಯದೆಯು ಪ್ರಾಥಮಿಕ ಶಿಕ್ಷಣ ಪ್ರಸಾರದ ದೃಷ್ಟಿಯಲ್ಲಿ ಒಂದು ಮಹತ್ವದ ಹೆಜ್ಜೆಯಾಗಿರುವುದು. ಭೂಕಂದಾಯಕ್ಕೆ ರೂಪಾಯಿಗೆ ಒಂದು ಆಣೆಯಂತೆ ಹೆಚ್ಚಿನ ಕರ ವಸೂಲಿಯ ಅಧಿಕಾರವನ್ನು ಸರಕಾರವು ಪಡೆಯಿತು. ಅದರ ೧/೩ ಅಂಶವನ್ನು ಪ್ರತಿಯೊಂದು ತಾಲೂಕಿನಲ್ಲಿ ಪ್ರಾಥಮಿಕ ಶಿಕ್ಷಣಕ್ಕಾಗಿ ವಿನಿಯೋಗಿಸಬೇಕೆಂದು ವಿಧಿಸಲಾಯಿತು. ಇನ್ನೊಂದು ಮಹತ್ವದ ಹೆಜ್ಜೆಯೆಂದರೆ, ಕೇಂದ್ರ ಸರಕಾರವು ೧೮೭೦ ರಲ್ಲಿ ಪ್ರಾಥಮಿಕ ಶಿಕ್ಷಣದ ವೆಚ್ಚದ ಅಧಿಕಾರವನ್ನು ಗವ್ಹರ್ನರರಿಗೇ ವಹಿಸಿಕೊಟ್ಟದ್ದು. ಇವೆರಡು ಕಾರಣಗಳಿಂದ ಪ್ರಾಥಮಿಕ ಶಿಕ್ಷಣದ ಪ್ರಗತಿಗೆ ಹೆಚ್ಚು ಅನುಕೂಲವಾಯಿತು.

ಕನ್ನಡದಲ್ಲಿ ಶಿಕ್ಷಣದ ಪ್ರೋತ್ಸಾಹನೆಗೆ ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜು ಮಹತ್ವದ ಪಾತ್ರವನ್ನು ವಹಿಸಿರುತ್ತದೆ. ೧೮೫೭ ರಲ್ಲಿಯೇ ಒಂದು ನಾರ್ಮಲ್ ಕ್ಲಾಸನ್ನು ಧಾರವಾಡದಲ್ಲಿ ಪ್ರಾರಂಭಿಸಲಾಗಿತ್ತು. ಕನ್ನಡ ಶಾಲೆಯ ಮುಖ್ಯಾಧ್ಯಾಪಕರ ಮಾರ್ಗದರ್ಶನದಲ್ಲಿ ಅದು ನಡೆದಿತ್ತು. ಆದರೆ ಅದು ಸಮಾಧಾನಕರವಾಗಿ ಸಾಗಿದಂತೆ ತೋರುವುದಿಲ್ಲ. ೧೮೬೧ ರಲ್ಲಿ ಅದನ್ನು ಬೆಳಗಾಂವಿಗೆ ವರ್ಗಾಯಿಸಿ, ಸರದಾರ ಹಾಯ್‌ಸ್ಕೂಲಿನ ಹೆಡ್‌ಮಾಸ್ತರರ ಅಧೀನಕ್ಕೆ ಕೊಡಲಾಯಿತು. ೧೮೬೪ ರಲ್ಲಿ ಆ ಸ್ಕೂಲಿನ ಶಿಕ್ಷಕ ವಿದ್ಯಾರ್ಥಿಗಳ ಸಂಖ್ಯೆ ೪೦ ಕ್ಕೆ ಏರಿತು. ಅದೇ ವರ್ಷ ಅದನ್ನು ಸರದಾರ್ಸ ಹಾಯಸ್ಕೂಲಿನಿಂದ ಬೇರ್ಪಡಿಸಿ, ಪ್ರತ್ಯೇಕವಾದ ನಾರ್ಮಲ್ ಸ್ಕೂಲು ಎಂದು ಪರಿಗಣಿಸಲಾಯಿತು. ಮತ್ತು ೧೮೬೪ ಜನವರಿಯಲ್ಲಿ ಆ ಸ್ಕೂಲಿಗೆ ಹೆಡ್-ಮಾಸ್ತರರೆಂದು ಶ್ರೀ ಚೆನ್ನಬಸಪ್ಪನವರನ್ನು ನೇಮಿಸಲಾಯಿತು. ೧೮೬೬-೭೭ ರಲ್ಲಿ ಪುಣೆ ಮತ್ತು ಅಹಮುದಾಬಾದಗಳಲ್ಲಿರುವಂತೆ ಅದಕ್ಕೆ ಕಾಲೇಜಿನ ಸ್ವರೂಪವು ಪ್ರಾಪ್ತವಾಯಿತು. ೧೮೭೨-೭೩ ರಲ್ಲಿ ಆ್ಯಕ್ಟಿಂಗ್ ಎಜ್ಯುಕೇಶನಲ್ ಇನ್ಸ್‌ಪೆಕ್ಟರರಾಗಿದ್ದ ಜೆ. ಎಫ್. ಫ್ಲೀಟ ಅವರು ತಮ್ಮ ವರದಿಯಲ್ಲಿ ಅದರ ಪ್ರಗತಿಯನ್ನು ಕುರಿತು ಪ್ರಶಂಸಿಸಿರುವುದು ಕಂಡುಬರುವುದು. ಡೆಪ್ಯುಟಿ ಚನ್ನಬಸಪ್ಪನವರು ಮತ್ತು ಆಗಿನ ಧಾರವಾಡ ಜಿಲ್ಹೆಯ ಕಲೆಕ್ಟರರ ನೆರವಿನಿಂದ ಹೊಸದಾಗಿ ನಿರ್ಮಿಸಲಾಗಿದ್ದ ಕಟ್ಟಡದಲ್ಲಿ ಅದನ್ನು ೧೮೭೫-೭೬ ರಲ್ಲಿ ಧಾರವಾಡಕ್ಕೆ ಬರಮಾಡಿಕೊಳ್ಳಲಾಯಿತು. ಆಗ ಚೆನ್ನಬಸಪ್ಪನವರು ಧಾರವಾಡ ಜಿಲ್ಹೆಯ ಡೆಪ್ಯುಟಿ ಎಜ್ಯುಕೇಶನಲ್ ಇನಸ್ಪೆಕ್ಟರರಾಗಿದ್ದರು.

" ಆರಂಭದಿಂದ ಈ ಸಂಸ್ಥೆಯ ಮುಖ್ಯಸ್ಥರಾಗಿ ಇದರ ಉತ್ಕರ್ಷಕ್ಕೆ ಚೆನ್ನಬಸಪ್ಪನವರು ಹೆಣಗಿದರು. ಅಷ್ಟೇ ಅಲ್ಲ, ಈ ಸಂಸ್ಥೆಯು ಮುಂದೆ ಕನ್ನಡ ಟ್ರೇನಿಂಗ ಕಾಲೇಜು ಎಂದು ಪರಿವರ್ತನ ಹೊಂದಿ, ಕನ್ನಡ ಶಿಕ್ಷಕರ ತರಬೇತಿಗೆ ಉತ್ತಮ ಸಂಸ್ಕರಣ ನೀಡಿದರು. ಕನ್ನಡ ಅಭಿವೃದ್ಧಿಯು, ತದನಂತರ ಕನ್ನಡ ಸಂಸ್ಕೃತಿಯ ಸೆಲೆಯಾಯಿತು. ಈ ಸಂಸ್ಥೆಯ ಪ್ರಗತಿ, ಕನ್ನಡ ಶಿಕ್ಷಕರ ತರಬೇತಿ, ಕನ್ನಡದ ಉದ್ಧಾರ, ಕನ್ನಡ ಸಂಸ್ಕೃತಿಯ ರಕ್ಷಣೆ, ಪೋಷಣೆ, ಶಿಕ್ಷಣದ ಬುನಾದಿಯಾದ ಪ್ರಾಥಮಿಕ ಶಿಕ್ಷಣದ ಭದ್ರರಚನೆ— ಇವೆಲ್ಲವೂ ಪ್ರಪ್ರಥಮ ಪ್ರಿನ್ಸಿಪಾಲರಾಗಿದ್ದ ಚೆನ್ನಬಸಪ್ಪನವರ ಸೇವಾಫಲಗಳು "—

ಇದು ಶ್ರೀ ಹಂದ್ರಾಳ ಅವರು ಆ ಕಾಲೇಜಿನ ಪ್ರಥಮ ಪ್ರಿನ್ಸಿಪಾಲರಿಗೆ ಅರ್ಪಿಸಿದ ಶ್ರದ್ಧಾಂಜಲಿಯಾಗಿರುವದು (ಡೆ. ಚನ್ನಬಸಪ್ಪನವರು, ಪು. ೨೩). ಶ್ರೀ ಚೆನ್ನಬಸಪ್ಪನವರು ಡೆಪ್ಯೂಟಿ ಇನ್ಸಪೆಕ್ಟರರಾಗಿಯೂ ಪ್ರಾಥಮಿಕ ಶಿಕ್ಷಣದ ಪ್ರಸಾರಕ್ಕಾಗಿ ಮಹತ್ವದ ಸೇವೆಯನ್ನು ಸಲ್ಲಿಸಿರುವರು. ದಕ್ಷಿಣ ಭಾಗದ ಎಜ್ಯುಕೇಶನಲ್ ಇನ್ಸಪೆಕ್ಟರರಾಗಿದ್ದ ರಸೆಲ್ಲರು ಹಾಗು ಫ್ಲೀಟರು ಅವರಿಗೆ ಈ ವಿಷಯದಲ್ಲಿ ತುಂಬ ಪ್ರೋತ್ಸಾಹವನ್ನಿತ್ತಿದ್ದರು. ಅವರ ಕಾಲದಲ್ಲಿ ಆದ ಪ್ರಾಥಮಿಕ ಶಾಲೆಗಳ ವಿಸ್ತಾರವನ್ನು ಗಮನಿಸಬಹುದು:— ಕಲಾದಗಿ ಜಿಲ್ಹೆಯಲ್ಲಿ ಒಟ್ಟು ಶಾಲೆಗಳು : ೧೫೦ (ವಿದ್ಯಾರ್ಥಿಗಳು : ೯,೯೬೪), ಬೆಳಗಾವ ಜಿಲ್ಹೆಯಲ್ಲಿ : ೧೭೭ (ವಿ. : ೧೫,೮೯೯),

ಮತ್ತು ಧಾರವಾಡ ಜಿಲ್ಹೆಯಲ್ಲಿ: ೩೪೧ (ವಿ: ೨೯,೭೧೧), ಈ ಪ್ರಗತಿಯನ್ನು ೧೮೫೫-೫೬ರ ವರದಿಯೊಂದಿಗೆ ಹೋಲಿಸಿ ನೋಡಬಹುದು.

೧೮೬೭ ರಲ್ಲಿ ಕೇಂದ್ರ ಸರಕಾರವು ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ಮುಂಬಯಿ ಸರಕಾರಕ್ಕೆ ವಾರ್ಷಿಕ ಹತ್ತು ಸಾವಿರ ರೂಪಾಯಿಗಳ ಸಹಾಯಧನವನ್ನು ಒದಗಿಸಿತು. ಆದರಿಂದಾಗಿ ಮುಂದಿನ ಎರಡು ವರ್ಷಗಳಲ್ಲಿ ಕಲಾದಗಿ ಜಿಲ್ಹೆಯಲ್ಲಿ ೮, ಧಾರವಾಡ ಜಿಲ್ಹೆಯಲ್ಲಿ ೬, ಬೆಳಗಾವ ಜಿಲ್ಹೆಯಲ್ಲಿ ೫, ಮತ್ತು ಉತ್ತರ ಕನ್ನಡ ಜಿಲ್ಹೆಯಲ್ಲಿ ೪, ಹೀಗೆ ಒಟ್ಟು ೨೩ ಹೆಣ್ಣುಮಕ್ಕಳ ಶಾಲೆಗಳನ್ನು ಸ್ಥಾಪಿಸಲಾಯಿತು. ಆ ಶಾಲೆಗಳಲ್ಲಿಯ ವಿದ್ಯಾರ್ಥಿನಿಯರ ಒಟ್ಟು ಸಂಖ್ಯೆ ೭೭೪ ಇತ್ತು. ೧೮೮೨ರ ಕಾಲಕ್ಕೆ ಅವುಗಳ ಸಂಖ್ಯೆ ೪೭ಕ್ಕೆ ಏರಿತ್ತು. ಅವುಗಳೊಳಗಿನ ವಿದ್ಯಾರ್ಥಿನಿಯರ ಸಂಖ್ಯೆ ೨೪೫೫ಕ್ಕೆ ತಲುಪಿತ್ತು.

ಈ ಸಂದರ್ಭದಲ್ಲಿ ಶೇತಕೀ ಶಿಕ್ಷಣದ ವಿಷಯವಾಗಿ, ಮುಂಬಯಿಯ ಗವ್ಹರ್ನರರಾಗಿದ್ದ Sir Richard Temple ಇವರು ೧೮೭೯ ರಲ್ಲಿ ಒಂದು ಅಭಿಮತ (Minutes) ದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯವು ಮನನೀಯವಾಗಿರುವುದು. ಅದರೊಳಗಿನ ಕೆಳಗಿನ ವಾಕ್ಯವು ಮರೆತು ಹೋಗಿದ್ದ ಅದರ ಮಹತ್ವವನ್ನು ಮತ್ತೆ ಸ್ಮರಿಸಿಕೊಳ್ಳುವಂತೆ ಇರುವುದು:—

The need of agricultural science in this country, the backwardness of the people in the superior methods of culture, the slow deterioration of the soil in many places from exhaustive processes, the want of restorative means and appliances, the probability that by improved husbandry the yield of the soil could be augmented, are considerations so manifestly important that no apology is needed, when I ask my Honourable Colleagues to join me in pressing them upon the attention of all concerned……

I propose to establish agriculture classes in the High schools in the several districts of Presidency…… Mr. Robertson (Suptd, Agricultural Institute, Madras) thinks that one hour a day for indoor agricultural instruction and one hour extra out of doors every after day would suffice……

೧೮೭೯ರಲ್ಲಿ ಪುಣೆಯಲ್ಲಿ Agriculture College ಸ್ಥಾಪನೆಯಾಗಿತ್ತು. ಅದೇ ವರ್ಷ ಧುಳೇ, ನಾಸಿಕ, ಅಹಮ್ಮದನಗರ, ಭಡೋಚ, ನದಿಯಾದ, ಸುರತ, ಕರಾಚಿ ಮತ್ತು ಬೆಳಗಾವ ಈ ಎಂಟು ಹಾಯಸ್ಕೂಲುಗಳಲ್ಲಿ ಶೇತಕೀ ವರ್ಗಗಳನ್ನು ತೆರೆಯ

ಲಾಯಿತು. ಅವುಗಳಲ್ಲಿ ಬೆಳಗಾವದ ವರ್ಗವು ಅತ್ಯುತ್ತಮವಾಗಿ ಸಾಗಿತ್ತೆಂದು ಡಾಯರೆಕ್ಟರರ ವರದಿ ಇರುವುದು. ಉಳಿದ ಕಡೆಗಳಲ್ಲಿ ಸ್ಥಿತಿವಂತರ ಮಕ್ಕಳು ಶಾರೀರಿಕ ಶ್ರಮವನ್ನು ಮಾಡಲು ಹಿಂಜರಿಯುತ್ತಿರುವುದನ್ನು ಗಮನಿಸಿ, ಅವರು ತಮ್ಮ ೧೮೭೯-೮೦ ರ ವರದಿಯಲ್ಲಿ ಹೀಗೆ ವಿವರಿಸಿರುವರು:—

I have proposed to the local committees that kunbi boys should be brought in as apprentices to the school teachers and allowed to attend half time at any government school near to the farm.

ಈ ಅವಧಿಯಲ್ಲಿ (೧೮೬೫-೮೫) ದಕ್ಷಿಣ ಭಾಗದಲ್ಲಿ ಮಿ. ರಸೆಲ್ ಎಜ್ಯುಕೇಶನಲ್ ಇನ್ಸಪೆಕ್ಟರರಾಗಿದ್ದರು. ಅವರ ಮಹತ್ವದ ಸಾಧನೆಯನ್ನು ಕುರಿತು ಡಿ. ಪಿ. ಆಯ್. ಅವರು ತಮ್ಮ ವರದಿಯಲ್ಲಿ ಹೀಗೆ ವಿವರಿಸುತ್ತಾರೆ:—

Mr. Russel interested in the commencement and success of the remarkable movement which has raised to the Southren Division from the lowest to one of the foremost places in educational interest and he has bequeathed to his successor a position which should enable him to surpass all other Divisions in educational results.

R E. Candy ಇವರು ಈ ಆಂದೋಲನದ ಚೈತನ್ಯವನ್ನು ೧೮೭೧-೭೨ ರಲ್ಲಿಯೇ ಗುರುತಿಸಿ, ಅದು ಕನ್ನಡದ ಪ್ರಾಚೀನತೆಯ ಪುನರುಜ್ಜೀವನ (Renaissance) ಎಂದು ಕರೆದಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಜೈನ, ಲಿಂಗಾಯತ, ಬ್ರಾಹ್ಮಣ ಸಾಹಿತ್ಯ ವಿಭಾಗಗಳು ಇರುವಂತೆ, ಹೊಸ ಶಿಕ್ಷಣದಿಂದ ಪ್ರಾರಂಭವಾಗಿರುವ ಆಧುನಿಕ ವಿಭಾಗವು ಪುನರುಜ್ಜೀವನದ ವಿಭಾಗವೆಂದು ಅವರು ಕರೆದಿದ್ದರು. ಶಿಕ್ಷಣ ಮತ್ತು ಸಾಹಿತ್ಯಗಳ ಈ ಪುನರುಜ್ಜೀವನದಲ್ಲಿ ಪಾಲುಗೊಂಡ ಪ್ರಮುಖರಾದ ಮಹನೀಯರನ್ನು ಇಲ್ಲಿ ನೆನೆಸುವುದು ಯುಕ್ತವಾಗಿರುವುದು. ಅವರೆಂದರೆ : ಯುರೋಪಿಯನ್ ವಿದ್ವಾಂಸರಾದ ರಸೆಲ್, ವರ್ಥ, ಫ್ಲೀಟ, ಮೋನ್ನಿಂಗ್, ಝೀಗ್ಲರ್, ಸ್ಯಾಂಡರಸನ್, ಕಿಟೆಲ್ ಇವರು ಪ್ರಮುಖರು; ಅವರೊಂದಿಗೆ, ಶಿಕ್ಷಣ ಖಾತೆಯಲ್ಲಿ ಸೇವೆಯನ್ನು ಸಲ್ಲಿಸಿದ ಚನ್ನಬಸಪ್ಪನವರು, ಗಂಗಾಧರ ಮಡಿವಾಳೇಶ್ವರ ತುರಮರಿ, ವೆಂಕಟ ರಂಗೋ ಕಟ್ಟಿ, ಭುಜಂಗರಾವ ಹುಯಿಲಗೋಳ, ರೊದ್ದ ರಾಯರು, ಮುಂತಾದವರು. ಆ ಕಾಲದಲ್ಲಿ ಈ ಎಲ್ಲ ಮಹನೀಯರು ಶಿಕ್ಷಣ ಹಾಗು ಸಾಹಿತ್ಯ ರಂಗಗಳಲ್ಲಿ ದಕ್ಷಿಣ ಭಾಗದಲ್ಲಿ ಸಲ್ಲಿಸಿದ ಸೇವೆ ಅಮೋಘವಾಗಿರುವುದು.

(ಈ) ೧೮೮೨-೧೯೦೦ ವರೆಗಿನ ಮುಂದಿನ ಪ್ರಗತಿ :

Wood's Despatch (೧೮೫೪) ಈ ಸಂಯೋಜನೆ ಹಿಂದುಸ್ತಾನದಲ್ಲಿ ಬ್ರಿಟಿಶ್ ಸರಕಾರದ ಶಿಕ್ಷಣ ಧೋರಣೆಯ ಆಧಾರಸ್ತಂಭವಾಗಿತ್ತು. ಮುಂಬಯಿ ಇಲಾಖೆಯಲ್ಲಿ ಸ್ಥಾಪಿತವಾದ ಸಾರ್ವಜನಿಕ ಶಿಕ್ಷಣ ಇಲಾಖೆ (೧೮೫೪) ಆ ಯೋಜನೆಯಂತೆಯೇ ಕಾರ್ಯಗತವಾಗಬೇಕಾಗಿತ್ತು. ಪ್ರಾಥಮಿಕ ಶಿಕ್ಷಣದಲ್ಲಿ ಸಾರ್ವತ್ರಿಕ ಪ್ರಸಾರವು ಆ ಸಂಯೋಜನೆಯ ಆಶಯವಾಗಿತ್ತು. ಅದಕ್ಕಾಗಿ ಅಸ್ತಿತ್ವದಲ್ಲಿದ್ದ ದೇಶೀಯ ಶಾಲೆಗಳ ಸಹಕಾರದಿಂದ ಸರಕಾರವು ಹೆಚ್ಚಿನ ಪ್ರಸಾರವನ್ನು ಸಾಧಿಸಬೇಕೆಂದು ಬಗೆಯಲಾಗಿತ್ತು. ಸಹಾಯಧನ ಮಂಜೂರಿಯಿಂದ ಆ ಕಾರ್ಯವು ಸಾಗಬೇಕೆಂಬ ಸೂಚನೆಯೂ ಇತ್ತು.

ಅಷ್ಟರಲ್ಲಿ ಅಕಸ್ಮಾತ್ತಾದ ಘಟನೆಗಳೂ ವಿಪ್ಲವಗಳೂ ಶಿಕ್ಷಣ ಪ್ರಸಾರಕ್ಕೆ ಅಡ್ಡಿ ಬಂದವು. ಅವುಗಳಲ್ಲಿ ೧೮೫೭ ರ ಸಿಪಾಯಿಗಳ ಹೋರಾಟವು ಮುಖ್ಯವಾದುದು. ಅದರಿಂದ ಸಾಮಾಜಿಕ ಅಭದ್ರತೆ ತಲೆದೋರಿತು. ಆರ್ಥಿಕ ವ್ಯವಸ್ಥೆ ಅಸ್ತವ್ಯಸ್ತವಾಯಿತು. ಡೆಕ್ಕನ್ನದ ಬರಗಾಲವೆಂದು ಹೆಸರಾದ ಭಾರೀ ವಿಪತ್ತುಗಳು ಜನಜೀವನವನ್ನು ಕಂಗಾಲಾಗುವಂತೆ ಮಾಡಿದವು. ಸರಕಾರಕ್ಕೆ ಸ್ವಾಸ್ಥ್ಯವಿರಲಿಲ್ಲ. ಅದರಿಂದಾಗಿ ಶಿಕ್ಷಣದ ಪ್ರಗತಿ ಕುಂಟುತ್ತ ನಡೆದಿತ್ತು. ಈ ಪರಿಸ್ಥಿತಿಯನ್ನು ಸಮಾಲೋಚಿಸಿ, ೧೮೫೪ ರ ಸಂಯೋಜನೆಯ ಆದೇಶಗಳು ಎಷ್ಟರ ಮಟ್ಟಿಗೆ ಫಲಪ್ರದವಾಗಿರುವುವೆಂಬುದನ್ನು ಕಂಡು ಹಿಡಿಯಲು, ಬ್ರಿಟಿಶ ಸರಕಾರವು ೧೮೮೨ ರಲ್ಲಿ ಮತ್ತೊಂದು ಕಮೀಶನ್ (Indian Education Commission) ಹಂಟರ ಇವರ ಅಧ್ಯಕ್ಷತೆಯಲ್ಲಿ ನೇಮಿಸಿತು. ಅದು ಮುಂಬಯಿ ಇಲಾಖೆಯ ಪ್ರಾಥಮಿಕ ಶಿಕ್ಷಣವನ್ನು ಪರಿಶೀಲಿಸಿ, ಕೆಳಗೆ ತೋರಿಸಿದ ನಾಲ್ಕು ಮುಖ್ಯವಾದ ಅಂಶಗಳನ್ನು ಒತ್ತಿ ಹೇಳಿತು :—

(೧) ಶಿಕ್ಷಣದ ಪ್ರತಿಯೊಂದು ಕ್ಷೇತ್ರದಲ್ಲಿ ಪ್ರಗತಿ ಅಪೇಕ್ಷಿತವಾಗಿದ್ದರೂ, ಪ್ರಾಥಮಿಕ ಕ್ಷೇತ್ರದಲ್ಲಿ ಸಾರ್ವತ್ರಿಕ ಪ್ರಸಾರವಾಗುವ ಕಾರ್ಯವನ್ನು ತೀವ್ರಗೊಳಿಸಬೇಕು.

(೨) ಸರಕಾರೀ ಶಾಲೆಗಳನ್ನು ಹೆಚ್ಚಿಸುವುದರ ಜೊತೆಗೆ, ದೇಶೀಯ ಶಾಲೆಗಳನ್ನು ಪ್ರೋತ್ಸಾಹಿಸಿ ಅವುಗಳಲ್ಲಿ ಸುಧಾರಣೆಯನ್ನು ಮಾಡುವುದರಿಂದ ಈ ಕಾರ್ಯವು ಹೆಚ್ಚು ಸುಲಭವಾಗುವುದು.

(೩) ಪ್ರಾಥಮಿಕ ಶಿಕ್ಷಣಕ್ಕಾಗಿ ಪ್ರಾಂತೀಯ ಸರಕಾರವು ಮಂಜೂರು ಮಾಡಿದ ಮೊಬಲಗಿನ ಜೊತೆಗೆ ಲೋಕಲ್ ಫಂಡ ರಕಮನ್ನು ಪೂರ್ಣವಾಗಿ ವಿನಿಯೋಗಿಸುವುದರಿಂದ ಹೆಚ್ಚಿನ ಪರಿಣಾಮವನ್ನು ಸಾಧಿಸಬಹುದು.

(೪) ಮುನಸಿಪಾಲಿಟಿಗಳು ಮತ್ತು ಲೋಕಲ್ ಬೋರ್ಡುಗಳು ಪ್ರತ್ಯೇಕವಾದ ಸ್ಕೂಲ ಫಂಡ್ಸಗಳನ್ನು ಏರ್ಪಡಿಸಿ, ಪ್ರಾಥಮಿಕ ಶಿಕ್ಷಣದ ಪ್ರಗತಿಯನ್ನು ಮುಂದುವರಿಸಬೇಕು.

೧೮೮೨ ರ ಮುಂದೆ ಪರಿಸ್ಥಿತಿ ಕೆಲವೊಂದು ರೀತಿಯಿಂದ ಅನುಕೂಲವಾಗಿತ್ತು. ಮುನಸೀಪಾಲಿಟಿಗಳು ಮತ್ತು ಲೋಕಲ್ ಬೋರ್ಡುಗಳು ತಮ್ಮ ತಮ್ಮ ಪಾಲಿನ ಕಾರ್ಯವನ್ನು ಮುಂದುವರಿಸಿದವು. ದೇಶೀಯ ಶಾಲೆಯೊಳಗಿನ ಹಳೆಯ ಶಿಕ್ಷಕರು ನಿವೃತ್ತರಾಗುತ್ತ ಬಂದು, ಹೊಸಬರು ಪ್ರವೇಶಿಸತೊಡಗಿದ್ದರು. ಅವರೆಲ್ಲ ಬಹುಶಃ ಸರಕಾರೀ ಶಾಲೆಗಳಲ್ಲಿ ತರಬೇತಿ ಹೊಂದಿದವರ ವಿದ್ಯಾರ್ಥಿಗಳೇ ಇರುತ್ತಿದ್ದುದರಿಂದ, ಸರಕಾರೀ ಶಾಲೆಗಳ ಮಾದರಿಯಲ್ಲಿಯೇ ಮುಂದಡಿ ಇಡತೊಡಗಿದರು. ಅಂಥವರಿಗೆ ಸಹಾಯಧನದ ಅನುಕೂಲತೆಯೂ ಸುಲಭವಾಯಿತು. ಹೀಗಾಗಿ ಪ್ರಾಥಮಿಕ ಶಿಕ್ಷಣದ ಪ್ರಗತಿಗೆ ಕೆಲಮಟ್ಟಿಗೆ ಕಳೆಯೇರಿತು.

೧೮೯೧-೯೨ ರ ಸುಮಾರಿಗೆ ಮುಂಬಯಿ-ಕರ್ನಾಟಕದ ೪ ಜಿಲ್ಹೆಗಳಲ್ಲಿ ಒಟ್ಟಿಗೆ ೧೨೪೦ ಶಾಲೆಗಳು (೮೯೨ ಲೋಕಲ್ ಬೋರ್ಡ + ೯೬ ಮುನಸಿಪಲ್ + ೨೫೨ ಸಹಾಯಧನ ಪಡೆದವು) ಮತ್ತು ೬೨,೦೬೪ ವಿದ್ಯಾರ್ಥಿಗಳು ಇದ್ದರೆ, ೧೯೦೦ ರ ಅಂತ್ಯದಲ್ಲಿ ೧೨೯೫ ಶಾಲೆಗಳು (೧ ಸರಕಾರಿ, ೮೧೩ ಲೋಕಲ್ ಬೋರ್ಡ, ೯೬ ಮುನಸಿಪಲ್, ೩೮೫ ಸಹಾಯಧನ ಪಡೆದುವು) ಮತ್ತು ೫೧,೫೪೮ ವಿದ್ಯಾರ್ಥಿಗಳು, ಇದ್ದರು. ಈ ದಶಕದ ಉತ್ತರಾರ್ಧದಲ್ಲಿ ಪ್ಲೇಗು ಮತ್ತು ಕಾಲರಾ ಬೇನೆಗಳ ಹಾವಳಿಯಿಂದಾಗಿ ಎಷ್ಟೋ ಶಾಲೆಗಳು ಮುಚ್ಚಲಾಗಿದ್ದುವೆಂಬುದು ಡಾಯರೆಕ್ಟರರ ವರದಿಯು ಹೇಳುವುದು.

ಗಂಡು ಮಕ್ಕಳಿಗಾಗಿ ಮೊಟ್ಟ ಮೊದಲಿನವೆರಡು ಶಾಲೆಗಳು ಧಾರವಾಡ-ಹುಬ್ಬಳ್ಳಿಗಳಲ್ಲಿ ೧೮೨೬ ರಲ್ಲಿ ಸ್ಥಾಪಿತವಾದರೂ, ಹೆಣ್ಣು ಮಕ್ಕಳಿಗಾಗಿ ಪ್ರತ್ಯೇಕ ಶಾಲೆಗಳು ಸ್ಥಾಪಿತವಾಗಲು ೪೦ ವರ್ಷಗಳು ಬೇಕಾದವು. ೧೮೮೧-೮೨ ರಲ್ಲಿ ಒಟ್ಟಿಗೆ ೪೭ ಹೆಣ್ಣು ಮಕ್ಕಳ ಶಾಲೆಗಳು (೨೯೫ ವಿದ್ಯಾರ್ಥಿನಿಯರು) ಇದ್ದವು. ಧಾರವಾಡದಲ್ಲಿ ಜಾರ್ಡಿನ್ ಎಂಬ ಅಧಿಕಾರಿಯು ಒಂದು ಸಾವಿರ ರೂಪಾಯಿಗಳ ಠೇವಿನ ಬಡ್ಡಿಯಿಂದ ಹೆಣ್ಣು-ಮಕ್ಕಳಿಗಾಗಿ ಶಿಷ್ಯವೇತನಗಳನ್ನಿಟ್ಟು ಪ್ರೋತ್ಸಾಹಿಸಿದರು. ೧೮೯೧-೯೨ ರಲ್ಲಿ ಹೆಣ್ಣು ಮಕ್ಕಳ ಶಾಲೆಗಳ ಸಂಖ್ಯೆ ೬೯ ಕ್ಕೆ ಏರಿತು. ಒಟ್ಟಿಗೆ ವಿದ್ಯಾರ್ಥಿನಿಯರ ಸಂಖ್ಯೆ ಆಗ ೧೫,೧೮೪ ಎಂದು ಡಾಯರೆಕ್ಟರರ ವರದಿಯಿಂದ ಗೊತ್ತಾಗುವುದು. ಹೆಣ್ಣುಮಕ್ಕಳ ಶಾಲೆಗಳಲ್ಲಿ ತರಬೇತಿಯ ಶಿಕ್ಷಿಕೆಯರ ಬೇಡಿಕೆಯನ್ನು ಪೂರೈಸಲು ಧಾರವಾಡ ಲೋಕಲ್ ಬೋರ್ಡು ೧೮೯೫-೯೬ರಲ್ಲಿ ಹೆಣ್ಣುಮಕ್ಕಳ ಒಂದು ಟ್ರೇನಿಂಗ ಸ್ಕೂಲನ್ನು ತೆರೆಯಿತು. ಮುನಸಿಪಲ್ ೧ ನೆಯ ನಂ. ಶಾಲೆಯ ಮುಖ್ಯಾಧ್ಯಾಪಕರು ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರಾದ ಕರಂದೀಕರ ಅವರ ಮೇಲ್ವಿಚಾರಣೆಯಲ್ಲಿ ಅದನ್ನು ನಡಿಸುವ ಏರ್ಪಾಟು ಆಯಿತು. ಮುಂದೆ ೧೯೦೩-೪ ರಲ್ಲಿ ಸರಕಾರವು ಅದನ್ನು ತನ್ನ ವಶಕ್ಕೆ ತೆಗೆದುಕೊಂಡು, ೧೯೦೭-೮ ರಲ್ಲಿ ಅದನ್ನು ಉತ್ತಮವಾದ ಕಾಲೇಜನ್ನಾಗಿ ಮಾರ್ಪಡಿಸಿತು.

ಶಿಕ್ಷಕರ ವೇತನ ಶ್ರೇಣಿಗಳು ಆ ಕಾಲದಲ್ಲಿ ಹೇಗಿದ್ದುವೆಂಬುದನ್ನು ನೋಡ-ಬಹುದು. ೧೮೨೬ ರಲ್ಲಿ ಶಿಕ್ಷಕರ ವೇತನವು ರೂ. ೨೦/– ಇತ್ತು. ಆದರೆ ೧೮೩೭ ರಲ್ಲಿ ಪ್ರಾರಂಭದ ವೇತನ ರೂ. ೧೦/– ಎಂದು ನಿರ್ಧರಿಸಲಾಯಿತು. ಪರಿಸ್ಥಿತಿಯು ಬದಲಾದಂತೆ ವೇತನದಲ್ಲಿಯೂ ಬದಲಾವಣೆಗಳಾಗುತ್ತ ಹೋದವು. ೧೮೮೭ ರಲ್ಲಿ ಸರಕಾರವು ಕೆಳಗಿನಂತೆ ವೇತನ ಶ್ರೇಣಿಗಳನ್ನು ಮಂಜೂರು ಮಾಡಿತು :—

೧)	ಹಳ್ಳಿಯ ಪ್ರಾಥಮಿಕ ಶಿಕ್ಷಕರು....	ತಿಂಗಳಿಗೆ ರೂ. ೫/–
೨)	ತರಬೇತಿ ಹೊಂದದವರು....	೯/–
೩)	ಮೊದಲನೆಯ ವರ್ಷ ಟ್ರೇಂಡ....	೧೨/– ರಿಂದ ೨೦/–
೪)	ಎರಡನೆಯ ವರ್ಷ ಟ್ರೇಂಡ....	೨೦/– ರಿಂದ ೩೦/–
೫)	ಮೂರನೆಯ ವರ್ಷ ಟ್ರೇಂಡ....	೪೦/– ರಿಂದ ೬೦/–

ಆದರೆ ಮಂಜೂರಾದ ಶ್ರೇಣಿಗಳು ಶ್ರೇಣಿಗಳಾಗಿಯೇ ಉಳಿದವು. ಸರಕಾರಕ್ಕೆ ಯಾವಾಗಲೂ ಹಣದ ಕೊರತೆ. ಕೊನೆಯಲ್ಲಿ, ಸರ್ ಸಿ. ಎಚ್. ಸೆಟಲವಾಡ ಅವರು ಹಳ್ಳಿಯ ಶಿಕ್ಷಕರಿಗೆ ರೂ. ೭/– ಆದರೂ ಸಿಗಬೇಕೆಂದು ಒತ್ತಾಯ ಪಡಿಸಿದ ಮೇಲೆ ೧೮೯೬ ರಿಂದ ಕಳೆದ ಶತಮಾನದ ಮಟ್ಟಿಗೆ ಹಳ್ಳಿಯ ಶಿಕ್ಷಕರ ದೈವವು ತೆರೆದಂತಾ-ಯಿತು. ಟ್ರೇಂಡ ಶಿಕ್ಷಕರು ಮಾತ್ರ ಸಾಠೇ–ಪರಾಂಜಪೇ ಸ್ಕೇಲು ಬರುವವರೆಗೂ ಕಾಯ ಬೇಕಾಯಿತು.

೫. ಉಪಸಂಹಾರ :

ಪೇಶ್ವೆಯರ ರಾಜ್ಯವು ಬ್ರಿಟಿಶರ ವಶಕ್ಕೆ ಬಂದು ಮುಂಬಯಿ ಇಲಾಖೆಯು ರೂಪುಗೊಂಡ (೧೮೧೮) ಮೇಲೆ,೧೦–೧೨ ವರ್ಷಗಳು ಅದಕ್ಕೂ ಮುಂಚಿನ ದೇಶೀಯ ಶಿಕ್ಷಣದ ಗಣತಿಯ ಪರಿಶೀಲನೆಯಲ್ಲಿ ಸಂದುಹೋದವು. ಬ್ರಿಟಿಶರ ಪೂರ್ವದಲ್ಲಿ ಯಾವ ಮಟ್ಟದ ಶಿಕ್ಷಣವೂ ಹಿಂದಿನ ಸರಕಾರಗಳ ಆಡಳಿತದ ಪಟ್ಟಿಯಲ್ಲಿ ಇರಲಿಲ್ಲ. ಗಣತಿಯಲ್ಲಿ ಕಂಡುಬಂದ ನ್ಯೂನತೆಗಳ ಮೂಲಕ, ಬ್ರಿಟಿಶ್ ಸರಕಾರವು ದೇಶೀ ಪದ್ಧತಿಯನ್ನು ಪ್ರೋತ್ಸಾಹಿಸಿ ಮುಂದುವರಿಸಲು ಒಪ್ಪಲಿಲ್ಲ. ಸರಕಾರವು ತನ್ನದೇ ಆದ ಆಡಳಿತ ಕ್ರಮವನ್ನು ಏರ್ಪಡಿಸಿ, ಹೊಸದಾಗಿ ಶಾಲೆಗಳನ್ನು ಪ್ರಾರಂಭಿಸಲು ತೊಡಗಿತು. ೧೮೨೬ ರಲ್ಲಿ ಧಾರವಾಡ–ಹುಬ್ಬಳ್ಳಿಗಳಲ್ಲಿ ಪ್ರಾರಂಭಿಸಿದ ಎರಡು ಶಾಲೆಗಳಿಂದ ಮೊದಲುಗೊಂಡು, ೧೯೦೦ ರ ವರೆಗೆ ೧೨೫ ಶಾಲೆಗಳು ಮುಂಬೈ ಕರ್ನಾಟಕದಲ್ಲಿ ಸ್ಥಾಪಿತವಾದವು. ಅವುಗಳಲ್ಲಿ ೧೯೦೦ ನೆಯ ಸಾಲಿನಲ್ಲಿ ಸುಮಾರು ೫೧ ಸಾವಿರ ವಿದ್ಯಾರ್ಥಿಗಳು ಕಲಿಯುತ್ತಿದ್ದರೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬಹುದು.

ಈ ಸಂಖ್ಯಾತ್ಮಕ (Quantitative) ಪ್ರಗತಿ ಎಷ್ಟು ಭಾವಯುಕ್ತವಾದುದು ಎಂಬುದನ್ನು ಅಲ್ಲಗಳೆಯಲಾಗದು. ಆದಾಗ್ಯೂ ಅದರ ಹಿನ್ನೆಲೆಯಲ್ಲಿ ಕೆಲವು ಮಾತು

ಗಳು ಅಡಕವಾಗಿರುವುವು. ಮೊದಲನೆಯದಾಗಿ, ಮುಂಬಯಿ ಇಲಾಖೆಯಲ್ಲಿ ೧೮೩೦ ರ ದಶಕದಲ್ಲಿ ಸರಕಾರವು ಶಾಲೆಗಳನ್ನು ಸ್ಥಾಪಿಸುತ್ತಿದ್ದಾಗ, ಇಂಗ್ಲಂಡದಲ್ಲಿಯೂ ಸಾಕ್ಷರತೆಯ ಪ್ರಮಾಣವು ಸಾಮಾನ್ಯವಾಗಿ ಅಷ್ಟೇ ಇತ್ತು. ಇಂಗ್ಲಂಡದಲ್ಲಿ ಸರಕಾರವು ಖಾಸಗೀ ಶಿಕ್ಷಕರಿಗೆ ಪ್ರೋತ್ಸಾಹನೆ ನೀಡಿತು. ಹಿಂದುಸ್ತಾನದಲ್ಲಿ ಪ್ರಚಲಿತವಿದ್ದ 'ಮದ್ರಾಸ ಪದ್ಧತಿ'ಯನ್ನು ಅವಲಂಬಿಸಿ, ತನ್ನ ಪ್ರಾಥಮಿಕ ಶಿಕ್ಷಣದ ಪ್ರಗತಿಯನ್ನು ತೀವ್ರಗೊಳಿಸಿತು. ೧೮೭೨ ರಲ್ಲಿ—To educate our Masters- ಎಂಬ ಘೋಷಣೆಯಿಂದ ಇಂಗ್ಲಂಡದಲ್ಲಿ ಸಾರ್ವತ್ರಿಕ ಕಡ್ಡಾಯದ ಪ್ರಾಥಮಿಕ ಶಿಕ್ಷಣವು ಜಾರಿಯಲ್ಲಿ ಬಂದಿತು. In 1872 the percentage in schools to the total population was about 8. Within a decade it rose to 15 which meant that nearly all the children of the nation received primary education- ಇದು ಸುಪ್ರಸಿದ್ಧ ಶಿಕ್ಷಣ ತಜ್ಞರಾದ ಶ್ರೀ ಪರುಳೇಕರ ಅವರು ಹೇಳಿರುವ ಮಾತು. ಅವರೇ ಹೇಳಿದ ಇನ್ನೊಂದು ಮಾತು :— The percentage of literates among persons of the age 14 and above according to statistics collected by Adam in India was about 6 in 1836; today it is about 8 (1931)... It may be said that within a space of 100 years literacy in India was gone up by about 2 percent (Mass Education in India). ಈ ನೂರು ವರ್ಷಗಳಲ್ಲಿ ಸರಕಾರವು ತನ್ನದೇ ಆದ ಶಿಕ್ಷಣ ಇಲಾಖೆಯನ್ನು ಏರ್ಪಡಿಸಿದೆ. ಅಪಾರವಾಗಿ ಹಣವನ್ನು ವೆಚ್ಚಮಾಡಿದೆ. ಆದರೆ ಹೀಗಾಗಲು ಕಾರಣವೇನು?

ಮೊಟ್ಟ ಮೊದಲನೆಯ ಗವ್ಹರ್ನರರಾದ ಎಲ್‌ಫಿನ್‌ಸ್ಟನ್‌ರವರು ಸಾರ್ವತ್ರಿಕ ಶಿಕ್ಷಣದ ಪುರಸ್ಕರ್ತರಾಗಿದ್ದರು. ಆದರೆ ಪರಿಸ್ಥಿತಿಯು ಅದಕ್ಕೆ ಅನುಕೂಲವಿರಲಿಲ್ಲ. ಪೇಶ್ವೆಯವರ ದರಬಾರದೊಳಗಿನ ಅನೇಕ ಅಧಿಕಾರಿಗಳು, ಸರದಾರರು, ಜಮೀನದಾರರು, ಇನ್ನಿತರ ಹುದ್ದೆಯವರು ತಮ್ಮ ಸ್ಥಾನಮಾನಗಳನ್ನು ಕಳೆದುಕೊಂಡದ್ದರಿಂದ ಅಸಂತುಷ್ಟರಾಗಿದ್ದರು. ಈ ಮೇಲಿನ ವರ್ಗದವರ ಮಕ್ಕಳನ್ನು ಇಂಗ್ಲೀಷ ಶಿಕ್ಷಣದಲ್ಲಿ ತೊಡಗಿಸಿ, ಸರಕಾರೀ ನೌಕರಿಯಲ್ಲಿ ಸಿಲುಕಿಸಿದರೆ, ಆ ಅಸಂತೋಷವು ಕಡಿಮೆಯಾಗುವದೆಂಬುದು ಬ್ರಿಟೀಶ ಮುತ್ಸದ್ದಿಗಳ ಧೋರಣೆಯಾಗಿತ್ತು. Downward Filtration Theory ಎಂಬುದನ್ನು ಅದಕ್ಕಾಗಿಯೇ ಬಳಕೆಯಲ್ಲಿ ತರಲಾಯಿತು. ತಲೆಯ ಮೇಲೆ ನೀರೆರೆದರೆ ಪಾದದವರೆಗೂ ಬರುವುದು. ಇಂಥ ಗಂಗಾಸ್ನಾನವು ಅಭೂತ ಪೂರ್ವವಾದ ಈ ತತ್ತ್ವೋಪದೇಶದ ಒಳಗುಟ್ಟು. ಆದರಿಂದ ಮೇಲಿನ ವರ್ಗದವರಿಗೇ ಶಿಕ್ಷಣದ ಲಾಭ. ಅವರಿಗೇ ನೌಕರಿಗಳ ಸೌಲಭ್ಯ. ಈ ತತ್ವವು ವಾರ್ಡನ್ (ಎಲ್ಫಿನ್‌ಸ್ಟನ್ನನನ್ನು ವಿರೋಧಿಸಿದವನು) ಇವನಿಂದ ಹಿಡಿದು ಎಲ್ಲ D. P. I. ಗಳ ತಲೆಯಲ್ಲಿಯೂ ತುಂಬಿಕೊಂಡಿತ್ತು. ಇದರಿಂದ ಸುಶಿಕ್ಷಿತರಾದ ಬುದ್ಧಿಜೀವಿಗಳ

ಮಧ್ಯಮ ವರ್ಗವೊಂದು ನಿರ್ಮಾಣವಾಯಿತು. ಆ ಗಂಗಾಸ್ನಾನವು ಎಣ್ಣೆ ಮಜ್ಜನ ವಾಯಿತೇ ಹೊರತು, ಆ ಎಣ್ಣೆ ಪಾದಗಳವರೆಗೆ ಇಳಿದು ಬರಲಿಲ್ಲ. ಗ್ರಾಮಾಂತರದ ೮೦% ಒಕ್ಕಲುತನದ ವ್ಯವಸಾಯದವರಿಗೆ Sir Richard Temple ಹೇಳಿದ ಶೇತಕೀ ಶಿಕ್ಷಣ ಅವಕಾಶವಂತೂ ಈ ಹೊತ್ತಿಗೂ ದೊರೆಯಲಿಲ್ಲ.

ಮಿತವ್ಯಯದ ದೃಷ್ಟಿಯಿಂದ ಇದರ ಇತ್ಯರ್ಥವೇನು? ೧೯೩೦ ರ ಒಂದು ಪರಿಶೀಲನೆ ನಮಗೆ ದೊರೆಯುತ್ತದೆ. ಅದರ ಪ್ರಕಾರ ಪ್ರತಿಯೊಬ್ಬ ವಿದ್ಯಾರ್ಥಿಗೆ ಪ್ರಾಥಮಿಕ ಶಿಕ್ಷಣಕ್ಕಾಗಿ ಸರಕಾರವು ಮಾಡುತ್ತಿದ್ದ ವೆಚ್ಚ ಹೀಗಿದೆ:— ಬಂಗಾಲ ಸರಕಾರ: ರೂ. ೧-೫೦, ಮದ್ರಾಸ ಸರಕಾರ: ರೂ. ೪-೯೦; ಮುಂಬೈ ಸರಕಾರ: ರೂ. ೧೧-೧೧. ಮುಂಬೈ ಸರಕಾರವು ಎಷ್ಟು ಭಾರೀ ವೆಚ್ಚದಿಂದ ತನ್ನ ಧೋರಣೆಯನ್ನು ಮುಂದುವರಿಸುತ್ತಿತ್ತೆಂಬುದನ್ನು ಮನಗಾಣಬಹುದು

ಗುಣಮಟ್ಟದ (Qualitative) ಪರಿಶೀಲನೆಯಿಂದ ಈ ಸಮೀಕ್ಷೆಯನ್ನು ಮುಗಿಸಬಹುದು. ಮುಂಬೈ ಇಲಾಖೆಯಲ್ಲಿ ಸರಕಾರವು ಸ್ಥಾಪಿಸಿದ ಶಾಲೆಗಳಿಗೆ ಇಂಗ್ಲಂಡವೇ ಮಾದರಿಯಾಗಿತ್ತು. ಆಗ ಮುಂಬೈ-ಕರ್ನಾಟಕದಲ್ಲಿ ಎರಡು ಪ್ರಕಾರದ ಶಾಲೆಗಳು ಇದ್ದವು: (i) ವ್ಹರ್ನ್ಯಾಕ್ಯುಲರ ಶಾಲೆಗಳು (೬ ಇಯತ್ತೆ); (ii) ವ್ಹರ್ನ್ಯಾಕ್ಯುಲರ ಹಾಯ್‌ಸ್ಕೂಲುಗಳು. ಕನ್ನಡ ನಾಲ್ಕನೆಯ ಇಯತ್ತೆ ಪಾಸಾದ ಮೇಲೆಯೇ ಹಾಯ್‌ಸ್ಕೂಲುಗಳಿಗೆ ಪ್ರವೇಶವಿತ್ತು. ಅಲ್ಲಿ ಇಂಗ್ಲೀಷ ಮತ್ತು ಸಾಯನ್ಸ ವಿಷಯಗಳಿಗೆ ಪ್ರಾಧಾನ್ಯ. ೧೮೭೮ ರ ಸುಮಾರಿಗೆ ೧ನೆಯ ವರ್ಗ ಎರಡು ವರ್ಷದ್ದು; ಆ ಮೇಲೆ ೬ ವರ್ಗಗಳು. ೧ನೆಯ ವರ್ಗದ ಎರಡು ವರ್ಷಗಳ ಅವಧಿಯನ್ನು ಮುಂದೆ: ೧ ವರ್ಷ ಬಿನ್ ಇಯತ್ತೆ + ೧ ವರ್ಷ ೧ನೇ ಇಯತ್ತೆ- ಹೀಗೆ ವರ್ಗೀಕರಿಸಲಾಯಿತು. ಹಾಯಸ್ಕೂಲಿನ ಶಿಕ್ಷಣದ ಅವಧಿ ೭ ವರ್ಷ; ಅಲ್ಲಿಂದ ಮೆಟ್ರಿಕ್ಯುಲೇಶನ್ ಪರೀಕ್ಷೆ ಅದು ನಡೆಯುವದು ಮುಂಬೈ ವಿಶ್ವವಿದ್ಯಾಲಯದಿಂದ.

ಪ್ರಾಥಮಿಕ ಶಿಕ್ಷಣದಲ್ಲಿ ಅನುಸರಿಸುತ್ತಿದ್ದ ಪಠ್ಯಕ್ರಮ (Syllabus) ವನ್ನು ಕುರಿತು ಶ್ರೀ ಪರುಳೇಕರರು ಪರಿಶೀಲಿಸಿದ ಕೆಳಗಿನ ಅಂಶಗಳನ್ನು ಗಮನಿಸಬಹುದು:-

It will be both interesting and instructive to see how the Bombay educational administrators imposed the several "optional" subjects of the English schools on the Bombay Primary Schools, making them not "optional" as in England, but "obligatory". It would appear that as soon as it was discoverd in Bombay that a certain subject was introduced in the schools of England, it was soon prescribed for Bombay

schools, making the curriculum compulsory rich and richer even far more in advance of the *ordinary* English elementary school curriculum of the time, at least so far as the number of subjects was concerned. Efficiency was the ideal and no one can seriously blame those who were responsible for the education of Bombay in those days for their enthusiasm in time or even at a higher level than that of English schools of that time. ***For in those days the departmental ideal was efficiency rather than expansion****

Efficiency and high standard ಇದೇ ಸರಕಾರದ ಆದರ್ಶವಾಗಿದ್ದಾಗ ವೆಚ್ಚದ ಪ್ರಮಾಣವು ಹೆಚ್ಚಾಗಿ ಇರುವದು ಸ್ವಾಭಾವಿಕವೇ ಆಗಿರುವದು. ಮುಂಬೈ ಕರ್ನಾಟಕದ ಪ್ರಾಥಮಿಕ ಶಿಕ್ಷಣವು ೧೯ನೆಯ ಶತಮಾನದಲ್ಲಿ ಈ ಉಚ್ಚ ಆದರ್ಶಗಳಿಂದ ಪ್ರೇರಿತವಾಗಿದ್ದಿತೆಂದು ಭಾವಿಸುವದು ಅನಿವಾರ್ಯವಾಗಿರುವದು.

---

*Ref. also pp. 32-35 of : Hit of Pr. Ed. in the Province of Bombay (B. N. Vaidya) for the details.

ಆಧಾರ ಸಾಮಗ್ರಿ

1. Parulekar R V : A Source Book of History of Education (1945).
2. Vaidya B N. : History of Primary Education in the Province of Bombay (1947).
3. Vakil K. S. : Educational Pamphlets– Nos 7-8-9-10-11 (1940).
4. Parulekar R V.: Mass Education in India.
5. Desai V. B : History of Education in Bombay Karnataka (1973)

೧೯ನೆಯ ಶತಮಾನದಲ್ಲಿ ಮುಂಬೈ ಕರ್ನಾಟಕದ ಶಿಕ್ಷಣ ವಿಸ್ತರಣೆಯಲ್ಲಿ ಖಾಸಗಿ ಪ್ರಯತ್ನಗಳು (೧೮೫೪–೧೯೦೦)

—ಶ್ರೀ ಚ. ಸ. ಬೆನ್ನೂರ

೧೮೫೪ ರ ಪೂರ್ವದಲ್ಲಿ ಶಿಕ್ಷಣ :

೧೮೫೪ ರ ಹೊತ್ತಿಗೆ ನಮ್ಮ ಪ್ರಾಂತದಲ್ಲಿ ಇಂಗ್ಲೀಷ ಶಿಕ್ಷಣ ಆಗಲೇ ಆರಂಭವಾಗಿತ್ತು. ಯುರೋಪಖಂಡದ ಹಲವಾರು ಕ್ರಿಶ್ಚಿಯನ್ ಮಿಶನರಿಗಳು ಭಾರತಕ್ಕೆ ಬಂದು ತಮ್ಮ ಧರ್ಮಪ್ರಸಾರದ ಕಾರ್ಯವನ್ನು ಮಾಡಹತ್ತಿದ್ದರು. ಅದಕ್ಕಾಗಿ ಅವರು ಇಂಗ್ಲೀಷ ಶಾಲೆಗಳನ್ನು ತೆರೆದಿದ್ದರು. ಅಮೇರಿಕನ್ ಮಿಶನ್ನಿನವರು ೧೮೩೫ ರಲ್ಲಿ ಬೆಳಗಾವಿ ಜಿಲ್ಹೆಯಲ್ಲಿ ಹದಿನೈದು ಇಂಗ್ಲೀಷ ಶಾಲೆಗಳನ್ನು ನಡೆಸುತ್ತಿದ್ದರು. ಅದರಂತೆ ಜರ್ಮನಿಯ ಬಾಸೆಲ್ ಮಿಶನ್ನಿನವರು ಮಂಗಳೂರನ್ನು ತಮ್ಮ ಕೇಂದ್ರವನ್ನಾಗಿ ಮಾಡಿಕೊಂಡು ಕನ್ನಡ ನಾಡಿನಲ್ಲೆಲ್ಲಾ ತಮ್ಮ ಚಟುವಟಿಕೆಗಳನ್ನು ನಡೆಸಿದ್ದರು. ಧಾರವಾಡ,ಹುಬ್ಬಳ್ಳಿ, ಗದಗ, ವಿಜಾಪುರ, ಕಾರವಾರ, ಕುಮಟಾ ಮೊದಲಾದ ಊರುಗಳಲ್ಲಿ ಶಾಲೆಗಳನ್ನು ನಡೆಸುತ್ತಿದ್ದರು. ಇವರ ಶಾಲೆಗಳಲ್ಲಿ ಹೆಚ್ಚಾಗಿ ಧರ್ಮಾಂತರ ಹೊಂದಿದವರ, ಹಿಂದುಳಿದ ಜಾತಿಯ ಹಾಗು ಬಡಜನರ ಮಕ್ಕಳು ಶಿಕ್ಷಣ ಪಡೆಯುತ್ತಿದ್ದರು. ಇವರ ಶಾಲೆಗಳಲ್ಲಿ ಸಹ ಶಿಕ್ಷಣ ರೂಢಿಯಲ್ಲಿತ್ತು. ಅಚ್ಚು ಹಾಕಿದ ಪುಸ್ತಕ ಪಾಟಿ ನಕಾಶ ಚಿತ್ರಪಟ ಮೊದಲಾದವುಗಳನ್ನು ಉಪಯೋಗಿಸುತ್ತಿದ್ದರು. ಇಂಗ್ಲೀಷ ಹಾಗು ಕನ್ನಡ ಭಾಷೆಗಳೆರಡನ್ನು ಕಲಿಸುತ್ತಿದ್ದರು. ಜೊತೆಗೆ ಕ್ರಿಶ್ಚಿಯನ್ ಧರ್ಮದ ತತ್ವಗಳನ್ನು, ಬಾಯಬಲ್ಲಿನ ಕಥೆಗಳನ್ನು, ಹಾಡುಗಳನ್ನು ಕಲಿಸುತ್ತಿದ್ದರು. ತಮ್ಮ ಮಕ್ಕಳು ಸ್ವಾವಲಂಬಿಗಳಾಗಬೇಕೆಂದು ಅವರಿಗೆ ಉದ್ಯೋಗ ಶಿಕ್ಷಣವನ್ನು ಕೊಡುತ್ತಿದ್ದರು. ಆದುದರಿಂದ ಮಿಶನರಿ ಶಾಲೆಗಳು ಒಂದು ರೀತಿಯಲ್ಲಿ "ಆಧುನಿಕ" ಶಿಕ್ಷಣದ ಅಗ್ರಗಾಮಿಗಳಾಗಿದ್ದವು.

ಮಿಶನರಿ ಶಾಲೆಗಳಲ್ಲದೆ ಪರಂಪರಾಗತವಾಗಿ ಬಂದ "ಗಾವಠಿ" ಶಾಲೆಗಳೂ ನಮ್ಮಲ್ಲಿ ಇದ್ದವು. ಅವುಗಳಿಗೆ 'ಅಯ್ಯನವರ' ಶಾಲೆಗಳೆಂದು ಹೆಸರು. ಅವು ಹೆಚ್ಚಾಗಿ ಮಠಗಳಲ್ಲಿ ನಡೆಯುತ್ತಿದ್ದುದರಿಂದ ಅವುಗಳಿಗೆ 'ಮಠ'ಗಳೆಂದೂ ಕರೆಯುತ್ತಿದ್ದರು.

ಶ್ರೀ ಚ. ಸ. ಬೆನ್ನೂರ ಅವರು ಸಾ. ವಿ. ಇಲಾಖೆಯ ಉಪನಿರ್ದೇಶಕರಾಗಿ, ಕರ್ನಾಟಕ ವಿಶ್ವವಿದ್ಯಾಲಯದ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಮತ್ತು ಸ್ನಾತಕೋತ್ತರ ಶಿಕ್ಷಣ ಅಧ್ಯಯನ ವಿಭಾಗದ ಮುಖ್ಯಸ್ಥರಾಗಿ ನಿವೃತ್ತಿ ಹೊಂದಿದ್ದು ಸಧ್ಯ ಧಾರವಾಡದ ಕಲ್ಯಾಣ ನಗರದಲ್ಲಿ ವಾಸಿಸಿದ್ದಾರೆ.

ಪ್ರತಿಯೊಂದು ಹಳ್ಳಿಯಲ್ಲಿ ಒಂದು ಮಠವು ಇದ್ದೇ ಇರುತ್ತಿತ್ತು. ಆದುದರಿಂದ ಪ್ರತಿ ಹಳ್ಳಿಗೆ ಒಂದು ಶಾಲೆ ಇರುತ್ತಿತ್ತು. ಈ "ಮಠಗಳು" ನಮ್ಮ ನಾಡಿನ ಶಿಕ್ಷಣ ಸಂಸ್ಕೃತಿಗಳ ಬೆನ್ನೆಲುಬುಗಳಾಗಿದ್ದವು.

ಅಯ್ಯನವರು ಅಷ್ಟೊಂದು ಘನ ಪಂಡಿತರಾಗಿರದಿದ್ದರೂ ತಕ್ಕಮಟ್ಟಿಗೆ ಓದಿಕೊಂಡವರಾಗಿದ್ದರು. ಅವರು ಕಲಿಸುವದರ ಜೊತೆಗೆ ಜೋತಿಷ್ಯ, ಔಷಧೋಪಚಾರಗಳ ಬಗೆಗೆ ಜನರಿಗೆ ತಿಳಿವಳಿಕೆ ನೀಡುತ್ತಿದ್ದರು. ಹೀಗಾಗಿ ಅಯ್ಯನವರು ಹಳ್ಳಿಯಲ್ಲಿ ಜನಪ್ರಿಯ ವ್ಯಕ್ತಿಯಾಗಿದ್ದರು. ಅವರ ಯೋಗ ಕ್ಷೇಮವನ್ನು ಹಳ್ಳಿಯವರೇ ನೋಡಿಕೊಳ್ಳುತ್ತಿದ್ದರು.

ಈ ಶಾಲೆಗಳಲ್ಲಿ ಓದು ಬರಹ ಗಣಿತ ವಿಷಯುಗಳನ್ನು ಕಲಿಸುತ್ತಿದ್ದರು. ಬರಹಕ್ಕೆ ಹೆಚ್ಚಿನ ಗಮನ ಕೊಡುತ್ತಿದ್ದರು. ಸುಂದರ ಹಾಗು ಸ್ಪಷ್ಟ ಅಕ್ಷರಗಳನ್ನು ಬರೆಯಲು ಕಲಿಸುತ್ತಿದ್ದರು. ಹಾಗು 'ಕಿತ್ತೆ' ಬರೆಸುತ್ತಿದ್ದರು. ಮನೆತನದ ವ್ಯವಹಾರಗಳಿಗೆ ಅವಶ್ಯವಾಗ ಸರಳ ಜಮಾಖರ್ಚು ಲೆಖ್ಖಗಳನ್ನು ಕಲಿಸುತ್ತಿದ್ದರು. ಇತಿಹಾಸ ಭೂಗೋಲ ಸಾಮಾನ್ಯ ವಿಜ್ಞಾನ ಮೊದಲಾದ ವಿಷಯಗಳಿರಲಿಲ್ಲ.

ಅಯ್ಯನವರೇ ಎಲ್ಲ ವಿದ್ಯಾರ್ಥಿಗಳಿಗೆ ಕಲಿಸುತ್ತಿದ್ದರು. ಕಲಿಸುವಾಗ ತಮ್ಮ ಹಿರಿಯ ಶಿಷ್ಯರನ್ನು ಸಹಾಯಕ್ಕೆ ತೆಗೆದುಕೊಂಡು, ಅವರ ಮುಖಾಂತರ ಕಿರಿಯ ವಿದ್ಯಾರ್ಥಿಗಳಿಗೆ ಕಲಿಸುತ್ತಿದ್ದರು.

ಮಿಶನರಿ, ಹಾಗು ಅಯ್ಯನವರ ಶಾಲೆಗಳಲ್ಲದೆ ನಮ್ಮ ನಾಡಿನಲ್ಲಿ ಸರಕಾರದಿಂದ ಪ್ರೇಷಿತವಾದ ಶಾಲೆಗಳೂ ಇದ್ದವು. ೧೮೧೮ ರಲ್ಲಿ ಮೌಂಟ ಸ್ಟುಅರ್ಟ ಎಲ್ಪಿನ್‌ಸ್ಟನ್ ಮುಂಬೈ ಪ್ರಾಂತದ ಗವ್ಹರ್ನರರಾಗಿ ಬಂದರು. ಅವರ ಪುರಸ್ಕಾರ ಹಾಗು ಪ್ರೋತ್ಸಾಹಗಳಿಂದ ೧೮೨೦ ರಲ್ಲಿ ನೇಟಿವ್ಹ ಎಜ್ಯುಕೇಶನ್ ಸೊಸಾಯಿಟಿ ೧೮೨೭ ರಲ್ಲಿ ಬಾಂಬೆ ಸ್ಕೂಲ ಆ್ಯಂಡ ಟೆಕ್ಸ ಬುಕ್ ಸೊಸಾಯಿಟಿಗಳೆಂಬ ಖಾಸಗಿ ಸಮಿತಿಗಳು ಶಾಲೆಗಳನ್ನು ತೆಗೆಯ ಹತ್ತಿದವು. ಆದರೆ ಅವರ ಕಾರ್ಯವು ದಿನೇ ದಿನೇ ಹೆಚ್ಚು ಬೆಳೆಯ ಹತ್ತಿದ್ದರಿಂದ ಅವುಗಳನ್ನು ವಿಸರ್ಜಿಸಿ, ೧೮೪೦ ರಲ್ಲಿ ಬೋರ್ಡ ಆಫ್ ಎಜ್ಯುಕೇಶನ್ ಎಂಬ ಮತ್ತೊಂದು ಸಮಿತಿಯನ್ನು ಸ್ಥಾಪಿಸಿದರು. ಈ ಬೋರ್ಡು, ಸರಕಾರದ ವಿದ್ಯಾ ಇಲಾಖೆಯು (D. P. I. Office) ಕಾರ್ಯಾರಂಭ ಮಾಡುವವರೆಗೂ ಮುಂಬೈ ಪ್ರಾಂತದ ಶಿಕ್ಷಣದ ಆಡಳಿತವನ್ನು ನೋಡಿಕೊಳ್ಳುತ್ತಿತ್ತು.

ಈ ಬೋರ್ಡು ಇಡಿ ಮುಂಬೈ ಪ್ರಾಂತವನ್ನು ಮೂರು ಭಾಗಗಳನ್ನಾಗಿ ಮಾಡಿ, ಪ್ರತಿಯೊಂದು ಭಾಗಕ್ಕೆ ಒಬ್ಬ ವಿದ್ಯಾಧಿಕಾರಿಯನ್ನು (Inpsector) ನೇಮಿಸಿ ತನ್ನ ಆಡಳಿತವನ್ನು ನಡೆಸ ಹತ್ತಿತ್ತು. ದೊಡ್ಡ ಊರುಗಳಲ್ಲಿ ಬೋರ್ಡಿನವರೇ ಶಾಲೆಗಳನ್ನು

ತೆರೆಯುತ್ತಿದ್ದರು. ಪ್ರತಿಯೊಬ್ಬ ವಿದ್ಯಾರ್ಥಿಯಿಂದ ಒಂದಾಣೆ ಶುಲ್ಕವನ್ನು ಎತ್ತು-ತ್ತಿದ್ದರು. ಓದು ಬರಹ ಗಣಿತ ವಿಷಯಗಳಲ್ಲಿ, ಸಾಮಾನ್ಯಜ್ಞಾನದ ಪಾಠಗಳನ್ನು ಕಲಿಸುತ್ತಿದ್ದರು. ಅಚ್ಚು ಹಾಕಿದ ಪುಸ್ತಕಗಳನ್ನು ಉಪಯೋಗಿಸುತ್ತಿದ್ದರು. ವಾರ್ಷಿಕ ಪರೀಕ್ಷೆಗಳನ್ನು ನಡೆಸಿ ಮೇಲ್ತರಗತಿಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಪಾರಿತೋಷಕ ಗಳನ್ನು ಕೊಡುತ್ತಿದ್ದರು. ಅಲ್ಲದೆ ಒಳ್ಳೆ ಶಿಕ್ಷಕರಿಗೆ ಮನ್ನಣೆ, ಪುರಸ್ಕಾರಗಳನ್ನು ಕೊಡು-ತ್ತಿದ್ದರು.

ಈ ಶಾಲೆಗಳಲ್ಲಿ ಮೇಲಿನ ವರ್ಗಗಳಲ್ಲಿ ಇಂಗ್ಲೀಷ ಭಾಷೆಯನ್ನು ಕಲಿಸುತ್ತಿದ್ದರು. ಉತ್ತಮ ತರಗತಿಯಲ್ಲಿ ಪಾಸಾದವರಿಗೆ ಸರಕಾರಿ ನೌಕರಿಯೂ ಸಿಗುತ್ತಿತ್ತು.

ಬೋರ್ಡಿನವರು ಸ್ವತಃ ಶಾಲೆಗಳನ್ನು ನಡೆಸುತ್ತಿದ್ದುದಲ್ಲದೆ ಸ್ಥಳೀಯ ಜನರು ಮುಂದೆ ಬಂದು ತಮ್ಮ ಶಾಲೆಗಳನ್ನು ತಾವೇ ನಡೆಸಲೆಂದು ಬಗೆದು ಸಹಾಯ ಧನ ವನ್ನೂ ಕೊಡುತ್ತಿದ್ದರು. ಅದಕ್ಕಾಗಿ "ಆಂಶಿಕ ಸ್ವಾವಲಂಬನ ಪದ್ಧತಿ" (Partials Self-Supporting System) ಎಂಬ ಸಹಾಯಧನ ಪದ್ಧತಿಯನ್ನು ಜಾರಿಯಲ್ಲಿ ತಂದರು. ಇದರ ಮೇರೆಗೆ ಯಾವ ಹಳ್ಳಿಯ ಜನರು ಶಾಲೆಗೋಸ್ಕರ ಒಂದು ಕಟ್ಟಡ ಹಾಗು ಶಿಕ್ಷಕನ ಸಂಬಳದ ಅರ್ಧ ಭಾಗವನ್ನು ಕೊಡಲು ಸಿದ್ಧರಿರುತ್ತಾರೋ ಅಂಥವರಿಗೆ ಶಾಲೆಯನ್ನು ತೆರೆಯಲು ಅನುಮತಿ ನೀಡುವುದಲ್ಲದೆ ಶಾಲೆಯ ಉಳಿದ ಖರ್ಚನ್ನು ತಾವೇ ವಹಿಸುವದಾಗಿ ಸಾರಿದ್ದರು. ಇದೇ ಸಹಾಯ ಧನ ಪದ್ಧತಿಯ ಆರಂಭ. ಭಾರತದಲ್ಲಿ ಮೊದಲಿಗೆ ಆರಂಭವಾದದ್ದು ನಮ್ಮ ಪ್ರಾಂತದಲ್ಲಿಯೆ.

ಈ ರೀತಿಯಾಗಿ ೧೮೫೪ ರ ಪೂರ್ವದಲ್ಲಿ ಮುಂಬೈ-ಕರ್ನಾಟಕದಲ್ಲಿ ಅಯ್ಯ-ನವರ ಶಾಲೆಗಳು, ಮಿಶನರಿ ಶಾಲೆಗಳು, ಸರಕಾರಿ ಶಾಲೆಗಳು ಕೆಲಸ ಮಾಡುತ್ತಿದ್ದವು. ಪ್ರಾಥಮಿಕ ಹಾಗು ಮಾಧ್ಯಮಿಕ ಶಾಲೆಗಳಿದ್ದವು. ಆದರೆ ಕಾಲೇಜುಗಳಿರಲಿಲ್ಲ. ಉಚ್ಚ ಶಿಕ್ಷಣಕ್ಕಾಗಿ ವಿದ್ಯಾರ್ಥಿಗಳು ಪುಣೆ ಮುಂಬೈಗಳಿಗೆ ಹೋಗುತ್ತಿದ್ದರು.

ಚಾರ್ಲಸ್-ವುಡ್ಡನ ಶಿಕ್ಷಣ ಶ್ವೇತ ಪತ್ರ ೧೮೫೪ (Woods Despatch) :

ಆಗಿನ ಭಾರತದಲ್ಲಿ ಹಲವಾರು ಸಂಘ ಸಂಸ್ಥೆಗಳು, ಶಾಲೆಗಳು ಪರಂಪರಾಗತ ಶಾಲೆಗಳು ಸರಕಾರಿ ಶಾಲೆಗಳು ಮಿಶನರಿ ಕಾಲೇಜುಗಳು ಕೆಲಸ ಮಾಡುತ್ತಿದ್ದವು. ಆದರೆ ಇವೆಲ್ಲವುಗಳನ್ನು ನಿಯಂತ್ರಿಸಲು ಒಂದೇ ಬಗೆಯಾದ ಆಡಳಿತ ವ್ಯವಸ್ಥೆ ಇರಲಿಲ್ಲ ಹಾಗೂ ಉಚ್ಚ ಶಿಕ್ಷಣವನ್ನು ಸಮನ್ವಯಗೊಳಿಸಲು ವಿಶ್ವವಿದ್ಯಾಲಯಗಳೂ ಇರಲಿಲ್ಲ. ಅಲ್ಲದೆ ಇಡೀ ಭಾರತಕ್ಕೆ ಅನ್ವಯವಾಗುವಂಥ ಒಂದು ನಿಶ್ಚಿತ ಧ್ಯೇಯ ಹಾಗೂ ಧೋರಣೆಗಳಿರಲಿಲ್ಲ. ಇಂಥ ಸಮಯದಲ್ಲಿ ಕಂಪನಿ ಸರಕಾರದ ಸನದು ಪುನರ್‌ನವೀಕರಣಕ್ಕಾಗಿ ಬ್ರಿಟಿಶ್ ಪಾರ್ಲಿಮೆಂಟಿನ ಮುಂದೆ ಬಂದಿತು. ಆಗ ಅವರು ಭಾರತೀಯ ಶಿಕ್ಷಣದಲ್ಲಿ ಕಂಡು ಬರುವ ಲೋಪ ದೋಷಗಳನ್ನು ಹೋಗಲಾಡಿಸುವ

ದೃಷ್ಟಿಯಿಂದ ಹಾಗು ಅದಕ್ಕೊಂದು ನಿಶ್ಚಿತ ಸ್ವರೂಪ ಮತ್ತು ಧ್ಯೇಯವನ್ನು ಸೂಚಿಸುವ ಉದ್ದೇಶದಿಂದ ಸರ್ ಚಾರ್ಲಸ್‌ವುಡ್ ಎಂಬ ಶಿಕ್ಷಣ ತಜ್ಞನ ಹಿರಿಯತನದಲ್ಲಿ ಒಂದು ಶಿಕ್ಷಣ ಆಯೋಗವನ್ನು ನೇಮಿಸಿದರು. ಈ ಆಯೋಗದವರು ತಮ್ಮ ಸಲಹೆ ಸೂಚನೆಗಳನ್ನು ಪಾರ್ಲಿಮೆಂಟಿನವರಿಗೆ ಸಾದರ ಪಡಿಸಿದರು. ಮುಂದೆ ಅವರು ಕಂಪನಿ ಸರಕಾರಕ್ಕೆ ತಮ್ಮ ಶಿಫಾರಸುಗಳನ್ನು ಕಾರ್ಯರೂಪಕ್ಕೆ ತರಲು ಆಜ್ಞೆ ಮಾಡಿದರು. ಇದು "ವುಡ್ಸ ಡಿಸ್ಪೈಚ್" ಅಥವಾ ವುಡ್ಡನ ಶಿಕ್ಷಣ ಶ್ವೇತ–ಪತ್ರವೆಂದು ಹೆಸರಾಗಿದೆ. ಭಾರತೀಯ ಶಿಕ್ಷಣದ ಇತಿಹಾಸದಲ್ಲಿ ಇದು ಅತ್ಯಂತ ಮಹತ್ವದ ಸಂಗತಿ. ಯಾಕಂದರೆ ಇದು ಭಾರತೀಯ ಶಿಕ್ಷಣಕ್ಕೆ ಭದ್ರವಾದ ಬುನಾದಿಯನ್ನು ಹಾಕಿತು. ಹಾಗೂ ಬೆಳವಣಿಗೆಯ ದಿಕ್ಕು ದಿಶೆಗಳನ್ನು ಸೂಚಿಸಿತು. ಮೇಲಾಗಿ ಪ್ರಾಥಮಿಕ ಶಾಲೆಗಳಿಂದ ವಿಶ್ವವಿದ್ಯಾಲಯದವರೆಗಿನ ಎಲ್ಲ ಸಂಸ್ಥೆಗಳಲ್ಲಿ ಏಕಸೂತ್ರತೆಯನ್ನು ರೂಪಿಸಿತು. ಇದರಿಂದ ಭಾರತೀಯ ಶಿಕ್ಷಣ ಸಮಗ್ರವಾಗಿ ವ್ಯವಸ್ಥಿತ ರೀತಿಯಿಂದ ಬೆಳೆಯಲು ಅನುಕೂಲವಾಯಿತು. ಅವರು ರೂಪಿಸಿದ ವ್ಯವಸ್ಥೆಯೇ ಇಂದಿಗೂ ನಡೆದಿದೆ.

ಆಯೋಗದ ಶಿಫಾರಸುಗಳು :

ಈ ಆಯೋಗವು ಕೆಲವು ಮಹತ್ವದ ಶಿಫಾರಸುಗಳನ್ನು ಮಾಡಿತು—

(೧) ಶಿಕ್ಷಣದ ಎಲ್ಲ ಹಂತಗಳಲ್ಲಿ ಬೆಳವಣಿಗೆ ಅವಶ್ಯವಿದ್ದರೂ ಜನ ಸಾಮಾನ್ಯರ ಶಿಕ್ಷಣಕ್ಕೆ ವಿಶೇಷವಾದ ಗಮನ ಕೊಡಬೇಕು.

(೨) ಭಾರತೀಯ ಶಿಕ್ಷಣದ ಗುರಿ "ಯುರೋಪಿಯನ್ ಜ್ಞಾನ, ವಿಜ್ಞಾನ, ಕಲೆಗಳನ್ನು" ಪ್ರಸಾರ ಮಾಡುವದೇ ಆಗಿದೆ.

(೩) ಪ್ರತಿಯೊಂದು ಪ್ರಾಂತದಲ್ಲಿ ಒಂದು ವಿದ್ಯಾ ಇಲಾಖೆಯನ್ನು ಸ್ಥಾಪಿಸಬೇಕು.

(೪) ಮುಂಬೈ, ಮದ್ರಾಸ ಹಾಗು ಕಲಕತ್ತೆ ನಗರಗಳಲ್ಲಿ ಒಂದೊಂದು ವಿಶ್ವವಿದ್ಯಾಲಯ ಸ್ಥಾಪಿಸಬೇಕು.

(೫) ಶಿಕ್ಷಣ ರಂಗದಲ್ಲಿ ಸರಕಾರದ ಜೊತೆಗೆ ಖಾಸಗೀ ಸಂಸ್ಥೆಗಳೂ ಪಾತ್ರವಹಿಸಬೇಕು. ಅವರಿಗಾಗಿ ಒಂದು "ಸಹಾಯಧನ ಪದ್ಧತಿಯನ್ನು" ಜಾರಿಯಲ್ಲಿ ತರಬೇಕು.

(೬) ಹಿಂದುಳಿದ ಪ್ರದೇಶಗಳಲ್ಲಿ ಸರಕಾರವೇ ಮುಂದೆ ಬಂದು ಶಾಲೆಗಳನ್ನು ತೆರೆಯಬೇಕು. ಮಾಧ್ಯಮಿಕ ಹಾಗು ಉಚ್ಚ ಶಿಕ್ಷಣ ಕ್ಷೇತ್ರದಿಂದ ಕ್ರಮೇಣ ಸರಕಾರವು ಹಿಂದೆ ಸರಿಯಬೇಕು.

(೭) ಧಾರ್ಮಿಕ ಶಿಕ್ಷಣದಲ್ಲಿ ಸರಕಾರವು ಕೈಹಾಕಬಾರದು. ಸಹಾಯ ಧನವನ್ನು ಸಾಮಾನ್ಯ ಶಿಕ್ಷಣಕ್ಕೆ ಕೊಡಬೇಕು.

(೮) ದೇಶೀ ಶಾಲೆಗಳಿಗೆ ಪ್ರೋತ್ಸಾಹ ನೀಡಿ, ಅವು ಸರಕಾರದ ಆಡಳಿತಕ್ಕೆ ಒಳಪಡುವಂತೆ ಮಾಡಬೇಕು.

........ಇತ್ಯಾದಿ, ಇವುಗಳನ್ನು ಕೇಂದ್ರಸರಕಾರವು ಎಲ್ಲ ಪ್ರಾಂತೀಯ ಸರಕಾರಗಳಿಗೆ ಜಾರಿಯಲ್ಲಿ ತರುವಂತೆ ಆಜ್ಞೆ ಮಾಡಿತು. ಇದರಿಂದ ಭಾರತದಲ್ಲಿ ಆಧುನಿಕ ಶಿಕ್ಷಣದ ಹೊಸ ಯುಗವು ಆರಂಭವಾಯಿತು.

ಮುಂಬೈ ಪ್ರಾಂತದಲ್ಲಿ ಶಿಕ್ಷಣ :

ಮುಂಬೈ ಪ್ರಾಂತದ ಮೊದಲನೆಯ ಡಿ.ಪಿ.ಐ. ಆಗಿದ್ದ ಸಿ.ಜೆ. ಅರ್ಸ್ಕೈನ್ ಅವರು ಈ ಶಿಫಾರಸುಗಳನ್ನು ಆಚರಣೆಯಲ್ಲಿ ತರಲು ಯೋಜನೆಗಳನ್ನು ಮಾಡಿದರು. ಆದರೆ ಅವರ ಆರೋಗ್ಯವು ಚೆನ್ನಾಗಿಲ್ಲದ್ದರಿಂದ ಅವರು ರಾಜೀನಾಮೆ ಕೊಟ್ಟು ಹೋದರು. ಅವರ ತರುವಾಯ **ಪೆರಿ** ಅನ್ನುವವರು ಅಧಿಕಾರಕ್ಕೆ ಬಂದರು. ಅವರು ಶಿಕ್ಷಣ ಕೆಳಗಿನಿಂದ ಮೇಲಕ್ಕೆ ಪ್ರಸಾರವಾಗುವ ಬದಲು ಮೇಲಿನಿಂದ ಕೆಳಗೆ ಪ್ರಸಾರವಾಗುತ್ತದೆಂದು ನಂಬಿದ್ದರು. (Downward filtration) ಆದುದರಿಂದ ಅವರು ಜನಸಾಮಾನ್ಯರ ಶಿಕ್ಷಣಕ್ಕೆ ಆದ್ಯತೆ ಕೊಡುವ ಬದಲು ಮೇಲ್ತರಗತಿಯ ಜನರ ಶಿಕ್ಷಣಕ್ಕಾಗಿ, ಆದ್ಯತೆ ಕೊಟ್ಟು, ಇಂಗ್ಲೀಷ ಶಾಲೆಗಳನ್ನು ತೆರೆಯ ಹತ್ತಿದರು. ಮತ್ತು ಖಾಸಗಿ ಸಂಸ್ಥೆಗಳಿಗೆ ಸಹಾಯ ಮಾಡುವ ಬದಲು ಸರಕಾರವೇ ಶಾಲೆಗಳನ್ನು ತೆರೆಯುವಂತೆ ಮಾಡಿದರು. ಇವರ ತರುವಾಯ ಬಂದ **ಹಾವರ್ಡ** ಅವರು ೧೮೫೭ರ ಕ್ರಾಂತಿಯಿಂದ ಸ್ವಲ್ಪ ಹೆದರಿದವರಾಗಿದ್ದರು. ಬಹಳ ಜಾಗರೂಕತೆಯಿಂದ ಆಡಳಿತ ಸಾಗಿಸಿದರು. ಅವರು ಮಿಶನರಿ ಜನರ ವಿಷಯದಲ್ಲಿ ಬಹಳ ಬಿಗುವಿನ ಧೋರಣೆಯನ್ನು ಅನುಸರಿಸಿದರು. ಅವರ ಶಾಲೆಗಳಿಗೆ ಸಹಾಯ ಧನವನ್ನೇ ಕೊಡಲಿಲ್ಲ. ಸರಕಾರವೇ ಶಾಲೆಗಳನ್ನು ನಡೆಸಬೇಕೆಂದು ನಂಬಿದ್ದರು. ಆದುದರಿಂದ ಸರಕಾರೀ ಶಾಲೆಗಳನ್ನೇ ತೆರೆಯ ಹತ್ತಿದರು. ಈ ಶಾಲೆಗಳಿಗೆ ಹಣ ಒದಗಿಸುವ ದೃಷ್ಟಿಯಿಂದ ೧೮೬೨ರಲ್ಲಿ ಒಂದು ಕಾಯದೆ ಪಾಸು ಮಾಡಿದರು. ಇದರ ಪ್ರಕಾರ ನಗರ ಸಭೆಯವರು (Municipality) ತಮ್ಮ ಕ್ಷೇತ್ರದಲ್ಲಿಯ ಶಾಲೆಗಳ ನಿರ್ವಾಹಣೆಯ ಖರ್ಚಿನ ಕೆಲವೊಂದು ಭಾಗವನ್ನು ಹೊರುವಂತೆ ಕಡ್ಡಾಯ ಮಾಡಿದರು. ಅದರಂತೆ ೧೮೬೯ರಲ್ಲಿ ಮತ್ತೊಂದು ಕಾಯದೆ ಮಾಡಿ ಭೂ–ತೆರಿಗೆಯಲ್ಲಿ ಕೆಲವೊಂದು ಭಾಗವನ್ನು ಶಿಕ್ಷಣಕ್ಕೆ ಮೀಸಲಿಡುವಂತೆ ಮಾಡಿದರು. ಇದರಿಂದ ಸರಕಾರದ ಬಳಿ ಸಾಕಷ್ಟು ಹಣ ಸಂಗ್ರಹವಾಯಿತು. ಆಮೇಲೆ ಸರಕಾರಕ್ಕೆ ಹೊಸ ಹೊಸ ಶಾಲೆಗಳನ್ನು ತೆರೆಯಲು ಅನುಕೂಲವಾಯಿತು. ಅದರಂತೆ ಖಾಸಗಿ ಸಂಸ್ಥೆಗಳು ಮುಂದೆ ಬರಲು ಅನುಕೂಲವಾಗಲೆಂದು ಅಂಶಿಕ ಸಹಾಯಧನ ಪದ್ಧತಿಯನ್ನು ಮಾರ್ಪಡಿಸಿ– ಒಂದು ಹೊಸ ಸಹಾಯ ಧನ ಪದ್ಧತಿಯನ್ನು ರಚಿಸಿದರು.

(೧೮೬೩) ಇದರಂತೆ ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳ ಸಂಖ್ಯೆಯ ಮೇಲೆ ಸಹಾಯ ಧನವನ್ನು ನಿರ್ಧರಿಸಲಾಗುತ್ತಿತ್ತು. ಇದು ಅಷ್ಟೊಂದು ಉದಾರವಾಗಿದ್ದಿಲ್ಲ. ಆದರೂ ಮಿಶನರಿಗಳು ಇದನ್ನು ಸ್ವಾಗತಿಸಿ ಕಾರ್ಯಮಾಡಹತ್ತಿದರು. ಹಾವರ್ಡ ಇರುವವರೆಗೆ ಅವರಿಗೆ ಧನ ಸಹಾಯ ಸಿಗಲಿಲ್ಲ, ಮುಂದೆ ಗ್ರಾಂಟ ಎಂಬವರು ಡಿ. ಪಿ. ಐ. ಆಗಿ ಬಂದ ಮೇಲೆ ಮಿಶನರಿಗಳು ತಮ್ಮ ಕಷ್ಟಗಳನ್ನು ಅವರಿಗೆ ನಿವೇದಿಸಿ ಕೊಂಡರು. ಅವರು ಸಹಾಯ ಧನದ ನಿಯಮಗಳನ್ನು ಉದಾರಗೊಳಿಸಿ (೧೮೬೫) ಮಿಶನರಿಗಳಿಗೆ ಧನ ಸಹಾಯವು ಸಿಗುವಂತೆ ಮಾಡಿದರು. ಹೀಗಾಗಿ ೧೮೬೨–೧೮೮೨ ರ ವರೆಗೆ ನಮ್ಮ ಪ್ರಾಂತದಲ್ಲಿ ಸರಕಾರಿ ಶಾಲೆಗಳು ಹೆಚ್ಚಾದವು. ಸಹಾಯ ಧನ ಪಡೆಯುವ ಮಿಶನರಿ ಶಾಲೆಗಳು ಹೆಚ್ಚಾದವು, ಆದರೆ ಗಾವಠಿ ಶಾಲೆಗಳು ಪ್ರೋತ್ಸಾಹವಿಲ್ಲದ್ದಕ್ಕೆ ಕಡಿಮೆಯಾಗ ಹತ್ತಿದವು.

ಮಿಶನರಿಗಳ ಚಳವಳಿ :

ಚಾರ್ಲಸ್ ವುಡ್ ಆಯೋಗವು ಮಾಧ್ಯಮಿಕ ಹಾಗು ಉಚ್ಚ ಶಿಕ್ಷಣ ಕ್ಷೇತ್ರ ದಿಂದ ಸರಕಾರವು ಕ್ರಮೇಣ ಹಿಂದೆ ಸರಿಯಬೇಕೆಂದು ಶಿಫಾರಸು ಮಾಡಿತ್ತು. ಆದರೆ ಅದರ ವಿರುದ್ಧವಾಗಿ ಸರಕಾರವೇ ತಮ್ಮ ಶಾಲೆಗಳನ್ನು ಹೆಚ್ಚಿಸ ತೊಡಗಿದ್ದರಿಂದ ಮಿಶನರಿಗಳಲ್ಲಿ ಅಸೂಯೆ ಉಂಟಾಯಿತು. ಮಾಧ್ಯಮಿಕ ಹಾಗು ಉಚ್ಚ ಶಿಕ್ಷಣ ಕ್ಷೇತ್ರಗಳನ್ನು ತಮ್ಮ ಸ್ವಾಧೀನ ಪಡಿಸಿಕೊಳ್ಳಬೇಕೆಂಬ ಹೊಂಗನಸು ಕಾಣುತ್ತಿದ್ದ ಮಿಶನರಿಗಳಿಗೆ ಬಹಳ ನಿರಾಶೆಯಾಯಿತು. ಅವರು ಸರಕಾರದ ವಿರುದ್ಧ ಚಳವಳಿಯನ್ನು ಹೂಡಿದರು. ಭಾರತದಲ್ಲಿ ಶಿಕ್ಷಣವು ಸರಿಯಾದ ಮಾರ್ಗದಲ್ಲಿ ನಡೆದಿಲ್ಲವೆಂದೂ ಮಕ್ಕಳು ಧರ್ಮಲಂಡರಾಗುತ್ತಿರುವರೆಂದೂ ಆರೋಪ ಹೊರಿಸಹತ್ತಿದರು. ಸರಕಾರಿ ಶಾಲೆಗಳಲ್ಲಿ ದೇವರಿಲ್ಲವೆಂದು ಬೋಧಿಸಹತ್ತಿದ್ದಾರೆಂದೂ ಕೂಗ ಹತ್ತಿದರು. ಇಷ್ಟೇ ಅಲ್ಲ ತಮ್ಮ ಚಳವಳಿಯನ್ನು ಪ್ರಬಲಗೊಳಿಸುವ ಉದ್ದೇಶದಿಂದ ಇಂಗ್ಲಂಡದಲ್ಲಿ ಒಂದು ಸಂಘವನ್ನು ಸ್ಥಾಪಿಸಿಕೊಂಡು ಚಳವಳಿಯನ್ನು ತೀವ್ರಗೊಳಿಸಿದರು. ಲಾರ್ಡ ಹೆಲಿ-ಫ್ಯಾಕ್ಸ, ಸಾಲಿಸ್‌ಬರಿ ಮೊದಲಾದ ಬ್ರಿಟಿಶ ಪಾರ್ಲಿಮೆಂಟಿನ ಸದಸ್ಯರನ್ನು ತಮ್ಮ ಸಂಘದ ಸದಸ್ಯರನ್ನಾಗಿ ಮಾಡಿಕೊಂಡು ಬ್ರಿಟಿಶ ಪಾರ್ಲಿಮೆಂಟಿನ ಮೇಲೆ ಒತ್ತಾಯ ತರಹತ್ತಿದರು. ಇದರ ಪರಿಣಾಮವಾಗಿ ಭಾರತದ ವ್ಹಾಯಿಸರಾಯರಾಗಿ ನಾಮಕರಣ ಹೊಂದಿದ ಲಾರ್ಡ ರಿಪ್ಪನ್ನರನ್ನು ಇಂಗ್ಲಂಡದಲ್ಲಿ ಕಂಡರು. ತಮ್ಮ ಬೇಡಿಕೆಗಳನ್ನು ಸಾದರ ಪಡಿಸಿದರು. ಅವರಿಂದ ಸಹಾಯದ ಆಶ್ವಾಸನೆಯನ್ನು ಪಡೆದುಕೊಂಡನಂತರ ತಮ್ಮ ಚಳವಳಿಯನ್ನು ಹಿಂತೆಗೆದುಕೊಂಡರು.

ಹಂಟರ ಆಯೋಗದ ವರದಿ ೧೮೮೨ :

ಲಾರ್ಡ ರಿಪ್ಪನರು ಭಾರತಕ್ಕೆ ಬಂದ ಕೂಡಲೆ ಒಂದು ಶಿಕ್ಷಣ ಆಯೋಗವನ್ನು ರಚಿಸಿದರು. ಅದರ ಅಧ್ಯಕ್ಷ ಡಬ್ಲೂ. ಡಬ್ಲೂ. ಹಂಟರ ಎಂಬ ಶಿಕ್ಷಣ ತಜ್ಞರು. ಅವರು

ಎಲ್ಲ ಪ್ರಾಂತಗಳಲ್ಲಿ ಸಂಚರಿಸಿ, ಶೈಕ್ಷಣಿಕ ಸಮಸ್ಯೆಗಳ ಅಧ್ಯಯನ ಮಾಡಿ ಸರಕಾರಕ್ಕೆ ಒಂದು ಬೃಹತ್ ವರದಿಯನ್ನು ಸಾದರ ಪಡಿಸಿದರು. ಅದರಲ್ಲಿ ಹಲವಾರು ಸಲಹೆಗಳನ್ನು ಮಾಡಿದರು.

ಜನ ಸಾಮಾನ್ಯರ ಶಿಕ್ಷಣಕ್ಕೆ ಸರಕಾರವು ಅತ್ಯಂತ ಮಹತ್ವ ಕೊಡಬೇಕು; ಹಾಗೂ ಅದರ ವಿಸ್ತರಣೆಗಾಗಿ ತನ್ನೆಲ್ಲ ಸಾಮರ್ಥ್ಯವನ್ನು ವಿನಿಯೋಗಿಸಬೇಕೆಂದು ಅಭಿಪ್ರಾಯ ಪಟ್ಟರು. ಈ ಶಿಕ್ಷಣ ನಿರ್ವಹಣೆಯಲ್ಲಿ ಸರಕಾರ ಮತ್ತು ಜನತೆ ಕೂಡಿಯೇ ಕಾರ್ಯ ಮಾಡಬೇಕು. ಎಲ್ಲಿ ಜನತೆಯ ಅಥವಾ ಜನತೆಯ ಪ್ರಾತಿನಿಧಿಕ ಸಂಸ್ಥೆಗಳು ಕಾರ್ಯ ಮಾಡಲು ಸಾಧ್ಯವಿಲ್ಲವೋ ಅಂಥ ಸ್ಥಳಗಳಲ್ಲಿ ಸರಕಾರವು ಮುಂದಾಗಿ ಶಾಲೆಗಳನ್ನು ನಡೆಸಬೇಕು. ಗುಡ್ಡಗಾಡ ಪ್ರದೇಶ, ಹಿಂದುಳಿದ ಜನವಸತಿ-ಸ್ತ್ರೀ ಶಿಕ್ಷಣ ಮುಂತಾದ ಕ್ಷೇತ್ರಗಳಲ್ಲಿ ಸರಕಾರವೇ ಮುಂದಾಳುತನ ವಹಿಸಬೇಕೆಂದು ಸಲಹೆ ಮಾಡಿದರು. ಈ ಕಾರಣದಿಂದ ಕೇಂದ್ರ ಸರಕಾರದವರು ೧೮೮೪ರಲ್ಲಿ ಡಿಸ್ಟ್ರಿಕ್ಟ ಲೋಕಲ್ ಬೋರ್ಡ ಆ್ಯಕ್ಟ ಪಾಸು ಮಾಡಿದರು. ಮತ್ತು ಪ್ರತಿಯೊಂದು ಜಿಲ್ಹೆಗೆ ಒಂದು ಲೋಕಲ್ ಬೋರ್ಡ ಸ್ಥಾಪಿಸಿದರು. ಆಯೋಗದವರ ಶಿಫಾರಶಿನ ಮೇರೆಗೆ ಆಯಾ ಜಿಲ್ಹೆಗಳಲ್ಲಿಯ ಎಲ್ಲ ಶಾಲೆಗಳನ್ನು ಬೋರ್ಡಿನವರಿಗೆ ಒಪ್ಪಿಸಿದರು. ಅಲ್ಲದೆ ಬೋರ್ಡಿ-ನವರು ಹೊಸ ಶಾಲೆಗಳನ್ನು ತೆರೆದು ಜನತೆಯಲ್ಲಿ ಶಿಕ್ಷಣ ಪ್ರಸಾರ ಮಾಡುವಂತೆ ಹೊಣೆ ಹೊರಿಸಿದರು. ತಮ್ಮ ಶಾಲೆಗಳನ್ನು ನಡೆಸುವದರ ಜೊತೆಗೆ ಖಾಸಗಿ ಜನರು ಶಾಲೆಗಳನ್ನು ನಡೆಸಲು ಮುಂದೆ ಬಂದರೆ ಅವರಿಗೆ ಧನ ಸಹಾಯ ಮಾಡಬೇಕೆಂದು ಆದೇಶವಿತ್ತರು. ಹೀಗಾಗಿ ೧೮೮೪ರ ತರುವಾಯ ನಮ್ಮ ಭಾಗದಲ್ಲಿ ಲೋಕಲ್ ಬೋರ್ಡ ಶಾಲೆಗಳು ಮತ್ತು ಮುನಸಿಪಲ್ ಬೋರ್ಡ ಶಾಲೆಗಳು ಹೆಚ್ಚಾಗಿ ಬೆಳೆಯ ಹತ್ತಿದವು.

ಮಾಧ್ಯಮಿಕ ಮತ್ತು ಕಾಲೇಜ ಶಿಕ್ಷಣ ಕ್ಷೇತ್ರದಿಂದ ಸರಕಾರವು ಹಿಂದೆ ಸರಿದು ಖಾಸಗಿಯವರಿಗೆ ಕಾರ್ಯ ಮಾಡಲು ಅನುವು ಮಾಡಿಕೊಡಬೇಕೆಂದು ಶಿಫಾರಸು ಮಾಡಿದ್ದರು. ಏಕೆಂದರೆ ಈ ಶಾಲೆ ಕಾಲೇಜುಗಳಿಗೆ ಶ್ರೀಮಂತ ಜನರ ಮಕ್ಕಳೇ ಹೆಚ್ಚಾಗಿ ಹೋಗುತ್ತಾರೆ. ಆ ಶಿಕ್ಷಣದ ಭಾರವನ್ನು ಶ್ರೀಮಂತರೇ ಹೊರುವದು ಉಚಿತವೆಂದು ಪರಿಗಣಿಸಿ ಸರಕಾರವು ಈ ಕ್ಷೇತ್ರದಿಂದ ಹಿಂದೆ ಸರಿಯುವಂತೆ ಶಿಪಾರಸು ಮಾಡಿದ್ದರು. ಆದರೆ ಕೆಲವೊಂದು ಶಾಲೆ ಕಾಲೇಜುಗಳನ್ನು ಮಾದರಿಯ ಸಂಸ್ಥೆಗಳೆಂದು ಸರಕಾರ ನಡೆಸಿಕೊಂಡು ಹೋಗಬೇಕೆಂದು ಅಭಿಪ್ರಾಯ ಪಟ್ಟಿತು. ಅಲ್ಲದೆ ಖಾಸಗಿಯವರಿಗೆ ಅನುಕೂಲವಾಗುವಂತೆ ಸಹಾಯಧನ ಪದ್ಧತಿಯ ನಿಯಮಗಳನ್ನು ಉದಾರಗೊಳಿಸಬೇಕೆಂದೂ ತಿಳಿಸಿದ್ದರು. ಸಹಾಯಧನವನ್ನು ಸಾಮಾನ್ಯ ಆಡಳಿ-ತಕ್ಕಲ್ಲದೆ ವಿಶೇಷ ವಿಷಯಗಳಿಗೆ– ಅಂದರೆ ಶಿಕ್ಷಕರ ಸಂಬಳ, ಕಟ್ಟಡ, ವಾಚನಾಲಯ, ಉಪಕರಣಗಳು ಮುಂತಾದವುಗಳಿಗೆ– ವಿಶೇಷ ಧನಸಹಾಯವನ್ನು ಕೊಡಬೇಕೆಂದು

ಶಿಫಾರಸು ಮಾಡಿದ್ದರು. ಇದರಿಂದ ಖಾಸಗಿ ಸಂಸ್ಥೆಯವರು ತಮ್ಮ ಶಾಲೆಗಳನ್ನು ಉತ್ತಮ ಪಡಿಸಿಕೊಳ್ಳಲು ಸಹಾಯವಾಗುತ್ತದೆಂದು ಅಭಿಪ್ರಾಯ ಪಟ್ಟರು.

ಖಾಸಗಿ ಸಂಸ್ಥೆಗಳೆಂದರೆ ಯಾರ ಸಂಸ್ಥೆ ? :

ಖಾಸಗಿ ಸಂಸ್ಥೆಗಳೆಂದರೆ, ಆ ಕಾಲಕ್ಕೆ ಮಿಶನರಿ ಸಂಸ್ಥೆಗಳೆಂದೇ ಅರ್ಥವಾಗುತ್ತಿತ್ತು; ಏಕೆಂದರೆ ಆಗ ಹಿಂದು ಹಾಗೂ ಮುಸ್ಲಿಮ್ ಜನರು ಅಷ್ಟೊಂದು ಮುಂದೆ ಬಂದಿದ್ದಿಲ್ಲ. ಮಿಶನರಿಗಳೇ ಹೆಚ್ಚಾಗಿ ಶಾಲೆ ಕಾಲೇಜುಗಳನ್ನು ನಡೆಸುತ್ತಿದ್ದರು. ಆದುದರಿಂದ ಆಯೋಗದವರು ಈ ವಿಷಯವನ್ನು ನಿಷ್ಕರ್ಷಿಸುವದು ಅನಿವಾರ್ಯವಾಗಿತ್ತು. ಆಯೋಗದವರು ಈ ವಿಷಯವನ್ನು ಪೂರ್ಣಗೊಳಿಸಿ ತಮ್ಮ ಅಭಿಪ್ರಾಯವನ್ನು ಕೊಟ್ಟರು. ಭಾರತದಲ್ಲಿ ಖಾಸಗಿ ಸಂಸ್ಥೆಗಳೆಂದರೆ, ಭಾರತೀಯ ಜನರಿಂದ ನಡೆಸಲ್ಪಟ್ಟ ಸಂಸ್ಥೆಗಳೇ ಹೊರತು ಈಗಿದ್ದ ಮಿಶನರಿ ಸಂಸ್ಥೆಗಳಲ್ಲವೆಂದು ಅಭಿಪ್ರಾಯ ಪಟ್ಟರು. ಇದರಿಂದ ಮಿಶನರಿಗಳಿಗೆ ಉತ್ಸಾಹ ಭಂಗವಾಗಿರಲು ಸಾಕು. ಮುಂದೆ ತಮ್ಮ ಪ್ರಯತ್ನವನ್ನು ಶಿಕ್ಷಣ ಕ್ಷೇತ್ರದಿಂದ ಹೊರಳಿಸಿ ಸಮಾಜ ಸೇವೆ, ದೀನದಲಿತರ ಸೇವೆ ರುಗ್ಣರ ಸೇವೆಯನ್ನು ಮಾಡಹತ್ತಿದರು.

ಪರಂಪರಾಗತವಾಗಿ ಬಂದ ಗಾವಠಿ ಶಾಲೆಗಳಿಗೆ ಪ್ರೋತ್ಸಾಹ ಕೊಟ್ಟು, ಅವುಗಳನ್ನು ಇಲಾಖೆಯ ಕಕ್ಷೆಯಲ್ಲಿ ತೆಗೆದುಕೊಳ್ಳಬೇಕೆಂಬ ಶಿಫಾರಸು ನಿರ್ಲಕ್ಷಿಸಲ್ಪಟ್ಟಿತು ಅದರಿಂದಾಗಿ ಅವು ಇಪ್ಪತ್ತನೆಯ ಶತಮಾನದ ಆದಿ ಭಾಗದಲ್ಲಿ ಸಂಪೂರ್ಣವಾಗಿ ಮಾಯವಾಗಿ ಬಿಟ್ಟವು

ಈ ರೀತಿಯಾಗಿ ೧೮೮೪ ರಿಂದ ೧೯೦೦ ರ ವರೆಗೆ ನಮ್ಮ ಕರ್ನಾಟಕದಲ್ಲಿ ಕೆಲವು ಸರಕಾರಿ ಪ್ರಾಥಮಿಕ ಶಾಲೆಗಳು ಪ್ರತಿ ಜಿಲ್ಹೆಗೊಂದರಂತೆ ಸರಕಾರಿ ಹಾಯಸ್ಕೂಲ, ಲೋಕಲ್ ಬೋರ್ಡ ಹಾಗೂ ಮುನಸಿಪಲ್ ಬೋರ್ಡ ಪ್ರಾಥಮಿಕ ಶಾಲೆಗಳು ಹಾಗೂ ಇಂಗ್ಲೀಷ ಶಾಲೆಗಳು ನಡೆಯುತ್ತಿದ್ದವು. ಇವು ಅಲ್ಲದೆ ಬೋರ್ಡ ಹಾಗು ಸರಕಾರದಿಂದ ಸಹಾಯ ಧನ ಪಡೆಯುತ್ತಿದ್ದ ಪ್ರಾಥಮಿಕ ಶಾಲೆಗಳೂ ಇದ್ದವು. ಮಿಶನರಿಗಳಿಂದ ನಡೆಸಲ್ಪಡುತ್ತಿದ್ದ ಪ್ರಾಥಮಿಕ ಹಾಗೂ ಹಾಯಸ್ಕೂಲಗಳು ಧಾರವಾಡ, ಹುಬ್ಬಳ್ಳಿ, ಬೆಳಗಾವಿ, ಕುಮಟಾ, ಕಾರವಾರ, ಹೊನ್ನಾವರಗಳಲ್ಲಿದ್ದವು.

೧೮೪೭ ರಲ್ಲಿ ಧಾರವಾಡದಲ್ಲಿಯ ಗಾಂಧೀ ಚೌಕದಲ್ಲಿ ಬಾಸೆಲ್ ಮಿಶನ್ ಸಂಸ್ಥೆಯವರು ಒಂದು ಪ್ರಾಥಮಿಕ ಶಾಲೆಯನ್ನು ತೆರೆದರು. ೧೮೬೩ ರಲ್ಲಿ ಅಲ್ಲಿಯ ಮಿಶನ್ ಕಂಪೌಂಡಿನಲ್ಲಿ ಒಂದು ಇಂಗ್ಲೀಷ ಶಾಲೆಯನ್ನು ಆರಂಭಿಸಿದರು. ಅದರ ಪ್ರಥಮ ಪ್ರಿನ್ಸಿಪಾಲರೆಂದು ರೆ. ಝಿಗ್ಲರ (Rev F. Ziegler) ಕಾರ್ಯ ಮಾಡಿದರು. ಈಗ

ಆ ಹೈಸ್ಕೂಲಿದ್ದ ಸ್ಥಳವು ಮಿಶನ್ ಸಂಸ್ಥೆಗೆ ೧೮೯೩ ರಲ್ಲಿ ವ್ಹಿಕ್ಟೋರಿಯಾ ಮಹಾರಾಣಿಯ ಕಾಲದಲ್ಲಿ ದೊರೆಯಿತು. ೧೮೬೭ ರಲ್ಲಿ ಸರಕಾರಿ ಎ. ವ್ಹಿ. ಸ್ಕೂಲಿನಲ್ಲಿ ಶ್ರೀ ಅರಟಾಳ ರುದ್ರಗೌಡರು ಕಲಿತರೆಂಬ ಸಂಗತಿ ತಿಳಿದು ಬರುತ್ತದೆ.

೧೮೯೬–೯೭ ರಲ್ಲಿ ದೇಶವು ಭೀಕರ ಬರಗಾಲ ಹಾಗೂ ಪ್ಲೇಗ ಬೇನೆಗೆ ತುತ್ತಾಯಿತು. ಇಡೀ ದೇಶವೇ ತಲ್ಲಣಿಸಿತು. ದುಃಖ ದುಮ್ಮಾನಗಳ ಕಾರ್ಗತ್ತಲೆಯಲ್ಲಿ ೧೯ ನೆಯ ಶತಮಾನವು ಕಳೆದು ಹೋಯಿತು.

◎◎◎

ವಿಪುಲ ಮೇಧಾಶಕ್ತಿ, ಸಂಘಟನಾ ಚಾತುರ್ಯ, ನೇರವಾದ ನಡೆನುಡಿ, ಪಾರದರ್ಶಕ ಪ್ರಾಮಾಣಿಕತೆ, ಸಾದಾಜೀವನ, ನಿಷ್ಠುರವಾದ ಕ್ರಮ— ಇವುಗಳಿಂದಾಗಿ ಚನ್ನಬಸಪ್ಪನವರು ಅಂದು ಜನತೆಯಲ್ಲಿ ತಮ್ಮ ವ್ಯಕ್ತಿತ್ವದ ಪ್ರಭಾವವನ್ನು ಬೀರಿದರು. ಆ ಪ್ರಭಾವವನ್ನು ಕನ್ನಡ ಭಾಷೆಯ ಪ್ರಚಾರ, ಪ್ರಗತಿಗಾಗಿ ಬಳಸಿದರು. ಮುಂದೆ ಅವರ ಶಿಷ್ಯ ಪ್ರಶಿಷ್ಯರು ಸೇರಿ "**ಕರ್ನಾಟಕ ವಿದ್ಯಾವರ್ಧಕ ಸಂಘ**"ವನ್ನು ಸ್ಥಾಪಿಸಿದಾಗ ಕನ್ನಡ ತಲೆ ಎತ್ತುವ ಬಗೆಗೆ ಸಾಂಘಿಕ ಪ್ರಯತ್ನ ಆರಂಭವಾಯಿತು. ಹೀಗೆ ಚನ್ನಬಸಪ್ಪನವರು ಕನ್ನಡ ಪುನರುಜ್ಜೀವನದ ಪಿತಾಮಹರಾದರು.

—ಪ್ರೊ. ಸ. ಸ. ಮಾಳವಾಡ

೧೯ನೆಯ ಶತಮಾನದಲ್ಲಿ ಮುಂಬೈ ಕರ್ನಾಟಕದಲ್ಲಿ ವಿದ್ಯಾರ್ಥಿಗಳ ಕಲ್ಯಾಣ ಕಾರ್ಯಕ್ರಮಗಳು

—ಶ್ರೀ ಎಂ. ಪಿ. ಜಾಲಿ

ಯಾವುದೇ ಶತಮಾನವಿರಲಿ ಅದರಲ್ಲಿ ವಿದ್ಯಾರ್ಥಿಗಳ ಕಲ್ಯಾಣ ಕಾರ್ಯಕ್ರಮ-ಗಳನ್ನು ಅನುಷ್ಠಾನದಲ್ಲಿ ತರಲೇಬೇಕೆಂಬ ವಿಚಾರ-ಸರಣಿಯನ್ನು ರಾಷ್ಟ್ರದ-ರಾಜ್ಯದ ಹಿತಚಿಂತಕರು ಒಪ್ಪಲೇಬೇಕಾದ ಮಾತಾಗಿದೆ. ಈ ಕಲ್ಯಾಣ ಕಾರ್ಯಕ್ರಮಗಳನ್ನು ಕೈಗೆ ಎತ್ತಿಕೊಳ್ಳುವಂಥ ಸು-ಬುದ್ಧಿ ಹಾಗೂ ಹೃದಯ ವೈಶಾಲ್ಯ **ಶಿಕ್ಷಣದ** ನಿಜವಾದ ತಿರುಳನ್ನು ಅರಿತವರಲ್ಲಿ ಉದಯವಾಗುವದು. ಏಕೆಂದರೆ ಶಿಕ್ಷಣ ಮತ್ತು ಅದರಿಂದಾಗುವ ಸಂಸ್ಕಾರ ಸಾಮಾನ್ಯವಾದುದಲ್ಲ, ಜರ್ಜರಿತ ಜೀವನಕ್ಕೆ ಅಭಯುವನ್ನು ನೀಡುವ ಸಂಜೀವಿನಿಯೆಂದರೆ **ಶಿಕ್ಷಣ.** ಪ್ರಭಾವಯುಕ್ತವಾದ ಶಿಕ್ಷಣವು ಒಂದು ರಾಷ್ಟ್ರದ ಭವಿಷ್ಯದ ಭದ್ರ ಬುನಾದಿಯಾಗುವಲ್ಲಿ ಯಾವ ಸಂದೇಹವೂ ಇಲ್ಲ. ಕರ್ತವ್ಯನಿರತ, ಪ್ರಾಮಾಣಿಕ, ಸತ್ಯಸಂಧ, ಸತ್ವಪೂರ್ಣ, ಅಸಾಮಾನ್ಯ ಆದಂತಹ ಪ್ರಜಾಕೋಟಿಯನ್ನು ನಿರ್ಮಿಸುವದೇ ಶಿಕ್ಷಣ.

ಒಂದು ದೇಶದ ನಿಜವಾದ ಸೊತ್ತು, ಬೆಳ್ಳಿ-ಬಂಗಾರವಲ್ಲ, ಗಿಡಮರಗಳೂ ಅಲ್ಲ, ಹೊಳೆ-ಹಳ್ಳಗಳಲ್ಲ, ಅಲ್ಲಿ ವಾಸಿಸುವ ಮಕ್ಕಳೇ ನಿಜವಾದ ಸಂಪತ್ತು, ಅವರೇ ಭವಿಷ್ಯದಲ್ಲಿ ಮುಖ್ಯ ಪಾತ್ರವನ್ನು ವಹಿಸುವಂಥವರು. ಈ ಮಕ್ಕಳು ರಾಷ್ಟ್ರದ ನಿಜವಾದ ಸಂಪತ್ತಾಗುವಂತೆ ಮಾರ್ಪಡಿಸುವದರಲ್ಲಿ ಪ್ರಮುಖ ಪಾತ್ರವನ್ನು ವಹಿಸುವಂಥವರು ತಂದೆ-ತಾಯಿಗಳು ಹಾಗು ಉಪಾಧ್ಯಾಯರು. ಮಕ್ಕಳು ಹುಟ್ಟಿದ ಮನೆಗೂ, ಓದಿದ ಪಾಠಶಾಲೆಗೂ, ದೇಶಕ್ಕೂ ಒಳ್ಳೆಯ ಹೆಸರನ್ನು ತರುವಂಥವರಾಗಬೇಕು. ಅವರು ಧೈರ್ಯ ಸಾಹಸಗಳಿಂದ ಎಂತಹ ಕಠಿಣ ಕೆಲಸವನ್ನಾದರೂ ಮಾಡಲಿಕ್ಕೆ ಹಿಂಜರಿಯಬಾರದು. ಒಟ್ಟಾರೆ ಹೇಳುವದೆಂದರೆ ಮಕ್ಕಳು ಮನೆಯಲ್ಲಿ ಕಲಿಯುದ್ದನ್ನು ಶಾಲೆಯಲ್ಲಿ ಕಲಿಯುತ್ತಾರೇ! ಅರ್ಥಾತ್ ಮನೆಯಿಂದ ಪಡೆದ ಸಂಸ್ಕೃತಿ ಮಹತ್ತರವಾದದ್ದು ಆಗಿದೆ. "ಚಿಕ್ಕಂದಿನ ಸಂಸ್ಕಾರ ವಜ್ರಲೇಪನವಿದ್ದಂತೆ" ಮಕ್ಕಳಲ್ಲಿ ಅರ್ಪಣಾ ಬುದ್ಧಿ ಹಾಗು ತ್ಯಾಗ ಮನೋಭಾವ ಬೆಳೆಯುವಂತೆ ನೋಡಿಕೊಳ್ಳಬೇಕು.

ಶ್ರೀ ಎಂ. ಪಿ. ಜಾಲಿಯವರು ಸಾ. ವಿ. ಇಲಾಖೆಯ ನಿವೃತ್ತ ವಿಭಾಗೀಯ ಉಪ-ನಿರ್ದೇಶಕರು. ಪ್ರಾಮಾಣಿಕ (ದಕ್ಷ) ನಿಸ್ಪೃಹ ಆಡಳಿತಕ್ಕೆ ಹೆಸರಾದವರು. ಈಗ ಹುಬ್ಬಳ್ಳಿಯಲ್ಲಿ ತೋಪಲಕಟ್ಟಿ ವಿಭಾಗದಲ್ಲಿ ವಾಸಿಸುತ್ತಿದ್ದಾರೆ.

ಮನೆಯ ಸಿರಿವಂತಿಕೆಗಿಂತ ಮನದ ಸಿರಿವಂತಿಕೆ ಅವರಲ್ಲಿ ಬೆಳೆಯಬೇಕು. ದೇಶಕ್ಕಾಗಿ ಹೋಚಿಮಿನ್ನರಂತೆ, ಲಾಲಬಹದ್ದೂರ ಶಾಸ್ತ್ರೀಜಿಯವರಂತೆ ತಮ್ಮನ್ನು ಸಮಗ್ರವಾಗಿ ಅರ್ಪಿಸಿಕೊಳ್ಳುವಂಥವರು ಆಗಬೇಕು. ಹಿರಿಯರಾದವರು ಯಾವಾಗಲೂ **ವಿವೇಕದಿಂದ ವರ್ತಿಸಿ** ತಪ್ಪು-ತಡೆಗಳು ಆಗದಂತೆ ನೋಡಿಕೊಳ್ಳಬೇಕು. ಅಂದರೆ ಮಾತ್ರ ಚಿಕ್ಕಮಕ್ಕಳಿಗೆ ಯೋಗ್ಯ ಮಾರ್ಗದರ್ಶನ ದೊರೆತು, ಅವರು ನೀತಿವಂತ-ರಾಗುವಲ್ಲಿ ಸಂದೇಹವಿಲ್ಲ. ಏಕೆಂದರೆ ತಾಯಿಯಲ್ಲಿ ಉತ್ತಮವಾದದ್ದನ್ನು **ಉಳಿಸುವ** ಯುಕ್ತಿ ಇದೆ; ಹಾಗೂ ಅಲ್ಲದ್ದನ್ನು ಅಳಿಸುವ ಶಕ್ತಿ ಇದೆ. **ಕೌಟುಂಬಿಕ** ಭಾವೈಕ್ಯ ಸಾಧನೆಯಿಂದಲೇ ಜೀವನವು ಸಾರ್ಥಕವಾಗುವದು. ವಿಚಾರಗಳು ಎಲ್ಲಿಂದ ಬಂದರೂ ಅವುಗಳನ್ನು ಬರಮಾಡಿ ಕೊಳ್ಳಬೇಕು. ವ್ಯಕ್ತಿಗಳ ಗುಣಾವಗುಣಗಳ ಅರಿವು ಇರ-ತಕ್ಕದ್ದು. ಏಕಂದರೆ ಈ ವಿಶ್ವವು **ವಸ್ತು** ಹಾಗು **ವ್ಯಕ್ತಿ** ಗಳಿಂದ ತುಂಬಿಕೊಂಡಿದೆ. ಯುವಕರು ನುಡಿದಂತೆ ನಡೆಯುವ ಆಕಾಂಕ್ಷೆಯುಳ್ಳವರಾಗಬೇಕು.

ಚಿತ್ತವನ್ನು ರಾಗ-ದ್ವೇಷಗಳಿಂದ ದೂರಿಡಬೇಕು. "ಚಿಂತನದಂತೆ ಅಂತಃಕರುಣದ ರೂಪವೂ ಬದಲಾಗುತ್ತದೆ". ಪರರಲ್ಲಿ ಗುಣಗಳನ್ನು ತಮ್ಮಲ್ಲಿ ದೋಷಗಳನ್ನು ನೋಡುವ ಅಭ್ಯಾಸವನ್ನು ಯುವಜನರು ಇಟ್ಟುಕೊಳ್ಳಬೇಕು. ಸಮಾಜದ ಕಟ್ಟು-ನಿಟ್ಟುಗಳನ್ನು ಪೂರ್ಣವಾಗಿ ಉಪೇಕ್ಷಿಸಿ ಸ್ವಚ್ಛಂದವಾಗಿ ನಡೆಯಲು ಅವಕಾಶ ದೊರೆತರೆ ಸಮಾಜ ಭದ್ರವಾಗುವ ಬಗೆ ಹೇಗೆ? ಯಾರು ಏನು ಮಾಡಿದರೂ ಕೇಳು-ವವರೇ ಇಲ್ಲದಂಥ ಸಮಾಜ ಹಾಗೂ ರಾಷ್ಟ್ರ ನಮ್ಮದಾಗಬಾರದು. ವಿದ್ಯಾರ್ಥಿಗಳು ತಮ್ಮ ಹೃದಯದಲ್ಲಿ ಸದ್ಭಾವವನ್ನು ತುಂಬಿಕೊಂಡವರಾಗಬೇಕು. ಯುವಜನರ ದೂರದೃಷ್ಟಿಯ ಮೇಲೆಯೇ ದೇಶದ ಭವಿಷ್ಯ ಅವಲಂಬಿಸಿದೆ. ಅವರಲ್ಲಿ **ಸಮಾಜ ಪ್ರಜ್ಞೆ, ಸಮಯ ಪ್ರಜ್ಞೆ** ಹಾಗೂ **ಕರ್ತವ್ಯ ನಿಷ್ಠೆ** ಇರತಕ್ಕದ್ದು. ಸಮಾಜದ ನೆಮ್ಮದಿಯೇ ತಮ್ಮ ನೆಮ್ಮದಿ ಎಂದು ತಿಳಿಯತಕ್ಕದ್ದು. ಎಲ್ಲಕ್ಕೂ ಮಿಗಿಲಾಗಿ ಅವರು ವೇಳೆಯ ಮಹತ್ವವನ್ನು ಅರಿಯತಕ್ಕದ್ದು. "**ನಿಮಿಷದ ಉದಾಸೀನ ಕೆಡಿಸಿತ್ತು**" ಎಂಬ ಅಣ್ಣ ಬಸವಣ್ಣನವರ ಅನುಭವ ವಾಣಿಯು ವೇಳೆಯ ಮಹತ್ವವನ್ನು ಹಾಗು ಉದಾಸೀನ ಗುಣದ ಖಂಡನೆಯನ್ನು ಎತ್ತಿ ತೋರಿಸುತ್ತದೆ.

ಸಮಾಜದಲ್ಲಿ ಪರಿವರ್ತನೆಯನ್ನು ತರಬಲ್ಲವರೂ ತರಬೇಕಾದವರೂ ರಾಷ್ಟ್ರದ ಯುವಜನತೆ ಎಂಬುದನ್ನು ಒತ್ತಿ ಹೇಳಬೇಕಾಗಿಲ್ಲ. ಏಕೆಂದರೆ, ಇವರೇ ಮುಂದೆ ರಚನಾತ್ಮಕ ನೆಲೆಗಳಲ್ಲಿ ಕ್ರಿಯಾಶೀಲರಾಗುವಂಥವರು. "ತಾನು ಬುದ್ಧಿವಂತನಲ್ಲವೆಂದು ತಿಳಿದುಕೊಳ್ಳುವದು ಬುದ್ಧಿವಂತಿಕೆಯ ಆರಂಭ"—ಸೈರಸ್. ಈ ಮಾತಿನ ಮರ್ಮ-ವನ್ನು ಯುವಜನರು ಅರಿತು ಅಹಂಕಾರ ಪಡದೆ ತಮ್ಮ ನ್ಯೂನತೆಗಳನ್ನು ಹಾಗೂ ಜ್ಞಾನದ ಅಭಾವವನ್ನು ಅರಿತುಕೊಂಡು ಅವುಗಳನ್ನು ನೀಗುವ ಸಲುವಾಗಿ ಯಾವಾ-ಗಲೂ ಉಪಯುಕ್ತ ಜ್ಞಾನದ ಪಿಪಾಸುಗಳು ಆಗತಕ್ಕದ್ದು. ಇಂಥವರು ತಮ್ಮ ಲೌಕಿಕ

ಅನುಭವವನ್ನು ಹೆಚ್ಚಿಸಿಕೊಂಡು ಜೀವನದಲ್ಲಿ ಉಂಟಾಗುವ ಸಮಸ್ಯೆಗಳಿಗೆ ಯೋಗ್ಯ ಪರಿಹಾರವನ್ನು ಕಂಡು ಹಿಡಿಯಬಲ್ಲರು. ಇಂಥ ಯುವಕರು ಪ್ರಗತಿಶೀಲ ಮನೋ-ಭಾವವುಳ್ಳವರಾಗಿ ನಾಡು, ನುಡಿ, ಸಂಸ್ಕೃತಿಗಳ ಏಳ್ಗೆಗಾಗಿ ಹೋರಾಡುವಂಥವರು ಆಗುವರು. ಇಂಥ, ಪ್ರಯತ್ನಗಳಿಂದ ಮಾನವ ಕಲ್ಯಾಣ ಸಾಧನೆಯು ಆಗಿಯೇ ತೀರುವದು.

ಇನ್ನು ವಿಚಾರಿಸುವ ಅಂಶವೆಂದರೆ ಸಮಾಜದ ಸ್ಥಿತಿಗತಿ. ಏಕೆಂದರೆ, ಮಕ್ಕಳು ಕೇವಲ ಮನೆ–ಮಠಗಳಲ್ಲಿ ಹಾಗು ವಿದ್ಯಾಪೀಠಗಳ ಆವರಣದಲ್ಲಿ ಮಾತ್ರ ಬೆಳೆಯು-ವದಿಲ್ಲ. ಸಮಾಜ ಜೀವನವೂ ಅವರನ್ನು ಆವರಿಸಿದೆ ಎಂಬುದನ್ನು ಮರೆಯಕೂಡದು. ಆದುದರಿಂದ, ಸಮಾಜದಲ್ಲಿ ಯೋಗ್ಯ ವಾತಾವರಣ ನಿರ್ಮಾಣವಾಗುವಂತೆ ಮಾಡು-ವದು ಎಲ್ಲರ ಜವಾಬುದಾರಿಕೆಯಾಗಿದೆ.

ಈ ಮುನ್ನ ವಿವರಿಸಿದಂತೆ, ಶಿಕ್ಷಣದ ಮಹತಿಯನ್ನು ಹಾಗೂ ಯೋಗ್ಯ ಶಿಕ್ಷಣ ದಿಂದ ಉಂಟಾಗುವ ಒಳ್ಳೇ ಪರಿಣಾಮಗಳನ್ನು ನಮ್ಮ ಮಾನ್ಯ ಡೆಪ್ಯೂಟಿ ಚನ್ನಬಸಪ್ಪನವರು ಪೂರ್ಣವಾಗಿ ಅರಿತವರಾಗಿದ್ದರು. ಇಂಥ ವಿಚಾರಗಳಿಗೆ ಅವರು ಮಾರುಹೋಗಿದ್ದರೆಂದಮೇಲೆ ಅವರ ವ್ಯಕ್ತಿತ್ವ ಹೇಗೆ ರೂಪುಗೊಂಡಿತ್ತೆಂಬುದನ್ನು ವಿಚಾರಿಸುವದು ಅಪ್ರಸ್ತುತವಾಗಲಾರದು. ಶ್ರೀಯುತರ ಭಾಷೆ, ವಿಚಾರ, ಆಚಾರ ಇವುಗಳಲ್ಲಿ ಸುಸಂಗತವಾದ ಹೊಂದಿಕೆಯಿದ್ದುದರಿಂದಲೇ ಅವರ ವ್ಯಕ್ತಿತ್ವವು ಅಷ್ಟು ಉನ್ನತಮಟ್ಟದ್ದಾಗಿ ಬೆಳೆದಿರಬೇಕು. ಅವರು ಸಿದ್ಧಾಂತ ವಾದಿಗಳು, ಆದರೆ ಸ್ವಾರ್ಥ-ವಾದಿಗಳು ತಿಲಮಾತ್ರವಾದರೂ ಆಗಿದ್ದಿಲ್ಲ. ಅವರು ತಾವು ಬೋಧಿಸಿದುದನ್ನು ತಮ್ಮ ಸ್ವಂತ ಜೀವನದಲ್ಲಿ ಅನುಷ್ಠಾನಕ್ಕೆ ತಂದಿದ್ದರು. ಅವರು ಬರಿಯ ವಿಚಾರದ ದಾಸ-ರಾಗಿದ್ದಿಲ್ಲ. ಆಚಾರಕ್ಕೂ ಪ್ರಾಮುಖ್ಯತೆಯನ್ನು ಕೊಟ್ಟಿದ್ದರು. ಅವರು ಸಾಹಸಿ ಯಾಗಿದ್ದರಿಂದಲೇ ಕಾಲು ನಡಿಗೆಯಿಂದ ಪುಣೆಗೆ ಹೋಗಿ, ಅಲ್ಲಿ ತಮ್ಮ ಪ್ರತಿಭೆಯನ್ನು ತೋರಿಸಿ, ಉಚ್ಚ ಶಿಕ್ಷಣವನ್ನು ಪಡೆದರು. ಅವರು ತಮ್ಮ ಅದಮ್ಯ ಭಾವನೆಗಳನ್ನು ನಿಷ್ಠುರವಾಗಿ, ದಾಕ್ಷಿಣ್ಯ ವರ್ಜಿಯಾಗಿ, ಹೇಳಿಬಿಡುವ ಬಿಚ್ಚು ಹೃದಯದವರಾಗಿದ್ದರು. ಅಂತರಂಗದಲ್ಲೂ ಬಹಿರಂಗದಲ್ಲೂ ಒಂದೇ ಮಾತು, ಒಂದೇ ಅರ್ಥ. ಮಾನವ ಕುಲವೇ ತಮ್ಮ ಕುಟುಂಬವೆಂಬ ಮಾತಿನಲ್ಲಿ ಡೆ. ಚನ್ನಬಸವಪ್ಪನವರಿಗೆ ಗಾಢವಾದ ನಂಬಿಕೆ ಇರಲಿಕ್ಕೆ ಸಾಕು. ಜನರಲ್ಲಿ ನೆಲಿಸಿರುವ ಅಜ್ಞಾನವೇ ಎಲ್ಲ ಶೋಷಣೆಗಳಿಗೆ ಹಾಗೂ ತೊಂದರೆಗಳಿಗೆ ಕಾರಣೀಭೂತವಾಗಿದೆ. ಜನರು ಕೇವಲ ವಿದ್ಯಾವಂತರಾದರೆ ಸಾಲದು, ಅವರು ಹೊಣೆ ಹೊತ್ತು ದೇಶದ ಅವಿದ್ಯಾವಂತರಲ್ಲಿ ಜಾಗೃತಿಯನ್ನು ಉಂಟು ಮಾಡ-ಬೇಕು. "ಆರೇನು ಮಾಡುವರು ಆರಿಂದಲೇನಹುದು ಪೂರ್ವಜನ್ಮದ ಕರ್ಮದ ವಿಧಿ ಬೆನ್ನಹತ್ತಿಹುದು" ಎಂಬ ಸಿದ್ಧಾಂತವನ್ನೇ ನಮ್ಮಲ್ಲಿಯ ಅನೇಕ ಜನರು ನಂಬಿದ್ದಾರೆ. ಇದರಿಂದ ಧ್ವನಿತವಾಗುವ ಅಂಶವೆಂದರೆ ತಮ್ಮ ಕಡುಬಡತನಕ್ಕೆ, ಅವನತಿಗೆ ತಾವೇ

ಕಾರಣರೆಂದು ತಿಳಿದು ಸಮಾಧಾನ ಪಡುವದಾಗಿದೆ. ಇಂಥ ಜನರನ್ನು ಚನ್ನಬಸವಪ್ಪನವರು ಕಟುವಾಗಿ ಖಂಡಿಸಿದರು. ಬುದ್ಧಿ ಹೇಳಿ ದಾರಿಗೆ ತಂದರು. 'ಏಕಂದರೆ, ಒಬ್ಬ ದುಷ್ಟನ ಕೆಲಸದ ಫಲವನ್ನು ಹಲವು ಬಾರಿ ಇಡೀ ದೇಶ ಅನುಭವಿಸಬೇಕಾಗುತ್ತದೆ'. –(ಹೀಸಿಯಡ್). ಮಾನ್ಯ ಚನ್ನಬಸವಪ್ಪನವರು ತಮ್ಮನ್ನು ಕನ್ನಡ ನಾಡು–ನುಡಿಗಳ ಸೇವೆಗಾಗಿ ಸಮಗ್ರವಾಗಿ ಅರ್ಪಿಸಿಕೊಂಡು, ಜನತೆಯ ಜೀವನದೊಂದಿಗೆ ಸಂಪೂರ್ಣ-ತಾದ್ಯಾತ್ಮ ಹೊಂದಿದ್ದರು. ತ್ರಿಕರಣಪೂರ್ವಕವಾಗಿ ಮಾಡುತ್ತಿರುವ ಸಚ್ಚಿಂತನೆ-ಯನ್ನು ಪರಮಾತ್ಮ ಈಡೇರಿಸಿ ಕೊಡುತ್ತಾನೆಂಬ ಮಾತಿಗೆ ಡೆಪ್ಯುಟಿ ಚನ್ನಬಸವಪ್ಪ-ನವರ ಜೀವನದ ಇತಿಹಾಸವು ಒಂದು ಜ್ವಲಂತ ಉದಾಹರಣೆಯಾಗಿ ನಿಂತಿದೆ. ಮಾನ-ವತ್ವದ ದಿವಾಳಿಯನ್ನು ಮಾಡಿಕೊಳ್ಳದೆ, ಅದರ ಪೂರ್ಣತ್ವವನ್ನು ಪಡೆದವರಾಗಿದ್ದರು. ಪರೋಪಕಾರವೇ ಅವರ ಜೀವನದ ಉಸಿರಾಗಿತ್ತು. ಎಲ್ಲ ಸದ್ಗುಣಗಳಲ್ಲಿ ಪರೋಪ-ಕಾರ ಪ್ರವೃತ್ತಿಯು ಅತ್ಯಂತ ಮೇಲಿನ ಮಟ್ಟದ್ದು ಆಗಿದೆ. ಇದೊಂದು ಸದ್ಗುಣವಿದ್ದಲ್ಲಿ ಎಲ್ಲ ಸದ್ಗುಣಗಳು ಸಮಾವೇಶವಾಗಿ ಬಿಡುತ್ತವೆ. ಪರೋಪಕಾರ ಗುಣವಿದ್ದವನಲ್ಲಿ ತ್ಯಾಗ ಭಾವನೆಗೆ ಪ್ರಾಮುಖ್ಯತೆಯು ದೊರೆತೇ ತೀರುವದು.

ಆಗಿನ ಚಿತ್ರದುರ್ಗದ ಜಗದ್ಗುರುಗಳ ಸನ್ನಿಧಿಯಲ್ಲಿ ಉಳವಿಯಲ್ಲಿ ವೀರಶೈವರ ಒಂದು ಸಭೆ ಉತ್ಸವರೂಪದಲ್ಲಿ ಜರುಗಿತು. ಆಮಂತ್ರಣದ ಮೇರೆಗೆ ಡೆ. ಚೆನ್ನ-ಬಸಪ್ಪನವರೂ ಅಲ್ಲಿಗೆ ಹೋಗಿದ್ದರು.ಅವರ ವೈಭವದ ಉತ್ಸವ,ಗಣಾರಾಧನೆ,ಅತಿಯಾದ ವೆಚ್ಚ ಇವುಗಳನ್ನು ಕಣ್ಣಾರೆ ಕಂಡು,ಮನನೊಂದು ಹೀಗೆ ಹೇಳಿದ್ದುಂಟು:"ಅಗತ್ಯವಿಲ್ಲದ ಜನರಿಗೆ ಊಟ ಮಾಡಿಸುವದು ಹಣದ ಅಪವ್ಯಯ. ಹಾಗೆ ವೆಚ್ಚವಾಗುವ ಹಣವನ್ನು ವೀರಶೈವ ಬಡ ವಿದ್ಯಾರ್ಥಿಗಳ ವಿದ್ಯಕ್ಕಾಗಿ ವೆಚ್ಚ ಮಾಡಬೇಕು. ವಿದ್ಯಾರ್ಥಿನಿಲಯ ಸ್ಥಾಪಿಸಬೇಕು" ಆಗ ಮಹಾಸ್ವಾಮಿಗಳು ಇವರ ಸಲಹೆಯನ್ನು ಮೆಚ್ಚಿ ಬೆಳಗಾವಿ ಯಲ್ಲಿ ತೆರೆಯುವ ಬೋರ್ಡಿಂಗಿಗೆ ಪ್ರತಿ ತಿಂಗಳು ರೂ. ೩೦೦/– ಕೊಡಲು ಒಪ್ಪಿದರು. ಅಂತೆಯೇ ಚನ್ನಬಸಪ್ಪನವರು ಬೆಳಗಾವಿಯಲ್ಲಿ ವಿದ್ಯಾರ್ಥಿಗಳ ನಿಲಯವನ್ನು ಪ್ರಾರಂಭಿಸಿದರು. ಎರಡು ವರ್ಷಗಳ ನಂತರ ಪ್ರಸಾದ ನಿಲಯವನ್ನು ಮುಂದುವರಿಸ ಲಿಕ್ಕೆ ಹಣದ ಅಡಚಣಿಯಾದಾಗ ಸ್ವತಃ ಸಾಲತೆತ್ತು ಅದನ್ನು ಸಾಗಿಸಿಕೊಂಡು ಹೋದರು. ನಮ್ಮ ಕನ್ನಡ ಮಕ್ಕಳು ಇಂಗ್ಲೀಷ ಜ್ಞಾನವನ್ನು ಪಡೆಯುವಂತೆ ಮಾಡಲು ಬಹು ಶ್ರಮಪಟ್ಟರು ಇಂಥ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಬೆಳಗಾವಿಯಲ್ಲಿ ಪ್ರಸಾದನಿಲಯವನ್ನು ತೆರೆದು ಅದಕ್ಕೆ ೫೦ ವಿದ್ಯಾರ್ಥಿಗಳನ್ನು ಸೇರಿಸಿದರು. ಈ ದಿಶೆ-ಯಲ್ಲಿ ಆಗದವರು ಮಾಡಿದ ಟೀಕೆಗಳಿಗೆ ಸೊಪ್ಪು ಹಾಕಲಿಲ್ಲ. ಮುಂದಿಟ್ಟ ಹೆಜ್ಜೆ ಯನ್ನು ಹಿಂದೆ ತೆಗೆದುಕೊಳ್ಳುವಂಥ ಗುಣ ಅವರ ಜಾಯಮಾನದಲ್ಲಿ ಕಂಡುಬರಲಿಲ್ಲ. ಅವರು ಸ್ಥಿತಪ್ರಜ್ಞರಾಗಿದ್ದರು. ಈ ವಿದ್ಯಾರ್ಥಿ ನಿಲಯಕ್ಕೆ ಮಹಾಸ್ವಾಮಿಗಳ ಹಾಗೂ ಸಮಾಜದ ಧನ ಸಹಾಯ ನಿಂತುಹೋದುದರಿಂದ ಅದರ ಸಾಲ ತೀರಿಸುವ ಭಾರ

ಡೆ. ಚೆನ್ನಬಸಪ್ಪನವರ ಮೇಲೆಯೇ ಬಿತ್ತು. ಅಂಜಲಿಲ್ಲ, ಅಳುಕಲಿಲ್ಲ. ತಮ್ಮ ಆಸ್ತಿ-ಪಾಸ್ತಿಗಳನ್ನೆಲ್ಲ ಮಾರಿಕೊಂಡು ಪ್ರಸಾದ ನಿಲಯದ ಸಾಲವನ್ನು ತೀರಿಸಿದ ತ್ಯಾಗಿ ಡೆ. ಚೆನ್ನಬಸಪ್ಪನವರು! ಅಷ್ಟೊಂದು ವಿದ್ಯಾಪ್ರೇಮಿ ಅವರಾಗಿದ್ದರು; ತರುಣರನ್ನು ವಿದ್ಯಾವಂತರನ್ನಾಗಿ ಮಾಡುವ ಹಂಬಲದಲ್ಲಿ ತಮ್ಮನ್ನೇ ತೇಯ್ದು ಶ್ರೀಗಂಧದ ಸುವಾಸನೆಯನ್ನು ಸಮಾಜದಲ್ಲಿ ಪಸರಿಸಿದ ಪುಣ್ಯ ಪುರುಷರು.

ಡೆ. ಚೆನ್ನಬಸಪ್ಪನವರ ಸಮಾಜ ಸೇವೆಯನ್ನು ಮನವಾರೆ ಮೆಚ್ಚಿದ ಇಬ್ಬರು ಮಹನೀಯರೆಂದರೆ— ಶ್ರೀ ಗಿಲಗಂಚಿ ಗುರುಸಿದ್ಧಪ್ಪನವರು, ಶ್ರೀ ಅರ್ಟಾಳ ರುದ್ರ-ಗೌಡರು. ದಕ್ಷಿಣ ಪ್ರಾಂತದ ಸಾಂಸ್ಕೃತಿಕ ಕೇಂದ್ರವಾದ ಧಾರವಾಡದಲ್ಲಿ ಒಂದು ದೊಡ್ಡ ಸಂಸ್ಥೆಯನ್ನು ಸ್ಥಾಪಿಸಲು ಹವಣಿಸಿದರು. ಲಿಂ. ಟೆಂಗಿನಕಾಯಿ ಚೆನ್ನ-ಮಲ್ಲಪ್ಪನವರ ಮನೆಯಲ್ಲಿ ಸಮಾಜದ ಗಣ್ಯ ವ್ಯಕ್ತಿಗಳನ್ನು ಸೇರಿಸಿ, ನಿಧಿಯನ್ನು ಸಂಗ್ರಹಿಸಿ, ೧೮೮೩ ಅಕ್ಟೋಬರ ತಿಂಗಳಲ್ಲಿ **ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ-ಯನ್ನು** (L. E. Association) ಸ್ಥಾಪಿಸಿದರು. ಈ ನಿಧಿಯಿಂದ ಬಂದ ಬಡ್ಡೀ ಹಣವನ್ನು ಬಡ ವಿದ್ಯಾರ್ಥಿಗಳಿಗೆ ಸ್ಕಾಲರಶಿಪ್ ಕೊಡುವ ಯೋಜನೆಯನ್ನು ರೂಪಿಸಿದರು. ಸರಕಾರವೂ ಈ ಯೋಜನೆಯನ್ನು ಮೆಚ್ಚಿಕೊಂಡು ಅದಕ್ಕೆ ಮಂಜೂರಿ ಕೊಟ್ಟಿತು. ಇವರೀರ್ವರೂ ಈ ಸಂಸ್ಥೆಯ ಜನಕರೆಂದು ಹೆಸರಾದರು. ಬಡವಿದ್ಯಾರ್ಥಿಗಳ ಕಲ್ಯಾಣ ಬಯಸಿದರು.

ಆ ಕಾಲದಲ್ಲಿ ಸಂಸ್ಕೃತ ಪಂಡಿತರ ಕೊರತೆ ಕಾಣಿಸಿತು. ಇದನ್ನು ಪೂರೈಸುವದು ಅಗತ್ಯವೆನಿಸಿತು. ಆಗ ಶ್ರೀ ಅರ್ಟಾಳ ರುದ್ರಗೌಡರು ಗದಗಿನ ಗಣ್ಯ ವ್ಯಾಪಾರಸ್ಥರನ್ನು ಸೇರಿಸಿ, ರೂ. ೧೦,೦೦೦/- ಸಂಗ್ರಹಿಸಿದರು; ಗದಗಿನ ಜಗದ್ಗುರು ತೋಂಟದಾರ್ಯ ಮಠದಲ್ಲಿ **ಸಂಸ್ಕೃತ ಪಾಠಶಾಲೆಯನ್ನು** ೧೮೮೯ ಅಕ್ಟೋಬರ ತಿಂಗಳಲ್ಲಿ ಸ್ಥಾಪಿಸಿದರು.

ಪ್ರಾಚೀನ ಗ್ರಂಥಗಳನ್ನು ಪ್ರಕಟಿಸುವ ಅಗತ್ಯವನ್ನು ಮನಗಂಡು ರಾ. ಬ. ಅರಟಾಳ ರುದ್ರಗೌಡರು ಹುಬ್ಬಳ್ಳಿಯಲ್ಲಿ ೧೯೦೩ ಜನೆವರಿಯಲ್ಲಿ ವೀರಶೈವ **ವಿಲಾಸ ಪ್ರೆಸ್** ಆರಂಭಿಸಲು ನೆರವಾದರು. ಮೈಸೂರ ಕಡೆಯಿಂದ ಶ್ರೀ ಎಸ್. ಶಂಕರಾರ್ಯ ಎಂಬ ಸಂಸ್ಕೃತ ಪಂಡಿತರನ್ನು ಕರೆಯಿಸಿ ನೇಮಿಸಲಾಯಿತು. ಅವರಿಗೆ ಸಂಸ್ಕೃತದಿಂದ ಕನ್ನಡಕ್ಕೆ ಭಾಷಾಂತರಿಸುವ ಕಾರ್ಯವನ್ನು ಒಪ್ಪಿಸಿದರು. ಸಾಮಾನ್ಯ ಜನರಲ್ಲಿ ತತ್ತ್ವ ಪ್ರಚಾರ ಮಾಡುವ ಘನ ಉದ್ದೇಶದಿಂದ— **"ವೀರಶೈವ ಗ್ರಂಥಮಾಲೆ"** ಎಂಬ ಹೆಸರಿನ ಮಾಸಿಕ ಪತ್ರಿಕೆಯನ್ನು ಹೊರಡಿಸುವ ಏರ್ಪಾಡು ಮಾಡಿದರು.

ಉತ್ತರ ಕರ್ನಾಟಕದ ನೆರೆಯ ಸಂಸ್ಥಾನಗಳಲ್ಲಿಯೂ **ವಿದ್ಯಾರ್ಥಿ ನಿಲಯ**ಗಳನ್ನು ಸ್ಥಾಪಿಸಲು ರಾ. ಬ. ಅರಟಾಳ ರುದ್ರಗೌಡರು ಹೆಣಗಿದರು. ಇಂಥ ಕಾರ್ಯಕ್ಕಾಗಿ ರೂ. ೩೦,೦೦೦/- ಸಂಗ್ರಹಿಸಿದ ಸುದ್ದಿಯನ್ನು ಕೊಲ್ಲಾಪುರದ ಛತ್ರಪತಿ

ಶಾಹು ಮಹಾರಾಜರಿಗೆ ತಿಳಿಸಿದರು. ಆಗ ಮಹಾರಾಜರು ಅವರನ್ನು ಗೌರವದಿಂದ ಸ್ವಾಗತಿಸಿದರು. ವೀರಶೈವ ಬಡ ವಿದ್ಯಾರ್ಥಿಗಳ ಸಲುವಾಗಿ ಒಂದು **ಬೋರ್ಡಿಂಗ್** ಸ್ಥಾಪಿಸಲು ತಮ್ಮ ಒಂದು ಬಂಗ್ಲೆ ಕೊಟ್ಟರು ಮತ್ತು ಪ್ರತಿ ವರ್ಷ ಸಂಸ್ಥಾನದಿಂದ ೫೦೦೦/– ರೂಪಾಯಿ ಬೋರ್ಡಿಂಗಿಗೆ ಕೊಡಲೂ ಒಪ್ಪಿದರು. ಇದಲ್ಲದೆ, ಶ್ರೀ ರುದ್ರ-ಗೌಡರೂ ಶಿರಸಂಗಿ ಲಿಂಗರಾಜರೂ ಮೈಸೂರು ಮಹಾರಾಜರನ್ನು ಕಂಡು, ಆ ಭಾಗದ ಲಿಂಗಾಯತ ಶಿಕ್ಷಣಾಭಿವೃದ್ಧಿಗಾಗಿ ೧೯೦೫ ಜುಲೈ ತಿಂಗಳಲ್ಲಿ ನಿಧಿ ಸಂಗ್ರಹಿಸಿದ್ದುಂಟು. ಸರ್ ಪುಟ್ಟಣ್ಣ ಶೆಟ್ಟರು ಇವರೀರ್ವರನ್ನು ಮಹಾರಾಜರಿಗೆ ದರ್ಶನ ಮಾಡಿಸಿದರು.

ಶ್ರೀ ಶಿರಸಂಗಿ ಲಿಂಗರಾಜರು ದಿ. ೨೩–೮–೧೯೦೬ ರಂದು ಶಿವಾಧೀನರಾದರು. ಅದಕ್ಕೆ ಪೂರ್ವದಲ್ಲಿ ದಿ. ೧೩–೮–೧೯೦೬ ರಂದು ತಮ್ಮ ಮೃತ್ಯು ಪತ್ರವನ್ನು (Will) ಬೆಳಗಾವಿಯ ಕಲೆಕ್ಟರ ಸಾಹೇಬರ ಕಡೆಗೆ ಒಪ್ಪಿಸಿದ್ದರು. ಅದರಲ್ಲಿ ತಮ್ಮ ದೇಸಗತಿಯ ಆಸ್ತಿ ಪಾಸ್ತಿಯನ್ನೆಲ್ಲ ವೀರಶೈವ ಬಡ ವಿದ್ಯಾರ್ಥಿಗಳ ಕಲ್ಯಾಣ ಕಾರ್ಯಗಳಿಗೆ ವಿನಿ-ಯೋಗಿಸಬೇಕೆಂದು ಬರೆದಿದ್ದರು. ಆ ನಂತರ **ಶಿರಸಂಗಿ ಟ್ರಸ್ಟ್** ರೂಪುಗೊಂಡಿತು. ಬೆಳಗಾವಿಯ ಕಲೆಕ್ಟರ್ ಅದರ ಅಧ್ಯಕ್ಷರಾದರು, ಈಗಲೂ ಅವರೇ ಇದ್ದಾರೆ. ಈ ತ್ಯಾಗದ ಮಹಾಕಾರ್ಯಕ್ಕೆ ರಾ. ಬ. ಅರಟಾಳ ರುದ್ರಗೌಡರೇ ಪೋಷಕ ಶಕ್ತಿ-ಯಾಗಿದ್ದರು. ಡೆ॥ ಚನ್ನಬಸಪ್ಪನವರು ಪ್ರೇರಕ ಶಕ್ತಿಯಾದರು !

೧೯೧೬–೧೭ ನೇ ವರ್ಷ ಧಾರವಾಡ ವಿಭಾಗದ ಹರುಷ ಕಾಲ! ಮೂರು ಸಂಸ್ಥೆಗಳ ಉದಯದ ಸಮಯ. ರಾ. ಬ. ಅರಟಾಳ ಮತ್ತು ರಾ. ಬ. ರೊದ್ದ ಇವರೀರ್ವರ ಪರಿಶ್ರಮದಿಂದ **ಕರ್ನಾಟಕ ಕಾಲೇಜು** ೨೦–೬–೧೯೧೭ ರಂದು ಧಾರವಾಡದಲ್ಲಿ ಮೂಡಿ ಬಂತು. ಸರಕಾರೀ ಕನ್ನಡ ಗಂಡು ಮಕ್ಕಳ ಟ್ರೇನಿಂಗ್ ಕಾಲೇಜದಲ್ಲಿ ಈ ಕಾಲೇಜಿಗೆ ಆಶ್ರಯ ಕೊಡಲಾಯಿತು. ಈ ಕಾಲೇಜದ ಉದ್ಘಾಟ-ನೆಯ ಸಮಯದಲ್ಲಿ ರಾ. ಬ. ರೊದ್ದರು ಹೀಗೆ ಹೇಳಿದ್ದುಂಟು : "ಒಂದು ರೀತಿಯಿಂದ ರಾ. ಬ. ಅರಟಾಳ ಸಾಹೇಬರೆ ಈ ಸಂಸ್ಥೆಯ ಜನಕರೆಂದೆನ್ನಬಹುದು". ಅರಟಾಳರು ರೊದ್ದರಿಗಿಂತ ಹೆಚ್ಚು ಹಣ ಸಂಗ್ರಹಿಸಿದ್ದು, ಪರಿಶ್ರಮಿಸಿದ್ದು ಆ ಹೇಳಿಕೆಗೆ ಕಾರಣ ವಿರಬಹುದು.

ವ್ಯಾಪಾರ ಮತ್ತು ಉದ್ದಿಮೆಗಳ ಅಭಿವೃದ್ಧಿಗೆ ಒಂದು ಬ್ಯಾಂಕು ಅಗತ್ಯವೆಂದು ತಿಳಿದು, ಧಾರವಾಡ ಜಿಲ್ಲೆಯಲ್ಲಿ ಸುತ್ತಾಡಿ ಹಣ ಸಂಗ್ರಹಿಸಿ, ಧಾರವಾಡದಲ್ಲಿ ಕರ್ನಾಟಕ ಸೆಂಟ್ರಲ್ ಕೋ-ಆಪರೇಟಿವ್ಹ ಬ್ಯಾಂಕನ್ನು ರಾ. ಬ. ಅರಟಾಳರು ಮತ್ತು ದಿವಾಣ ಬಹದ್ದೂರ ಎಸ್. ವ್ಹಿ. ಮೆಣಸಿನಕಾಯಿ ಅವರು ಸ್ಥಾಪಿಸಿದರು. ಅದು ಸಹಕಾರಿ ತತ್ವವನ್ನು ಆಧರಿಸಿದ ಉತ್ತರ ಕರ್ನಾಟಕದಲ್ಲಿಯ ಪ್ರಥಮ ಸಂಸ್ಥೆಯಾಗಿ ರೂಪುಗೊಂಡಿತು. ದಿವಾಣ ಬಹದ್ದೂರ ಮೆಣಸಿನಕಾಯಿ ಅವರೇ ಈ ಬ್ಯಾಂಕಿನ ಚೇರಮನ್ನರು. ಈಗ ಈ ಬ್ಯಾಂಕು ಜಿಲ್ಲೆಯಲ್ಲಿ ಅನೇಕ ಶಾಖೆಗಳನ್ನು ಹೊಂದಿದೆ.

ಅದೇ ವರ್ಷ ಪದವೀಧರರಾಗಿ ಹೊರಬಿದ್ದ ಏಳು ತರುಣ ಧುರೀಣರು–ಸರ್ವಶ್ರೀ ಬಿ. ಎಸ್. ಹಂಚಿನಾಳ, ಪಿ. ಆರ್. ಚಿಕ್ಕೋಡಿ, ಎಚ್. ಎಫ್. ಕಟ್ಟೀಮನಿ, ಎಂ. ಆರ್. ಸಾಖರೆ, ಎಸ್. ಎಸ್. ಬಸವನಾಳ, ಬಿ. ಬಿ. ಮಮದಾಪುರ, ವ್ಹಿ. ವ್ಹಿ. ಪಾಟೀಲ ಪುಣೆಯ ಡೆಕ್ಕನ್ ಎಜ್ಯುಕೇಶನ್ ಸೊಸಾಯಿಟಿಯ ಮಾದರಿಯಲ್ಲಿ ಬೆಳಗಾವದಲ್ಲಿ ಕರ್ನಾಟಕ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ (K. L E S) ಯನ್ನು ಆರಂಭಿಸಿದರು. ಇದಕ್ಕೆ ಅರಟಾಳ ರುದ್ರಗೌಡರು ಪ್ರೇರಣೆ ನೀಡಿದರು. ಈ ಹಿಂದೆ ಬಹುಮುಖ ಸೇವೆ ಮಾಡಿದ ಶ್ರೀ ಗಿಲಗಂಚಿ ಹಾಗು ಅರಟಾಳರ ಹೆಸರನ್ನು ಹೊತ್ತ ಜಿ. ಎ. ಹೈಸ್ಕೂಲು ಈ ಸಂಸ್ಥೆಯಿಂದ ಪ್ರಾರಂಭಿಸಲ್ಪಟ್ಟಿತು. ಆಗ ಬೆಳಗಾವಿಯಲ್ಲಿ ಸರಕಾರದ ಸರದಾರ ಹೈಸ್ಕೂಲು ಒಂದೇ ಇತ್ತು. ಅದು ಶ್ರೀಮಂತರ ಮಕ್ಕಳಿಗೆ ಮಾತ್ರ ಶಿಕ್ಷಣ ಕೊಡುವ ಸಂಸ್ಥೆಯಂತೆ ಇತ್ತು.

ಡೆ. ಚೆನ್ನಬಸಪ್ಪನವರ ಸಮಾಜ ಸೇವೆಯಿಂದ ಪ್ರೇರಿತರಾದ ಈರ್ವರು ವ್ಯಕ್ತಿ-ಗಳು –ರಾ ಬ. ಗಿಲಗಂಚಿ ಹಾಗು ರಾ. ಬ. ಅರಟಾಳರು ಸಮಾಜ ಕಲ್ಯಾಣ ಕಾರ್ಯಗಳನ್ನು ಮುಂದುವರಿಸಿದ ಧನ್ಯರು, ಪುಣ್ಯ ಪುರುಷರು !

ಆಧಾರ : (೧) ಡೆ. ಚೆನ್ನಬಸವಪ್ಪನವರು —ಎಂ. ಜಿ. ಹಂದ್ರಾಳ

ಚರಿತ್ರೆಗಳು : (೨) ಅರಟಾಳ ರುದ್ರಗೌಡರು —ಎಸ್. ಎಂ. ಅಂಗಡಿ

"ಓದಿದುದು ಇಂಜನಿಯರಿಂಗ, ಆದರೆ ಮಾಡಿದುದು ಕನ್ನಡ ಸೇವೆ. ಇಂಜನಿಯರ್ ಚನ್ನಬಸಪ್ಪನವರು ಕನ್ನಡದ ಕಟ್ಟಡಕ್ಕೆ ಭದ್ರಬುನಾದಿಯನ್ನು ಹಾಕಿದರು. ಶಿಕ್ಷಣ ಇಲಾಖೆಯಲ್ಲಿ ಅವರೇನೋ ಡೆಪ್ಯುಟಿ ಆಗಿದ್ದಿರಬಹುದು; ಕನ್ನಡದ ಕೆಲಸಕ್ಕೆ ಮಾತ್ರ ಅವರೇ ಪ್ರಮುಖರೆನಿಸಿದ್ದರು. ಕನ್ನಡ ಭಾಷೆ ತನ್ನ ನೆಲದಲ್ಲಿಯೇ ಪರದೇಸಿ ಎನಿಸಿದ್ದ ಕಾಲದಲ್ಲಿ ಚನ್ನಬಸಪ್ಪನವರು ಅದಕ್ಕೆ ಪಾಲನೆ ಪೋಷಣೆ ಒದಗಿಸಿ, ಮನ್ನಣೆ ಹಾಗೂ ಮರ್ಯಾದೆಗಳನ್ನು ತಂದು ಕೊಟ್ಟು ತನ್ನ ಕಾಲಮೇಲೆ ತಾನು ನಿಲ್ಲುವಂತೆ ಮಾಡಿದರು ಮರಾಠಿ ಪ್ರಾಬಲ್ಯವನ್ನು ಹಿಂದೆ ಸರಿಸಿ ಕನ್ನಡವನ್ನು ಅದರ ಸಿಂಹಾಸನದ ಮೇಲೆ ಕುಳ್ಳಿರಿಸಿದರು.

—ಪಾಟೀಲ ಪುಟ್ಟಪ್ಪ

ವಿಲಿಯಮ್ ಅಲೆನ್ ರಸೆಲ್

—ಡಾ॥ ಆರ್. ಸಿ. ಹಿರೇಮಠ

ಉತ್ತರ ಕರ್ನಾಟಕದ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಪುನರುಜ್ಜೀವನವನ್ನು ಎಸಗಿದ ಮಹಾಪುರುಷರಲ್ಲಿ ರಸೆಲ್‌ಸಾಹೇಬರಿಗೆ ಅಗ್ರಸ್ಥಾನ ಸಲ್ಲುತ್ತದೆ. ಅವರು ಭಾರತಕ್ಕೆ ಬಂದದ್ದು ಕ್ರಿ. ಶ. ೧೮೬೦ ರಲ್ಲಿ. ಮೊದಲು ಪುಣೆಯ ಡೆಕ್ಕನ್ ಕಾಲೇಜದ ಪ್ರಿನ್ಸಿಪಾಲರಾಗಿ ನೇಮಕ ಹೊಂದಿದರು. ಅಲ್ಲಿ ಎರಡು ವರ್ಷ ಕೆಲಸ ಮಾಡುತ್ತಿರುವಾಗಲೇ ಕ್ರಿ. ಶ. ೧೮೬೨ ರಲ್ಲಿ ಅವರನ್ನು ಮುಂಬೈ ಇಲಾಖೆಯ ಮಧ್ಯಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರರೆಂದು ನಿಯಮಿಸಿದರು. ಅಲ್ಲಿಯೂ ಎರಡು ವರ್ಷ ಕೆಲಸಮಾಡಿ ಕ್ರಿ. ಶ್ರ. ೧೮೬೪ ರಲ್ಲಿ ಇದೇ ಇಲಾಖೆಯ ಉತ್ತರ ಭಾಗಕ್ಕೆ ಕಾಯಂ ಎಜ್ಯುಕೇಶನಲ್ ಇನಸ್ಪೆಕ್ಟರರೆಂದು ಹೋದರು. ಅಲ್ಲಿ ಒಂದು ವರ್ಷ ಉಳಿದು ಕ್ರಿ. ಶ ೧೮೬೫ ನೆಯ ಇಸವಿ ಮೇ ತಿಂಗಳಲ್ಲಿ ಇವರು ದಕ್ಷಿಣ ಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರೆಂದು ವರ್ಗವಾಗಿ ಬಂದರು. ಅಲ್ಲಿಂದ ಈ ದಕ್ಷಿಣ ಭಾಗದಲ್ಲಿಯೇ ೨೦ ವರ್ಷಗಳ ವರೆಗೆ ಎಜ್ಯುಕೇಶನಲ್ ಇನಸ್ಪೆಕ್ಟರರಾಗಿ ಉಳಿದು ಕನ್ನಡವನ್ನುದ್ಧರಿಸಿದ ಪುಣ್ಯಪುರುಷರೆಂಬ ಕೀರ್ತಿಗೆ ಭಾಗಿಗಳಾದರು.

ಉತ್ತರ ಕರ್ನಾಟಕವೆಂದು ಕರೆಯುತ್ತಿರುವ ಈ ಭಾಗವನ್ನು ಆಗ ದಕ್ಷಿಣದ ಮಹಾರಾಷ್ಟ್ರವೆಂದು ಕರೆಯುತ್ತಿದ್ದರು. ಈ ಹೆಸರು ಮೊನ್ನೆ ಮೊನ್ನೆಯವರಿಗೂ ಉಳಿದುದು ಅನೇಕರ ಅವಗಾಹನೆಯಲ್ಲಿರಬಹುದು. ನಾಡಿನ ಜನತೆಯ ಭಾಷೆ ಕನ್ನಡವಾಗಿದ್ದರೂ ಮರಾಠಿಯ ಪ್ರಭಾವ ಎಲ್ಲೆಲ್ಲಿಯೂ ಕಂಡುಬರುತ್ತಿತ್ತು. ಇದು ಪೇಶ್ವೆಯವರ ಆಳ್ವಿಕೆಯ ಪ್ರಭಾವವೆಂದು ಬೇರೆ ಹೇಳಬೇಕಿಲ್ಲ. ಮಳೆ ನಿಂತರೂ ಮರದ ಹನಿ ನಿಲ್ಲದೆಂಬಂತೆ ಪೇಶ್ವೆಯವರ ಆಳಿಕೆ ನಿಂತು ಬ್ರಿಟೀಶರ ಅರಸೊತ್ತಿಗೆ ಆರಂಭವಾದರೂ ಮರಾಠಿಯ ಪ್ರಭಾವ ನಿಂತಿರಲಿಲ್ಲ. ಎಲ್ಲ ಅಧಿಕಾರಿಗಳು ಮಹಾರಾಷ್ಟ್ರದವರು, ಮಕ್ಕಳು ಶಾಲೆಗಳಲ್ಲಿ ಕಲಿಯುವ ಭಾಷೆ ಮರಾಠಿ,ಕೋರ್ಟು ಕಛೇರಿಗಳ ಭಾಷೆ ಮರಾಠಿ, ವ್ಯಾಪಾರಸ್ಥರು ಲೆಕ್ಕ ಪತ್ರಗಳನ್ನಿಡುವ ಭಾಷೆ ಮರಾಠಿ, ಯುರೋಪಿಯನ್ ಅಧಿಕಾರಿಗಳೊಡನೆ ಅವರ ಕೈಕೆಳಗಿನ ಅಧಿಕಾರಿಗಳೂ ಮತ್ತಿತರರೂ ಮಾತನಾಡುತ್ತಿದ್ದ ಭಾಷೆ ಮರಾಠಿ, ಸರಕಾರಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳಿಸುತ್ತಿದ್ದ

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರಾಗಿ, ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾಗಿ, ದ್ರಾವಿಡ ಭಾಷಾ ಸಂಶೋಧನ ಕೇಂದ್ರದ ನಿರ್ದೇಶಕರಾಗಿ ನಿವೃತ್ತರಾಗಿರುವ ಡಾ॥ ಆರ್. ಸಿ ಹಿರೇಮಠ ಅವರು ಸಧ್ಯ ಧಾರವಾಡದ ಸಪ್ತಾಪೂರದಲ್ಲಿ ವಾಸವಾಗಿದ್ದಾರೆ.

ಪಾಲಕರು ಅವರು ಮರಾಠಿಯನ್ನೇ ಕಲಿಯಬೇಕೆಂದು ಅಪೇಕ್ಷಿಸುತ್ತಿದ್ದರು. ಕನ್ನಡಕ್ಕೆ ಸಾಹಿತ್ಯವಿದೆ ಸಂಸ್ಕೃತಿಯಿದೆ ಎಂಬುದರ ಅರಿವೇ ಆಗ ಯಾರಿಗೂ ಇರಲಿಲ್ಲ. ಇದ್ದ ಕೆಲವರಿಗೆ ಅನುಕೂಲ ಪರಿಸ್ಥಿತಿಯಿರಲಿಲ್ಲ ಕನ್ನಡದ ಅಭ್ಯಾಸವನ್ನು ನಿರಂತರವಾಗಿ ನಡೆಸಿಕೊಂಡು ಬಂದವರೆಂದರೆ ವೀರಶೈವ ಅಯ್ಯನವರು. ಅಯ್ಯನವರ ಶಾಲೆಗಳೆಂದು ಇತ್ತೀಚಿನವರೆಗೂ ವೀರಶೈವರ ಮಠಗಳಲ್ಲಿ ಕನ್ನಡ ಶಾಲೆಗಳು ಕಂಡು ಬರುತ್ತಿದ್ದವು. ಅಷ್ಟೇ ಏಕೆ ಮಠವೆಂಬ ಪದಕ್ಕೆ ಸಾಲೆ ಎಂಬ ಅರ್ಥ ರೂಢವಾಗಿದೆ. ಧಾರವಾಡದ ಸರಕಾರಿ ಟ್ರೇನಿಂಗ ಕಾಲೇಜನಿಂದ ಹೊರಡುತ್ತಿರುವ ಮಾಸ ಪತ್ರಿಕೆಯ ಮೊಟ್ಟ ಮೊದಲನೆಯ ಹೆಸರು ಮಠಪತ್ರಿಕೆಯೆಂಬುದಾಗಿತ್ತು ಹೀಗೆ ಎಷ್ಟೋ ದಿವಸಗಳವರೆಗೆ ಕನ್ನಡದ ಅಭ್ಯಾಸವು ವೀರಶೈವ ಮಠಗಳಿಗೆ ಮಾತ್ರ ನಿಯಂತ್ರಿತವಾಗಿತ್ತೆಂದು ಆಚಾರ್ಯ ವೆಂಕಟ ರಂಗೋ ಕಟ್ಟಿಯವರು ತಮ್ಮ ವರದಿಯಲ್ಲಿ ಹೇಳಿರುತ್ತಾರೆ—"The study of Kannada was confined to a few Lingayat Priests."

ಕನ್ನಡಿಗರು ತಮ್ಮ ಅಂಕಿತಕ್ಕಾಗಿಯೂ ಸಹ ಮರಾಠಿಯನ್ನೇ ಬಳಸುತ್ತಿದ್ದುದು ಆಗ ಬಹುತರ ಎಲ್ಲ ಕಡೆಗೂ ಕಂಡು ಬರುತ್ತಿತ್ತು. ಆರೆ ಅರಸು, ಮುಸಲ್ಮಾನಿ ಸರಸು, ಕನ್ನಡ ಬಿರಸು ಎಂಬ ರೂಢಿಯ ಮಾತು ಆ ಕಾಲದ ಕನ್ನಡಿಗರ ಸ್ವಾಭಿಮಾನ ಶೂನ್ಯತೆಯ ದ್ಯೋತಕವಲ್ಲವೇ? ಹೀಗೆ ನಿಶೆಯ ನೀರವತೆಯಲ್ಲಿ ಕನ್ನಡ ಜನತೆ ನಿಮಗ್ನವಾಗಿರುವಾಗ ಬೆಳಕನ್ನು ಬೀರಲು ಬಂದ ಭಾಸ್ಕರನಂತೆ ರಸೆಲ್ ಸಾಹೇಬರು ಇಲ್ಲಿಗೆ ಆಗಮಿಸಿದರು.

ರಸೆಲ್ ಅವರು ಮಾಡಿದ ಮೊಟ್ಟ ಮೊದಲಿನ ಮಹಾಕಾರ್ಯವೆಂದರೆ ಈ ಭಾಗದ ಜನತೆಯ ಭಾಷೆ ಕನ್ನಡವೆಂಬುದನ್ನು ಕಂಡು ಹಿಡಿದುದು. ಕನ್ನಡ ಸಾಹಿತ್ಯ ಸಂಸ್ಕೃತಿಗಳ ಹಿರಿಮೆಯನ್ನು ಅರಿತುದು. ಡೆಪ್ಯೂಟಿ ಚೆನ್ನಬಸಪ್ಪನವರಂತಹ ಪ್ರಭಾವ-ಶಾಲಿ ಕನ್ನಡಾಭಿಮಾನಿಗಳನ್ನು ಕಂಡು ಹಿಡಿದುದು. ಈ ತ್ರಿಕೂಟ ಯೋಗದಿಂದಲೇ ಕನ್ನಡ ಉಳಿಯಿತು! ಬಾಳಿತು!! ಬೆಳೆಯಿತು!!! ರಸೆಲ್ ಸಾಹೇಬರು ಕನ್ನಡಕ್ಕೆ ನೀಡಿದ ಸೇವೆಯನ್ನು ಬಣ್ಣಿಸುವ ಶಕ್ತಿ ಶಬ್ದಕ್ಕಿಲ್ಲ. ಕಂಡುಗವನ್ನು ಬಳ್ಳದಲ್ಲಿ ಅಳೆದಂತೆ ಅದನ್ನಿಲ್ಲಿ ಸಂಕ್ಷೇಪ್ತವಾಗಿ ವಿವರಿಸಲಾಗಿದೆ.

(೧) ಕನ್ನಡ ಟ್ರೇನಿಂಗ ಕಾಲೇಜು:

ಕನ್ನಡ ಶಿಕ್ಷಕರನ್ನು ತರಬೇತುಗೊಳಿಸುವದಕ್ಕಾಗಿ ಬೆಳಗಾಂವಿಯಲ್ಲಿದ್ದ ನಾರ್ಮಲ್ ಸ್ಕೂಲು ರಸೆಲ್ ಸಾಹೇಬರ ಆಳಿಕೆ ಆರಂಭವಾದೊಡನೆಯೇ ಟ್ರೇನಿಂಗ ಕಾಲೇಜದ ರೂಪುವಡೆಯಿತು. ರಸೆಲ್ ಸಾಹೇಬರು ತಮ್ಮ ೧೮೬೫-೬೬ ನೆಯ ಸಾಲಿನ ವರದಿಯಲ್ಲಿಯೇ ಈ ವಿಷಯವಾಗಿ ಹೀಗೆ ಬರೆದಿರುವರು: ಕನ್ನಡವನ್ನು ಕಲಿಸಲು

ಯೋಗ್ಯರಾದ ಶಿಕ್ಷಕರನ್ನು ನಾನು ಹುಡುಕುತ್ತಿದ್ದೇನೆ. ಈ ತಿಂಗಳು ಬೆಳಗಾಂವಿಯ ಟ್ರೇನಿಂಗ ಸ್ಕೂಲಿನಲ್ಲಿ ಕನ್ನಡ ಮಾಸ್ತರರ ಸ್ಥಾನಕ್ಕೆ ಅತ್ಯಂತ ಯೋಗ್ಯರಾದ ಒಬ್ಬ ಶಿಕ್ಷಕರನ್ನು ನಿಯಮಿಸಿದ್ದೇನೆ. ಈ ವರ್ಷ ಈ ಬೆಳಗಾಂವಿಯ ಟ್ರೇನಿಂಗ ಸ್ಕೂಲನ್ನು ಪುಣೆ ಅಹಮ್ಮದಾಬಾದಗಳಲ್ಲಿರುವ ಟ್ರೇನಿಂಗ ಕಾಲೇಜುಗಳ ಮಟ್ಟಕ್ಕೆ ಏರಿಸಲು ಬೇಕಾದ ಹಣದ ಯೋಜನೆಯನ್ನು ಮಾಡಿದ್ದೇನೆ—

"I have this year budgeted for means to put the Belgaum training School on the same Footing as a vernacular College as those of Poona and Ahmadabad".

(೨) ಕನ್ನಡ ಡೆಪ್ಯುಟಿ ಇನ್‌ಸ್ಪೆಕ್ಟರರು ಮತ್ತು ಕನ್ನಡ ಶಿಕ್ಷಕರು:

ಮಹಾರಾಷ್ಟ್ರ ಗುಜರಾಥಗಳಲ್ಲಿರುವ ಶಾಲೆಗಳಲ್ಲಿ ಮರಾಠಿ,ಗುಜರಾಥಿ ಭಾಷೆಗಳಿಗೆ ಇರುವ ಸ್ಥಾನ, ಉತ್ತರ ಕರ್ನಾಟಕದಲ್ಲಿಯ ಶಾಲೆಗಳಲ್ಲಿ ಕನ್ನಡಕ್ಕೆ ಪ್ರಾಪ್ತವಾಗಬೇಕೆಂದು ರಸೆಲ್ ಸಾಹೇಬರ ಹೆಬ್ಬಯಕೆಯಾಗಿದ್ದಿತು. ಅದಕ್ಕಾಗಿ ಅವರು ಕನ್ನಡದ ಬಗೆಗೆ ಉಜ್ವಲ ಅಭಿಮಾನವುಳ್ಳವರೂ ಮೇಧಾವಿಗಳೂ ಬೆಳಗಾಂವಿ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರೂ ಆಗಿದ್ದ ಡೆಪ್ಯೂಟಿ ಚೆನ್ನಬಸಪ್ಪನವರನ್ನು ಬೆಳಗಾಂವ ಕಾರವಾರ ಭಾಗಕ್ಕೆ ಡೆಪ್ಯೂಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಅಂತಾ ನಿಯಮಿಸಿದರು. ರಸೆಲ್ ಸಾಹೇಬರು, ಡೆಪ್ಯೂಟಿ ಚನ್ನಬಸಪ್ಪ ಇವರು ಆ ಕಾಲದಲ್ಲಿ ಕನ್ನಡದ ಎರಡು ಕಣ್ಣುಗಳಂತೆ ಕೆಲಸ ಮಾಡತೊಡಗಿದರು. ಉಳಿದ ಇಬ್ಬರು ಡೆಪ್ಯೂಟಿ ಇನ್‌ಸ್ಪೆಕ್ಟರರೂ ಶಿಕ್ಷಕರೂ ಕನ್ನಡದ ಕಡೆಗೆ ಹೆಚ್ಚು ಗಮನ ಕೊಡುವಂತೆ ಒತ್ತಾಯಿಸಿದರು. ೧೮೬೮ ನೆಯ ಇಸವಿಯಲ್ಲಿ ಭುಜಂಗರಾವ ಹುಯಿಲಗೋಳ ಎಂಬವರು ಬೆಳಗಾಂವಿ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರಾಗಿದ್ದಾಗ, ರಂಗೋ ಗೋಪಾಲ ಎಂಬ ಕಾಲೇಜ ವಿದ್ಯಾರ್ಥಿಯು ಡೆಪ್ಯೂಟಿ ಇನಸ್ಪೆಕ್ಟರರ ಹುಕುಮಿನ ಮೇರೆಗೆ ತನ್ನ ಶಾಲೆಗೆ ಹಾಜರಾಗಿ, ಆ ಬಗೆಗೆ ಪ್ರಿನ್ಸಿಪಾಲರ ಮುಖಾಂತರ ಡೆಪ್ಯೂಟಿ ಇನಸ್ಪೆಕ್ಟರರಿಗೆ ಮಾಡಿಕೊಂಡ ರಿಪೋರ್ಟಿನಲ್ಲಿ ಆತನು ತನ್ನ ಸಹಿಯನ್ನು ಮರಾಠಿಯಲ್ಲಿ ಮಾಡಿದ್ದನು. ಈ ರಿಪೋರ್ಟ ತಮ್ಮ ಕೈಗೆ ಬಂದೊಡನೆಯೇ ಮರಾಠಿ ಸಹಿಯನ್ನು ನೋಡಿ, ಡೆಪ್ಯೂಟಿ ಇನಸ್ಪೆಕ್ಟರರಾದ ಚೆನ್ನಬಸಪ್ಪನವರು ಹೀಗೆ ಬರಿಯುತ್ತಾರೆ.

ಪ್ರಿಯ ಭುಜಂಗರಾವ ನಂ. ೭೩೩/೧೮೬೮,೬೯

ಮರಾಠಿಯಲ್ಲಿ ಸಹಿ ಮಾಡುವದು ಅವಶ್ಯವಿಲ್ಲವೆಂದು ನಿಮ್ಮ ವಿದ್ಯಾರ್ಥಿಗಳಿಗೆ ತಿಳಿಸಬೇಕು. ಅವರ ಅಂಕಿತವು ಕನ್ನಡದಲ್ಲಿಯೇ ಇರುವದು ಅತ್ಯವಶ್ಯವಿದೆ.

ಬೆಳಗಾಂವ ನಿಮ್ಮ

೨೨-೮-೬೮ ಚೆನಬಸಪ್ಪ ಧಾರವಾಡ

ಡೆ. ಎ. ಇ. ಬೆಳಗಾವ

ಈ ಹುಕುಮಿನ ಮಜಕೂರವನ್ನು ಪ್ರಿನ್ಸಿಪಾಲ ಭುಜಂಗರಾಯರು ಸರಕ್ಯೂಲರ ಮೂಲಕ ಎಲ್ಲ ವಿದ್ಯಾರ್ಥಿಗಳಿಗೆ ತಿಳಿಸಿದರು.

ಇದೇ ಭುಜಂಗರಾಯರು ಪ್ರಿನ್ಸಿಪಾಲರಿದ್ದಾಗ ವಿದ್ಯಾರ್ಥಿಗಳ ಗಮನ ಮರಾಠಿಯ ಕಡೆಗೇ ಇನ್ನೂ ಹೆಚ್ಚಿದುದನ್ನು ಕಂಡು ಕ್ರಿ. ಶ. ೧೮೭೦ ರಲ್ಲಿ ಡೆಪ್ಯುಟಿ ಚೆನ್ನಬಸಪ್ಪನವರು ಭುಜಂಗರಾಯರಿಗೆ ಬರೆದ ಒಂದು ಪತ್ರದಲ್ಲಿ ಹೀಗಿದೆ.

೨/೩/೭೦
ನರಗುಂದ

ಪ್ರಿಯ ಭುಜಂಗರಾವ,

ಈಗ ನಮ್ಮ ಶಾಲೆಗಳಲ್ಲಿ ಮರಾಠಿಯನ್ನು ಕಲಿಸುವದು ಅವಶ್ಯವಿಲ್ಲ. ಶಿಕ್ಷಕರ ಯಶಸ್ಸು ಕೇವಲ ಅವರು ಕನ್ನಡವನ್ನು ಹೇಗೆ ಕಲಿಸುವರೆಂಬುದರ ಮೇಲೆಯೇ ಅವಲಂಬಿಸಿರುತ್ತದೆ. ಇದನ್ನು ನಿಮ್ಮ ಎಲ್ಲ ವಿದ್ಯಾರ್ಥಿಗಳ ಗಮನಕ್ಕೆ ಸ್ಪಷ್ಟವಾಗಿ ತಂದುಕೊಡಬೇಕು.

ನಿಮ್ಮ
ಚೆನಬಸಪ್ಪ ಧಾರವಾಡ
ಡೆ. ಎ. ಇ. ಧಾರವಾಡ

ಇದರ ಮೇಲಿಂದ ರಸೆಲ್ ಸಾಹೇಬರ ಆಳಿಕೆಯಲ್ಲಿ ಕನ್ನಡದ ಪುನರುಜ್ಜೀವನಕ್ಕಾಗಿ ಅವರೂ ಡೆ. ಚೆನ್ನಬಸಪ್ಪನವರೂ ಎಷ್ಟು ವಿಶ್ವಪ್ರಯತ್ನ ಮಾಡುತಿದ್ದರೆಂಬುದು ಸ್ಪಷ್ಟವಾಗುತ್ತದೆ. ಇವರು ಶಾಲೆಗಳ ಅಭ್ಯಾಸ ಪತ್ರಿಕೆಯಲ್ಲಿ ಕನ್ನಡದ ಅಭ್ಯಾಸಕ್ಕೆ ಅತ್ಯಂತ ಯೋಗ್ಯವಾದ ಸ್ಥಾನ ದೊರೆಯುವಂತೆ ನೋಡಿಕೊಂಡರು. ಕನ್ನಡ ಶಿಕ್ಷಕರನ್ನು ತರಬೇತುಗೊಳಿಸುವುದಕ್ಕಾಗಿ, ಬೆಳಗಾವಿಯ ನಾರ್ಮಲ್ ಸ್ಕೂಲು ಸ್ಥಾಪನವಾಗಿ,ಮುಂದೆ ಕಾಲೇಜೂ ಆಯಿತು. ಆದರೆ ಅಲ್ಲಿ ಕಲಿಸುವ ಮಾಸ್ತರರು ಮರಾಠಿಗರು. ಅವರಿಗೆ ಕನ್ನಡದ ಸರಿಯಾದ ಜ್ಞಾನವಿರಲಿಲ್ಲ ಅಲ್ಲದೆ ಅದರ ಬಗೆಗೆ ಅವರು ಆಸ್ಥೆಯನ್ನೂ ಪರಿಶ್ರಮವನ್ನೂ ತೋರಲಿಲ್ಲ. ಇದರ ಪರಿಣಾಮವಾಗಿ, ಅಲ್ಲಿ ಕನ್ನಡ ಉಮೇದುವಾರರ ಸಂಖ್ಯೆಯಾಗಲಿ, ಅವರ ಯೋಗ್ಯತೆಯಲ್ಲಿ ಪ್ರಗತಿಯಾಗಲಿ, ಕಂಡು ಬರಲಿಲ್ಲ. ಸೂಕ್ಷ್ಮ ನಿರೀಕ್ಷಕರಾದ ರಸೆಲ್‌ರವರು ಇದನ್ನು ಕೂಡಲೇ ಗ್ರಹಿಸಿದರು. ಅದಕ್ಕಾಗಿ ಅಧಿಕಾರಿಗಳನ್ನೂ ಶಿಕ್ಷಕರನ್ನೂ ನೇಮಿಸಿಕೊಳ್ಳುವಾಗ ಅವರಿಗೆ ಸರಿಯಾದ ಕನ್ನಡ ಜ್ಞಾನ ಇದೆಯೋ ಇಲ್ಲೋ ಎಂಬುದನ್ನು ಮೊದಲು ಪರೀಕ್ಷಿಸುತ್ತಿದ್ದರು. ಈ ತತ್ವಕ್ಕನುಸರಿಸಿಯೇ ಬೆಳಗಾವ ಟ್ರೇನಿಂಗ ಕಾಲೇಜದಲ್ಲಿ ಮಾಸ್ತರರನ್ನು ನಿಯಮಿಸುವಾಗ, ಮೊದಲನೆಯ ಹಾಗು ಎರಡನೆಯ ಎರಡೂ ಸ್ಥಳಗಳಿಗೂ ಉಚ್ಚ ಪದವೀಧರರಾದ ಇಬ್ಬರು ಕನ್ನಡಿಗರನ್ನೇ ನಿಯಮಿಸಿದರು. ಮತ್ತು ಕನ್ನಡ ಸಾಹಿತ್ಯದ ಬೆಳಕಿನಂತಿದ್ದ ಗಂಗಾಧರ ಮಡಿವಾಳೇಶ್ವರ ತುರಮುರಿಯವರನ್ನು ಕಾಲೇಜದ ೨ನೆಯ ಸ್ಥಳಕ್ಕೆ ನಿಯಮಿಸಿ ಆ ಸಂಸ್ಥೆಗೂ ಕನ್ನಡದ ಅಭ್ಯಾಸಕ್ಕೂ ಹೆಚ್ಚಿನ ಕಳೆಯನ್ನು

ತೆಂದುಕೊಟ್ಟರು. ಈ ವ್ಯವಸ್ಥೆಯಿಂದ ಕಾಲೇಜದ ವಿದ್ಯಾರ್ಥಿಗಳ ಸಂಖ್ಯೆಯು ಬೆಳೆಯಿತಲ್ಲದೆ ವಿದ್ಯಾರ್ಥಿಗಳ ಯೋಗ್ಯತೆಯ ಮಟ್ಟದಲ್ಲಿಯೂ ಪ್ರಗತಿಯಾಯಿತು.

(೩) ಕನ್ನಡ ಪಠ್ಯ ಪುಸ್ತಕಗಳು :

ರಸೆಲ್ ಅವರು ಬರದ ಪೂರ್ವದಲ್ಲಿ ಕನ್ನಡದಲ್ಲಿ ಮೊದಲಿನ ಮೂರು ಪಠ್ಯ ಪುಸ್ತಕಗಳನ್ನು ಮಾತ್ರ ರಚಿಸಲಾಗಿದ್ದಿತು.ಮರಾಠಿಯೊಡನೆ ಕನ್ನಡವನ್ನು ಕಲಿಸುತ್ತಿದ್ದ ಕೆಲವೇ ಕೆಲವು ಶಾಲೆಗಳಲ್ಲಿ ಮಂಗಳೂರಿನ ಮಿಶನರಿಯವರು ತಯಾರಿಸಿದ ಕನ್ನಡ ಪಠ್ಯ ಪುಸ್ತಕಗಳನ್ನು ಉಪಯೋಗಿಸುತ್ತಿದ್ದರು. ದಕ್ಷಿಣ ಭಾಗಕ್ಕಾಗಿ ಪುಣೆಯಿಂದ ಸ್ಥಳಾಂತರಿಸಿದ ಒಂದು ಕನ್ನಡ ಟ್ರಾನ್ಸಲೇಟರ ಸ್ಥಳಕ್ಕೆ ಒಬ್ಬ ಮರಾಠಿಯವನನ್ನೇ ನಿಯಮಿಸಲಾಗಿದ್ದಿತು. ರಸೆಲ್‌ರವರು ಈ ಕ್ರಮವಿಪರ್ಯವನ್ನು ಕಂಡುಹಿಡಿದು ಆದಷ್ಟು ತೀವ್ರವೇ ಆ ಸ್ಥಳಕ್ಕೆ ಒಬ್ಬ ಕನ್ನಡಿಗನನ್ನು ನೇಮಿಸಿದರು. ಆಗಲೇ ಪ್ರಾರಂಭ ವಾಗಿದ್ದ. ಮರಾಠಿ ಪಠ್ಯ ಪುಸ್ತಕಗಳ ಕನ್ನಡ ಭಾಷಾಂತರದ ಕಾರ್ಯವನ್ನು ಮುಂದು-ವರಿಸಲು ಆಜ್ಞಾಪಿಸಿದರು. ಈ ವಿಷಯವಾಗಿ ರಸೆಲ್ ಅವರು ಹೀಗೆ ಬರೆದಿರುವರು: “ನಮ್ಮ ನಾಲ್ಕನೆಯ ಪಠ್ಯಪುಸ್ತಕ ಈಗ ಸಿದ್ಧವಾಗಿದೆ.ಐದನೆಯದು ಸಿದ್ಧವಾಗುತ್ತಲಿದೆ. ಹೀಗೆ ಮೂರೇ ಮೂರು ಪಠ್ಯ ಪುಸ್ತಕಗಳಿರುವ ಮೈಸೂರ ವಿಭಾಗಕ್ಕಿಂತಲೂ ನಮ್ಮ ಈ ಭಾಗದ ಪಠ್ಯ ಪುಸ್ತಕದ ಕಾರ್ಯದಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಲಾಗಿದೆ. ಬಹುಬೇಗನೆ ಮರಾಠಿ ಪುಸ್ತಕದ ಭಾಷೆಗಳಲ್ಲಿರುವ ಪಠ್ಯ ಪುಸ್ತಕಗಳ ಮಟ್ಟಕ್ಕೆ ಈ ಭಾಗದ ಪಠ್ಯ ಪುಸ್ತಕಗಳೂ ಬರುವಂತೆ ನೋಡಿಕೊಳ್ಳಲಾಗುವದು”.

(೪) ಶಿಕ್ಷಣ ಪ್ರಸಾರ :

ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ವಿದ್ಯಾರ್ಥಿಗಳ ಸಂಖ್ಯೆ ಭರದಿಂದ ಬೆಳೆಯುತ್ತ ನಡೆಯಿತು. ಒಳ್ಳೆಯ ಅಭಿಮಾನದ ಸಂಗತಿಯೆಂದರೆ:– ಒಂದು ವರ್ಷ (೧೮೬೬–೬೭) ದಲ್ಲಿ ಹೆಣ್ಣುಮಕ್ಕಳ ೧೨ ಶಾಲೆಗಳನ್ನು ಸ್ಥಾಪಿಸಲಾಯಿತು. ೩೯೨ ಹುಡಿಗೆಯರು ಆಗ ಶಾಲೆಗೆ ಹೋಗುತ್ತಿದ್ದರು. ಇದೆಲ್ಲವೂ ರಸೆಲ್ಲರವರ ನಿಷ್ಪಕ್ಷಪಾತ ದೃಷ್ಟಿ, ಯೋಗ್ಯ ಆಡಳಿತ ಇವುಗಳ ಫಲವೆಂಬುದು ಸುಸ್ಪಷ್ಟವಿದೆ. ರಸೆಲ್ ಸಾಹೇಬರ ಯೋಗ್ಯ ನಿರ್ಣಯ ಹಾಗೂ ಸೂಕ್ಷ್ಮ ನಿರೀಕ್ಷಣೆಯ ಉತ್ತಮ ನಿದರ್ಶನವೆಂದರೆ ಅವರು ಈ ನಾಡಿನ ಮುಖ್ಯ ಜನಾಂಗವೆಂದರೆ ವೀರಶೈವರು. ಊಳುವವರೂ ವರ್ತಕರೂ ಅವರೇ. ಅವರು ಮುಂದೆ ಬರದೆ ಈ ನಾಡಿನ ಪ್ರಗತಿ ಸಾಧಿಸದು. ಎಂಬುದನ್ನು ಕಂಡು ಹಿಡಿದುದು. ಈ ವಿಷಯವಾಗಿ ವೆಂಕಟರಂಗೋ ಕಟ್ಟಿ ಅವರು ಹೀಗೆ ನುಡಿದಿರುವರು.

“The best illustration however of Mr. Russell 's Sound judgment and keen perception is to be seen in his encouragement who were totally ignored by his Predecessors though they formed the greater part of the Population of this division”.

(೫) ಮುದ್ರಣಾಲಯ :

ಇದುವರೆಗೂ ಕನ್ನಡದಲ್ಲಿ ಮುದ್ರಣ ಯಂತ್ರಗಳಿರಲಿಲ್ಲ. ಅಲ್ಲಲ್ಲಿ ಕಲ್ಲಚ್ಚಿನ ವ್ಯವಸ್ಥೆ ಮಾತ್ರ ಇಟ್ಟಿತ್ತು. ಕನ್ನಡದ ಅಚ್ಚಿಗೆ ಬೇಕಾದ ಮೊಳೆಗಳನ್ನು ಲಂಡನ್‌ದಿಂದ ತರಿಸಬೇಕೆಂದು ರಸೆಲ್ ಅವರು ವಿಶ್ವ ಪ್ರಯತ್ನ ಮಾಡಿದರು. ಆದರೆ ಅದು ಸಾಧ್ಯ ವಿರಲಿಲ್ಲ. ಅವರ ಕೈಕೆಳಗಿನ ಅಧಿಕಾರಿಯೊಬ್ಬನು ತನ್ನ ಬುದ್ಧಿ ಸಾಮರ್ಥ್ಯದಿಂದ ಕನ್ನಡದ ಮೊಳೆಗಳನ್ನು ಸಿದ್ಧಪಡಿಸಿದನು. ರಸೆಲ್‌ರವರು ಪರಮಾನಂದದಿಂದ ಬೆಳಗಾವಿ ಯಲ್ಲಿ ಮುದ್ರಣಾಲಯವನ್ನು ಸ್ಥಾಪಿಸಲು ಒಬ್ಬರಿಗೆ ಉತ್ತೇಜನ ಕೊಟ್ಟರು. ಅವನಿಗೆ ಉತ್ತೇಜನಾರ್ಥವಾಗಿ ತಾವು ಸ್ವತಃ ೨ ಸಾವಿರ ರೂಪಾಯಿ ಕೊಟ್ಟರಲ್ಲದೆ ಸರಕಾರ ದಿಂದಲೂ ೨ ಸಾವಿರ ರೂಪಾಯಿ ಸಹಾಯಧನ ಕೊಡಿಸಿದರು. ಈ ಸಹಕಾರದಿಂದ ೧೮೬೯ ರಲ್ಲಿ ಕನ್ನಡ ಪುಸ್ತಕಗಳನ್ನು ಅಚ್ಚು ಹಾಕಲು ಅನುಕೂಲವಾದ ಒಂದು ಮುದ್ರಣಾಲಯವು ಬೆಳಗಾವಿಯಲ್ಲಿ ಸ್ಥಾಪಿತವಾಯಿತು. ಇದರಿಂದ ಕನ್ನಡದ ಪುನರ್ಜೀವನಕ್ಕೆ ವಿಶೇಷವಾದ ಪ್ರೋತ್ಸಾಹ ದೊರೆಯಿತು.

ಹೀಗೆ ರಸೆಲ್ ಸಾಹೇಬರು ಕನ್ನಡ ನುಡಿಗೆ ಜೀವಕಳೆಯನ್ನಿತ್ತರು. ಇದಕ್ಕೆ ಅವರ ನಿಷ್ಪಕ್ಷಪಾತ ದೃಷ್ಟಿ, ಸೂಕ್ಷ್ಮ ನಿರೀಕ್ಷಣೆ, ಯೋಗ್ಯ ಆಡಳಿತ ಇವೇ ಕಾರಣವೆಂದು ಈ ಮೊದಲೇ ಸ್ಪಷ್ಟಪಡಿಸಲಾಗಿದೆ. ಎಲ್ಲಕ್ಕೂ ಮೇಲಾಗಿ ಅವರ ಕನ್ನಡದ ಅಭಿಮಾನ ನಮ್ಮ ನಾಡಿನ ಇತಿಹಾಸದಲ್ಲಿ ಅತ್ಯಂತ ಸಂಸ್ಮರಣೀಯವಾದುದು. ಅವರು ಸ್ಥಾಪಿಸಿದ ವರ್ಥಪ್ರಾಯಿಜ ಇಂದಿಗೂ ಅವರ ಕೀರ್ತಿಯ ದ್ಯೋತಕವಾಗಿದೆ. ರಸೆಲ್ ಸಾಹೇಬರು ಎಂದಿಗೂ ಯಾರ ಮನಸ್ಸನ್ನೂ ನೋಯಿಸುತ್ತಿರಲಿಲ್ಲವಂತೆ. ಬಿರುಸುಮಾತು ಅವರ ಬಾಯಿಂದ ಬಂದುದನ್ನೇ ಯಾರೂ ಕೇಳಲಿಲ್ಲವಂತೆ; ಅತೀ ತೀಕ್ಷ್ಣವಾದ ನುಡಿ ಗಳಿಂದಲೇ ಅಧಿಕಾರಿಗಳಲ್ಲಿ ಕಂಡುಬರುವ ಕುಂದುಕೊರತೆಗಳನ್ನು ತಿದ್ದುತ್ತಿದ್ದರಂತೆ !! ಮಾತು ಕಡಿಮೆ ಕೃತಿ ಬಹಳ !!! ರಸೆಲ್‌ರವರು ಬಹು ಜನಪ್ರಿಯವಾದುದು– ಈ ಕಾರಣಕ್ಕಾಗಿ. ಜನಪ್ರಿಯರಾದುದರಿಂದಲೇ ಇಷ್ಟು ಮಹತ್ವದ ಬದಲಾವಣೆಗಳನ್ನು ಮಾಡಲು ಸಮರ್ಥರಾದರು. ಆಗ ಅವರಿಗೆ ಬಂದ ವಿರೋಧ ಪ್ರಬಲವಾಗಿರಲಿಕ್ಕೆ ಸಾಕು. ಅವರು ಕ್ರಾಂತಿಕಾರಕರಾದುದರಿಂದಲೇ ಶಾಂತಿಯುತವಾದ ಕ್ರಾಂತಿಯನ್ನೆಸಗಿ ಕನ್ನಡಕ್ಕೆ ಜೀವಕಳೆಯನ್ನು ಕೊಟ್ಟರು. "ರಸೆಲ್‌ರ ಆಡಳಿತೆಯಿಂದ ವೀರಶೈವರಿಗೆ ವಿಶೇಷ ಲಾಭವಾಗಿದೆ. ಅವರು ರಸೆಲ್‌ರ ಚಿರಸ್ಮರಣೆಗಾಗಿ ಒಂದು ಸ್ಮಾರಕವನ್ನು ನಿರ್ಮಿಸುವದು ಅವಶ್ಯ" ಎಂದು ವೆಂಕಟ ರಂಗೋ ಕಟ್ಟಿ ಅವರು ತಮ್ಮದೊಂದು ವರದಿಯಲ್ಲಿ ಬರೆದಿರುವರು. ವೀರಶೈವರಷ್ಟೇ ಏಕೆ ಸಮಸ್ತ ಕನ್ನಡಿಗರೂ ಆಗ ಕನ್ನಡ- ವನ್ನುಳಿಸಿದ ಪುಣ್ಯಪುರುಷರಾದ ರಸೆಲ್ ಹಾಗೂ ಡೆಪ್ಯೂಟಿ ಚೆನ್ನಬಸಪ್ಪನವರಿಗೆ ವಿಶೇಷ ಋಣಿಯಾಗಿದ್ದಾರೆ. ಇಂದು ಬೆಳಗುತ್ತಿರುವದು ಅಂದು ಹಚ್ಚಿದ ಕನ್ನಡದ ನಂದಾದೀಪ; ಆದುದರಿಂದ ಆ ಪುಣ್ಯ ಪುರುಷರನ್ನು ಸ್ಮರಿಸುವದು ನಮ್ಮೆಲ್ಲರ ಪ್ರಥಮ ಕರ್ತವ್ಯವು.

◎◎◎

ಡೆ. ಚೆನ್ನಬಸವಪ್ಪನವರ ಸಮಕಾಲೀನರು

—ಎಸ್. ಪಿ. ಪಾಟೀಲ

೧೯ನೆಯ ಶತಮಾನದ ಪೂರ್ವಾರ್ಧದಲ್ಲಿ ಆಗ ಸದರ್ನ ಮರಾಠಾ ಪ್ರದೇಶವೆಂದೂ ದಕ್ಷಿಣ ಭಾಗವೆಂದೂ ಕರೆಯಲ್ಪಡುತ್ತಿದ್ದ ಕನ್ನಡ ನಾಡಿನಲ್ಲಿ ಕನ್ನಡಕ್ಕೆ ಕತ್ತಲೆ ಕವಿದಿತ್ತು. ಆಗ ಮನೆತನಗಳಲ್ಲಿಯೂ ವ್ಯವಹಾರ ಉದ್ಯೋಗಗಳಲ್ಲಿಯೂ ಸರಕಾರಿ ಕಾಗದ ಪತ್ರಗಳಲ್ಲಿಯೂ ಕನ್ನಡ ಶಾಲೆಗಳೆಂದು ಕರೆಯಲ್ಪಟ್ಟ ಶಿಕ್ಷಣ ಸಂಸ್ಥೆಗಳಲ್ಲಿಯೂ ಮರಾಠಿಯ ಕಪಿಮುಷ್ಠಿ ಪ್ರಬಲವಾಗಿದ್ದಿತು. ಕನ್ನಡ ಜನತೆಗೆ ಕನ್ನಡವೇ ತಮ್ಮ ಭಾಷೆಯೆಂದು ಮನವರಿಕೆ ಮಾಡಿ ಕೊಟ್ಟು, ಕನ್ನಡ ಶಾಲೆಗಳಲ್ಲಿಯ ಶಿಕ್ಷಣವು ಕನ್ನಡದಲ್ಲಿಯೇ ನಡೆಯುವಂತೆ ಮಾಡಿ, ಕನ್ನಡಕ್ಕೆ ಬಂದೊದಗಿದ ಕಗ್ಗತ್ತಲೆಯನ್ನು ಹೊಡೆದೋಡಿಸಿನ, ಕನ್ನಡ ದೀಪವನ್ನು ಬೆಳಗಿಸಿದ ಮಹಾನುಭಾವರು ಲಿಂಗೈಕ್ಯ ಡೆಪ್ಯೂಟಿ ಚನ್ನಬಸಪ್ಪನವರು. ಇವರು ಎಂಜಿನಿಯರಿಂಗ ಕ್ಷೇತ್ರದಲ್ಲಿ ಉನ್ನತ ಪರೀಕ್ಷೆ ಪಾಸಾಗಿದ್ದರೂ ಶಿಕ್ಷಣ ಇಲಾಖೆಯನ್ನೇ ತಮ್ಮ ಜೀವನದ ಕಾರ್ಯಕ್ಷೇತ್ರವನ್ನಾಗಿಸಿಕೊಂಡು ಕನ್ನಡವನ್ನುದ್ಧರಿಸಿ, ಕನ್ನಡದ ಪ್ರಾಥಮಿಕ ಶಿಕ್ಷಣದ ಜನಕರಾಗಿ, ಶಿಕ್ಷಣ ತಜ್ಞರಾಗಿ, ಸಮಾಜ ಸುಧಾರಕರಾಗಿ ಇನ್ನು ಅನೇಕ ರೀತಿಯಲ್ಲಿ ಕನ್ನಡ ನಾಡು ನುಡಿಗಳ ಸೇವೆಯನ್ನು ತನು ಮನ ಧನದಿಂದಲೂ ತ್ರಿಕರಣ ಶುದ್ಧಿಯಿಂದಲೂ ಮಾಡಿ, ಕನ್ನಡ ಕುಲಕೋಟಿಗೆ ಪಾತಃಸ್ಮರಣೀಯರಾಗಿದ್ದಾರೆ. ಇವರು ಶಿಕ್ಷಣ ಇಲಾಖೆಗೆ ಸೇರಿದುದೇ ಕನ್ನಡಿಗರ ಭಾಗ್ಯ. ತಮಗೆ ಇಷ್ಟವಾದ ಕ್ಷೇತ್ರವನ್ನು ಆರಿಸಿಕೊಂಡು ಸುಮಾರು ೩೫ ವರುಷಗಳವರೆಗೆ ವಿಶ್ರಾಂತಿಯನ್ನದೆ ಹಗಲು ರಾತ್ರಿಯನ್ನದೆ ಕಾಯಕವೇ ಕೈಲಾಸವೆಂಬ ಶರಣರ ವಾಣಿಯನ್ನು ಅಕ್ಷರಶಃ ಕಾರ್ಯ ರೂಪಕ್ಕೆ ಇಳಿಸಿದ ಕನ್ನಡದ ಹುಲಿ ಡೆ. ಚನ್ನಬಸಪ್ಪನವರು. ೧೮೫೬ ರಲ್ಲಿ ಧಾರವಾಡದಲ್ಲಿದ್ದ ಕನ್ನಡ ಟ್ರೇನಿಂಗ ವರ್ಗದ ಮುಖ್ಯಸ್ಥರಾಗಿ, ಆ ಮೇಲೆ ಅದು ನಾರ್ಮಲ್ ಸ್ಕೂಲ ಆದನಂತರ ಅದರ ಮುಖ್ಯಾಧ್ಯಾಪಕರಾಗಿ ಕೊನೆಗೆ ಅದು ೧೮೬೫ ರಲ್ಲಿ ಕನ್ನಡ ಟ್ರೇನಿಂಗ ಕಾಲೇಜಾಗಿ ಉನ್ನತಿ ಹೊಂದಿದಾಗ ಅದರ ಪ್ರಪ್ರಥಮ ಪ್ರಿನ್ಸಿಪಾಲರಾಗಿ ಮುಂದೆ ಡೆಪ್ಯೂಟಿ ಎಜ್ಯುಕೇಶನಲ್ ಇನ್ಸ್‌ಪೆಕ್ಟರರಾಗಿ ಕೆಲಸ ಮಾಡುವಾಗ ಕನ್ನಡ ಶಿಕ್ಷಣದ ಸರ್ವಾಂಗೀಣ ಸುಧಾರಣೆಯ ಮಹಾ ಕಾರ್ಯದಲ್ಲಿ ಅನೇಕ ಜನ ಪಂಡಿತರ, ಭಾಷಾ ತಜ್ಞರ ಹಾಗು ಅಧಿಕಾರಿಗಳ

ಶ್ರೀ ಎಸ್. ಪಿ. ಪಾಟೀಲರು ಧಾರವಾಡದ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರಾಗಿ ಚನ್ನಬಸಪ್ಪನವರ ಬಗೆಗೆ ಹೆಚ್ಚಿನ ತಿಳುವಳಿಕೆಯನ್ನು ಪ್ರಥಮವಾಗಿ ಮಾಡಿದುದಲ್ಲದೆ ಕಾಲೇಜಿನ ಕೀರ್ತಿ ಪ್ರತಿಷ್ಠೆಯನ್ನು ಹೆಚ್ಚಿಸಲು ಕಾರಣರಾದವರು. ವಿದ್ಯಾ ಇಲಾಖೆಯಲ್ಲಿ ಯೋಜನಾಧಿಕಾರಿ ಎಂದು ನಿವೃತ್ತರಾದಮೇಲೆಯೂ ಹಲವಾರು ಸಂಘ ಸಂಸ್ಥೆಗಳಲ್ಲಿ ನಿಷ್ಠೆ, ಕ್ರಿಯಾಶೀಲ ಸೇವೆ ಸಲ್ಲಿಸಿದವರು. ಈಗ ಸಪ್ತಾಪುರ ಕೆಲಗೇರಿ ರಸ್ತೆಯಲ್ಲಿ ವಾಸಿಸುತ್ತಾರೆ.

ನೆರವನ್ನು ಯಥೇಚ್ಛವಾಗಿ ಪಡೆದರು. ಇಂಥ ಯೋಗ್ಯರಾದ ವ್ಯಕ್ತಿಗಳನ್ನು ಆಯ್ಕೆ ಮಾಡಿ,ಅವರವರ ಇಷ್ಟಾನುಸಾರ, ಶಕ್ತ್ಯಾನುಸಾರ ಕಾರ್ಯವಹಿಸಿ, ತಾವೆಲ್ಲರೂ ಕೂಡಿ ಕನ್ನಡವನ್ನು ಉಳಿಸಿದರು. ಶಿಕ್ಷಣದ ಮಟ್ಟವನ್ನು ಎತ್ತರಿಸಿದರು. ಶಿಕ್ಷಕರ ಸ್ಥಾನ ಮಾನಗಳನ್ನು ಹೆಚ್ಚಿಸಿದರು. ಪಾಲಕರಲ್ಲಿ ಶಿಕ್ಷಣದ ಬಗೆಗೆ ಆಸಕ್ತಿಯನ್ನು ಹುಟ್ಟಿಸಿದರು. ಹೀಗೆ ಡೆ. ಚನ್ನಬಸಪ್ಪನವರಿಗೆ ನೆರವಾದ ಸಮಕಾಲೀನರಲ್ಲಿ ಮುಖ್ಯರಾದವರೆಂದರೆ ಮಿಸ್ಟರ ವಿಲಿಯಮ್ ರಸೆಲ್, ಗಂಗಾಧರ ಮಡಿವಾಳೇಶ್ವರ ತೂರಮರಿ, ಶಾಂತವೀರ ರಾಚಿದೇವ ಕಿತ್ತೂರ, ಭುಜಂಗರಾಯ ಹುಯಿಲಗೋಳ, ವೆಂಕಟ ರಂಗೋ ಕಟ್ಟಿ ವೀರಭದ್ರ ಮಡಿವಾಳೇಶ್ವರ ಪಂಡಿತ ಹಾಗು ಶೇಷರಾವ ಚೂರಮರಿ ಮೊದಲಾದವರು. ಡೆ. ಚನ್ನಬಸಪ್ಪನವರು ಕೈಕೊಂಡ ಮಹಾ ಕಾರ್ಯದಲ್ಲಿ ಸಕ್ರೀಯವಾಗಿ ಸಹಕರಿಸಿದ ಸಮಕಾಲೀನರು ಸಹ ನಮ್ಮೀ ಜನಾಂಗದ ಕೃತಜ್ಞತೆಗೆ ಪಾತ್ರರು. ಅವರ ಬಗೆಗೂ ನಾವೂ ನಮ್ಮ ಮುಂದಿನವರೂ ತಿಳಿದುಕೊಳ್ಳುವ ಅವಶ್ಯವಿದೆ. ಈ ಉದ್ದೇಶದಿಂದ ಅವರು ಸಾಧಿಸಿದ ಶೈಕ್ಷಣಿಕ ಕಾರ್ಯವನ್ನು ಸಂಕ್ಷೇಪಿಸುವದೇ ಈ ಲೇಖನದ ಗುರಿ ಯಾಗಿದೆ. ಈ ಎಲ್ಲ ಸಮಕಾಲೀನರಲ್ಲಿ ವಿಶೇಷ ಲಕ್ಷವನ್ನೆಳೆಯುವವರು ಇವರು :

೧. ಮಿ. ವಿಲಿಯಮ್ ರಸ್ಸೆಲ್ಲರು :

ಈ ಮಹನಿಯರು ಇಂಗ್ಲಂಡದಿಂದ ಭಾರತಕ್ಕೆ ೧೮೬೦ ರಲ್ಲಿ ಬಂದು ೧೮೬೫ ರಲ್ಲಿ ಆಗಿನ ದಕ್ಷಿಣ ಭಾಗವೆಂದರೆ ಈಗಿನ ಉತ್ತರ ಕರ್ನಾಟಕದ ಶಿಕ್ಷಣ ಇಲಾಖೆಯ ಮುಖ್ಯಾಧಿಕಾರಿಗಳಾಗಿ ನೇಮಿಸಲ್ಪಟ್ಟರು. ಅಷ್ಟರೊಳಾಗಿ ಡೆ. ಚನ್ನಬಸಪ್ಪನವರ ಕಾರ್ಯದಕ್ಷತೆ, ಕನ್ನಡಾಭಿಮಾನ, ಅವಿಶ್ರಾಂತ ದುಡಿಮೆ, ನಿಸ್ಪೃಹತೆ ಹಾಗು ಪ್ರಾಮಾಣಿ ಕತೆಗಳು ಜನ ಜನಿತವಾಗಿದ್ದವು. ಆದುದರಿಂದ ಅವರಿಬ್ಬರಲ್ಲಿ ಅನ್ಯೋನ್ಯ ವಿಶ್ವಾಸ ಗೌರವಗಳು ತಾವಾಗಿಯೇ ಕಾಣಿಸಿ ಕಡೆತನಕ ಉಳಿದವು. ಈ ಭಾಗದಲ್ಲಿ ರಸೆಲ್ಲರು ಸುಮಾರು ೨೦ ವರುಷ ಸೇವೆ ಸಲ್ಲಿಸಿ ಕನ್ನಡವನ್ನುದ್ಧರಿಸಿದ ಪುಣ್ಯ ಪುರುಷರಲ್ಲಿ ಒಬ್ಬ-ರೆನಿಸಿದರು. ಈ ಮಹನಿಯರು ಮಾಡಿದ ಪ್ರಥಮ ಕಾರ್ಯವೆಂದರೆ ಈ ನಾಡಿನ ಜನತೆಯ ಭಾಷೆ ಕನ್ನಡವೆಂಬುದನ್ನು ಕಂಡು ಹಿಡಿದುದು, ಕನ್ನಡ ಸಾಹಿತ್ಯ ಸಂಸ್ಕೃತಿ ಗಳ ಹಿರಿಮೆಯನ್ನು ಅರಿತುದು. ಮತ್ತು ಪ್ರಭಾವಶಾಲಿಯಾದ ಡೆ. ಚನ್ನಬಸಪ್ಪ ನವರಲ್ಲಿ ಪ್ರೀತಿ ವಿಶ್ವಾಸಗಳನ್ನು ತೋರಿದುದು. ಈ ತ್ರಿಕೂಟ ಯೋಗದ ಧೋರಣೆ ಯನ್ನು ಕೊನೆಯವರೆಗೂ ಅನುಸರಿಸಿದುದರಿಂದ ಕನ್ನಡ ಭಾಷೆ ಉಳಿಯಿತು, ಕನ್ನಡ ಶಿಕ್ಷಣ ಬೆಳೆಯಿತು.

ಕನ್ನಡದ ಶಿಕ್ಷಕರನ್ನು ತರಬೇತುಗೊಳಿಸುವದಕ್ಕಾಗಿ ಬೆಳಗಾಂವಿಯಲ್ಲಿದ್ದ ನಾರ್ಮಲ ಸ್ಕೂಲು ರಸ್ಸೆಲ್ ಸಾಹೇಬರ ಆಳಿಕೆ ಆರಂಭವಾದೊಡನೆಯೇ ಟ್ರೇನಿಂಗ ಕಾಲೇಜದ ರೂಪು ತಳೆಯಿತು. ರಸ್ಸೆಲ ಸಾಹೇಬರು ತಮ್ಮ ೧೮೬೫–೬೬ ನೆಯ ಸಾಲಿನ ವರದಿಯಲ್ಲಿಯೇ ಈ ವಿಷಯವಾಗಿ ಹೀಗೆ ಬರೆದಿರುವರು : "ಕನ್ನಡವನ್ನು

ಕಲಿಸಲು ಯೋಗ್ಯ ಶಿಕ್ಷಕರನ್ನು ನಾನು ಹುಡುಕುತ್ತಿದ್ದೇನೆ. ಈ ತಿಂಗಳ ಬೆಳಗಾವಿಯ ಟ್ರೇನಿಂಗ ಸ್ಕೂಲಿನಲ್ಲಿ ಕನ್ನಡ ಮಾಸ್ತರರ ಸ್ಥಾನಕ್ಕೆ ಅತ್ಯಂತ ಯೋಗ್ಯರಾದ ಒಬ್ಬ ಶಿಕ್ಷಕರನ್ನು ನಿಯಮಿಸಿದ್ದೇನೆ. ಈ ವರುಷ ಬೆಳಗಾವಿಯ ಟ್ರೇನಿಂಗ ಸ್ಕೂಲನ್ನು ಪುಣೆ ಅಹಮ್ಮದಾಬಾದಗಳಲ್ಲಿರುವ ಟ್ರೇನಿಂಗ ಕಾಲೇಜುಗಳ ಮಟ್ಟಕ್ಕೆ ಏರಿಸಲು ಬೇಕಾದ ಹಣದ ಯೋಜನೆಯನ್ನು ಮಾಡಿದ್ದೇನೆ"

ಗುಜರಾಥ ಹಾಗು ಮಹಾರಾಷ್ಟ್ರಗಳಲ್ಲಿರುವ ಶಾಲೆಗಳಲ್ಲಿ ಗುಜರಾಥಿ ಹಾಗು ಮರಾಠಿ ಭಾಷೆಗಳಿಗೆ ಇರುವ ಸ್ಥಾನಮಾನಗಳನ್ನು ಈ ಭಾಗದಲ್ಲಿಯ ಕನ್ನಡ ಶಾಲೆಗಳಲ್ಲಿ ಕನ್ನಡ ಭಾಷೆಗೆ ತಂದು ಕೊಟ್ಟರು. ಈ ಕಾಲದಲ್ಲಿ ರಸ್ಸೆಲ್ಲರೂ ಡೆ. ಚನ್ನಬಸಪ್ಪನವರೂ ಕನ್ನಡದ ಎರಡು ಕಣ್ಣುಗಳಂತೆ ಕೆಲಸ ಮಾಡಿದರು. ರಸ್ಸೆಲ್ಲರು ಕನ್ನಡ ಶಾಲೆಗಳ ಅಭ್ಯಾಸ ಪತ್ರಿಕೆಯಲ್ಲಿ ಕನ್ನಡಕ್ಕೆ ಅತ್ಯಂತ ಮಹತ್ವದ ಸ್ಥಾನ ಕೊಟ್ಟಿದ್ದರು. ನಾರ್ಮಲ್ ಸ್ಕೂಲನ್ನು ಟ್ರೇನಿಂಗ ಕಾಲೇಜಿನ ದರ್ಜೆಗೆ ಎತ್ತರಿಸಲು ಡೆ. ಚನ್ನಬಸಪ್ಪನವರು ಮಾಡಿದ ಪ್ರಯತ್ನಗಳಿಗೆ ಪೂರ್ಣಬೆಂಬಲ ನೀಡಿದರು. ಶಿಕ್ಷಕರನ್ನೂ ಅಧಿಕಾರಿಗಳನ್ನೂ ನೇಮಿಸುವಾಗ ಕನ್ನಡ ಬಲ್ಲವರಿಗೆ ಮಾತ್ರ ಪ್ರಾಶಸ್ತ್ಯ ನೀಡುತ್ತಿದ್ದರು. ಕಾಲೇಜದಲ್ಲಿ ಪದವೀಧರರನ್ನೇ ನೇಮಿಸಿ ಶಿಕ್ಷಣದ ಮಟ್ಟವನ್ನು ಏರಿಸಲು ಯಶಸ್ವಿಯಾದರು. ವಿದಾರ್ಥಿಗಳ ಸಂಖ್ಯೆಯೂ ಬೆಳೆಯಿತು. ಪಠ್ಯಪುಸ್ತಕಗಳನ್ನು ಕನ್ನಡದಲ್ಲಿಯೇ ತಯಾರಿಸಲು ಕನ್ನಡ ಬಲ್ಲವನನ್ನೇ ಭಾಷಾಂತಕಾರರನ್ನಾಗಿ ನೇಮಿಸಿ ೩, ೪, ಹಾಗು ೫ ನೆಯ ವರ್ಗಗಳ ಪಠ್ಯಪುಸ್ತಕಗಳನ್ನು ತಯಾರಿಸಿದರು. ಶಿಕ್ಷಣ ಪ್ರಸಾರದ ಕೆಲಸವನ್ನೂ ಕೈಕೊಂಡರು. ಕನ್ನಡ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ತೀವ್ರಗತಿಯಿಂದ ಬೆಳೆಯಲಾರಂಭಿಸಿತು. ೧೮೬೬–೬೭ ರಲ್ಲಿ ಹೆಣ್ಣು ಮಕ್ಕಳ ಶಾಲೆಗಳನ್ನೂ ಪ್ರಾರಂಭಿಸಿದರು. ರಸ್ಸೆಲ್ ಸಾಹೇಬರ ಯೋಗ್ಯ ನಿರ್ಣಯ, ದಕ್ಷ ಆಡಳಿತ ಹಾಗು ಸಾಮಾಜಿಕ ಪ್ರಜ್ಞೆಗಳ ನಿದರ್ಶನವೆಂದರೆ ಈ ನಾಡಿನ ಜನರ ಆಶೆ ಆಕಾಂಕ್ಷೆಗಳನ್ನೂ ಹಿತಾಭಿಲಾಷೆಗಳನ್ನೂ ಸರಿಯಾಗಿ ಅರ್ಥೈಸಿಕೊಂಡಿದ್ದರು. ಕನ್ನಡ ಪುಸ್ತಕಗಳನ್ನು ಮುದ್ರಿಸುವದಕ್ಕಾಗಿ ಅವಶ್ಯವಾದ ಮೊಳೆಗಳನ್ನು ಲಂಡನ್‌ದಿಂದ ತಯಾರಿಸಿ ತರಿಸಿಕೊಳ್ಳಲು ವಿಶ್ವಪ್ರಯತ್ನ ಮಾಡಿದರು. ಅದು ಸಾಧ್ಯವಾಗದಿದ್ದರಿಂದ ತಮ್ಮ ಕೈಕೆಳಗಿನ ಅಧಿಕಾರಿಯೊಬ್ಬನ ಸಹಾಯದಿಂದ ಕನ್ನಡದ ಮೊಳೆಗಳನ್ನು ಸಿದ್ಧ ಪಡಿಸಿಕೊಂಡು ಬೆಳಗಾವಿಯಲ್ಲಿಯೇ ಮುದ್ರಣಾಲಯವನ್ನು ಸ್ಥಾಪಿಸಲು ಉತ್ತೇಜನ ಕೊಟ್ಟರು. ಅಲ್ಲದೆ ತಾವು ಸ್ವತಃ ಅವನಿಗೆ ೨ ಸಾವಿರ ರೂಪಾಯಿಗಳನ್ನು ಸಹಾಯವನ್ನು ಮಾಡಿ ಇಲಾಖೆಯವರಿಂದಲೂ ೨ ಸಾವಿರ ರೂಪಾಯಿಗಳನ್ನು ಮಂಜೂರ ಮಾಡಿಸಿದರು. ಹೀಗೆ ರಸ್ಸೆಲ್ಲರು ಕನ್ನಡ ನಾಡಿಗೆ, ನುಡಿಗೆ ಜೀವಕಳೆಯನ್ನಿತ್ತರು. ಇದಕ್ಕೆ ಅವರ ನಿಷ್ಪಕ್ಷಪಾತ ದೃಷ್ಟಿ, ಸೂಕ್ಷ್ಮ ನಿರೀಕ್ಷಣೆ, ಯೋಗ್ಯ ಆಡಳಿತ ಇವೇ ಕಾರಣವಾಗಿದ್ದವು. ಅವರಲ್ಲಿದ್ದ ಕನ್ನಡದ ಅಭಿಮಾನ ಅತ್ಯಂತ ಸಂಸ್ಮರಣೀಯವಾಗಿದೆ. ಅವರ ಆಡಳಿತ

ಸರ್ವದೃಷ್ಟಿಯಿಂದಲೂ ಜನಪ್ರಿಯವಾಗಿತ್ತು. ಆದುದರಿಂದಲೇ ಸಮಸ್ತ ಕನ್ನಡಿಗರೂ ಅವರಿಗೆ ಚಿರಋಣಿಯಾಗಿದ್ದಾರೆ. ಅಂದು ಅವರು ಹಚ್ಚಿದ ಕನ್ನಡದ ನಂದಾದೀಪ ಇಂದಿಗೂ ಬೆಳಗುತ್ತಿದೆ ನಾವೆಲ್ಲ ಈ ಪುಣ್ಯ ಪುರುಷನ ಮಹದುಪಕಾರವನ್ನು ಸದಾ ಸ್ಮರಿಸಬೇಕು.

೨. ಗಂಗಾಧರ ಮಡಿವಾಳೇಶ್ವರ ತೂರಮರಿ :

ಡೆ. ಚನ್ನಬಸಪ್ಪನವರ ಕರ್ತೃತ್ವ ಶಕ್ತಿಗೆ ಕೈಯಾಗಿ ನಿಂತ ಮತ್ತೊಬ್ಬ ಸಮಕಾಲೀನರೆಂದರೆ ಗಂಗಾಧರ ಮಡಿವಾಳೇಶ್ವರ ತೂರಮರಿಯವರು. ಕನ್ನಡ ಶಿಕ್ಷಣ ಪ್ರಾರಂಭವಾದ ಕಾಲದಲ್ಲಿ 'ಮಠ' ಪತ್ರಿಕೆಗೆ ಕನ್ನಡ ಶಿಕ್ಷಣಕ್ಕೆ ಶ್ರೀಮಂತ ಸಾಹಿತ್ಯ-ವನ್ನು ಒದಗಿಸಿದ ಧೀಮಂತ ಶಿಕ್ಷಕರು ತೂರಮರಿಯವರು. ತಮ್ಮೂರು ಹಾಗು ಬಂಕಾಪುರದಲ್ಲಿ ಗಾವಠೀ ಶಾಲಾ ಶಿಕ್ಷಕರಾಗಿ, ಹುನಗುಂದದಲ್ಲಿ ಪ್ರಾಥಮಿಕ ಶಾಲೆಯ ಮುಖ್ಯಾಧ್ಯಾಪಕರಾಗಿ,ನಾರ್ಮಲ್ ಸ್ಕೂಲಿನಲ್ಲಿ ಅಧ್ಯಾಪಕರಾಗಿ, ಟ್ರೇನಿಂಗ ಕಾಲೇಜಿನಲ್ಲಿ ವ್ಹಾಯಿಸ ಪ್ರಿನ್ಸಿಪಾಲರಾಗಿ, ಕನ್ನಡ ಭಾಷಾಂತರಕಾರರಾಗಿ ನಾಡು ನುಡಿಗಳ ಸೇವೆಯನ್ನು ಯಥೇಚ್ಛವಾಗಿ, ಮಾಡಿ ತಮ್ಮ ಜೀವನ ಸಾರ್ಥಕತೆಯನ್ನು ಸಾಧಿಸಿ ಅವರು ಇಂದಿನ ಜನಾಂಗಕ್ಕೆ ಒಳ್ಳೇ ಆಸ್ತಿಯನ್ನು ಬಿಟ್ಟು ಹೋಗಿದ್ದಾರೆ. ಶ್ರೀ ತೂರ-ಮರಿಯವರು ಬೈಲಹೊಂಗಲದವರು. ೧೮೩೭ರಲ್ಲಿ ಜನಿಸಿದರು. ಆಗಿನ ಶಾಲೆಗಳಾದ ಅಯ್ಯನವರ ಮಠದಲ್ಲಿ ಕನ್ನಡ ಶಿಕ್ಷಣ ಪಡೆದು, ತಮ್ಮ ಗುರುಗಳಾದ ಮಡಿವಾಳೇಶ್ವರರಿಂದ ಕನ್ನಡ ಹಾಗು ಸಂಸ್ಕೃತ ಭಾಷೆಗಳನ್ನು ಕಲಿತರು. ಈ ಎರಡು ಭಾಷೆಗಳ ಆಳವಾದ ಅಭ್ಯಾಸಮಾಡಿದರು. ಮೊದಲು ತಮ್ಮೂರಿನಲ್ಲಿಯೇ ಒಂದು ಗಾವಠಿ ಶಾಲೆಯನ್ನು ಪ್ರಾರಂಭಿಸಿದರೂ ಅದು ಯಶಸ್ವಿಯಾಗಲಿಲ್ಲ. ಸುಮಾರು ೧೮೪೪ರಲ್ಲಿ ಬಂಕಾಪುರಕ್ಕೆ ಹೋಗಿ ಅಲ್ಲಿ ಸಹ ಗಾವಠಿ ಶಾಲೆಯನ್ನು ಪ್ರಾರಂಭಿಸಿ, ಶಿಕ್ಷಣ ಕೆಲಸವನ್ನೇ ತಮ್ಮ ಜೀವನ ವೃತ್ತಿಯನ್ನಾಗಿ ಕೈಕೊಂಡರು. ೬-೮ ವರುಷಗಳ ನಂತರ ಅವರನ್ನು ವಿದ್ಯಾ ಇಲಾಖೆಯವರು ಹುನಗುಂದದ ಪ್ರಾಥಮಿಕ ಶಾಲೆಗೆ ಮುಖ್ಯಾ-ಧ್ಯಾಪಕರನ್ನಾಗಿ ನೇಮಿಸಿದರು. ಅಂದಿನಿಂದ ಅವರು ಸರಕಾರಿ ನೌಕರರಾದರು. ಅವರ ಪಾಂಡಿತ್ಯ, ಭಾಷಾಭಿಮಾನ, ಶಿಕ್ಷಣದಲ್ಲಿಯ ಆಸಕ್ತಿ, ಕರ್ತವ್ಯದಕ್ಷತೆ ಮುಂತಾದವುಗಳನ್ನು ನೋಡಿ ಡೆ. ಚನ್ನಬಸಪ್ಪನವರು ಅವರನ್ನು ಟ್ರೇನಿಂಗ ಕಾಲೇಜಕ್ಕೆ ವರ್ಗಾಯಿಸಿಕೊಂಡರು. ಅವರು ಶಿಕ್ಷಕರಾದ ಮೇಲೆ ಮಾಡಿದ ಮೊದಲನೆಯ ಕೆಲಸವೆಂದರೆ ಕನ್ನಡಿಗರಲ್ಲಿ ಕನ್ನಡ ಭಾಷೆಯ ಬಗೆಗೆ ಅಭಿಮಾನವನ್ನು ಹುಟ್ಟಿಸಿ ತಮ್ಮ ಮಕ್ಕಳು ಕನ್ನಡವನ್ನೇ ಕಲಿಯುವಂತೆ ಅವರಲ್ಲಿ ಆಸಕ್ತಿಯನ್ನು ಮೂಡಿಸಿದುದು. ಕನ್ನಡ ಶಾಲೆಗಳಲ್ಲಿ ಕನ್ನಡವನ್ನೇ ಶಿಕ್ಷಣದ ಮಾಧ್ಯಮವನ್ನಾಗಿ ಮಾಡಿದ ಶ್ರೇಯಸ್ಸಿನಲ್ಲಿ ತೂರಮರಿಯವರು ಭಾಗಿಗಳು. ದೊಡ್ಡ ಕುಟುಂಬ, ಕಡಿಮೆ ಸಂಬಳಗಳ ಪರಿಣಾಮವಾಗಿ ಅವರಿಗೆ ಬಡತನ ಬಂದೊದಗಿತ್ತು. ಆಗ ಮತ್ತೊಂದು ಖಾತೆಯನ್ನು ಸೇರ

ಬೇಕೆಂದು ಮಾಡಿದ್ದರು ಹಾಗಾಗಿದ್ದರೆ ಕನ್ನಡ ಶಿಕ್ಷಣ ಹಾಗು ಸಾಹಿತ್ಯಕ್ಕೆ ಅಪಾರವಾದ ಹಾನಿಯಾಗುತ್ತಿತ್ತು. ಟ್ರೇನಿಂಗ ಕಾಲೇಜಕ್ಕೆ ಬಂದ ಮೇಲೆ ಅವರ ಸಂಬಳ ಹೆಚ್ಚಾಯಿತು. ಅವರ ಶೈಕ್ಷಣಿಕ ಚಟುವಟಿಕೆಗಳು ವಿಸ್ತಾರಗೊಂಡವು. ರಸೆಲ್ ಸಾಹೇಬರು ತೂರಮರಿಯವರ ಸರಳ ಸ್ವಭಾವ, ಸಾದಾಜೀವನ, ಹಳಗನ್ನಡ ಹಾಗು ಸಂಸ್ಕೃತಗಳಲ್ಲಿಯ ಅವರ ಅಗಾಧ ಪಾಂಡಿತ್ಯ ಹಾಗೂ ಕಾಯಕ ನಿಷ್ಠೆಗಳನ್ನು ಸಂಪೂರ್ಣ ಅರಿತುಕೊಂಡಿದ್ದರು. ಹೀಗಾಗಿ ಡೆಪ್ಯುಟಿಯವರೂ, ರಸ್ಸೆಲ್ಲರೂ ತೂರಮರಿಯವರಿಗೆ ಹೆಚ್ಚಿನ ಜವಾಬ್ದಾರಿ ಕೆಲಸಗಳನ್ನು ಕೊಡಹತ್ತಿದರು. ಮತ್ತು ಅವರ ಸಾಹಿತ್ಯ ರಚನೆಗೆ ಹೆಚ್ಚಿನ ಪ್ರೋತ್ಸಾಹ ನೀಡಿದರು. ತೂರಮರಿಯವರು ೧ರಿಂದ ೯ನೆಯ ವರ್ಗದ ವರೆಗೆ ಪಠ್ಯ ಪುಸ್ತಕಗಳನ್ನು ತಯಾರಿಸಿದರು. ಶಿಕ್ಷಕರ ಮಾರ್ಗದರ್ಶನಕ್ಕಾಗಿ ಕವಿತಾ ಪದ್ಧತಿಯನ್ನು ರೂಪಿಸಿದರು. ಶುದ್ಧವಾಗಿ ಬರೆಯಲು ಹಾಗೂ ಮಾತನಾಡಲು ಅನುಕೂಲವಾಗುವಂತೆ ವ್ಯಾಕರಣ ಕಲಿಸಲಿಕ್ಕೆಂದು ಭಾಷಾ ದರ್ಪಣವನ್ನು ರಚಿಸಿದರು. ಶಬ್ದಮಂಜರಿಯೆಂಬ ನಿಘಂಟನ್ನೂ ತಯಾರಿಸಿದರು. ಕನ್ನಡ ಸಾಹಿತ್ಯಕ್ಕೂ ಕೈಹಾಕಿ ರಾಜಶೇಖರ ವಿಲಾಸ ಎಂಬ ಕಾವ್ಯದ ಒಂದನೆಯ ಆಶ್ವಾಸಕ್ಕೆ ಸುದೀರ್ಘ ವಿಮರ್ಶೆ ಬರೆದು ಸರಕಾರದಿಂದ ನಾಲ್ಕು ಸಾವಿರ ರೂಪಾಯಿ-ಗಳ ಬಹುಮಾನವನ್ನೂ ಪಡೆದರು. ಕನ್ನಡ ಶಿಕ್ಷಣಕ್ಕೆ ಉಪಯುಕ್ತವಾದ ಸಾಹಿತ್ಯವನ್ನು ರಚಿಸಿ ಡೆಪ್ಯುಟಿಯವರ ಹಾಗು ರಸ್ಸೆಲ್ ಸಾಹೇಬರ ಪ್ರೀತಿ–ವಿಶ್ವಾಸಗಳಿಗೆ ಪಾತ್ರರಾದರು. ಅವರು ಒಬ್ಬ ಗಾವಠಿ ಶಾಲೆಯ ಶಿಕ್ಷಕರಾಗಿ ಸೇವೆಯನ್ನು ಪ್ರಾರಂಭಿಸಿ, ಬಾಣಭಟ್ಟನ ಸಂಸ್ಕೃತ ಕಾದಂಬರಿಯನ್ನು ಕನ್ನಡಕ್ಕೆ ಅನುವಾದಿಸಿ, ಅದೊಂದು ಮೂಲಕೃತಿ ಅನ್ನುವ ಹಾಗೆ ಸಾಹಿತ್ಯದ ಉನ್ನತ ಮಟ್ಟಕ್ಕೆ ಏರಿಸಿದ ಘನವಾದ ಕೀರ್ತಿಗೆ ಅರ್ಹರಾದರು. ಮಠ ಪತ್ರಿಕೆಯ ಸಹಾಯಕ ಸಂಪಾದಕರಾಗಿ, ಶ್ರೇಷ್ಠ ಗ್ರಂಥಕರ್ತರಾಗಿ, ಕನ್ನಡ ಶಿಕ್ಷಣ ಹಾಗು ಸಾಹಿತ್ಯಗಳಿಗೆ ಅಮೋಘ ಸೇವೆ ಸಲ್ಲಿಸಿ, ಮರಾಠಿಯ ಕಪಿಮುಷ್ಠಿಯಿಂದ ಕನ್ನಡಾಂಬೆಯನ್ನು ಬಿಡಿಸಿ, ಕನ್ನಡ ಮಾತೆಯ ಜಯಭೇರಿಯನ್ನು ಮೊಳಗಿಸಿದ, ಮಹಿಮಾ ಪುರುಷರಲ್ಲಿ ತೂರಮರಿಯವರು ಪ್ರಮುಖರು. ಅವರಿಂದಾದ ಮಹೋಪಕಾರದ ಸ್ಮರಣೆಗಾಗಿ ಟ್ರೇನಿಂಗ ಕಾಲೇಜದವರು ೧೯೭೭ ನವ್ಹಂಬರ ತಿಂಗಳಲ್ಲಿ ಅವರ ಪುಣ್ಯ ತಿಥಿಯ ಶತಮಾನೋತ್ಸವವನ್ನು ಆಚರಿಸಿದುದು ಔಚಿತ್ಯಪೂರ್ಣವಾಗಿದೆ. ಅವರ ಶೈಕ್ಷಣಿಕ ಜೀವನವು ಇಂದಿನ ಶಿಕ್ಷಕರಿಗೆ ಕೈದೀಪವಾಗಲಿ.

೩. ಶಾಂತವೀರ ರಾಚಿದೇವ ಕಿತ್ತೂರ :

ಡೆಪ್ಯೂಟಿ ಚೆನ್ನಬಸಪ್ಪನವರು ನಿರ್ಮಿಸಿದ ಶಿಕ್ಷಣ ಸಾಹಿತ್ಯಕೂಟದ ಸದಸ್ಯರಲ್ಲಿ ದಿವಂಗತ ಶಾಂತವೀರ ರಾಚಿದೇವ ಕಿತ್ತೂರರವರೂ ಪ್ರಮುಖರು. ಇವರು ಕಿತ್ತೂರಿ-ನವರು. ಅಲ್ಲಿಯ ಕಟ್ಟಿಮಠದ ಸ್ವಾಮಿಗಳಾದ ಹುಚ್ಚ ರಾಚಿದೇವರ ತಮ್ಮ ರಾಚಿದೇವ

ಹಾಗೂ ಅವರ ಧರ್ಮಪತ್ನಿ ಶಿವಗಂಗಾದೇವಿ ಇವರ ಹೊಟ್ಟೆಯಲ್ಲಿ ಶಾಂತವೀರ ಅವರು ೧೮೭೦ ರಲ್ಲಿ ಜನಿಸಿದರು. ತಂದೆ ರಾಚಿದೇವರು ಸಂಸ್ಕೃತ ಹಾಗೂ ಕನ್ನಡದಲ್ಲಿ ನಿಷ್ಣಾತ ಪಂಡಿತರಾಗಿದ್ದರು. ತಾಯಿ ಶಿವಗಂಗಾದೇವಿಯು ಬಸವಪುರಾಣ, ರಾಜಶೇಖರವಿಲಾಸ, ಮುಂತಾದ ಕಾವ್ಯಗಳೊಳಗಿನ ಪದ್ಯಗಳನ್ನು ಸರಾಗವಾಗಿ ಮುಖಪಾಠ ಅನ್ನುತ್ತಿದ್ದರಂತೆ. ಇದರಿಂದ ಬೆಳೆಯುತ್ತಿರುವ ಮಗುವಿನ ಎಳೆವಯಸ್ಸಿನ ಮೇಲೆ ಒಳ್ಳೆಯ ಪರಿಣಾಮವಾಗಿರಲು ಸಾಕು. ಇವರ ಚಿಕ್ಕಂದಿನ ಅಭ್ಯಾಸ ಕಿತ್ತೂರ, ಹಾನಗಲ್ಲ, ಮೈಸೂರುಗಳಲ್ಲಿ ನಡೆಯಿತೆಂದು ತಿಳಿದುಬರುತ್ತದೆ. ೧೮೬೧ ರಲ್ಲಿ ಅವರನ್ನು ಬೆಳಗಾವಿಯ ಸರದಾರ್ಸ ಹಾಯಸ್ಕೂಲಿನಲ್ಲಿ ಕನ್ನಡ ಶಿಕ್ಷಕರೆಂದು ನೇಮಿಸಿಕೊಳ್ಳಲಾಯಿತು. ಇವರ ನೇಮಣೂಕಿಗೆ ಡೆ. ಚನ್ನಬಸಪ್ಪನವರು ಕಾರಣರಾಗಿದ್ದರು. ಮುಂದೆ ೧೮೬೨ ರಲ್ಲಿ ಅವರನ್ನು ಟ್ರೇನಿಂಗ ಕಾಲೇಜಕ್ಕೆ ವರ್ಗಾಯಿಸಿಕೊಂಡರು. ೧೮೬೫ ರಲ್ಲಿ ಟ್ರೇನಿಂಗ ಕಾಲೇಜು ಧಾರವಾಡಕ್ಕೆ ಸ್ಥಳಾಂತರಿಸಲ್ಪಟ್ಟಾಗ ಶಾಂತವೀರರೂ ಧಾರವಾಡಕ್ಕೆ ಬಂದರು. ಇವರು ಹಳೆಗನ್ನಡದಲ್ಲಿಯೂ ಪರಿಣಿತರಾಗಿದ್ದರು. ಭಾಷಾವಿಷಯವನ್ನು ಕಲಿಸುತ್ತಿದ್ದರು. ಆಗ ಅವರಿಗೆ ತಿಂಗಳಿಗೆ ೩೫ ರೂ. ಸಂಬಳ ವಿದ್ದಿತ್ತಂತೆ. ಆಗ ಅಲ್ಲಿಯೇ ಡೆ. ಇನ್ಸ್‌ಪೆಕ್ಟರರೂ ಹಾಗೂ ತುರಮರಿಯವರೂ ಇರುತ್ತಿದ್ದದರಿಂದ ಸಾಹಿತ್ಯಕ, ಶೈಕ್ಷಣಿಕ ಹಾಗೂ ಸಾಮಾಜಿಕ ವಿಷಯಗಳಲ್ಲಿ ಅವರು ಪರಸ್ಪರ ವಿಚಾರ ವಿನಿಮಯ ಮಾಡುತ್ತಿದ್ದರು. ಇವರೆಲ್ಲರ ಸಾಹಿತ್ಯ ಸೇವೆಯಲ್ಲಿ ಅನ್ನದಾನೇಶ್ವರ ಅರಳೆಲೆಮಠ, ಕಟ್ಟೆಮನಿ, ಮುಂಡರಗಿ ಮೊದಲಾದವರು ಪಾಲುಗೊಳ್ಳುತ್ತಿದ್ದರು. ಇವರು ಈ ಕೆಳಗಿನ ಕೃತಿಗಳನ್ನು ರಚಿಸಿದ್ದಾರೆಂದು ಗೊತಾಗುತ್ತಿದೆ.

೧. ಶಾಂತವೀರ ಛಂದಸ್ಸು

೨. ಶಾಂತವೀರ ನಿಘಂಟು

೩. ರಾಜಶೇಖರ ವಿಲಾಸದ ಎರಡನೆಯ ಆಶ್ವಾಸಕ್ಕೆ ಟೀಕೆ.

ಇದು ಅಲ್ಲದೆ ಡಾ. ಫ್ಲೀಟರ "ನವರತ್ನಹಾರ" ಎಂಬ ಕೆಲವು ಕವಿತೆಗಳನ್ನೂ ರಚಿಸಿದ್ದಾರೆ. ಡೆಪ್ಯೂಟಿಯವರ, ತೂರಮರಿಯವರ, ಪಂಡಿತರ ಹಾಗೂ ಕಟ್ಟಿ ಅವರೊಡನೆ ಸಹಕರಿಸಿ ಕ್ರಮಿಕ ಪಠ್ಯ ಪುಸ್ತಕಗಳನ್ನು ಇತಿಹಾಸ, ಭೂಗೋಲ, ವ್ಯಾಕರಣ ಮುಂತಾದ ಶಾಲೋಪಯೋಗಿ ಪಠ್ಯ ಪುಸ್ತಕಗಳನ್ನು ರಚಿಸಿದ್ದಾರೆ. ರಾಜಶೇಖರ ವಿಲಾಸದ ೨ನೆಯ ಆಶ್ವಾಸಕ್ಕೆ ಟೀಕೆ ಬರೆದು ಕೊನೆಗೆ ಶಬ್ದಕೋಶವನ್ನು ಕೊಟ್ಟು ಅದಕ್ಕೆ ಶಾಂತವೀರ ಕೋಶವೆಂದು ಕರೆದಿದ್ದಾರೆ. ಈ ಕೋಶದಲ್ಲಿ ಸಂಸ್ಕೃತ ಹಾಗು ಕನ್ನಡ ಶಬ್ದಗಳ ಉತ್ಪತ್ತಿಗಳನ್ನು ಸುಲಭವಾಗಿ ವರ್ಣಿಸಿದ್ದಾರೆ. ಶಾಂತವೀರಯ್ಯನವರಿಗೆ ಅನೇಕ ಶಿಷ್ಯರೂ ಸ್ನೇಹಿತರೂ ಇದ್ದರು. ಅವರು ಸರದಾರ್ಸ ಹಾಯಸ್ಕೂಲಿನಲ್ಲಿ ಶಿಕ್ಷಕರಾಗಿದ್ದಾಗ ಅರಟಾಳ ರುದ್ರಗೌಡರು ಅವರ ಶಿಷ್ಯರಾಗಿದ್ದರು. ಅದರಂತೆ ೧೮೬೯ ರಲ್ಲಿ ಟ್ರೇನಿಂಗ ಕಾಲೇಜದಲ್ಲಿ ಕನ್ನಡ ಪಂಡಿತರಾಗಿದ್ದಾಗ ದಿವಂಗತ ರೊದ್ದ

ಶ್ರೀನಿವಾಸರಾಯರು ಅಲ್ಲಿ ವಿದ್ಯಾರ್ಥಿಯಾಗಿದ್ದರು. ಒಮ್ಮೆ ಶಾಂತವೀರರ ಮೊಮ್ಮಗ-ಳಾದ ಪಾರ್ವತೆಮ್ಮನವರು ರೊದ್ದರಾಯರ ಭೆಟ್ಟಿಗೆ ಹೋದಾಗ ಅವರು ತಮ್ಮ ಗುರುಗಳ ಬಗೆಗೆ ಹೇಳಿದ ಮಾತು ಹೀಗಿದೆ :

"ಶಾಂತವೀರಯ್ಯನವರು ನಿನಗೆ ಅವ್ವನ ಅಪ್ಪ ಆದರೆ ನನಗೆ ಅವರು ಸ್ವತಃ ಅಪ್ಪ" ಎಂದು ಅಭಿಮಾನದಿಂದ ಹೇಳಿದರಂತೆ. ಕನ್ನಡ ಭಾಷೆಯ ಉನ್ನತಿಗಾಗಿ ಹೋರಾಡು-ತ್ತಲಿದ್ದ ವ್ಯಕ್ತಿಗಳ ಹೃದಯಗಳು ನಾಡಿನ ಈ ಭಾಗದಲ್ಲಿ ಅಂದು ಪರಸ್ಪರ ಆಕರ್ಷಣೆಗೆ ಒಳಗಾಗಿದ್ದವು; ಪರದೇಶಿಯ ಮಿಶನರಿಗಳು ಶಾಂತವೀರಯ್ಯನವರಲ್ಲಿದ್ದ ವಿದ್ವತ್ತೆಯನ್ನು ಮೆಚ್ಚಿ ಅವರನ್ನು ತುಂಬಾ ಗೌರವದಿಂದ ಕಾಣುತ್ತಿದ್ದರು. ಅನೇಕ ಪಾದ್ರಿಗಳು ಇವರ ಶಿಷ್ಯರಾಗಿ ಕನ್ನಡ ಅಭ್ಯಾಸ ಮಾಡುತ್ತಿದ್ದರು. ರೀವ್ಹ ಫ್ಲೀಟ ಹಾಗು ಕಿಟೆಲ್ ಸಾಹೇಬರು ಪ್ರಕಟಿಸಿದ ಶಬ್ದಕೋಶಗಳ ಪ್ರತಿಗಳನ್ನು ಶಾಂತವೀರರಿಗೆ ಅವರು ಒಳ್ಳೆಯ ಗೌರವದಿಂದ ಕೊಟ್ಟಿದ್ದರಂತೆ. ಶಾಂತವೀರರು ಮೂಲತಃ ಹೆಸರುವಾಸಿಯಾದ ಶಿಕ್ಷಕರು. ಅವರು ಎಲ್ಲ ಪಂಗಡದವರಿಗೂ ಅಚ್ಚುಮೆಚ್ಚಿನವರಾಗಿದ್ದರು. ದಿವಂಗತ ಶ್ರೀನಿವಾಸ ರೊದ್ದರಾಯರು, ಸಕ್ಕರಿ ಬಾಳಾಚಾರ್ಯರು, ಎಚ್. ಜಿ. ದೇಶಪಾಂಡೆಯವರು, ಮುದುವೀಡ ಕೃಷ್ಣರಾಯರು ಹಾಗೂ ಆಲೂರ ವೆಂಕಟರಾಯರು ಅವರನ್ನು ಬಾಯಿತುಂಬ ಹೊಗಳಿದ್ದಾರೆ. ನವಕರ್ನಾಟಕವನ್ನು ನಿರ್ಮಿಸಿ ಕನ್ನಡಾಂಬೆಯ ಜಯಭೇರಿಯನ್ನು ಮೊಳಗಿಸುವ ಕನಸನ್ನು ಕಂಡ ಮಹಿಮಾಪುರುಷರಲ್ಲಿ ಶಾಂತವೀರರು ರತ್ನವಾಗಿ ಬೆಳೆದರು.

೪. **ಹುಯಿಲಗೋಳ ಭುಜಂಗರಾಯರು:** ಡೆಪ್ಯೂಟಿ ಚನ್ನಬಸಪ್ಪನವರ ತರುವಾಯ ಗಂಡುಮಕ್ಕಳ ಟ್ರೇನಿಂಗ ಕಾಲೇಜಿನ ಕಾಯಂ ಪ್ರಿನ್ಸಿಪಾಲರಾದವರು ದಿವಂಗತ ಭುಜಂಗರಾವ ಹುಯಿಲಗೋಳರವರು. ಅವರು ಈ ಹುದ್ದೆಯನ್ನು ೧-೭-೧೮೬೭ ರಂದು ವಹಿಸಿಕೊಂಡರು. ಇವರ ತಂದೆಯವರಾದ ಕೃಷ್ಣರಾವ್ ಪುಣೆಯಲ್ಲಿ ಸರಕಾರಿ ನೌಕರಿಯಲ್ಲಿದ್ದರು. ಅವರು ದೊಡ್ಡ ಉತ್ಪನ್ನದಾರರಾಗಿದ್ದರು. ಮೇಲಾಗಿ ಅವರು ಸ್ವತಃ ದೊಡ್ಡ ನೌಕರಿಯಲ್ಲಿದ್ದುದರಿಂದ ತಮ್ಮ ಮಗನಿಗೆ ನೌಕರಿ ಸಿಗುವದು ಕಠಿಣವಾಗಿರಲಿಲ್ಲ. ಭುಜಂಗರಾಯರು ೧೮೫೩-೫೪ರಲ್ಲಿ ಪುಣೆಯ ಡೆಕ್ಕನ್ ಕಾಲೇಜದಲ್ಲಿ ಅಭ್ಯಾಸ ಮಾಡುತ್ತಿದ್ದರೆಂಬುದರ ಬಗೆ ದಾಖಲೆಗಳುಂಟು. ತಮ್ಮ ಶಿಕ್ಷಣದ ನಂತರ ಭುಜಂಗರಾಯರು ಮುಂಬಯಿಯಲ್ಲಿ ನೌಕರಿ ಪ್ರಾರಂಭಿಸಿದರು. ಆಮೇಲೆ ಕೆಲವು ಕಾಲ ಎಂಜಿನಿಯರಿಂಗ ಇಲಾಖೆಯಲ್ಲಿ ಮುಖ್ಯ ಗುಮಾಸ್ತರಾಗಿ ಕೆಲಸಮಾಡಿದರು. ಅನಂತರ ಧಾರವಾಡಕ್ಕೆ ಬಂದು ಅಲ್ಲಿಯ ಎ. ವ್ಹಿ. ಸ್ಕೂಲಿನ ಮುಖ್ಯೋಪಾಧ್ಯಾಯರಾಗಿ ಸ್ವಲ್ಪ ಕಾಲ ಕೆಲಸಮಾಡಿ, ಅನಂತರ ಉತ್ತರ ಕನ್ನಡ ಜಿಲ್ಲೆಯ ಪೋಲೀಸ ಇನಸ್ಪೆಕ್ಟರರೆಂದು ನೇಮಿಸಲ್ಪಟ್ಟರು. ಆಮೇಲೆ ಸುಮಾರು ೫ ವರುಷಗಳ ವರೆಗೆ ಹತ್ತಿಯ ವ್ಯಾಪಾರ ಮಾಡಿ ಕೊನೆಗೆ ಟ್ರೇನಿಂಗ ಕಾಲೇಜದಲ್ಲಿ ಮೊದಲನೆಯ ಅಸಿಸ್ಟಂಟ

ರಾಗಿ ವಿದ್ಯಾ ಇಲಾಖೆಯನ್ನು ಸೇರಿ ೧೮೬೭ರಲ್ಲಿ ಅದರ ಪ್ರಿನ್ಸಿಪಾಲರಾಗಿ ಸುಮಾರು ೧೮ ವರುಷ ಆ ಜಾಗೆಯಲ್ಲಿಯೇ ಸೇವೆ ಸಲ್ಲಿಸಿದರು. ಆಗಿನ ಮುಖ್ಯ ಅಧಿಕಾರಿಗಳೆಂದರೆ ಮಿ. ರಸ್ಸೆಲ್, ಡೆ. ಚನ್ನಬಸಪ್ಪ ಹಾಗು ಇನ್ನುಳಿದ ಡೆಪ್ಯೂಟಿಯವರು ಮತ್ತು ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರು. ಇವರೆಲ್ಲರಲ್ಲಿ ರಸ್ಸೆಲ್, ಡೆ. ಚನ್ನಬಸಪ್ಪ ಹಾಗು ಭುಜಂಗರಾಯರು ಇವರ ತ್ರಿಕೂಟ ಒಳ್ಳೆಯ ಬಲಿಷ್ಠವಾಗಿತ್ತು. ಈ ಮೂವರು ಬಹುಕಾಲ ಸೇವೆ ಸಲ್ಲಿಸಿದರು. ಮಿ. ರಸ್ಸೆಲ್ಲರು ೨೦ ವರುಷ ದಕ್ಷಿಣ ಭಾಗದ ಎಜ್ಯುಕೇಶನಲ್ ಇನ್ಸ್‌ಪೆಕ್ಟರರಾಗಿದ್ದರು. ಡೆ. ಚನ್ನಬಸಪ್ಪನವರು ತಮ್ಮ ನೌಕರಿಯ ಮೊದಲಿನ ೧೦ ವರುಷ ಪ್ರಿನ್ಸಿಪಾಲರಾಗಿಯೂ ಆಮೇಲೆ ೧೫ ವರುಷ ಡೆಪ್ಯೂಟಿ ಎಜ್ಯುಕೇಶನಲ್ ಇನ್ಸ್‌ಪೆಕ್ಟರರಾಗಿಯೂ ಕೆಲಸಮಾಡಿದರು. ಭುಜಂಗ ರಾಯರು ಪ್ರಿನ್ಸಿಪಾಲರ ಹುದ್ದೆಯಲ್ಲಿ ೧೮ ವರುಷ ಸೇವೆ ಸಲ್ಲಿಸಿ ನೌಕರಿಯಲ್ಲಿದ್ದಾಗಲೇ ನಿಧನರಾದರು. ಡೆಪ್ಯೂಟಿಯವರು ಸಹ ತಮ್ಮ ೪೮ನೆಯ ವರುಷದಲ್ಲಿ ಮರಣ ಹೊಂದಿದರು. ಮಿ. ರಸ್ಸೆಲ್ಲರು ಮಾತ್ರ ೧೮೮೫ರಲ್ಲಿ ನಿವೃತ್ತರಾದರು. ಕನ್ನಡ ಶಿಕ್ಷಣಕ್ಕೆ ಭದ್ರ ಬುನಾದಿಯನ್ನು ಹಾಕಲಿಕ್ಕೆ ಈ ಮೂವರ ಸಾಮೂಹಿಕ ಪ್ರಯತ್ನ ಒಳ್ಳೇ ಯಶಸ್ವಿಯಾಯಿತು. ಭುಜಂಗರಾಯರು ಸಮರ್ಥ ಶಿಕ್ಷಕರಾಗಿದ್ದರು. ಭವ್ಯ ವ್ಯಕ್ತಿತ್ವವನ್ನು ಹೊಂದಿದ್ದರು. ಅವರ ಪಾಂಡಿತ್ಯವನ್ನು ಹಿರಿಯ ಅಧಿಕಾರಿಗಳೆಲ್ಲರೂ ಮೆಚ್ಚಿದ್ದರು.ಅವರು ಹಲಕೆಲವು ಪುಸ್ತಕಗಳನ್ನು ಬರೆದಂತೆ ಕಾಣುತ್ತದೆ. ಅವರು ಪ್ರಾಕೃತಿಕ ಭೂಗೋಲ ಎಂಬ ಪುಸ್ತಕವನ್ನು ಬರೆದಿದ್ದರೆಂಬುದು ನಿಃಸಂಶಯ. ಭುಜಂಗರಾಯರು ಬಹಳ ವರುಷಗಳವರೆಗೆ ಪ್ರಿನ್ಸಿಪಾಲರಾಗಿ ಕೆಲಸಮಾಡಿ ಕಾಲೇಜದ ಶಿಕ್ಷಣದ ಮಟ್ಟವನ್ನು ಎತ್ತರಿಸಲು ಮಿ. ರಸ್ಸೆಲ್ಲರ ಹಾಗು ಡೆ. ಚನ್ನಬಸಪ್ಪನವರ ಸಹಕಾರವನ್ನು ಯಥೇಚ್ಛವಾಗಿ ಪಡೆದಿದ್ದರು. ಕನ್ನಡದ ಅಭಿಮಾನಿಗಳಾಗಿ, ದಕ್ಷ ಆಡಳಿತಗಾರರೆಂದೆನಿಸಿಕೊಂಡ ಭುಜಂಗರಾಯರು ತಮ್ಮ ೫೪ನೆಯ ವರುಷದಲ್ಲಿಯೇ ನಿಧನರಾದರು. ಇಂತು ಕನ್ನಡದ ಪುರೋಗಾಮಿಗಳಾಗಿ ಕನ್ನಡ ಶಿಕ್ಷಣ ಪ್ರಗತಿ ಹೊಂದುವಂತೆ ಸಾಧನೆ ಮಾಡಿ ಕೃತಾರ್ಥರಾದ ಹಿರಿಯ ಪ್ರಿನ್ಸಿಪಾಲರೊಬ್ಬರಿರುವರು.

೫. **ವೆಂಕಟ ರಂಗೋ ಕಟ್ಟಿ :** ಡೆಪ್ಯೂಟಿ ಚನ್ನಬಸಪ್ಪನವರೊಂದಿಗೆ ಕನ್ನಡ ಭಾಷೆಯ ಉದ್ಧಾರಕ್ಕೆ, ಕನ್ನಡ ಶಿಕ್ಷಣದ ಅಭಿವೃದ್ಧಿಗೆ, ಟೊಂಕಕಟ್ಟಿ ನಿಂತವರಲ್ಲಿ ಆಚಾರ್ಯ ವೆಂಕಟ ರಂಗೋ ಕಟ್ಟಿಯವರು ಪ್ರಮುಖರು. ಇವರೆಲ್ಲರ ಪ್ರಯತ್ನದ ಫಲವಾಗಿ ಕನ್ನಡಿಗರಲ್ಲಿ ತಮ್ಮ ಭಾಷೆ ಹಾಗೂ ಸಂಸ್ಕೃತಿಗಳ ಬಗೆಗೆ ಜಾಗ್ರತೆ ಹಾಗೂ ಚೈತನ್ಯ ಮೂಡಿದವು. ಆಚಾರ್ಯ ಕಟ್ಟಿಯವರು ಮುಧೋಳದಲ್ಲಿ ಹುಟ್ಟಿದರು. (೧೮೩೩) ಈ ಊರಿನ ಮೊದಲಿನ ಹೆಸರು ಮುದುವೊಳಲ್. ಇಲ್ಲಿಯೇ ಹುಟ್ಟಿ ಬೆಳೆದು 'ಗದಾಯುದ್ಧ'ವೆಂಬ ಮೇರುಕೃತಿಯನ್ನು ರಚಿಸಿದ ಮಹಾಕವಿ ರನ್ನ. ಹೀಗಾಗಿ ಮುದುವೊಳಲ್–ಮುಧೋಳ ಕನ್ನಡ ಸಾಹಿತ್ಯದಲ್ಲಿ ಹೆಸರು ಗಳಿಸಿದೆ. ಕಟ್ಟಿಯವರು

ಮುಧೋಳದಲ್ಲಿ ಜನ್ಮ ತಾಳಿ ಬೆಳೆದರೂ ಅವರ ಮಾತೃಭಾಷೆ ಮರಾಠಿ. ಅವರ ಚಿಕ್ಕಂದಿನ ಅಭ್ಯಾಸ ಬಾದಾಮಿ ತಾಲೂಕಿನ ಬಟಕುರಕಿಯಲ್ಲಿ. ವೈದಿಕ ಅಭ್ಯಾಸವನ್ನು ಮುಗಿಸಿ ಮುಂದಿನ ಅಭ್ಯಾಸಕ್ಕಾಗಿ ಪುಣೆಗೆ ಹೋದರು. ಅವರ ಮಾತೃಭಾಷೆ ಮರಾಠಿಯಾಗಿದ್ದರಿಂದ ಅಲ್ಲಿಯ ವಾತಾವರಣವು ಅವರಿಗೆ ಒಗ್ಗೂಡಿತು. ಇಂಗ್ಲೀಷ ಭಾಷೆಯನ್ನೂ ಕಲಿತರು. ಅಲ್ಲಿ ವಿಷ್ಣುಶಾಸ್ತ್ರಿ ಹಾಗು ಚಿಪಳೂಣಕರರಂಥ ಮಹನೀಯರ ಸಂಪರ್ಕದಿಂದ ಕಟ್ಟಿಯವರ ವಿಚಾರಕ್ರಾಂತಿ ಪುಷ್ಟಿಗೊಂಡಿತು. ಅವರ ಜೀವನಕ್ಕೆ ಹೊಸ ರೂಪ ಹಾಗು ಹೊಸ ಮಾರ್ಗ ದೊರಕಿದವು. ಅಲ್ಲಿ ಅವರು ನಾಲ್ಕಾರು ವರುಷ ಅಭ್ಯಾಸ ಮಾಡಿದ ನಂತರ ಸರಕಾರಿ ಮರಾಠಿ ಟ್ರೇನಿಂಗ ಕಾಲೇಜದಲ್ಲಿ ನೌಕರಿಗೆ ಸೇರಿದರು. ಕೆಲವು ಕಾಲದ ನಂತರ ಅವರನ್ನು ಹೊನ್ನಾವರದ ಎ. ವ್ಹಿ. ಸ್ಕೂಲಿಗೆ ವರ್ಗ ಮಾಡಿದರು. ಇದು ಅವರ ಜೀವನದಲ್ಲಿಯೇ ಅತ್ಯಂತ ಮಹತ್ವದ ಸಂಗತಿ. ಯಾಕಂದರೆ ಅವರು ಪುಣೆಯಲ್ಲಿಯೇ ಉಳಿದಿದ್ದರೆ ಕನ್ನಡ ಭಾಷೆಗೆ ಅದೆಷ್ಟೋ ಹಾನಿಯಾಗುತ್ತಿತ್ತು. ಅವರು ಪುಣೆಯಲ್ಲಿದ್ದಾಗ ಮರಾಠಿ ಭಾಷೆ ಬೆಳವಣಿಗೆಯಲ್ಲಿ ತೊಡಗಿದವರ ಚಿತ್ರ ಅವರ ಕಣ್ಣ ಮುಂದೆ ಬರುತ್ತಿತ್ತು. ಮತ್ತು ತಾವು ಅಮರ ಕವಿರನ್ನನು ಹುಟ್ಟಿದ ಊರಿನವರೆಂಬುದು ಯಾವಾಗಲೂ ಅವರ ಮನಸ್ಸಿನಲ್ಲಿ ಕಟೆಯು-ತ್ತಿತ್ತು. ಯಾವುದೇ ರಾಷ್ಟ್ರದ ಉದ್ಧಾರಕ್ಕೆ ಅವರ ಭಾಷೆಯೇ ಮೂಲಾಧಾರವೆಂಬು-ದನ್ನು ಕಟ್ಟಿಯವರು ದೃಢವಾಗಿ ನಂಬಿ, ಕನ್ನಡ ನಾಡಿನ ಉದ್ಧಾರಕ್ಕೆ ಕನ್ನಡ ಭಾಷೆಯ ಅಭ್ಯಾಸ ಅತ್ಯವಶ್ಯವೆಂದು ಮನವರಿಕೆ ಮಾಡಿಕೊಂಡರು. ಅವರ ದೃಷ್ಟಿ ಕನ್ನಡದತ್ತ ಹೊರಳಿತು. ಅವರ ಅಂತರಂಗದಲ್ಲಿ ಕನ್ನಡಾಂಬೆಯ ಚಿತ್ರ ಮೂಡಿತು. ಅವರ ಮುಂದಿನ ಮಾರ್ಗವು ಕೂಡ ಹೊಳೆಯಿತು. ಕನ್ನಡ ನಾಡಿನ ಗತವೈಭವ ಅವರ ಮುಂದೆ ಬಂದು ನಿಂತಿತು. ಅದನ್ನು ಮತ್ತೊಮ್ಮೆ ಮೆರೆಯಿಸಬೇಕೆಂಬ ಪವಿತ್ರ ಸಂಕಲ್ಪವನ್ನು ಮಾಡಿದರು. ತತ್‌ಕ್ಷಣವೇ ಕನ್ನಡ ಅಭ್ಯಾಸವನ್ನು ಪ್ರಾರಂಭಿಸಿದರು. ಸ್ವಲ್ಪ ಕಾಲದಲ್ಲಿಯೇ ಕನ್ನಡ ಭಾಷೆಯ ಮೇಲೆ ತಮ್ಮ ಹತೋಟಿಯನ್ನು ಗಳಿಸಿದರು. ಅವರು ಅತ್ಯಂತ ಚುರುಕು ಬುದ್ಧಿಯುಳ್ಳವರಾಗಿದ್ದರಿಂದ ಅವರಿಗೆ ಕನ್ನಡ ಅಭ್ಯಾಸ ಅಷ್ಟೇನೂ ಕಷ್ಟವಾಗಲಿಲ್ಲ. ಅದೇ ಕಾಲಕ್ಕೆ ನಾಡಿನ ಸುದೈವವೆಂಬಂತೆ ಬೆಳಗಾವಿಯ ಟ್ರೇನಿಂಗ ಕಾಲೇಜದಲ್ಲಿ ಒಬ್ಬ ಸಹಾಯಕ ಶಿಕ್ಷಕನ ಜಾಗೆ ಖಾಲಿ ಬಿದ್ದಿತ್ತು. ಅದನ್ನು ತುಂಬಲು ಡೆ. ಚನ್ನಬಸಪ್ಪನವರು ಯೋಗ್ಯ ವ್ಯಕ್ತಿಯೊಬ್ಬನನ್ನು ಹುಡುಕುತ್ತಿದ್ದಾಗ ಕಟ್ಟಿಯವರ ಮೇಲೆ ಅವರ ದೃಷ್ಟಿ ಬಿತ್ತು. ಕೂಡಲೆ ರಸ್ಸೆಲ್ ಸಾಹೇಬರಿಗೆ ಶಿಫಾರಸಮಾಡಿ ಕಟ್ಟಿ-ಯವರನ್ನು ಟ್ರೇನಿಂಗ ಕಾಲೇಜಕ್ಕೆ ವರ್ಗಾಯಿಸಿಕೊಂಡರು. ಮೊದಲು ಅದರ ವ್ಹಾಯಿಸ ಪ್ರಿನ್ಸಿಪಾಲರಾಗಿ ಮುಂದೆ ೧೮೮೫ ರಲ್ಲಿ ಹುಯಿಲಗೋಳ ಭುಜಂಗರಾಯರು ನಿಧನ ಹೊಂದಿದ ನಂತರ ಅವರು ಕಾಯಂ ಪ್ರಿನ್ಸಿಪಾಲರಾಗಿ ನೇಮಿಸಲ್ಪಟ್ಟರು. ಇವರ ಕರ್ತವ್ಯ ದಕ್ಷತೆ, ಪ್ರಾಮಾಣಿಕತೆ, ಕನ್ನಡದಲ್ಲಿಯ ಪಾಂಡಿತ್ಯ ಮತ್ತು ನಾಲ್ಕು ಭಾಷೆ-ಗಳ ಜ್ಞಾನ ಇವುಗಳ ಫಲವಾಗಿ ಇವರನ್ನು ಕನ್ನಡ ಭಾಷಾಂತರಕಾರರೆಂದು ನೇಮಿಸಿ

ದರು. ಆ ಜಾಗೆಯಲ್ಲಿದ್ದಾಗ ಇವರ ಬರೆಹ ಹುಲುಸುಗೊಂಡಿತು. ಸಮಾಜ ಕಾರ್ಯ ವಿಸ್ತಾರವಾಯಿತು. ಸಂಘ ಸಂಸ್ಥೆಗಳು ಜನ್ಮ ತಾಳಿದವು. ಆಗ ಕನ್ನಡ ಸಾಹಿತ್ಯದ ಅಭ್ಯಾಸಕ್ಕೆ ಎಂದಿಲ್ಲದ ಸ್ಫೂರ್ತಿ ಹುಟ್ಟಿತು. ಧಾರವಾಡದಲ್ಲಿ ಕರ್ನಾಟಕ ವಿದ್ಯಾ ವರ್ಧಕ ಸಂಘವನ್ನು ಸ್ಥಾಪಿಸುವ ಕಾರ್ಯದಲ್ಲಿ ಅತ್ಯಂತ ಹುರುಪಿನಿಂದ ನೆರವಾದರು. ಮುಂದೆ ಅವರು ಅದರ ಉಪಾಧ್ಯಕ್ಷರೂ ಕೆಲವು ಕಾಲ ಅಧ್ಯಕ್ಷರೂ ಆಗಿದ್ದರು. ಟ್ರೇನಿಂಗ ಕಾಲೇಜ ಹಾಗೂ ವಿದ್ಯಾವರ್ಧಕ ಸಂಘ ಇವೆರಡರ ಮುಖಾಂತರ ಕಟ್ಟಿಯವರ ಕನ್ನಡ ಸಾಹಿತ್ಯ ಸೇವೆಯ ಶ್ರೀಮಂತಿಕೆ ಬೆಳೆಯಿತು. ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರಿದ್ದಾಗ ಅಲ್ಲಿ ಪ್ರಕಟವಾಗುತ್ತಿದ್ದ 'ಕನ್ನಡ ಶಾಲಾ' ಪತ್ರಿಕೆಗೆ ಭಾಷಾದೃಷ್ಟಿಯಿಂದ ಒಂದು ಹೊಸ ಮೆರಗನ್ನು ಕೊಟ್ಟು, ಅದರ ಉಪ ಯುಕ್ತತೆಯನ್ನು ಬಹುವಾಗಿ ಹೆಚ್ಚಿಸಿದರು. ವಿದ್ಯಾಖಾತೆಯ ಸೂಚನೆಯ ಮೇರೆಗೆ ಅನೇಕ ಪಠ್ಯ ಪುಸ್ತಕಗಳನ್ನು ಬರೆದರು. ಕನ್ನಡ ಶಿಕ್ಷಣ ಹಾಗು ಸಾಹಿತ್ಯಕ್ಕಷ್ಟೇ ತಮ್ಮ ಅಭ್ಯಾಸವನ್ನು ಸೀಮಿತಗೊಳಿಸದೇ ಜ್ಯೋತಿಷ್ಯ, ವಿಜ್ಞಾನ, ವನಸ್ಪತಿ ಹಾಗು ಖನಿಜ ಶಾಸ್ತ್ರಗಳ ಅಭ್ಯಾಸವನ್ನು ಮಾಡಿದರಲ್ಲದೆ ಅವುಗಳನ್ನು ಕುರಿತು ಪುಸ್ತಕಗಳನ್ನು ಬರೆದರು. ಅವರಿಂದ ರಚಿತವಾದ ಲಘು ವ್ಯಾಕರಣ ಸುಪ್ರಸಿದ್ಧ ವಾಗಿತ್ತು. ಗ್ರಂಥ ರಚಿಸುವಲ್ಲಿ ಅವರು ಮೇಲಪಂಕ್ತಿಯನ್ನು ಹಾಕಿದ್ದರು. ತಮಗೆ ಗೊತ್ತಿದ್ದ ಭಾಷೆಗಳಲ್ಲಿಯೂ ಅನೇಕ ಗ್ರಂಥಗಳನ್ನು ಬರೆದು ಸಾಹಿತ್ಯಕ್ಕೆ ಅತ್ಯುತ್ತಮ ಸೇವೆಯನ್ನು ಸಲ್ಲಿಸಿದರು. ತಮ್ಮದೇ ಆದ ಒಂದು ವಾರಪತ್ರಿಕೆಯನ್ನು ಸಹ ಹೊರಡಿಸಿ ಜನಸಾಮಾನ್ಯರ ಸೇವೆಯನ್ನು ಮಾಡಿದರು. ಇನ್ನೂ ಅನೇಕ ರೀತಿಯಿಂದ ಆಚಾರ್ಯ ಕಟ್ಟಿಯವರು ಕನ್ನಡ ಭಾಷಾಸೇವೆಯನ್ನು ಮಾಡಿದರಲ್ಲದೆ ಕನ್ನಡನಾಡಿನ ಇನ್ನುಳಿದ ಅನೇಕ ರಂಗಗಳಲ್ಲಿ ಅಮೋಘ ಸೇವೆಸಲ್ಲಿಸಿದರು. ಕನ್ನಡ, ಸಂಸ್ಕೃತ, ಮರಾಠಿ ಹಾಗೂ ಇಂಗ್ಲೀಷ ಭಾಷೆಗಳಲ್ಲಿ ಅಪಾರ ಪಾಂಡಿತ್ಯ ಅವರದಾಗಿತ್ತು. ಅವರು ವಿದ್ಯಾಭಿ-ಮಾನಿಗಳೂ, ಹೆಸರಾಂತ ಗ್ರಂಥಕರ್ತರೂ ಆಗಿದ್ದರು ವಾರದಪತ್ರಿಕೆಯನ್ನು ನಡೆಸಿದರು. ಕನ್ನಡ ನಾಡುನುಡಿಯ ಶ್ರೀಮಂತಿಕೆಯನ್ನು ಇನ್ನೂ ಹೆಚ್ಚಿಸಿ, ತುಂಬು ಜೀವನವನ್ನು ಕಳೆದು ೧೯೧೧ರ ಮೇ ತಿಂಗಳ ದಿನಾಂಕ ೧೨ ರಂದು ನಿಧನರಾದರು. ಇಂಥ ಸುಪುತ್ರರನ್ನು ಪಡೆದ ಕನ್ನಡನಾಡು ಧನ್ಯ. ಅವರ ಜೀವನ ಹಾಗೂ ಸಾಧನೆಗಳು ಇಂದಿನವರಿಗೆ ಸ್ಫೂರ್ತಿದಾಯಕವಾಗಿವೆ.

೬. **ಶ್ರೀ ವೀರಭದ್ರ ಮುಡಿವಾಳೇಶ್ವರ ಪಂಡಿತರೆಂಬವರು** ಇನ್ನೊಬ್ಬ ಹೆಸರಾಂತ ಸಮಕಾಲೀನರು. ಅವರ ಬಗೆಗೆ ಸಾಕಷ್ಟು ಮಾಹಿತಿ ಸಂಗ್ರಹಿಸಲ್ಪಟ್ಟಿಲ್ಲ. ಅವರು ಬೆಳಗಾವಿಯವರು. ಅವರ ಮರಿಮೊಮ್ಮಕ್ಕಳು ಈಗಲೂ ಇದ್ದಾರೆ. ಅವರಲ್ಲನೇ-ಕರು ಸರಕಾರಿ ನೌಕರಿಯಲ್ಲಿದ್ದು, ಉನ್ನತ ಹುದ್ದೆಗಳಲ್ಲಿಂದ ನಿವೃತ್ತಿ ಹೊಂದಿದ್ದಾರೆ. ಶ್ರೀ ವೀರಭದ್ರ ಪಂಡಿತರು ಕನ್ನಡ ಹಾಗೂ ಇಂಗ್ಲೀಷ ಅಭ್ಯಾಸವನ್ನು ಮುಗಿಸಿ

ಬೆಳಗಾವಿಯ ಸರದಾರ್ಸ ಹಾಯಸ್ಕೂಲಿನಲ್ಲಿ ಕನ್ನಡ ಶಿಕ್ಷಕರಾಗಿದ್ದರು. ಆಗ ಡೆಪ್ಯುಟಿ ಚನ್ನಬಸಪ್ಪನವರಿಗೆ ಅವರ ಪರಿಚಯವಾಯಿತು. ಅವರನ್ನೂ ಟ್ರೇನಿಂಗ ಕಾಲೇಜಕ್ಕೆ ವರ್ಗಾಯಿಸಿಕೊಂಡರು. ಶ್ರೀ ವೀರಭದ್ರ ಪಂಡಿತರು ಮಠಪತ್ರಿಕೆಯ ಕಾರ್ಯದಲ್ಲಿ ಶ್ರೀ ತೂರಮರಿಯವರಿಗೆ ಸಕ್ರಿಯ ಸಹಾಯ ಮಾಡುತ್ತಿದ್ದರು. ರಾಜಶೇಖರ ವಿಳಾಸದ ನಾಲ್ಕನೆಯ ಆಶ್ವಾಸಕ್ಕೆ ಟೀಕೆ ಬರೆದರೆಂದು ಸಹ ತಿಳಿಯುತ್ತದೆ. ಅವರೂ ತಮ್ಮದೇ ಆದ ಶಬ್ದಕೋಶವನ್ನು ರಚಿಸಿದ್ದಾರಂತೆ. ಹೀಗೆ ಕನ್ನಡ ಬಂಟರ ಕೂಟದಲ್ಲಿ ಸೇವೆ ಸಲ್ಲಿಸುತ್ತಿರುವಾಗ ಶ್ರೀ ವೀರಭದ್ರ ಪಂಡಿತರಿಗೆ ಮುಂಬಯಿಯ ಹಾಯಕೋರ್ಟಿನಲ್ಲಿ ಹೆಚ್ಚಿನ ದರ್ಜೆಯ ಕೆಲಸ ದೊರಕಿದ್ದರಿಂದ ಅವರು ಅಲ್ಲಿಗೆ ಹೋಗಬೇಕಾಯಿತು. ಅಲ್ಲಿಂದ ನಿವೃತ್ತರಾದ ಮೇಲೆ ತಮ್ಮ ಶೇಷಾಯುಷ್ಯವನ್ನು ಬೆಳಗಾವಿಯಲ್ಲಿಯೇ ಕಳೆದರು.

೭. ಮೇಲ್ಕಾಣಿಸಿದ ಸಾಹಿತ್ಯಕೂಟದ ಕಿರಿಯ ಸದಸ್ಯರಾದ **ಶೇಷುರಾವ ಚುರಮುರಿಯವರು** ಸಹ ಟ್ರೇನಿಂಗ ಕಾಲೇಜದಲ್ಲಿ ಶಿಕ್ಷಕರಾಗಿದ್ದರಂತೆ. ಅವರು ಸಹ ಕನ್ನಡ ಭಾಷೆಯಲ್ಲಿ ಘನವಾದ ಪಂಡಿತರಾಗಿದ್ದರು. ಅವರು ಕಾಳಿದಾಸನ 'ಅಭಿಜ್ಞಾನ ಶಾಕುಂತಲ' ನಾಟಕವನ್ನು ಕನ್ನಡಕ್ಕೆ ಅನುವಾದಿಸಿ ಅದನ್ನು ಡೆ. ಚನ್ನಬಸಪ್ಪನವರಿಗೆ ಒಂದು ಸುಂದರವಾದ ಶ್ಲೋಕದಲ್ಲಿ ಅರ್ಪಿಸಿದ್ದಾರೆ. ಹೀಗೆ ಡೆ. ಚನ್ನಬಸಪ್ಪನವರು ಕೇಂದ್ರ ಶಕ್ತಿಯಾಗಿ, ನಾಡಿನಲ್ಲಿ ಚದುರಿಸಿದ ಕನ್ನಡಾಭಿಮಾನಿಗಳ, ಪಂಡಿತರ ಹಾಗೂ ಶಿಕ್ಷಕರ ಕೂಟವನ್ನು, ರಚಿಸಿ ಸರ್ವಾಂಗೀಣ ಬೆಳವಣಿಗೆಗಾಗಿ ಕಳೆದ ಶತಮಾನದ ಉತ್ತರಾರ್ಧದಲ್ಲಿ ಕನ್ನಡ ನಾಡು–ನುಡಿಗಳ ಸರ್ವಾಂಗೀಣ ಅಭಿವೃದ್ಧಿಗಾಗಿ ಅವಿಶ್ರಾಂತ ಶ್ರಮಿಸಿ, ಕನ್ನಡ ಶಿಕ್ಷಣಕ್ಕೆ ಭದ್ರಬುನಾದಿಯನ್ನು ಹಾಕಿ ಟ್ರೇನಿಂಗ ಕಾಲೇಜನ್ನು ಉನ್ನತ ವಿದ್ಯಾಸಂಸ್ಥೆಯನ್ನಾಗಿ ಬೆಳೆಸಿದ ಕೀರ್ತಿ ಇವರೆಲ್ಲರಿಗೆ ಸೇರುತ್ತದೆ. ಇವರು ತಮ್ಮ ಜೀವನವನ್ನೇ ಶಿಕ್ಷಣದ ಹಾಗು ಸಾಹಿತ್ಯ ಸೇವೆಗೆ ಮುಡಪನ್ನಾಗಿಟ್ಟು,ನಮ್ಮೆಲ್ಲರಿಗೆ ಮಹೋಪಕಾರವನ್ನು ಮಾಡಿ, ನಮಗಾಗಿ ಅಮೂಲ್ಯ ಆಸ್ತಿಯನ್ನು ಬಿಟ್ಟು ಹೋಗಿದ್ದಾರೆ. ಇವರನ್ನು ನಾವೆಷ್ಟು ಸ್ಮರಿಸಿದರೂ ಕಡಿಮೆಯೇ ಸರಿ.

ಈ ಲೇಖನದ ತಯಾರಿಕೆಗೆ ಇದೇ ಲೇಖಕರು ಸಂಪಾದಿಸಿದ ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಶತಮಾನೋತ್ಸವದ ಸ್ಮಾರಕ ಸಂಚಿಕೆಯನ್ನು ಹೇರಳವಾಗಿ ಉಪಯೋಗಿಸಲಾಗಿದೆ.

ಹತ್ತೊಂಬತ್ತನೇ ಶತಮಾನದಲ್ಲಿ ಮೈಸೂರ ಸಂಸ್ಥಾನದಲ್ಲಿ ಶಿಕ್ಷಣ

—ಡಾ|| ಎ. ಸಿ. ದೇವೇಗೌಡ

ಭಾಗ (ಅ)

I

ಸಂಕ್ಷಿಪ್ತ ಐತಿಹಾಸಿಕ ಮತ್ತು ಭೌಗೋಲಿಕ ಹಿನ್ನೆಲೆ :

ಮೈಸೂರಿನ ನಾಲ್ಕನೇ ಯುದ್ಧದ ಕೊನೆಗೆ ಟೀಪು ಸುಲ್ತಾನನ ಪರಾಜಯದ ನಂತರ ಬ್ರಿಟೀಶ ಸರಕಾರದವರು ಸಂಸ್ಥಾನವನ್ನು ಮೈಸೂರಿನ ಹಳೆಯ ರಾಜ ಮನೆ-ತನಕ್ಕೆ ಕೊಟ್ಟು ಮುಮ್ಮಡಿ ಕೃಷ್ಣರಾಜ ಒಡೆಯರ ಅವರನ್ನು ಮೈಸೂರ ಮಹಾರಾಜರೆಂದು ನೇಮಿಸಿದರು. ೧೮೩೧ ರಲ್ಲಿ ಬ್ರಿಟೀಶ ಸರಕಾರದವರು ಆಯುಕ್ತರ (Commissioners) ಮುಖಾಂತರ ಸಂಸ್ಥಾನದ ನೇರ ಆಡಳಿತವನ್ನು ವಹಿಸಿ-ಕೊಂಡರು. ಕ್ರಿ. ಶ. ೧೮೮೧ ರಲ್ಲಿ ಸಂಸ್ಥಾನದ ಆಡಳಿತವನ್ನು ಮತ್ತೆ ಮುಮ್ಮಡಿ ಕೃಷ್ಣರಾಜ ಒಡೆಯರ ಅವರ ತರುವಾಯ ಪಟ್ಟಕ್ಕೆ ಬಂದ ಶ್ರೀ ಚಾಮರಾಜ ಒಡೆಯರ ಅವರಿಗೆ ವಹಿಸಿಕೊಡಲಾಯಿತು. ಇವರ ಮಗನಾದ ನಾಲ್ಕನೇ ಕೃಷ್ಣರಾಜ ಒಡೆಯರ ಅವರು ೧೯೦೨ ರಲ್ಲಿ ಮಹಾರಾಜರಾದರು.

ಭೌಗೋಲಿಕವಾಗಿ ಸಂಸ್ಥಾನವು ಬೆಂಗಳೂರ, ಮೈಸೂರ, ಹಾಸನ, ಕಡೂರ, ಶಿವಮೊಗ್ಗಾ, ಚಿತ್ರದುರ್ಗ, ತುಮಕೂರ ಮತ್ತು ಕೋಲಾರ ಹೀಗೆ ಎಂಟು ಜಿಲ್ಹೆಗಳಿಂದ ಕೂಡಿದ್ದಿತು. ಕೆಲ ಸಮಯದ ನಂತರ ಮೈಸೂರ ಜಿಲ್ಹೆಯನ್ನು ಮೈಸೂರ ಮತ್ತು ಮಂಡ್ಯ ಎಂದು ಎರಡು ಜಿಲ್ಹೆಗಳನ್ನಾಗಿ ಮಾಡಲಾಯಿತು. ಮುಂದೆ ಬಹು ದಿನಗಳ ನಂತರ ಕಡೂರ ಜಿಲ್ಹೆಯನ್ನು ಚಿಕ್ಕಮಗಳೂರ ಜಿಲ್ಹೆಯೆಂದು ಬದಲಾಯಿಸಲಾಯಿತು. ಬೆಂಗಳೂರಿನ ಮುಲ್ಕೀ ಮತ್ತು ಲಷ್ಕರೀ ಪ್ರದೇಶವು ೧೮೮೧ ರ ವರೆಗೆ ಸಂಸ್ಥಾನದ ಭಾಗವಾಗಿಯೇ ಉಳಿಯಿತು. ಮುಂದೆ ಬ್ರಿಟಿಷ ಆಡಳಿತೆಗೆ ಒಳಪಟ್ಟಿತು. ದೇಶವು ಸ್ವತಂತ್ರವಾಗುವವರೆಗೆ ಅದೇ ಆಡಳಿತೆಯಲ್ಲಿ ಉಳಿಯಿತು.

ಡಾ|| ಎ. ಸಿ. ದೇವೇಗೌಡರು ಭಾರತದ ಹಿರಿಯ ಶಿಕ್ಷಣ ತಜ್ಞರಲ್ಲೊಬ್ಬರು. ಕಳೆದ ಐದು ದಶಕಗಳಿಂದ ಶೈಕ್ಷಣಿಕ ತರಬೇತಿ, ಆಡಳಿತ, ಸಂಶೋಧನೆ-ಯೋಜನೆ-ಸಂಘಟನೆ ಸಾಹಿತ್ಯ ರಂಗದಲ್ಲಿ ಇವರು ಮಾಡಿದ ಸೇವೆ ಅವಿಸ್ಮರಣೀಯ.

II

ದೇಶೀಯ ಶಿಕ್ಷಣ ಕ್ರಮ :

೧೯ ನೆಯ ಶತಮಾನದ ದ್ವಿತೀಯ ಮತ್ತು ತೃತೀಯ ದಶಕಗಳಲ್ಲಿ ಈ ದೇಶದಲ್ಲಿ ರೂಢಿಯಲ್ಲಿದ್ದ ಶಿಕ್ಷಣ ಕ್ರಮದ ಬಗೆಗೆ ಬ್ರಿಟಿಷ ಸರಕಾರದವರು ಮದ್ರಾಸ, ಮುಂಬಯಿ ಮತ್ತು ಬಂಗಾಲಗಳಲ್ಲಿ ಅನ್ವೇಷಣೆ ನಡೆಸಿದರು. ಈ ಅನ್ವೇಷಣಗಳ ವರದಿಗಳು ೧೯ ನೆಯ ಶತಮಾನದ ಆದಿ ಭಾಗದಲ್ಲಿ ಅಸ್ತಿತ್ವದಲ್ಲಿದ್ದ ಸಾಲೆ ಹಾಗೂ ಅಲ್ಲಿ ಕೊಡಲ್ಪಡುತ್ತಿದ್ದ ಬೋಧನೆಯ ಸ್ವರೂಪ ಇವುಗಳ ಸುಸ್ಪಷ್ಟ ಚಿತ್ರವನ್ನು ನಿವೇದಿಸು-ತ್ತವೆ. ಪ್ರತಿಯೊಂದು ಸ್ಥಳದಲ್ಲಿ ಸಾಲೆಯು ಬೆಳಗಿನ ೬ ಗಂಟಿಗೆ ಪ್ರಾರಂಭವಾಗಿ ೧೦ ಗಂಟೆಗೆ ಮುಕ್ತಾಯವಾಗುತ್ತಿತ್ತು. ಮಕ್ಕಳು ಮನೆಗೆ ಮರಳುತ್ತಿದ್ದರು; ಮತ್ತೆ ಅಪರಾಹ್ನ ೩ ಗಂಟೆಗೆ ಸಾಲೆಯಲ್ಲಿ ಕಲೆಯುತ್ತಿದ್ದರು; ಸೂರ್ಯಾಸ್ತದವರೆಗೆ ಅಭ್ಯಾಸ ಮಾಡಿ ಮರಳಿ ಮನೆಗೆ ಹೋಗುತ್ತಿದ್ದರು; ಇಷ್ಟಕ್ಕೆ ದಿನದ ಕೆಲಸವು ಸಮಾಪ್ತಿಯಾಗುತ್ತಿತ್ತು. ಮೈಸೂರ ಸಂಸ್ಥಾನದ ದೇಶೀಯ ಸಾಲೆಗಳಲ್ಲಿ ಕೊಡಲ್ಪಡುತ್ತಿದ್ದ ಬೋಧನೆಯು ಓದು, ಬರಹ ಮತ್ತು ಗಣಿತ ಈ ವಿಷಯುಗಳಲ್ಲಿಯ ಮೂಲ ಪಾಠಗಳಾಚೆಯ ಗುರಿಯನ್ನು ಇಟ್ಟುಕೊಂಡಿರಲಿಲ್ಲ; ಆದರೆ ಸ್ಮೃತಿ ಶಕ್ತಿಯ ಅದ್ಭುತ ಬೆಳವಣಿಗೆಯಲ್ಲಿ ಪರ್ಯವಸಾನವಾಗುತ್ತಿತ್ತು. ತಾಳೆಯ ಜಾತಿಯ ಮರದ ಎಲೆಗಳ ಮೇಲೆ ಬರೆದದ್ದನ್ನು ಓದಬೇಕಾಗುತ್ತಿತ್ತು; ಅದುವೇ ಜಾದು ಎನಿಸುತ್ತಿತ್ತು. ಉಸುಕಿನ ಮೇಲೆ ಬೆರಳಿನಿಂದ ಬರೆಯುವದು ಬರೆಹದ ಪ್ರಪ್ರಥಮ ಪಾಠವೆನಿಸಿದ್ದಿತು. ತುಸು ಪ್ರಗತಿಯಾದ ಬಳಿಕ ಕಪ್ಪು ಬಣ್ಣ ಲೇಪಿಸಿದ ಹಲಗೆಗಳ ಮೇಲೆ ಬರೆಹವು ಸಾಗುತ್ತಿತ್ತು. ಅಪೂರ್ಣಾಂಕದ ಮತ್ತು ಪೂರ್ಣಾಂಕದ ಅಂಕೆಗಳ ಅಂತ್ಯವಿಲ್ಲದ ಮಗ್ಗಿಗಳನ್ನು ಮುಖ್ಯ ಹುಡುಗನು ಅಂದಂತೆ ಕಂಠಪಾಠವಾಗುವಂತೆ ಪುನರಪಿ ಅನ್ನುವದನ್ನೇ ಅಂಕ ಗಣಿತವು ಒಳಗೊಂಡಿತ್ತು. ಇಂಥ ಅಂಕಿ ಮಗ್ಗಿಗಳು ಸಾಮಾನ್ಯ ತರಹದ ಚಿಕ್ಕಪುಟ್ಟ ವ್ಯವಹಾರಗಳಲ್ಲಿ ಮನಸ್ಸಿನಲ್ಲಿಯೇ ಲೆಕ್ಕ ಮಾಡಲಿಕ್ಕೆ ಉಪಯುಕ್ತವೆನಿಸುತ್ತಿದ್ದವು. ಅಮಾವಾಸ್ಯೆ ಮತ್ತು ಹುಣ್ಣಿಮೆಯ ಮೊದಲಿನ ಮೂರು ದಿವಸಗಳು ಅಭ್ಯಾಸಕ್ಕೆ ಒಳ್ಳೇ ದಿನಗಳಲ್ಲವೆಂದು ತಿಳಿಯಲಾಗಿತ್ತು; ಆ ದಿನಗಳಂದು ಸಾಲೆಗಳಿಗೆ ಬಿಡುವು ಕೊಡಲಾಗುತ್ತಿತ್ತು. ಅದರಂತೆ ಹಲವಾರು ಹಬ್ಬ ಹಾಗೂ ಉತ್ಸವದ ದಿನಗಳಂದು ಸಹ ಸಾಲೆಗಳಿಗೆ ಬಿಡುವು ದೊರೆಯುತ್ತಿತ್ತು. ಕ್ರೂರ ಮತ್ತು ಆಗಾಗ್ಗೆ ವಿಕರಾಳ ಸ್ವರೂಪದ ಶಿಕ್ಷೆಗಳಿಂದ ಶಿಸ್ತನ್ನು ನೆಲೆಗೊಳಿಸಲಾಗುತ್ತಿತ್ತು; ಇಂಥ ಶಿಕ್ಷೆಗಳು ಈಗ ಪ್ರಚಲಿತದಲ್ಲಿಲ್ಲ; ಅವು ಈಗ ತ್ಯಾಜ್ಯವೆನಿಸಿವೆ. ಆದರೆ ಛಡಿಯು ಇದ್ದೇ ಇದೆ. ಅದು ಶಾಲಾ ಶಿಕ್ಷಕನ ಕಚೇರಿಯ ಕುರುಹು ಎನಿಸಿದೆ. ಶಿಕ್ಷಕರು ಸಾಮಾನ್ಯವಾಗಿ ಅಲ್ಪ ಪ್ರಮಾಣದ ಸಂಬಳದಿಂದ ತಮ್ಮ ಜೀವನವನ್ನು ಸಾಗಿಸುತ್ತಿದ್ದರು; ಮತ್ತು ಹಣ-ವನ್ನುಳಿದು ಬೇರೆ ರೂಪದಲ್ಲಿ ದೊರೆತ ಸಂಭಾವನೆಗಳನ್ನು ಪಡೆಯುತ್ತಿದ್ದರು; ಇಲ್ಲವೆ

ಸ್ಥಳೀಯ ಪ್ರಭಾವಶಾಲಿ ವ್ಯಕ್ತಿಯು ನಿರ್ದಿಷ್ಟಗೊಳಿಸಿದ ಅವಧಿಗೆ ಕೊಡುವ್ಹ್ಹಗುತ್ತಿಗೆ ರೂಪದ ಹಣವು ಶಿಕ್ಷಕರಿಗೆ ಉಪಯೋಗವಾಗುತ್ತಿತ್ತು. ಮಹಾನವಮಿ ಹಬ್ಬದ ಸಮಯದಲ್ಲಿ ತನ್ನ ವಿದ್ಯಾರ್ಥಿಗಳಿಗೆ ಅಂದಚೆಂದದ ಪೋಷಾಕು ತೊಡಿಸಿ ಅವರಿಂದ ಕೋಲಾಟವಾಡಿಸುತ್ತ ಸಂಭಾಷಣಾ ಸ್ವರೂಪದ ವಿನೋದಪರ ಹಾಡುಗಳನ್ನು ಹಾಡಿಸುತ್ತ ಬೀದಿಗಳಲ್ಲಿ ಸುತ್ತಾಡಿಸುವದು ಯಾವಾಗಲೂ ಶಿಕ್ಷಕನ ಸಂಪ್ರದಾಯವೇ ಆಗಿದ್ದಿತು. ಇಂಥ ಹಾಡುಗಳಲ್ಲಿ ವಿದ್ಯಾರ್ಥಿಗಳಿಗೆ ಮೊದಲೇ ತರಬೇತಿಯನ್ನು ಕೊಡ-ಲಾಗುತ್ತಿತ್ತು. ಇಂಥ ಮನರಂಜನೆಗಳಿಗೆ ಪ್ರತಿಫಲವಾಗಿ ತಂದೆ-ತಾಯಂದಿರಿಂದ ಮತ್ತು ಮಕ್ಕಳ ಸ್ನೇಹಿತರಿಂದ ಗಣನೀಯ ಹಣವು ಬಹುಮಾನಗಳ ರೂಪದಲ್ಲಿ ಶಿಕ್ಷಕರಿಗೆ ಲಭ್ಯವಾಗುತ್ತಿತ್ತು. ಆದರೆ ಈ ಪರಂಪರೆಯು ಈಗ ರೂಢಿಯಲ್ಲಿರುವದಿಲ್ಲ"೧

ಕೆಲವು!ಕಾಲ ಬೆಂಗಳೂರಲ್ಲಿ ವಾಸವಾಗಿದ್ದ ಓರ್ವ ಸಂದರ್ಶಕನು ಬಿಟ್ಟ ಸಂಕ್ಷಿಪ್ತ ಮಾಹಿತಿಯು ಮದ್ರಾಸ ಶೈಕ್ಷಣಿಕ ಪತ್ರಿಕೆಯ ೧೮೬೪ ನೆಯ ಇಸ್ವಿಯಲ್ಲಿ ಬೆಂಗಳೂರಲ್ಲಿಯ ಶಿಕ್ಷಣದ ಸ್ಥಿತಿಗತಿಯನ್ನು ಕೆಳಗಿನಂತೆ ವಿವರಿಸುತ್ತದೆ.

"ಪ್ರಾಂತದಲ್ಲಿಯ ಶಿಕ್ಷಣದ ಸ್ಥಿತಿಗತಿಯು ಸೇಂಟಜಾರ್ಜ ಫೋರ್ಟ ಪ್ರಾಂತದಲ್ಲಿ ಪ್ರಚಲಿತವಿರುವ ಶಿಕ್ಷಣಕ್ಕಿಂತ ಬಹಳ ಹೀನಾಯ ಸ್ಥಿತಿಯಲ್ಲಿದೆಯೆಂದು ಸಾಮಾನ್ಯವಾಗಿ ನಂಬಲಾಗಿದೆ. ಬೆಂಗಳೂರಲ್ಲಿ ನಾನು ವಾಸವಾಗಿದ್ದ ಅವಧಿಯಲ್ಲಿ ಈ ವಿಷಯದ ಬಗೆಗೆ ನನಗೆ ದೊರೆತ ಮಾಹಿತಿಯಿಂದ, ಸಾಮಾನ್ಯ ದೇಶೀಯರು ಸಾಧಿಸಿದ ಕೆಳಮಟ್ಟದ ಜ್ಞಾನದಿಂದ ಮತ್ತು ಮೈಸೂರ ನಾಡಿನಲ್ಲಿಯೇ ಅತ್ಯಂತ ಶ್ರೀಮಂತವೆನಿಸಿದ ಹಾಗೂ ಅತ್ಯಧಿಕ ಜನಸಂಖ್ಯೆಯುಳ್ಳ ಈ ಶಹರದಲ್ಲಿರುವ ಶಾಲೆಗಳಲ್ಲಿ ಪ್ರಚಲಿತವಿರುವ ದೋಷಪೂರಿತ ಬೋಧನಾ ಪದ್ಧತಿಯಿಂದ ನನಗೆ ಇದು ಖಚಿತವಾಗಿದೆ.

ಈ ನಾಡಿನಲ್ಲಿ ಉಚ್ಚವರ್ಗದವರೆಂದು ಗಣಿಸಲ್ಪಟ್ಟ ಅಲ್ಪ ಜನಾಂಗದವರಿಗೆ ಮಾತ್ರ ಶಿಕ್ಷಣವು ಸೀಮಿತವಾಗಿದೆ; ಕೆಲವು ಅಪವಾದಗಳನ್ನು ಬಿಟ್ಟರೆ, ಅದು ಓದು, ಬರೆಹ ಮತ್ತು ಅಂಕಗಣಿತದ ಸುಲಭ ನಿಯಮಗಳ ಬೋಧನೆಯ ಆಚೆಗೆ ಎಂದಿಗೂ ತಲುಪಿಲ್ಲ. ತಮ್ಮ ಜ್ಞಾನವನ್ನು ವಿಸ್ತರಿಸಲು ಅಪೇಕ್ಷಿಸುವ ಕೆಲವರು ಸಮರ್ಥ ಶಿಕ್ಷಕರ ಕೊರತೆ, ಬೋಧನೆಯ ಶ್ರೇಷ್ಠ ಪುಸ್ತಕಗಳ ಅಭಾವ, ಮತ್ತು ಯೋಗ್ಯ ಶಿಕ್ಷಣಕ್ರಮ ಇಲ್ಲದಿರುವಿಕೆ ಇವುಗಳಿಂದ ಅಧಿಕ ತೊಂದರೆಗೆ ಒಳಗಾಗಿ ಪರಿಶ್ರಮಿಸಬೇಕಾಗುತ್ತದೆ. ಕೆಳಮಟ್ಟದ ಜನರು, ಕೂಲಿಕಾರರೇ ಮೊದಲಾದವರು ಬಹುಸಂಖ್ಯಾಕರಿದ್ದು ಇವ-ರೆಲ್ಲರು ತಮ್ಮ ಮನಸ್ಸಿಗೆ ಪ್ರಕಾಶವೀಯುವ ಜ್ಞಾನದ ಒಂದಾದರೂ ಕಿರಣವನ್ನು ಕಾಣದೆ ಅಜ್ಞಾನದ ಅಂಧಃಕಾರದಲ್ಲಿ ಮುಳುಗಿದ್ದಾರೆ.

---

೧ Hayavadan Rao, C. Mysore Gazetter, 1929 P. 481-83.

ವ್ಯವಹಾರಸ್ಥ, ಶಿಲ್ಪಿಗ ಮತ್ತು ಅಂಗಡಿಕಾರ ಶ್ರೀಮಂತ ವರ್ಗದವರು ಕಲಿಕೆಯ ಮೂಲ ಪಾಠಗಳಲ್ಲಿ ತುಸು ಜ್ಞಾನವನ್ನು ಸಾಮಾನ್ಯವಾಗಿ ಪಡೆದಿರುತ್ತಾರೆ. ಈ ಜ್ಞಾನದ ಬಲದಿಂದ ಅವರು ತಮ್ಮ ಲೆಕ್ಕಪತ್ರಗಳನ್ನು ಇಡಲಿಕ್ಕೆ ಮತ್ತು ತಮ್ಮ ವ್ಯವಹಾರವನ್ನು ಸಾಗಿಸಲಿಕ್ಕೆ ಸಮರ್ಥರಾಗಿರುತ್ತಾರೆ. ಆದರೆ ಬಡತನದಿಂದ ಬಳಲುವ ಜನರು ಅಕ್ಷರಗಳ ಪರಿಚಯವಿಲ್ಲದೆ ಉಳಿದಿದ್ದಾರೆ. ಬ್ರಾಹ್ಮಣರಲ್ಲಿ, ಲೌಕಿಕರು ಇಲ್ಲವೆ ಸಾಮಾನ್ಯರು ಈ ನಾಡಿನಲ್ಲಿರುವ ಬಹುತರ ಎಲ್ಲ ಮುಲ್ಕೀ ಕಚೇರಿಗಳಲ್ಲಿ ತುಂಬಿರು-ತ್ತಾರೆ. ವ್ಯವಹಾರಕ್ಕೆ ಸಂಬಂಧಿಸಿದ ಪತ್ರಗಳನ್ನು ಓದಲಿಕ್ಕೆ ಮತ್ತು ಒಂದು ಇಲ್ಲವೆ ಅನೇಕ ಸಲ ಎರಡು ದೇಶೀಯ ಭಾಷೆಗಳಲ್ಲಿ ಲೆಕ್ಕ-ಪತ್ರಗಳನ್ನು ಇಡುವದಕ್ಕೆ ಸಮರ್ಥ ರಿರುತ್ತಾರೆ. ಹಲವಾರು ವೈದಿಕರು ಇಲ್ಲವೆ ಪುರೋಹಿತರು ಓದುವ ಮತ್ತು ಬರೆಯುವ ಜ್ಞಾನಕ್ಕೆ ಬದ್ಧರಾಗಿರುತ್ತಾರೆ; ತಮ್ಮ ವೇದಗಳ ಯಾವುದೊಂದು ಭಾಗವನ್ನು ಪಠಿಸಲಿಕ್ಕೆ ಸಮರ್ಥರಿರುತ್ತಾರೆ. ಈ ಅರ್ಹತೆಯು ತಮ್ಮ ಪೌರೋಹಿತ್ಯದ ಮರ್ಯಾದೆ ಯನ್ನು ಸಂರಕ್ಷಿಸುವ ಸಲುವಾಗಿ ಅನಿವಾರ್ಯವೂ ಅವಶ್ಯವೂ ಎಂದು ಅವರು ಭಾವಿಸುತ್ತಾರೆ. ಆದರೆ ಅವರ ಈ ಕಲಿಕೆಯು ತಮ್ಮ ಧರ್ಮಗ್ರಂಥಗಳ ಮಹತ್ವ-ವನ್ನು ತಿಳಿದುಕೊಳ್ಳುವಷ್ಟು ಸಮರ್ಥರನ್ನಾಗಿ ಮಾಡುವದಿಲ್ಲ; ಯಾಕಂದರೆ ಐವತ್ತರಲ್ಲಿ ಒಬ್ಬರು ಮಾತ್ರ ಸಂಸ್ಕೃತ ಭಾಷೆಯಲ್ಲಿ ಪ್ರಾವೀಣ್ಯತೆ ಪಡೆದಿರುತ್ತಾರೆ.

ಬೆಂಗಳೂರು ಪಟ್ಟಣ, ಕಿಲ್ಲೆ ಮತ್ತು ದಂಡಿನ ಪ್ರದೇಶದಲ್ಲಿ ೭ ತೆಲುಗು, ೨೧ ಕನ್ನಡ, ೪ ಮರಾಠಿ ಮತ್ತು ೩ ತಮಿಳು-ಹೀಗೆ ೩೫ ಸಾಲೆಗಳು ಇದ್ದು ಇವೆಲ್ಲವುಗಳಲ್ಲಿ ಒಟ್ಟು ೫೬೦ ವಿದ್ಯಾರ್ಥಿಗಳಿದ್ದಾರೆ. ಈ ವಿದ್ಯಾರ್ಥಿಗಳಲ್ಲಿ ೧೦೦ ವಿದ್ಯಾರ್ಥಿಗಳು ತೆಲುಗು, ೩೦೦ ವಿದ್ಯಾರ್ಥಿಗಳು ಕನ್ನಡ, ೧೦೦ ವಿದ್ಯಾರ್ಥಿಗಳು ಮರಾಠಿ ಮತ್ತು ಉಳಿದ ೬೦ ವಿದ್ಯಾರ್ಥಿಗಳು ತಮಿಳು ಅಭ್ಯಾಸ ಮಾಡುತ್ತಿದ್ದಾರೆ. ಈ ವಿದ್ಯಾರ್ಥಿಗಳು ಯಾವುದೇ ತಾರತಮ್ಯವಿಲ್ಲದೆ ಎಲ್ಲ ಮತಪಂಥದವರಿರುತ್ತಾರೆ. ವಿದ್ಯಾರ್ಥಿಗಳ ಸಂಖ್ಯೆ ಯನ್ನು ಈ ಶಹರದಲ್ಲಿಯ ಹುಡುಗರ ಅಂದಾಜಿತ ಸಂಖ್ಯೆಯೊಂದಿಗೆ ಹೋಲಿಸಿದರೆ, ಅದು ಐದಕ್ಕೆ ಇಲ್ಲವೆ ಆರಕ್ಕೆ ಒಂದರ ಪ್ರಮಾಣವನ್ನು ಕೊಡುತ್ತದೆ; ಆದರೆ ಇವರಲ್ಲಿ ಓದು-ಬರಹದಲ್ಲಿ ಸುಯೋಗ್ಯ ಜ್ಞಾನವನ್ನು ಸಂಪಾದಿಸಲು ಬೇಕಾಗುವಷ್ಟು ದೀರ್ಘಾವಧಿಯವರೆಗೆ ಒಂದು-ನಾಲ್ಕಾಂಶದಷ್ಟು ವಿದ್ಯಾರ್ಥಿಗಳು ಸಹ ಉಳಿಯುವ ದಿಲ್ಲ. ಬಡತನದ ಬವಣೆಯಿಂದ ಬಳಲುವ ಜನರು ತಮ್ಮ ಮಕ್ಕಳನ್ನು ಅವರು ಶಿಕ್ಷಣದ ಪ್ರಥಮ ತತ್ತ್ವಗಳನ್ನು ಕಲಿಯುವ ಮೊದಲೇ ಸಾಲೆ ಬಿಡಿಸಿ ಯಾವುದೊದು ಕೂಲಿಯ ಕೆಲಸದಲ್ಲಿಯೋ ಇಲ್ಲವೆ ಉದ್ಯೋಗದಲ್ಲಿಯೋ ತೊಡಗಿಸುತ್ತಾರೆ. "[೧]

೧ Rice, L: Annual Report on public Instruction in Mysore, 1876–77 to 52–56

ಕ್ರಿ. ಶ. ೧೮೬೫ ರಲ್ಲಿ ಓರ್ವ ಸಬ್‌ಡೆಪ್ಯೂಟಿ ಶಾಲಾ ತನಿಖಾಧಿಕಾರಿಯು ಅನುದಾನ ಪಡೆಯದ ಅನೇಕ ಖಾಸಗಿ ಸಾಲೆಗಳ ಹಾಗೂ ಅವುಗಳ ಕೆಲಸಗಳ ವಿಚಾರಣೆಯ ನಿಮಿತ್ತ ಇಡೀ ಸಂಸ್ಥಾನವನ್ನು ಸಂಚರಿಸಿ ಮಹತ್ವಪೂರ್ಣ ವರದಿಯನ್ನು ಸಲ್ಲಿಸಿದ್ದಾನೆ.

“೧೬೦೨ ದೇಶೀಯ ಸಾಲೆಗಳಿದ್ದು ಅವುಗಳಲ್ಲಿ ೨೨,೬೪೪ ವಿದ್ಯಾರ್ಥಿಗಳಿದ್ದರೆಂದು ಅವನು ವರದಿಮಾಡಿದ್ದಾನೆ. ಈ ಸಾಲೆಗಳು ಅನೇಕ ಪ್ರಕಾರದವು ಹಾಗು ವಿವಿಧ ಕಾರ್ಯ ಸಮರ್ಥತೆಯಿಂದ ಕೂಡಿದ್ದವು. ಕೆಲವು ಪ್ರಭಾವಶಾಲೀ ವ್ಯಕ್ತಿಗಳ ಉದಾರ ಆಶ್ರಯದ ಕೆಳಗೆ ಸ್ಥಾಪಿಸಲ್ಪಟ್ಟವುಗಳು ಸರ್ವಸಾಮಾನ್ಯವಾಗಿದ್ದುವು. ಶಿಕ್ಷಕನೊಂದಿಗೆ ಒಂದು ನಿರ್ದಿಷ್ಟ ಅವಧಿಯ, ಎರಡು ಇಲ್ಲವೆ ಮೂರು ವರ್ಷ, ಕರಾರು ಇಲ್ಲವೆ ಒಪ್ಪಂದ ಮಾಡಿಕೊಳ್ಳಲಾಗುತ್ತಿತ್ತು. ಈ ಅವಧಿಯಲ್ಲಿ ಅವನು ತನ್ನ ಪೋಷಕನ ಮಕ್ಕಳಿಗೆ ಇಲ್ಲವೇ ಆ ಪೋಷಕನು ಸಾಲೆಗೆ ಕಳಿಸಬಹುದಾದ ಬೇರೆಯವರಿಗೆ ಒಂದು ನಿಶ್ಚಿತಮಟ್ಟದವರೆಗೆ ಕಲಿಸಬೇಕಾಗುತ್ತಿತ್ತು. ಅವನಿಗೆ ಕೊಡಬೇಕಾದ ಸಂಬಳದ ಬಹು ಭಾಗವನ್ನು ಮುಂಗಡವಾಗಿಯೇ ಕೊಡಲಾಗುತ್ತಿತ್ತು. ಇದರಿಂದ ಶಿಕ್ಷಕನು ಕರಾರಿನಂತೆ ಕೆಲಸದಲ್ಲಿ ತೊಡಗಬೇಕಾಗುತ್ತಿತ್ತು. ವಿದ್ಯಾವ್ಯಾಸಂಗದ ಅಂತ್ಯದಲ್ಲಿ ವಿದ್ಯಾರ್ಥಿಗಳು ಸಾದಾ ಪತ್ರವನ್ನು ಓದಲಿಕ್ಕೆ, ಬರೆಯಲಿಕ್ಕೆ, ಗುಣಾಕಾರದ ಕೋಷ್ಟಕಗಳನ್ನು ಮತ್ತು ಪೂರ್ಣಾಂಕ ಅಪೂರ್ಣಾಂಕಗಳು ಹಾಗೂ ಅಂಕಗಣಿತದ ಸುಲಭ ನಿಯಮದೊಂದಿಗೆ ಹಣದ ಕೋಷ್ಟಕಗಳು, ತೂಕ–ಅಳತೆಗಳು ಇವೇ ಮೊದಲಾದುವನ್ನು ತಿಳಿದು ಕೊಳ್ಳಲಿಕ್ಕೆ ಸಮರ್ಥರಾಗಬೇಕಾಗುತ್ತಿತ್ತು. ಜೈಮಿನಿ ಭಾರತ, ಇಲ್ಲವೆ ಭಕ್ತಿಸಾರ ಮತ್ತು ಅಮರಕೋಶಗಳಂಥ ಕೃತಿಗಳಲ್ಲಿಯ ಪದ್ಯಗಳನ್ನು ಪಠಿಸಬೇಕಾಗುತ್ತಿತ್ತು. ಇವುಗಳ ಅರ್ಥವನ್ನು ಅವರು ತಿಳಿದುಕೊಳ್ಳಬೇಕೆಂದೇನೂ ಇರಲಿಲ್ಲ. ಅನೇಕ ಶಿಕ್ಷಕರಿಗೆ ಸಹ ಇವುಗಳ ಅರ್ಥವು ಗೊತ್ತಿರಲಿಲ್ಲ.” ಬಹುದೊಡ್ಡ ಸಂಖ್ಯೆಯಲ್ಲಿದ್ದ ದೇಶೀಯ ಸಾಲೆಗಳ ಬಗೆಗೆ ಓರ್ವ ಶಾಲಾ ತಪಾಸನಾಧಿಕಾರಿಯು ಹೀಗೆ ಹೇಳಿದ್ದಾನೆ. “ದೇಶೀಯ ಸಾಲೆಯಿಲ್ಲದ ಹಳ್ಳಿಯು ಸಿಗುವದು ಅಪರೂಪ. ಕೆಲವು ದೊಡ್ಡ ಪಟ್ಟಣಗಳಲ್ಲಿ ಎಂಟರಿಂದ ಹತ್ತು ಸಾಲೆಗಳು ಇರುತ್ತವೆ. ಮಕ್ಕಳ ಹಾಜರಾತಿಯು ಪ್ರತಿಯೊಂದು ಸಾಲೆಯಲ್ಲಿ ೩೫ ರಿಂದ ೬ ಇರುತ್ತದೆ.” ೧

III

ಮಿಶನರಿ ಚಟುವಟಿಕೆಗಳು :

ಕ್ರಿ. ಶ. ೧೮೨೦ ರಲ್ಲಿ ಲಂಡನ್ ಮಿಶನ್‌ಸಂಸ್ಥೆಯು ಬೆಂಗಳೂರಿನಲ್ಲಿದ್ದ ತಮಿಳರ ಮಧ್ಯದಲ್ಲಿ ತನ್ನ ಕೆಲಸವನ್ನು ಪ್ರಾರಂಭಿಸಿತು. ರೆವ್ಹರೆಂಡ ಡಬ್ಲ್ಯು ಕ್ಯಾಂಬೆಲ್ (Rev. W. Campbell) ನು ಕನ್ನಡ ಮಾತನಾಡುವ ಜನರೊಳಗೆ

೧ Annual Report on public Instruction in Mysore 1968-69 P. 121

ಕ್ರಿ. ಶ. ೧೮೨೭ ರಿಂದ ಕೆಲಸ ಮಾಡಿದನು. ಊಟದ ಸೌಕರ್ಯವುಳ್ಳ ಸಾಲೆಯನ್ನು ಮತ್ತು ವೇದಾಂತ ವಿದ್ಯಾಲಯವನ್ನು ಸ್ಥಾಪಿಸಲಾಯಿತು. ರೆವ್ಹರೆಂಡ ಬಿ. ರಾಯಿಸ್ (Rev. B. Rice) ಮಿಶನರಿ ಚಟುವಟಿಕೆಗಳ ಎಲ್ಲ ಶಾಖೆಗಳಲ್ಲಿ ಶ್ರಮಿಸಿದನು; ಬೆಂಗಳೂರ ಬಾಯ್ಬಲ್ ಟ್ರ್ಯಾಕ್ಟ ಸೊಸಾಯಿಟಿಯ ಕಾರ್ಯದರ್ಶಿಯಾಗಿ ಕೆಲಸಮಾಡಿದನು; ಆಂಗ್ಲಬೋಧನಾ ಶಾಲೆಯನ್ನು ತೆರೆದನು; ಕನ್ನಡ ಬಾಯ್ಬಲ್‌ನ್ನು ಪರಿಷ್ಕರಿಸಿದನು ತಾಳ ಓಲೆಯ ಗ್ರಂಥಗಳನ್ನು ಓದಿ ಅರ್ಥವನ್ನು ಕಂಡು ಹಿಡಿಯುವಲ್ಲಿ ಮಹತ್ವಪೂರ್ಣ ಸೇವೆ ಮಾಡಿದನು; ಅದರಂತೆ ಶಿಲಾಲಿಪಿಗಳಲ್ಲಿಯ ಬರೆಹವನ್ನು ಓದುವಲ್ಲಿ ಸಹ ಹೆಚ್ಚಿನ ಪ್ರಯತ್ನ ಮಾಡಿದನು. ಶ್ರೀಮತಿ ಸೀವೆಲ್ (Mrs. Sewell) ೧೮೪೦ ರಲ್ಲಿ ಬಾಲಿಕೆಯರಿಗಾಗಿ ಪ್ರಪ್ರಥಮ ಕನ್ನಡ ಹಗಲು ಶಾಲೆಯನ್ನು ಪ್ರಾರಂಭಿಸಿದಳು.[೧]

ವೆಸ್ಲೆಯನ್ ಮಿಶನ್ (Wesleyan Mission) ದವರು ಬೆಂಗಳೂರನ್ನು ತಮ್ಮ ಮುಖ್ಯ ಸ್ಥಳವಾಗಿರಿಸಿಕೊಂಡು ಕ್ರಿ. ಶ. ೧೮೨೦ ರಲ್ಲಿ ಕಾರ್ಯ ಪ್ರಾರಂಭಿಸಿದರು. ರೆವ್ಹರೆಂಡ ಟಿ. ಹಡ್ಸನ್ (Rev T. Hudson) ಕನ್ನಡ ಮಾತಾಡುವ ಜನರ ಮಧ್ಯದಲ್ಲಿ ಕೆಲಸ ಮಾಡಿದನು; ೧೮೩೫ ರಲ್ಲಿ ಒಂದು ಆಂಗ್ಲಬೋಧನಾ ಸಾಲೆಯನ್ನು ಪ್ರಾರಂಭಿಸಿದನು; ಈ ಸಾಲೆಯು ಈಗಲೂ ನಡೆಯುತ್ತಿದೆ. ಅವನು ಶೀಘ್ರದಲ್ಲಿಯೇ ಗುಬ್ಬಿ, ಕುಣಿಗಲ್ಲ, ತುಮಕೂರ, ಹಾಸನ ಮತ್ತು ಶಿವಮೊಗ್ಗಾ ಪಟ್ಟಣಗಳಲ್ಲಿ ಹೊಸ ಕೇಂದ್ರಗಳನ್ನು ತೆರೆದನು.[೨]

IV

ರಾಜರು ಸ್ಥಾಪಿಸಿದ ಸಾಲೆ :

ಕ್ರಿ. ಶ. ೧೮೩೩ ರಲ್ಲಿ ಮೇಜರ ಜನರಲ್ ಫ್ರೇಜರ (ಮೈಸೂರಿನ ಅಂದಿನ ರೆಸಿಡೆಂಟ) ನು ರಾಜಧಾನಿಯಾದ ಮೈಸೂರು ಶಹರದ ಉದಯೋನ್ಮುಖ ಜನತೆಯ ಕಲ್ಯಾಣದ ಸಲುವಾಗಿ ಒಂದು ಆಂಗ್ಲ ಶಾಲೆಯನ್ನು ತೆರೆಯುವ ಇಚ್ಛೆಯನ್ನು ಮಹಾರಾಜ ಶ್ರೀ ಕೃಷ್ಣರಾಜ ವಡೆಯರ ಬಹದ್ದೂರ ಅವರಿಗೆ ಸೂಚಿಸಿದನು. ಔದಾರ್ಯಕ್ಕೆ ಹೆಸರುವಾಸಿಯಾದ ಮಹಾರಾಜರು ಈ ಸಲಹೆಯನ್ನು ಅಂಗೀಕರಿಸಿದರು. ರಾಜರ ಸಾಲೆಯೆಂದು ಅಭಿದಾನ ಪಡೆದು ಮೈಸೂರಿನಲ್ಲಿ ೧೮೩೩ ರಲ್ಲಿ ಶ್ರೀಮನ್ ಮಹಾರಾಜರಿಂದ ಒಂದು ಸಾಲೆಯು ಸ್ಥಾಪಿಸಲ್ಪಟ್ಟಿತು. ಶ್ರೀ ಬೌರಿಂಗ (Mr. Bowring ಎಂಬುವನು ಆಗ ಆಯುಕ್ತನಾಗಿದ್ದನು; ಅವನ ಶಿಫಾರಸಿನನ್ವಯ ಶ್ರೀ ಡನ್ನಿಂಗ (Mr.Dunning) ಎಂಬುವನು ಮುಖ್ಯಾಧ್ಯಾಪಕನಾಗಿ ಆ

---

೧ Karnatak through the ages P 728-29.

೨ Karnatak through the Ages-P. 729

ಸಾಲೆಯ ಆಡಳಿತವನ್ನು ೧೮೬೨ ರಲ್ಲಿ ವಹಿಸಿಕೊಂಡನು. ಆ ಕಾಲಕ್ಕೆ ಆ ಸಾಲೆಯಲ್ಲಿ ಕೇವಲ ೮೦ ವಿದ್ಯಾರ್ಥಿಗಳಿದ್ದರು. ಶ್ರೀ ಡನ್ನಿಂಗನು ಅತ್ಯಂತ ಕಳಕಳಿ ಹಾಗು ದಕ್ಷತೆಯಿಂದ ಸಂಸ್ಥೆಯ ಹಿತಾಸಕ್ತಿಗಳನ್ನು ಬೆಳೆಸಿದನಲ್ಲದೆ ತಮ್ಮ ಮಕ್ಕಳಿಗೆ ಶಿಕ್ಷಣ ದಿಂದ ಆಗುವ ಪ್ರಯೋಜನಗಳಾವವು ಎಂಬುದನ್ನು ಪಾಲಕರ ಮನಸ್ಸಿನ ಮೇಲೆ ಬಿಂಬಿಸುವಲ್ಲಿ ಯಶಸ್ವಿಯಾದನು. ಸಂಸ್ಥೆಯ ಬೆಳವಣಿಗೆಯಲ್ಲಿ ಅವನೇ ಮುಖ್ಯವಾದ ಹೊಣೆಹೊತ್ತು ಸಾಲೆಯಲ್ಲಿಯ ವಿದ್ಯಾರ್ಥಿಗಳ ಸಂಖ್ಯೆಯನ್ನು ೮೦ ರಿಂದ ೧೮೬೫ ರ ಸಮಯಕ್ಕೆ ೩೦೦ ಕ್ಕೆ ಹೆಚ್ಚಿಸಿದನು. ಕ್ರಿ. ಶ. ೧೮೩೩ ರಿಂದ ೧೮೬೫ ರ ಅವಧಿಯಲ್ಲಿ ಶಾಲೆಯಲ್ಲಿ ಕೇವಲ ಎರಡು ಸಾರ್ವಜನಿಕ ಪರೀಕ್ಷೆಗಳು ನಡೆದವು. ೧೮೬೫ ನೇ ಇಸ್ವಿಯ ಜನೆವರಿ ೧೮ ರಂದು ಮಹಾರಾಜರು ಒಂದು ಸಾರ್ವಜನಿಕ ಪರೀಕ್ಷೆಯನ್ನು ನಡೆಸಿದರು. ಸ್ತ್ರೀಯರು ಮತ್ತು ಸಭ್ಯಗೃಹಸ್ಥರು ಅತ್ಯಧಿಕ ಸಂಖ್ಯೆಯಲ್ಲಿ ನೆರೆದಿದ್ದರು. ಅತ್ಯುಚ್ಚ ವರ್ಗದ ಬಾಲಕರು ಆಂಗ್ಲಭಾಷೆಯಲ್ಲಿ, ಗಣಿತದಲ್ಲಿ, ಇತಿಹಾಸ ಮತ್ತು ಚಿತ್ರಕಲೆಗಳಲ್ಲಿ ಪರೀಕ್ಷಿಸಲ್ಪಟ್ಟರು; ಇವೆಲ್ಲ ವಿಷಯುಗಳಲ್ಲಿ ಅವರು ಚೆನ್ನಾಗಿ ಮಾಡಿ ದರು. ಅನೇಕ ಹುಡುಗರು ಕರೆಹಲಗೆಯ ಮೇಲೆ ಖಡುವಿನಿಂದ ಉತ್ತಮ ನಕಾಶ ಗಳನ್ನು ತೆಗೆಯಲು ಸಮರ್ಥರಾದರು. ಮಹಾರಾಜರು ಸಂಸ್ಥೆಯ ಪ್ರಗತಿಯನ್ನು ಕಂಡು ತಮ್ಮ ಸಂತೃಪ್ತಿಯನ್ನು ಅಭಿವ್ಯಕ್ತಗೊಳಿಸಿದರು. ದೊಡ್ಡ ತಾತ್ಪೂರ್ತಿಕ ಕಚ್ಚಾ ಇಮಾರತಿ ಇದ್ದರೂ ಸಹ ಸ್ಥಳಾವಕಾಶವು ಸಾಕಷ್ಟು ಇಲ್ಲದುದನ್ನು ಗಮನಿಸಿ, ಮಹಾರಾಜರು ಹೊಸ ಇಮಾರತಿಯ ಯೋಜನೆ ಮತ್ತು ಅಂದಾಜು ವೆಚ್ಚಗಳು ತಯಾರಿಸಲ್ಪಡಬೇಕೆಂದೂ ಆದಷ್ಟು ತೀವ್ರ ಕಾರ್ಯವು ಪ್ರಾರಂಭವಾಗಬೇಕೆಂದೂ ನಿರ್ದೇಶನವಿತ್ತರು. ಬಳಿಕ ಮಹಾರಾಜರು ಆ ವರ್ಷ ಪ್ರತಿಯೊಂದು ವರ್ಗದಲ್ಲಿ ಅಂಕಗಳನ್ನು ಪಡೆದ ಆಧಾರದ ಮೇಲೆ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಿಸಿ-ದರು; ಈ ಬಹುಮಾನಗಳ ಒಟ್ಟು ಬೆಲೆಯು ಮೂರುನೂರು ರೂಪಾಯಿಗಳಾಯಿತು; ಅತ್ಯುತ್ತಮ ಕೆಲಸಮಾಡಿದ ಕಾರಣದಿಂದ ಮುಖ್ಯಾಧ್ಯಾಪಕರನ್ನು ಶ್ಲಾಘಿಸಿದ್ದಲ್ಲದೆ ಅವರಿಗೆ ಒಂದು ಜತೆ ಕಸೂತಿ ತೆಗೆದ ಶಾಲುಗಳನ್ನು ಕಾಣಿಕೆಯಾಗಿ ಕೊಟ್ಟರು. ಈಗ ನಾವು ಸಾರ್ವಜನಿಕ ಪರೀಕ್ಷೆಯೆಂದು ಕರೆಯುವ ಪರೀಕ್ಷೆಯು ಅಂದು ಅಕ್ಷರಶಃ ಸಾರ್ವಜನಿಕವಾಗಿತ್ತೆಂಬುದು ಮೇಲಿನ ವಿವರಣೆಯಿಂದ ತಿಳಿದುಬರುತ್ತದೆ; ಏಕೆಂದರೆ ಅದು ಸಾರ್ವಜನಿಕರ ಸಮ್ಮುಖದಲ್ಲಿಯೇ ನಡೆಯುತ್ತಿತ್ತು. ಒಂದು ವರ್ಷದಲ್ಲಿ ಹೊಸ ಇಮಾರತಿಯು ಪೂರ್ತಿಯಾಯಿತು; ೧೮೬೬ ನೇ ಜುಲೈ ೩೦ ರಂದು ಶ್ರೀಮನ್ ಮಹಾರಾಜರು ಅದನ್ನು ಉದ್ಘಾಟಿಸಿದರು; ಉದ್ಘಾಟನಾ ಸಮಾರಂಭವು ಅತ್ಯಂತ ವೈಭವಪೂರ್ಣವಾಗಿತ್ತು. ಮುಂದೆ ಈ ಸಾಲೆಯೇ ಬೆಳೆದು ಮೈಸೂರಿನ ಹೆಸರಾಂತ ಮಹಾರಾಜರ ಕಾಲೇಜ ಎಂದು ಅಭಿವೃದ್ಧಿ ಹೊಂದಿತೆಂಬುದು ನಿಜವಾಗಿಯೂ ಆಸಕ್ತಿ ದಾಯಕ; ಆನಂದದಾಯಕ.

ಭಾಗ (ಬ)

೧೮೫೭–೧೯೦೦

I

ಸಾಮಾನ್ಯ :

ವಿದ್ಯೆ ಸಂಪಾದನೆಗೆ ಅತ್ಯಧಿಕ ಗೌರವವಿದ್ದರೂ ಸಹ, ಭಾರತದ ಇತರ ಭಾಗಗಳಲ್ಲಿಯಂತೆ ಮೈಸೂರಲ್ಲಿ ಸಹ ಶಿಕ್ಷಣವು ಸರಕಾರದ ಕರ್ತವ್ಯವೆಂದು ಎಂದಿಗೂ ಪರಿಗಣಿತವಾಗಿಲ್ಲವೆಂದು ಕಂಡು ಬರುತ್ತದೆ.

ಕ್ರಿ. ಶ. ೧೮೫೪ ರ ವುಡ್‌ನ ವರದಿಯಲ್ಲಿಯ ಅಂಶಗಳು ಮೈಸೂರಿಗೆ ಅನ್ವಯಿಸಲ್ಪಡುವಾಗ ಸನ್ಮಾನ್ಯ ಶ್ರೀ ದೇವೇರ್ಯ್ಯೊ (Honourable Mr. Devereau) ನ್ಯಾಯಾಸ್ಥಾನದ ಕಮೀಶನರ ಅವರು ಮೈಸೂರ ಮತ್ತು ಕೊಡಗುಗಳ ಸಲುವಾಗಿ ಕೂಡಿಯೇ ಒಂದು ಶೈಕ್ಷಣಿಕ ಯೋಜನೆಯನ್ನು ತಯಾರಿಸಿದರು. ಕ್ರಿ. ಶ. ೧೮೫೬ ರ ನವ್ಹಂಬರ ತಿಂಗಳಲ್ಲಿ ಈ ಪ್ರಾಂತಗಳ ಸರಕಾರದ ಕಮೀಶನರರಾದ ಸರ್ ಮಾರ್ಕ ಕಬ್ಬನ್ (Sir Mark Cubbon) ಎಂಬವರು ಈ ಯೋಜನೆಯನ್ನು ಗವ್ಹರ್ನರ ಜನರಲ್ ಇನ್‌ಕೌನ್ಸಿಲ್ (Governor-General in Council) ಅವರ ಕಡೆಗೆ ಕಳಿಸಿಕೊಟ್ಟರು. ಅಲ್ಪ ಮಾರ್ಪಾಡಿನೊಂದಿಗೆ ಭಾರತ ಸರಕಾರವು ಈ ಯೋಜನೆಗೆ ಮನ್ನಣೆ ಕೊಟ್ಟಿತು. ಯೋಜನೆಯು ೧೮೫೪ ರ ವರದಿಯಲ್ಲಿಯ ತತ್ವಗಳಿಗೆ ಸಂಪೂರ್ಣ ಅನುಗುಣವಾಗಿದೆಯೆಂದು ಈಸ್ಟ ಇಂಡಿಯಾ ಕಂಪನಿಯ ದಿಗ್ದರ್ಶಕ ಮಂಡಳಿಯ ಸದಸ್ಯರು ತಮ್ಮ ವಿದೇಶ ಇಲಾಖೆ ಪತ್ರ ನಂ. ೫೮೫ ದಿನಾಂಕ ೬–೨–೧೮೫೭ ರನ್ವಯ ತಿಳಿಸಿದರು. ಬಳಿಕ ಈ ಯೋಜನೆಯು ಸಂಸ್ಥಾನದಲ್ಲಿ ೧೮೫೭ ರಲ್ಲಿ ಕಾರ್ಯರೂಪಕ್ಕೆ ಇಳಿಯಿತು; ಮೈಸೂರ ಮತ್ತು ಕೊಡಗುಗಳ ಸಲುವಾಗಿ ಸಾರ್ವಜನಿಕ ಶಿಕ್ಷಣ ಇಲಾಖೆಯು ಸ್ಥಾಪಿಸಲ್ಪಟ್ಟಿತು. ಸಾರ್ವಜನಿಕ ಶಿಕ್ಷಣ ನಿರ್ದೇಶಕ, ಇಬ್ಬರು ಶಾಲಾ ತಪಾಸಣಾಧಿಕಾರಿಗಳು, ನಾಲ್ವರು ಉಪ ತಪಾಸಣಾಧಿಕಾರಿಗಳು, ಮತ್ತು ಇಪ್ಪತ್ತು ಸಹಾಯಕ ಉಪ ತಪಾಸಣಾಧಿಕಾರಿಗಳು ನೇಮಿಸಲ್ಪಟ್ಟರು. ಸಹಾಯಕ ಉಪ ತಪಾಸಣಾಧಿಕಾರಿಯ ಆಡಳಿತೆಗೆ ಸರಾಸರಿ ನಾಲ್ಕು ತಾಲೂಕುಗಳು ಬರುವಂತೆ ನೋಡಿಕೊಳ್ಳಲಾಯಿತು; ಮೇಲಿನ ಅಧಿಕಾರಿಗಳಿಗೆ ಪ್ರಮಾಣಕ್ಕನುಸರಿಸಿ ಅಧಿಕಾರ ವ್ಯಾಪ್ತಿಯನ್ನು ಕೊಡಲಾಯಿತು. ಶಾಲೆಗಳ ಸ್ಥಾಪನೆಯ ವಿಷಯದಲ್ಲಿ, ಯೋಜನೆಯು ಸಂಪೂರ್ಣ ಕಾರ್ಯಗತವಾದ ಸಮಯಕ್ಕೆ ಒಂದು ಕೇಂದ್ರ ಕಾಲೇಜು, ಪ್ರತಿ ವಿಭಾಗಕ್ಕೆ[೧] ಒಂದರಂತೆ ನಾಲ್ಕು ಆ್ಯಂಗ್ಲೊ–ವ್ಹರ್ನ್ಯಾಕ್ಯುಲರ ಸಾಲೆಗಳು

---

೧ ಬೆಂಗಳೂರ, ನಗರ, ಚಿತ್ರದುರ್ಗ ಮತ್ತು ಅಷ್ಟಗ್ರಾಮ ಇವೇ ನಾಲ್ಕು ವಿಭಾಗಗಳು. ೧೮೬೧ ರಲ್ಲಿ ಆಯೋಗವನ್ನು ಪುನರ್ ಸಂಘಟಿಸಲಾಯಿತು; ವಿಭಾಗಗಳ ಸಂಖ್ಯೆಯು ಮೂರಕ್ಕೆ ಇಳಿಯಿತು. ಈ ವಿಭಾಗಗಳನ್ನು ಈ ಮೊದಲೇ ಹೇಳಿದಂತೆ ಎಂಟು ಜಿಲ್ಹೆಗಳಲ್ಲಿ ವಿಭಜಿಸಲಾಯಿತು.

ಇರಬೇಕೆಂದೂ ಈ ಆ್ಯಂಗ್ಲೋ-ವ್ಹರ್ನ್ಯಾಕ್ಯುಲರ ಸಾಲೆಗಳು ಅತ್ಯುಚ್ಚ ಮಟ್ಟದವು ಇರಬೇಕೆಂದೂ ಅವನು ಸೂಚಿಸಿದನು. ಇವುಗಳಿಗೆ ತಗಲುವ ಪ್ರತಿ ತಿಂಗಳಿನ ಸರಾಸರಿ ವೆಚ್ಚವು ೨೫೦/- ರೂಪಾಯಿ ಆಗುವದು. ಇದಲ್ಲದೆ ತಾಲೂಕಿಗೆ ಒಂದರಂತೆ ೮೦ ತಾಲೂಕಾ ವ್ಹರ್ನ್ಯಾಕ್ಯುಲರ ಸಾಲೆಗಳು ಒಟ್ಟು ೪೦೦೦/- ರೂಪಾಯಿ ವೆಚ್ಚದಲ್ಲಿ ಸ್ಥಾಪಿಸಲ್ಪಡಬೇಕೆಂದೂ ಮತ್ತು ಎರಡು ನಾರ್ಮಲ್ ಶಾಲೆ (ತರಬೇತಿ ಶಾಲೆ)ಗಳನ್ನು ಪ್ರತಿಯೊಂದಕ್ಕೆ ೨೫೦/- ರೂಪಾಯಿ ವೆಚ್ಚದಲ್ಲಿ ತೆರೆಯಬೇಕೆಂದೂ ಸೂಚಿಸಲಾಯಿತು. ಈ ನಾರ್ಮಲ್ ಸ್ಕೂಲುಗಳಲ್ಲಿ ಒಂದನ್ನು ಸಂಸ್ಥಾನದ ಬಯಲು ಸೀಮೆಗೆ ಇನ್ನೊಂದನ್ನು ಮಲೆನಾಡ ಭಾಗಕ್ಕೆ ತೆರೆಯಬೇಕು. ಯಾಕಂದರೆ ಬಯಲು ಸೀಮೆಯ ಜನರು ಮಲೆನಾಡ ಭಾಗಕ್ಕೆ ಶಿಕ್ಷಕರಾಗಿ ಹೋಗಲಿಕ್ಕೆ ಸಿಗುವದು ಕಠಿಣವೆಂದು ತಿಳಿಯಲಾಗಿತ್ತು. ಇದೆಲ್ಲದರ ಒಟ್ಟು ವೆಚ್ಚ ಒಂದು ಲಕ್ಷ ಹದಿಮೂರು ಸಾವಿರ ಆಗಬಹುದೆಂದು ತಿಳಿಯಲಾಗಿತ್ತು; ಇದರಲ್ಲಿ ಅನುದಾನದ ಸಲುವಾಗಿ ತೆಗೆದಿರಿಸಿದ ಆರು ಸಾವಿರ ರೂಪಾಯಿಗಳು ಕೂಡಿವೆ. ಈ ಯೋಜನೆಯನ್ನು ಕ್ರಮೇಣ ಕಾರ್ಯಗತಗೊಳಿಸಬೇಕಾಗಿತ್ತು. ಸಾಲೆಗಳ ಮತ್ತು ಅಧಿಕಾರಸ್ಥರ ಪರಮಾವಧಿ ಸಂಖ್ಯೆಯು ಅನೇಕ ವರ್ಷಗಳ ಅವಧಿಯಲ್ಲಿ ತಲುಪಬಹುದಾಗಿದ್ದಿತು. ಏನನ್ನೂ ತೆಗೆದುಕೊಳ್ಳದ ಸಾಲೆಗೆ ತಮ್ಮ ಮಕ್ಕಳನ್ನು ಕಳಿಸುವದು ಒಂದು ವರವೆಂದು ತಿಳಿದುಕೊಳ್ಳುವದರಿಂದ ಪಾಲಕರನ್ನು ದೂರಿರಿಸುವ ಸಲುವಾಗಿ ಮತ್ತು ಖಾಸಗಿ ಸಾಲೆಗಳ ಕ್ಷೇತ್ರಗಳಿಗೆ ಸರಿ ಸಮನಾಗಿ ಸರಕಾರೀ ಸಾಲೆಗಳ ಕ್ಷೇತ್ರಗಳನ್ನು ಇಡುವ ಸಲುವಾಗಿ ಎಲ್ಲ ಸರಕಾರೀ ಸಾಲೆಗಳು ಶುಲ್ಕವನ್ನು ಆಕರಿಸಬೇಕೆಂದು ಅವನು ಸೂಚಿಸಿದನು. ಕೇಂದ್ರ ಕಾಲೇಜ ಸ್ಥಾಪನೆಯನ್ನು ಮುಂದೂಡಲಾಯಿತು; ವೆಸ್ಲೆಯನ್ (Wesleyan) ಮಿಶನರಿ ಸಂಘವು ಅತ್ಯಂತ ದಕ್ಷತೆಯಿಂದ ನಡೆಸುತ್ತಿದ್ದ ದೇಶೀಯ ಶಿಕ್ಷಣ ಸಂಸ್ಥೆಯು ಕೆಲವು ಸಮಯ ಆ ಸ್ಥಳವನ್ನು ತುಂಬುವ ಆಜ್ಞೆಯನ್ನು ಪಡೆಯಿತು. ಏಕೆಂದರೆ, ಮೊದಲನೆಯದಾಗಿ ಪ್ರತಿಭಾವಂತ ಶಿಕ್ಷಕರು ಲಭ್ಯವಾಗುವದು ದುಸ್ತರವಾಗಿತ್ತು. ಎರಡನೆಯದಾಗಿ, ಶುಲ್ಕವನ್ನು ಕೊಡುವ ವಿದ್ಯಾರ್ಥಿಗಳ ಸಂಖ್ಯೆಯು ಸಾಕಷ್ಟು ಇಲ್ಲದಿದ್ದ ಸ್ಥಳದಲ್ಲಿ ಸಾಲೆಯನ್ನು ತೆರೆಯುವದರಿಂದ ಆಗುವ ಹಣದ ಅಪವ್ಯಯವನ್ನು ತಡೆಗಟ್ಟುವ ಸಲುವಾಗಿ ತಾಲೂಕಿನ ಜನರಿಂದ ಸಾಲೆಯನ್ನು ತೆರೆಯಬೇಕೆಂದು ಬೇಡಿಕೆಯು ಬಂದರೆ ಮಾತ್ರ ತಾಲೂಕಾ ಸಾಲೆಯನ್ನು ತೆರೆಯಬೇಕೆಂದು ಅವನು ಅಭಿಪ್ರಾಯಪಟ್ಟನು. ವಿಶಿಷ್ಟ ವೆಚ್ಚಕ್ಕಾಗಿ ಶಾಶ್ವತ ನಿಧಿ ಇರಬೇಕೆಂಬ ಕಾರಣದಿಂದ, (ಶಿಕ್ಷಣ ಇಮಾರತಿಗಳಿಗೆ ಇತ್ಯಾದಿ) ವಾರ್ಷಿಕ ಅನುದಾನದಲ್ಲಿ ಉಪಯೋಗಿಸದೆ ಉಳಿದ ಹಣವನ್ನು ಶೈಕ್ಷಣಿಕ ಉದ್ದೇಶಗಳಿಗಾಗಿ ವಿನಿಯೋಗಿಸುವ ಸಲುವಾಗಿ ತೆಗೆದಿರಿಸಬೇಕೆಂದು ಅವನು ಸಲಹೆ ಮಾಡಿದನು.[೧]

---

೧ Review of the Progress of Education in the Mysore State for the quinquennium 1911-16 P. 2-3

ಈ ಯೋಜನೆಯು ರೂಪುಗೊಳ್ಳುತ್ತಿದ್ದ ಸಮಯದಲ್ಲಿ ಸರಕಾರದಿಂದ ಅನುದಾನ ಪಡೆಯುತ್ತಿದ್ದ ಅನೇಕ ಸಾಲೆಗಳು ಅಸ್ತಿತ್ವದಲ್ಲಿದ್ದವು; ಇವು ಪಡೆಯುತ್ತಿದ್ದ ಅನುದಾನದ ಒಟ್ಟು ಮೊತ್ತ ೧೬೦೦೦/-- ರೂಪಾಯಿಗಳಿಗಿಂತ ಹೆಚ್ಚಿಗಿದ್ದಿತು. ಈ ಸಾಲೆಗಳಲ್ಲಿಯ ಅತ್ಯಂತ ಪ್ರಮುಖವಾದುದೆಂದರೆ ಬೆಂಗಳೂರಲ್ಲಿ ೧೮೫೧ ರಲ್ಲಿ ವೆಸ್ಲೆಯನ್ (Wesleyan) ಮಿಶನ್‌ದವರು ನಡೆಸುತ್ತಿದ್ದ ದೇಶೀಯ ಶಿಕ್ಷಣ ಸಂಸ್ಥೆಯಾಗಿತ್ತು. ಅದು ಸರಕಾರದಿಂದ ಪ್ರತಿ ತಿಂಗಳು ೮೦೦/– ರೂಪಾಯಿಗಳನ್ನು ಅನುದಾನ ಪಡೆಯುತ್ತಿತ್ತು. ಸರಕಾರವು ಶಿಕ್ಷಣವನ್ನು ನೇರ ನಿಯಂತ್ರಣದಲ್ಲಿ ತೆಗೆದುಕೊಂಡ ಬಳಿಕ, ಮೇಲೆ ವಿವರಿಸಿದ ಸಾಲೆಗಳ ಬಗೆಗೆ ಕೆಳಗೆ ಹೇಳಿದಂತೆ ವ್ಯವಸ್ಥೆಗಳನ್ನು ಮಾಡಲಾಯಿತು. ಸರಕಾರವು ಕೇಂದ್ರ ಕಾಲೇಜನ್ನು ತೆರೆಯುವದಕ್ಕೆ ಒಳಪಟ್ಟು ದೇಶೀಯ ಶಿಕ್ಷಣ ಸಂಸ್ಥೆಗೆ ಅನುದಾನವು ಮುಂದುವರಿಯಿತು. ಕೇಂದ್ರ ಕಾಲೇಜದ ಸ್ಥಾನವನ್ನು ಅದು ಆಗಿನ ಸಮಯದಲ್ಲಿ ಆಕ್ರಮಿಸಿತು. ತುಮಕೂರ, ಶಿವಮೊಗ್ಗೆ ಮತ್ತು ಹಾಸನಗಳಲ್ಲಿದ್ದ ಹೊರ ನಿಲ್ದಾಣ (Out Station) ಸಾಲೆಗಳು ಸರಕಾರಿ ಸಾಲೆಗಳಾಗಿ ಪರಿವರ್ತಿತವಾದವು. ಇವು ವಿಭಾಗೀಯ ಸಾಲೆಗಳಿಗೆ ತಳಪಾಯವಾದವು; ಮೈಸೂರಿನಲ್ಲಿದ್ದ ಮಹಾರಾಜರ ಸಾಲೆಯು ನಾಲ್ಕನೆಯದಾಯಿತು.

ಕ್ರಿ. ಶ. ೧೮೫೮ ರ ಅಂತ್ಯದ ಸಮಯಕ್ಕೆ ದೇಶೀಯ ಶಿಕ್ಷಣ ಸಂಸ್ಥೆಗೆ ಕೊಡಲ್ಪಡುತ್ತಿದ್ದ ಅನುದಾನವು ನಿಲ್ಲಿಸಲ್ಪಟ್ಟಿತು:— ಶ್ರೀ ಗ್ಯಾರೆಟ್ (Mr Garrett) ಸರಕಾರೀ ಹಾಯಸ್ಕೂಲನ್ನು ಪ್ರಾರಂಭಿಸಿದರು. ಕ್ರಿ. ಶ. ೧೮೫೯ರಲ್ಲಿ ಅದು ಮದ್ರಾಸ ವಿಶ್ವವಿದ್ಯಾಲಯದ ಸಂಲಗ್ನತೆ ಪಡೆಯಿತು. ಆವರಣದ ಮಧ್ಯಭಾಗವು ವಿರಚಿತವಾಯಿತು. ಈ ಪ್ರೌಢ ಶಾಲೆಯು ಮುಂದೆ ಸುಪ್ರಸಿದ್ಧ ಸೆಂಟ್ರಲ್ ಕಾಲೇಜ ಆಗಿ (Central College) ಅಭಿವೃದ್ಧಿ ಹೊಂದಿತು. ೧೮೫೯ ರಲ್ಲಿ ಅದು ಮದ್ರಾಸ ವಿಶ್ವವಿದ್ಯಾಲಯದ ಸಂಲಗ್ನತೆ ಪಡೆಯಿತು. ೧೮೬೦ ರಲ್ಲಿ ಶ್ರೀ ಎಲ್. ರಾಯಿಸ (Mr. L. Rice) ಎಂಬವರು ಇಂಗ್ಲಂಡದಿಂದ ಆಗಮಿಸಿದರು; ಪ್ರಾಚಾರ್ಯ ಹುದ್ದೆಯನ್ನು ಅಲಂಕರಿಸಿದರು. ದೇವೇರ್‍ಯ (Devereau) ಯೋಜನೆಯು ಹೇಳಿಕೊಳ್ಳುವಂಥ ಪ್ರಗತಿಯನ್ನು ಸಾಧಿಸಲಿಲ್ಲ; ಆದರೆ ಕೆಲಮಟ್ಟಿಗೆ ಮಾತ್ರ ಪ್ರಗತಿಯನ್ನು ಸಾಧಿಸಿತು. ೧೮೬೪–೬೫ ರ ಸಮಯಕ್ಕೆ ಹದಿನೆಂಟು ಕನ್ನಡ ಸರಕಾರಿ ಸಾಲೆಗಳು ಮತ್ತು ಮೂವತ್ತು ಅನುದಾನ ಪಡೆಯುವ ಸಾಲೆಗಳು ಇದ್ದವು.

II

ಪ್ರಾಥಮಿಕ ಸಾಲೆಗಳು :

ಕ್ರಿ. ಶ. ೧೮೬೮ರಲ್ಲಿ ಶ್ರೀ ಎಲ್. ರಾಯಿಸ (Mr. L. Rice) ಅವರು ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರಾದರು. "ಹೋಬಳಿ ಶಾಲಾ ಯೋಜನೆ" ಎಂಬ

ಯೋಜನೆಯನ್ನು ತಯಾರಿಸಿದರು. ಈ ಯೋಜನೆಯು ಸಂಸ್ಥಾನದ ಸರಕಾರಕ್ಕೆ ಸಲ್ಲಿಸಲ್ಪಟ್ಟಿತು. ಕಮಿಶನರ ಅವರು ಬೆಂಗಳೂರ ದಿನಾಂಕ ೨೭–೩–೧೮೬೮ ರಂದು ತಮ್ಮ ಕಚೇರಿಯಾದ ಮೈಸೂರ ಕಮಿಶನರರ ಕಚೇರಿಯ ಪತ್ರ (Gcn. No. 7350/ General No. 245/1867 68) ರನ್ವಯ ಈ ಯೋಜನೆಯನ್ನು ಒಪ್ಪಿಗೆಗಾಗಿ ಭಾರತ ಸರಕಾರಕ್ಕೆ ಕಳಿಸಿದರು. ಪ್ರಸ್ತಾಪದ ಉಗಮ ಮತ್ತು ಯೋಜನೆಯ ವಿವರಗಳು ತಿಳಿಯಲೋಸುಗ ಆ ಪತ್ರದ ಅಂಶಗಳನ್ನು ಇಲ್ಲಿ ಇದ್ದಂತೆ ಹೇಳಲಾಗಿದೆ.

ಮಾತೃಭಾಷಾ ಶಿಕ್ಷಣ ಪ್ರಸಾರದ ಸಲುವಾಗಿ ಈ ಪ್ರಾಂತದಲ್ಲಿ ಕೈಕೊಂಡ ಕ್ರಮಗಳಲ್ಲಿ ಕನ್ನಡ ಶಿಕ್ಷಕರ ಸಲುವಾಗಿ ಒಂದು ತರಬೇತಿ ಸಾಲೆಯ ಸ್ಥಾಪನೆ, ಪ್ರಾಥಮಿಕ ಶಾಲಾ ಪುಸ್ತಕಗಳ ಪ್ರಕಟನೆ, ಮತ್ತು ೪೫ ತಾಲೂಕಾ ಸಾಲೆಗಳನ್ನು ತೆರೆಯುವದು ಸೇರಿರುತ್ತವೆ. ಇವುಗಳಲ್ಲದೆ ಪ್ರಾಂತದ ವಿವಿಧ ಭಾಗಗಳಲ್ಲಿ ಮಿಶನರಿಗಳು ನಡೆಸುತ್ತಿರುವ ಸಾಲೆಗಳು ಇರುತ್ತವೆ. ಸರಕಾರೀ ಮತ್ತು ಮಿಶನ್ ದೇಶೀಯ ಭಾಷಾ ಸಾಲೆಗಳಲ್ಲಿ ಬಾಲಿಕೆಯರನ್ನು ಹಿಡಿದು ಒಟ್ಟು ೬೦೦೦ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ. ದೇಶೀಯ ಸಾಲೆಗಳಲ್ಲಿ ೨೨೦೦೦ ವಿದ್ಯಾರ್ಥಿಗಳು ಓದುತ್ತಿದ್ದು, ಹೀಗೆ ೨೮೦೦೦ ವಿದ್ಯಾರ್ಥಿಗಳು ಈ ಎಲ್ಲ ಸಾಲೆಗಳಲ್ಲಿ ಅಭ್ಯಾಸ ಮಾಡುತ್ತಿದ್ದಾರೆ.

ಪುರುಷರ ಸಂಖ್ಯೆಯು ೨೦೯೬೩೧೮ ಇದೆ ಎಂದು ತಿಳಿದು ಅದರ ೧⁄೯ ಇಲ್ಲವೆ ೨೩೩೦೩೫ ರಷ್ಟು ಹುಡುಗರು ಶಾಲಾ ವಯಸ್ಸಿನವರೆಂದು ಪರಿಗಣಿಸಿದರೆ, ಸುಮಾರು ೨೦೦೦೦೦ ಹುಡುಗರು ವಿದ್ಯಾಭ್ಯಾಸದಿಂದ ಹೊರಗುಳಿದಿರುವರೆಂದು ಅರ್ಥವಾಗುತ್ತದೆ! ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳನ್ನು ಸಾಲೆಗೆ ತರುವ ಸಲುವಾಗಿ ಭಾರತ ಸರಕಾರದವರು ಹಲ್ಕಾ-ಬಂದ (Halka-band) ಪದ್ಧತಿಯ ಮಾರ್ಪಾಟಿನ ಕೆಳಗೆ ಕಾಣಿಸಿದ ಯೋಜನೆಯನ್ನು ಸಲ್ಲಿಸಲಾಯಿತು. ಸೂಚಿತ ಈ ಯೋಜನೆಯು ಬೋಧನೆ, ತಪಾಸಣೆ ಮತ್ತು ಶಿಕ್ಷಕರ ತರಬೇತಿಗಳಿಗಾಗಿ ಸಿಬ್ಬಂದಿ ಸ್ಥಾಪನೆಯ ವ್ಯವಸ್ಥೆಯನ್ನು ಒಳಗೊಂಡಿರುತ್ತದೆ.

ಮೊದಲನೆಯದಕ್ಕೆ ಸಂಬಂಧಿಸಿದಂತೆ, ಹಲ್ಕಾಬಂದ ಪದ್ಧತಿಯಲ್ಲಿದ್ದ ೧೨ ಚದುರ ಮೈಲುಗಳ ವಲಯಗಳ ಬದಲು, ಹೋಬಳಿಗಳೆಂದು ಕರೆಯಲ್ಪಡುವ ತಾಲೂಕ ಉಪಭಾಗಗಳನ್ನು ಅಂಗೀಕರಿಸಬೇಕೆಂದು ಸೂಚಿಸಲಾಯಿತು. ಹೋಬಳಿಗಳ ಸಂಖ್ಯೆಯು ೬೪೫ ಇರುತ್ತದೆ. ಸರಾಸರಿ ಕ್ಷೇತ್ರವು ೪೧ ಚದುರ ಮೈಲುಗಳಿದ್ದು ಜನಸಂಖ್ಯೆಯು ೬೦೪೦ ಇರುತ್ತದೆ. ಹೋಬಳಿಯಲ್ಲಿಯ ಅತ್ಯಂತ ದೂರಿನ ಹಳ್ಳಿಯು ಮಧ್ಯವರ್ತಿ ಸಾಲೆಯಿಂದ ೪⅓ ಮೈಲಿಗಿಂತ ದೂರವಾಗುವದಿಲ್ಲ; ಹೋಬಳಿಯಲ್ಲಿರುವ ಎಲ್ಲರೂ ಅದನ್ನು ತಲುಪಬಲ್ಲರು. ಇದುವೇ ಈ ಯೋಜನೆಯ ಪ್ರಯೋಜನ. ಶಿಕ್ಷಕರನ್ನು

ಅತ್ಯಂತ ಜಾಣ ಮತ್ತು ಪ್ರಭಾವಶಾಲೀ ದೇಶೀಯ ಶಿಕ್ಷಕರ ಮಧ್ಯದಿಂದಲೇ ಆಯ್ದು ಕೊಳ್ಳಬೇಕು. ತಾಲೂಕ ಸಾಲೆಯಲ್ಲಿ ಕೆಲಸ ಮಾಡುವ ಶಿಕ್ಷಕನ ಸಂಬಳ ಏಳು ರೂಪಾಯಿಗಳು; ಭಡತಿಯ ಅವಕಾಶವಿದ್ದು ಸಂಬಳವು ೧೨ ರೂಪಾಯಿಗಳಿಗೆ ತಲುಪುತ್ತದೆ.

ಮೇಲ್ವಿಚಾರಣಾ ಸಿಬ್ಬಂದಿಯು ೮ ಸಹಾಯಕ ಉಪ ತಪಾಸಣಾಧಿಕಾರಿಗಳಿಂದ ಕೂಡಿದ್ದು ಒಬ್ಬೊಬ್ಬರಿಗೆ ಒಂದೊಂದು ಜಿಲ್ಹೆಯನ್ನು ವಹಿಸಿಕೊಡಬೇಕು; ಪ್ರತಿ ಜಿಲ್ಹೆಯ ಸರಾಸರಿ ಕ್ಷೇತ್ರವು ૩೪೦೦ ಚದುರ ಮೈಲು ಇರುವದು ವಿಹಿತ. ಇದರಿಂದ ವರ್ಷದಲ್ಲಿ ಮೂರು ಸಲ ಪ್ರತಿಯೊಂದು ಸಾಲೆಯನ್ನು ತಪಾಸಿಸಲು ಈ ಸಿಬ್ಬಂದಿಗೆ ಅನುಕೂಲವಾಗುವದು. ಈ ದರ್ಜೆಯ ಅಧಿಕಾರಿಗೆ ಪ್ರತಿ ತಿಂಗಳ ಸಂಬಳವು ೪೦/– ರೂಪಾಯಿಗಳಿರಬೇಕು; ಈ ತಪಾಸಣಾ ಸಿಬ್ಬಂದಿಯವರಿಗೆ ದಿನಕ್ಕೆ ೮ ಆಣೆಗಳಂತೆ ಪ್ರವಾಸ ಭತ್ತೆಯನ್ನು ಕೊಡಬೇಕು.

ನಾಡಿನಲ್ಲಿಯ ದೇಶೀಯ ಶಿಕ್ಷಕರಿಗೆ ಸಾಮಾನ್ಯವಾಗಿ ಅಂಕಗಣಿತ ಮತ್ತು ಭೂಗೋಲ ವಿಷಯಗಳಲ್ಲಿ ಜ್ಞಾನವು ಇರುವದಿಲ್ಲವೆಂದೂ ಅವರು ಸಂಘಟನೆ, ಶಿಸ್ತು ಇಲ್ಲವೆ ಪದ್ಧತಿಗಳ ಕಲ್ಪನೆಯನ್ನು ಪಡೆದಿರುವದಿಲ್ಲವೆಂದೂ ಗ್ರಹಿಸಲಾಗಿದೆ.ಆದುದರಿಂದ ಶಿಕ್ಷಕರಿಗಾಗಿ ಒಂದು ತರಬೇತಿ ಸಂಸ್ಥೆಯು ಅತ್ಯಂತ ಅವಶ್ಯವೆನಿಸಿದೆ. ತಿಂಗಳಿಗೆ ೪೦/– ರೂಪಾಯಿ ಸಂಬಳದ ಮೇಲೆ ಪ್ರತಿಯೊಂದು ವಿಭಾಗಕ್ಕೆ ಒಬ್ಬರಂತೆ ಮೂವರು ಶಿಕ್ಷಕರು ಅವಶ್ಯ. ಸಮಯದ ಆವಶ್ಯಕತೆಗನುಸರಿಸಿ ಅವರನ್ನು ವಿವಿಧ ಜಿಲ್ಹೆಗಳಲ್ಲಿ ಒಂದು ವರ್ಷದ ವರೆಗೆ ಪರ್ಯಾಯವಾಗಿ ಇಡಲಾಗುವದು. ವಿದ್ಯಾರ್ಥಿಗಳಾಗಿ ತರಬೇತಿಗೆ ಬರುವ ಶಿಕ್ಷಕರಿಗೆ ಮೊದಲಿನ ಆರು ತಿಂಗಳು, ಪ್ರತಿ ತಿಂಗಳಿಗೆ ૩/– ರೂ. ಗಳಂತೆ; ಮುಂದಿನ ೬ ತಿಂಗಳು ಪ್ರತಿ ತಿಂಗಳಿಗೆ ೪/– ರೂಪಾಯಿಗಳಂತೆ ಭತ್ತೆ ಕೊಡಲಾಗುವದು. ಆದರೆ ಮೊದಲನೆಯ ಅವಧಿಯಲ್ಲಿ ಅವರು ಅರ್ಹತಾ ಪ್ರಮಾಣ ಪತ್ರಗಳನ್ನು ಹೊಂದಿರಕೂಡದು.

ಸ್ಥಳಾವಕಾಶಕ್ಕೆ ಸಂಬಂಧಿಸಿದಂತೆ ಬಾಡಿಗೆಯಿಲ್ಲದೆ ದೊರೆಯುವ ಇಲ್ಲವೆ ಗ್ರಾಮ ಕಮೀಟಿಯವರು, ಈ ಉದ್ದೇಶಕ್ಕಾಗಿ, ಯೋಜನೆಯು ಯಶಸ್ವಿಯಾಗಿ ಪ್ರಸ್ಥಾಪಿಸಲ್ಪಟ್ಟು ಶಾಲಾ ಕಟ್ಟಡಗಳು ನಿರ್ಮಾಣವಾಗುವವರೆಗೆ, ಕೊಡುವ ಇಮಾ-ರತಿಗಳನ್ನು ಉಪಯೋಗಿಸಬೇಕು.

ಸಾಲೆಯಲ್ಲಿಯ ಸಾಧನ ಸಾಮಗ್ರಿಯೆಂದರೆ ಕರೆ ಹಲಗೆಗಳು, ಪಾಟಿಗಳು ಮತ್ತು ನಕಾಶಗಳು ಮಾತ್ರ. ಪ್ರಚಲಿತ ಪಾರುಪತ್ಯವು (Agency) ಪುಸ್ತಕ ಗಳನ್ನು ಮುದ್ರಿಸಿ ಪೂರೈಸಬಹುದು.

ಬೋಧನೆಯು ಸಂಪೂರ್ಣವಾಗಿ ಕನ್ನಡದಲ್ಲಿಯೇ ಸಾಗುವದು: ಮತ್ತು ಓದು, ಬರಹ, ಅಂಕಗಣಿತ ಹಾಗೂ ಭೂಗೋಲದ ಮೂಲ ಪಾಠಗಳನ್ನು ಒಳ-ಗೊಂಡಿರಬೇಕು.

ಶಿಕ್ಷಣ ಸಿಧಿಗೆ ವಂತಿಗೆ ಸಲ್ಲಿಸದೆ ಇರುವ ಸಂಬಂಧಿಕರಿಂದ ಮಾತ್ರ ಶುಲ್ಕವನ್ನು ಸಂಗ್ರಹಿಸಲಾಗುವದು.

ಸಾಲೆಗಳು ಬಾಲಕರಿಗೂ ಬಾಲಿಕೆಯರಿಗೂ ಮುಕ್ತವಾಗಿರಬೇಕೆಂದು ಸೂಚಿಸಲಾಗಿದೆ.

ದುಡಿತದ ಸಾಮಾನ್ಯ ಅವಧಿಗಳಲ್ಲಿ ಸಾಲೆಗಳಿಗೆ ಬರಲಿಕ್ಕೆ ಆಗದವರ ಸಲುವಾಗಿ ರಾತ್ರಿ ಸಾಲೆಗಳ ಸ್ಥಾಪನೆಯನ್ನು ಸಹ ಶಿಫಾರಸು ಮಾಡಲಾಗಿದೆ. ಶಿಕ್ಷಕರಿಗೆ ಇದರಿಂದ ಹೆಚ್ಚಿನ ಕೆಲಸ ಬೀಳುವದರಿಂದ ಮತ್ತು ಬೆಳಕಿನ ಸಲುವಾಗಿ ವೆಚ್ಚ ವಹಿಸಬೇಕಾಗುವದರಿಂದ ತುಸು ಶುಲ್ಕವನ್ನು ಆಕರಿಸಲಾಗುವದು. ಸಾಮಾನ್ಯ ಮೇಲ್ವಿಚಾರಣೆಯ ಉದ್ದೇಶದ ಸಲುವಾಗಿ ಹಳ್ಳಿಯ ಅಧಿಕಾರಸ್ಥರು, ಹೋಬಳಿಯಲ್ಲಿರುವ ಗೌರವಾನ್ವಿತ ಮತ್ತು ಪ್ರಭಾವಶಾಲಿ ವ್ಯಕ್ತಿಗಳಿಂದ ಕೂಡಿದ ಸಮಿತಿಗಳ ರಚನೆಯು ಈ ಸಾಲೆಗಳ ಪ್ರಸಿದ್ಧಿಗೆ ಕಾರಣೀಭೂತವಾಗುವದು.

ಯೋಜನೆಯ ವಾರ್ಷಿಕ ವೆಚ್ಚವು ೬೬,೪೨೦/– ರೂಪಾಯಿಗಳಾಗುವದು.

೬೪೫ ಹೋಬಳಿ ಶಾಲಾ ಶಿಕ್ಷಕರಿಗೆ	ಒಂದು ತಿಂಗಳಿಗೆ ರೂ.	ಒಂದು ವರ್ಷಕ್ಕೆ ರೂ.
ಪ್ರತಿ ಶಿಕ್ಷಕರಿಗೆ ತಿಂಗಳಿಗೆ ೭/– ರೂ. ಯಂತೆ	೪೫೧೫/–	೫೪೧೮೦/–
ಪ್ರತಿ ಸಹಾಯಕ ಉಪ ತಪಾಸಣಾಧಿಕಾರಿಗೆ ಪ್ರತಿ ತಿಂಗಳಿಗೆ ೪೦/– ರೂಪಾಯಿಗಳಂತೆ ೮ ಸಹಾಯಕ ಉಪ ತಪಾಸಣಾಧಿಕಾರಿಗಳಿಗೆ	೩೨೦/–	೩೮೪೦/–
ಪ್ರವಾಸ ಭತ್ತೆ	೮೦/–	೯೬೦/–
ಪ್ರತಿಯೊಬ್ಬರಿಗೆ ೪೦/– ರೂಪಾಯಿಗಳಂತೆ ಮೂವರು ತರಬೇತಿ ಕೊಡುವ ಶಿಕ್ಷಕರಿಗೆ	೧೨೦/–	೧೪೪೦/–
ಸಾಧನ ಸಾಮುಗ್ರಿ ಇಲ್ಲವೆ ಉಪಕರಣಗಳು	—	೨೦೦೦/–
ಪುಸ್ತಕಗಳು ಮತ್ತು ಸ್ಟೇಶನರಿ	—	೩೦೦೦/–
ಸಾದಿಲವಾರ	—	೧೦೦೦/–
ಒಟ್ಟು	ರೂಪಾಯಿ	೬೬೪೨೦/–

ಈ ಯೋಜನಾಂಶಗಳ ಅಂಗೀಕಾರವು, ಮೈಸೂರಲ್ಲಿ ಇಲ್ಲಿಯವರೆಗೆ ಪ್ರಯೋಗಿಸಿದ ಯಾವುದೇ ಯೋಜನೆಗಿಂತ,ಜನತೆಯ ಬೇಕುಬೇಡಿಕೆಗಳಿಗೆ ಸಮವ್ಯಾಪಕಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಶಿಕ್ಷಣವನ್ನು ವಿಸ್ತರಿಸಬಹುದೆಂದು ಅಪೇಕ್ಷಿಸಲಾಗಿದೆ. ಎಲ್ಲ

ಸಾಲೆಗಳಲ್ಲಿಯ ಮಕ್ಕಳ ಹಾಜರಾತಿಯು ೫೦೦೦೦ ಕ್ಕಿಂತ ಹೆಚ್ಚಾಗಬಹುದೆಂದು ಅಂದಾಜು ಮಾಡಲಾಗಿದೆ.

ಶಿಕ್ಷಣದ ವ್ಯಾಪಕತೆಗೆ ಮತ್ತು ಇತರ ಸ್ಥಾನಿಕ ಉದ್ದೇಶಗಳಿಗೆ ತಗಲುವ ವೆಚ್ಚವನ್ನು ಸರಿದೂಗಿಸುವ ಸಲುವಾಗಿ ಗವ್ಹರ್ನರ ಜನರಲ್ ಇನ್ ಕೌನ್ಸಿಲ್ (Governor-General in Council) ಅವರು ಸೂಚಿಸಿದ ಮಿತವಾದ ಮೇಲುತೆರಿಗೆಯನ್ನು ಹೇರುವ ವಿಚಾರವು ಇದ್ದು ಅದರ ಬಗೆಗೆ ಭೂಮಾಪನ ಇಲಾಖೆಯವರೊಂದಿಗೆ ಪತ್ರ ವ್ಯವಹಾರ ನಡೆದಿರುತ್ತದೆ. ಈ ಮೇಲು ತೆರಿಗೆಯ ವಿವರಗಳು ಅದರ ಬಗೆಗಿನ ತೀರ್ಮಾನವು ಪೂರ್ತಿಯಾಗುವವರೆಗೆ ಯಾವುದೇ ಜಿಲ್ಹೆಯಲ್ಲಿ ಲಭ್ಯವಾಗುವದಿಲ್ಲ. ಸಂಗ್ರಹವಾದ ಹಣದ ಮೇಲೆ ಅಥವಾ ೮೦೦೦೦/– ರೂಪಾಯಿಗಳ ಮೇಲೆ ಈ ಮೊತ್ತವು ಪ್ರತಿಶತ ಒಂದರಷ್ಟಾಗಬಹುದು.

ಸರಕಾರವು ಮೈಸೂರಲ್ಲಿ ಸ್ತ್ರೀಶಿಕ್ಷಣ ಸಾಲೆಗಳನ್ನು ಸ್ಥಾಪಿಸುವ ಸಲುವಾಗಿ ಕೈಕೊಳ್ಳಬಹುದಾದ ಕ್ರಮಗಳಿಗೆ ಸಂಬಂಧಿಸಿದ ವರದಿಯು ಬೇರೊಂದು ಸಮಾಚಾರದ ವಿಷಯವಾಗುತ್ತದೆ.

ಭಾರತ ಸರ್ಕಾರದ ಬದಲಿ ಕಾರ್ಯದರ್ಶಿಯು ಸಿಮ್ಲಾದಿಂದ ೧೮೬೮ ನೆಯ ಮೇ ತಿಂಗಳಿನ ೧೯ ರಂದು ತಮ್ಮ ನಂ. ೮೭೧, ವಿದೇಶ ಇಲಾಖೆ, ಸಾಮಾನ್ಯ ಎಂಬ ಪತ್ರವನ್ನು ಮೈಸೂರ ಕಮೀಶನರ ಅವರಿಗೆ ಬರೆದು ಅದರನ್ವಯ ಗವ್ಹರ್ನರ ಜನರಲ್‌ರು ಯೋಜನೆಗೆ ಒಪ್ಪಿಗೆ ಕೊಟ್ಟ ಸಂಗತಿಯನ್ನು ಮತ್ತು ೬೬೪೨೦/– ರೂಪಾಯಿಗಳ ವಾರ್ಷಿಕ ವೆಚ್ಚವನ್ನು ನಿರ್ವಹಿಸುವ ಅಧಿಕಾರಕ್ಕೆ ಹಾಗೂ ಸ್ಥಾನಿಕ ಸಮಿತಿಗಳನ್ನು ನೇಮಿಸುವ ಅಧಿಕಾರಕ್ಕೆ ಒಪ್ಪಿಗೆ ಕೊಟ್ಟಿರುವ ವಿಷಯವನ್ನು ತಿಳಿಸಿರುವರು. (ಈ ಯೋಜನೆಯು ಅತ್ಯುತ್ತಮವಾದುದೆಂದು ಗವ್ಹರ್ನರ ಜನರಲ್ ಅವರು ಶ್ಲಾಘಿಸಿದ್ದಾರೆ) ಸಂಸ್ಥಾನದಲ್ಲಿ ೧೮೬೮ ರಲ್ಲಿ ಸ್ಥಾಪಿಸಲ್ಪಟ್ಟ ಹೋಬಳಿ ಸಾಲೆಗಳು ನಿಜವಾದ ಅರ್ಥದಲ್ಲಿ ಸಾರ್ವಜನಿಕ ಸಾಲೆಗಳೇ ಆಗಿದ್ದವೆಂಬುದು ಸಂಸ್ಥಾನದ ಶೈಕ್ಷಣಿಕ ಇತಿಹಾಸದಲ್ಲಿ ಒಂದು ಮೈಲುಗಲ್ಲೆಂದೇ ಹೇಳಬಹುದು. ೧

೧೮೭೧–೭೨ ರ ಸಮಯಕ್ಕೆ ಪರಿಸ್ಥಿತಿಯು ಅತ್ಯಂತ ತೃಪ್ತಿಕರವಾಗಿತ್ತು. ೩೯ ಹೋಬಳಿಗಳನ್ನು ಹೊರತುಪಡಿಸಿ ಉಳಿದ ಎಲ್ಲ ಹೋಬಳಿಗಳಲ್ಲಿ ಸಾಲೆಗಳಿದ್ದವು. ಪ್ರತಿ ತಾಲೂಕಿನಲ್ಲಿ ಒಂದೊಂದು ದೇಶ ಭಾಷಾ ಸಾಲೆಗಳಿದ್ದವು. ಮ್ಯಾಟ್ರಿಕ್ ತರಗತಿಯವರೆಗೆ ಬೋಧಿಸುವ ಹನ್ನೊಂದು ಜಿಲ್ಲಾ ಸಾಲೆಗಳಿದ್ದವು; ಐದು

---

೧ Report on Public Instruction in Mysore for the year 1868-69. P. 129-133

ಪ್ರೌಢ ಸಾಲೆಗಳು ಬಿ. ಎ. ತರಗತಿಯವರೆಗೆ ಬೋಧಿಸುತ್ತಿದ್ದವು. ಪರೀಕ್ಷೆಯ ಪರಿಣಾಮಗಳನ್ನು ಕೆಳಗೆ ಕೊಡಲಾಗಿದೆ:—

		ಕುಳಿತವರು	ಪಾಸಾದವರು
ಮ್ಯಾಟ್ರಿಕ್ಯುಲೇಶನ್	....	೧೨೨	೫೫
ಎಫ್. ಎ.	....	೧೩	೩
ಬಿ. ಎ.	....	೧೪	೭

ಸಂಸ್ಥೆಗಳ ಒಟ್ಟು ಸಂಖ್ಯೆಯು ೬೯೩ ಇದ್ದು ಅವುಗಳಲ್ಲಿ ಒಟ್ಟು ೨೪೨೦೧ ವಿದ್ಯಾರ್ಥಿಗಳು ವಿದ್ಯಾರ್ಜನೆ ಮಾಡುತ್ತಿದ್ದರು.

೧೮೮೬ ರಲ್ಲಿ ಸ್ಥಾನಿಕ ಪರೀಕ್ಷೆಯನ್ನು ಪ್ರಾರಂಭಿಸಿದ ಬಳಿಕ ಹೋಬಳಿ ಸಾಲೆಗಳ ಪರಿಸ್ಥಿತಿಯು ಸುಧಾರಿಸಿತು.

೧೮೬೮-೬೯ ಮತ್ತು ೧೮೯೯-೧೯೦೦ ರ ಅವಧಿಯಲ್ಲಿಯ ಹೋಬಳಿ ಸಾಲೆಗಳ ಪ್ರಗತಿಯನ್ನು ಕೆಳಗಿನ ಕೋಷ್ಟಕದಲ್ಲಿ ಕೊಡಲಾಗಿದೆ:—

ವರ್ಷ	ಹೋಬಳಿ ಸಾಲೆ ಸಂಖ್ಯೆ	ವಿದ್ಯಾರ್ಥಿಗಳ ಸಂಖ್ಯೆ ಬಾಲಕರು	ಬಾಲಿಕೆಯರು	ಒಟ್ಟು
೧೮೬೮-೬೯	೧೪೬	ಮಾಹಿತಿ ಲಭ್ಯವಿಲ್ಲ		—
೧೮೭೯-೮೦	೬೩೬	೧೮೩೯೦	೩೨೮	೧೮೭೧೮
೧೮೮೯-೯೦	೯೪೭	೩೦೭೮೫	೧೮೦೭	೩೨೫೯೨
೧೮೯೯-೧೯೦೦	೧೩೭೬	೪೦೫೨೭	೨೭೮೭	೪೩೩೧೪

೧೮೯೯-೧೯೦೦ ರ ಅಂಕಿ-ಸಂಖ್ಯೆಗಳು ಜಿಲ್ಲೆಯ ಪ್ರಕಾರ ಕೆಳಗಿನಂತಿವೆ:—

ಜಿಲ್ಲೆ	ಸಾಲೆಗಳು	ಜಿಲ್ಲೆ	ಸಾಲೆಗಳು
ಬೆಂಗಳೂರ	೨೪೪	ಹಾಸನ	೧೧೪
ಕೋಲಾರ	೨೧೬	ಶಿವಮೊಗ್ಗಾ	೧೭೨
ಮೈಸೂರ	೨೬೪	ಕಡೂರ	೫೯
ತುಮಕೂರ	೧೭೧	(ಈಗ ಚಿಕ್ಕಮಗಳೂರ)	
		ಚಿತ್ರದುರ್ಗ	೧೩೬
		ಒಟ್ಟು	೧೩೭೬

ಒಟ್ಟು ೧೩೭೬ ಹೋಬಳಿ ಸಾಲೆಗಳಲ್ಲಿ ೧೨೬೫ ಕನ್ನಡ (೯ ಬಾಲಿಕೆಯರಾಗಿ)
೧೧೦ ಹಿಂದುಸ್ತಾನಿ (೧೭ ಬಾಲಿಕೆಯರವು)
೧ ಮರಾಠಿ

೧೩೭೬ (೨೬ ಬಾಲಿಕೆಯರವು)

೧೮೯೯–೧೯೦೦ರಲ್ಲಿ ವಿವಿಧ ಆಡಳಿತೆಯಲ್ಲಿ ಇದ್ದ ಪ್ರಾಥಮಿಕ ಸಾಲೆಗಳು

	ಬಾಲಕರ ಸಾಲೆ	ಬಾಲಿಕೆಯರ ಸಾಲೆ	
ಸರಕಾರ	೧೪೯೪	೧೨೪	೧೬೧೮
ಲೋಕಲ್ ಬೋರ್ಡ	೧	—	೧
ಅನುದಾನ ಪಡೆಯುವ	೨೦೨	೫೮	೨೬೦
ಅನುದಾನ ಪಡೆಯದ	೨೦	೨	೨೨
ಒಟ್ಟು	೧೭೧೭	೧೮೪	೧೯೦೧

೧೮೯೯–೧೯೦೦ ರಲ್ಲಿ ಪ್ರಾಥಮಿಕ ಸಾಲೆಗಳಲ್ಲಿದ್ದ ವಿದ್ಯಾರ್ಥಿಗಳು

	ಬಾಲಕರು	ಬಾಲಿಕೆಯರು	ಒಟ್ಟು
ಬಾಲಕರ ಸಾಲೆಗಳಲ್ಲಿ	೫೦೬೬೪	೩೩೯೯	೫೪೦೬೩
ಬಾಲಿಕೆಯರ ಸಾಲೆಗಳಲ್ಲಿ	೫೦೬೭	೧೨೨೫	೮೮೫೦
ಒಟ್ಟು	೫೦೬೭೮	೧೨೨೩೫	೬೨೯೧೩

ಮಾಧ್ಯಮಿಕ ಸಾಲೆಗಳಲ್ಲಿಯ ಮತ್ತು ಪ್ರೌಢ ಸಾಲೆಗಳಲ್ಲಿಯ (ಹಾಯಸ್ಕೂಲು) ಪ್ರಾಥಮಿಕ ಶಿಕ್ಷಣ ವಿಭಾಗಗಳಲ್ಲಿ ಕಲಿಯುತ್ತಿದ್ದ ವಿದ್ಯಾರ್ಥಿಗಳು ಸಹಿತ ಒಟ್ಟಾರೆ ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಕಲಿಯುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆಯು ಕೆಳಗಿನಂತೆ ಇದ್ದಿತು.

ಬಾಲಕರು	ಬಾಲಿಕೆಯರು	ಒಟ್ಟು
೬೬,೨೮೪	೧೪,೯೩೩	೮೧,೨೧೭

೧೮೬೯ ರಿಂದ ೧೯೦೦ರ ವರೆಗಿನ ಮೂವತ್ತೊಂದು ವರ್ಷದ ಅವಧಿಯಲ್ಲಿ ಪ್ರಾಥಮಿಕ ಸಾಲೆಗಳ ಸಂಖ್ಯೆಯು ಏಳು ಪಟ್ಟು ಹೆಚ್ಚಾಯಿತು. ಅದರಂತೆ ವಿದ್ಯಾರ್ಥಿ

ಗಳ ಸಂಖ್ಯೆಯು ಸ್ಥೂಲವಾಗಿ ಏಳುಪಟ್ಟು ಅಧಿಕವಾಯಿತು. ಮೂರುನೂರು ಜನ ಸಂಖ್ಯೆಗಿಂತ ಹೆಚ್ಚು ಜನವಸತಿಯುಳ್ಳ ಇಡೀ ಸಂಸ್ಥಾನದ ೪೬೮೯ ಹಳ್ಳಿಗಳಲ್ಲಿ ಸಾರ್ವಜನಿಕ ಸಾಲೆಗಳಿದ್ದ ಹಳ್ಳಿಗಳ ಸಂಖ್ಯೆಯು ೧೯೦೧ ಮಾತ್ರ ಇದ್ದಿತು. ಉಳಿದ ೨೭೦೮ ಹಳ್ಳಿಗಳಲ್ಲಿ ಸಾರ್ವಜನಿಕ ಸಾಲೆಗಳು ಇರಲಿಲ್ಲ. ನಾವು ೧೬೭೭ ದೇಶೀಯ ಸಾಲೆಗಳನ್ನು ಗಣನೆಗೆ ತೆಗೆದುಕೊಂಡರೂ ಸಹ ೩೦೦ಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ ೧,೦೦೦ ಹಳ್ಳಿಗಳಲ್ಲಿ ಸಾಲೆಗಳು ಇಲ್ಲದಿರುವದನ್ನು ನೋಡಬಹುದು. ಪ್ರತಿ ೧೫ ಚದುರು ಮೈಲುಗಳಿಗೆ ಒಂದು ಸಾರ್ವಜನಿಕ ಸಾಲೆ ಇದ್ದಿತು. ಸಾರ್ವಜನಿಕ ಹಾಗೂ ಖಾಸಗಿ ಪ್ರಾಥಮಿಕ ಸಾಲೆಗಳನ್ನು ಕೂಡಿಯೇ ಪರಿಗಣಿಸಿದರೂ ಸಹ ಪ್ರತಿ ೮ ಚದುರು ಮೈಲುಗಳಿಗೆ ಒಂದು ಸಾಲೆ ಇದ್ದುದನ್ನು ಕಾಣುತ್ತೇವೆ. ಒಟ್ಟು ಜನಸಂಖ್ಯೆಯಲ್ಲಿ ಪ್ರತಿಶತ ೧೫ ರಷ್ಟನ್ನು ಸಾಲೆಗೆ ಹೋಗುವ ಸಂಖ್ಯೆಯೆಂದು ತಿಳಿದರೆ ಸಾಲೆಯಲ್ಲಿರುವ ಒಟ್ಟು ಮಕ್ಕಳ ಸಂಖ್ಯೆಯು ಶೇಕಡಾ ಪ್ರಮಾಣವು ಸಾಲೆಗೆ ಹೋಗತಕ್ಕ ವಯಸ್ಸಿನ ಒಟ್ಟು ಮಕ್ಕಳಿಗೆ ಹೋಲಿಸಲ್ಪಟ್ಟರೆ ಅದು ಬಾಲಕರ ವಿಷಯದಲ್ಲಿ ೨೬.೨೯ ಮತ್ತು ಬಾಲಿಕೆಯರ ವಿಷಯದಲ್ಲಿ ೪.೩೬ ಆಗುತ್ತಿತ್ತು. ನೆರೆ–ಹೊರೆಯ ರಾಜ್ಯಗಳಲ್ಲಿಯ ಇದೇ ರೀತಿಯ ಅಂಕಿ–ಸಂಖ್ಯೆಗಳು ಇಂತಿವೆ:—

	ಬಾಲಕರು	ಬಾಲಿಕೆಯರು
ಮದ್ರಾಸ	೨೭.೮	೪.೬೦
ಮುಂಬಯಿ	೨೬.೩೬	೪.೦೬

III

ಮಧ್ಯಮ ಸಾಲೆಗಳು (Middle Schools) :

ಈ ಪಂಗಡದಲ್ಲಿ ಎರಡು ಬಗೆಯ ಸಾಲೆಗಳಿದ್ದವು:

(ಅ) ಕೆಳದರ್ಜೆಯ ಆ್ಯಂಗ್ಲೊ–ವ್ಹರ್ನ್ಯಾಕ್ಯುಲರ ಸಾಲೆಗಳು.

(ಬ) ದೇಶೀಯ ಭಾಷಾ (Vernacular) ಸಾಲೆಗಳು.

ಕೆಳದರ್ಜೆಯ ಆ್ಯಂಗ್ಲೋ–ವ್ಹರ್ನ್ಯಾಕ್ಯುಲರ (A. V.) ಸಾಲೆಗಳು ಸಾಮಾನ್ಯವಾಗಿ ಜಿಲ್ಹೆಯ ಉಪವಿಭಾಗ ಮತ್ತು ತಾಲೂಕುಗಳ ಮುಖ್ಯ ಸ್ಥಳಗಳಲ್ಲಿ ಇರುತ್ತಿದ್ದವು. ಈ ಸಾಲೆಗಳು ಮಾತೃಭಾಷೆ ಇಲ್ಲವೆ ದೇಶೀಯ ಭಾಷೆಯ ಜೊತೆಗೆ ಆಂಗ್ಲಭಾಷೆಯಲ್ಲಿ ಆರಂಭ ಸ್ವರೂಪದ ಬೋಧನೆಯನ್ನು ಕೊಡುತ್ತಿದ್ದವು. ಇವುಗಳ ಸಂಖ್ಯೆಯು ಬಹಳ ಕಡಿಮೆ ಇದ್ದು ಅದು ಸಹ ಕ್ರಮೇಣ ಕ್ಷೀಣಿಸುತ್ತ ನಡೆಯಿತು; ಈ ಸಾಲೆಗಳನ್ನು ಮುಚ್ಚಬೇಕೆಂದು ನಿರ್ಧರಿಸಲಾಯಿತು.

ದೇಶೀಯ ಭಾಷಾ ಸಾಲೆಗಳು ೧೮೫೭ ರ ಯೋಜನೆಯನ್ವಯ ಪ್ರಾರಂಭವಾದವು; ಅವು ಉತ್ತಮ ಪ್ರಗತಿಯನ್ನು ತೋರಿಸಿದವು. ತಮ್ಮ ಮಾತೃಭಾಷೆಯನ್ನು ಓದಲು ಮತ್ತು ಬರೆಯಲು ಗೊತ್ತಿಲ್ಲದ ಯಾರನ್ನೂ ತಿಂಗಳಿಗೆ ೬–೦೦ ರೂಪಾಯಿ ವೇತನದ ಯಾವುದೇ ನೌಕರಿ ಸ್ಥಳಕ್ಕೆ ನೇಮಿಸಕೂಡದೆಂದು ಹೊರಟ ಸರಕಾರೀ ನಿರ್ಣಯದಿಂದ ಇದಕ್ಕೆ ಬೆಂಬಲ ದೊರೆಯಿತು. ೧೮೭೧–೭೨ರಲ್ಲಿ ಸ್ಥಿತಿಗತಿಯು ಕೆಳಗಿನಂತೆ ಇದ್ದಿತು:—

ದೇಶಭಾಷಾ ಸಾಲೆಗಳು (೧೮೭೧–೭೨ರಲ್ಲಿ)

ಸರಕಾರ		ಅನುದಾನ ಪಡೆಯುವ		ಒಟ್ಟು	
ಸಾಲೆಗಳು	ವಿದ್ಯಾರ್ಥಿಗಳು	ಸಾಲೆಗಳು	ವಿದ್ಯಾರ್ಥಿಗಳು	ಸಾಲೆಗಳು	ವಿದ್ಯಾರ್ಥಿಗಳು
೯೫*	೪೨೦೧	೫೮†	೩೯೧೫	೧೫೩	೮೧೧೬

ಆದರೆ ಈ ಸಾಲೆಗಳು ಸಹ ಹೆಚ್ಚು ಪ್ರಸಿದ್ಧಿ ಪಡೆದಿರಲಿಲ್ಲ. ೧೮೯೯–೧೯೦೦ ರ ಕೊನೆಗೆ ಅವುಗಳ ಸ್ಥಿತಿಗತಿ ಹೀಗೆ ಇದ್ದಿತು:—

ಎ. ವ್ಹಿ. ಮಾಧ್ಯಮ ಸಾಲೆಗಳು					ದೇಶಭಾಷಾ ಮಾಧ್ಯಮ ಸಾಲೆಗಳು					ಒಟ್ಟು
ಬಾಲಕರು		ಬಾಲಿಕೆಯರು		ಒಟ್ಟು	ಬಾಲಕರು		ಬಾಲಿಕೆಯರು		ಒಟ್ಟು	
ಕನ್ನಡ	ಹಿಂದಿ	ಕ.	ಹಿ.	ಕ. ಹಿ	ಕ.	ಹಿ.	ಕ.	ಹಿ.	ಕ. ಹಿ.	ಕ. ಹಿ.
೮೮	೪	೬	—	೯೮	೬೭	೨೮	೨೦	೧	೧೧೬	೨೧೪

ಆಡಳಿತೆಯ ಪ್ರಕಾರ ೧೮೯೯–೧೯೦೦ ಸ್ಥಿತಿಯು ಕೆಳಗಿನಂತೆ ಇದ್ದಿತು:—

	ಬಾಲಕರು	ಬಾಲಿಕೆಯರು	ಒಟ್ಟು
ಸರಕಾರ	೧೪೯	೧೧	೧೬೦
ಲೋಕಲ್ ಬೋರ್ಡ	೨	—	೨
ಅನುದಾನ ಪಡೆಯುವಂಥವು	೩೫	೧೬	೫೧
ಅನುದಾನ ಪಡೆಯದವು	೧	—	೧
ಒಟ್ಟು	೧೮೭	೨೭	೨೧೪

* ೮೧ ಕನ್ನಡ, ೮ ಬಾಲಿಕೆಯರವು, ೫ ಹಿಂದುಸ್ತಾನಿ, ೧ ತೆಲುಗ.

† ೨೩ ಕನ್ನಡ, ೧೮ ಬಾಲಿಕೆರವು, ೧೭ ಹಿಂದುಸ್ತಾನಿ.

IV

ಮಾಧ್ಯಮಿಕ ಶಿಕ್ಷಣ (Secondary Education):

(೧) ಪ್ರೌಢ ಸಾಲೆಗಳ ಪ್ರಕಾರಗಳು :

ದೇಶಭಾಷಾ ಪ್ರೌಢಸಾಲೆಗಳು ಮತ್ತು ಪ್ರೌಢಸಾಲೆಗಳು ಹೀಗೆ ಎರಡು ಪ್ರಕಾರದ ಪ್ರೌಢ ಸಾಲೆಗಳಿದ್ದವು. ದೇಶಭಾಷಾ ಪ್ರೌಢ ಸಾಲೆಗಳು ಎಲ್ಲ ವಿಷಯಗಳನ್ನು ದೇಶಭಾಷೆಯಲ್ಲಿಯೇ ಕಲಿಸುತ್ತಿದ್ದವು. ಮೈಸೂರು ಕೆಳಗಿನ ಮಾಧ್ಯಮಿಕ ಪರೀಕ್ಷೆ (ದೇಶಿಯ ಭಾಷೆ) ಯನ್ನು ಪಾಸಾದವರಿಗೆ ಪ್ರವೇಶ ದೊರೆಯುತ್ತಿತ್ತು. ಇಂಥ ಸಾಲೆಗಳು ಸಂಸ್ಥಾನದಲ್ಲಿ ಎರಡು ಮಾತ್ರ ಇದ್ದವು. ಮೈಸೂರಿನಲ್ಲಿದ್ದ ನಾರ್ಮಲ್ ಸಾಲೆ ಮತ್ತು ಅಲ್ಲಿಯೇ ಇದ್ದ ಮಹಾರಾಣಿ ಹಾಯಸ್ಕೂಲ ಇವೇ ಆ ಎರಡು ಪ್ರೌಢಸಾಲೆಗಳು. ಈ ಸಾಲೆಗಳು ಪ್ರಾಥಮಿಕ ಸಾಲೆಗಳಿಗೆ ಸಮರ್ಥ ಶಿಕ್ಷಕರನ್ನು ಒದಗಿಸುವ ಸಲುವಾಗಿಯೇ ಮುಖ್ಯವಾಗಿ ಇದ್ದವು. ಇಲ್ಲಿ ಕಲಿತ ವಿದ್ಯಾರ್ಥಿಗಳು ಮುಂದೆ ಮೇಲಿನ ಮಾಧ್ಯಮಿಕ ತರಬೇತಿಯ ವ್ಯಾಸಂಗವನ್ನು ಮುಗಿಸಬೇಕಾಗುತ್ತಿತ್ತು; ಬಳಿಕ ಅವರು ಪ್ರಾಥಮಿಕ ಶಾಲಾ ಶಿಕ್ಷಕರಾಗಲು ಅರ್ಹರಾಗುತ್ತಿದ್ದರು. ಮೇಲಿನ ಇವೆಲ್ಲ ಉಚ್ಚ ಮಾಧ್ಯಮಿಕ ತರಬೇತಿ ಪಡೆದ ಉಮೇದುವಾರನು ಶಿಕ್ಷಕನೆಂದು ನೌಕರಿ ಪಡೆಯುತ್ತಿದ್ದನು. ಇಂಥ ನೌಕರಿಯು ದೇಶೀಯ ಭಾಷಾ ಮಾಧ್ಯಮ (Middle) ಶಾಲೆಯಲ್ಲಿ ದೊರೆಯುತ್ತಿತ್ತು; ಇಲ್ಲವೆ ಪಂಡಿತ ಮತ್ತು ಮೌಲ್ವಿ ಪರೀಕ್ಷೆಗಳಿಗೆ ಕೂಡ್ರುವ ಸಲುವಾಗಿ ಹೆಚ್ಚಿನ ಅಭ್ಯಾಸ ಮಾಡಿ ಪ್ರೌಢ ಸಾಲೆಯಲ್ಲಿ ಪಂಡಿತ ಇಲ್ಲವೆ ಮೌಲ್ವಿ ಎಂದು ನೇಮಕ ಹೊಂದಲಿಕ್ಕೆ ಅರ್ಹತೆಯನ್ನು ಪಡೆಯುತ್ತಿದ್ದನು. ಆದರೆ ಈ ಸಾಲೆಗಳು ಪ್ರಸಿದ್ಧಿ ಪಡೆಯಲಿಲ್ಲ; ಕೊನೆಗೆ ಅವು ಮಾಯವಾದವು.

ಆಂಗ್ಲ ಭಾಷಾ ಪ್ರೌಢಸಾಲೆಗಳು ಸಹ ಶೀಘ್ರತರ ಪ್ರಗತಿಯನ್ನು ಸಾಧಿಸಲಿಲ್ಲ. ೧೮೭೮–೭೯ ರಲ್ಲಿ ಅವುಗಳ ಸಂಖ್ಯೆ ೧೫ ಮಾತ್ರ ಇದ್ದಿತು; ಅವುಗಳ ಅಭ್ಯಾಸ ಪತ್ರಿಕೆಯು ಮದ್ರಾಸ ವಿಶ್ವವಿದ್ಯಾಲಯದ ಬೇಕು–ಬೇಡಿಕೆಗಳನ್ನೂ ತೃಪ್ತಿಗೊಳಿಸುತ್ತಿತ್ತು. ೧೮೯೯–೧೯೦೦ ರಲ್ಲಿದ್ದ ಅವುಗಳ ಸಂಖ್ಯೆಯನ್ನು ಕೆಳಗೆ ತೋರಿಸಲಾಗಿದೆ :—

	ಬಾಲಕರು	ಬಾಲಿಕೆಯರು	ಒಟ್ಟು
ಸರಕಾರಿ ಶಾಲೆಗಳು	೧೦	೧	೧೧
ವಿದ್ಯಾರ್ಥಿಗಳು	೩೧೬೫	೧೨	೩೧೭೭
ಅನುವಾದ ಪಡೆಯುವಂಥವು			
ಶಾಲೆಗಳು	೩	—	೩
ವಿದ್ಯಾರ್ಥಿಗಳು	೧೩೭೩	—	೧೩೭೩
ಒಟ್ಟು ಶಾಲೆಗಳು	೧೩	೧	೧೪
ಒಟ್ಟು ವಿದ್ಯಾರ್ಥಿಗಳು	೪೫೩೮	೧೨	೪೫೫೦

(ಮೇಲೆ ವಿವರಿಸಿದ ಪ್ರೌಢ ಸಾಲೆಗಳು ಕಾಲೇಜುಗಳ ವಿಭಾಗಗಳನ್ನು ಒಳ-ಗೊಂಡಿರುತ್ತವೆ.)

ಮೇಲೆ ವಿವರಿಸಿದ ಸಾಲೆಗಳಲ್ಲಿ ಪ್ರೌಢ ಸಾಲೆಯ ಹಂತದ ಬೋಧನೆಯನ್ನು ಪಡೆಯುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆಯು ೧,೪೮೯ ಇದ್ದಿತು. ೧,೪೧೨ ಬಾಲಕರು ೧೭ ಬಾಲಿಕೆಯರು. ಇತರರು ಕೆಳಗಿನ ವರ್ಗಗಳಲ್ಲಿ ಇದ್ದರು. ೧೮೯೯–೧೯೦೦ ರಲ್ಲಿ ಪ್ರೌಢ ಸಾಲೆಗಳ ವಿವರವನ್ನು ಕೆಳಗೆ ಕೊಡಲಾಗಿದೆ :—

ಮೈಸೂರ ಸಂಸ್ಥಾನದಲ್ಲಿ ೧೮೯೯–೧೯೦೦ ರ ಸಮಯದಲ್ಲಿದ್ದ ಪ್ರೌಢ ಸಾಲೆಗಳ ಪಟ್ಟಿ :

ಸರಕಾರಿ

೧. ಪ್ರೌಢ ಸಾಲೆ (ಕೇಂದ್ರ ಕಾಲೇಜು (Central College), ಬೆಂಗಳೂರು

೨. ಪ್ರೌಢ ಸಾಲೆ (ಮಹಾರಾಜಾ ಕಾಲೇಜ), ಮೈಸೂರು

೩. ಪ್ರೌಢ ಸಾಲೆ (ಶಿವಮೊಗ್ಗಾ ಕಾಲೇಜ), ಶಿವಮೊಗ್ಗಾ

೪. ಪ್ರೌಢ ಸಾಲೆ ತುಮಕೂರು

೫. ಪ್ರೌಢ ಸಾಲೆ ಕೋಲಾರ

೬. ಪ್ರೌಢ ಸಾಲೆ ಹಾಸನ

೭. ಪ್ರೌಢ ಸಾಲೆ ಚಿಕ್ಕಮಗಳೂರ

೮. ಪೌಢ ಸಾಲೆ ಚಿತ್ರದುರ್ಗ

೯. ಪ್ರೌಢ ಸಾಲೆ ಚಿಕ್ಕಬಳ್ಳಾಪುರ

೧೦. ಪೌಢ ಸಾಲೆ ಚನ್ನಪಟ್ಟಣ

೧೧. ಮಹಾರಾಣಿ ಬಾಲಿಕೆಯರ ಪ್ರೌಢ ಸಾಲೆ, ಮೈಸೂರ

—ಅನುದಾನ ಪಡೆಯುವಂಥವು—

೧೨. ಲಂಡನ್ ಮಿಶನ್ ಪ್ರೌಢ ಸಾಲೆ, ಬೆಂಗಳೂರ

೧೩. ವೆಸ್ಲಿಯನ್ ಮಿಶನ್ ಪ್ರೌಢ ಸಾಲೆ, ಬೆಂಗಳೂರ

೧೪ ವೆಸ್ಲಿಯನ್ ಮಿಶನ್ ಪ್ರೌಢ ಸಾಲೆ, ಮೈಸೂರ

(೨ ಸಂಘಟನೆ ಮತ್ತು ಪಠ್ಯಕ್ರಮ :

ಪ್ರೌಢ ಸಾಲೆಯು IV, V ಮತ್ತು VI ಹೀಗೆ ಮೂರು ತರಗತಿಗಳಿಂದ ಕೂಡಿದ್ದಿತು. VI ನೇ ತರಗತಿಯ ಕೊನೆಗೆ ವಿದ್ಯಾರ್ಥಿಗಳು ಮದ್ರಾಸ ವಿಶ್ವವಿದ್ಯಾ-ಲಯದ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಗೆ ಕೂಡ್ರುತ್ತಿದ್ದರು. ಈ ವ್ಯವಸ್ಥೆಯು ಅನೇಕ

ವರ್ಗಗಳವರೆಗೆ ನಡೆಯಿತು. ಬಹು ತಡವಾದನಂತರ ಅವುಗಳಿಗೆ ಪ್ರೌಢಶಾಲಾ I, II, III ವರ್ಗಗಳೆಂದು ಪುನರ್ ನಾಮಕರಣವಾಯಿತು. ಈಗ ಅವುಗಳಿಗೆ VIII, IX ಮತ್ತು X ನೇ ವರ್ಗಗಳೆಂದು ಕರೆಯಲಾಗುತ್ತಿದೆ. ಪಠ್ಯ ಕ್ರಮವು ಕೆಳಗೆ ಕಾಣಿಸಿದ ವಿಷಯಗಳನ್ನು ಒಳಗೊಂಡಿತ್ತು.

(೧) ಇಂಗ್ಲೀಷ ಪಠ್ಯಗಳು, ವ್ಯಾಕರಣ ಮತ್ತು ಬರಹದ ಕೆಲಸ
(೨) ಮಾತೃಭಾಷೆ, ಪಠ್ಯಗಳು, ವ್ಯಾಕರಣ ಮತ್ತು ಬರಹದ ಕೆಲಸ
(೩) ಅಂಕಗಣಿತ, ಬೀಜಗಣಿತ, ಮತ್ತು ಭೂಮಿತಿ
(೪) ಭೂಗೋಲ
(೫) ಭಾರತದ ಮತ್ತು ಇಂಗ್ಲಂಡದ ಇತಿಹಾಸ.

೧೯೧೩ ರಲ್ಲಿ ಎಸ್. ಎಸ್. ಎಲ್. ಸಿ. ಯೋಜನೆಯ ಕಾರ್ಯರೂಪದಲ್ಲಿ ಕೂಡಲೇ ವಿಜ್ಞಾನ ವಿಷಯವನ್ನು ಸೇರಿಸಲಾಯಿತು.

ಬೋಧನಾ ಮಾಧ್ಯಮವು ಪ್ರೌಢಸಾಲೆಯಲ್ಲಿ ಇಂಗ್ಲೀಷ ಇದ್ದರೆ, ದೇಶೀಯ ಭಾಷಾ ಪ್ರೌಢಸಾಲೆಯಲ್ಲಿ ದೇಶೀಯ ಭಾಷೆಯಾಗಿದ್ದಿತು.

೧೮೫೭ ರಲ್ಲಿ ಪ್ರಚಲಿತದಲ್ಲಿ ತರಲ್ಪಟ್ಟ ಯೋಜನೆಯಲ್ಲಿ ಬಾಹ್ಯ ಪರೀಕ್ಷೆಗೆ ಅವಕಾಶವಿರಲಿಲ್ಲ. ಪ್ರತಿಯೊಂದು ಸಾಲೆಯು ತನ್ನದೇ ಆದ ಅನೌಪಚಾರಿಕ ಪರೀಕ್ಷೆ ನಡೆಸುತ್ತಿತ್ತು. ಬೆಂಗಳೂರಲ್ಲಿರುವ ಸರಕಾರೀ ಪ್ರೌಢಸಾಲೆಯು ತನ್ನ ಪ್ರಪ್ರಥಮ ಉಮೇದುವಾರನನ್ನು ೧೮೬೩ ರಲ್ಲಿ ಕಳಿಸಿತು.

V

ಕಾಲೇಜ ಶಿಕ್ಷಣ :

ಬೆಂಗಳೂರಲ್ಲಿರುವ ಸರಕಾರೀ ಪ್ರೌಢಸಾಲೆಗೆ ಮದ್ರಾಸ ವಿಶ್ವವಿದ್ಯಾಲಯದ ಎಫ್. ಎ. (೧೮೬೬) ಮತ್ತು ಬಿ. ಎ. (೧೮೭೦) ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ತಯಾರಿಸುವ ಅವಕಾಶವಿತ್ತು. ಅದು ೧೮೭೫–೭೬ ರಲ್ಲಿ ಸೆಂಟ್ರಲ್ ಕಾಲೇಜ ಆಯಿತು. ೧೮೭೮–೭೯ರಲ್ಲಿ ಸಾಲೆಗಳಿದ್ದವು. ಇವು ಮ್ಯಾಟ್ರಿಕ್ಯುಲೇಶನ್‌ದವರೆಗೆ ಬೋಧನೆ ನೀಡುತ್ತಿದ್ದವು. ಇವುಗಳಿಗೆ ಪ್ರೌಢಸಾಲೆಗಳೆಂದು ಕರೆಯಲಾಗುತ್ತಿತ್ತು. ಆದರೆ ಎಫ್. ಎ. ದವರಿಗೆ ಬೋಧನೆನೀಡುತ್ತಿದ್ದವುಗಳಿಗೆ ದ್ವಿತೀಯ ದರ್ಜೆಯ ಕಾಲೇಜು ಗಳೆಂದು ಕರೆಯಲಾಗುತ್ತಿತ್ತು. ಬಿ.ಎ. ವರ್ಗಗಳವರೆಗೆ ಕಲಿಸುತ್ತಿದ್ದವುಗಳಿಗೆ ಕಾಲೇಜು ಗಳೆಂದು ಕರೆಯುತ್ತಿದ್ದರು. ಆಗ ಒಂದೇ ಒಂದು ಕಾಲೇಜ ಇದ್ದಿತು.

ಮಹಾರಾಜಾ ಪ್ರೌಢಸಾಲೆ ಮೈಸೂರ ಇದು ೧೮೭೮–೭೯ ರಲ್ಲಿ ದ್ವಿತೀಯ ದರ್ಜೆಯ ಕಾಲೇಜ ಆಯಿತು; ೧೮೯೪ ರಲ್ಲಿ ಕಾಲೇಜ ಆಯಿತು.

ಶಿವಮೊಗ್ಗಾ ಪ್ರೌಢಸಾಲೆಯು ೧೮೭೮-೭೯ ರಲ್ಲಿ ದ್ವಿತೀಯ ದರ್ಜೆಯ ಕಾಲೇಜ ಆಯಿತು. ಮೈಸೂರಿನಲ್ಲಿ ಮಹಾರಾಣಿ ಪ್ರೌಢಸಾಲೆಯು ೧೯೦೦-೧೯೦೧ ರಲ್ಲಿ ದ್ವಿತೀಯ ದರ್ಜೆಯ ಕಾಲೇಜ ಆಯಿತು. ಇದು ೧೮೯೭ರಿಂದಲೇ ಎಫ್. ಎ. ಪರೀಕ್ಷೆಗೆ ಉಮೇದವಾರರನ್ನು ಕೂಡ್ರಿಸುತ್ತಿತ್ತು.

೧೮೬೧ ರಲ್ಲಿ ಸ್ಥಾಪಿತವಾದ ಬಿಶಪ್ ಕಾಟನ್ ಪ್ರೌಢಸಾಲೆಯು ೧೮೮೦-೮೧ ರಲ್ಲಿ ದ್ವಿತೀಯ ದರ್ಜೆಯ ಕಾಲೇಜ ಆಯಿತು. ಮುಂದೆ ಅದು ಪ್ರೌಢ ಶಾಲಾ ಮಟ್ಟಕ್ಕೆ ಮತ್ತೆ ಇಳಿಯಿತು.

VI

ವಿಶ್ವವಿದ್ಯಾಲಯ ಶಿಕ್ಷಣ :

೧೯೧೬ ರ ವರೆಗೆ ಎಲ್ಲ ಕಾಲೇಜುಗಳು ಮದ್ರಾಸ ವಿಶ್ವವಿದ್ಯಾಲಯಕ್ಕೆ ಸಂಲಗ್ನವಾಗಿದ್ದವು. ಸರ್ ಎಮ್. ವಿಶ್ವೇಶ್ವರಯ್ಯ ಅವರ ಉತ್ಸಾಹ,ಪ್ರೋತ್ಸಾಹಗಳ ಪರಿಣಾಮವಾಗಿ ೧೯೧೬ ರಲ್ಲಿ ಮೈಸೂರ ವಿಶ್ವವಿದ್ಯಾಲಯವು ಅಸ್ತಿತ್ವದಲ್ಲಿ ಬಂದಿತು.

ವೃತ್ತಿಪರ ಕಾಲೇಜುಗಳು :

೧೯ ನೇ ಶತಮಾನದಲ್ಲಿ ವೃತ್ತಿಪರ ಕಾಲೇಜುಗಳು ಇರಲಿಲ್ಲ. ಆದಾಗ್ಯೂ ಮದ್ರಾಸ ಮತ್ತು ಮುಂಬೈಗಳಲ್ಲಿದ್ದ ವೈದ್ಯಕೀಯ, ಎಂಜನೀಯರಿಂಗ ಮತ್ತು ಶಿಕ್ಷಕರ ತರಬೇತಿ ಕಾಲೇಜುಗಳಿಗೆ ವಿದ್ಯಾರ್ಥಿಗಳನ್ನು ಕಳಿಸಲಾಗುತ್ತಿತ್ತು.

VII

ಶಿಕ್ಷಣದ ಇತರ ನೋಟಗಳು

(ಅ) ಶಿಕ್ಷಕ ಶಿಕ್ಷಣ :

ಇಂಗ್ಲೀಷ ಮತ್ತು ಕನ್ನಡ ಬೋಧನಾ ಮಾಧ್ಯಮವುಳ್ಳ ಒಂದು ನಾರ್ಮಲ್ ಸಾಲೆಯನ್ನು ೧೮೬೧ರಲ್ಲಿ ಬೆಂಗಳೂರಲ್ಲಿ ಆರಂಭಿಸಲಾಯಿತು. ಆರಂಭದಲ್ಲಿ ಪರೀಕ್ಷಣವಾಗಲಿ ಪರೀಕ್ಷೆಯಾಗಲಿ ಇರಲಿಲ್ಲ. ಪ್ರಪ್ರಥಮ ಪರೀಕ್ಷೆಯು ೧೮೬೬ರಲ್ಲಿ ನಡೆಯಿತು. ಉರ್ದು ಶಾಲೆಗಳ ಸಲುವಾಗಿ ಶಿಕ್ಷಕರನ್ನು ತರಬೇತುಗೊಳಿಸುವ ಉದ್ದೇಶದಿಂದ ೧೮೭೦-೭೧ರಲ್ಲಿ ಹಿಂದುಸ್ತಾನಿ ವಿಭಾಗವನ್ನು ಜೋಡಿಸಲಾಯಿತು. ತರಬೇತು ಹೊಂದಿದ ಶಿಕ್ಷಕರ ಅವಶ್ಯಕತೆಯು ಪೂರೈಸಿದ್ದರಿಂದ ೧೮೭೧ ೭೨ರಲ್ಲಿ ನಾರ್ಮಲ್ ಸಾಲೆಯನ್ನು ಮುಚ್ಚಲಾಯಿತು. ಆದರೆ ಹಿಂದುಸ್ತಾನಿ ವರ್ಗವು ಮಾತ್ರ ಮುಂದುವರಿಯಿತು. ೧೮೬೮ ರಲ್ಲಿ ಹೋಬಳಿ ಯೋಜನೆಯು ಪ್ರಾರಂಭವಾದನಂತರ ಎಲ್ಲ ಜಿಲ್ಹಾ ಮುಖ್ಯ ಪಟ್ಟಣಗಳಲ್ಲಿ ೧೮೬೮-೬೯ ರಲ್ಲಿ ತುರ್ತು ನಾರ್ಮಲ್ ಸಾಲೆಗಳು

ಪ್ರಾರಂಭಿಸಲ್ಪಟ್ಟವು. ಈ ಸಾಲೆಗಳು ಸಹ ೧೮೭೯-೮೦ ರಲ್ಲಿ ಮುಚ್ಚಲ್ಪಟ್ಟವು. ಮುಂದೆ ಸಂಸ್ಥಾನದಲ್ಲಿ ೧೮೯೪ ರ ವರೆಗೆ ನಾರ್ಮಲ್ ಶಾಲೆಯೇ ಇರಲಿಲ್ಲ. ೧೮೯೪ ರಲ್ಲಿ ಮೈಸೂರಲ್ಲಿ ಹೊಸ ನಾರ್ಮಲ್ ಸಾಲೆಯು ಸ್ಥಾಪಿಸಲ್ಪಟ್ಟಿತು. ಇದು ಈಗಲೂ ಸಹ ಶಿಕ್ಷಕರ ಸರಕಾರೀ ತರಬೇತಿ ಕಾಲೇಜ ಎಂದು ಮುಂದುವರಿದಿದೆ. ೧೮೯೯-೧೯೦೦ರಲ್ಲಿ ಶತಮಾನದ ಕೊನೆಗೆ ಮೈಸೂರ, ಕೋಲಾರ ಮತ್ತು ತುಮಕೂರುಗಳಲ್ಲಿ ಒಂದೊಂದ ರಂತೆ ಮೂರು ನಾರ್ಮಲ್ ಸಾಲೆಗಳು ಇದ್ದವು.

(ಬ) ತಾಂತ್ರಿಕ ಮತ್ತು ಔದ್ಯೋಗಿಕ ಶಿಕ್ಷಣ :

ಲೋಕೋಪಯೋಗಿ ಇಲಾಖೆಗೆ ಕಲಿತ ಕೆಳಗಿನ ಉದ್ಯೋಗಸ್ಥರನ್ನು ಒದಗಿ ಸುವ ಉದ್ದೇಶದಿಂದ ೧೮೬೦ರಲ್ಲಿ ಎಂಜನೀಯರಿಂಗ ಸಾಲೆಯು ಸ್ಥಾಪಿಸಲ್ಪಟ್ಟಿತು. ಇದನ್ನು ಬೆಂಗಳೂರಿನಲ್ಲಿದ್ದ ಸರಕಾರೀ ಪ್ರೌಢ ಶಾಲೆಯ ಒಂದು ಶಾಖೆಯೆಂದು ನಡೆಸಲಾಗುತ್ತಿತ್ತು. ಇದು ಯಶಸ್ವಿಯಾಗದ್ದರಿಂದ ಮುಚ್ಚಲ್ಪಟ್ಟಿತು. ೧೮೭೫ ರಲ್ಲಿ ಬೆಂಗಳೂರಲ್ಲಿ ಎಂಜನಿಯರಿಂಗ ಮತ್ತು ನೈಸರ್ಗಿಕ ವಿಜ್ಞಾನ ಸಾಲೆಯನ್ನು ಸ್ಥಾಪಿಸ ಲಾಯಿತು. ಇದನ್ನು ಮೊದಲಿನಂತೆ ಬೆಂಗಳೂರ ಸರಕಾರೀ ಪ್ರೌಢ ಸಾಲೆಗೇನೇ ಜೋಡಿಸಲಾಯಿತು. ಅದರಲ್ಲಿ ಎರಡು ವಿಭಾಗಗಳಿದ್ದವು. ಎಫ್. ಎ. ಪರೀಕ್ಷೆ ಪಾಸಾ ದವರ ಸಲುವಾಗಿ ಉನ್ನತ ಇಲ್ಲವೆ ಉಚ್ಚ ವಿಭಾಗವು ಇದ್ದರೆ, ಮ್ಯಾಟ್ರಿಕ್ಯುಲೇಶನ್ ಪರೀಕ್ಷೆ ಪಾಸಾದವರಿಗೆ ಕೆಳದರ್ಜೆಯ ವಿಭಾಗವು ಇದ್ದಿತು. ಉಚ್ಚ ವಿಭಾಗದ ವ್ಯಾಸಂಗವು ಮೂರು ವರ್ಷಗಳದ್ದಿತ್ತು. ಕೆಳಗಿನ ವಿಭಾಗದ ವ್ಯಾಸಂಗವು ಎರಡು ವರ್ಷಗಳದ್ದಿತ್ತು. ಈ ವ್ಯಾಸಂಗಗಳು ಸಹ ಜನಪ್ರಿಯವಾಗದ್ದರಿಂದ ೧೮೮೦-೮೧ ರಲ್ಲಿ ಅವುಗಳನ್ನು ಮುಚ್ಚಲಾಯಿತು. ಇದಾದನಂತರ, ಸರಕಾರದವರು ಮದ್ರಾಸ, ಪುಣೆ, ಮತ್ತು ಕಲಕತ್ತಾಗಳಿಗೆ, ಅಭ್ಯಾಸ ಮಾಡಲಿಕ್ಕೆ ವಿದ್ಯಾರ್ಥಿಗಳನ್ನು ಕಳಿಸ- ತೊಡಗಿದರು.

ಅಂಚೆ ಮತ್ತು ತಂತಿ ಇಲಾಖೆಯಲ್ಲಿ ನೌಕರಿ ಸಲುವಾಗಿ ೧೮೮೦-೮೧ ರಲ್ಲಿ ಬೆಂಗಳೂರಲ್ಲಿದ್ದ ಬಿಶಪ್ ಕಾಟನ್ ಬಾಲಕರ ಸಾಲೆಯಲ್ಲಿ ಒಂದು ಔದ್ಯೋಗಿಕ ವರ್ಗ ವನ್ನು ತೆರೆಯಲಾಯಿತು.

೧೮೯೯-೧೯೦೦ ರ ಕೊನೆಗೆ ಔದ್ಯೋಗಿಕ ಸಾಲೆಗಳ ಸ್ಥಿತಿಗತಿಯು ಕೆಳಗೆ ಕಾಣಿಸಿದಂತೆ ಇದ್ದಿತು :—

(೧) ಹಾಸನದ ಬಾಲಕರ ಸರಕಾರೀ ಪ್ರೌಢ ಸಾಲೆಗೆ ಜೋಡಿಸಲ್ಪಟ್ಟ ಔದ್ಯೋಗಿಕ ಸಾಲೆ (ಇದು ೧೮೮೯ ರಲ್ಲಿ ಪ್ರಾರಂಭಿಸಲ್ಪಟ್ಟಿತು.)

(೨) ಮೈಸೂರಲ್ಲಿ ೧೮೯೨ ರಲ್ಲಿ ಪ್ರಾರಂಭಿಸಲ್ಪಟ್ಟ ಸರಕಾರೀ ಔದ್ಯೋಗಿಕ ಸಾಲೆ.

(ಕ) ವಾಣಿಜ್ಯ ಶಿಕ್ಷಣ :

೧೮೯೭ ರಲ್ಲಿ ಬೆಂಗಳೂರಲ್ಲಿ ಓರ್ವ ಖಾಸಗಿ ವ್ಯಕ್ತಿಯು ವಾಣಿಜ್ಯ ವರ್ಗಗಳನ್ನು ತೆರೆದನು. ಸಂಸ್ಥಾನದಲ್ಲಿ ಇದುವೇ ವಾಣಿಜ್ಯ ಶಿಕ್ಷಣದ ನಾಂದಿಯಾಯಿತು. ವಿದ್ಯಾರ್ಥಿಗಳು ಮದ್ರಾಸದಲ್ಲಿ ನಡೆಯುತ್ತಿದ್ದ ತಾಂತ್ರಿಕ ಪರೀಕ್ಷೆಗೆ ಕೂಡ್ರುತ್ತಿದ್ದರು. ಶತಮಾನದ ಕೊನೆಗೆ ಇದೊಂದೇ ವಾಣಿಜ್ಯ ಶಿಕ್ಷಣ ಸಂಸ್ಥೆಯಾಗಿತ್ತು.

(ಡ) ಕೃಷಿ ಶಿಕ್ಷಣ :

ಕೃಷಿಯಲ್ಲಾಗಲಿ ಇಲ್ಲವೆ ಪಶು ವೈದ್ಯಕೀಯ ವಿಜ್ಞಾನದಲ್ಲಿಯಾಗಲಿ ಶಿಕ್ಷಣ ಕೊಡುವ ಸಂಸ್ಥೆಗಳು ಸಂಸ್ಥಾನದಲ್ಲಿ ಶತಮಾನದ ಕೊನೆಯವರೆಗೆ ಇರಲಿಲ್ಲ. ಆದರೆ ೧೮೯೩-೯೪ ರಲ್ಲಿ ಕೆಳಗಿನ ಮಾಧ್ಯಮಿಕ ಪರೀಕ್ಷೆಗೆ ಒಕ್ಕಲುತನವನ್ನು ಐಚ್ಛಿಕ ವಿಷಯ-ವನ್ನಾಗಿ ಪ್ರಾರಂಭಿಸಲಾಯಿತು. ಕೆಲವು ಔದ್ಯಮಿಕ ಸಾಲೆಗಳಲ್ಲಿ ಒಕ್ಕಲುತನ ಮತ್ತು ಭೂಸಾಗುವಳಿಗೆ ಅವಕಾಶವಿತ್ತು. ಡಿಪ್ಲೊಮಾ ಇಲ್ಲವೆ ಪದವಿ ವ್ಯಾಸಂಗಗಳಿಗೆ ಹೋಗಲಿಚ್ಛಿಸುವ ವಿದ್ಯಾರ್ಥಿಗಳು ಸಂಸ್ಥಾನದ ಹೊರಗೆ ಕಲಿಯಲಿಕ್ಕೆ ಹೋಗ-ಬೇಕಾಗುತ್ತಿತ್ತು, ಅಂಥವರಿಗೆ ಶಿಷ್ಯವೇತನಗಳನ್ನು ಕೊಡಲಾಗುತ್ತಿತ್ತು.

(ಇ) ವೈದ್ಯಕೀಯ ಶಿಕ್ಷಣ :

ಕ್ರಿ. ಶ. ೧೮೮೧ ರಲ್ಲಿ ಬೆಂಗಳೂರಿನ ಪೆಟ್ಟಾ ದವಾಖಾನೆಯಲ್ಲಿ ವೈದ್ಯಕೀಯ ಕೆಳದರ್ಜೆಯ ನೌಕರಿಗಳಿಗೆ ವಿದ್ಯಾರ್ಥಿಗಳನ್ನು ಅರ್ಹರನ್ನಾಗಿ ಮಾಡುವ ಉದ್ದೇಶದಿಂದ ಕೆಳಗಿನ ವರ್ಗಗಳುಳ್ಳ ವೈದ್ಯಕೀಯ ಸಾಲೆಯನ್ನು ಪ್ರಾರಂಭಿಸಲಾಯಿತು. ಈ ಸಾಲೆಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳು ಕನಿಷ್ಠ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕಾಗುತ್ತಿತ್ತು; ಇಲ್ಲವೆ ಮ್ಯಾಟ್ರಿಕ್ ವ್ಯಾಸಂಗವನ್ನು ಪೂರ್ತಿಗೊಳಿಸಿರಬೇಕಾಗುತ್ತಿತ್ತು. ಶಿಷ್ಯವೇತನಗಳನ್ನು ಕೊಡಲಾಗುತ್ತಿತ್ತು. ಈ ಸಂಸ್ಥೆಯ ಆಯುಷ್ಯವು ಅಲ್ಪವಾಗಿತ್ತು ; ಇದು ೧೮೮೬ ರಲ್ಲಿ ಮುಚ್ಚಲ್ಪಟ್ಟಿತು; ವಿದ್ಯಾರ್ಥಿಗಳನ್ನು ಬೇರೆ ರಾಜ್ಯಗಳಿಗೆ ಕಳಿಸುವ ಹಳೇ ರೂಢಿಯು ಮತ್ತೆ ಪ್ರಚಾರದಲ್ಲಿ ಬಂದಿತು. ೧೯೧೭ ರಲ್ಲಿ ಬೆಂಗಳೂರಲ್ಲಿ ನಿಯಮಿತ ವೈದ್ಯಕೀಯ ಸಾಲೆಯು ಪ್ರಾರಂಭಿಸಲ್ಪಡುವವರೆಗೆ ಸಂಸ್ಥಾನದಲ್ಲಿ ವೈದ್ಯಕೀಯ ಶಿಕ್ಷಣದ ವ್ಯವಸ್ಥೆ ಇರಲಿಲ್ಲ.

(ಫ) ಸಂಸ್ಕೃತ ಶಿಕ್ಷಣ :

ಇಡೀ ಸಂಸ್ಥಾನದಲ್ಲೆಲ್ಲ ಹರಡಿದ ಅನೇಕ ಪಾಠ ಸಾಲೆಗಳಲ್ಲಿ ಸಂಸ್ಕೃತ ಶಿಕ್ಷಣವು ಸಾಗುತ್ತಿತ್ತು. ಕೆಲವು ಅನುದಾನವನ್ನು ಪಡೆಯುತ್ತಿದ್ದವು. ಮೇಲುಕೋಟೆ ಮತ್ತು ಚಿಂತಾಮಣಿ ಸಂಸ್ಕೃತ ಸಾಲೆಗಳು ತೃಪ್ತಿಕರ ಪ್ರಗತಿ ಸಾಧಿಸಿದ್ದುವೆಂದು ೧೮೬೮-೬೯ ರ ವರದಿಯಿಂದ ತಿಳಿದು ಬರುತ್ತದೆ. ೧೮೯೯-೧೯೦೦ ರ ಸಮಯಕ್ಕೆ ಸಂಸ್ಕೃತ ಸಾಲೆಗಳು

ಕ್ಷೀಣಾವಸ್ಥೆಯಲ್ಲಿದ್ದರೂ ಸಹ ಸಂಸ್ಕೃತ ಅಭ್ಯಾಸವು ಎಂದಿನಂತೆ ಜನಪ್ರಿಯವಾಗಿತ್ತು. ೧೮೯೯–೧೯೦೦ ರಲ್ಲಿ ಈ ಸಂಸ್ಥೆಗಳ ಸಂಖ್ಯೆಯು ೪೦ ಇದ್ದು, ಅವುಗಳಲ್ಲಿ ಅಭ್ಯಾಸ ಮಾಡುವ ವಿದ್ಯಾರ್ಥಿಗಳ ಸಂಖ್ಯೆಯು ೧,೯೭೭ ಇದ್ದಿತು.

ಮಹಾರಾಜಾ ಸಂಸ್ಕೃತ ಕಾಲೇಜು ೧೮೭೬ ರಷ್ಟು ಹಿಂದೆಯೇ ಪ್ರಾರಂಭ ವಾಯಿತು. ಮಹಾರಾಜರು ನೇಮಿಸಿದ ಒಂದು ಸಮಿತಿಯವರು ಆದರ ಆಡಳಿತೆ ಯನ್ನು ಮಾಡುತ್ತಿದ್ದರು. ಈ ಸಂಸ್ಥೆಯಲ್ಲಿ ಕೇವಲ ಬ್ರಾಹ್ಮಣರಿಗೆ ಪ್ರವೇಶವಿದ್ದಿತು.

ಬೆಂಗಳೂರು ಶಹರದಲ್ಲಿ ನಗರ ಸಭೆಯವರು ನಡೆಸುತ್ತಿದ್ದ ಮತ್ತು ಸರಕಾರದಿಂದ ಅನುದಾನ ಪಡೆಯುತ್ತಿದ್ದ ಒಂದು ಸಂಸ್ಕೃತ ಕಾಲೇಜ ಇದ್ದಿತು. ೧೮೯೬ ರಲ್ಲಿ ಅದಕ್ಕೆ ಚಾಮರಾಜೇಂದ್ರ ಸಂಸ್ಕೃತ ಕಾಲೇಜ ಎಂದು ಹೆಸರಿಡಲಾಯಿತು. ಬಳಿಕ ಕಾಲೇಜದ ನಿಯಂತ್ರಣವು ಮುಜರಾಯಿ ಇಲಾಖೆಗೆ ಸೇರಿತು. ಇತ್ತೀಚೆಗೆ ಅದು ಸಾರ್ವಜನಿಕ ವಿದ್ಯಾ ಇಲಾಖೆಯ ನಿಯಂತ್ರಣಕ್ಕೆ ಒಳಗಾಗಿದೆ.

ಮೇಲುಕೋಟೆಯಲ್ಲಿಯ ಸಂಸ್ಕೃತ ಕಾಲೇಜ ೧೮೫೪ ರಲ್ಲಿ ಸಾಲೆಯೆಂದು ಪ್ರಾರಂಭವಾಯಿತು. ೧೮೯೮ ರಲ್ಲಿ ಅದು ಕಾಲೇಜ ಆಗಿ ಪರಿವರ್ತಿತವಾಯಿತು.

(ಗ) ವಯಸ್ಕರ ಶಿಕ್ಷಣ :

೧೮೬೮ ರಲ್ಲಿ ಮಂಜೂರಾದ ಹೋಬಳಿ ಯೋಜನೆಯಲ್ಲಿ ಪ್ರೌಢರಿಗೆ ಮತ್ತು ಹಗಲು ವರ್ಗಗಳಿಗೆ ಹೋಗಲು ಆಗದಿದ್ದ ಇತರರಿಗೆ ರಾತ್ರಿ ವರ್ಗಗಳನ್ನು ಪ್ರಾರಂಭಿ-ಸುವ ಅವಕಾಶವನ್ನು ಒದಗಿಸಲಾಗಿತ್ತು. ೧೮೭೪ ರಲ್ಲಿ ನಿರಕ್ಷರಿ ಆರಕ್ಷರ ಸಲುವಾಗಿ ವರ್ಗಗಳನ್ನು ಸಂಘಟಿಸಲಾಯಿತು. ೧೮೬೮–೬೯ ರಲ್ಲಿ ಬೆಂಗಳೂರ ಕೇಂದ್ರ ಕಾರಾ-ಗೃಹದಲ್ಲಿ ೭೦೦ ಪ್ರೌಢರಿಗೆ ಓದು-ಬರಹ ಕಲಿಸಲಾಯಿತು. ಈ ಯೋಜನೆಯು ಮೈಸೂರ ಮತ್ತು ಶಿವಮೊಗ್ಗಾದಲ್ಲಿದ್ದ ಕಾರಾಗೃಹಗಳಿಗೆ ವಿಸ್ತರಿಸಲ್ಪಟ್ಟಿತು. ೧೮೯೯–೧೯೦೦ ರ ಸಮಯಕ್ಕೆ ಕಾರಾಗೃಹ ಸಾಲೆಗಳನ್ನು ಹಿಡಿದು ಸಂಸ್ಥಾನದಲ್ಲಿ ಒಟ್ಟು ೫೩ ರಾತ್ರಿ ಸಾಲೆಗಳು ಅಸ್ತಿತ್ವದಲ್ಲಿದ್ದವು.

(ಹ) ಅಂಗವಿಕಲರ ಶಿಕ್ಷಣ :

೧೯೦೧–೨ರ ವರೆಗೆ ಅಂಗವಿಕಲರ ಸಲುವಾಗಿ ಸಾಲೆಗಳು ಇರಲಿಲ್ಲ. ೧೯೦೧–೦೨ ರಲ್ಲಿ ಮೈಸೂರಲ್ಲಿ ಕಿವುಡರ ಸಲುವಾಗಿ ಒಂದು ಸಾಲೆಯು ಪ್ರಾರಂಭಿಸಲ್ಪಟ್ಟಿತು.

(ಜ) ಶಾರೀರಿಕ ಶಿಕ್ಷಣ :

೧೯ನೆಯ ಶತಮಾನದಲ್ಲಿ ಸಾಲೆ–ಕಾಲೇಜುಗಳ ಅಭ್ಯಾಸದ ಪಠ್ಯಕ್ರಮದಲ್ಲಿ ಶಾರೀರಿಕ ಶಿಕ್ಷಣವನ್ನು ಅಳವಡಿಸದಿದ್ದರೂ ಸಹ ಆಟ–ಪಂದ್ಯಾಟಗಳ ಮುಖಾಂತರ

ವಿದ್ಯಾರ್ಥಿಗಳ ಶಿಕ್ಷಣದ ಈ ಅಂಶಕ್ಕೆ ಮಹತ್ವ ಕೊಡಲಾಗಿತ್ತು. ಸಾಲೆ-ಕಾಲೇಜುಗಳನ್ನು ತೆರೆಯುವ ಕಾಲಕ್ಕೆ ಆಟ-ಪಂದ್ಯಾಟಗಳ ಸಲುವಾಗಿ ಸಾಕಷ್ಟು ತೆರವಾದ ಜಾಗೆಯನ್ನು ಒದಗಿಸಲಾಗುತ್ತಿತ್ತು. ಕ್ರಿಕೆಟ್, ಫುಟ್‌ಬಾಲ್ ಮತ್ತು ಟೇನಿಸ್ ಇವು ಜನಪ್ರಿಯ ಆಟಗಳಾಗಿದ್ದವು. ೧೮೭೫ರಲ್ಲಿ ಬೆಂಗಳೂರಿನಲ್ಲಿರುವ ಸಾಲೆಗಳ ಸಲುವಾಗಿ ಮತ್ತು ೧೮೭೬ರಲ್ಲಿ ಮೈಸೂರಿನಲ್ಲಿರುವ ಸಾಲೆಗಳ ಸಲುವಾಗಿ ಸ್ಪರ್ಧೆಗಳು ಪ್ರಾರಂಭಿಸಲ್ಪಟ್ಟವು. ಈ ಸ್ಪರ್ಧೆಗಳನ್ನು ಪ್ರತಿ ವರ್ಷ ನಡೆಸಲಾಗುತ್ತಿತ್ತು. ಸಾಲೆ-ಕಾಲೇಜುಗಳಲ್ಲಿ ಕವಾಯತು ಕಲಿಸುವ ಮತ್ತು ವ್ಯಾಯಾಮ ವಿದ್ಯೆಯನ್ನು ಕಲಿಸುವ ಶಿಕ್ಷಕರ ನೇಮಕಾತಿಗೆ ೧೮೯೦-೯೧ ರಲ್ಲಿ ಮಂಜೂರಿ ದೊರೆಯಿತು. ೧೮೯೪ ರಲ್ಲಿ ದಸರಾ ಅಂತರ್ ಶಾಲಾ ಪಂದ್ಯಾಟಗಳು ಪ್ರಾರಂಭವಾದವು. ಅವು ಈಗಲೂ ಸಹ ಮುಂದುವರಿದಿವೆ. " ಹಳ್ಳಿಯ ಸಾಲೆಗಳಲ್ಲಿ ಕವಾಯತು (Drill) ಜನಪ್ರಿಯವಾಗಿದೆ; ಅದು ಶಿಸ್ತಿನ ಪ್ರಗತಿಯನ್ನೂ ವಿದ್ಯಾರ್ಥಿಗಳ ಆರೋಗ್ಯವನ್ನೂ ಸುಧಾರಿಸುವಲ್ಲಿ ಪ್ರಬಲ ಸಾಧನವಾಗಿದೆ" ಎಂದು ವರಿಷ್ಠ ಶಿಕ್ಷಣಾಧಿಕಾರಿಯು (Inspector General of Education) (D. P. S) ಕ್ರಿ. ಶ. ೧೮೯೯-೧೯೦೦ರಲ್ಲಿ ವಾರ್ಷಿಕ ವರದಿಯಲ್ಲಿ ಉಲ್ಲೇಖಿಸಿದ್ದಾನೆ.

VIII

ವಿಶಿಷ್ಟ ವರ್ಗದವರ ಶಿಕ್ಷಣ

೧ ಅಸ್ಪೃಶ್ಯರು :

ಬ್ರಾಹ್ಮಣರು ಮತ್ತು ಮುಸಲ್ಮಾನರು ಈ ವರ್ಗದವರಿಗೆ ಕಲಿಸಲಿಕ್ಕೆ ಮತ್ತು ಇವರ ಸಾಲೆಗಳನ್ನು ತಪಾಸಿಸಲಿಕ್ಕೆ ಆಕ್ಷೇಪಿಸುವದರಿಂದ ಈ ವರ್ಗದವರಲ್ಲಿ ಶಿಕ್ಷಣ ವಿಸ್ತರಣೆಯ ಕಾರ್ಯವನ್ನು ಮಿಶನರಿಗಳಿಗೆ ಬಿಟ್ಟುದು ಅತ್ಯುತ್ತಮವೆಂದು ೧೮೯೦-೯೧ರ ವರದಿಯಲ್ಲಿ ನಮೂದಿಸಲಾಗಿದೆ. ೧೮೮೯-೯೦ ರಲ್ಲಿ ಈ ವರ್ಗದವರ ಸಲುವಾಗಿ ಆನೆಕಲ್ಲ ತಾಲೂಕಿನಲ್ಲಿ ಒಂದು, ಮಾಲೂರ ತಾಲೂಕಿನಲ್ಲಿ ಇನ್ನೊಂದು—ಹೀಗೆ ಎರಡು ಸಾಲೆಗಳನ್ನು ಸರಕಾರದವರು ತೆರೆದರು. ಲಂಡನ್ ಮತ್ತು ವೆಸ್ಲೆಯಿ ಮಿಶನ್ನಗಳು ಮೂರು ಸಾಲೆಗಳನ್ನು ನಡೆಸುತ್ತಿದ್ದರು. ಸಾದಾ ಸರಕಾರೀ ಸಾಲೆಗಳಲ್ಲಿ ಈ ವರ್ಗದವರ ೯೬ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದರು. ಆದರೆ ಅವರನ್ನು ಪ್ರತ್ಯೇಕವಾಗಿ ವರ್ಗಕೋಣೆಯ ಹೊರಗೆ ಕೂಡ್ರಿಸಲಾಗುತ್ತಿತ್ತು. ೧೮೯೯-೧೯೦೦ರ ಸಮಯಕ್ಕೆ ಇಂಥ ಮಕ್ಕಳ ಸಲುವಾಗಿ ಶಿಕ್ಷಣವೀಯುವ ೩೬ ಸರಕಾರೀ ಹಾಗೂ ೨೭ ಖಾಸಗೀ ಸಾಲೆಗಳು ಇದ್ದವು; ಈ ಸಾಲೆಗಳಲ್ಲಿ ಹಾಗೂ ಸಾದಾ ಸಾಲೆಗಳಲ್ಲಿ ಅಭ್ಯಾಸ ಮಾಡುತ್ತಿದ್ದ ಈ ವರ್ಗದವರ ಮಕ್ಕಳ ಸಂಖ್ಯೆ ೨೪೭೧ ಇದ್ದಿತು. (೨೨೧೪ ಬಾಲಕರು ೨೫೭ ಬಾಲಿಕೆಯರು).

(೨) ಮುಸ್ಲಿಮರು:

ಜನರು ಸಾಮಾನ್ಯವಾಗಿ ತಮ್ಮಷ್ಟಕ್ಕೆ ಹಿಂದುಸ್ತಾನಿ ಸಾಲೆಗಳನ್ನು ತೆರೆದು ನಡೆಸುತ್ತಿದ್ದುದರಿಂದ ಸರಕಾರವು, ಹೊಸದಾಗಿ ಇಂಥ ಸಾಲೆಗಳನ್ನು ತೆರೆಯುವದಕ್ಕಿಂತ, ಈ ಸಾಲೆಗಳಿಗೇ ಅನುದಾನವನ್ನು ಕೊಟ್ಟು ಸಹಾಯ ಮಾಡುವದು ಅವಶ್ಯವೆಂದು ೧೮೬೬–೬೭ನೇ ವಾರ್ಷಿಕ ವರದಿಯು ಪ್ರಕಟಿಸುತ್ತದೆ. ೧೮೬೬–೬೭ ರಲ್ಲಿ ಅನುದಾನ ಪಡೆದ ಖಾಸಗೀ ಸಾಲೆಗಳ ಜೊತೆಗೆ ಎರಡು ಸರಕಾರೀ ಸಾಲೆಗಳು ಅಸ್ತಿತ್ವದಲ್ಲಿ ಇದ್ದುವೆಂದು ಕಂಡುಬರುತ್ತದೆ.

೧೮೬೯–೭೦ರಲ್ಲಿ ಒಂದು ಹಿಂದುಸ್ತಾನೀ ನಾರ್ಮಲ್ ಶಾಲೆಯು ಸ್ಥಾಪಿಸಲ್ಪಟ್ಟಿತು. ೧೮೯೯–೧೯೦೦ ರಲ್ಲಿ ಸ್ಥಿತಿಗತಿಯು ಕೆಳಗಿನಂತೆ ಇದ್ದಿತು.

	ಸಾಲೆಗಳ ಸಂಖ್ಯೆ	ವಿದ್ಯಾರ್ಥಿಗಳ ಸಂಖ್ಯೆ		
		ಬಾಲಕರು	ಬಾಲಿಕೆಯರು	ಒಟ್ಟು
ಮಧ್ಯಮ (ಬಾಲಕರ)	೩೨	೨೪೧೮	೧೦	೨೪೨೮
,, (ಬಾಲಿಕೆಯರ)	೧	—	೪೩	೪೩
ಪ್ರಾಥಮಿಕ (ಬಾಲಕರ)	೧೭೬	೪೬೦೫	೫೩೮	೫೧೪೩
,, (ಬಾಲಿಕೆಯರ)	೫೭	—	೨೦೭೯	೨೦೭೯
ಒಟ್ಟು	೨೬೬	೭೦೨೩	೨೬೭೦	೯೬೯೩

ಸಾಮಾನ್ಯ ಸಾಲೆಗಳಲ್ಲಿ ಅಭ್ಯಾಸ ಮಾಡುತ್ತಿದ್ದ ಈ ವರ್ಗದ ವಿದ್ಯಾರ್ಥಿಗಳನ್ನು ಹಿಡಿದು ಎಲ್ಲ ಶಾಲೆಗಳಲ್ಲಿ ಕಲಿಯುತ್ತಿದ್ದ ಇಂಥ ವಿದ್ಯಾರ್ಥಿಗಳ ಒಟ್ಟು ಸಂಖ್ಯೆಯು ೧೨೮೨೦ ಇದ್ದಿತು. (೧೦೧೨೮ ಬಾಲಕರು + ೨೬೯೨ ಬಾಲಿಕೆಯರು).

(೩) ಬಾಲಿಕೆಯರ ಮತ್ತು ಸ್ತ್ರೀಯರ ಶಿಕ್ಷಣ:

ಕ್ರಿ. ಶ. ೧೮೪೨ ರಲ್ಲಿ ಲಂಡನ್ ಮಿಶನ್ ಬೋರ್ಡಿಂಗ ಹಾವುಸ್ ಎಂಬ ಸಂಸ್ಥೆಯು ಬೆಂಗಳೂರಲ್ಲಿ ಸ್ಥಾಪಿತವಾಯಿತು. ಇದು ಕೇವಲ ಬಾಲಿಕೆಯರ ಸಲುವಾಗಿ

ಸ್ಥಾಪಿತವಾದ ಪ್ರಪ್ರಥಮ ಸಾಲೆಯೆನಿಸಿದೆ. ೧೮೯೯-೧೯೦೦ ರಲ್ಲಿ ಸ್ಥಿತಿಗತಿಯು ಕೆಳಗಿನಂತೆ ಇದ್ದಿತು:—

	ಸರಕಾರೀ	ಅನುದಾನ ಪಡೆದ	ಅನುದಾನ ಪಡೆಯದ	ಒಟ್ಟು
ಪ್ರೌಢ ಸಾಲೆಗಳು	೧	—	—	೧
ಮಾಧ್ಯಮ (ಇಂಗ್ಲೀಷ)	೧	೪	—	೫
ಮಾಧ್ಯಮ (ದೇಶೀಯ ಭಾಷೆ)	೧೦	೧೨	—	೨೨
ಪ್ರಾಥಮಿಕ (ಕನ್ನಡ)	೧೨೨	೫೫	೨	೧೭೯
ಪ್ರಾಥಮಿಕ (ಹಿಂದುಸ್ತಾನಿ)	೨	೧	—	೩
ಪ್ರಾಥಮಿಕ (ಮರಾಠಿ)	—	—	೧	೧
ಪ್ರಾಥಮಿಕ (ತಮಿಳು)	—	೧	—	೧
ತರಬೇತಿ ಸಾಲೆ	೧	—	—	೧
ಔದ್ಯೋಗಿಕ ಸಾಲೆ	—	೧	—	೧
ಒಟ್ಟು	೧೩೬	೭೪	೩	೨೧೪

ಮಹಾರಾಣೀ ಬಾಲಿಕೆಯರ ಪ್ರೌಢ ಸಾಲೆಯಲ್ಲಿ ಕಾಲೇಜ ವಿಭಾಗವಿದ್ದು ಅದರಲ್ಲಿ ಐವರು ವಿದ್ಯಾರ್ಥಿನಿಯರಿದ್ದರು. ೧೮೯೯-೧೯೦೦ ರಲ್ಲಿ ಅಭ್ಯಾಸ ಮಾಡುತ್ತಿದ್ದ ವಿದ್ಯಾರ್ಥಿನಿಯರ ಸಂಖ್ಯೆಯು ೧೫೨೮ ಇದ್ದಿತು. (ಕಾಲೇಜುಗಳಲ್ಲಿ ಐವರು, ಪ್ರೌಢ ಸಾಲೆಗಳಲ್ಲಿ ೧೭). ೧೮೯೯-೧೯೦೦ ರಲ್ಲಿ ಮೂವರು ಬಾಲಿಕೆಯರು ಎಫ್. ಎ. ಪರೀಕ್ಷೆಗೆ ಕುಳಿತಿದ್ದರು. ಇವರಲ್ಲಿ ಒಬ್ಬಳು ತೇರ್ಗಡೆಯಾದಳು. ನಾಲ್ವರು ಹುಡಿಗೆಯರು ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತಿದ್ದರು. ಇಬ್ಬರು ತೇರ್ಗಡೆಯಾದರು.

೪ ಯುರೋಪಿಯನ್‌ರ ಮತ್ತು ಆ್ಯಂಗ್ಲೋ-ಇಂಡಿಯನ್‌ರ ಶಿಕ್ಷಣ :

ಈ ಸಮಾಜಗಳ ವಿದ್ಯಾರ್ಥಿಗಳು ಸಾಮಾನ್ಯ ಸಾಲೆಗಳಲ್ಲಿ ಕಲಿಯುತ್ತಿದ್ದರೂ ಸಹ, ಖಾಸಗಿ ಸಂಘ-ಸಂಸ್ಥೆಗಳವರು ಈ ವರ್ಗದವರ ಅಂದರೆ ಯುರೋಪಿಯನ್ ಮತ್ತು ಆ್ಯಂಗ್ಲೋ-ಇಂಡಿಯನ್‌ರ ಮಕ್ಕಳಿಗಾಗಿ ಪ್ರತ್ಯೇಕ ಸಾಲೆಗಳನ್ನು ನಡೆಸುತ್ತಿದ್ದರು. ಈ ಸಾಲೆಗಳಿಗೆ ಅನುದಾನವು ದೊರೆಯುತ್ತಿತ್ತು. ೧೮೭೯-೮೦ ರಲ್ಲಿ ಇಂಥ ೧೪ ಸಾಲೆಗಳು ಇದ್ದವು. (ಬಾಲಕರಿಗಾಗಿ ೮ ಮತ್ತು ಬಾಲಿಕೆಯರಿಗಾಗಿ ೬). ಈ ಸಾಲೆಗಳಲ್ಲಿ ಕಲಿಯುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆಯು ೧೦೦೩ ಇದ್ದಿತು. ಒಂದು ಸಾಲೆಯು ಮೈಸೂರಿನಲ್ಲಿ ಇದ್ದರೆ ಉಳಿದ ೧೩ ಸಾಲೆಗಳು ಬೆಂಗಳೂರಿನ ನಾಗರಿಕ ಮತ್ತು ದಂಡಿನ ಪ್ರದೇಶಗಳಲ್ಲಿ ಇದ್ದವು. ೧೮೮೧ ರ ನಂತರ ಈ ಪ್ರದೇಶವು ಬ್ರಿಟಿಷರ

ನೇರ ಆಡಳಿತೆಯಲ್ಲಿ ಸೇರಿದ್ದರಿಂದ ಸಂಸ್ಥಾನದ ಶಿಕ್ಷಣ ಇಲಾಖೆಯ ವರದಿಗಳಿಂದ ಹೊರತಾಗಿದೆ—

೧೮೯೯–೧೯೦೦ ರಲ್ಲಿ ಸ್ಥಿತಿಯು ಕೆಳಗಿನಂತೆ ಇದ್ದಿತು.

	ಶಾಲೆಗಳ ಸಂಖ್ಯೆ	ವಿದ್ಯಾರ್ಥಿಗಳ ದಾಖಲಾತಿ ಬಾಲಕರು	ಬಾಲಿಕೆಯರು	ಒಟ್ಟು
	೪*			
ಪ್ರೌಢಶಾಲಾ ಹಂತ		—	೪	೪
ಮಧ್ಯಮಶಾಲಾ ಹಂತ		೪	೮	೧೨
ಪ್ರಾಥಮಿಕಶಾಲಾ ಹಂತ		೪೩	೭೭	೧೨೦
	ಒಟ್ಟು	೪೭	೮೯	೧೩೬

೧೩೬ ವಿದ್ಯಾರ್ಥಿಗಳಲ್ಲಿ ೧೧೨ ಯುರೋಪಿಯನ್‌ರು ಮತ್ತು ಆ್ಯಂಗ್ಲೋ ಇಂಡಿಯನ್‌ರಿದ್ದರು. (ಬಾಲಕರು ೩೫, ಬಾಲಿಕೆಯರು ೭೭).

IV

ಶುಲ್ಕಗಳು ಮತ್ತು ಶಿಷ್ಯವೇತನಗಳು :

ಶಿಕ್ಷಣ ಇಲಾಖೆಯು ಅಸ್ತಿತ್ವದಲ್ಲಿ ಬಂದ ಅಂದಿನ ಕಾಲದಲ್ಲಿ ಅಧಿಕಾರಸ್ಥರು ಉಚಿತ ಶಿಕ್ಷಣಕ್ಕೆ ವಿರೋಧಿಗಳಾಗಿದ್ದುದರಿಂದ ಸರಕಾರೀ ಸಾಲೆಗಳಲ್ಲಿ ಸಹ ಶುಲ್ಕವನ್ನು ಆಕರಿಸಲಾಗುತ್ತಿತ್ತು. ಶುಲ್ಕದ ಆಕರಣೆಯು ಬಹಳೇ ಕಡಿಮೆ ಇದ್ದಿತು. ಕೆಳಗಿನ ವರ್ಗಗಳಲ್ಲಿ ಅದು ಒಂದು ಆಣೆಯಿತ್ತು. ಕ್ರಿ. ಶ. ೧೮೬೨–೬೩ ರಲ್ಲಿ ಎಲ್ಲ ತರಗತಿಗಳ ಶಾಲೆಗಳಲ್ಲಿದ್ದ ೨೩೭೩ ವಿದ್ಯಾರ್ಥಿಗಳಿಂದ ಶುಲ್ಕರೂಪದಲ್ಲಿ ೩೪೪೧/– ರೂಪಾಯಿಗಳನ್ನು ಸಂಗ್ರಹಿಸಲಾಗಿತ್ತು. ಇದರಿಂದ ಪ್ರತಿ ವಿದ್ಯಾರ್ಥಿಯಿಂದ ಪ್ರತಿ ವರ್ಷ ಒಂದು ರೂಪಾಯಿ ಎಂಟು ಆಣೆ ಶುಲ್ಕವನ್ನು ವಸೂಲ ಮಾಡಲಾಗುತ್ತಿತ್ತೆಂದು ಕಂಡುಬರುತ್ತದೆ. ೧೮೬೯-೭೦ರಲ್ಲಿ ಹೋಬಳಿ ಸಾಲೆಗಳು ಪ್ರಾರಂಭವಾದುವು. ಈ ಸಾಲೆಗಳಲ್ಲಿ ಶಿಕ್ಷಣವು ಉಚಿತವಾಗಿತ್ತು. ಸರಕಾರಿ ಮತ್ತು ಬೋರ್ಡ ಸಾಲೆಗಳಲ್ಲಿ

* (೧) ಫೋರ್ಟ ಸಾಲೆ ಬೆಂಗಳೂರು (೨) ಕಾನ್ವೆಂಟ ಸಾಲೆ ಮೈಸೂರು (೩) ಸೇಂಟ ಜಾರ್ಘಲೋಮ್ಯೂಜ ಸಾಲೆ ಮೈಸೂರು (೪) ಯುರೋಪಿಯನ್ ಮತ್ತು ಆ್ಯಂಗ್ಲೋ ಇಂಡಿಯನ್‌ರ ಸಾಲೆ ಕೆ. ಜಿ. ಎಫ್. ಇವೇ ಆ ನಾಲ್ಕು ಸಾಲೆಗಳು.

ವಿದ್ಯಾರ್ಥಿನಿಯರಿಗೆ ಎಲ್ಲ ಹಂತಗಳಲ್ಲಿ ಶಿಕ್ಷಣವು ಉಚಿತವಾಗಿತ್ತು. ೧೮೯೪ ರಲ್ಲಿ ಶುಲ್ಕ ಆಕರಣೆಯು ಕೆಳಗಿನಂತಿದ್ದಿತು :

			ರೂ.ಆ.ಪೈ.	
VI	ತರಗತಿ	(Form)	೨–೦–೦	ಪ್ರತಿ ತಿಂಗಳು
V	ತರಗತಿ	,,	೨–೦–೦	ಪ್ರತಿ ತಿಂಗಳು
IV	ತರಗತಿ	,,	೧–೮–೦	ಪ್ರತಿ ತಿಂಗಳು
III	(V A.V.)		೧–೪–೦	ಪ್ರತಿ ತಿಂಗಕು
II	(IV A.V.)		೧–೦–೦	ಪ್ರತಿ ತಿಂಗಳು
I	(III A.V.)		೦–೧೨–೦	ಪ್ರತಿ ತಿಂಗಳು
	(II A.V.)		೦–೮–೦	ಪ್ರತಿ ತಿಂಗಳು
	(I A. V.)		೦–೬–೦	ಪ್ರತಿ ತಿಂಗಳು

ದೇಶೀಯ ಭಾಷಾ ಸಾಲೆಗಳು

	ರೂ.ಆ.ಪೈ.	
ವರ್ಗಗಳು ೫, ೪, ೩, ೨	೦–೨–೦	ಪ್ರತಿ ತಿಂಗಳು
ವರ್ಗಗಳು ೧ ಮತ್ತು ಶಿಶು ವರ್ಗ	೦–೧–೦	ಪ್ರತಿ ತಿಂಗಳು

ಬಡತನ ಮತ್ತು ಯೋಗ್ಯತೆಗಳ ಆಧಾರದ ಮೇಲೆ ಪೂರ್ಣ ಹಾಗೂ ಅರ್ಧ ಮಾಫೀ ಸವಲತ್ತುಗಳನ್ನು ಕೊಡಲಾಗುತ್ತಿತ್ತು. ಎಲ್ಲ ಸರಕಾರೀ ಸಾಲೆಗಳಲ್ಲಿ ಮುಸ್ಲಿಂ ವಿದ್ಯಾರ್ಥಿಗಳಿಗೆ ರೂಢಿಯಲ್ಲಿದ್ದ ಶುಲ್ಕದ ಅರ್ಧದಷ್ಟನ್ನು ಮಾತ್ರ ತೆಗೆದುಕೊಳ್ಳಲಾಗುತ್ತಿತ್ತು.

ಶಿಷ್ಯವೇತನಗಳು :

ಆರಂಭದ ವರ್ಷಗಳಲ್ಲಿ ಸೆಂಟ್ರಲ್ ಮತ್ತು ಮಹಾರಾಜಾ ಕಾಲೇಜುಗಳಲ್ಲಿ ಅಭ್ಯಾಸವನ್ನು ಮುಂದುವರಿಸಲು ಶಕ್ತರನ್ನಾಗಿ ಮಾಡುವ ಸಲುವಾಗಿ ವಿದ್ಯಾರ್ಥಿಗಳಿಗೆ ಒಂದೂವರೆ ರೂಪಾಯಿಯಿಂದ ಐದು ರೂಪಾಯಿಗಳವರೆಗೆ ಪ್ರತಿ ತಿಂಗಳು ಜಿಲ್ಹಾ ಶಿಷ್ಯವೇತನಗಳನ್ನು ಕೊಡಲಾಗುತ್ತಿತ್ತು. ಮ್ಯಾಟ್ರಿಕ್ ಪೂರ್ವದ ಮತ್ತು ಹೆಚ್ಚಿನ ವರ್ಗಗಳಲ್ಲಿ ಅಭ್ಯಾಸ-ಮಾಡುವ ಮುಸ್ಲಿಂ ವಿದ್ಯಾರ್ಥಿಗಳಿಗೆ ೧೮೯೦–೯೧ನೆಯ ವರ್ಷ ಸರಕಾರದವರು ೨-೦೦ ರೂಪಾಯಿಗಳಿಂದ ೫-೦೦ ರೂಪಾಯಿ ಮೌಲ್ಯದ ೨೪ ಶಿಷ್ಯ ವೇತನಗಳನ್ನು ಪ್ರಾರಂಭಿಸಿದರು. ಮೈಸೂರಲ್ಲಿದ್ದ ಸರಕಾರೀ ಔದ್ಯಮಿಕ ಸಾಲೆಯಲ್ಲಿ ಅಭ್ಯಾಸ ಮಾಡುವ ಸಲುವಾಗಿ ಶಿಷ್ಯವೇತನಗಳು ಲಭ್ಯವಿದ್ದವು.

ಸಂಸ್ಥಾನದ ಹೊರಗೆ ಹೆಚ್ಚಿನ ಅಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಶಿಷ್ಯ-ವೇತನಗಳು ಕೊಡಲ್ಪಡುತ್ತಿದ್ದವು. ೧೮೯೯-೧೯೦೦ ರಲ್ಲಿ ಮಂಜೂರ ಮಾಡಿದ ಶಿಷ್ಯವೇತನಗಳ ಸಂಖ್ಯೆಯು ಕೆಳಗಿನಂತೆ ಇದ್ದಿತು:—

	ಸಂಖ್ಯೆ	ದರ ರೂಪಾಯಿ
ಶಿಕ್ಷಕರ ಕಾಲೇಜ ಸೈದಾಪೇಟ, ಮುದ್ರಾಸ	೨	೨೫
ಎಂಜನಿಯರಿಂಗ ಕಾಲೇಜ, ಮದ್ರಾಸ	೧	೩೦
ವೈದ್ಯಕೀಯ ಕಾಲೇಜ, ಮದ್ರಾಸ	೧೨	೨೫
ಪಶು ವೈದ್ಯಕೀಯ ಕಾಲೇಜ, ಮುಂಬಯಿ	೧	೨೫
ಕೃಷಿ ಕಾಲೇಜ, ಮದ್ರಾಸ	೧	೧೦-೧೫
ಆಸ್ಪತ್ರೆ ಅಸೆಟ್ಸ ವರ್ಗ ಮುದ್ರಾಸ	೨೬	೧೦
ಸ್ಥಳೀಯ ಆಸ್ಪತ್ರೆಗಳು (ವೈದ್ಯಕೀಯ ಪೂರ್ವವ್ಯಾಸಂಗ)	೧೨	೯

ಮೈಸೂರಲ್ಲಿರುವ ಮಹಾರಾಣಿ ಪ್ರೌಢ ಸಾಲೆಯಲ್ಲಿ ಅಭ್ಯಾಸ ಮಾಡುತ್ತಿದ್ದ ವಿದ್ಯಾರ್ಥಿನಿಯರಿಗೆ ಶಿಷ್ಯವೇತನಗಳನ್ನು ಕೊಡುವ ಅವಕಾಶವು ವಿಪುಲವಾಗಿತ್ತು. ೧೮೯೯-೧೯೦೦ ರಲ್ಲಿ ಎಲ್ಲ ಶಿಷ್ಯವೇತನಗಳ ಸಲುವಾಗಿ ವೆಚ್ಚ ಮಾಡಿದ ಹಣವು ೩೪,೩೫೬/- ರೂಪಾಯಿಗಳಾಗಿತ್ತು.

ವಿದೇಶಗಳಲ್ಲಿ ಮಾಡಬಹುದಾದ ಉಚ್ಚ ಅಭ್ಯಾಸಗಳ ಸಲುವಾಗಿ ಶಿಷ್ಯವೇತನಗಳನ್ನು ಕೊಡಲಾಗುತ್ತಿತ್ತು. ೧೮೯೯-೧೯೦೦ ರಲ್ಲಿ ೨೫೦೦೦/- ರೂಪಾಯಿಗಳ ಅವಕಾಶವಿತ್ತು.

X

ಶಿಕ್ಷಣದ ಮೇಲ್ವಿಚಾರಣೆ ಮತ್ತು ಆಡಳಿತೆ :—

೧೮೫೭ ರಲ್ಲಿ ಆದ ಶಿಕ್ಷಣ ಇಲಾಖೆಯ ನಿರ್ಮಾಣದ ಯೋಜನೆಯಲ್ಲಿ ಕೆಳಗೆ ಕಾಣಿಸಿದಂತೆ ಅಧಿಕಾರಸ್ಥರನ್ನು ನೇಮಿಸುವ ಅವಕಾಶವನ್ನು ಒದಗಿಸಲಾಗಿತ್ತು.

(೧) ೨೦ ಸಹಾಯಕ ಉಪ-ತಪಾಸಣಾಧಿಕಾರಿಗಳು— ಪ್ರತಿ ನಾಲ್ಕು ತಾಲೂಕುಗಳಿಗೆ ಒಬ್ಬರು

(೨) ೪ ಉಪ. ತಪಾಸಣಾಧಿಕಾರಿಗಳು— ಒಂದೊಂದು ವಿಭಾಗಕ್ಕೆ ಒಬ್ಬರು.

(೩) ೨ ಶಾಲಾ ತಪಾಸಣಾಧಿಕಾರಿಗಳು— ಸರ್ವ ಮೇಲ್ವಿಚಾರಣೆಗಾಗಿ.

(೪) ೧ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕ.

ಮೈಸೂರ ಕಮೀಶನ್ನಿನ ಕ್ಯಾಪ್ಟನ್ ಸ್ಟೀಫನ್ಸ (Captain Stephens) ಅವರು ಸಾರ್ವಜನಿಕ ಶಿಕ್ಷಣ ಇಲಾಖೆಯ ಪ್ರಥಮ ನಿರ್ದೇಶಕರಾಗಿ ನೇಮಕ ಹೊಂದಿದರು. ಶ್ರೀ ಫ್ರೆಡ್ರಿಕ್ ಗ್ರೀನ (Mr. Fredriek Green) ಅವರು ಶಾಲಾ ತಪಾಸಣಾಧಿಕಾರಿಗಳೆಂದು ನೇಮಿಸಲ್ಪಟ್ಟರು. ಆದಾಗ್ಯೂ ಇಲಾಖೆಯು ಮೈಸೂರ ಜ್ಯುಡಿಸಿಯಲ್ ಕಮೀಶನರ ಅವರ ಕೆಳಗೆ ಇಡಲ್ಪಟ್ಟಿತು. ಆದರೆ ೧೮೬೩ ರಲ್ಲಿ ಪ್ರತ್ಯೇಕವಾಯಿತು. ೧೮೬೯ ರಲ್ಲಿ ಶ್ರೀ ಜೆ. ಗಾರೆಲ್ಟ (Mr. Garrelt) ಅವರು ನಿರ್ದೇಶಕರಾಗಿ ನೇಮಿಸಲ್ಪಟ್ಟರು. ಪ್ರೌಢ ಶಾಲೆಯ ಪ್ರಾಚಾರ್ಯರಾಗಿದ್ದ ಶ್ರೀ ಎಲ್. ರಾಯಿಸ್ (Mr. L. Rice) ಅವರು ೧೮೬೫ರಲ್ಲಿ ಶಾಲಾ ತಪಾಸಣಾಧಿಕಾರಿಗಳಾದರು. ಇಡೀ ಸಂಸ್ಥಾನವು ಎರಡು ವಲಯಗಳಲ್ಲಿ ವಿಂಗಡಿಸಲ್ಪಟ್ಟಿತು. ಪ್ರತಿವಲಯದಲ್ಲಿ ನಾಲ್ಕು ಜಿಲ್ಹೆಗಳಿದ್ದವು.

೧೮೬೮-೬೯ ರಲ್ಲಿ ಹೋಬಳಿ ಯೋಜನೆಯು ಪ್ರಾರಂಭವಾದನಂತರ ಆಡಳಿತ ವ್ಯವಸ್ಥೆಯು ಕೆಳಗಿನಂತಿದ್ದಿತು:—

ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕ.... ಒಬ್ಬರು.

ತಪಾಸಣಾಧಿಕಾರಿಗಳು; ಒಂದು ವಲಯಕ್ಕೆ ಒಬ್ಬರಂತೆ.... ಇಬ್ಬರು.

ಡಿ. ಪಿ. ಆಯ್. ಅವರಿಗೆ ಸಹಾಯಕ ಉಪ ತಪಾಸಣಾಧಿಕಾರಿ.... ಒಬ್ಬರು.

ಸಹಾಯಕ ಉಪತಪಾಸಣಾಧಿಕಾರಿಗಳು ಜಿಲ್ಹೆಗೆ ಒಬ್ಬರಂತೆ....ಎಂಟು ಜನರು.

೧೮೭೦-೭೧ರಲ್ಲಿ ಇಡೀ ಸಂಸ್ಥಾನದಲ್ಲಿದ್ದ ಎಲ್ಲ ಹಿಂದುಸ್ತಾನಿ ಸಾಲೆಗಳ ಸಲುವಾಗಿ ಒಬ್ಬ ಸಹಾಯಕ ಉಪ ನಿರ್ದೇಶಕನನ್ನು ನೇಮಿಸಲಾಯಿತು.

ಶ್ರೀ ಎಲ್. ರಾಯಿಸ್ (Mr. L. Rice) ಅವರು ೧೮೭೧ ರಿಂದ ೧೮೮೦ ರವರೆಗೆ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರಾಗಿದ್ದರು. ಸಾರ್ವಜನಿಕ ಶಿಕ್ಷಣದ ಭದ್ರ ಬುನಾದಿಯನ್ನು ಹಾಕಿದ ಬಹುಭಾಗ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ. ಅವರು ಹೋಬಳಿ ಯೋಜನೆಯ ಜನಕರೂ ಅಹುದು.

೧೮೭೯ ರಲ್ಲಿ ತಪಾಸಣಾ ವ್ಯವಸ್ಥೆಯ ಪುನರ್‌ಸಂಘಟನೆಗೆ ಆಜ್ಞೆ ಮಾಡಲಾಯಿತು. ತಪಾಸಣಾಧಿಕಾರಿಗಳ ಸ್ಥಳಗಳನ್ನು ತೆಗೆದುಹಾಕಲಾಯಿತು. ವಲಯಗಳನ್ನು ಐದಕ್ಕೆ ಹೆಚ್ಚಿಸಲಾಯಿತು. ಒಂದೊಂದು ವಲಯಕ್ಕೆ ಒಬ್ಬರಂತೆ ಐವರು ಉಪತಪಾಸಣಾಧಿಕಾರಿಗಳನ್ನು ನೇಮಿಸಲಾಯಿತು. ಸಹಾಯಕ ಉಪ-ತಪಾಸಣಾಧಿಕಾರಿಗಳ ಸಂಖ್ಯೆಯನ್ನು ೧೫ಕ್ಕೆ ಹೆಚ್ಚಿಸಲಾಯಿತು. ಇದಲ್ಲದೆ ಹಿಂದುಸ್ತಾನಿ ಸಾಲೆಗಳ ಸಲುವಾಗಿ ಇಬ್ಬರು ಸಹಾಯಕ ಉಪ-ತಪಾಸಣಾಧಿಕಾರಿಗಳನ್ನು ನೇಮಿಸಲಾಯಿತು.

ಪರಾವರ್ತನೆಯನಂತರ ಕೊಡಗು ಜಿಲ್ಹೆಯು ನೇರವಾಗಿ ಬ್ರಿಟಿಷ ಆಡಳಿತೆಗೆ ಒಳಪಟ್ಟಿತು. ಆದುದರಿಂದ ಡಿ. ಪಿ. ಆಯ್. ಅವರು ಕೊಡಗಿನ ಶಿಕ್ಷಣಾಡಳಿತೆಯನ್ನು ಬಿಟ್ಟುಕೊಡಬೇಕಾಯಿತು. ಇದು ೧೮೮೧ರಲ್ಲಿ. ಇದರಂತೆಯೇ ಬೆಂಗಳೂರಿನ ನಾಗರಿಕ

ಮತ್ತು ದಂಡಿನ ಪ್ರದೇಶಗಳು ಡಿ. ಪಿ. ಆಯ್. ಅವರ ನಿಯಂತ್ರಣದಿಂದ ಬೇರ್ಪಡಿಸಲ್ಪಟ್ಟವು.

೧೮೮೩ ರಲ್ಲಿ ಡಿ. ಪಿ. ಆಯ್. ಅವರ ಹುದ್ದೆಯನ್ನು ಶಿಕ್ಷಣ ಕಾರ್ಯದರ್ಶಿ (Educational Secretary) ಎಂದು ಬದಲಾಯಿಸಿತು. ಅವರ ಆಡಳಿತೆಗೆ ವಿದ್ಯಾ ಇಲಾಖೆಯ ಜೊತೆಗೆ ಪುರಾತನ ವಸ್ತುಶಾಸ್ತ್ರ ಇಲಾಖೆಯನ್ನು ಸಹ ಒಳಪಡಿಸಲಾಯಿತು. ೧೮೯೦ ರಲ್ಲಿ ಅವರು ಶಿಕ್ಷಣ ಇಲಾಖೆಯ ಕಾರ್ಯದರ್ಶಿ ಕರ್ತವ್ಯಗಳಿಂದ ವಿಮುಕ್ತರಾದರು. ಶ್ರೀ ಎಚ್. ಜೆ. ಭಾಬಾ (Mr. H. J. Bhaba) ಅವರು ಶಿಕ್ಷಣ ಇಲಾಖೆಯ ಕಾರ್ಯದರ್ಶಿಯಾದರು. ೧೮೬೦ ರಿಂದ ೧೮೯೦ರ ವರೆಗಿನ ತಮ್ಮ ೩೦ ವರ್ಷಗಳ ಸುದೀರ್ಘ ಆಳಿಕೆಯಲ್ಲಿ ಶ್ರೀ ರಾಯಿಸ್ ಅವರು ಸಾರ್ವಜನಿಕ ಶಿಕ್ಷಣ ಇಖಾಖೆಯ ನಿರ್ದೇಶಕರು ಮಾತ್ರವಲ್ಲದೆ, ಅದ್ಭುತ ಕೃತಿಯೆನಿಸಿದ "ಮೈಸೂರಿನ ಗ್ಯಾಝೆಟೀಯರ"ದ ಕರ್ತೃಗಳಾಗಿ ಮತ್ತು "ಮೈಸೂರ ಜನಗಣತಿ"ಯ ಸಂಗ್ರಹಕಾರರಾಗಿ ಅತ್ಯುತ್ತಮ ಸೇವೆ ಸಲ್ಲಿಸಿದ್ದಾರೆ. ಶಿಕ್ಷಣ ಇಲಾಖೆಯ ಕಾರ್ಯದರ್ಶಿಯ ಕಚೇರಿಯನ್ನು ೧೮೯೪ರಲ್ಲಿ ಮೈಸೂರಿಗೆ ಸ್ಥಳಾಂತರಿಸಲಾಯಿತು. ಮುಂದೆ ೧೮೯೮ರಲ್ಲಿ ಮತ್ತೆ ಬೆಂಗಳೂರಿಗೆ ಒಯ್ಯಲಾಯಿತು. ೧೮೯೫ರಲ್ಲಿ ಶಿಕ್ಷಣ ಇಲಾಖೆಯ ಕಾರ್ಯದರ್ಶಿಯ ಸ್ಥಳವನ್ನು ತೆಗೆದುಹಾಕಲಾಯಿತು; ಶಿಕ್ಷಣ ಇಲಾಖೆಯ ವರಿಷ್ಠ ತಪಾಸಣಾಧಿಕಾರಿಯನ್ನು (Inspector General of Education) ನೇಮಿಸಲಾಯಿತು. ಈ ಹುದ್ದೆಯೇ ಬಹುಕಾಲದ ವರೆಗೆ ಮುಂದುವರಿಯಿತು; ೧೯೨೭-೨೮ರಲ್ಲಿ ಅದು ಮತ್ತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕ (D. P. I.) ಎಂದು ಬದಲಾಯಿಸಲ್ಪಟ್ಟಿತು.

೧೯೦೦ ರಲ್ಲಿ ಆಡಳಿತ ವ್ಯವಸ್ಥೆಯು ಕೆಳಗಿನಂತಿದ್ದಿತು:—

ಇನಸ್ಪೆಕ್ಟರ ಜನರಲ್ ಆಫ್ ಎಜ್ಯುಕೇಶನ್	೧
ಬಾಲಿಕೆಯರ ಸಾಲೆಗಳ ಅಧೀಕ್ಷಕರು	೧
ಮಧ್ಯಮ ಹಾಗೂ ಪ್ರಾಥಮಿಕ ಸಾಲೆಗಳನ್ನು ತಪಾಸಿಸುವ ಉಪ-ತಪಾಸಣಾಧಿಕಾರಿಗಳು.	೮
ಸಹಾಯಕ ಉಪ-ತಪಾಸಣಾಧಿಕಾರಿಗಳು— ಕನ್ನಡ ಹೋಬಳಿ ಸಾಲೆಗಳನ್ನು ತಪಾಸಿಸುವ ಸಲುವಾಗಿ ಒಂದು ವಲಯಕ್ಕೆ ಒಬ್ಬರಂತೆ	೪
ತಪಾಸಣಾಧಿಕಾರಿ (ಹಿಂದುಸ್ತಾನಿ ಸಾಲೆಗಳ ಸಲುವಾಗಿ)	೧
ಸಹಾಯಕ ಉಪತಪಾಸಣಾಧಿಕಾರಿ (ಹಿಂದುಸ್ತಾನಿ ಸಾಲೆಗಳ ಸಲುವಾಗಿ)	೧

ಅನುವಾದ: **ಶ್ರೀ ಆಯ್. ಎಸ್. ಬಿದರಿ,**
ನಿವೃತ್ತ ಡಿ. ಡಿ. ಪಿ. ಆಯ್. ಧಾರವಾಡ

ಬ್ರಿಟಿಷ್ ಭಾರತದ ಮದ್ರಾಸು ಕರ್ನಾಟಕದಲ್ಲಿ ಶಿಕ್ಷಣ
ಹತ್ತೊಂಬತ್ತನೇ ಶತಕದ ಹಿನ್ನೋಟ

—ಡಾ॥ ಕೆ. ರಾಮಚಂದ್ರಾಚಾರ್ಯ

ಭಾರತದಲ್ಲಿ ಬ್ರಿಟಿಷರ ಆಳ್ವಿಕೆಯು ಪೂರ್ಣವಾಗಿ ನೆಲೆಗೊಂಡ ಕಾಲ ಹತ್ತೊಂಬತ್ತನೆಯ ಶತಮಾನ. ಆಡಳಿತ ಮಾಧ್ಯಮವಾಗಿ ಇಂಗ್ಲೀಷ್ ಬೇರೂರಿದ್ದೂ, ಶಿಕ್ಷಣಕ್ಷೇತ್ರದಲ್ಲಿ ಕ್ರೈಸ್ತ ಮಿಶನರಿ ಸೇವೆ ಭದ್ರವಾದ ತಳಹದಿ ಹಾಕಿದ್ದೂ, ಇಂಗ್ಲೀಷ್ ಭಾಷಾ ಶಿಕ್ಷಣ ನೌಕರಿಗೆ ರಹದಾರಿಯಾದದ್ದೂ, ಸರಕಾರಿ ಹತೋಟಿ ಹೆಚ್ಚಿದ್ದೂ, ಈ ಅವಧಿಯಲ್ಲೇ. ಚಾರ್ಟರ್ ಕಾಯದೆ ೧೮೩೩ ರ ವರೆಗೆ ಶಿಕ್ಷಣ ಸ್ಥಳೀಯ ಅಥವಾ ದೇಶಭಾಷಾ ಮಾಧ್ಯಮದಿಂದ ಪೋಷಿತವಾಗಿದ್ದರೆ ಮೆಕಾಲೆಯ ೧೮೩೫ ರ ವರದಿಯ ನಂತರ ನಡೆದ ಆಡಳಿತ ಕೇಂದ್ರೀಕರಣ ಗವರ್ನರ್ ಜನರಲ್‌ರ ವೈಯಕ್ತಿಕ ಮತ್ತು ಅವರಿಂದ ರೂಪಿಸಲ್ಪಟ್ಟ ಧೋರಣೆಗಳ ಪರಿಣಾಮ ಶಿಕ್ಷಣದ ಮೇಲಾಗಿ ಹೆಚ್ಚು ಹೆಚ್ಚು ಇಂಗ್ಲೀಷ್ ಕಲಿಸುವ ಶಾಲೆಗಳ ಸ್ಥಾಪನೆಗೆ ಕಾರಣವಾಯಿತು. ವುಡ್ ಮಹನೀಯನ ವರದಿ ೧೮೫೪ ರಲ್ಲಿ ಪ್ರಕಟವಾಗುವಾಗ ವಿಶಾಲ ಮದ್ರಾಸು ಪ್ರಾಂತದಲ್ಲಿ ೧೬೯ ಸರಕಾರಿ ಶಾಲೆಗಳೇ ಇದ್ದವು. ಒಟ್ಟು ೧೧೮೫ ಶಾಲೆಗಳಲ್ಲಿ ೩೮ ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿದ್ದರು. ಅವುಗಳಲ್ಲಿ ಉತ್ತಮ ಶಿಕ್ಷಣ ಮತ್ತು ಆಡಳಿತವಿದ್ದ ಮಿಶನರಿ ಶಾಲೆಗಳು ಅನೇಕ. ಸರಕಾರಿ ಕೃಪಾದೃಷ್ಟಿಗೆ ಬಿದ್ದ ಭಾರತೀಯ— ಸ್ಥಳೀಯ ಹಿನ್ನೆಲೆ ಅಥವಾ ಆಡಳಿತವುಳ್ಳ ಶಾಲೆಗಳು ಕಡಿಮೆ. ಸರಕಾರಿ ಆಡಳಿತ, ನ್ಯಾಯವಿತರಣೆ ಪತ್ರವ್ಯವಹಾರ ಇತ್ಯಾದಿಗಳಲ್ಲಿ ಆ ವೇಳೆಗಾಗಲೇ ದುರ್ಬಲಗೊಂಡು ಪ್ರಚಲಿತವಿದ್ದ ಪರ್ಷಿಯನ್ ಬದಲಿಗೆ ಇಂಗ್ಲೀಷ್ ಮತ್ತು ದೇಶಭಾಷೆ ಬಳಕೆ ಆರಂಭವಾಯಿತು. ಉದ್ಯೋಗದಲ್ಲೂ ಇಂಗ್ಲೀಷ್ ಬಲ್ಲವರಿಗೇ ಆದ್ಯತೆ. ಈ ಶತಕದ ಮಧ್ಯಭಾಗದಲ್ಲಿ ಜಾರಿಗೆ ಬಂದ ಅನೇಕ ಕಾಯದೆ, ಕಾನೂನು, ಕಟ್ಟಳೆಗಳೇ ಇದಕ್ಕೆ ಕಾರಣ. ಮಾತು, ತಿಳಿವು, ನೌಕರಿ, ಅಧಿಕಾರ, —ಹೀಗೆ ಎಲ್ಲವಕ್ಕೂ ಇಂಗ್ಲೀಷ್ ಬೇಕಾಗಿ, ಬ್ರಿಟಿಷ್ ಹಿಡಿತ ಬಲವಾಯಿತು.

ನಮ್ಮದೇ ಶಿಕ್ಷಣ ಪದ್ಧತಿ ಇರಲಿಲ್ಲವೇ ?

ಬ್ರಿಟಿಷರ ಆಗಮನಕ್ಕಿಂತಲೂ ಮೊದಲು ನಮ್ಮಲ್ಲಿ ಶಿಕ್ಷಣ ಕ್ರಮವೇ ಇರಲಿಲ್ಲವೇ ಎಂದು ಅನುಮಾನಿಸುವದಕ್ಕಿಂತಲೂ, ಅದು ಹೇಗಿತ್ತು ಎನ್ನುವುದನ್ನು

ಅಧ್ಯಾಪಕರಾಗಿ, ಪ್ರೌಢಶಾಲಾ ವಿಸ್ತರಣ ಸೇವಾಕೇಂದ್ರದ ಸಂಯೋಜಕರಾಗಿ ಕೆಲಸ ಮಾಡುತ್ತಿದ್ದ ಡಾ॥ ಕೆ. ರಾಮಚಂದ್ರಾಚಾರ್ಯರು ಸದ್ಯ ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಶಿಕ್ಷಣ ಅಧ್ಯಯನ ವಿಭಾಗದಲ್ಲಿ ರೀಡರ ಆಗಿದ್ದಾರೆ.

ಅಂದಿನ ಸಾಹಿತ್ಯ, ಕಲೆ, ಜಾನಪದ, ವಾಣಿಜ್ಯ ವ್ಯವಹಾರಗಳ ಕುರುಹಾಗಿ ಇಂದಿಗೂ ನಮ್ಮನ್ನು ಎಚ್ಚರಿಸುವ ಅನೇಕ ಚಾರಿತ್ರಿಕ ಗುಡಿ, ಗೋಪುರ, ಗೊಮ್ಮಟಾದಿಗಳನ್ನು ಮಠ, ಛತ್ರ, ಬಸದಿ-ವಿಹಾರಾದಿಗಳನ್ನು, ಮೆರೆದುಳಿದ ಭವ್ಯ ಪಟ್ಟಣಗಳ ಅವಶೇಷ ಗಳನ್ನೂ ಯಾತ್ರಾ ಸ್ಥಳಗಳನ್ನೂ ನೋಡಿ ಹೀಗೆ ಅನೇಕ ಮೂಲಗಳಿಂದ ಊಹಿಸು-ವುದು ಕ್ಷೇಮಕರ. ಶೈಕ್ಷಣಿಕ ಪರಂಪರೆ ಇಲ್ಲದೆ ಇವು ಕಾಣಿಸಿಕೊಂಡವೇ ? ಶೈಕ್ಷಣಿಕ ಉದ್ದೇಶ ಪೂರೈಸುವ ಎಲ್ಲಾ ಮಾದರಿಯ ಕೇಂದ್ರಗಳನ್ನು ದತ್ತಿ–ದೇಣಿಗೆ–ಕಾಣಿಕೆ–ದಕ್ಷಿಣೆ ನೀಡಿ ಪೋಷಿಸುವುದು ನಮ್ಮಲ್ಲಿ ರಾಜ ಮಹಾರಾಜರ, ಪಾಳೆಯಗಾರರ ಶ್ರೇಯೋಭಿಮಾನಿಗಳ ಸಂಪ್ರದಾಯ. ನಮ್ಮ ದೇಶದಲ್ಲಿ ಓದು ಬರಹದಿಂದ ಹಿಡಿದು ಯಾವುದೇ ದತ್ತ ಗ್ರಂಥಪಠನ, ಅಭ್ಯಾಸ ಮತ್ತು ವಿವೇಚನೆಯಲ್ಲಿ ಪರಿಣತಿ ಪಡೆಯುವ ವರೆಗೂ ಶಿಕ್ಷಣ ನೀಡುವ ಅನೇಕ ಕೇಂದ್ರಗಳಿದ್ದವು. ಹಾಗೆಯೇ ಆರ್ಥಿಕ ವ್ಯವಹಾರ ನಡೆಸುವ, ಲೆಕ್ಕ ಪತ್ರ ಇಡುವ ಮುಂತಾದ ಅಗತ್ಯ ಮಾಹಿತಿ ಮತ್ತು ಶಿಕ್ಷಣ ನೀಡುವ ಪದ್ಧತಿಯೂ ಇತ್ತು. ಬಹುವಾಗಿ ವಿದ್ಯಾರ್ಜನೆ ದುಡಿಮೆಯಿಂದಲೇ ಆಗುತ್ತಿತ್ತು. ಅಲ್ಲದೆ ಸಾಮಾನ್ಯವಾಗಿ ಆಯಾ ಕ್ಷೇತ್ರದಲ್ಲಿ ಅನುಭವಪಡೆದ ವ್ಯಕ್ತಿಯ ಸುತ್ತಲೂ ಇಂತಹ ಕೇಂದ್ರಗಳು ನಿರ್ಮಾಣವಾಗುತ್ತಿದ್ದುದರಿಂದ ಇಂದಿನ ಶಿಕ್ಷಣಸಂಸ್ಥೆಗಳಂತೆ ಶಾಶ್ವತವಾಗಿ ಒಂದೆಡೆ ಉಳಿಯಲಿಲ್ಲ. ಚಾರಿತ್ರಿಕ ಘಟನೆಗಳ ಉಲ್ಲೇಖಗಳಿಂದಲೂ, ಸಾಹಿತ್ಯಗ್ರಂಥ ಮತ್ತು ಜಾನಪದಗಳಿಂದಲೂ ಇವುಗಳೆಲ್ಲವುಗಳ ಕೆಲವಮಟ್ಟಿನ ವಿವರ ಸಿಗುವುದು ಮಾತ್ರವಲ್ಲ, ಮಹಿಳೆಯರ ಜ್ಞಾನ, ಸ್ಥಾನ, ಮಾನ, ಕಾರ್ಯ, ಸಾಹಸ ತಿಳಿಯಪಡಿಸುವ ಸಾಕಷ್ಟು ಉದಾಹರಣೆಗಳೂ ಇರುವುದರ ಅರಿವಾಗುವುದು. ಆದರೆ ಈ ಬಗ್ಗೆ ಇನ್ನೂ ಹೆಚ್ಚಿನ ಸಂಶೋಧನೆ, ವಿವರ ಸಂಗ್ರಹಣ ಮತ್ತು ಕ್ರೋಢೀಕರಣ, ಪ್ರಕಟಣೆ ಅಗತ್ಯ.

ಹೊಸ ನೀರ ಹರಿವು

ಭಾರತೀಯ–ಆಂಗ್ಲೇಯ ಸಾಂಸ್ಕೃತಿಕ ಮತ್ತು ರಾಜಕೀಯ ಸಂಘಟ್ಟಣೆಯಿಂದ ಹುಟ್ಟಿಕೊಂಡ ಕಿಡಿ ೧೮೫೭ ರಲ್ಲಿ ಭುಗಿಲ್ಲೆಂದು ಪರಕೀಯರ ಕಟ್ಟನ್ನು ಸುಟ್ಟಿಸೆವ ಪ್ರಥಮ ಸಮರದಲ್ಲಿ ಪರ್ಯವಸಾನ. ತತ್ಪರಿಣಾಮ ಬ್ರಿಟಿಷರಿಂದ ಈ ಸಮರದ ಸ್ಥಳೀಯ ಪ್ರತಿರೋಧದ ಮೂಲಕ ಮೇಲ್ಬರುತ್ತಿದ್ದ ರಾಷ್ಟ್ರೀಯತಾ ಭಾವನೆಯ ಸದೆ ಬಡಿಯು-ವಿಕೆ ಪರಂಗೀ ಆಳ್ವಿಕೆಗೆ ಭದ್ರಬುನಾದಿ.

ನಿಜವೆಂದರೆ ಸಾರ್ವಭೌಮತ್ವದ ಅಣಕವಾಡುತ್ತಿದ್ದ ಹಲವು ಹಿರಿಕಿರಿಯ 'ಮಹಾ' ರಾಜರುಗಳ ಆಳ್ವಿಕೆಯಲ್ಲಿ ಹರಿದು ಚೂರಾಗಿದ್ದ ದೇಶಕ್ಕೆ ಆಸೇತು ಹಿಮಾಚಲ ಪರ್ಯಂತ ಏಕೈಕ ಸರಕಾರ ನೀಡಿಕೆಯ ಕೀರ್ತಿ, ತಕ್ಕಮಟ್ಟಿಗೆ ದಕ್ಷಿಣದಲ್ಲಿ ವಿಜಯನಗರದರಸರ ಮತ್ತು ಉತ್ತರದಲ್ಲಿ ಮೊಗಲರ ಆಳ್ವಿಕೆಯ ನಂತರ ಬ್ರಿಟಿಷರಿಗೇ

ಸಲ್ಲಬೇಕು. ಹೀಗೆ ದೇಶ ಒಂದಾಯಿತು. ಸರಕಾರದ ಒತ್ತಡ-ಭಯದಿಂದಾದರೂ ಒಳ ಜಗಳಗಳು ಕಡಿಮೆಯಾಗಿ ಕಾನೂನು ಸುವ್ಯವಸ್ಥೆ ಸ್ಥಾಪನೆಯಾಯಿತು. ಜನ ಸಂಖ್ಯೆಯೂ ಹೆಚ್ಚಿತು. ವಿವಿಧ ಕ್ಷೇತ್ರಗಳಲ್ಲಿ ವ್ಯಾಪಾರ, ವಾಣಿಜ್ಯ ಮತ್ತು ಉದ್ದಿಮೆ ಚೇತರಿಸಿಕೊಂಡವು. ಸಂಪರ್ಕಹೆಚ್ಚಿ ಫ್ರೆಂಚ್ ಕ್ರಾಂತಿಯ ಮೌಲ್ಯಗಳ ಹರಿವು ಭಾರತಕ್ಕೂ ಬಂದಿತು. ರಾಜಾರಾಮ ಮೋಹನರಾಯರಂತಹ ಧೀಮಂತ ವ್ಯಕ್ತಿಗಳ ಪ್ರಯತ್ನದಿಂದ ಮುಖ್ಯವಾಗಿ ಯುರೋಪ್‌ಖಂಡದ ರಾಷ್ಟ್ರಗಳಲ್ಲಿನ ವೈಜ್ಞಾನಿಕ ಪ್ರಗತಿಯ ಅರಿವು ಪಡೆವ ದಿಶೆಯಲ್ಲಿ ಇಂಗ್ಲೀಷ ಮಾಧ್ಯಮದ ಮಹತ್ವ ತಿಳಿಯುವಂತಾಯಿತು.ಅದೇವೇಳೆಗೆ ಹಲವು ರಾಷ್ಟ್ರೀಯ ಸಂಘ ಸಂಸ್ಥೆಗಳ ಉದಯವಾಯಿತು.ಸಾಂಪ್ರದಾಯಿಕ ಶಿಕ್ಷಣ ಪದ್ಧತಿ ಬದಲಾಗುತ್ತಿರುವ ಜೀವನದ ಸನ್ನಿವೇಶಗಳಿಗೆ ಹೊಸ ಮಾರ್ಗದರ್ಶನವನ್ನೇನನ್ನೂ ನೀಡದಾದಾಗ ವಿಶ್ವದ ಇತರೆಡೆಗಳಿಂದ ನೂತನಮೌಲ್ಯಗಳ ಹೊಳೆ ಇಂಗ್ಲೀಷ ಮೂಲಕ ಸರಕಾರ, ಧರ್ಮ ಮತ್ತು ಶಿಕ್ಷಣ ಹಾಗೂ ವ್ಯಾಪಾರ ವ್ಯವಹಾರಗಳಿಗೆ ಹರಿದು ಪರಿಣಾಮ ಬೀರಿತು. ನೂತನತೆಯಲ್ಲಿ ನಮ್ಮತನ ಕೊಚ್ಚಿ ಕೊಂಡು ಹೋಗಿರುವುದೂ ತಕ್ಕಮಟ್ಟಿಗೆ ನಿಜವಲ್ಲವೇ? ರಾಷ್ಟ್ರೀಯತಾ ಭಾವನೆ, ಪ್ರಜಾಸ್ವಾತಂತ್ರ್ಯ, ಸ್ವದೇಶೀ ಭಾಷೆ-ಸಂಸ್ಕೃತಿಗಳೆಡೆ ಗೌರವ ಇತ್ಯಾದಿ ಹೊಸ ತಳಿ ವಿಚಾರಗಳಾಗಿ ಹೊರಹೊಮ್ಮಿದ್ದೂ ಅಂದಿನ ಘಟನೆ-ಪರಿಸರಗಳ ಸತ್ಪ್ರಭಾವವೂ ಹೌದು.

ಇಂದಿನಂತೆ ವೈವಿಧ್ಯತೆ ಕಡಿಮೆಯಿರುವ ಎಂದರೆ ಏಕ ರೀತಿಯ ಸಾರ್ವಜನಿಕ ಶಿಕ್ಷಣ ಕ್ರಮ ನಮ್ಮಲ್ಲಿ ಪರಕೀಯರ ಆಗಮನಕ್ಕಿಂತ ಮೊದಲು ಇರಲಿಲ್ಲ ವೆನ್ನುವುದು ನಿಜವಾದರೂ ಪ್ರಾಚೀನ ಧರ್ಮ, ಸಾಹಿತ್ಯ, ಕಲೆಗಳನ್ನುಳಿಸಿ ಬೆಳೆಸಿಕೊಂಡು ಉತ್ತರ ಮತ್ತು ದಕ್ಷಿಣ ಪೌರ್ವಾತ್ಯ ದೇಶಗಳಲ್ಲಿಯೂ ಹರಡಿದ ಶಕ್ತಿ ಶಾಲಿಯಾದ ನಮ್ಮ ಸಂಸ್ಕೃತಿ ಶಿಕ್ಷಣ ಪರಂಪರೆಯಿಲ್ಲದೆ ಮೆರೆಯಿತು ಎನ್ನುವದು ಸತ್ಯದ ವ್ಯುತ್ಕ್ರಮವಾದೀತು.

ನಮ್ಮಲ್ಲಿದ್ದುದು ಶಿಕ್ಷಕರಿಗೆ, ವೃತ್ತಿ ಪರಿಣತರಿಗೆ, ತಜ್ಞರಿಗೆ, ಅಥವಾ ಕಲಾ ಕಾರರಿಗೆ ದೇಣಿಗೆ, ದತ್ತಿ ಇತ್ಯಾದಿ ನೀಡಿ ನಡೆಸುವ ಸ್ವಾವಲಂಬಿ ಶಿಕ್ಷಣ ಕ್ರಮ. ಆಯಾ ಕೇಂದ್ರದ ಶಿಕ್ಷಕನ ಶಿಕ್ಷಣ ನೀಡುವ ದಕ್ಷತೆ ಮತ್ತು ಸಾಮರ್ಥ್ಯ ವಿದ್ಯಾರ್ಥಿಗಳನ್ನಾಕರ್ಷಿಸುತ್ತಿತ್ತು. ಅನುಗುಣವಾದ ಸಾಂದರ್ಭಿಕ ದೇಣಿಗೆ ದತ್ತಿಗಳನ್ನು ಸರಕಾರದಿಂದಾಗಲೀ ಗಣ್ಯ ವ್ಯಕ್ತಿಗಳಿಂದಾಗಲೀ ಪಡೆಯುತ್ತಿತ್ತು. ದೇವಾಲಯ, ಮಠ, ಆಶ್ರಮ, ಛತ್ರ, ಅಗ್ರಹಾರ, ವಸತಿ, ವಿಹಾರಾದಿಗಳಲ್ಲಿಯೂ ನೆಲೆಸುವ ಅಥವಾ ಅಲೆಯುವ ವೃತ್ತಿ ನೈಪುಣ್ಯಗಳಿಸಿದ ವ್ಯಕ್ತಿಗಳ ಪರಂಪರಾಗತ ಅಥವಾ ಆನುವಂಶಿಕ ಆಶ್ರಯಿತ ಮಾರ್ಗದರ್ಶನದಲ್ಲಿಯೂ ರಾಜಮಹಾರಾಜರ ಆರ್ಥಿಕ ಹಾಗೂ ನೈತಿಕ ಬೆಂಬಲದಿಂದ ಜೀವನ ದಲ್ಲಿ ಹಾಸು ಹೊಕ್ಕಾಗಿ ನಡೆಯುತ್ತಿತ್ತು. ಇದು ಇಂದು ಮಾಯವಾಗಿದೆ. ಕಾರಣ

ಪರಕೀಯರು ತಮ್ಮ ಆಳ್ವಿಕೆಗೆ ಅಗತ್ಯವೆನಿಸಿದ ಇಂಗ್ಲೀಷ ಭಾಷಾ 'ಕಾರಕೂನಿಕೆ' ಶಿಕ್ಷಣ ನೆಲೆಗೊಳಿಸಿದುದು. ರಾಜನೇ ದೇವರೆಂದು ನಡೆದುಕೊಂಡ ನಮ್ಮವರ ಮನೋಭಾವ ಇಂತಹ ಹೇರಿಕೆಯನ್ನು ತನ್ನದೆಂದೇ ಭಾವಿಸಿ ಅನುಕರಿಸಲು ಅನುಕೂಲಕರವಿತ್ತು.

ತತ್ಪರಿಣಾಮ ಬ್ರಿಟಿಷ್ ಆಳ್ವಿಕೆಯಲ್ಲಿ ಪರಾವಲಂಬಿ ಶಾಲೆಗಳು ಹುಟ್ಟಿಕೊಂಡವು. ಶಿಕ್ಷಣ ಸಂಸ್ಥೆಗಳ ಮೇಲೆ ಸರಕಾರಿ ನಿಯಂತ್ರಣ ಹೆಚ್ಚಿತು. ಸ್ವಾತಂತ್ರ್ಯ ನಂತರ ಪಾರ್ಥೆನೀಯಮ್‌ೋಪಾದಿಯಲ್ಲಿ ಹರಡಿಕೊಂಡು ತೊಡಕಾಗಿರುವ ಕಾಯಕ ರಹಿತ, ವ್ಯಕ್ತಿ ವೈವಿಧ್ಯತೆಯಿಲ್ಲದ, ಮತ್ತು ಜೀವನ ವಿದೂರ ಶಿಕ್ಷಣ ಕ್ರಮದ ಹುಟ್ಟು ಹತ್ತೊಂಬತ್ತನೆಯ ಶತಮಾನದ್ದೇ ಎನ್ನದೆ ಗತ್ಯಂತರವಿಲ್ಲ. ಈ ವಿಚಾರಗಳು ಮದ್ರಾಸ ಪ್ರಾಂತ್ಯದ ಆಡಳಿತ ವ್ಯಾಪ್ತಿಯಲ್ಲಿದ್ದ, ಇಂದು ಕರ್ನಾಟಕದ ಭಾಗವೆನ್ನಿಸಿಕೊಂಡ ಪ್ರದೇಶದಲ್ಲಿನ ಶೈಕ್ಷಣಿಕ ಬೆಳವಣಿಗೆಯನ್ನು ಪರಿಶೀಲಿಸುವಾಗ ಹೆಚ್ಚು ವಿದಿತವಾಗುತ್ತವೆ.

ಮದ್ರಾಸು ಕರ್ನಾಟಕ ಎಲ್ಲೆಲ್ಲಿ ?

ಮದ್ರಾಸು ಕರ್ನಾಟಕವೆಂದು ಬ್ರಿಟಿಷ್ ಆಡಳಿತದ ಮದ್ರಾಸ್ ಪ್ರಾಂತದಲ್ಲಿ ಇದ್ದ ಕನ್ನಡ ಮಾತನಾಡುವ ಪ್ರದೇಶಗಳೆಲ್ಲವಕ್ಕೂ ಒಟ್ಟಿಗೆ ಹೇಳುವುದು ವಾಡಿಕೆ. ಆದರೆ ೧೯೫೬ರಲ್ಲಿ ನವಕರ್ನಾಟಕದ ರಚನೆಯಾದ ಬಳಿಕ ಕೆಲ ಪ್ರದೇಶಗಳು ವಿವಾದಾಸ್ಪದ ರೀತಿಯಲ್ಲಿ ಇತರ ರಾಜ್ಯಗಳಲ್ಲಿ ಸೇರಿದ್ದು ಕರ್ನಾಟಕದಲ್ಲಿರುವ ಪ್ರದೇಶಗಳನ್ನು ಮಾತ್ರ ಮದ್ರಾಸು ಕರ್ನಾಟಕವೆನ್ನುವುದು ಸ್ವಲ್ಪ ಸಂಕುಚಿತಾರ್ಥ. ಅಲ್ಲದೆ ಈ ಪ್ರದೇಶಗಳಲ್ಲಿ ಬಳ್ಳಾರಿ ಜಿಲ್ಲೆ ಇಂದು ಕರ್ನಾಟಕದ ಗಡಿಯಾಚೆ ಆಂಧ್ರಪ್ರದೇಶದ ಅನಂತಪುರ, ಕಡಪಾ ಮತ್ತು ಕರ್ನೂಲು ಜಿಲ್ಲೆಗಳೊಡನೆ ಒಂದೇ ವಿಭಾಗವೆಂದು ಪರಿಗಣಿಸಲ್ಪಟ್ಟು ಹಲವು ವರ್ಷಗಳ ಕಾಲ ಬಳ್ಳಾರಿಯಿಂದಲೇ ಆಳಲ್ಪಡುತ್ತಿತ್ತು. ದಕ್ಷಿಣ ಕನ್ನಡ ಜಿಲ್ಲೆ ಮಲಬಾರ್ ಜೊತೆಗೆ ನೋಡಿಕೊಳ್ಳಲ್ಪಡುತ್ತಿತ್ತು. ಕಾಸರಗೋಡು ರಾಜ್ಯ ಪುನರ್ವಿಂಗಡನೆಯ ನಂತರ ಕೇರಳಕ್ಕೆ ವಿವಾದಾಸ್ಪದವಾಗಿ ಸೇರಿಸಲ್ಪಟ್ಟಿದೆ. ಮೈಸೂರು ಜಿಲ್ಲೆಯ ಕೊಳ್ಳೇಗಾಲ ಮದ್ರಾಸು ಕರ್ನಾಟಕದ ಮೂರನೆಯ ಕಿರುಭಾಗ.

ದಕ್ಷಿಣ ಕನ್ನಡ ಮತ್ತು ಬಳ್ಳಾರಿ ಜಿಲ್ಲೆಗಳ ಭೌಗೋಲಿಕ ಸನ್ನಿವೇಶ ಮತ್ತು ಚಾರಿತ್ರಿಕ ಹಿನ್ನೆಲೆ, ಜೀವನ ರೀತಿನೀತಿ, ಭಾಷೆ, ಸಾಹಿತ್ಯ, ಕಲೆ ಇವುಗಳ ಪರಂಪರೆ ಮತ್ತು ಅಡುಗೆ–ಉಡುಗೆ–ತೊಡಿಗೆಗಳಲ್ಲಿರುವ ವ್ಯತ್ಯಾಸ ಬಹಳ. ದಕ್ಷಿಣ ಕನ್ನಡ ದಟ್ಟಡವಿಯಿಂದ ಕೂಡಿದ ಪಶ್ಚಿಮ ಘಟ್ಟಗಳಿಂದ ಬೇರ್ಪಟ್ಟ ಕರಾವಳಿಪ್ರದೇಶ. ಬಳ್ಳಾರಿ ಒಣಹವೆ ಒಣಮಣ್ಣು ಪಡೆದ ವಿರಳವಾಗಿ ಹರಡಿರುವ ಕೆಲವೇ ಜಾತಿಯ ಗಿಡಮರ

ಗಳಿಂದ ಕೂಡಿರುವ ಸಮತಲ ನೆಲವುಳ್ಳ ನಾಡು. ಹೆಚ್ಚು ಕಡಿಮೆ ಸುತ್ತಮುತ್ತಲ ಜಿಲ್ಲೆಗಳೂ ಹಾಗೆಯೇ. ದಕ್ಷಿಣ ಕನ್ನಡದಲ್ಲಿ ಸಹ್ಯಾದ್ರಿಯಲ್ಲಿ ಹುಟ್ಟಿ ಇನ್ನೂ ಪಶ್ಚಿಮಕ್ಕೆ ಹರಿದು ಅರಬ್ಬೀ ಸಮುದ್ರ ಸೇರುವ ನದಿಗಳು ಅನೇಕ. ಗಾಳಿಮಳೆ ವಿಪರೀತ ವರ್ಷದ ಒಂದೆಡೆಯಾದರೆ ಬೆವರಿಳಿಸಿ ಬೇಯಿಸುವ ಕರಾವಳಿ 'ಬೇಸಗೆ'-ವೈಶಾಖ ಮತ್ತೊಂದೆಡೆ. ಬಳ್ಳಾರಿ ತುಂಗಭದ್ರೆಯ ಹರಿವಿನಿಂದ ಆದರೆ ಅಗತ್ಯಕ್ಕಿಂತಲೂ ಕಡಿಮೆ ಮಳೆಯಿಂದ ಕೂಡಿದ ನಾಡು. ಬಳ್ಳಾರಿಯ ಬೇಸಿಗೆಯ ಸುಡು ಬಿಸಿಲ ಅರಿವು ಯಾರಿಗಿಲ್ಲ ? ತೆಂಗು, ಅಡಿಕೆ,ಭತ್ತ ಇತ್ಯಾದಿ ದಕ್ಷಿಣ ಕನ್ನಡದ ಬೆಳೆಗಳಾದರೆ ಬಳ್ಳಾರಿ ಹತ್ತಿ ನೆಲಗಡಲೆ,ಜೋಳ ಮತ್ತು ತಕ್ಕಮಟ್ಟಿಗೆ ತುಂಗಭದ್ರೆಯ ಇಬ್ಬದಿಯ ಕರಿಮಣ್ಣು ಹಾಸುಗೆಯುದ್ದಕ್ಕೂ ಭತ್ತ ಮತ್ತು ಕಬ್ಬು ಬೆಳೆಯುವ ಪ್ರದೇಶ. ಇತ್ತೀಚಿನ ಮಾತು ಬೇರೆ, ತುಂಗಭದ್ರೆಯ ಆಣೆಕಟ್ಟಿನಿಂದ ದೊರಕಿದ ನೀರುಂಡು ನೆಲ ಹಲವೆಡೆ ಕಬ್ಬು ಮತ್ತು ಭತ್ತ ಬೆಳೆಯಲು ಹಸನಾಗಿರುವುದು ಸ್ವಾತಂತ್ರ್ಯಾನಂತರದ ಬೆಳವಣಿಗೆ.

ದಕ್ಷಿಣ ಕನ್ನಡ ಪರಶುರಾಮ ಕ್ಷೇತ್ರವೆಂದು ಪೌರಾಣಿಕ ನಂಬಿಕೆ. ಚಾರಿತ್ರಿಕ ಅವಧಿಯಲ್ಲಿ ವಿಜಯನಗರದರಸರ ಸಾಮಂತರಿಂದಲೂ ಕೆಳದಿಯರಸರ ಸುಧೀರ್ಘ ಆಳ್ವಿಕೆಯಿಂದಲೂ ಪ್ರಗತಿ ಪಥದಲ್ಲಿ ನಡೆದುದು ತಿಳಿದಿರುವ ಸಂಗತಿ. ದಕ್ಷಿಣ ಕನ್ನಡದ ಭಾಷೆ ಹೆಚ್ಚಿನೆಡೆಗಳಲ್ಲಿ ಮೂಲತಃ ಮತ್ತೊಂದೇ ದ್ರಾವಿಡ ಭಾಷೆ ತುಳು. ಕನ್ನಡ ಇಂದು ರಾಜ್ಯಭಾಷೆ ಮಾತ್ರವಲ್ಲ; ತುಳು ಬಲ್ಲ ಅಥವಾ ಬಾರದ ಕೊಂಕಣಿ, ಮಲೆಯಾಳಿ ಮತ್ತಿತರ ಭಾಷೆಗಳನ್ನು ತಮ್ಮ ತಮ್ಮ ಸಮಾಜದಲ್ಲಿ ಉಪಯೋಗಿಸುವವರ ಏಕೈಕ ಭಾಷೆ. ಕನ್ನಡದ ಬೆಳವಣಿಗೆಗೆ ದಕ್ಷಿಣ ಕನ್ನಡದ ಕೊಡುಗೆ ಅಪಾರ. ಸದಾ ರೂಪುಗೊಳ್ಳುತ್ತಿರುವ ಜೀವಂತ ಭಾಷೆಯಾದ ಕನ್ನಡದಲ್ಲಿ ತುಳುವಿನ ಸತ್ಪರಿಣಾಮ ಇದೆ. ಬಳ್ಳಾರಿಯಲ್ಲಿ ಕನ್ನಡ ಮುಖ್ಯ ಭಾಷೆಯಾಗಿದ್ದು ಬಹಳ ಹೋಲಿಕೆಯಿರುವ ತೆಲುಗೂ ಪ್ರಚಲಿತವಿದೆ. ಕನ್ನಡ–ತೆಲುಗು ನಿಕಟ ಸಂಪರ್ಕ ಮತ್ತು ಪರಸ್ಪರ ಪ್ರಭಾವ ಭಾಷೆಯಲ್ಲಿ ಮಾತ್ರವಲ್ಲ; ಜೀವನದ ಎಲ್ಲಾ ರಂಗಗಳಲ್ಲಿಯೂ ಕಾಣಬಹುದು. ಇಂದು ಎರಡು ರಾಜ್ಯಗಳ ಗಡಿಪ್ರದೇಶದಲ್ಲಿ ಕಂಡುಬರುವ ಸರ್ವ ಸಾಮರಸ್ಯಕ್ಕೆ ಇದು ಒಂದು ಮಾದರಿಯೇ ಸರಿ. ಕೆಲಕಾಲದಿಂದ ಕನ್ನಡ–ತೆಲುಗು ಲಿಪಿ ಒಂದೇ ಆಗಬೇಕೆನ್ನುವ ಪ್ರಯತ್ನವೂ ನಡೆದಿದೆ. ಕೆಲಶತಮಾನಗಳ ಹಿಂದೆ ಚಾರಿತ್ರಿಕ 'ವಿಜಯನಗರ' ಸಾಮ್ರಾಜ್ಯ–ಸಂಸ್ಕೃತಿಯನ್ನು ಜಗತ್ತಿಗೆ ನೀಡಿದ ಬಳ್ಳಾರಿಗೆ ಅತಿ ಪ್ರಾಚೀನ ಹಿನ್ನೆಲೆ ಇದೆ. ಜೈನ, ಶೈವ, ವೈಷ್ಣವ ಮತ್ತು 'ನಾಗ' ಪರಂಪರೆಯ ಅನೇಕ ದೇವಾಲಯಗಳನ್ನು ಪಡೆದು ಭಾರತೀಯ ತತ್ತ್ವಜ್ಞಾನಕ್ಕೆ ದ್ವೈತ ವೇದಾಂತವನ್ನು ನೀಡಿದ ಹಿರಿಮೆ ದಕ್ಷಿಣ ಕನ್ನಡದ್ದು.

ಮದ್ರಾಸು ಕರ್ನಾಟಕವೆಂದು ಪರಿಗಣಿಸಬೇಕಾದ ಭಾಗ ಫಲವತ್ತಾದ ಸಮತಲ ಭೂಮಿಯುಳ್ಳ ಸಕಾಲಕ್ಕೆ ಮಳೆಯಿಂದ ಸದಾ ಸಮೃದ್ಧ ಮೃದು ಕನ್ನಡದ ಹೃದಯ

ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲೂಕು. ಆಡಳಿತ ರೀತ್ಯಾ ತಮಿಳು ಮತ್ತು ತೆಲುಗಿನ ಪ್ರಭಾವಕ್ಕೊಳಗಾದ ಕೊಳ್ಳೇಗಾಲ ಇಂದಿನ ತಮಿಳು ನಾಡಿನಲ್ಲಿರುವ ಕೊಯಂಬತ್ತೂರು ಜಿಲ್ಲೆಯಲ್ಲಿ ಸೇರಿಕೊಂಡಿತ್ತಲ್ಲದೆ ಮೈಸೂರಿನ ಅರಸರಿಂದಲೂ ಆಳಲ್ಪಟ್ಟಿತ್ತು.

ಶೈಕ್ಷಣಿಕ ಆಡಳಿತ ಮತ್ತು ಪರೀಕ್ಷಾ ವ್ಯವಸ್ಥೆ ಬೆಳೆದ ಬಗೆ

ಶಾಲೆಗಳಿಗೆ ತೇರ್ಗಡೆ ಪ್ರಮಾಣದ ಮೇಲೆ ಅನುದಾನ ನೀಡುವ ಮತ್ತು ಮೊತ್ತ ನಿರ್ಧರಿಸುವ ಪದ್ಧತಿ ೧೭೮೬ ರಷ್ಟು ಹೊತ್ತಿಗೆ ಜಾರಿಯಲ್ಲಿತ್ತು. ಮದ್ರಾಸಿನ ಗವರ್ನರ್ ಸರ್ ಥಾಮಸ್ ಮನ್ರೋರ ಪ್ರಯತ್ನ (೧೮೨೨) ದಿಂದ ಸಾರ್ವಜನಿಕ ಶಿಕ್ಷಣ ಆಯೋಗ (Committee) ದ ರಚನೆ ೧೮೨೬ ರಲ್ಲಿ. ಇದರಿಂದ ಶಾಲೆಗಳಿಗೆ ಧನ ಸಹಾಯ ನೀಡುವೆಡೆ ಪುನಃ ಗಮನ ನೀಡುವಂತಾಯಿತು. ಚಾರ್ಟರ್ ಕಾಯದೆ ೧೮೩೩ ರಿಂದ ಆಡಳಿತ ಕೇಂದ್ರೀಕರಣದ ಆರಂಭ. ಮಾತೃ ಭಾಷೆ ಅಥವಾ ಸ್ಥಳೀಯ ಭಾಷೆಗಿಂತ ಇಂಗ್ಲೀಷ ಶಿಕ್ಷಣಕ್ಕೇ ಮಹತ್ವ ನೀಡುವಿಕೆ. ಗವರ್ನರ್ ಜನರಲ್ ಪ್ರಭಾವ ಎಲ್ಲಾ ಧೋರಣೆಗಳ ಮೇಲೂ ಆಗಿ ಇಂಗ್ಲೀಷು ಶಾಲೆಗಳ ಸ್ಥಾಪನೆಗೆ ಕಾರಣವಾಯಿತು. ಭಾರತೀಯರಿಗೆ 'ಖಾರ'ವೆನಿಸಿದ ಮೆಕಾಲೆಯ ವರದಿಯನಂತರ ಲಾರ್ಡ ಬೆಂಟಿಂಕನ ಸರಕಾರ ೧೮೩೫ ರಲ್ಲಿ ಸಾಂಪ್ರದಾಯಿಕ–ಸ್ಥಳೀಯ ಹಿನ್ನೆಲೆಯ ಶಿಕ್ಷಣ ಕೇಂದ್ರಗಳಿಗೆ ನೀಡಿದ ಸವಲತ್ತುಗಳನ್ನು ಹಿಂತೆಗೆದುಕೊಂಡು ಇಂಗ್ಲೀಷು ಮಾಧ್ಯಮಕ್ಕೇ ಪ್ರಾಶಸ್ತ್ಯ ನೀಡಿತು. ೧೮೪೪ ರಲ್ಲಿ ಲಾರ್ಡ್ ಹಾರ್ಡಿಂಜರಿಂದ ಇಂಗ್ಲೀಷ ಕಲಿತವರಿಗೇ ನೇರ ನೌಕರಿ ಸಿಗುವುದಾಯಿತು. ಚಾರ್ಲ್ಸ್‌ವುಡ್ ಮಹ-ನೀಯನ ವರದಿ (೧೮೫೪) ಯಲ್ಲಿ ಕ್ರೈಸ್ತ ಮಿಶನರಿ ಸೇವೆಯ ಪ್ರಶಂಸೆಯಾಯಿತು. ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆ ೧೮೫೫ ರಲ್ಲಿ ಸ್ಥಾಪಿತಗೊಂಡಿತು. ಶಾಲಾ ಪರೀಕ್ಷೆಗಳಿಗೂ ಸೇವಾ ನೇಮಕಗಳಿಗೂ ಸಂಬಂಧ ಕಲ್ಪಿಸುವ ನಿಮಿತ್ತ ೧೮೬೧ ರಲ್ಲಿ ಶಿಕ್ಷಣ ನಿರ್ದೇಶಕರನ್ನೇ ಸಾರ್ವಜನಿಕ ಸೇವಾ ಪರೀಕ್ಷೆಗಳ ಕಮಿಶನರ್‌ರನ್ನಾಗಿಯೂ ನೇಮಿಸಲಾಯಿತು.

ಬಳ್ಳಾರಿ, ಅನಂತಪುರ, ಕಡಪಾ, ಕರ್ನೂಲು ಮತ್ತು ಕೃಷ್ಣಾ ಜಿಲ್ಲೆಗಳನ್ನೊಳ-ಗೊಂಡ ಬಳ್ಳಾರಿ ವಿಭಾಗದಲ್ಲಿ ಮದ್ರಾಸು ಪ್ರೆಸಿಡೆನ್ಸಿಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಶಿಕ್ಷಣ ನಿರ್ದೇಶಕರೊಂದಿಗೆ ನೇರ ಸಂಪರ್ಕವಿರಿಸಿಕೊಂಡ ಶಾಲಾ ತಪಾಸಣಾಧಿಕಾರಿ ಮುಖ್ಯಸ್ಥರಾಗಿದ್ದು ಈರ್ವರು ಉಪತಪಾಸಣಾಧಿಕಾರಿಗಳ ಮತ್ತು ಅವರ ಕೈಕೆಳಗಿನ ತಪಾಸಣಾ ಶಾಲಾ ಮಾಸ್ತರರ ಮೂಲಕ ಆಡಳಿತ ನಡೆಸುತ್ತಿದ್ದರು. ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆ ಮತ್ತು ಮಲಬಾರು ವಿಭಾಗ ಗಳ ಆಡಳಿತ, ತಪಾಸಣೆ ಮತ್ತು ಮೇಲ್ವಿಚಾರಣೆ ಶಿಕ್ಷಣ ನಿರ್ದೇಶಕರಿಂದ ನೇರ ಮಾರ್ಗ

ದರ್ಶನ ಪಡೆಯುತ್ತಿದ್ದ ಓರ್ವ ಉಪ ತಪಾಸಣಾಧಿಕಾರಿ ನಿರ್ವಹಿಸುತ್ತಿದ್ದರು. ಹೀಗಿದ್ದುದು ೧೮೬೦–೬೧ ರಲ್ಲಿ.

ವುಡ್ ವರದಿಯ ಮತ್ತೊಂದು ಪರಿಣಾಮವೆಂದರೆ ಸರಕಾರಿ ಅನುದಾನ ನಿಯಮುಗಳ ಪ್ರಕಟಣೆ. ೧೮೫೮ ರಲ್ಲಿ ವೇತನ ಅನುದಾನಕ್ಕಾಗಿ ಶಿಕ್ಷಕರ ಅರ್ಹತಾ ಪತ್ರಗಳ ಅಗತ್ಯತೆ ನಿವೇದಿಸುವ ನೂತನ ನಿಯಮಾವಳಿ ಬಂದಿತು. ಪುನಃ ೧೮೬೫ ಮತ್ತು ೧೮೮೫ ರಲ್ಲಿ ಮಾರ್ಪಾಡು ಹೊಂದಿ ಶಿಕ್ಷಕನ ಆಂಶಿಕ ವೇತನವು ಫಲಿತಾಂಶದ ಮೇಲಿಂದ ನಿರ್ಧರಿಸಲ್ಪಡುವಂತಾಯಿತು. ಮದ್ರಾಸು ಎಲಿಮೆಂಟರಿ ಶಿಕ್ಷಣ ಕಾಯದೆ ೧೮೬೩ ರಲ್ಲಿ ಜಾರಿಗೆ ಬಂದು ಹೊಸ ಶಾಲೆಗಳು ಸ್ಥಾಪನೆಗಾಗಿ ತಾವಾಗಿ ಸಾರ್ವಜನಿಕ ವಂತಿಗೆಯ ಮೂಲಕ ಧನ ಸಹಾಯ ಕಲ್ಪಿಸಿಕೊಳ್ಳುವ ಅವಕಾಶ ಮಾಡಿತು. ಇದರ ಉಪಯೋಗ ಜನ ಸರಿಯಾಗಿ ಮಾಡಿಕೊಳ್ಳದಾದಾಗ ಕಡ್ಡಾಯ ಶಿಕ್ಷಣ ತೆರಿಗೆ ಪಡೆಯಲು ನಗರ ಸುಧಾರಣಾ ಕಾಯದೆ, ಸ್ಥಳೀಯ ಧನ ಸಂಚಯ (Fund) ಕಾಯದೆ ಮತ್ತು ಮದ್ರಾಸು ನಗರಸಭೆ ಕಾಯದೆ ೧೮೭೧ ರಲ್ಲಿ ಮತ್ತು ಸ್ಥಳೀಯ ಧನಸಂಚಯ ಬೋರ್ಡು ಮತ್ತು ನಗರಸಭೆಗಳಿಗೆ ಹುಡುಗಿಯರ ಶಾಲೆಗಳಿಗೆ ಅಗತ್ಯದಂತೆ ಸರಕಾರಿ ಸಹಾಯ ನೀಡುವ ಕಾಯದೆಗಳು ೧೮೭೮ ರಲ್ಲಿ ಜಾರಿಗೆ ಬಂದವು. ೧೮೯೯ ರ ಹೊತ್ತಿಗೆ ಯೂನಿವರ್ಸಿಟಿ, ಹೈಸ್ಕೂಲು, ಮಿಡ್ಲ್‌ಸ್ಕೂಲು ಮತ್ತು ಪ್ರೈಮರಿಸ್ಕೂಲುಗಳಲ್ಲಿ ಶಿಕ್ಷಣವು ಪರೀಕ್ಷಾ ಫಲಿತಾಂಶವನ್ನಾಧರಿತ ಅನುದಾನದಿಂದ ಪ್ರಭಾವಿತವಾಯಿತು. ಡಾ॥ ಹಂಟರ್ ನೇತೃತ್ವದ 'ಕಲಕತ್ತಾ ಶಿಕ್ಷಣ ಆಯೋಗ' ೧೮೮೨ ರಲ್ಲಿ ನೇಮಿಸಲ್ಪಟ್ಟಿತು. ೧೮೯೧–೯೨ ರಲ್ಲಿ ಶಾಲೆಗಳಿಗೆ ಸರಕಾರಿ ಆಡಳಿತದಿಂದ 'ಮನ್ನಣೆ' (Recognition) ನೀಡುವ ಪದ್ಧತಿ ಜಾರಿಗೆ ಬಂದಿತು. ಮ್ಯಾಟ್ರಿಕ್ಯೂಲೇಷನ್ ಪರೀಕ್ಷೆಗೂ ಮೊದಲು ಮಿಡ್ಲ್‌ಸ್ಕೂಲ್ ಪರೀಕ್ಷೆ (೧೮೭೯) ಹೈಸ್ಕೂಲು ಪರೀಕ್ಷೆ (೧೮೮೭) ಅಪ್ಪರ್ ಸೆಕೆಂಡರಿ ಪರೀಕ್ಷೆ (೧೮೮೯) ಪ್ರ್ಯಾಮರಿ ಶಾಲಾ ಪರೀಕ್ಷೆ (೧೮೮೯), ಲೋವರ್ ಸೆಕೆಂಡರಿ ಪರೀಕ್ಷೆ (೧೮೯೧) ಮತ್ತು ಮೌಖಿಕ (Viva-voce) ಪರೀಕ್ಷೆ (೧೮೯೧) ಗಳು ಜಾರಿಗೆ ಬಂದು ಮ್ಯಾಟ್ರಿಕ್ಯೂಲೇಷನ್ ಶಿಕ್ಷಣ ೨ ರಿಂದ ೩ ವರ್ಷಗಳ ಅವಧಿಗೆ ವಿಸ್ತರಿಸಲಾಯಿತು. ಹೀಗೆ ೧೮೯೬–೯೭ ರಷ್ಟು ಹೊತ್ತಿಗೆ ಒಟ್ಟು ಹದಿನಾಲ್ಕು ವರ್ಷಗಳ ತರಗತಿ I–III ರ ವರೆಗಿನ ಲೋವರ್ ಪ್ರ್ಯಾಮರಿ, ತರಗತಿ IV ರ ಅಪ್ಪರ್ ಪ್ರ್ಯಾಮರಿ, I–III ಫಾರ್ಮ್‌ಗಳ ಲೋವರ್ ಸೆಕೆಂಡರಿ, IV–VI ಫಾರ್ಮ್‌ಗಳ ಅಪ್ಪರ್ ಸೆಕೆಂಡರಿ, ಎರಡು ವರ್ಷಗಳ ಎಫ್ ಏ. ಮತ್ತು ಎರಡು ವರ್ಷಗಳ ಬಿ. ಎ. ಹಂತಗಳಲ್ಲಿ ಶಿಕ್ಷಣ ಮತ್ತು ಪರೀಕ್ಷಾ ವ್ಯವಸ್ಥೆ ಇದ್ದಿತು. ಶಿಕ್ಷಕರ ಪ್ರಶಿಕ್ಷಣಕ್ಕಾಗಿ ೧೮೮೨ ರಲ್ಲಿ 'ನಾರ್ಮಲ್ ತರಬೇತಿ', ಮತ್ತು ದೈಹಿಕ ಶಿಕ್ಷಣ ತರಬೇತಿ ಮತ್ತು ೧೮೮೫ ರಲ್ಲಿ ಎಲ್. ಟಿ. ಪದವಿ ತರಬೇತಿಗಾಗಿ ಮದ್ರಾಸು ಪಟ್ಟಣದಲ್ಲಿ ನಾರ್ಮಲ್ ಶಾಲೆ ಕಾಲೇಜುಗಳು ಸ್ಥಾಪಿಸಲ್ಪಟ್ಟವು.

ಅಲ್ಲದೆ ದಕ್ಷಿಣ ಕನ್ನಡದಲ್ಲಿ 'ನಾರ್ಮಲ್' ತರಬೇತಿಗೆ ಮುನ್ನಾ ನಾರ್ಮಲ್ ಶಾಲೆಗಳಲ್ಲದೆ ಗ್ರಾಮೀಣ ಶಾಲಾ ಮಾಸ್ತರರಿಗೆ ಪಠ್ಯವಿಷಯಗಳಲ್ಲಿ 'ವಿಶೇಷ ಅಪ್ಪರ್ ಪ್ರೈಮರಿ ಪರೀಕ್ಷೆ' ಪಾಸು ಮಾಡುವಂತಾಗಲು ತಪಾಸಣಾ ಶಾಲಾ ಮಾಸ್ತರರುಗಳಿ ಮೂರು ತಿಂಗಳ ಶಿಕ್ಷಣ ನೀಡುವ ನೂತನ ಕಾರ್ಯಕ್ರಮ ಜಾರಿಯಲ್ಲಿತ್ತು.

ಸಂಸ್ಕೃತ ಶಾಲೆಗಳಿಗಾಗಿ ೧೯೦೦ ರಲ್ಲಿ ಓರ್ವ ಸಬ್ ತಪಾಸಣಾಧಿಕಾರಿಯನ್ನೂ ನೇಮಿಸಲಾಯಿತು.

ಕಾಲೇಜು ಮಟ್ಟದಲ್ಲಿ ಬೋಧನೆಗೆ ವಿಜ್ಞಾನ ಅಥವಾ ಮಾನವಿಕ ಶಾಸ್ತ್ರದಲ್ಲಿ ಮತ್ತು ಬೋಧನೆಯಲ್ಲಿ—ಹೀಗೆ ಎರಡು ಯೂನಿವರ್ಸಿಟಿ ಪದವಿ (ಡಿಗ್ರಿ) ಗಳು, ಹೈಯರ್ ಸೆಕೆಂಡರಿ ಮಟ್ಟದಲ್ಲಿ ಎಫ್.ಎ. ಆಗಿದ್ದು ನಾರ್ಮಲ್ ಶಾಲೆಯ ಬೋಧನಾ ಅರ್ಹತಾಪತ್ರ, ಉಚ್ಚ ಪ್ರಾಥಮಿಕ ಮಟ್ಟದಲ್ಲಿ ಮಿಡ್ಲ್‌ಸ್ಕೂಲ್ ಪರೀಕ್ಷೆ ಪ್ರಥಮ ಅಥವಾ ದ್ವಿತೀಯ ಶ್ರೇಣಿಯಲ್ಲಿ ಪಾಸಾಗಿದ್ದು ಬೋಧನಾ ತರಬೇತಿ ಪತ್ರ, ಕೆಳ ಪ್ರಾಥಮಿಕ ಮಟ್ಟದಲ್ಲಿ ಮಿಡ್ಲ್ ಪರೀಕ್ಷೆ ಅಥವಾ ವಿಶೇಷ ಪಠ್ಯವಿಷಯಗಳನ್ನೊಳಗೊಂಡ ಪರೀಕ್ಷೆಯನ್ನು ಪಾಸಾದ ಅರ್ಹತಾಪತ್ರ ಪಡೆದವರನ್ನು ತೆಗೆದುಕೊಳ್ಳುವ ನೀತಿ ನಿಬಂಧನೆಗಳು ೧೮೮೪–೮೫ ರಲ್ಲಿ ಜಾರಿಯಲ್ಲಿದ್ದವು.

ನೂರು ವರುಷಗಳಲ್ಲಿ ಬಳ್ಳಾರಿಯ ಶಿಕ್ಷಣ ಸಾಧನೆ

ಐರೋಪ್ಯ–ಭಾರತೀಯ ಮೂಲದ ಆರ್ಥಿಕವಾಗಿ ಹಿಂದುಳಿದ ಹಾಗೂ ಅನಾಥ ಮಕ್ಕಳಿಗಾಗಿ ಪ್ರಥಮತಃ ಕ್ರೈಸ್ತ ಗುರು ರೆ. ಎ. ಜೆ. ಹ್ಯಾಂಡ್ಸ್ ಎಂಬುವವರ ನೇತೃತ್ವದಲ್ಲಿ ಶಾಲೆಯ ಸ್ಥಾಪನೆ ೧೮೧೨ ರಲ್ಲಿ ಪ್ರಾಟೆಸ್ಟೆಂಟ್ ಮಿಶನರಿ ಆಶ್ರಯದಲ್ಲಿ ಎರಡು ಶಾಲೆಗಳು ಸ್ಥಾಪನೆಗೊಂಡವು. ಚಾರ್ಟರ್ ಕಾಯದೆ ೧೮೧೩ ರ ಪ್ರಕಾರ ನಂತರ ಸ್ಥಾಪನೆಯಾದ ೩೦ ಶಾಲೆಗಳಲ್ಲಿ ಮೂರು ಕನ್ನಡ ಮತ್ತು ಒಂದು ಇಂಗ್ಲೀಷು ಬೋಧಿಸುವವು ಮಾತ್ರ ಉಳಿದವು. ಹತ್ತು ಲಕ್ಷದಷ್ಟು ಜನಸಂಖ್ಯೆ ಇದ್ದ ೧೮೨೨ ರ ಬಳ್ಳಾರಿ ಜಿಲ್ಲೆಯಲ್ಲಿ ಶಾಲೆಗೆ ಸರಾಸರಿ ೧೨ ಮಕ್ಕಳಂತೆ ಸುಮಾರು ಆರೂವರೆ ಸಾವಿರದಷ್ಟು ವಿದ್ಯಾರ್ಥಿಗಳು ಐದುನೂರಕ್ಕೂ ಮಿಕ್ಕಿದ ಶಾಲೆಗಳಲ್ಲಿ ಕಲಿಯುತ್ತಿದ್ದರು. ಇವುಗಳಲ್ಲಿ ಕನ್ನಡ ಮತ್ತು ತೆಲುಗು ಶಾಲೆಗಳು ಅತಿ ಹೆಚ್ಚಿನ ಸಂಖ್ಯೆಯಲ್ಲಿದ್ದು ಮರಾಠಿ, ಪರ್ಶಿಯನ್, ತಮಿಳು ಮತ್ತು ಸಂಸ್ಕೃತ ಶಾಲೆಗಳೂ ಇದ್ದವು. ಅಲ್ಲದೆ ೧೮೨೬ ರಲ್ಲಿ ಪ್ರಥಮ ಮುದ್ರಣಾಲಯದ ಸ್ಥಾಪನೆ ಮತ್ತು ಮರುವರ್ಷ ರೆ. ರೀವ್ಸ್ ರವರ ಕನ್ನಡ ನಿಘಂಟಿನ ಪ್ರಕಟಣೆ ಎರಡೂ ಶೈಕ್ಷಣಿಕ ಮಹತ್ವವುಳ್ಳ ಘಟನೆಗಳು. ಹುಡುಗಿಯರಿಗಾಗಿ ಆರಂಭದಲ್ಲಿ ಹದಿಮೂರು ವಿದ್ಯಾರ್ಥಿನಿಯರಿದ್ದ ಉಂಡು ಓದುವ ಹಗಲು ಶಾಲೆಯು ಸ್ಥಾಪನೆಯಾದುದು ೧೮೩೩ ರಲ್ಲಿ. ಇಲ್ಲಿ ಪಠ್ಯವಿಷಯಗಳಲ್ಲಿ ಕಸೂತಿಯನ್ನೂ ಕಲಿಸಲಾಗುತ್ತಿತ್ತು. ಬಳ್ಳಾರಿಯ ಬ್ರೂಸ್‌ಪೇಟೆಯಲ್ಲಿ ೩೦

ಬ್ರಾಹ್ಮಣ ಮತ್ತು ೪೯ ಲಿಂಗಾಯತ ವಿದ್ಯಾರ್ಥಿನಿಯರಿದ್ದ ಎರಡು ಪ್ರತ್ಯೇಕ ಶಾಲೆಗಳು. ಕೌಲ್‌ಬಜಾರದಲ್ಲಿ ೧೪ ವಿದ್ಯಾರ್ಥಿನಿಯರಿದ್ದ ಅಲ್ಲದೆ ಮತ್ತೊಂದೆಡೆ ೨೧ ಮಕ್ಕಳ ಕನ್ನಡ ಶಾಲೆಗಳು ಅದೇ ವೇಳೆ ಆರಂಭವಾದವು. ೧೮೪೧ ರಲ್ಲಿ ೫೦ ವಿದ್ಯಾರ್ಥಿಗಳುಳ್ಳ ತಮಿಳುಶಾಲೆ ಮತ್ತು ೧೮೪೩ ರಲ್ಲಿ ೩೨ ಹುಡುಗಿಯರುಳ್ಳ ಕ್ಯಾಥೊಲಿಕ್ ಮಿಶನ್ ಶಾಲೆಗಳೂ ತೆರೆಯಲ್ಪಟ್ಟವು,

ಲಂಡನ್ ಮಿಶನರಿ ಸೊಸೈಟಿ (೧೮೩೮) ಯ ಡಾ॥ ಜೆ. ಡಿ. ವಾಡ್ಲಾರ್‌ರಿಂದ ವಾಡ್ಲಾರ್ ಹೈಸ್ಕೂಲಿನ ಸ್ಥಾಪನೆಯಾದುದು ೧೮೪೫ರಲ್ಲಿ. ಆರಂಭದಲ್ಲಿ ೫೬ ವಿದ್ಯಾರ್ಥಿಗಳಿದ್ದ ಆ ಶಾಲೆ ೧೮೬೭ರಲ್ಲಿ ಮ್ಯಾಟ್ರಿಕ್ಯುಲೇಶನ್‌ವರೆಗಿನ ಹತ್ತು ತರಗತಿಗಳಲ್ಲಿ ೩೮೪ ಹುಡುಗರನ್ನು ಪಡೆದಿತ್ತು. ೧೮೬೯ರಲ್ಲಿ ಎಫ್. ಎ. ಯನ್ನೂ ಒಗ್ಗೂಡಿಸಿಕೊಂಡು ೧೮೮೭ಕ್ಕೆ ೩೫೬ ವಿದ್ಯಾರ್ಥಿಗಳನ್ನು ಪಡೆಯಿತು. ೧೮೯೧ರಲ್ಲಿ ಮದ್ರಾಸು ವಿಶ್ವ-ವಿದ್ಯಾಲಯದ ಮನ್ನಣೆ ದೊರಕಿತು. ಇಂಗ್ಲೀಷು ಶಿಕ್ಷಣ ನೀಡಬೇಕೆನ್ನುವ ಬ್ರಿಟಿಷ್ ಸರಕಾರದ ಧೋರಣೆಯ ಫಲವಾಗಿ ೧೮೫೪ ರಲ್ಲಿ ಜಿಲ್ಲಾ ಪ್ರಾವಿನ್ಶಿಯಲ್ ಶಾಲೆಯ ಸ್ಥಾಪನೆಯಾಯಿತು. ೧೮೮೫ ರ ವರೆಗೆ ಎಫ್. ಎ. ಶಿಕ್ಷಣವನ್ನೂ ಅಲ್ಲೇ ನೀಡಲಾಗುತ್ತಿತ್ತು. ೧೮೭೩ರಲ್ಲಿ ೨೧೫ ವಿದ್ಯಾರ್ಥಿಗಳಿದ್ದ ಜಿಲ್ಲಾ ಶಾಲೆಯಲ್ಲಿ ಮ್ಯಾಟ್ರಿಕ್‌ನಲ್ಲಿದ್ದ ವಿದ್ಯಾರ್ಥಿಗಳ ಸಂಖ್ಯೆ ೪೯; ಕಾಲೇಜು ವಿಭಾಗದಲ್ಲಿ ೧೬ ಜನರಿದ್ದರು. ಈ ವೇಳೆಗಾಗಲೇ ಲಂಡನ್ ಮಿಶನ್‌ನ ಬಾಲಕಿಯರ ಶಾಲೆಯೂ ಕಾರ್ಯವೆಸಗುತ್ತಿತ್ತು. ಆದರೆ ೧೮೮೧-೮೨ರಲ್ಲಿ ಜಿಲ್ಲಾ ಶಾಲೆಯಲ್ಲಿ ೨೭ ಮತ್ತು ಲಂಡನ್ ಮಿಶನ್ ಶಾಲೆಯಲ್ಲಿ ೩೦ ವಿದ್ಯಾರ್ಥಿಗಳು ಮ್ಯಾಟ್ರಿಕ್‌ಗಾಗಿ ಕಲಿಯುತ್ತಿದ್ದರು. ಬಳ್ಳಾರಿ ಮದ್ರಾಸು ರೈಲು ಸಂಪರ್ಕ ಈ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಇಳಿಯಲು ಕಾರಣ. ಐರ್-ಲ್ಯಾಂಡ್ ದೇಶೀಯ ಮೇನೂತ್ ಮಿಶನ್ ೧೮೭೦ ಕ್ಕೂ ಮೊದಲೇ ಭಾರತಕ್ಕೆ ಬಂದು ಬಳ್ಳಾರಿ ಕೋಟೆಯಲ್ಲಿ ರಾಕ್ (Rock) ಸ್ಕೂಲ್ ನಡೆಸುತ್ತಿತ್ತು. ೧೯೦೪ ರ ಸುಮಾರಿಗೆ ಯೂರೋಪಿಯನ್ ಮತ್ತು ಭಾರತೀಯ ಮಕ್ಕಳುಳ್ಳ ವಿಭಾಗಗಳು ಬೇರೆ ಬೇರೆಯಾದವು. ಇವಕ್ಕೆ ಕ್ರಮೇಣ ಸೈಂಟ್‌ಜೋನ್ಸ್ ಶಾಲೆ ಎಂಬ ಹೆಸರು ಬಂದಿತು. ಪ್ರಥಮತಃ ಎಸ್. ಎಸ್. ಎಲ್. ಸಿ. ಗೆ ವಿದ್ಯಾರ್ಥಿಗಳನ್ನು ಈ ಶಾಲೆ ನೀಡಿದುದು ೧೯೩೦ರಲ್ಲಿ. ಹರಪನಹಳ್ಳಿಯಲ್ಲಿ ೧೮೮೧ರಲ್ಲಿ ಮಿಡ್‌ಲ್ (Middle) ಶಾಲೆಯಾಗಿ ಆರಂಭಗೊಂಡು ೧೮೯೦ ಕ್ಕೆ ಹರಪನಹಳ್ಳಿ ಹೈಸ್ಕೂಲು ಮ್ಯಾಟ್ರಿಕ್ ವಿದ್ಯಾರ್ಥಿಗಳನ್ನು ನೀಡಿತು. ೧೮೯೧-೯೨ರಲ್ಲಿನ ಕಟ್ಟಡದಲ್ಲಿ ಇಂದೂ ಈ ಹೈಸ್ಕೂಲಿದ್ದು, ಗಾಂಧೀಜಿಯವರು ಹರಿಜನ ಚಳುವಳಿಯ ನಿಮಿತ್ತ ಬಂದಾಗ ಒಂದು ರಾತ್ರಿ ತಂಗಿದ್ದರು.

ಹೊಸಪೇಟೆಯ ಶಾಲೆ ೧೮೬೫ ಪ್ರಾರಂಭಿಸಲ್ಪಟ್ಟರೂ ಹೈಸ್ಕೂಲಾಗಿ ಮಾರ್ಪಟ್ಟುದು ೧೧೨೧ರಲ್ಲಿ. ಸೊಂಡೂರಿನಲ್ಲಿ ಸ್ಥಾಪನೆಗೊಂಡು ೧೮೮೭-೮೮ ರಲ್ಲಿ ತನ್ನದೇ ಕಟ್ಟಡವನ್ನು ಪಡೆಯಿತು. ಲಂಡನ್ ಮಿಶನ್ ೧೮೯೮-೯೯ ರಲ್ಲಿ

ಉಡುಪಿಯ ಬೋರ್ಡ್ ಹೈಸ್ಕೂಲು ೧೮೬೫ ರಲ್ಲಿ ವಂತಿಗೆ ಶಾಲೆಯಾಗಿ ಆರಂಭ-ವಾಗಿ ನಂತರ ಸರಕಾರಿ ಮಿಡ್ಲ್ ಸ್ಕೂಲಾಗಿ ಪರಿವರ್ತನೆಯಾಯಿತು. ಕೆಲಕಾಲಾ ನಂತರ ಸ್ಥಳೀಯ ಶಾಲಾ ಬೋರ್ಡು ಅದನ್ನು ವಹಿಸಿಕೊಂಡಿತು. ೧೯೧೮ ರಲ್ಲಿ ಪುನಃ ಹೈಸ್ಕೂಲಾಗಿ ಪರಿವರ್ತನೆಯಾಯಿತು. ೧೮೮೧ ರಿಂದ ಕಾರ್ಯವೆಸಗುತ್ತಿದ್ದ ಕಾರ್ಕಳದ ಸರಕಾರಿ ಮಿಡ್ಲ್ ಶಾಲೆ ೧೮೮೮ ರಲ್ಲಿ ಸ್ಥಳೀಯ ಮಹನೀಯ ಕೆ. ವಿ. ಕಾರಂತ್ ಎಂಬುವವರ ನೇತೃತ್ವಕ್ಕೆ ಬಂದು ೧೯೧೯ ರಲ್ಲಿ ಹೈಸ್ಕೂಲಾಗಿ ಪರಿವರ್ತಿಸಲ್ಪಟ್ಟಿತು. ಕುಂದಾಪುರದ ಹೈಸ್ಕೂಲು ಆರಂಭವಾದುದು ೧೮೬೫ ರಲ್ಲಿ ವಂತಿಗೆ ಶಾಲೆಯಾಗಿ. ಯೂನಿಯನ್ ಶಾಲೆಯೆಂದು ೧೮೭೧ ರಿಂದಲೂ ಸ್ಥಳೀಯ ಮಿಡ್ಲ್ ಶಾಲೆಯೆಂದು ೧೮೭೫ ರಿಂದಲೂ ಹೈಸ್ಕೂಲೆಂದು ೧೮೮೮ ರಿಂದಲೂ ಸೇವೆ ಸಲ್ಲಿಸುತ್ತಾ ಬಂದಿದೆ. ಬಂಟ್ವಾಳದಲ್ಲಿನ ಎಸ್. ವಿ. ಎಸ್. ಹೈಸ್ಕೂಲು ಆರಂಭವಾದುದು ೧೮೯೩ ರಲ್ಲಿ, ನೇತ್ರಾವತೀ ದಡದಲ್ಲಿರುವ ಶ್ರೀ ವೆಂಕಟರಮಣ ಸ್ವಾಮಿ ದೇವಸ್ಥಾನದ ಆಶ್ರಯದಲ್ಲಿ ಪ್ರಾಥಮಿಕ ಶಾಲೆಯೆಂದು ಕಾರ್ಯಾರಂಭ ಮಾಡಿದ ಶಾಲೆಯದು.

ಮಂಗಳೂರಿನ ರೊಜಾರಿಯೋ ಶಾಲೆ ಕನ್ನಡಾಂಗ್ಲೇಯ ಶಾಲೆಗಳಲ್ಲಿ ಅತೀ ಹಳೆಯದೆಂಬ ಪ್ರತೀತಿ ಇದ್ದು ೧೮೫೬ ರಲ್ಲಿ ಕ್ರೈಸ್ತ ಬ್ರದರ್‌ಹುಡ್ ಸ್ಥಾಪಿಸಿದು-ದೆಂದೂ ೧೮೬೯ ರಲ್ಲಿ ಕ್ಯಾಥೆಡ್ರಲ್ ಚರ್ಚ್ ವಹಿಸಿಕೊಂಡಿತೆಂದೂ ತಿಳಿದು ಬರುತ್ತದೆ. ಕೆನರಾ ಹೈಸ್ಕೂಲು ೧೮೯೧ ರಲ್ಲಿ ಐವರು ಶಿಕ್ಷಕರ ಸಹಯೋಗದಿಂದ ಸ್ಥಾಪಿಸಲ್ಪಟ್ಟಿತು. ಮಂಗಳೂರಿನ ಗಣಪತಿ ಹೈಸ್ಕೂಲು ಉಮಾಮಹೇಶ್ವರ ದೇವಸ್ಥಾನದ ಪೌಳಿಯಲ್ಲಿ. ೧೮೭೦ ರಲ್ಲಿ ಸ್ಥಾಪಿಸಲ್ಪಟ್ಟ ಸಂಸ್ಕೃತ ಪಾಠಶಾಲೆಯೆಂದು ಆರಂಭಗೊಂಡುದು. ಮಿಡ್ಲ್ ಶಾಲೆಯಾಗಿ ಕೆಲಕಾಲ ಕಾರ್ಯವೆಸಗಿದ ಅದು ೧೯೩೦ ರಲ್ಲಿ ಹೈಸ್ಕೂಲಾಗಿ ಮಾರ್ಪಟ್ಟಿತು.

ದಕ್ಷಿಣ ಕನ್ನಡದ ಸಂಸ್ಕೃತ ಶಿಕ್ಷಣದ ಪರಂಪರೆಯ ಬಗ್ಗೆ ಬರೆಯಲು ಹೆಚ್ಚಿನ ವಿವರಗಳು ಎಂದರೆ ಸರಕಾರೇತರ ದಾಖಲೆಗಳ ಸಂಗ್ರಹ ಅಗತ್ಯ. ಶತಮಾನಗಳಿಂದ ನಡೆದು ಬಂದ ಉಡುಪಿಯ ಅಷ್ಟಮಠಗಳ ಆಶ್ರಯಿತ ಶಿಕ್ಷಣ, ಸಂಸ್ಕೃತ ಸಾಹಿತ್ಯ ರಚನಾ ಪರಂಪರೆ, ಶಿಕ್ಷಕರಿಗೆ ವಿದ್ಯಾರ್ಥಿಗಳಿಗೆ ನೀಡುತ್ತ ಬಂದ ಆರ್ಥಿಕ ಸಹಾಯ-ಸವಲತ್ತುಗಳು ವಿಶಿಷ್ಟ ರೀತಿಯವು. ಹೀಗೆ ದಕ್ಷಿಣ ಕನ್ನಡದಲ್ಲಿ ಒಂದಲ್ಲ ಹಲವಾರು ಸ್ಥಳಗಳ ವಿವರ ಸಿಗಬಹುದು. ಈ ಬಗ್ಗ ಹೆಚ್ಚಿನ ಸಂಶೋಧನೆ ಅತ್ಯಗತ್ಯ. ನೃತ್ಯ, ಸಂಗೀತ, ನಾಟಕ, ಜಾನಪದ, ಕೈಗಾರಿಕೆ —ಇತ್ಯಾದಿ ಕ್ಷೇತ್ರಗಳಲ್ಲಿಯೂ ಗುರು-ಪರಂಪರೆಯ ಜಾಡನ್ನು ಹಿಡಿದು ಭಾರತೀಯ ಶೈಕ್ಷಣಿಕ ಚರಿತ್ರೆ ಕಟ್ಟುವ ಪ್ರಯತ್ನ-ವಿನ್ನೂ ಆಗಬೇಕಾಗಿದೆ.

ಬಳ್ಳಾರಿ ದಕ್ಷಿಣ ಕನ್ನಡಗಳ ಪ್ರಗತಿಯ ಹೋಲಿಕೆ :

ಹದಿನೆಂಟು ನೂರ ಅರವತ್ತರಲ್ಲಿ ಬಳ್ಳಾರಿ ಜಿಲ್ಲೆಯಲ್ಲಿದ್ದ ಶಾಲೆಗಳು ಏಳು. ಮೂರು ಸರಕಾರಿ ಮತ್ತು ನಾಲ್ಕು ಅನುದಾನ ಪಡೆವ ಖಾಸಗಿ ಶಾಲೆಗಳು. ಒಟ್ಟು ೫೩೩ ವಿದ್ಯಾರ್ಥಿಗಳಿದ್ದರು ಆಗ. ೧೮೭೦-೭೧ ರಲ್ಲಿ ೧೩೨ ಮತ್ತು ೧೮೮೦-೮೧ ರಲ್ಲಿ ೭೩೬ ಶಾಲೆಗಳು ಬಳ್ಳಾರಿ ಜಿಲ್ಲೆಯಲ್ಲಿದ್ದವು. ಶತಮಾನಾಂತ್ಯದಲ್ಲಿ ಎಂದರೆ ೧೮೯೬-೯೭ ರಲ್ಲಿ ಒಟ್ಟಿಗೆ ೧೧೦೩೫ ಶಿಕ್ಷಣ ಸಂಸ್ಥೆಗಳಿದ್ದು ಉಚ್ಚ ಶಿಕ್ಷಣದ ವರೆಗಿನ ಬೇರೆ ಬೇರೆ ಹಂತಗಳಲ್ಲಿ ೨೪೧೩೬ (ಹುಡುಗಿಯರು ೧೭೧೩ ಸೇರಿ) ಇದ್ದರು. ಇವು ಗಳಲ್ಲಿ ಒಂದು ಕಾಲೇಜೂ, ನಾಲ್ಕು ಹೈಸ್ಕೂಲುಗಳೂ, ೨೧ ಮಿಡ್ಲ್ ಶಾಲೆಗಳೂ, ೧೧೦೬ ಪ್ರೈಮರಿ ಶಾಲೆಗಳೂ, ಎರಡು ನಾರ್ಮಲ್ ಶಾಲೆಗಳೂ, ಒಂದು ಸ್ಪೆಶಲ್ ಶಾಲೆಯೂ ಆಗಿದ್ದವು.

ಹದಿನೆಂಟು ನೂರ ಅರವತ್ತರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದ ಹದಿನೇಳು ಶಾಲೆಗಳಲ್ಲಿ ನಾಲ್ಕು ಸರಕಾರಿ, ಎಂಟು ಖಾಸಗಿ ಮತ್ತು ಐದು ಮಿಶನರಿ ಶಾಲೆಗಳು. ಒಟ್ಟು ೫೭೬ ವಿದ್ಯಾರ್ಥಿಗಳು ಕಲಿಯುತ್ತಿದ್ದರು. ಒಂದರಲ್ಲಿ ಮಾತ್ರ ೯೮ ವಿದ್ಯಾರ್ಥಿಗಳಿದ್ದು ಮ್ಯಾಟ್ರಿಕ್ ವರೆಗೂ ಬೋಧನೆಗೆ ಅವಕಾಶವಿತ್ತು. ೧೮೭೦-೭೧ ರಲ್ಲಿ ೭೩ ಮತ್ತು ೧೮೮೦-೮೧ ರಲ್ಲಿ ೧೪೮ ಶಾಲೆಗಳು ದಕ್ಷಿಣ ಕನ್ನಡದಲ್ಲಿ ಕೆಲಸ ಮಾಡುತ್ತಿದ್ದವು. ೧೮೮೧-೮೨ ರಲ್ಲಿ ಎರಡು ಕಾಲೇಜುಗಳೂ, ಎರಡು ಇಂಗ್ಲೀಷ್ ಹೈಸ್ಕೂಲುಗಳೂ ೧೪ ಇಂಗ್ಲೀಷ್ ಮಿಡ್ಲ್ ಶಾಲೆಗಳೂ, ೪೮ ಇಂಗ್ಲೀಷ್ ಮತ್ತು ೧೪೦ ಸ್ಥಳೀಯ ಭಾಷಾ ಪ್ರಾಥಮಿಕ ಶಾಲೆಗಳೂ, ಒಂದು ನಾರ್ಮಲ್ ಶಾಲೆಯೂ ಹೀಗೆ ೨೦೭ ಶಾಲಾ ಕಾಲೇಜುಗಳು ಇದ್ದವು. ಒಟ್ಟಿಗೆ ೭೮೨೬ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಇದ್ದು ಮಂಗಳೂರು ನಗರದ ೩೫ ಶಾಲೆಗಳ ಪಾಲು ಇದರಲ್ಲಿ ೨೨೦೩ ಆಗಿತ್ತು. ಹೆಣ್ಣುಮಕ್ಕಳ ಏಳು ಶಾಲೆಗಳಲ್ಲಿ ೪೬೦ ವಿದ್ಯಾರ್ಥಿನಿಯರು ಇದ್ದರು. ೧೮೯೬-೯೭ ರಲ್ಲಿ ೭೩೦ ಶಾಲಾ ಕಾಲೇಜುಗಳಲ್ಲಿ ೨೭೦೧೦ ಬಾಲ ಬಾಲಕಿಯರು ವಿದ್ಯಾರ್ಜನೆಯ ಸದವಕಾಶ ಪಡೆದಿದ್ದರು. ಇದರಲ್ಲಿ ೪೬೫೮ ಬಾಲಕಿಯರು ಎಂದರೆ ಶಿಕ್ಷಣ ವಯಸ್ಕರಲ್ಲಿ ಶೇಕಡಾ ೨೯.೨ ಹುಡುಗರೂ ೫.೭ ಹುಡುಗಿಯರೂ ವಿದ್ಯಾರ್ಜನೆಯ ಸುಯೋಗ ಹೊಂದಿದವರು. ಅಲ್ಲದೇ ೧೮೮೭-೮೮ ರಲ್ಲಿ ೪೦ ಜನ ಶಿಕ್ಷಕರ ತರಬೇತಿಯಲ್ಲಿದ್ದವರು. ಸೇವೆಯಲ್ಲಿದ್ದ ೪೦೫ ಶಿಕ್ಷಕರ ಪೈಕಿ, ೧೮೮೬-೮೭ ರಲ್ಲಿ ೬೪ ಜನ ತರಬೇತಿ ಹೊಂದಿದವರೂ ಅಷ್ಟೇ ಜನ ಕೇವಲ ಅಗತ್ಯ ವಿದ್ಯಾರ್ಹತೆ ಯುಳ್ಳವರೂ ಉಳಿದವರು ಅಗತ್ಯ ವಿದ್ಯಾರ್ಹತೆ ಪಡೆಯದವರೂ ಆಗಿದ್ದರು.

ಕೊಳ್ಳೇಗಾಲದಲ್ಲಿ :

ಏಳುವಂತಿಗೆ ಶಾಲೆಗಳ ಸ್ಥಾಪನೆ ೧೮೬೬ ರಲ್ಲಿ ಆಯಿತಾದರೂ ಕ್ರಮೇಣ ಎರಡಕ್ಕೆ ಇಳಿಯಿತು. ೧೮೮೧-೮೨ ರಲ್ಲಿ ಇದ್ದ ೩೨ ಶಾಲೆಗಳಲ್ಲಿ ೪೩೧ ವಿದ್ಯಾರ್ಥಿಗಳು ಪ್ರಾಥಮಿಕ ಮೂರು ತರಗತಿಗಳಲ್ಲಿದ್ದ ದಾಖಲೆ ಇದೆ. ೧೯೦೦ ರಲ್ಲಿ ಲೋಕಲ್

ಬೋರ್ಡ್ ಶಾಲೆಗಳಲ್ಲದೆ ಮೂರು ಅನುದಾನ ಪಡೆವ ಮಿಶನ್ ಶಾಲೆಗಳಿದ್ದವು. ಬೇರೆಲ್ಲಾ ರೀತಿಯ ಶಿಕ್ಷಣ–ಪ್ರಶಿಕ್ಷಣಕ್ಕಾಗಿ ಕೊಯಂಬತ್ತೂರು ಜಿಲ್ಲೆಯಲ್ಲಿನ ಇತರ ಶಾಲೆ–ಕಾಲೇಜುಗಳ ಮೇಲೆ ಕೊಳ್ಳೇಗಾಲದ ಜನ ಅವಲಂಬಿಸಬೇಕಾಗಿತ್ತು.

ಫೀಸೆಷ್ಟು ? ಅನುದಾನವೆಷ್ಟು ? :

ಕಾಲೇಜಿನಲ್ಲಿ ರೂ. ೨೫/– ಪ್ರತಿ ಟರ್ಮಿಗೂ ಮತ್ತು ಸರಕಾರಿ ಹೈಸ್ಕೂಲಿನಲ್ಲಿ ರೂ. ೨೨/– ಖಾಸಗಿ ಹೈಸ್ಕೂಲಿನಲ್ಲಿ ರೂ. ೧೮/– ಸರಕಾರಿ ಮಿಡ್ಲ್ ಶಾಲೆಯಲ್ಲಿ ರೂ. ೧೨/– ಖಾಸಗಿ ಮಿಡ್ಲ್ ಶಾಲೆಯಲ್ಲಿ ರೂ. ೯/– ವಾರ್ಷಿಕವಾಗಿಯೂ ಉಚ್ಚ ಪ್ರಾಥಮಿಕ ಶಾಲೆಯಲ್ಲಿ ರೂ. ೧/– ಕೆಳ ಪ್ರಾಥಮಿಕ ಶಾಲೆಯಲ್ಲಿ ೮ ಆಣೆ ಫೀಯೆಂದು ವಸೂಲು ಮಾಡುತ್ತಿದ್ದುದು ೧೮೮೪ ರಲ್ಲಿಯ ಬಳ್ಳಾರಿಯ ದಾಖಲೆಗಳಿಂದ ತಿಳಿದು ಬರುತ್ತದೆ. ಯಾವುದೇ ಶಾಲೆಗೆ ಪ್ರಾಥಮಿಕ ಹಂತದಿಂದ ಹೈಸ್ಕೂಲು ಹಂತದವರೆಗೆ ಪ್ರತಿ ಶಾಲೆಗೂ ಕ್ರಮವಾಗಿ ಶಿಕ್ಷಕರಲ್ಲಿ ಪ್ರತಿಯೊಬ್ಬರಿಗೆ ರೂ. ೩೬ ರಿಂದ ೧೨೦ ಗಳಂತೆ ಅನುದಾನ ನೀಡಲಾಗುತ್ತಿತ್ತು. ಇದು ೧೯೧೮ ರ ದಾಖಲೆಯ ಪ್ರಕಾರ.

ಶಿಕ್ಷಕರ ವೇತನ ಮತ್ತು ವೃತ್ತೀಯ ನೆಮ್ಮದಿ :

ಶಿಕ್ಷಕರ ವೇತನ ಹೇಗಿತ್ತು ? ಒಂದು ಮಾತು ನಿಜ. ವಿವಿಧ ಹಂತಗಳಲ್ಲಿ ಮೇಲೆ ಹೋದಂತೆಲ್ಲ ಅಧಿಕಾರಿ/ಶಿಕ್ಷಕರ ವೇತನಗಳಲ್ಲಿ ಇಂದು ವಿಪರೀತವೆಂದು ಕಾಣುವಷ್ಟು ವ್ಯತ್ಯಾಸವಿತ್ತು. ಉದಾಹರಣೆಗೆ ಮೊದಲನೇ ಗ್ರೇಡ್ ಕಾಲೇಜು ಪ್ರಿನ್ಸಿಪಾಲರ ಆರಂಭದ ವೇತನ ಮಾಸಿಕ ರೂ. ೪೦೦/– ಆದರೆ ಅದೇ ಕಾಲೇಜಿನ ಪ್ರೊಫೆಸರರ ವೇತನ ರೂ. ೨೫೦/– ಅಸಿಸ್ಟಂಟ್ ಪ್ರೊಫೆಸರರ ವೇತನ ರೂ. ೧೦೦/– ಇತ್ತು. ಹೈಸ್ಕೂಲು ಹೆಡ್ಮಾಸ್ಟರರ ಆರಂಭದ ವೇತನ ರೂ. ೧೦೦/– ಇದ್ದರೆ ಅಲ್ಲಿಯ ಇತರ ಶಿಕ್ಷಕರ ವೇತನ ರೂ. ೫೦/– ಸಾದಾ ಮಿಡ್ಲ್ ಶಾಲೆಯ ಹೆಡ್ಮಾಸ್ಟರರ ಆರಂಭದ ವೇತನ ರೂ. ೩೦/ ಆದರೆ ಶಿಕ್ಷಕರ ವೇತನ ರೂ. ೨೦/– ರಿಂದ ಆರಂಭ. ಕೆಳ ಪ್ರಾಥಮಿಕ ಶಾಲೆಯ ಹೆಡ್ಮಾಸ್ಟರರ ವೇತನ ರೂ. ೨೦/– ಇದ್ದರೆ ಅಲ್ಲಿಯದೇ ಶಿಕ್ಷಕರ ವೇತನ ರೂ. ೧೦/– ರಿಂದ ಮೊದಲ್ಗೊಳ್ಳುತ್ತಿತ್ತು. ಎಂದರೆ ಪ್ರಾಥಮಿಕ ಶಿಕ್ಷಕನ ವೇತನದ ನಲುವತ್ತು ಪಟ್ಟು ಒಂದನೇ ಗ್ರೇಡ್ ಕಾಲೇಜಿನ ಪ್ರಿನ್ಸಿಪಾಲರ ವೇತನವಿರುತ್ತಿತ್ತು. ಪ್ರಾಥಮಿಕ ಶಿಕ್ಷಕನ ವೇತನ ಇಷ್ಟು ಕಡಿಮೆಯಿದ್ದರೂ ಅತಿಗೌರವ ದಿಂದ ಜೀವನ ನಡೆಸಲು ಧಾರಾಳ ಸಾಲುತ್ತಿತ್ತು ಎನ್ನುವುದು ಹಳಬರ ಅಭಿಪ್ರಾಯ. ಹೆಚ್ಚಿನ ಪರಿಣತಿ ಪಡೆದು ಮೇಲಿನ ಹುದ್ದೆಗೆ ಪ್ರಯತ್ನಿಸುವುದಕ್ಕೆ ಇದೂ ಒಂದು ಕಾರಣವಿರಬಹುದೇ ಎಂಬುದು ವಿವೇಚಿಸಬೇಕಾದುದು, ಅದಿರಲಿ. ಜೀವನಾಗತ್ಯ ವಸ್ತು ವೈಶಿಷ್ಟ್ಯಗಳ ಬೆಲೆ ಮತ್ತು ಇದು–ಬೇಕು–ಇದು–ಬೇಡ ಎನ್ನುವ ದೃಷ್ಟಿಕೋನ-ಗಳಲ್ಲಿಯೂ ಇಂದಿಗೂ ಅಂದಿಗೂ ಇರುವ ಬಹು ವ್ಯತ್ಯಾಸದ ಹಿನ್ನೆಲೆಯಲ್ಲಿ ಅವನ್ನು

ಪರಿಗಣಿಸುವುದು ಅಗತ್ಯ. ಆದ್ದರಿಂದ ವೇತನ ವ್ಯತ್ಯಾಸ ಅಂದಿಗಿಂತ ಇಂದು ಕಡಿಮೆ ಎಂಬ ತೃಪ್ತಿಯಿಂದ ಹೆಚ್ಚಿನ ವಿವೇಚನೆ ಬೇಡ.

ಶಿಕ್ಷಣ-ವಿಚಾರಗಳ ಸಂಘಟ್ಟನೆ-ಸರಪಳಿ :

ಹದಿನೆಂಟುನೂರಾ ಇಪ್ಪತ್ತೆರಡರಲ್ಲಿ ಸರ್ ಥಾಮಸ್ ಮುನ್ರೋ ತನ್ನ ವರದಿಯಲ್ಲಿ ಭಾರತದಲ್ಲಿ ಪ್ರಜೆಗಳಿಗೆ ತಂತಮ್ಮ ಶಾಲೆಗಳನ್ನು ಸರಿಯೆನಿಸಿದ ರೀತಿಯಲ್ಲಿ ನಡೆಸುವುದಕ್ಕೆ ಅನುವು ಮಾಡಿಕೊಡುವುದಲ್ಲದೆ ಯಾವುದೇ ಕಾರಣದಿಂದ ಕಾಲಾಂತರದಲ್ಲಿ ತಪ್ಪಿಹೋದ ಆರ್ಥಿಕ ಮೂಲಗಳನ್ನು ಮರುಸ್ಥಾಪಿಸಬೇಕು— ಎಂದು ಅಭಿಪ್ರಾಯಪಟ್ಟರು. ಅಂದು ಸ್ವದೇಶೀ ಶಾಲೆಗಳಲ್ಲಿ ಕಲಿಸುವ ರೀತಿ ಹೇಗಿತ್ತು ? ಬಳ್ಳಾರಿಯ ಕಲೆಕ್ಟರ್ ಎ.ಡಿ. ಕ್ಯಾಂಪ್‌ಬೆಲ್ ೧೮೨೩ರಲ್ಲಿ ಬರೆದ ಪತ್ರ ಈ ವಿಚಾರದಲ್ಲಿ ಉಪಯುಕ್ತ. ಶ್ರೀ ಗಣಪತಿಯನ್ನು ಪ್ರಾರ್ಥಿಸಿ ಗುರುವಿಗೆ ಯಥಾಶಕ್ತಿ ದಕ್ಷಿಣೆಯೊಂದಿಗೆ, ಮಣೆಯ ಮೇಲೆ ಹರಡಲ್ಪಟ್ಟ ಅಕ್ಕಿಯ ಮೇಲೆ ಬರೆಸುವುದರೊಂದಿಗೆ ಐದನೇ ವರ್ಷದಲ್ಲಿ ಮಕ್ಕಳ ವಿದ್ಯಾರಂಭ. ಸಾಮಾನ್ಯವಾಗಿ ನಂತರ ಐದು ವರ್ಷಗಳ ವರೆಗೆ ಅಭ್ಯಾಸ ಸಾಗುತ್ತಿತ್ತು; ಅನುಕೂಲವಿದ್ದವರು ೧೪–೧೫ ವರ್ಷಗಳ ವರೆಗೂ ಸಾಗಿಸುತ್ತಿದ್ದರು. ಗುರು ಸಮ್ಮುಖದಲ್ಲಿ ಪ್ರಾತಃ ಆರು ಗಂಟೆಗೇ ಕಲಿಯುವಿಕೆ ಪ್ರಾರಂಭ: ಮೊದಲು ಬಂದವನಿಗೆ ಅಂಗೈಯಲ್ಲಿ ' ಸರಸ್ವತಿ ' ಬರೆಹದ ಗೌರವ; ನಂತರ ಬಂದವರಿಗೆ ಶೂನ್ಯ, ಛಡಿ ಏಟು ಇತ್ಯಾದಿ. ತುಂಟರಿಗೆ ಜಂತಿಗೆ ನೇತು ಬಿಡುವ, ಕಾಲಿಗೆ ಕೊರಡು-ಸರಪಳಿಯಿಂದ ಕಟ್ಟುವ ಪದ್ಧತಿಗಳು ಇತ್ತೀಚಿನ ವರೆಗೂ ಇದ್ದವು. ಹೆಚ್ಚು ಕಲಿತ ವಿದ್ಯಾರ್ಥಿಯ ಮೂಲಕ ಕಡಿಮೆ ಕಲಿತವರಿಗೆ ಬೋಧಿಸುವ ಕ್ರಮೇಣ ಡಾ॥ ಬೆಲ್‌ರ ಮಾನಿಟರ್ ಪದ್ಧತಿ (೧೭೮೬) ಯೆಂದು ಇಂಗ್ಲೆಂಡಿಗೂ ವಲಸೆಹೋದ ಹೆಚ್ಚು ವಿದ್ಯಾರ್ಥಿಗಳಿಗೆ ಓರ್ವ ಶಿಕ್ಷಕನಿಂದಲೇ ನಡೆಸಬಹುದಾದ ಕಡಿಮೆ ಖರ್ಚಿನ ಶಿಕ್ಷಣ ಕ್ರಮ ಭಾರತದ್ದೇ. ಹರಡಲ್ಪಟ್ಟ ಉಸುಗು ಅಥವಾ ಅಕ್ಕಿ, ಹಲಗೆ-ಬಳಪ, ತಾಳೆಗರಿ— ಕಂಠಿ, ಪೇಪರ-ಟಾಕು ಇತ್ಯಾದಿ ಬರೆಯುವ ಸಾಮಗ್ರಿಗಳು ಪ್ರಚಲಿತ. ಅಕ್ಕಿ ಮತ್ತು ಇದ್ದಲಿನ ಏಕ ರೀತಿಯ ಮಿಶ್ರಣಲೇಪಿತ ಹಲಿಗೆ ಮತ್ತು ಗಂಜಿಯಿಂದ ದಪ್ಪಗೊಳಿಸಿದ ಇದ್ದಲಿ ಲೇಪಿತ ವಸ್ತ್ರ ಇವೂ ಕೆಲವೆಡೆ ಉಪಯೋಗದಲ್ಲಿದ್ದವು.

ಅಕ್ಷರ ಜ್ಞಾನ, ಪದರಚನೆ ಮತ್ತು ಸಂಪನ್ನತೆ, ಗಣಿತ, ದುಡ್ಡು ಲೆಕ್ಕಾಚಾರ, ಅಳತೆ, ಅರ್ಧಗಿರ್ಧ ಭಿನ್ನಾಂಕಗಳ ಕಲಿಕೆ ದೈನಂದಿನ ಪರಿಪಾಠದಲ್ಲಿದ್ದವು. ಗುಂಪು ಬಾಯಿಪಾಠ, ವಿವಿಧ 'ಮೋಡಿ' ಅಕ್ಷರಾಭ್ಯಾಸ, ಅಂಗಡಿ ವ್ಯವಹಾರ, ಕಾವ್ಯವಾಚನ-ಶ್ರವಣ ಇವೂ ನಿತ್ಯದ ಕಲಿಕೆಯ ಅಂಶಗಳೇ. ರಾಮಾಯಣ, ಮಹಾಭಾರತ ಮತ್ತು ಭಾಗವತಗಳಲ್ಲದೆ ವಿಶ್ವಕರ್ಮಪುರಾಣ, ಬಸವ ಪುರಾಣ, ಗಿರಿಜಾಕಲ್ಯಾಣ, ರಾಘವಾಂಕನ ಕಾವ್ಯ, ಅಮರ, ಶಬ್ದಮಂಜರಿ, ವ್ಯಾಕರಣ, ಆಂಧ್ರ ದೀಪಿಕಾ ಇತ್ಯಾದಿ ಅಗತ್ಯವಿದ್ದಲ್ಲೆಲ್ಲ ಅಭ್ಯಾಸ ಮಾಡಲ್ಪಡುತ್ತಿದ್ದವು. ಆದರೆ ಪ್ರಚಲಿತವಿದ್ದ ಕೈ ಬರಹದ

ಪ್ರತಿಗಳು ಲೆಕ್ಕವಿಲ್ಲದಷ್ಟು ತಪ್ಪುಗಳಿಂದ ಕಲುಷಿತವಾಗಿದ್ದವು. ಗಿಳಿ ಬಾಯಿಪಾಠದ ಮೂಲಕ ಅರ್ಥವರಿಯದ ಸ್ಪಷ್ಟೋಚ್ಚಾರ ಮಾತ್ರ ಶಿಕ್ಷಣದ ಕೊಡುಗೆಯಾಗಿತ್ತು. ಹೀಗೆ ಪಠ್ಯಪುಸ್ತಕಗಳ ನಮೂನೆ ಮತ್ತು ದೋಷಪೂರ್ಣತೆ, ಬೋಧನಾ ವಿಷಯಗಳ ಅನುಪಯುಕ್ತತೆ ಮತ್ತು ಯೋಗ್ಯ ಶಿಕ್ಷಕರ ಅಭಾವ— ಇವು ಸ್ವದೇಶೀ ಮೂಲದ ಶಾಲೆಗಳ ಅಂದಿನ ಕೊರತೆಗಳಾಗಿದ್ದವು.

ಬಳ್ಳಾರಿಯಲ್ಲಿ ಜೆ. ರಿಚರ್ಡ್ ಎಂಬ ಶಾಲಾ ತಪಾಸಣಾಧಿಕಾರಿ ೧೮೫೭ ರಲ್ಲಿ ನೀಡಿದ ವರದಿಯಲ್ಲಿ ನೌಕರಿಯ ಆಸೆಗಾಗಿ ನಿಜವಾದ ಕಲಿಕೆಯಿಲ್ಲದ ಅರ್ಥಹೀನ ಇಂಗ್ಲೀಷ ವ್ಯಾಮೋಹ ಭಾರತೀಯರಲ್ಲಿ ಹುಟ್ಟಿರುವುದನ್ನು ಪ್ರಸ್ತಾಪಿಸಿ, ದೇಶೀಯ ಪ್ರಯತ್ನದಿಂದ ಶಿಕ್ಷಣ ಬಹುಕಾಲ ಹಿಡಿಯಬಹುದಾದುದರಿಂದ, ಬ್ರಿಟಿಷ ಸರಕಾರ ಸ್ಥಳೀಯ ಭಾಷೆ ಮತ್ತು ಶಿಕ್ಷಣದ ಬಗ್ಗೆ ತನ್ನ ಸ್ಪಷ್ಟ ಮಾರ್ಗದರ್ಶನ ನೀಡಲೆಂದು ಕೋರಿಕೆ ಮಾಡಿದ ದಾಖಲೆ ಇದೆ. ಸರಕಾರದ ೧೮೫೭ ರ ಕೆಳಗಣ ಸೇವಾ ಹುದ್ದೆ-ಗಳಿಗೆ ದೇಶೀಯ ಜನರನ್ನು ನೇಮಿಸುವಾಗ ಅಶಿಕ್ಷಿತರಿಗಿಂತ ಶಿಕ್ಷಿತ ವ್ಯಕ್ತಿಗೆ ಆದ್ಯತೆ ನೀಡಿ, ಆಯಾ ಸೇವಾ ಕಾರ್ಯೋದ್ದೇಶ ಪೂರೈಸುವಲ್ಲಿ ಅಗತ್ಯ ಜ್ಞಾನ ಕುಶಲತೆ ಹೊಂದಿರುವನೋ ಇಲ್ಲವೋ ಎಂದು ಪರೀಕ್ಷಿಸಬೇಕೆಂದೂ ತೋರಿಕೆಗೆ ಇಂಗ್ಲೀಷ ಕಲಿತವನಿಗಿಂತ ಭಾಷಾ ವ್ಯಾಕರಣ ತಿಳಿದು ತನ್ನ ಭಾಷೆಯನ್ನೇ ಆಡುವ ವ್ಯಕ್ತಿಯನ್ನು ಅಪೇಕ್ಷಿಸಬೇಕೆಂದೂ ನೀಡಿದ ಆಜ್ಞೆ ಈ ದಿಶೆಯಲ್ಲಿ ಅರ್ಥಪೂರ್ಣ. ಇಂದೂ ಕೂಡ ನಮ್ಮ ಶಿಕ್ಷಣದಲ್ಲಿ ಕಂಡುಬರುವ ಇಂಗ್ಲೀಷ ಭಾಷಾಪ್ರೀತಿ ಕೆಲಸಕ್ಕಾಗಿ ಭೀತಿಯಿಂದ ಹುಟ್ಟಿಕೊಂಡುದಲ್ಲವೇ ?

ಅಂದಿನ ದಿನಗಳಲ್ಲಿ ಆಂಗ್ಲಭಾಷೆ ಮತ್ತು ತಾಯ್ನುಡಿ ಅಥವಾ ಅಥವಾ ದೇಶ-ಭಾಷಾ ಮಾಧ್ಯಮಗಳ ನಡುವೆ ತಾಕಲಾಟದಲ್ಲಿ ಯಾವುದಕ್ಕೆ ಶಿಕ್ಷಣದಲ್ಲಿ ಮಹತ್ವ ನೀಡಬೇಕು ಎನ್ನುವುದೂ ತೀವ್ರ ಚರ್ಚೆಗೊಳಗಾದ ವಿಷಯ. ಬುನಾದಿ ಭದ್ರವಲ್ಲ-ದಿದ್ದರೂ ತೀವ್ರ ಫಲ ನೀಡುವ 'ಇಂಗ್ಲೀಷ' ಭಾಷೆ ಮಾಧ್ಯಮವನ್ನೇ ಮಹತ್ವ ನೀಡಿ-ದುದು ಭಾರತೀಯ ಮನೋಭಾವಕ್ಕೊಂದು ಉದಾಹರಣೆ. ಅಲ್ಲದೆ ಶಿಕ್ಷಣಾಂತ್ಯದಲ್ಲಿ ನೌಕರಿ ಸಿಗುವಂತೆ ಸಂಬಂಧವಿರಬೇಕು ಎನ್ನುವುದೂ ಬಲಗೊಂಡ ಅಭಿಪ್ರಾಯ ವಾಗಿತ್ತು. ೧೮೬೧ ರಲ್ಲಿ ಶಿಕ್ಷಣ ನಿರ್ದೇಶಕರನ್ನು ಸೇವಾ ಪರೀಕ್ಷೆಗಳ ಕಮಿಶನರ್ ಆಗಿ ಮಾಡಿದುದೂ ಈ ದಿಶೆಯಲ್ಲಿರಿಸಿದ ಮೊದಲ ಹೆಜ್ಜೆ. ಅಲ್ಲದೆ ೧೮೫೭ ರಲ್ಲಿ ಮದ್ರಾಸು ವಿಶ್ವವಿದ್ಯಾಲಯದ ಸ್ಥಾಪನೆಯಾದಂದಿನಿಂದ ನೌಕರಿಗಾಗಿ ಪರೀಕ್ಷೆ, ಪರೀಕ್ಷೆಗಾಗಿ ಕಲಿಕೆ, ಕೆಳಗಣ ಪರೀಕ್ಷೆ ಮೇಲಿನ ಪರೀಕ್ಷೆಗಾಗಿ ಎನ್ನುವ ವಿಚಿತ್ರ ಮನೋ ಭಾವನೆ ಬಲಗೊಂಡು ಇಂದು ಈ ಕಲಿಕೆ— ಪರೀಕ್ಷೆ–ನೌಕರಿಗಳ ಸಂಬಂಧವೇ ನಮ್ಮನ್ನು ಪೀಡಿಸುತ್ತಿರುವುದನ್ನು ಕಾಣುತ್ತೇವೆ.

ಸಾರ್ವಜನಿಕ ಶಿಕ್ಷಣ ಜಾಲವನ್ನು ಉಳಿಸಿ ಬೆಳೆಸಲು ಅಗತ್ಯ ಆರ್ಥಿಕ ಮೂಲ ಗಳನ್ನು ನೀಡುವ ಧೋರಣೆಯು ಕೆಲ ಹಂತಗಳಲ್ಲಿ ಬೆಳೆದಿರುವುದನ್ನು ಕಾಣುತ್ತೇವೆ. ಶಾಲೆ ಸ್ಥಾಪಿಸಲು ಮತ್ತು ನಡೆಸಲು ವಂತಿಗೆ ಶೇಖರಣೆಗೆ ಅನುಮತಿ (೧೮೫೩), ಮಿಶನರಿ ಸೊಸಾಯಿಟಿಗಳಿಗೆ ಅನುಮತಿ (೧೮೧೩), ವಿದ್ಯಾರ್ಥಿಗಳ ಸಂಖ್ಯೆಗನುಗುಣ ವಾಗಿ ತಲೆಗಿಷ್ಟೆಂಬಂತೆ ಧನ ಸಹಾಯ (೧೮೫೬), ಶಾಶ್ವತ ವಿತ್ತೀಯ ಕೊಡುಗೆ (೧೮೫೩), ವಾರ್ಷಿಕ ಅನುದಾನ ಪದ್ಧತಿ ಹಾಗೂ ಫಲಿತಾಂಶದಿಂದಾಧರಿತ ಶಿಕ್ಷಕನ ಆಂಶಿಕ ವೇತನ ನೀಡುವ ಪದ್ಧತಿ (೧೫೫೪)—ಇವು ಗಮನ ಸೆಳೆಯುವಂತಹ ಬದ-ಲಾವಣೆಗಳ ಸರಪಳಿ. ಇಂದಂತೂ ಸರಕಾರವೇ ಹೈಸ್ಕೂಲು ಮಟ್ಟದವರೆಗಿನ ವೆಚ್ಚವೆಲ್ಲ-ವನ್ನೂ ನೋಡಿಕೊಳ್ಳುತ್ತದೆಯಲ್ಲವೇ ?

ಶಿಕ್ಷಣದ ವಿವಿಧ ಹಂತಗಳಲ್ಲಿ ಮುಖ್ಯವಾಗಿ ಪ್ರಾಥಮಿಕ, ಮಾಧ್ಯಮಿಕ, ಪ್ರೌಢ ಶಾಲಾ ಮತ್ತು ಕಾಲೇಜು ಹಂತಗಳಲ್ಲಿ ಯಾವುದೇ ಪರೀಕ್ಷೆ ಪಾಸಾಗುವ ವ್ಯಕ್ತಿಗಳಲ್ಲಿ ಬಯಸಿದವರನ್ನು ಮತ್ತು ಮುಂದೆ ಹೋಗಲಾರದವರನ್ನು ನೌಕರಿಗೆ ತಿರುಗಿಸುವ ವಿಧಾನಗಳು ಬೆಳೆದುದನ್ನೂ ಕಾಣಬಹುದು.

ಅಲ್ಲದೆ ಓದಿ ಕಲಿಯುವ ಪಠ್ಯ ವಿಷಯಗಳಲ್ಲದೆ ಮಾಡಿ ಕಲಿಯುವ ಕಾರ್ಯ-ಕ್ಷೇತ್ರಗಳೂ ಸಾರ್ವಜನಿಕ ಶಿಕ್ಷಣದಲ್ಲಿ ತರುವ ಪ್ರಯತ್ನದ ಸುಳಿವು ಇದೆ. ಭಾಷೆ, ಗಣಿತ, ಭೂಗೋಳ, ಚರಿತ್ರೆ, ಇತ್ಯಾದಿ ವಿಷಯಗಳ ಜೊತೆಗೆ ಶಾರ್ಟಹೇಂಡ್, ಹೊಲಿಗೆ–ಕಸೂತಿ, ವಾಚ್‌ರಿಪೇರಿ, ವ್ಯವಸಾಯ, ನೇಯ್ಗೆ, ಮುದ್ರಣ ಕಲೆ ಇತ್ಯಾದಿ ಗಳಲ್ಲಿ ತರಬೇತಿ ನೀಡುವುದೂ ಸೇರಿಕೊಂಡಿತು.

ಶಿಕ್ಷಕರ ತರಬೇತಿಯೂ ಈ ರೀತಿಯ ವೈವಿಧ್ಯತೆಯನ್ನು ಈಗಾಗಲೇ ವಿವರಿಸ ಲಾಗಿದೆ. ಅಲ್ಲದೆ ಅನುಕೂಲವಿದ್ದಲ್ಲೆಲ್ಲ ಹುಡುಗಿಯರಿಗೆ ಮನೆಯಲ್ಲೇ ಶಿಕ್ಷಣ ಕ್ರಮವೂ ೧೫೫೦ ರ ದಶಕದಲ್ಲಿತ್ತು. ಸಾರ್ವಜನಿಕ ಶಿಕ್ಷಣದಲ್ಲಿ ನಂತರದ ಬೆಳವಣಿಗೆ ಗಳಿಗೆ ಕಾರಣವಾದ ತಿಲಕಪ್ರಾಯ ವರದಿ ಚಾರ್ಲ್ಸ್ ವುಡ್‌ರದ್ದು. ಒತ್ತಡದಲ್ಲಿ ಒಂದಾಗುವ ಗುಣವುಳ್ಳ ನಮ್ಮನ್ನು ಒಂದುಗೂಡಿಸಿ ಸರಕಾರವೆಂಬ ಬೃಹತ್‌ಹಂದರ ರಚಿಸಿದ ಕೀರ್ತಿ ಮಾತ್ರವಲ್ಲ ಸಾರ್ವಜನಿಕ ಶಿಕ್ಷಣ ಕ್ರಮವನ್ನು ಕ್ರಮೇಣ ರೂಪಿಸಿದ ಗೌರವವೂ ಕಾಲಕ್ರಮವಶಾತ್ ಆದರೂ ಬ್ರಿಟಿಷರಿಗೇ ಸಲ್ಲಬೇಕಲ್ಲವೇ ? ಶಿಕ್ಷಣ–ಜೀವನಗಳ ನಡುವೆ ಸಮರಸ ಸಾಧನೆಯ ವೈಫಲ್ಯವೇ ಅಂದಿನಿಂದ ಇಂದಿನವರೆಗೂ ನಮ್ಮೊಡನಿರುವ ಶೈಕ್ಷಣಿಕ ಕುತ್ತು ಎನ್ನದೇ ಗತ್ಯಂತರವಿಲ್ಲ.

ಬ್ರಿಟಿಷ ಭಾರತದ ದಾಖಲೆಗಳಲ್ಲಿ ದೊರೆಯುವ ವಿವರಗಳ ಆಧಾರದ ಮೇಲಿಂದ ಕಟ್ಟಿದ ನಿರೂಪಣೆ ನಮ್ಮ ಶಿಕ್ಷಣದ,ವಿದ್ಯಾಗುರುಗಳ,ಮತ್ತು ಶಿಕ್ಷಣಕ್ಕಾಗಿ ಸೇವೆ ಸಲ್ಲಿಸಿದ ಪರಂಪರೆಯ ಚರಿತ್ರೆಯಾಗದು. ಈ ದಿಶೆಯಲ್ಲಿ ಸುಮಾರು ಐದುನೂರು ವರುಷಗಳ

ಶೈಕ್ಷಣಿಕ ಇತಿಹಾಸ ಆಯಾ ಕಾಲದಲ್ಲಿ ಬಾಳಿ ಮೆರೆದ ಡೆಪ್ಯೂಟಿ ಚೆನ್ನಬಸಪ್ಪನವರಂಥ ವ್ಯಕ್ತಿಗಳ ಸುತ್ತ ಹೆಣೆದುಕೊಂಡಿದ್ದು ಹೆಚ್ಚಿನ ಸಂಶೋಧನೆಯ ಮತ್ತು ಸಂಪಾದನೆಯ ಅಗತ್ಯವಿದೆ. ಈ ಮಹನೀಯರ ಸ್ಮರಣೆ ಇನ್ನೂ ಮುಂದಿನ ವಿಸ್ಮರಣೆಯಿಂದ ನಮ್ಮನ್ನು ತಪ್ಪಿಸೀತೇ? ಇದು ಆಶಯ.

ಗ್ರಂಥಋಣ

ದಿವಾಕರ, ಆರ್. ಆರ್. (ಸಂಪಾದಿತ), *Karnataka through the Ages*, ಮೈಸೂರು ಸರಕಾರ, ಬೆಂಗಳೂರು, ೧೯೬೮.

ದೇವೇಗೌಡ, ಎ. ಸಿ., ವೀರಣ್ಣಗೌಡ, ಭವಾನಿರಾವ್, ಬಿ., ಮತ್ತು ಲಕ್ಷ್ಮೀಬಾಯಿ. History of Education in Madras Karnataka Districts of Bellary and South Kanara and Kollegal Taluk. ವಿದ್ಯಾ ಮತ್ತು ಯುವಜನ ಸೇವಾ ಇಲಾಖೆ, ಕರ್ನಾಟಕ ಸರಕಾರ, ಬೆಂಗಳೂರು, ೧೯೭೭.

ಬಸು, ಎ. ಎನ್. (ಸಂಪಾದಿತ), Indian Education in Parliamentary Papers, Part I, ಏಸಿಯಾ ಪಬ್ಲಿಷಿಂಗ್ ಹೌಸ್, ಬೊಂಬಾಯಿ, ೧೯೫೨.

ಸಯ್ಯಿದಾಯಿನ್, ಕೆ. ಜಿ. (ಸಂಪಾದಿತ) *The Fourth Indian Yearbook of Education*, ರಾಷ್ಟ್ರೀಯ ಶೈಕ್ಷಣಿಕ ಅನುಸಂಧಾನ ಮತ್ತು ಪ್ರಶಿಕ್ಷಣ ಪರಿಷತ್ತು, ನವದೆಹಲಿ, ೧೯೭೩.

'ಎರಡು ದಶಕಗಳ ಕಾಲ 'ಡೆಪ್ಯುಟಿ' ಶಿಕ್ಷಣಾಧಿಕಾರಿಯಾಗಿ ಶಿಕ್ಷಣ ಕ್ಷೇತ್ರದಲ್ಲಿ ವಿಶೇಷ ಸಾಧನೆಗೈದ ಚೆನ್ನಬಸಪ್ಪನಲ್ಲಿ ಎದ್ದು ತೋರುವ ಗುಣಗಳೆಂದರೆ ಕೆಚ್ಚೆದೆ ಮತ್ತು ಕನ್ನಡ ನಿಷ್ಠೆ.... ಚುರುಕು ಬುದ್ಧಿಯ ಚನ್ನಬಸಪ್ಪನು ಪುಣೆಯಲ್ಲಿಯ ಸಾಮಾಜಿಕ ಸಾಂಸ್ಕೃತಿಕ ವಾತಾವರಣದಿಂದ ಸ್ಫೂರ್ತಿ ಪಡೆದ ಕನ್ನಡಿಗರಲ್ಲಿ ಮೊದಲಿಗನಾಗಿ ಧಾರವಾಡಕ್ಕೆ ಹಿಂತಿರುಗಿದನು.

'ಹೊಸಗನ್ನಡ ಅರುಣೋದಯ'ದಲ್ಲಿ

ಡಾ॥ ಶ್ರೀನಿವಾಸ ಹಾವನೂರ

೧೯ನೆಯ ಶತಮಾನದಲ್ಲಿ ಕೊಡಗು ಪ್ರದೇಶದಲ್ಲಿ ಶಿಕ್ಷಣ

—ಆಯ್. ಎಸ್. ಬಿದರಿ

ಕೊಡಗಿನಲ್ಲಿ ಆದ ಶೈಕ್ಷಣಿಕ ಅಭಿವೃದ್ಧಿಯನ್ನು ಚೆನ್ನಾಗಿ ತಿಳಿದುಕೊಳ್ಳ-ಬೇಕಾದರೆ ಅದರ ವಿಶಿಷ್ಟವಾದ ಭೌಗೋಲಿಕ ಸ್ಥಾನ, ವಿಸ್ತಾರ ಹಾಗೂ ಇತಿಹಾಸದ ಸಂಕ್ಷಿಪ್ತ ಜ್ಞಾನವಾದರೂ ಇರುವದು ಅವಶ್ಯವೆನಿಸುತ್ತದೆ. ಕರ್ನಾಟಕ ರಾಜ್ಯದ ನೈಋತ್ಯ ದಿಕ್ಕಿನಲ್ಲಿರುವ ಸಹ್ಯಾದ್ರಿಯ ಎತ್ತರ ಪ್ರದೇಶವಾದ ಕೊಡಗು ನಮ್ಮ ರಾಜ್ಯದಲ್ಲಿ ಅತ್ಯಂತ ಚಿಕ್ಕದಾದ ಆದರೆ ರಮಣೀಯವಾದ ಜಿಲ್ಹೆಯಾಗಿದೆ. ನಿಸರ್ಗ ಸೌಂದರ್ಯದ ನೆಲೆವೀಡಾದ ಈ ನಾಡು ಶೂರರ, ಧೀರರ, ವಿದ್ಯಾವಂತರ ಪ್ರದೇಶವೂ ಎನಿಸಿದೆ. ಉತ್ತರದ ಗಡಿಯಲ್ಲಿರುವ ಹೇಮಾವತಿ ನದಿಯಿಂದ ದಕ್ಷಿಣದಲ್ಲಿರುವ ಬ್ರಹ್ಮ-ಗಿರಿಯವರೆಗಿನ ಈ ನಾಡಿನ ಉದ್ದಳತೆಯು ೯೬ ಕಿಲೋಮೀಟರ ಇದ್ದರೆ, ಅಗಲ-ಳತೆಯು ಪಶ್ಚಿಮದಲ್ಲಿರುವ ಸಂಪಾಜೆಯಿಂದ ಪೂರ್ವಕ್ಕಿರುವ ಕುಶಾಲನಗರಕ್ಕೆ ೬೪ ಕಿ. ಮಿ. ಇರುತ್ತದೆ. ಕೊಡಗಿನ ಒಟ್ಟು ಕ್ಷೇತ್ರವು ೪೧೦೨ ಕಿ. ಮಿ. ೧೯೮೧ ನೇ ಜನಗಣತಿಯನ್ವಯ ಕೊಡಗು ಜಿಲ್ಹೆಯ ಜನಸಂಖ್ಯೆಯು ೪೬೦೧೬೪ ಇರುತ್ತದೆ. ಪರ್ವತ ಪ್ರದೇಶವಾದುದರಿಂದ ಮಳೆಯು ಸಾಕಷ್ಟು ಆಗುತ್ತದೆ. ಪ್ರತಿ ಕಿಲೋ ಮೀಟರಿಗೆ ಜನಸಂಖ್ಯೆಯ ಸಾಂದ್ರತೆಯು ೧೧೨ ಇದ್ದು ಇಡೀ ಕರ್ನಾಟಕದಲ್ಲಿ ಉತ್ತರ ಕನ್ನಡ ಜಿಲ್ಹೆಯ ನಂತರ ಇದುವೇ ಅತಿ ಕಡಿಮೆ ಜನಸಂಖ್ಯಾ ಸಾಂದ್ರತೆಯುಳ್ಳ ಜಿಲ್ಹೆಯೆನಿಸಿದೆ. ಸಾಕ್ಷರತೆಯ ಪ್ರಮಾಣವು ೪೯.೯೦% ಇದ್ದು ಇಡೀ ರಾಜ್ಯದಲ್ಲಿ ಮೂರನೇ ಸ್ಥಾನವನ್ನು ಪಡೆದಿರುತ್ತದೆ.

ರಾಜ್ಯಗಳ ಪುನರ್ಘಟನೆಯ ಪರಿಣಾಮವಾಗಿ ಇಡೀ ಕೊಡಗು ಪ್ರದೇಶವು ೧೯೫೬ ರಲ್ಲಿ ವಿಶಾಲ ಮೈಸೂರಲ್ಲಿ (ಈಗಿನ ಕರ್ನಾಟಕ) ವಿಲೀನವಾಯಿತು. ಪ್ರಾಚೀನ ಕಾಲದಿಂದ ಕೊಡಗು ರಾಜಕೀಯವಾಗಿ ಸ್ವತಂತ್ರ ಅಸ್ತಿತ್ವವನ್ನು ಪಡೆದಿತ್ತು. ವಿಲ್ಕ್ಸ (Wilks) ಮತ್ತು ರಾಯಿಸ್ (Rice) ಅವರು, ಕೊಡಗಿನಲ್ಲಿ ಕ್ರಿ. ಶಕೆಯ ಆರಂಭದಲ್ಲಿ ಮತ್ತು ಅದಕ್ಕೂ ಮೊದಲು ಕದಂಬರು ಆಳುತ್ತಿದ್ದರೆಂದು ಅಭಿಪ್ರಾಯ ಪಡು-ತ್ತಾರೆ. ಐತಿಹಾಸಿಕವಾಗಿ ಕ್ರಿ ಶ. ೨ ನೆಯ ಶತಮಾನದಲ್ಲಿ ತಮಿಳು ಕವಿಗಳು,

---

ಸಾ. ವಿ. ಇಲಾಖೆಯಲ್ಲಿ ಧಾರವಾಡ ಜಿಲ್ಹೆಯ ಉಪನಿರ್ದೇಶಕರೆಂದು ನಿವೃತ್ತರಾದ ಶ್ರೀ ಆಯ್. ಎಸ್. ಬಿದರಿ ಅವರು ನುರಿತ ಬರಹಗಾರರು, ಭಾಷಾಂತರ ಪರಿಣತರು; ಶ್ರೇಷ್ಠ ಸಾಹಿತಿಗಳು; ಒಳ್ಳೆಯ ಕವಿಗಳು; ಶಿಕ್ಷಣ ತಜ್ಞರು; ಉತ್ತಮ ಆಡಳಿತಗಾರರು. ಈಗ ಧಾರವಾಡ-ದಲ್ಲಿ ಸಾಧನಕೇರಿಯಲ್ಲಿ ವಾಸಿಸುತ್ತಿದ್ದಾರೆ.

ಪಾಂಡೈನ್ ಸಾಮ್ರಾಜ್ಯವು ಕೊಡಗಿನಿಂದ ಬಂಗಾಲ ಉಪಸಾಗರದವರೆಗೆ ಹಬ್ಬಿದ್ದಿತೆಂದು ಹೇಳುತ್ತಾರೆ. ಕ್ರಿ. ಶ. ನಾಲ್ಕನೇ ಶತಮಾನದಿಂದ ೧೬ ನೇ ಶತಮಾನದ ವರೆಗಿನ ಕೊಡಗಿನ ಇತಿಹಾಸವನ್ನು ಶಿಲಾಲಿಪಿಗಳಿಂದ ಮಾತ್ರ ಅರಿತುಕೊಳ್ಳಬಹುದು. ಕೊಡಗು ಗಂಗರ ಸಾಮ್ರಾಜ್ಯದಲ್ಲಿ ಸೇರಿತ್ತೆಂದು ತಿಳಿಯುತ್ತದೆ. ಚಾಂಗಲ್ವರು ಗಂಗರ ಸಾಮಂತರಾಗಿ ಕೊಡಗಿನ ಉತ್ತರ ಮತ್ತು ದಕ್ಷಿಣ ಭಾಗಗಳನ್ನು ಮೊದಲು ಆಳಿದರೆಂದೂ ಮುಂದೆ ಚೋಳರ ಮತ್ತು ಹೊಯ್ಸಳರ ಸಾಮಂತರಾಗಿ ಅದೇ ಪ್ರದೇಶವನ್ನು ಆಳಿದರೆಂದೂ ಕಂಡು ಬರುತ್ತದೆ. ಅವರು ಕ್ರಿ. ಶ. ೫ ನೇ ಶತಮಾನದಿಂದ ೧೩ ನೇ ಶತಮಾನದವರೆಗೆ ಅಲ್ಲಿ ಆಳಿದರು.ಇವರು ೧೪ ನೇ ಶತಮಾನದಲ್ಲಿ ಉತ್ತರದಿಂದ ಬಂದ ಮುಸಲ್ಮಾನ ಸೈನಿಕರಿಂದ ಸೋಲಿಸಲ್ಪಟ್ಟರು. ಮುಂದೆ ಈ ನಾಡು ಸುಮಾರು ಒಂದು ನೂರು ವರ್ಷಗಳವರೆಗೆ ಚಿಕ್ಕ ಚಿಕ್ಕ ಸೇನಾನಾಯಕರಿಂದ ಆಳಲ್ಪಟ್ಟಿತ್ತೆಂದು ತಿಳಿಯುತ್ತದೆ. ಅವರಿಗೆ ನಾಯಕರೆಂದು ಕರೆಯುತ್ತಿದ್ದರು. ಈ ಎಲ್ಲ ನಾಯಕರು ವಿಜಯನಗರ ಸಾಮ್ರಾಜ್ಯದ ಶ್ರೇಷ್ಠತ್ವವನ್ನು ಒಪ್ಪಿಕೊಂಡಿದ್ದಾಗಿ ಕಂಡುಬರುತ್ತದೆ.

ಕೊಡಗಿನಲ್ಲಿಯ ಆ ನಾಯಕರು ತಮ್ಮ-ತಮ್ಮೊಳಗೆ ಜಗಳವಾಡುತ್ತಿದ್ದುದರಿಂದ ಇಕ್ಕೇರಿಯ ರಾಜಪುತ್ರನು ಜಂಗಮ ವೇಷದಲ್ಲಿ ಕೊಡಗಿಗೆ ಬಂದು ಹಲೇರಿಯಲ್ಲಿ ನೆಲೆಸಿ, ವೀರರಾಜನೆಂಬ ತನ್ನ ನಿಜವಾದ ಹೆಸರಿನಿಂದ ಕೆಲ ಜನರನ್ನು ಕೂಡಿಸಿಕೊಂಡು ಕ್ರಮೇಣ ನಾಯಕರನ್ನು ಸೋಲಿಸಿ ಕ್ರಿ. ಶ. ೧೬೦೦ ರ ಸಮಯಕ್ಕೆ ತಾನೇ ಕೊಡಗಿನ ರಾಜನೆಂದು ಸಾರಿದನು. ಮಡಿಕೇರಿಯಿಂದ ೮ ಕಿ. ಮಿ. ದೂರದಲ್ಲಿರುವ ಹಲೇರಿಯೇ ಇವನ ರಾಜಧಾನಿಯಾದುದರಿಂದ ಇವನ ವಂಶಜರಿಗೆ ಹಲೇರಿ ಅರಸರೆಂದೇ ಕರೆಯಲಾಯಿತು. ಈ ಅರಸರು ೧೭ ನೇ ಶತಮಾನದ ಆರಂಭದಿಂದ ೧೮೩೪ ರ ವರೆಗೆ ರಾಜ್ಯವಾಳಿದರು; ಅದೇ ವರ್ಷ ಅದು ಬ್ರಿಟಿಷರ ವಶಕ್ಕೆ ಹೋಯಿತು.

ಬ್ರಿಟಿಷರ ವಶಕ್ಕೆ ಹೋದನಂತರ, ಮೈಸೂರ ಕಮೀಶನ್ನರ ಓರ್ವ ಅಧಿಕಾರಿಯು ಕೊಡಗಿನ ಆಡಳಿತೆಯನ್ನು ನೋಡತೊಡಗಿದನು. ಅವನಿಗೆ ಕೊಡಗಿನ ಸುಪರಿಂಟೆಂಡೆಂಟ ಎಂದು ಅನ್ನುತ್ತಿದ್ದರು. ೧೮೮೧ರ ವರೆಗೆ ಈ ವ್ಯವಸ್ಥೆಯು ಇದ್ದಿತು. ಮೈಸೂರ ಸಂಸ್ಥಾನವು ಮೂಲ ಅರಸರ (ಒಡೆಯರ) ಮನೆತನಕ್ಕೆ ಕೊಡಲ್ಪಟ್ಟನಂತರ, ಮೈಸೂರಲ್ಲಿಯ ಬ್ರಿಟಿಷ ರೆಸಿಡೆಂಟನು ಸ್ಥಾನಬಲದಿಂದ ಕೊಡಗಿನ ಮುಖ್ಯ ಕಮಿಶನರ ಆದನು; ಮತ್ತು ಕೊಡಗಿನ ಸುಪರಿಂಟೆಂಡೆಟನು ಅದರ ಕಮಿಶನರ ಆದನು. ಈ ವ್ಯವಸ್ಥೆಯು ೧೯೪೦ ರ ವರೆಗೆ ಸಾಗಿತು; ಮುಂದೆ ಕಮಿಶನರನು ಮುಖ್ಯ ಕಮಿಶನರ ಆದನು; ೧೯೫೧ ರಲ್ಲಿ ಕೊಡಗು 'ಕ' ವರ್ಗದ ರಾಜ್ಯವೆಂದು ಘೋಷಿಸಲ್ಪಟ್ಟಿತು: ೧೯೫೨ ರಲ್ಲಿ ಹೊಣೆಗಾರ ಸರಕಾರವು ಸ್ಥಾಪಿಸಲ್ಪಟ್ಟಿತು; ಅದಕ್ಕೆ ವಿಧಾನ ಪರಿಷತ್ತು ಮತ್ತು ಇಬ್ಬರು ಮಂತ್ರಿಗಳು ಇದ್ದರು. ರಾಜ್ಯಪುನರ್ಘಟನೆಯ ಪರಿಣಾಮವಾಗಿ ೧-೧೧-೧೯೫೬ ರಲ್ಲಿ ಕೊಡಗು ಈಗಿನ ಕರ್ನಾಟಕದಲ್ಲಿ ವಿಲೀನವಾಗಿ ಒಂದು ಜಿಲ್ಹೆಯೆನಿಸಿತು.

ಕ್ರಿ. ಶ. ೧೮೦೦ ರ ವರೆಗಿನ ಶಿಕ್ಷಣ :

ಬ್ರಿಟಿಷರ ಆಳ್ವಿಕೆಗೆ ಒಳಪಡುವವರೆಗೆ, ಅರ್ಥಾತ್–೧೮೩೪ ರ ವರೆಗೆ ಕೊಡಗಿನಲ್ಲಿ ಸಂಘಟಿತವಾದ ಶಿಕ್ಷಣಕ್ರಮವಿರಲಿಲ್ಲ. ೧೮೩೪ ರಲ್ಲಿ ಬ್ರಿಟಿಷರು ಪ್ರಪ್ರಥಮವಾಗಿ ಅಲ್ಲಿ ಸಾಲೆಗಳನ್ನು ತೆರೆದರು. ಆದರೆ, 'ಕಾವೇರಿ ಮಹಾತ್ಮ್ಯ' ದಲ್ಲಿ ಬಂದಿರುವ ಕಾವೇರಿ ನದಿ,ಬ್ರಹ್ಮಗಿರಿ,ಭಾಗಮಂಡಲ-ಇವೇ ಮೊದಲಾದ ವರ್ಣನೆಗಳಿಂದ ಪೌರಾಣಿಕ ಕಾಲದಲ್ಲಿ ಆರ್ಯರಲ್ಲಿಯ ಒಂದು ಪುರೋಹಿತ ವರ್ಗವು ಈ ಪ್ರದೇಶದಲ್ಲಿ ವಾಸವಾಗಿತ್ತೆಂದೂ ಸಂಸ್ಕೃತದಲ್ಲಿ ಅದು ಪರಿಣತವಿದ್ದಿತೆಂದೂ ಕಂಡುಬರುತ್ತದೆ. ಆರಂಭದ ಹಾಗೂ ಅನಂತರದ ಅರಸರು ಓದಲಿಕ್ಕೆ ಬರೆಯಲಿಕ್ಕೆ ಹಾಗೂ ಲೆಕ್ಕ ಪತ್ರ ಇಡಲಿಕ್ಕೆ, ಗೊತ್ತಿದ್ದ ಅಧಿಕಾರಸ್ಥರನ್ನು ತಮ್ಮ ಆಸ್ಥಾನದಲ್ಲಿ ಇಟ್ಟುಕೊಂಡಿದ್ದನ್ನು ಯುದ್ಧದಲ್ಲಿ ತೋರಿಸಿದ ಅಸಾಧ್ಯ ಶೌರ್ಯಕ್ಕಾಗಿ ಕೆಲವು ವೀರರಿಗೆ, ಮತ್ತು ರಾಜ್ಯಕ್ಕೆ ಅದ್ಭುತ ಸೇವೆ ಸಲ್ಲಿಸಿದವರಿಗೆ ಭೂಮಿಯನ್ನು ದತ್ತಿಯಾಗಿ ಕೊಟ್ಟಿದುದನ್ನು ಶಿಲಾಲಿಪಿಗಳಿಂದ ತಿಳಿದು ಕೊಳ್ಳಬಹುದಾಗಿದೆ. ಸರಕಾರವು ಜನರ ವಿದ್ಯಾಭ್ಯಾಸದ ಹೊಣೆಯನ್ನು ವಹಿಸಲಿಲ್ಲವಾದ್ದರಿಂದ ಓದು, ಬರೆಹಗಳಲ್ಲಿ ಆಸಕ್ತಿ ಇದ್ದವರು ತಮ್ಮ ಪಾಲಕರಿಂದ ಇಲ್ಲವೆ ಮನೆಯಲ್ಲಿಯ ಬೇರೆ ಹಿರಿಯರಿಂದ ಓದು, ಬರೆಯಲು ಕಲಿಯುತ್ತಿದ್ದರು. ಮುನಸಿ, ಕಾಗದ ಪತ್ರ ಬರೆಯುವವರು, ಕೋಶಾಧಿಕಾರಿಗಳು, ಶಾನಭೋಗರು ತಮ್ಮ ಮಕ್ಕಳಿಗೆ ತಾವೇ ವಿದ್ಯೆಕಲಿಸುತ್ತಿದ್ದರು. ಇಂಥ ಸ್ಥಳಗಳು ಆನುವಂಶಿಕವಾಗಿದ್ದವು.

೧೮೦೦ ರಿಂದ ೧೮೩೪ರ ವರೆಗಿನ ಶಿಕ್ಷಣ :

ಈ ಅವಧಿಯಲ್ಲಿ ಕರಣಿಕತನದ ಹಾಗೂ ಕಾಗದ–ಪತ್ರಗಳ ಕೆಲಸವು ಬೆಳೆಯಿತು. ಈ ಕಾಲದ ಅರಸನಾದ ದೊಡ್ಡ ವೀರರಾಜೇಂದ್ರನು ಬ್ರಿಟಿಷ ಈಸ್ಟ ಇಂಡಿಯಾ ಕಂಪನಿಯ ಆಧಿಪತ್ಯದ ಕೆಳಗಿನ ನಾಯಕತ್ವವನ್ನು ಒಪ್ಪಿದ್ದರಿಂದ ರಾಜನಿಗೂ ಬ್ರಿಟಿಷ ಅಧಿಕಾರಸ್ಥರಿಗೂ ಪತ್ರ ವ್ಯವಹಾರ ನಡೆಯುತ್ತಿತ್ತು. ಆದುದರಿಂದ ಪತ್ರಗಳನ್ನು ಮತ್ತು ಅರಸನ ಆಜ್ಞೆಗಳನ್ನು ಬರೆಯಲಿಕ್ಕೆ, ರಾಜ್ಯದ ಆಯ-ವ್ಯಯವನ್ನು ನಮೂದಿಸಲಿಕ್ಕೆ, ಶಕ್ತರಾದ ಜನರನ್ನು ಅರಸನು ಇಟ್ಟುಕೊಳ್ಳಬೇಕಾಯಿತು. ತನ್ನ ಮಕ್ಕಳಿಗೆ ಕಲಿಸುವ ಸಲುವಾಗಿ ಬ್ರಾಹ್ಮಣ ಪಂಡಿತರನ್ನೂ ಉರ್ದು ಮುನಸಿಗಳನ್ನೂ ಇಟ್ಟುಕೊಂಡಿದ್ದನು. ಆಸ್ಥಾನದಲ್ಲಿ ಪರ್ಸಿಯನ್ ಹಾಗೂ ಕನ್ನಡ ಮುನಸಿಗಳನ್ನು ನೇಮಿಸಿದ್ದನು. ದೊಡ್ಡವೀರರಾಜೇಂದ್ರನ ತರುವಾಯ ಅರಸನಾದ ಲಿಂಗರಾಜೇಂದ್ರನು ಹಿಂದುಸ್ತಾನಿ ಮತ್ತು ಕನ್ನಡ ಭಾಷೆಗಳಲ್ಲಿ ಓದು–ಬರೆಹ ಬಲ್ಲವನಾಗಿದ್ದನು. ಈತನ ಆಳಿಕೆಯಲ್ಲಿ ಬರೆಹದ ಕೆಲಸ ಸಾಕಷ್ಟು ಮುಂದುವರಿದಿತ್ತೆಂದು ಕಂಡುಬರುತ್ತದೆ. ಆದರೆ ಜನ ಸಾಮಾನ್ಯರು, ಹಳ್ಳಿಯ ಕಸಬುದಾರರು, ಅರಸನ ಸಿಪಾಯರು, ಸೇನಾಪತಿಗಳು, ಆಡಳಿತೆಯ ಕಾರ್ಯನಿರ್ವಾಹಕರು ಅನಕ್ಷರಸ್ಥರೇ ಆಗಿದ್ದರು. ಲೆಫ್ಟಿನಂಟ ಕೊನಾರನು (Lieutenant Connor) ಹೀಗೆ ಹೇಳುತ್ತಾನೆ:— "ರೈತರಿಗೆ ಒಕ್ಕಲುತನದ ಪ್ರಾಯೋಗಿಕ ಕೆಲಸವಷ್ಟೇ ಗೊತ್ತಿದ್ದಿತು:

ಜನಸಾಮಾನ್ಯರಿಗೆ ಶಿಕ್ಷಣದ ಗಂಧವೂ ಗೊತ್ತಿರಲಿಲ್ಲ; ಸುತ್ತಲಿನ ಪ್ರದೇಶಗಳ ಬಗೆಗೆ ಅವರಿಗೆ ಯಾವುದೂ ತಿಳಿದಿರಲಿಲ್ಲ. ಅವರ ಪ್ರತ್ಯೇಕತೆಯು ನೆರೆಹೊರೆಯವರ ತಿಳಿವಳಿಕೆಗೆ ಆತಂಕಕಾರಿಯಾಗಿತ್ತು." ಕೊಡಗಿನ ಕೊನೆಯ ಅರಸನಾದ ಚಿಕ್ಕವೀರ-ರಾಜೇಂದ್ರ ಒಡೆಯರನು ಕನ್ನಡ ಮತ್ತು ಪರ್ಶಿಯನ್ ಭಾಷೆಗಳಲ್ಲಿ ಓದು-ಬರೆಹ ಬಲ್ಲವನಾಗಿದ್ದನು; ಹಿಂದೀ, ಉರ್ದು, ಕನ್ನಡ ಭಾಷೆಗಳಲ್ಲಿ ಸಿರರ್ಗಳವಾಗಿ ಮಾತನಾಡುತ್ತಿದ್ದನು. ಹಲೇರಿ ಮನೆತನದ ಎಲ್ಲ ಅರಸರ ಆಸ್ಥಾನದಲ್ಲಿ ಖಾಸಗಿ ಶಿಕ್ಷಕರಿದ್ದರು.

೧೮೩೪ ರಿಂದ ೧೮೫೫ರ ವರೆಗಿನ ಶಿಕ್ಷಣ :

ಕೊಡಗಿನಲ್ಲಿ ಬ್ರಿಟಿಷರ ಆಡಳಿತೆಯು ೧೮೩೪ರ ಎಪ್ರಿಲ್ ತಿಂಗಳಿಂದ ಆರಂಭವಾಯಿತು. ಅದೇ ವರ್ಷ ನಿರ್ದಿಷ್ಟ ಮತ್ತು ಸುಸಂಘಟಿತ ಶಿಕ್ಷಣ ಕ್ರಮದ ನಾಂದಿಯಾಯಿತು. ಸರಕಾರದವರು ರಾಜ್ಯದ ಮುಖ್ಯ ಪಟ್ಟಣವಾದ ಮಡಿಕೇರಿಯಲ್ಲಿ ಒಂದು ಆ್ಯಂಗ್ಲೋ-ವ್ಹರ್ನ್ಯಾಕ್ಯುಲರ ಪ್ರಾಥಮಿಕ ಸಾಲೆಯನ್ನು, ವೀರರಾಜೇಂದ್ರಪೇಟೆಯಲ್ಲಿ ಇನ್ನೊಂದು ಆ್ಯಂಗ್ಲೋ-ವ್ಹರ್ನ್ಯಾಕ್ಯುಲರ ಸಾಲೆಯನ್ನು ಪೊನ್ನಂಪೇಟೆಯಲ್ಲಿ ಒಂದು ಕನ್ನಡ ಸಾಲೆಯನ್ನು ಸ್ಥಾಪಿಸಿದರು. ಈ ಮೂರು ಸಾಲೆಗಳ ಪ್ರತಿ ತಿಂಗಳ ವೆಚ್ಚವು ೯೦/- ರೂಪಾಯಿ ಮಾತ್ರವಾಗಿದ್ದಿತು. ಕೊಡಗಿನ ಪ್ರಥಮ ಕಮಿಶನರನಾದ ಜನರಲ್ ಫ್ರೇಜರನು ಫ್ರೇಜರಪೇಟ (ಕುಶಾಲನಗರ) ದಲ್ಲಿಯ ಓರ್ವ ವ್ಯಾಪಾರಸ್ಥನಿಗೆ ೩೦೦/- ರೂಪಾಯಿಗಳ ದತ್ತಿಯನ್ನು ಕೊಟ್ಟನು. ಈತನು ಆ ಹಣದಿಂದ ಬಂದ ಬಡ್ಡಿ — ತಿಂಗಳಿಗೆ ಮೂರು ರೂಪಾಯಿಗಳನ್ನು ಓರ್ವ ಶಾಲಾ ಶಿಕ್ಷಕನಿಗೆ ಕೊಡತೊಡಗಿದನು. ಮಡಿಕೇರಿಯಲ್ಲಿದ್ದ ಆ್ಯಂಗ್ಲೋ ವ್ಹರ್ನ್ಯಾಕ್ಯುಲರ ಸಾಲೆಯ ಶಿಕ್ಷಕನಿಗೆ, ಅದರಂತೆ ವೀರರಾಜೇಂದ್ರ ಪೇಟೆಯಲ್ಲಿರುವ ಶಾಲಾ ಶಿಕ್ಷಕನಿಗೆ ಅನುಕ್ರಮವಾಗಿ ೩೫ ರೂಪಾಯಿಗಳಂತೆ ಮತ್ತು ೨೦ ರೂಪಾಯಿಗಳಂತೆ ಸಂಬಳ ಸಿಗುತ್ತಿತ್ತು. ಈ ಕ್ರಮವು ೧೮೪೧ರ ವರೆಗೆ ನಡೆಯಿತು. ಆ ಇಸ್ವಿಯಲ್ಲಿ ಮಡಿಕೇರಿಯಲ್ಲಿದ್ದ ಸಾಲೆಗೆ ಇಬ್ಬರು ಶಿಕ್ಷಕರು ನೇಮಿಸಲ್ಪಟ್ಟರು; ಅವರಲ್ಲಿ ಪ್ರತಿಯೊಬ್ಬರಿಗೆ ಪ್ರತಿ ತಿಂಗಳು ೧೭½ ರೂಪಾಯಿ ಸಂಬಳವು ದೊರೆಯ ಹತ್ತಿತು. ೧೮೪೨ರಲ್ಲಿ ವೀರರಾಜೇಂದ್ರಪೇಟೆಯಲ್ಲಿ ವಾಸವಾಗಿದ್ದ ರೋಮನ್ ಕ್ಯಾಥೋಲಿಕ್ ಕ್ರಿಶ್ಚಿಯನ್‌ರು ಆ್ಯಂಗ್ಲೋ ವ್ಹರ್ನ್ಯಾಕ್ಯುಲರ ಸಾಲೆಯನ್ನು ತೆರೆದದ್ದರಿಂದ, ಮೊದಲು ಇದ್ದ ಸರಕಾರೀ ಆ್ಯಂಗ್ಲೋ-ವ್ಹರ್ನ್ಯಾಕ್ಯುಲರ ಸಾಲೆಯು ಮುಚ್ಚಲ್ಪಟ್ಟಿತು; ಯಾಕಂದರೆ ಅದಕ್ಕೆ ವಿದ್ಯಾರ್ಥಿಗಳೇ ಬರಲಿಲ್ಲ. ರೋಮನ್ ಕ್ಯಾಥೊಲಿಕ್ ಕ್ರಿಶ್ಚಿಯನ್ನರು ತಮ್ಮ ಚರ್ಚಿನ ಆವಾರದಲ್ಲಿ ಆ ಸಾಲೆಯನ್ನು ತೆರೆದರು. ಸರಕಾರೀ ಆ್ಯಂಗ್ಲೋ-ವ್ಹರ್ನ್ಯಾಕ್ಯುಲರ ಸಾಲೆಯಲ್ಲಿ ಕಲಿಯುತ್ತಿದ್ದ ಎಲ್ಲ ವಿದ್ಯಾರ್ಥಿಗಳು ರೋಮನ್‌ಕ್ಯಾಥೋಲಿಕ್ ಕ್ರಿಶ್ಚಿಯನ್‌ರ ಮಕ್ಕಳೇ ಆಗಿದ್ದರು. ಸರಕಾರದವರು ಸ್ಥಾಪಿಸಿದ ಆ್ಯಂಗ್ಲೋ-ವ್ಹರ್ನ್ಯಾಕ್ಯುಲರ ಸಾಲೆಯು ಮುಚ್ಚಿದ್ದರಿಂದ ಅದಕ್ಕೆ ತಗಲುತ್ತಿದ್ದ ವೆಚ್ಚದ ಉಳಿ

ತಾಯವಾದದ್ದರಿಂದ ಗ್ರಾಮೀಣ ಪ್ರದೇಶದಲ್ಲಿ ಆ ಹಣದಿಂದ ಐದು ಕನ್ನಡ ಸಾಲೆಗಳನ್ನು ತೆರೆಯಲಾಯಿತು; ಇವೆಲ್ಲ ಏಕ ಶಿಕ್ಷಕ ಸಾಲೆಗಳಾಗಿದ್ದವು; ಪ್ರತಿ ಶಿಕ್ಷಕನಿಗೆ ಪ್ರತಿ ತಿಂಗಳು ೭/- ರೂಪಾಯಿ ಸಂಬಳ ಕೊಡುವ ಏರ್ಪಾಡಾಯಿತು.

ಗ್ರಾಮಾಂತರ ಪ್ರದೇಶದ ಐದು ಏಕ ಶಿಕ್ಷಕ ಸಾಲೆಗಳ ತಿಂಗಳ ಒಟ್ಟು ಸಂಬಳವು ೩೫/- ರೂಪಾಯಿಗಳಾಗುತ್ತದಷ್ಟೇ! ಪೊನ್ನಂಪೇಟೆಯಲ್ಲಿದ್ದ ಸಾಲೆಯ ಶಿಕ್ಷಕರ ಸಂಬಳ ತಿಂಗಳಿಗೆ ೨೦/- ರೂಪಾಯಿ ಇದ್ದಿತು; ಒಟ್ಟು ೫೫/- ರೂಪಾಯಿಯಷ್ಟಿದ್ದ ಈ ಹಣದಿಂದ ಕೊಡಗಿನ ಗ್ರಾಮಾಂತರ ಪ್ರದೇಶದಲ್ಲಿ ೧೧ ಶಾಲೆಗಳನ್ನು ತೆರೆಯಬೇಕೆಂದೂ ಇವೆಲ್ಲ ಏಕ ಶಿಕ್ಷಕ ಶಾಲೆಗಳಿರಬೇಕೆಂದೂ ಪ್ರತಿಯೊಬ್ಬ ಶಿಕ್ಷಕನಿಗೆ ತಿಂಗಳಿಗೆ ೫/- ರೂಪಾಯಿ ಸಂಬಳ ಕೊಡಬೇಕೆಂದೂ ಕ್ರಿ. ಶ. ೧೮೪೩ರಲ್ಲಿ ನಿರ್ಧರಿಸಲಾಯಿತು. ಮಡಿಕೇರಿಯಲ್ಲಿದ್ದ ಆ್ಯಂಗ್ಲೋ-ವ್ಹರ್ನ್ಯಾಕ್ಯುಲರ ಸಾಲೆಯು ೧೮೪೦ ರಲ್ಲಿ ಪುನರ್-ಸಂಘಟಿತವಾಗಿ ಮುಂದುವರಿಯಿತು.

ಶಿಕ್ಷಣದ ಪ್ರಯೋಜನವನ್ನರಿಯದ್ದರಿಂದ ಪಾಲಕರು ತಮ್ಮ ಮಕ್ಕಳನ್ನು ಈ ಸಾಲೆಗಳಿಗೆ ಕಳಿಸಲು ಅನುಮಾನಿಸತೊಡಗಿದರು. ಕಾರಣ, ಈ ಹನ್ನೊಂದು ಸಾಲೆ-ಗಳ ಹಾಜರಾತಿಯು ಬಹಳ ಕಡಿಮೆ ಇದ್ದಿತು.

ಶಿಕ್ಷಣದ ಬಗೆಗೆ ಕೊಡಗಿನಲ್ಲಿದ್ದ ಈ ಅನಾಸ್ಥೆಯನ್ನು ಕಂಡು ಬೆಂಗಳೂರಿನಲ್ಲಿದ್ದ ಪ್ರದೇಶದ ಕಾರ್ಯಕಲಾಪಗಳ ಕಮೀಶನರನು ವಿದ್ಯಾರ್ಥಿಗಳ ಹಾಜರಾತಿಗನುಸರಿಸಿ ಶಿಕ್ಷಕರ ಸಂಬಳವನ್ನು ಹೆಚ್ಚು ಕಡಿಮೆ ಮಾಡತಕ್ಕದ್ದೆಂದೂ, ಪ್ರತಿ ಶಿಕ್ಷಕನ ತಿಂಗಳಿನ ಸಂಬಳವು ಪರಮಾವಧಿ ೫/- ರೂಪಾಯಿ ಇರತಕ್ಕದ್ದೆಂದೂ ಈ ಪೂರ್ಣ ಸಂಬಳವು ದೊರೆಯಬೇಕಾದರೆ ವಿದ್ಯಾರ್ಥಿಗಳ ಹಾಜರಾತಿಯು ಕನಿಷ್ಠ ೩೦ ಇರತಕ್ಕದ್ದೆಂದೂ ಪ್ರತಿ ಐದು ಕಡಿಮೆ ಹಾಜರಾತಿಗೆ ನಿಗದಿ ಪಡಿಸಿದ ಸಂಬಳದಲ್ಲಿ ಒಂದ-ಐದಾಂಶದಷ್ಟು ಕಡಿಮೆ ಮಾಡತಕ್ಕದ್ದೆಂದೂ ಸೂಚಿಸಿದನು. ಈ ನಿಯಮದನ್ವಯ ಮಡಿಕೇರಿಯಲ್ಲಿಯ ಶಿಕ್ಷಕನೋರ್ವನನ್ನು ಹೊರತುಪಡಿಸಿ ಉಳಿದ ಎಲ್ಲ ಶಿಕ್ಷಕರ ಸಂಬಳವು ತಿಂಗಳಿಗೆ ೨೨ ರೂಪಾಯಿ ಆಯಿತು. ಈ ಆಧಾರಕ್ಕನುಸರಿಸಿ ಕೊಡಗಿನ ಗ್ರಾಮೀಣ ಪ್ರದೇಶದಲ್ಲಿ ೨೧ ಕನ್ನಡ ಸಾಲೆಗಳು ಸ್ಥಾಪಿಸಲ್ಪಟ್ಟವು.

ಕ್ರಿ. ಶ. ೧೮೪೫ ರಲ್ಲಿ ಮಡಿಕೇರಿಯಲ್ಲಿದ್ದ ಆ್ಯಂಗ್ಲೋ-ವ್ಹರ್ನಾಕ್ಯುಲರ ಸಾಲೆ-ಯಲ್ಲಿ ಕೆಲಸ ಮಾಡುತ್ತಿದ್ದ ಈರ್ವರು ಆಂಗ್ಲ ಶಿಕ್ಷಕರಲ್ಲಿ ಒಬ್ಬರನ್ನು ತೆಗೆದು ಹಾಕಿ ಅವರ ಬದಲು ಹಿಂದುಸ್ತಾನಿ ಶಿಕ್ಷಕನನ್ನು ನೇಮಿಸಲಾಯಿತು.

ಮೇಲೆ ವಿವರಿಸಿದ ಕನ್ನಡ ಸಾಲೆಗಳು ಮತ್ತು ಆ್ಯಂಗ್ಲೋ-ವ್ಹರ್ನ್ಯಾಕ್ಯುಲರ ಸಾಲೆಗಳು ೧೮೫೪ ನೇ ಇಸ್ವಿಯವರೆಗೆ ಕೆಲಸ ಮಾಡಿದವು. ಆ ವರ್ಷ ಬಾಸೆಲ್

ಮಿಶನ್ನಿನ ರೆವ್ಹೆರೆಂಡ ಡಾ॥ ಮೊಯಿಗ್ಲಿಂಗ (Rev. Dr. Moegling) ನು, ಸರ-ಕಾರವು ಹಣ ಒದಗಿಸಿದರೆ, ಈ ಸಾಲೆಗಳ ಮೇಲ್ವಿಚಾರಣೆ ಮಾಡುವೆನೆಂದೂ ಶ್ರೇಷ್ಠ-ಮಟ್ಟದ ಸಾಲೆಗಳನ್ನು ತೆರೆಯುವೆನೆಂದೂ ಹೇಳಿದನು. ಇಲ್ಲಿಯವರೆಗೆ ಸ್ಥಾಪಿಸಿದ ಕನ್ನಡ ಸಾಲೆಗಳು ಹಿಂದೂ ಪದ್ಧತಿಯವು ಇದ್ದು ಅವುಗಳಿಗೆ ಮೇಲ್ವಿಚಾರಣೆ ಇಲ್ಲ-ದಂತಾಗಿದೆ; ಮಡಿಕೇರಿಯಲ್ಲಿರುವ ಆ್ಯಂಗ್ಲೊ–ವ್ಹರ್ನ್ಯಾಕ್ಯುಲರ ಸಾಲೆಯು ಯೋಗ್ಯ ಮಟ್ಟದ್ದಿರುವದಿಲ್ಲ. " ಕೊಡಗಿನ ಜನರಿಗೆ ಏನನ್ನೂ ಬೋಧಿಸಿಲ್ಲ; ಅವರು ಏನನ್ನೂ ಕಲಿತಿಲ್ಲ. ಇದರ ಪರಿಣಾಮವೆಂದರೆ, ಕಳೆದ ೨೦ ವರ್ಷಗಳಲ್ಲಿ ನೈತಿಕ ಮತ್ತು ಬೌದ್ಧಿಕ ಸುಧಾರಣೆ ಆಗಿರುವದಿಲ್ಲ; ಅವರಲ್ಲಿದ್ದ ಮೂಢ ನಂಬಿಕೆಗಳು ಕಡಿಮೆಯಾಗುವ ಬದಲು ಮತ್ತಿಷ್ಟು ಹೆಚ್ಚಾಗಿವೆ. ಅವರ ಸ್ವಾಭಾವಿಕ ಯೋಗ್ಯತೆಗಳು, ಭಾರತದಲ್ಲಿಯ ಇತರ ಅನೇಕ ಜನಾಂಗದವರಿಗಿಂತ ಶ್ರೇಷ್ಠವಿಲ್ಲದ್ದಿದ್ದರೂ, ಅವರಿಗೆ ಸಮನಾಗಿವೆ; ಆದರೆ ಅವರ ಅಜ್ಞಾನವು ಅಪರಿಮಿತ", ಎಂದು ರೆ. ಡಾ॥ ಮೊಯಿಗ್ಲಿಂಗ (Rev. Dr. Moegling) ಅಭಿಪ್ರಾಯ ಪಟ್ಟಿದ್ದಾನೆ.

೧೮೫೪ ರಿಂದ ೧೯೦೦ ರ ವರೆಗಿನ ಶಿಕ್ಷಣ :

ಕ್ರಿ. ಶ. ೧೮೫೫ ರಲ್ಲಿ ಮೈಸೂರ ಮತ್ತು ಕೊಡಗು ಪ್ರದೇಶಗಳ ಕಮೀಶನರನಾದ ಸರ್ ಮಾರ್ಕ ಕಬ್ಬನ್ (Sir Mark Cubbon) ನು ಮಡಿಕೇರಿಯಲ್ಲಿಯ ಆಂಗ್ಲೋ-ವ್ಹರ್ನ್ಯಾಕ್ಯುಲರ ಸಾಲೆಯ ನಿಯಂತ್ರಣ ವಹಿಸಿಕೊಳ್ಳುವಂತೆ ಡಾ॥ ಮೊಯಿಗ್ಲಿಂಗನಿಗೆ ಆಜ್ಞಾಪಿಸಿದನು ೧೮೫೬ ರಲ್ಲಿ ಡಾ॥ ಮೊಯಿಗ್ಲಿಂಗನು ಆ ವ್ಹರ್ನ್ಯಾಕ್ಯುಲರ ಸಾಲೆಯ ಮುಖ್ಯಾಧ್ಯಾಪಕ ಹುದ್ದೆಗೆ ರೆವ್ಹರೆಂಡ ಜಿ. ರಿಚ್‌ಟರ (Rev. G. Richter) ನನ್ನು ನೇಮಿಸಿದನು. ಆದರೆ ಕೊಲವಂದ್ರ ಕರಿಯಪ್ಪನನ್ನು ಹೊರತುಪಡಿಸಿ ಎಲ್ಲ ಕೊಡಗು ಅಧಿಕಾರಸ್ಥರು ಸಾಲೆಗೆ ವಿರುದ್ಧವಾಗಿದ್ದರು. ಕೊ. ಕರಿಯಪ್ಪನು ಈ ವಿರೋಧ-ವನ್ನೂ ಪ್ರಮುಖರ ಅಸಂತೋಷವನ್ನೂ ಎದುರಿಸಿ ಸಾಲೆಗೆ ಹೋಗಲು ಸಿದ್ಧನಿದ್ದನು. ಡಾ॥ ಮೊಯಿಗ್ಲಿಂಗನು ಸಾಲೆಯ ನಿಯಂತ್ರಣ ವಹಿಸಿಕೊಂಡದ್ದರಿಂದ ಸಾಲೆಯು ಬಾಸೆಲ್ ಮಿಶನ್‌ಕ್ಕೆ ಸಂಬಂಧವಾಯಿತೆಂದೂ ಆ ಮಿಶನ್ನಿಗೆ ಸಂಬಂಧಿಸಿದ ಪಾದ್ರಿಗಳು ಮತಾಂತರಗೊಳಿಸುವ ಭಾವನೆಯುಳ್ಳವರೆಂದೂ ಈ ಅಧಿಕಾರಸ್ಥರು ಭಾವಿಸಿದರು : ಆದಕಾರಣ ವಿರೋಧಿಸಿದರು.

ಕ್ರಿ. ಶ. ೧೮೫೭ ರಲ್ಲಿ ಮೈಸೂರಿನ ಜ್ಯೂಡಿಸಿಯಲ್ ಕಮೀಶನರನಾದ ಮಾನ್ಯ ಶ್ರೀ ದೇವೆರ್ಯೂಕ್ಸ (Mr. Devereux) ನು ಮೈಸೂರ ಮತ್ತು ಕೊಡಗು ಪ್ರಾಂತ ಗಳನ್ನು ಆವರಿಸುವ ಒಂದು ಯೋಜನೆಯನ್ನು ಕೇಂದ್ರ ಸರಕಾರಕ್ಕೆ ಸಲ್ಲಿಸಿದನು. ಅದು ಗವ್ಹರ್ನರ – ಜನರಲ್ – ಇನ್–ಕೌನ್ಸಿಲಿನಿಂದ ಮಂಜೂರಾಯಿತು. ಕೊಡಗಿನಲ್ಲಿ ಒಂದು ನಿಯಮಿತ ಶಿಕ್ಷಣಕ್ಕೆ ಇದು ಪೀಠಿಕೆಯಾಯಿತು. ಅದೇ ವರ್ಷ ಮೈಸೂರ

ವಿದ್ಯಾ ಇಲಾಖೆಯು ಅಸ್ತಿತ್ವದಲ್ಲಿ ಬಂದಿತು. ಕೊಡಗು ಅದರ ಮೇಲ್ವಿಚಾರಣೆಗೆ ಒಳಪಟ್ಟಿತು.

ಈ ಯೋಜನೆಯು ಕಾರ್ಯಗತವಾದ ಕೂಡಲೇ ಮಡಿಕೇರಿಯಲ್ಲಿದ್ದ ಆ್ಯಂಗ್ಲೋ ವ್ಹರ್ನ್ಯಾಕ್ಯುಲರ ಸಾಲೆಯನ್ನು ಸರಕಾರವು ವಹಿಸಿಕೊಂಡಿತು; ಆಗಿನ ಪ್ರಿನ್ಸಿಪಾಲ ಡಾ॥ ಮೊಯೆಗ್ಲಿಂಗನಿಗೆ ತಿಂಗಳಿಗೆ ೨೫೦/-- ರೂಪಾಯಿ ಸಂಬಳ ಕೊಡಲಾಯಿತು; ಹೆಡ್‌ಮಾಸ್ತರನಾಗಿದ್ದ ರೆವ್ಹರೆಂಡ ಜಿ. ರಿಚ್‌ಟರ (Rev. G. Richter)ನಿಗೆ ೧೮೫೭ ರಿಂದ ೨೦೦/– ರೂಪಾಯಿ ಸಂಬಳ ಕೊಡಲಾಯಿತು. ೧೮೬೦ರ ಕೊನೆಗೆ ಡಾ॥ ಮೊಯೆಗ್ಲಿಂಗನು ಭಾರತದಿಂದ ತೊಲಗಿದನು; ರೆವ್ಹರೆಂಡ ಜಿ. ರಿಚ್‌ಟರನು ಅವನ ಸ್ಥಳದಲ್ಲಿ ನೇಮಿಸಲ್ಪಟ್ಟನು.

೧೮೬೨ ರ ಸಮಯಕ್ಕೆ ಕೊಡಗಿನಲ್ಲಿ ಬಹುಸಂಖ್ಯಾಕರೆನಿಸಿದ ಕೊಡಗಿನ ಜನರು ತಮ್ಮ ಮಕ್ಕಳಿಗೆ ವಿದ್ಯೆ ಕಲಿಸುವದರಿಂದಾಗುವ ಪ್ರಯೋಜನವನ್ನು ಅರಿತಿದ್ದರು. ಈ ಸಮಯದಷ್ಟೊತ್ತಿಗೆ ಅನೇಕ ಯುರೋಪಿಯನ್‌ರು ಕೊಡಗಿನಲ್ಲಿ ಕಾಫೀ ತೋಟ ಗಳನ್ನು ಪ್ರಾರಂಭಿಸಿದ್ದರು. ಈ ಯುರೋಪಿಯನ್ ಕಾಫೀ ತೋಟಗಾರರ ಬಗೆಗೆ ಗೌರವ ಭಾವನೆ ತಳೆದಿದ್ದ ಕೊಡಗಿನ ನಿವಾಸಿಗಳು ತಮ್ಮ ಮಕ್ಕಳಿಗೆ ಆಂಗ್ಲ ವಿದ್ಯಾ-ಭ್ಯಾಸ ಮಾಡಿಸಿದರೆ ಅವರು ಈ ಯುರೋಪಿಯನ್‌ರ ಸಂಪರ್ಕದಲ್ಲಿ ಬರಲು ಸಾಧ್ಯ ವೆಂದು ಭಾವಿಸಿದರು. ಇದಲ್ಲದೆ ಕಚೇರಿಗಳ ಮುಖ್ಯಸ್ಥರು ಯುರೋಪಿಯನ್ನರೇ ಇರುತ್ತಿದ್ದರು. ಕೆಳಗಿನ ನೌಕರಿಗಳು ಯೋಗ್ಯ ಆಂಗ್ಲ ಶಿಕ್ಷಣ ಪಡೆದವರಿಗೆ ಸಿಗು ತ್ತಿದ್ದವು; ಈ ಎಲ್ಲ ಕಾರಣಗಳಿಂದ ಕೊಡಗಿನ ನಿವಾಸಿಗಳು ಆಂಗ್ಲ ಶಿಕ್ಷಣ ಪಡೆಯಲು ಮುಂದೆ ಬಂದರು.

ಮಡಿಕೇರಿಯಲ್ಲಿದ್ದ ಕೇಂದ್ರ ಸಾಲೆಯು (Central School) ಮಾತ್ರ ಆಗ ಆಂಗ್ಲ ಭಾಷೆಯನ್ನು ಕಲಿಸುತ್ತಿತ್ತು. ರಾಜರು ಆನೆಗಳನ್ನು ಕಟ್ಟುವ ಮನೆಯಲ್ಲಿ ಅದು ನಡೆಯುತ್ತಿತ್ತು; ಅದನ್ನು ಇತ್ತೀಚೆಗೆ ಪ್ರವಾಸಿಕರ ಬಂಗಲೆಯೆಂದು ಮಾಡ ಲಾಗಿತ್ತು. ಆ ಕಾಲದಲ್ಲಿ ಕೊಡಗಿನ ನಿವಾಸಿಗಳು, ಸರಕಾರೀ ಅಧಿಕಾರಿಗಳು ಸಹ ತಮ್ಮ ಕುಟುಂಬಗಳನ್ನು ಮಡಿಕೇರಿಯಲ್ಲಿ ಇಡುತ್ತಿರಲಿಲ್ಲ; ಅವರವರ ಹಳ್ಳಿಗಳಲ್ಲಿಯೇ ಅವರನ್ನು ಇಟ್ಟು ವಾರಕ್ಕೊಮ್ಮೆ ತಾವೇ ಹೋಗಿ ಬರುತ್ತಿದ್ದರು. ಈ ಕಾರಣದಿಂದ ತಮ್ಮ ಮಕ್ಕಳ ವಿದ್ಯಾಭ್ಯಾಸದ ಅನುಕೂಲಕ್ಕಾಗಿ ವಸತಿಗೃಹ ಹಾಗೂ ಊಟೋಪ-ಚಾರದ ಮಂದಿರದ ಅವಶ್ಯಕತೆಯನ್ನು ಕಂಡುಕೊಂಡರು.

ಆದುದರಿಂದ ೧೮೬೨ನೇ ಅಗಸ್ಟ ತಿಂಗಳಲ್ಲಿ ಕೊಡಗು ಜನರ ಪ್ರಮುಖರು ಸರಕಾರಕ್ಕೆ ಮನವಿಯೊಂದನ್ನು ಸಲ್ಲಿಸಿ ೧೦೦ ವಿದ್ಯಾರ್ಥಿಗಳ ಸಲುವಾಗಿ ಊಟೋಪ-ಚಾರ ಮನೆಯನ್ನು ಮತ್ತು ಹೊಸ ಶಾಲಾ ಕಟ್ಟಡವನ್ನು ಕಟ್ಟಿಸುವದಾಗಿಯೂ

ಇವಕ್ಕಾಗಿ ೬೦೦೦/– ರೂಪಾಯಿಗಳನ್ನು ಕೂಡಿಸಿ ಕೊಡುವದಾಗಿಯೂ, ಸರಕಾರವು ಔದಾರ್ಯದಿಂದ ಧನಸಹಾಯ ಮಾಡಬೇಕೆಂದೂ ಕೇಳಿದರು. ಈ ಬೇಡಿಕೆಯನ್ನು ೧೮೬೩ರಲ್ಲಿ ಗವ್ಹರ್ನರ–ಜನರಲ್‌ನು ಮನ್ನಿಸಿದನು. ಕೂಡಲೇ ಮುಖ್ಯಾಧ್ಯಾಪಕನಾದ ರೆವ್ಹರೆಂಡ ಜಿ. ರಿಚ್‌ಟರನು ಒಂದು ಸಮಿತಿಯ ನೆರವಿನೊಂದಿಗೆ ಸರಕಾರವು ಕೊಟ್ಟ ಉಚಿತ ನಿವೇಶನದಲ್ಲಿ ಕೇಂದ್ರಸಾಲೆಯ ಕಟ್ಟಡ, ಮುಖ್ಯಾಧ್ಯಾಪಕನ ನಿವಾಸ ಮತ್ತು ಭೋಜನ ಮಂದಿರ— ಇವುಗಳ ನಿರ್ಮಾಣಕಾರ್ಯ ಕೈಕೊಂಡನು. ಇವೆಲ್ಲವುಗಳ ಒಟ್ಟು ವೆಚ್ಚ ೩೨,೫೪೮/– ರೂಪಾಯಿಗಳಾಯಿತು; ಕೊಡಗಿನ ಸಾರ್ವಜನಿಕರು ೯೭೨೦/– ರೂಪಾಯಿಗಳೆಂದು ತಮ್ಮ ವಂತಿಗೆ ಸಲ್ಲಿಸಿದರು. ಕೊಡಗಿನಲ್ಲಿ ವಾಸವಾಗಿದ್ದ ಯುರೋಪಿಯನ್‌ರು ೪೭೦/– ರೂಪಾಯಿ ಕೊಟ್ಟರು; ಹಳೆಯ ಶಾಲಾ ಇಮಾರತಿಯನ್ನು ಮಾರಿದ್ದರಿಂದ ೬೫೦೦/– ರೂಪಾಯಿ ದೊರೆತವು. ಉಳಿದ ಹಣವನ್ನು ಸರಕಾರವು ವಹಿಸಿತು. ಇದೇ ಸಮಯಕ್ಕೆ ಕೊಲವಂದ್ರ ಕರಿಯಪ್ಪನು ತನ್ನ ಸ್ವಂತ ಖರ್ಚಿನಿಂದ (೩೫೦೦/– ರೂಪಾಯಿ) ಅದೇ ಸಾಲೆಯ ಆವರಣದಲ್ಲಿ ಬಾಲಿಕೆಯರ ಭೋಜನ ಮಂದಿರವನ್ನು ಕಟ್ಟಿಸಿದನು. ೧೮೭೦ರಲ್ಲಿ ಕೇಂದ್ರ ಸಾಲೆಯ ಹೊಸ ಇಮಾರತಿಯು ಪೂರ್ತಿಯಾಗಿ ಕಟ್ಟಲ್ಪಟ್ಟಿತು; ಆದರೆ ೧೮೬೯ರಲ್ಲಿಯೇ ಆ ಹೊಸ ಇಮಾರತಿಯಲ್ಲಿ ಸಾಲೆಯು ಪ್ರಾರಂಭವಾಗಿದ್ದಿತು.

೧೮೬೨ ರಲ್ಲಿ ಇದ್ದ ಉತ್ಸಾಹವು ೧೮೬೯ ರಲ್ಲಿ ಉಳಿಯಲಿಲ್ಲ; ಕೊಡಗಿನ ನಿವಾಸಿಗಳು ತಮ್ಮ ಮಕ್ಕಳನ್ನು ಭೋಜನ ಮಂದಿರಕ್ಕೆ ಕಳಿಸಲು ಅರ್ಥಾತ್, ತಮ್ಮ ಮಕ್ಕಳಿಂದ ಅಗಲಿರಲು ಬಹುಸಂಖ್ಯೆಯಲ್ಲಿ ಮುಂದೆ ಬರಲಿಲ್ಲ. ಯೆಡೆನಲ್ಕೆನಾಡಿನ ಕೆಲ ಭಾಗಗಳ ಜನರು ಮಾತ್ರ ಇದಕ್ಕೆ ಅಪವಾದವಾಗಿದ್ದರು. ಆದುದರಿಂದ ಕೇಂದ್ರ ಸಾಲೆಗೆ ಪೋಷಕವೆನಿಸುವಂತೆ ಮಡಿಕೇರಿಯೊಂದನ್ನುಳಿದು ಉಳಿದ ಎಲ್ಲ ತಾಲೂಕು-ಗಳಲ್ಲಿ ಒಂದೊಂದು ಆ್ಯಂಗ್ಲೋ–ವ್ಹರ್ನ್ಯಾಕ್ಯುಲರ ಸಾಲೆಯನ್ನು ಸ್ಥಾಪಿಸಬೇಕೆಂದು ನಿರ್ಣಯಿಸಲಾಯಿತು. ಈ ನಿರ್ಣಯಕ್ಕನುಸರಿಸಿ ೧೮೭೦ ರಲ್ಲಿ ವಿರಾಜಪೇಟೆಯಲ್ಲಿ, ನಾಪೊಕ್ಲುದಲ್ಲಿ; ೧೮೭೧ ರಲ್ಲಿ ಮಡಿಕೇರಿಯಲ್ಲಿ ಪ್ರಸೇರಪೇಟದಲ್ಲಿ ಆ್ಯಂಗ್ಲೋ–ವ್ಹರ್ನ್ಯಾಕ್ಯುಲರ ಸಾಲೆಗಳು ಆರಂಭವಾದವು. ೧೮೬೨ ರಲ್ಲಿ ೨೧ ಸಂಖ್ಯೆಯಲ್ಲಿದ್ದ ಗ್ರಾಮಾಂತರ ಕನ್ನಡ ಸಾಲೆಗಳ ಸಂಖ್ಯೆಯು, ಈ ಸಮಯಕ್ಕೆ ೨೭ ಕ್ಕೆ ಏರಿತು. ಈ ಕನ್ನಡ ಸಾಲೆಗಳ ತಪಾಸಣೆಗೆಂದು ಕೊಡಗಿನ ಓರ್ವನನ್ನು ಸಬ್–ಡೆಪ್ಯುಟಿ ಇನಸ್ಪೆಕ್ಟರನೆಂದು ನೇಮಿಸಲಾಯಿತು. ರೆ. ಜಿ. ರಿಚ್‌ಟರನು ಸೆಂಟ್ರಲ್ ಸ್ಕೂಲಿನ ಪ್ರಿನ್ಸಿಪಾಲನ ಕೆಲಸದ ಜೊತೆಗೆ ಆ್ಯಂಗ್ಲೋ–ವ್ಹರ್ನ್ಯಾಕ್ಯುಲರ ಸಾಲೆಗಳ ತಪಾಸಣಾ ಕೆಲಸವನ್ನು ಮಾಡಬೇಕಾಯಿತು.

೧೮೭೧ ರಲ್ಲಿ ಭಾರತ ಸರಕಾರವು ಕೊಡಗಿನಲ್ಲಿ ಶಿಕ್ಷಣ ಪ್ರಸಾರ ಮಾಡುವ ಯೋಜನೆಯನ್ನು ತಯಾರಿಸಿತು. ಈ ದಿಸೆಯಲ್ಲಿ ಮುಂದುವರಿಯುವ ಸಲುವಾಗಿ

೩೧-೧-೭೧ ರ ಗೃಹಶಾಖೆಯ ನಂ. ೪೧ ರ ಠರಾವಿನನ್ವಯ ವ್ಯಾಪಕ ಕಾರ್ಯಕ್ರಮವನ್ನು ಸೂಚಿಸಿತು. ಪ್ರಾಥಮಿಕ ಶಿಕ್ಷಣ ಪ್ರಸಾರದ ಸಲುವಾಗಿ ಭೂಕಂದಾಯದ ಮೇಲೆ ಪ್ರತಿ ರೂಪಾಯಿಗೆ ಒಂದು ಆಣೆ ಶಿಕ್ಷಣ ಕರ ವಿಧಿಸಬೇಕೆಂದು ಆಶಿಸಿತು. ಆದರೆ ಗವ್ಹರ್ನರ-ಜನರಲ್-ಇನ್-ಕೌನ್ಸಿಲ್ ಅವರು ಕೆಳಗೆ ಕಾಣಿಸಿದ ಯೋಜನೆಗೆ ಅನುಮತಿ ಇತ್ತರು :—

೧	ಕೇಂದ್ರ ಸಾಲೆ-೨ ಭೋಜನ ಮಂದಿರ ಸಹಿತ	....	ರೂ.	೧೧,೯೪೪=೦೦
೧	ನಾರ್ಮಲ್‌ಸ್ಕೂಲ	....	ರೂ.	೨,೪೦೦=೦೦
೩	ಮಧ್ಯಮ ಸಾಲೆಗಳು	....	ರೂ.	೬,೦೦೦=೦೦
೭೪	ಪ್ರಾಥಮಿಕ ಸಾಲೆಗಳು (ಹಂತ ಹಂತವಾಗಿ)	....	ರೂ.	೭,೪೩೩=೦೦
೧	ಶಾಲಾ ತಪಾಸಣಾಧಿಕಾರಿ ಇಬ್ಬರು ಉಪ-ಶಾಲಾ ತಪಾಸಣಾಧಿಕಾರಿಗಳು	....	ರೂ.	೨,೪೦೦=೦೦
	ಒಟ್ಟು	....	ರೂ.	೨೯,೪೪೯=೦೦

ಶೈಕ್ಷಣಿಕ ತೆರಿಗೆಯನ್ನು ನೇಗಿಲ ತೆರಿಗೆ (Plough Tax) ಯ ರೂಪದಲ್ಲಿ ವಸೂಲ ಮಾಡಲು ಕೊಡಗಿನ ಪ್ರಮುಖರು ಸರಕಾರವನ್ನು ಒತ್ತಾಯಿಸಿದರು. ಸರಕಾರವು ಒಪ್ಪಿತು. ಹೀಗೆ ಸಂಗ್ರಹಿಸಿದ ಹಣವು ಪ್ರತಿ ವರ್ಷ ೩೨೦೦/- ರೂಪಾಯಿಯಾಗುತ್ತಿತ್ತು; ೧೮೭೨-೧೮೮೧ ರ ವರೆಗೆ ಇದನ್ನು ಸ್ಥಾನಿಕ ನಿಧಿಯೆಂದು ಮತ್ತು ಪ್ರಾಥಮಿಕ ಶಿಕ್ಷಣಕ್ಕೆ ಮಾತ್ರ ಉಪಯೋಗಿಸಬೇಕೆಂದು ವಿಧಿಸಲಾಯಿತು. ಈ ತೆರಿಗೆ ಕೊಟ್ಟ ರೈತರ ಮಕ್ಕಳಿಗೆ ಪ್ರಾಥಮಿಕ ಸಾಲೆಗಳಲ್ಲಿ ಫೀ ವಸೂಲ ಮಾಡು-ವಂತಿರಲಿಲ್ಲ. ಶಾಲಾ ಇಮಾರತಿಗಳ ದುರಸ್ತಿಯು ಈ ನಿಧಿಯಿಂದ ನಡೆಯುತ್ತಿತ್ತು. ಬರಬರುತ್ತ ಪ್ರಾಥಮಿಕ ಶಿಕ್ಷಣದ ವಿಸ್ತರಣೆಯಾದುದರಿಂದ ಭಾರತ ಸರಕಾರವು ೧೮೮೪ ರಲ್ಲಿ "ನೇಗಿಲು ತೆರಿಗೆ" ಯ ಅರ್ಧದಷ್ಟು ಹಣವನ್ನು ಅಂದರೆ ೨೬೦೦/- ರೂಪಾಯಿಗಳನ್ನು ಮಂಜೂರ ಮಾಡಿತು. ಇದರ ಪರಿಣಾಮವಾಗಿ ಅಲ್ಲಿಯವರೆಗೆ ಪ್ರಾಥಮಿಕ ಸಾಲೆಗಳು ಲೋಕಲ್ ಫಂಡ ಸಾಲೆಗಳು ಎಂದು ಕರೆಯಲ್ಪಡುತ್ತಿದ್ದ ತಮ್ಮ ಅಭಿದಾನವನ್ನು ಬದಲಿಸಿ ಸರಕಾರೀ ಸಾಲೆಗಳೆಂದು ಹೆಸರು ಪಡೆದವು; ಇದು ೧೮೮೮ ರಲ್ಲಿ.

ಗ್ರಾಮಾಂತರ ಪ್ರದೇಶದ ಕನ್ನಡ ಸಾಲೆಗಳಲ್ಲದೆ, ಕೇವಲ ಸರಕಾರೀ ವೆಚ್ಚದಿಂದ ನಡೆಯುತ್ತಿದ್ದ ಆರು ಸಾಲೆಗಳು ಇದ್ದವು. ಇವುಗಳಲ್ಲಿ ಮಡಿಕೇರಿಯಲ್ಲಿದ್ದ ಕೇಂದ್ರ ಸಾಲೆಯೂ ಒಂದು. ಈ ಸಾಲೆಯ ಕೆಲವು ವಿಷಯಗಳ ವೆಚ್ಚಕ್ಕಾಗಿ ಕೊಡಗಿನ ಕೆಲವು ಪ್ರಮುಖರು ಒಂದು ಕಾಫಿ ತೋಟವನ್ನು ಪ್ರಾರಂಭಿಸಿದರು. ಇದಕ್ಕಾಗಿ ಅವರಿಗೆ ೩೧೭ ಎಕರೆ ಅರಣ್ಯವು ಸಾಗುವಳಿಗಾಗಿ ಉಚಿತವಾಗಿ ದೊರೆಯಿತು. ಈ

ತೋಟದಿಂದ ಬಂದ ಉತ್ಪನ್ನವನ್ನು ಕೇಂದ್ರ ಸಾಲೆಯ ಕೆಳಗಿನ ಸಂಗತಿಗಳಿಗಾಗಿ ಉಪಯೋಗಿಸಬೇಕೆಂದು ನಿರ್ಧರಿಸಲಾಯಿತು:—

(೧) ಸಾಲೆಯ ಗ್ರಂಥಾಲಯಕ್ಕಾಗಿ ಪುಸ್ತಕಗಳ ಖರೀದಿ.

(೨) ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ಕೊಡುವದು.

(೩) ಆಟದ ಬಯಲಿನ ಸುಧಾರಣೆ ಇತ್ಯಾದಿ.

ಆದರೆ ಈ ತೋಟದ ವ್ಯವಸ್ಥೆಯು ಸರಿಯಾಗಿ ನಡೆಯದ್ದರಿಂದ ಅದನ್ನು ೧೮೯೯ರಲ್ಲಿ ೩೧,೦೦೦/– ರೂಪಾಯಿಗಳಿಗೆ ಮಾರಿ ಆ ಹಣವನ್ನು ಪ್ರತಿಶತ ೪ರ ಬಡ್ಡಿಯನ್ನು ಕೊಡುವ ಸರಕಾರೀ ಬಾಂಡುಗಳ ರೂಪದಲ್ಲಿ ಇಡಲಾಯಿತು. ಈ ನಿಧಿಯಿಂದ ಬರುವ ಬಡ್ಡಿಯ ರೂಪದ ಹಣವನ್ನು ವಿದ್ಯಾರ್ಥಿಗಳಿಗೆ ಶಿಷ್ಯವೇತನಗಳೆಂದು ಕೊಡುವ ವ್ಯವಸ್ಥೆಯನ್ನು ಮಾಡಲಾಯಿತು.

ಪ್ರಾಥಮಿಕ ಶಿಕ್ಷಣ : ಕೆಲವು ಅಪವಾದಗಳನ್ನು ಬಿಟ್ಟರೆ, ೧೮೯೦ರ ವರೆಗೆ ಎಲ್ಲ ಹಳ್ಳಿಗಳ ಸಾಲೆಗಳು ಏಕ ಶಿಕ್ಷಕ ಸಾಲೆಗಳೇ ಆಗಿದ್ದವು. ಶಿಕ್ಷಕರು ತಮ್ಮ ಅನುಭವದ ಆಧಾರವನ್ನನುಸರಿಸಿ ೭ ರೂಪಾಯಿ, ೧೦ ಮತ್ತು ೧೨ ರೂಪಾಯಿಗಳ ಮಾಸಿಕ ವೇತನ ಪಡೆಯುತ್ತಿದ್ದರು. ೧೮೭೪–೭೫ರ ವರೆಗೆ ಎಲ್ಲ ಸಾಲೆಗಳು ಸರಕಾರಿ ವೆಚ್ಚದಿಂದಲೇ ನಡೆಯುತ್ತಿದ್ದವು. ಕಾಲಕಾಲಕ್ಕಿನ ಪ್ರಾಥಮಿಕ ಶಿಕ್ಷಣದ ಬೆಳವಣಿಗೆಯನ್ನು ಈ ಕೆಳಗೆ ಕೊಡಲಾಗಿದೆ:—

ವರ್ಷ	ಸಾಲೆಗಳು	ವಿದ್ಯಾರ್ಥಿಗಳು	ಸರಕಾರಕ್ಕೆ ತಗಲಿದ ವೆಚ್ಚ ರೂ. ಪೈ
೧೮೩೪–೩೫	೩	೬೦	೧೦೮೦–೦೦
೧೮೫೯–೬೦	೨೬	೬೮೦	೩೮೭೦–೦೦
೧೮೬೪–೬೫	೨೧	೯೧೦	೭೨೧೫–೦೦
೧೮೬೯–೭೦	೨೭	೧೪೧೪	೧೩೫೩೨–೦೦
೧೮೭೪–೭೫	೪೪	೨೧೬೭	೧೧೬೧೨–೦೦

ಕ್ರಿ. ಶ. ೧೮೮೪ರ ವರೆಗೆ ಧನಸಹಾಯ ಪಡೆಯುತ್ತಿದ್ದ ೪ ಸಾಲೆಗಳನ್ನು ಹೊರತುಪಡಿಸಿ ಉಳಿದ ಎಲ್ಲ ಪ್ರಾಥಮಿಕ ಸಾಲೆಗಳು ಸರಕಾರೀ ಸಾಲೆಗಳೇ ಆಗಿದ್ದವು. ೧೮೮೫ರಲ್ಲಿ ಮಡಿಕೇರಿ ಮತ್ತು ವಿರಾಜಪೇಟ ನಗರಸಭೆಗಳಿಗೆ ತಮ್ಮ ಕ್ಷೇತ್ರದಲ್ಲಿಯ ಪ್ರಾಥಮಿಕ ಸಾಲೆಗಳನ್ನು ನಡೆಸಲು ಅನುಮತಿ ಕೊಡಲಾಯಿತು. ೧೮೮೫ರಲ್ಲಿ ಈ ಸಾಲೆಗಳ ಸಂಖ್ಯೆ ಐದು ಇದ್ದು ೧೯೦೧ರ ಸಮಯಕ್ಕೆ ಅದು ಆರು ಆಯಿತು. ಈ ಸಾಲೆಗಳಲ್ಲದೆ ಅನುದಾನ ಪಡೆಯದ ಕೆಲವು ಖಾಸಗಿ ದೇಶೀಯ ಸಾಲೆಗಳು ಇದ್ದವು; ೧೮೮೪–೮೫ರಲ್ಲಿ ಇವುಗಳ ಸಂಖ್ಯೆ ೩೦ ಇದ್ದುದಾಗಿ ತಿಳಿಯುತ್ತದೆ. ೧೯೦೩-೦೪ ರಲ್ಲಿ ಒಟ್ಟು ೩೩ ಖಾಸಗಿ ಸಾಲೆಗಳು ಇದ್ದವು. ೧೮೮೪–೮೫ರಲ್ಲಿ ಪ್ರತಿಶತ ೧೫ರಷ್ಟು

ಹುಡುಗರು ಮತ್ತು ೨.೬ ರಷ್ಟು ಬಾಲಿಕೆಯರು— ಅಂತೂ ಕೊಡಗು ಜನಾಂಗದ ಪ್ರತಿಶತ ೯ರಷ್ಟು ವಿದ್ಯಾರ್ಥಿಗಳು ಸಾಲೆಗಳಿಗೆ ಹೋಗುತ್ತಿದ್ದರು. ಕೊಡಗಿನ ಇಡೀ ಜನಸಂಖ್ಯೆಗೆ ಹೋಲಿಸಿದರೆ ಸಾಲೆಗೆ ಹೋಗುತ್ತಿದ್ದವರ ಶೇಕಡಾ ಪ್ರಮಾಣ ೨.೨ ಮಾತ್ರ ಆಗುತ್ತಿತ್ತು. ೧೮೮೪–೮೫ರ ಒಟ್ಟು ಶಿಕ್ಷಣದ ವೆಚ್ಚ ೩೧,೫೯೯ ರೂಪಾಯಿಗಳು ಮಾತ್ರ ಆಗಿದ್ದಿತು. ಪ್ರಾಥಮಿಕ ಸಾಲೆಗಳ ಅಭ್ಯಾಸ ಪತ್ರಿಕೆಯು ಮಾತೃಭಾಷಾ ಓದು, ಬರೆಹ, ಮೇಲಿನ ವರ್ಗಗಳಲ್ಲಿ ಮಾತೃಭಾಷಾ ವ್ಯಾಕರಣ, ಕವಿತೆ, ಅಂಕಗಣಿತ ಮತ್ತು ಭೂಗೋಲ ಇವುಗಳಿಂದ ಕೂಡಿದ್ದಿತು.

ಮಧ್ಯಮ ಮತ್ತು ಪ್ರಾಥಮಿಕ ಸಾಲೆಗಳಲ್ಲಿ ಪರೀಕ್ಷೆಗಳು :

ಕ್ರಿ. ಶ. ೧೮೫೭ ರಿಂದ ೧೮೮೧ ರ ಅವಧಿಯಲ್ಲಿ ಕೊಡಗಿನ ಶಿಕ್ಷಣ ಇಲಾಖೆಯು ಮೈಸೂರ ವಿದ್ಯಾ ಇಲಾಖೆಯ ನಿರ್ದೇಶಕನ ಆಧೀನದಲ್ಲಿದ್ದಿತು. ಈ ಅವಧಿಯಲ್ಲಿ ಕೊಡಗಿನ ಪ್ರಾಥಮಿಕ ಮತ್ತು ಮಧ್ಯಮ ಶಾಲಾ ಕೊನೆಯ ವರ್ಷದ ವಿದ್ಯಾರ್ಥಿಗಳು ಯಾವ ಪರೀಕ್ಷೆಗೆ ಕೂಡ್ರುತ್ತಿದ್ದರು ಎಂಬುದು ತಿಳಿದುಬಂದಿಲ್ಲ. ೧೮೮೧ ರಿಂದ ಈ ವಿದ್ಯಾರ್ಥಿಗಳು ಅನುಕ್ರಮವಾಗಿ ವಿಶೇಷ ಪ್ರಾಥಮಿಕ ಮತ್ತು ಮಧ್ಯಮ ಶಾಲಾ ಪರೀಕ್ಷೆಗಳಿಗೆ ಕೂಡ್ರುತ್ತಿದ್ದರು. ಇವು ಮದ್ರಾಸ ಪ್ರಾಂತಕ್ಕೆ ಸಂಬಂಧಿಸಿದ್ದು ಅವುಗಳಿಗೆ ಇಲ್ಲಿಯ ವಿದ್ಯಾರ್ಥಿಗಳು ಕೂಡ್ರಬೇಕಾಗುತ್ತಿತ್ತು. ೧೮೮೧ ರಲ್ಲಿ ಈ ಪರೀಕ್ಷೆಗಳನ್ನು ರದ್ದುಗೊಳಿಸಿ ಅವುಗಳ ಬದಲು ಕೆಳಗಿನ ಮಾಧ್ಯಮಿಕ ಮತ್ತು ಪ್ರಾಥಮಿಕ ಪರೀಕ್ಷೆಗಳನ್ನು ತರಲಾಯಿತು. ಈ ಹೊಸ ಪರೀಕ್ಷೆಗಳು ಆಯಾ ಜಿಲ್ಹೆಯ ಸಮಿತಿಗಳಿಂದ ನಡೆಸಲ್ಪಡುತ್ತಿದ್ದವು. ಪ್ರಾಥಮಿಕ ಪರೀಕ್ಷೆಯು ಮುಖ್ಯವಾಗಿ ಬಾಯ್ದೆರೆಯದಾಗಿತ್ತು. ಕೊಡಗಿನ ಮುಖ್ಯ ಕಮೀಶನರನು ಆಜ್ಞೆ ಹೊರಡಿಸಿದ ಪ್ರಕಾರ ೧೮೯೨ ರ ಎಪ್ರಿಲ್ ೧ ರಿಂದ ೧೫ ರೂಪಾಯಿಗಳಿಗಿಂತ ಕಡಿಮೆ ಸಂಬಳವಿರುವ ಸರಕಾರಿ ನೌಕರಿಗೆ ಸೇರಬೇಕಾದರೆ ಉಮೇದವಾರನು ಪ್ರಾಥಮಿಕ ಪರೀಕ್ಷೆಯನ್ನು ಮತ್ತು ತಿಂಗಳಿಗೆ ೧೫ ರೂಪಾಯಿಗಳಿಗಿಂತ ಹೆಚ್ಚಿಗಿರುವ ನೌಕರಿಗೆ ಸೇರಬೇಕಾದರೆ ಕೆಳಗಿನ ಮಾಧ್ಯಮಿಕ ಪರೀಕ್ಷೆ ಪಾಸಾಗಬೇಕಾಯಿತು. ಈ ವ್ಯವಸ್ಥೆಯು ೧೯೦೪ ಇಲ್ಲವೆ ೧೯೦೫ ರ ವರೆಗೆ ಸಾಗಿತು. ಪ್ರಾಥಮಿಕ ಶಿಕ್ಷಣದ ಬೆಳವಣಿಗೆಯನ್ನು ಈ ಕೆಳಗೆ ಕೊಡಲಾಗಿದೆ:—

ವರ್ಷ	ಸಾಲೆಗಳ ಸಂಖ್ಯೆ	ವಿದ್ಯಾರ್ಥಿಗಳ ಸಂಖ್ಯೆ
೧೮೮೨–೮೩	೬೭	೩೫೩೯
೧೮೮೪–೮೫	೭೧	೩೮೪೨
೧೮೯೧–೯೨	೬೭	೪೫೬೭
೧೯೦೩–೦೪	೮೮	೪೫೯೯

ಮಾಧ್ಯಮಿಕ ಶಿಕ್ಷಣ :– ಮಡಿಕೇರಿಯಲ್ಲಿದ್ದ ಮಧ್ಯಮ ಸಾಲೆಯು ಫೆಬ್ರುವರಿ ೧೮೭೯ ರ ವರೆಗೆ ಮಧ್ಯಮ ಸಾಲೆಯಾಗಿದ್ದಿತು; ಆ ವರ್ಷ ಮ್ಯಾಟ್ರಿಕ್ ವರ್ಗವನ್ನು ತೆರೆದು ಆ ಸಾಲೆಯನ್ನು ಹಾಯಸ್ಕೂಲ ದರ್ಜೆಗೆ ಏರಿಸಲಾಯಿತು. ೧೮೮೦ ನೇ ಡಿಸೆಂಬರದಲ್ಲಿ ಜರುಗಿದ ಮದ್ರಾಸ ವಿಶ್ವವಿದ್ಯಾಲಯದ ಮ್ಯಾಟ್ರಿಕ್ ಪರೀಕ್ಷೆಗೆ ಆ ಸಾಲೆಯ ವಿದ್ಯಾರ್ಥಿಗಳನ್ನು ಪ್ರಪ್ರಥಮವಾಗಿ ಕೂಡ್ರಿಸಲಾಯಿತು. ಕೆಳಗಿನ ಮಾಧ್ಯಮಿಕ ದನಂತರ ಮ್ಯಾಟ್ರಿಕ್ ವ್ಯಾಸಂಗವು ಎರಡು ವರ್ಷ ಇದ್ದುದನ್ನು ೧೮೯೧ ರಲ್ಲಿ ಮೂರು ವರ್ಷಕ್ಕೆ ಹೆಚ್ಚಿಸಲಾಯಿತು. ೧೮೮೪ ರ ವರೆಗೆ ಮ್ಯಾಟ್ರಿಕ್ ಪರೀಕ್ಷೆಗೆ ಕೂಡ್ರಬಯು-ಸುವ ವಿದ್ಯಾರ್ಥಿಗಳು ಬೆಂಗಳೂರ, ಮಂಗಳೂರ ಇಲ್ಲವೆ ಮೈಸೂರುಗಳಿಗೆ ಹೋಗ-ಬೇಕಾಗುತ್ತಿತ್ತು. ೧೮೮೫ ರಲ್ಲಿ ಮಡಿಕೇರಿಯು ಆ ಪರೀಕ್ಷಾ ಕೇಂದ್ರವಾಯಿತು. ಮದ್ರಾಸ ವಿಶ್ವವಿದ್ಯಾಲಯದ ಪಠ್ಯ ಪುಸ್ತಕಗಳನ್ನೇ ಇಲ್ಲಿಯ ವಿದ್ಯಾರ್ಥಿಗಳು ಅನು-ಸರಿಸಬೇಕಾಗುತ್ತಿತ್ತು.

ಶಿಕ್ಷಕರ ಶಿಕ್ಷಣ :— (ಅ) ಪ್ರಾಥಮಿಕ ಶಿಕ್ಷಕರ ಶಿಕ್ಷಣ :

೧೮೬೦ ರಲ್ಲಿ ದೇಶಭಾಷಾ ಸರಕಾರೀ ಏಕ ಶಿಕ್ಷಕ ಸಾಲೆಗಳು ೨೦ ಮಾತ್ರ ಇದ್ದವು; ಎಲ್ಲ ಶಿಕ್ಷಕರು ತರಬೇತಿ ಹೊಂದದವರಿದ್ದರು; ಸಾಂಪ್ರದಾಯಕ ರೀತಿಯಲ್ಲಿ ಬೋಧನೆಯು ನಡೆಯುತ್ತಿತ್ತು; ಶಿಕ್ಷಕರ ಸಂಬಳವು ತಿಂಗಳಿಗೆ ೨½ ರೂಪಾಯಿ ಮಾತ್ರ ಇದ್ದಿತು. ೧೮೬೧ರಲ್ಲಿ ಮಡಿಕೇರಿ ಕೇಂದ್ರ ಸಾಲೆಯ ಮುಖ್ಯಾಧ್ಯಾಪಕ ರೆ. ರಿಚ್‌ಟರನು ತನ್ನ ಶಾಲೆಯಲ್ಲಿಯೇ ನಾಲ್ಕು ತಿಂಗಳ ತರಬೇತಿಯ ವ್ಯವಸ್ಥೆ ಮಾಡಿದನು; ಪ್ರತಿಸಲ ನಾಲ್ವರು ಶಿಕ್ಷಕರನ್ನು ಮಾತ್ರ ತರಬೇತಿಗೆ ಆರಿಸುತ್ತಿದ್ದನು; ವರ್ಷದಲ್ಲಿ ಇಂಥ ಮೂರು ವ್ಯಾಸಂಗಗಳು ನಡೆಯುತ್ತಿದ್ದವು. ತರಬೇತಿ ಹೊಂದಿದನಂತರ ಆ ಶಿಕ್ಷಕರ ಸಂಬಳವು ತಿಂಗಳಿಗೆ ೭ ರೂಪಾಯಿಯಾಗುತ್ತಿತ್ತು. ಐದು ವರ್ಷಗಳ ಯಶಸ್ವೀ ಸೇವೆಯನಂತರ ಅವರ ಸಂಬಳವು ತಿಂಗಳಿಗೆ ೧೨/–ರೂಪಾಯಿ ಆಗುವ ಏರ್ಪಾಡಾಗಿದ್ದಿತು. ತರಬೇತಿ ಮುಗಿದ ನಂತರ ೩–೪ ತಿಂಗಳಿಗೆ ಎಲ್ಲ ಶಿಕ್ಷಕರು ಮಡಿಕೇರಿಯಲ್ಲಿ ಸಮ್ಮಿಲಿತರಾಗಿ ಕೇಂದ್ರ ಸಾಲೆಯ ಪ್ರಿನ್ಸಿಪಾಲರ ಸಮ್ಮುಖದಲ್ಲಿ ತಮ್ಮ ಸಾಲೆಯ ಕೆಲಸದ ಬಗೆಗೆ ವರದಿ ಒಪ್ಪಿಸುತ್ತಿದ್ದರು; ಮತ್ತು ಶಿಕ್ಷಣ ವಿಷಯದ ಮೇಲೆ ಸಲಹೆ–ಸೂಚನೆಗಳನ್ನು ಪಡೆಯುತ್ತಿದ್ದರು.

೧೮೭೨ ರಲ್ಲಿ ನಾರ್ಮಲ್ ಸ್ಕೂಲ ಮಂಜೂರಾಯಿತು; ಅದಕ್ಕೆ ಓರ್ವ ಶಿಕ್ಷಕನ ನೇಮಕವಾಯಿತು; ಈತನು ಕೇಂದ್ರ ಸಾಲೆಯ ಪ್ರಿನ್ಸಿಪಾಲರ ಕೈಕೆಳಗೆ ಕೆಲಸ ಮಾಡುವಂತಾಯಿತು. ತರಬೇತಿಗೆ ಬರುವ ಪ್ರತಿ ಶಿಕ್ಷಕನಿಗೆ ತಿಂಗಳಿಗೆ ೫/–ರೂಪಾಯಿ ಶಿಷ್ಯವೇತನ ಕೊಡಲಾಯಿತು; ಒಟ್ಟು ೨೦ ಶಿಕ್ಷಕರ ಸಲುವಾಗಿ ಈ ವ್ಯವಸ್ಥೆಯಾ-ಯಿತು. ಆದರೆ ಪ್ರತಿ ವರ್ಷ ಕೇವಲ ಆರು ಜನ ಶಿಕ್ಷಕರು ಮಾತ್ರ ತರಬೇತಿ ಪಡೆಯು

ತ್ತಿದ್ದರು; ೧೮೮೦ರಲ್ಲಿ ಈ ಸಂಖ್ಯೆಯು ೧೦ಕ್ಕೆ ಏರಿತು. ನಾರ್ಮಲ್ ಸಾಲೆಯಲ್ಲಿ ತರಬೇತಿ ಪಡೆದ ಶಿಕ್ಷಕನು ತಿಂಗಳಿಗೆ ೩೦/– ರೂಪಾಯಿ ಸಂಬಳ ಪಡೆಯುತ್ತಿದ್ದನು. ಕೇಂದ್ರ ಶಾಲೆಯ ಕೆಳಗಿನ ವರ್ಗಗಳಲ್ಲಿ ರೂಢಿ ಪಾಠಗಳು ನಡೆಯುತ್ತಿದ್ದವು. ೧೮೮೪–೮೫ ರಲ್ಲಿ ಮಡಿಕೇರಿಯ ಈ ನಾರ್ಮಲ್ ಸಾಲೆಯು ಪುನರ್–ಸಂಘಟಿಸಲ್ಪಟ್ಟಿತು; ಬಿ. ಎ. ನಪಾಸಾದ ಆದರೆ ಮದ್ರಾಸ ನಾರ್ಮಲ್ ಸ್ಕೂಲಿನಲ್ಲಿ ತರಬೇತಿ ಪಡೆದ ಓರ್ವ ಶಿಕ್ಷಕರು ಮುಖ್ಯಾಧ್ಯಾಪಕನಾಗಿ ಬಂದರು. ಅವನ ಕೈಕೆಳಗೆ ಇಬ್ಬರು ಸಹಾ-ಯಕ ಶಿಕ್ಷಕರು ಕೊಡಲ್ಪಟ್ಟರು. ಈ ಮುಖ್ಯಾಧ್ಯಾಪಕನ ಸಂಬಳವು ೩೦/– ರಿಂದ ೫೦/–ರೂಪಾಯಿಗಳಿಗೇರಿತು; ಇಬ್ಬರು ಸಹಾಯಕ ಶಿಕ್ಷಕರಲ್ಲಿ ಒಬ್ಬನು ಕೃಷಿ ಶಿಕ್ಷಕನಾಗಿದ್ದನು; ಪ್ರಾಯೋಗಿಕ ರೂಢಿ ಪಾಠಗಳ ಸಾಲೆಯು ಜೋಡಿಸಲ್ಪಟ್ಟಿತು; ನಾರ್ಮಲ್ ಸಾಲೆಯ ಮುಖ್ಯಾಧ್ಯಾಪಕನು ಸ್ವತಂತ್ರ ರೀತಿಯಿಂದ ಕೆಲಸ ಮಾಡ ತೊಡಗಿದನು. ಶಿಷ್ಯವೇತನ ಪಡೆಯುವವರ ಸಂಖ್ಯೆಯು ೧೦ ರಿಂದ ೧೪ಕ್ಕೆ ಏರಿತು. ೧೮೮೪–೮೫ರಲ್ಲಿ ೧೪ ಜನ ಶಿಕ್ಷಕರು ತರಬೇತಿಯಲ್ಲಿದ್ದರು. ಈ ೧೪ ಜನರಲ್ಲದೆ, ಶಿಷ್ಯ ವೇತನ ಪಡೆಯದ ಇಬ್ಬರು ಶಿಕ್ಷಕರು ತರಬೇತಿಯಲ್ಲಿದ್ದರು. ತರಬೇತಿಯ ವ್ಯಾಸಂಗ ವನ್ನು ಮೂರು ವರ್ಷಗಳಿಗೆ ಹೆಚ್ಚಿಸಲಾಯಿತು. ಒಂದನೇ ವರ್ಷ ಮುಗಿದನಂತರ ಮದ್ರಾಸ ಡಿ.ಪಿ.ಆಯ್. ಅವರು ಸಾರ್ವಜನಿಕ ಪರೀಕ್ಷೆ ತೆಗೆದುಕೊಳ್ಳುವಂತಾಯಿತು; ಆ ಪರೀಕ್ಷೆಗೆ ವಿಶೇಷ ಮೇಲಿನ ಪ್ರಾಥಮಿಕ ಪರೀಕ್ಷೆ ಎಂದು ಕರೆಯಲಾಯಿತು. ಮೂರನೇ ವರ್ಷದ ಕೊನೆಗೆ ಉಮೇದವಾರರು ದೇಶೀಯ ಭಾಷೆಯಲ್ಲಿ ಮಧ್ಯಮ ಶಾಲಾ ಪರೀಕ್ಷೆಗೆ ಕೂಡ್ರಬೇಕಾಗುತ್ತಿತ್ತು. ತರಬೇತಿಯ ಅವಧಿಯಲ್ಲಿ ಅವರು ಪ್ರಾಥ ಮಿಕ ಸಾಲೆಯ ಎಲ್ಲ ಪಠ್ಯಪುಸ್ತಕಗಳಲ್ಲಿ ಪರಿಣತಿ ಪಡೆಯಬೇಕಾಗುತ್ತಿತ್ತು. ೧೯೦೦ರ ವರೆಗೆ ಇದೇ ವ್ಯವಸ್ಥೆ ಮುಂದುವರಿಯಿತು.

(ಬ) ಮಾಧ್ಯಮಿಕ ಶಾಲಾ ಶಿಕ್ಷಕರ ತರಬೇತಿ:

೧೮೦೦ ರಿಂದ ೧೯೦೦ ರ ವರೆಗಿನ ಅವಧಿಯಲ್ಲಿ ಈ ವಿಷಯದಲ್ಲಿ ಯಾವ ವ್ಯವಸ್ಥೆಯೂ ಇರಲಿಲ್ಲ.

ವಿಶ್ವವಿದ್ಯಾಲಯ ಶಿಕ್ಷಣ : ೧೮೦೦ ರಿಂದ ೧೯೦೦ರ ವರೆಗಿನ ಅವಧಿಯಲ್ಲಿ ಕೊಡಗಿನಲ್ಲಿ ಕಾಲೇಜುಗಳು ಇರಲಿಲ್ಲ. ಮಡಿಕೇರಿಯಲ್ಲಿದ್ದ ಕೇಂದ್ರ ಹಾಯಸ್ಕೂಲ ಮಾತ್ರ ಇಡೀ ಕೊಡಗಿನಲ್ಲಿ ಏಕಮೇವ ಹಾಯಸ್ಕೂಲ ಆಗಿದ್ದಿತು. ಮ್ಯಾಟ್ರಿಕ್ ಪಾಸಾದ ವಿದ್ಯಾರ್ಥಿಗಳು ಕಾಲೇಜ ಶಿಕ್ಷಣದ ಸಲುವಾಗಿ ಬೆಂಗಳೂರಿಗೆ, ಮದ್ರಾಸಕ್ಕೆ ಇಲ್ಲವೆ ಮಂಗಳೂರಿಗೆ ಹೋಗುತ್ತಿದ್ದರು; ಮ್ಯಾಟ್ರಿಕ್ ಪಾಸಾಗುವ ವಿದ್ಯಾರ್ಥಿಗಳ ಸಂಖ್ಯೆಯು ಅತ್ಯಂತ ಅಲ್ಪವಾಗಿದ್ದುದರಿಂದ ಕೊಡಗಿನಲ್ಲಿ ಕಾಲೇಜ ತೆರೆಯುವದು ಅನವಶ್ಯವೆಂದು ಸರಕಾರವು ಭಾವಿಸಿತು; ಆದರೆ ಉಚ್ಚ ಶಿಕ್ಷಣದ ಸಲುವಾಗಿ ಹೊರ

ಪ್ರಾಂತಗಳಿಗೆ ಹೋಗುವವರಿಗೆ ಶಿಷ್ಯವೇತನಗಳನ್ನು ಕೊಡಲಾಗುತ್ತಿತ್ತು. ೧೮೮೫–೮೬ರ ಸಮಯಕ್ಕೆ ಕೆಳಗಿನಂತೆ ಶಿಷ್ಯವೇತನಗಳಿದ್ದವು:—

		ರೂ. ಪೈ
೮ ದತ್ತಿ ಶಿಷ್ಯವೇತನಗಳು; ತಿಂಗಳಿಗೆ ೧೫/– ರೂಪಾಯಿಗಳಂತೆ ಒಂದು ವರ್ಷಕ್ಕೆ ೧೫×೧೨×೮		೧೪೪೦–೦೦
೬ ಸರಕಾರೀ ಶಿಷ್ಯವೇತನಗಳು : ಪ್ರತಿತಿಂಗಳಿಗೆ ೧೫/– ರೂ. ವರ್ಷಕ್ಕೆ ೧೫×೧೨×೬		೧೦೮೦–೦೦
೬ ಸರಕಾರೀ ಶಿಷ್ಯವೇತನಗಳು : ತಿಂಗಳಿಗೆ ೧೦/–ರೂ. ಯಂತೆ ವರ್ಷಕ್ಕೆ ೧೦×೧೨×೬		೭೨೦–೦೦
೩ ಸರಕಾರೀ ತಾಂತ್ರಿಕ ಶಿಷ್ಯವೇತನಗಳು : ತಿಂಗಳಿಗೆ ೧೫/– ರೂ. ಯಂತೆ ವರ್ಷಕ್ಕೆ ೧೫×೧೨×೩		೫೪೦–೪೦
ಒಟ್ಟು ೨೩	ಒಟ್ಟು ರಕಮು ರೂ.	೩೭೮೦–೦೦

ಕಾಲೇಜುಗಳಲ್ಲಿ ಅಭ್ಯಾಸ ಮಾಡುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆಯು ಕೆಲವು ವರ್ಷಗಳಲ್ಲಿ ಕಡಿಮೆ ಇದ್ದುದರಿಂದ ಆ ವರ್ಷಗಳಲ್ಲಿ ಕೆಲವು ಶಿಷ್ಯವೇತನಗಳು ಹಾಗೆಯೆ ಉಳಿಯುತ್ತಿದ್ದವು.

ಬಾಲಿಕೆಯರ ಶಿಕ್ಷಣ : ಕೊಡಗಿನಲ್ಲಿ ಬಾಲಿಕೆಯರು ಬಾಲಕರ ಸಾಲೆಗಳಿಗೆ ಹೋಗುತ್ತಿದ್ದರು. ೧೮೬೯ ರಲ್ಲಿ ಮಡಿಕೇರಿಯಲ್ಲಿಯ ಕೇಂದ್ರ ಸಾಲೆಯಲ್ಲಿದ್ದ ಒಟ್ಟು ೧೭೬ ವಿದ್ಯಾರ್ಥಿಗಳಲ್ಲಿ ೧೨ ವಿದ್ಯಾರ್ಥಿನಿಯರಿದ್ದರು. ಬಾಲಕರ ಸಾಲೆಗಳಿಗೆ ಬಾಲಿಕೆಯರು ತಮ್ಮ ೧೨ನೇ ವಯಸ್ಸಿನವರೆಗೆ ಹೋಗುತ್ತಿದ್ದರು. ಬಾಲಿಕೆಯರ ವಸತಿಸಲುವಾಗಿ ಕೊಲವಂದ್ರ ಕರಿಯಪ್ಪನು ೧೮೭೦ರಲ್ಲಿ ತನ್ನ ಸ್ವಂತ ೩೫೦೦/–ರೂಪಾಯಿ ವೆಚ್ಚದಿಂದ ಒಂದು ಮಂದಿರವನ್ನು ಕಟ್ಟಿಸಿದನು. ಈ ಇಮಾರತಿಯಲ್ಲಿ ೧೮೭೨ ರಲ್ಲಿ ಸರಕಾರದವರು ಶ್ರೀಮತಿ ಶಾಂಟನ್ (Mrs. Shanton) ರ ಹಿರಿಯತನದಲ್ಲಿ ಬಾಲಿಕೆಯರ ಸಾಲೆಯನ್ನು ತೆರೆದರು. ಆದರೆ ಕೊಡಗು ಜನರು ತಮ್ಮ ಬಾಲಿಕೆಯರನ್ನು ತಾವು ವಾಸಿಸುತ್ತಿದ್ದ ಹಳ್ಳಿಗಳಿಂದ ಮಡಿಕೇರಿಯ ಈ ಸಾಲೆಗೆ ಕಳಿಸದ್ದರಿಂದ ಅದು ಕೂಡಲೇ ವಿಫಲವಾಯಿತು. ಮಡಿಕೇರಿಯ ಕೆಲವು ಬಾಲಿಕೆಯರು ಕೇಂದ್ರ ಸಾಲೆಯ ಪ್ರಾಥಮಿಕ ವಿಭಾಗಕ್ಕೆ ಹೋಗುತ್ತಿದ್ದರು. ೧೮೮೧ ರಲ್ಲಿ ಮಡಿಕೇರಿಯ ಬಾಸೆಲ್ ಮಿಶನ್ ಸೊಸಾಯಿಟಿಯವರು ತಮ್ಮ ಸಂಘದ ಆವಾರದಲ್ಲಿ ಒಂದು ಬಾಲಿಕೆ

ಯರ ಸಾಲೆಯನ್ನು ತೆರೆದರು; ಆರಂಭದಲ್ಲಿ ಕೇವಲ ಆರು ಬಾಲಿಕೆಯರಿದ್ದರು. ೧೮೮೨ರ ಅಂತ್ಯಕ್ಕೆ ಈ ಸಾಲೆಯಲ್ಲಿಯ ವಿದ್ಯಾರ್ಥಿನಿಯರ ಸಂಖ್ಯೆಯು ೨೩ ಇದ್ದಿತು. ಕೆಲವು ತಿಂಗಳಿನ ನಂತರ ಅಂದರೆ ೧೮೮೩ರ ಕೊನೆಗೆ ಒಂದು ಮತಾಂತರದ ಕಾರಣ ದಿಂದ ಅದರನ್ವಯ ವಿದ್ಯಾರ್ಥಿನಿಯರ ಸಂಖ್ಯೆಯು ೩ಕ್ಕೆ ಇಳಿಯಿತು; ಅನೇಕ ಪಾಲ ಕರು ತಮ್ಮ ಮಕ್ಕಳ ಹೆಸರುಗಳನ್ನು ತೆಗೆಯಿಸಿದರು. ಈ ಸಾಲೆಯು ಅಲ್ಪಸಂಖ್ಯೆ ಯಿಂದಲೇ ಮುಂದೆ ಒಂದೆರಡು ವರ್ಷ ನಡೆಯಿತು. ೧೮೮೫ರಲ್ಲಿ ಕೆಲವು ಕೊಡಗರು ಮತ್ತು ಹಿಂದೂಗಳು ಮತ್ತೆ ತಮ್ಮ ಬಾಲಿಕೆಯರನ್ನು ಈ ಸಾಲೆಗೆ ಕಳಿಸತೊಡಗಿದರು; ಇದರಿಂದ ವಿದ್ಯಾರ್ಥಿನಿಯರ ಸಂಖ್ಯೆಯು ೧೧೧ ಆಯಿತು. ಆದುದರಿಂದ ೧೮೮೫ರಲ್ಲಿ ಮುಖ್ಯ ಕಮೀಶನರನು ಈ ಸಾಲೆಗೆ ತಿಂಗಳಿಗೆ ೧೨ ರೂಪಾಯಿಯಂತೆ ಸಹಾಯ ಧನ ಮಂಜೂರ ಮಾಡಿದನು; ೧೮೮೬ರಲ್ಲಿ ಈ ಹಣವನ್ನು ತಿಂಗಳಿಗೆ ೩೦/- ರೂಪಾಯಿಗೆ ಹೆಚ್ಚಿಸಬೇಕೆಂದು ಕಮಿಶನರನಿಗೆ ಆಜ್ಞಾಪಿಸಿದನು. ಈ ಹೆಚ್ಚಳವು ಕಾರ್ಯರೂಪ ಕ್ಕಿಳಿಯದ್ದರಿಂದ ೧೮೯೧ರಲ್ಲಿ ಈ ಸಾಲೆಯು ಮುಚ್ಚಿತು.

೧೮೮೪ರಲ್ಲಿ ಮಡಿಕೇರಿಯ ಉತ್ತರ ಬಡಾವಣೆಯ ಮಹಾದೇವ ಬಾಸೆಲ್ ಮಿಶನ್‌ದವರು ಬಾಲಿಕೆಯರ ಶಾಲೆಯೊಂದನ್ನು ತೆರೆದರು. ಮಡಿಕೇರಿ ನಗರಸಭೆ ಯವರು ೧೦/- ರೂಪಾಯಿ ಧನಸಹಾಯ ಕೊಡತೊಡಗಿದರು; ಇಲ್ಲಿ ಕಲಿಯುವ ವಿದ್ಯಾರ್ಥಿನಿಯರು ಬಡಕುಟುಂಬದವರಿದ್ದರು. ಆದರೆ ಎರಡು ವರ್ಷಗಳಲ್ಲಿಯೇ ಈ ಸಾಲೆಯು ಮುಚ್ಚಲ್ಪಟ್ಟಿತೆಂದು ತಿಳಿಯುತ್ತದೆ. ೧೮೯೬ರಲ್ಲಿ ಮಡಿಕೇರಿ ನಗರ ಸಭೆಯವರು ಬಾಲಿಕೆಯರ ಸಾಲೆಯೊಂದನ್ನು ಸ್ಥಾಪಿಸಿದರು. ನಗರ ಸಭೆಯವರು ತಿಂಗಳಿಗೆ ೫೦/- ರೂಪಾಯಿಗಳನ್ನು ಕೊಡುತ್ತಿದ್ದರು. ಆದರೆ ಈ ಸಾಲೆಯು ಸಹ ೧೮೯೭ನೇ ಜೂನ ತಿಂಗಳಲ್ಲಿ ಮುಚ್ಚಲ್ಪಟ್ಟಿತು.

ಈ ರೀತಿಯಾಗಿ ಬಾಲಿಕೆಯರ ಸಾಲೆಗಳು ನಡೆಯದಿದ್ದುದು ನಿಜವಾದರೂ, ಇಡೀ ಕೊಡಗಿನಲ್ಲಿ ಬಾಲಿಕೆಯರು ಬಾಲಕರ ಸಾಲೆಗೆ ಹೋಗುತ್ತಿದ್ದುದು ನಿಃಸಂದೇಹ. ೧೮೮೪-೮೫ರ ವರದಿಯ ಪ್ರಕಾರ ಒಟ್ಟು ೫೧೯ ಬಾಲಿಕೆಯರು ಕೊಡಗಿನ ಬೇರೆ ಬೇರೆ ಸಾಲೆಗಳಲ್ಲಿ ಅಭ್ಯಾಸ ಮಾಡುತ್ತಿದ್ದರೆಂದು ತಿಳಿಯುತ್ತದೆ. ಇವರಲ್ಲಿ ೬೯ ವಿದ್ಯಾರ್ಥಿ ನಿಯರು ಅನುದಾನ ಪಡೆಯುತ್ತಿದ್ದ ಸಾಲೆಗಳಲ್ಲಿ, ೪೯ ಖಾಸಗಿ ಸಾಲೆಗಳಲ್ಲಿ, ೧೫ ನಗರಸಭೆಯ ಸಾಲೆಗಳಲ್ಲಿ, ೩೮೬ ವಿದ್ಯಾ ಇಲಾಖೆಯ ಸಾಲೆಗಳಲ್ಲಿ ಕಲಿಯುತ್ತಿದ್ದರು.

೧೮೯೧ ರಲ್ಲಿ ವಿರಾಜಪೇಟದಲ್ಲಿ ಬಾಲಿಕೆಯರ ಒಂದು ಖಾಸಗಿ ಸಾಲೆಯು ಪ್ರಾರಂಭಿಸಲ್ಪಟ್ಟಿತು; ಒಟ್ಟು ೪೦ ವಿದ್ಯಾರ್ಥಿನಿಯರು ಅಲ್ಲಿ ಅಭ್ಯಾಸ ಮಾಡುತ್ತಿದ್ದರು. ಈ ಸಾಲೆಯು ಯಶಸ್ವೀ ಸಾಲೆಯಾಗಿ ಪರಿಣಮಿಸಿತು. ೧೮೯೨ರಲ್ಲಿ ಚೀಫ್ ಕಮೀ ಶನರನು ತಿಂಗಳಿಗೆ ೨೦/- ರೂಪಾಯಿ ಸಹಾಯಧನ ಕೊಡುವಂತೆ ವಿರಾಜಪೇಟ ನಗರಸಭೆಗೆ ಹೇಳಿದನು. ೧೮೯೪ರಲ್ಲಿ ಸರಕಾರವು ಈ ಸಾಲೆಯ ಆಡಳಿತೆಯನ್ನು

ವಹಿಸಿಕೊಂಡಿತು. ಮುಖ್ಯಾಧ್ಯಾಪಿಕೆಯ ಸಂಬಳವನ್ನು ತಿಂಗಳಿಗೆ ೨೫/– ರೂಪಾಯಿ ಗಳಿಗೇರಿಸಿತು. ಆಕೆಯ ಕೈಕೆಳಗೆ ಒಬ್ಬ ಸಹಾಯಕ ಶಿಕ್ಷಿಕೆಯನ್ನು ನೇಮಿಸಿತು. ಈಕೆಯ ಸಂಬಳ ತಿಂಗಳಿಗೆ ೧೦/– ರೂಪಾಯಿ ಆಗಿದ್ದಿತು. ೧೮೯೮ ರಲ್ಲಿ ನದಿ-ಕೆರಿಯಂದ್ರ ಕರಿಯಪ್ಪನೆಂಬ ಶಿಕ್ಷಣಪ್ರೇಮಿಯು ಈ ಸಾಲೆಗೆ ಒಂದು ಇಮಾರತಿಯನ್ನು ಕಟ್ಟಿಸಿದನು.

ತಾಂತ್ರಿಕ ಶಿಕ್ಷಣ :— ೧೯ನೇ ಶತಮಾನದಲ್ಲಿ ತಾಂತ್ರಿಕ ವಿಷಯಗಳನ್ನು ಅಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಶಿಷ್ಯವೇತನ ಕೊಡುವ ಕೆಲಸವ ಹೊರತು ಬೇರೆ ಯಾವ ಕೆಲಸವೂ ಆಗಲಿಲ್ಲ.

ವಿಶಿಷ್ಟ ವರ್ಗಗಳ ಶಿಕ್ಷಣ

(ಅ) ಯುರೋಪಿಯನ್ನರು ಮತ್ತು ಯುರೇಸಿಯನ್ನರು: –.–

ಈ ವರ್ಗಗಳವರ ಸಲುವಾಗಿ ೧೮೮೪ ರಲ್ಲಿ ಮಡಿಕೇರಿಯ ಕಿಲ್ಲೆಯ ಆವಾರದಲ್ಲಿ ಸೇಂಟ ಮಾರ್ಕ್ಸ ಸಾಲೆಯೆಂಬ ಹೆಸರಿನಿಂದ ಒಂದು ಸಾಲೆಯು ಪ್ರಾರಂಭವಾಯಿತು. ೧೮೮೪–೮೫ ರಲ್ಲಿ ಈ ಸಾಲೆಯಲ್ಲಿ ಹದಿನಾರು ವಿದ್ಯಾರ್ಥಿಗಳಿದ್ದರು. ಸರಕಾರದವರು ಈ ಸಾಲೆಗೆ ತಿಂಗಳಿಗೆ ೧೦೦/– ರೂಪಾಯಿಗಳ ಸಹಾಯ ಧನ ಕೊಡುತ್ತಿದ್ದರು. ಇದಲ್ಲದೆ ಹಾಜರಿ ಸಹಾಯಧನವೆಂದು ಒಬ್ಬ ವಿದ್ಯಾರ್ಥಿಗೆ, ತಿಂಗಳಿಗೆ ಒಂದು ರೂ. ಯಂತೆ ಕೊಡುತ್ತಿದ್ದರು. ೧೮೯೧–೯೨ರಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ೨೬ ಆಯಿತು. ೧೮೯೪–೯೫ ರಲ್ಲಿ ಈ ಸಂಖ್ಯೆಯು ಒಮ್ಮೆಲೇ ಕಡಿಮೆಯಾಗಿ ೧೧ಕ್ಕೆ ಇಳಿಯಿತು. ೧–೪–೧೮೯೬ ರಲ್ಲಿ ಈ ಸಾಲೆಯು ಮುಚ್ಚಿತು.

(ಬ) ಮುಸಲ್ಮಾನರ ಶಿಕ್ಷಣ :

೧೮೮೫ ರಲ್ಲಿ ಮಡಿಕೇರಿ ಮತ್ತು ವಿರಾಜಪೇಟ ನಗರ ಸಭೆಗಳು ಮುಸಲ್ಮಾನ ಬಾಲಕರ ಸಲುವಾಗಿ ಒಂದೊಂದು ಸಾಲೆಯನ್ನು ತೆರೆದವು. ಈ ಸಾಲೆಗಳಲ್ಲಿ ಅಭ್ಯಾಸ ಮಾಡುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆಯು ೮೦ ಇದ್ದಿತು. ಗ್ರಾಮಾಂತರ ಪ್ರದೇಶದಲ್ಲಿ ಮುಸಲ್ಮಾನರ ಸಂಖ್ಯೆಯು ಕಡಿಮೆ ಇದ್ದುದರಿಂದ ಅವರ ಸಲುವಾಗಿ ಪ್ರತ್ಯೇಕ ಸಾಲೆ ಗಳನ್ನು ತೆರೆಯುವದು ಅನವಶ್ಯವೆನಿಸಿತು. ಇದೂ ಅಲ್ಲದೆ, ಹಳ್ಳಿಗಳಲ್ಲಿಯ ಮುಸಲ್ಮಾನ ರಲ್ಲಿ ಪ್ರತಿಶತ ೯೦ರಷ್ಟು ಜನರು ಮಲೆಯಾಳಿ ಭಾಷೆಯಾಡುವ ಮಾಪಿಲ್ಲರಾಗಿದ್ದರು. ಅವರು ತಮ್ಮ ಮಕ್ಕಳ ಸಲುವಾಗಿ ಖಾಸಗಿ ಆರೇಬಿಕ್ ಸಾಲೆಗಳನ್ನು ನಡೆಸುತ್ತಿದ್ದರು. ಇಂಥ ಸಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಕುರಾಣದಲ್ಲಿಯ ಸುಲಭ ಪದ್ಯಗಳನ್ನು ಓದಲಿಕ್ಕೆ, ಬರೆಯಲಿಕ್ಕೆ ಮತ್ತು ಸುಲಭ ಗಣಿತ ಇವನ್ನು ಕಲಿಸಲಾಗುತ್ತಿತ್ತು.

(ಕ) ಮಡಿಕೇರಿಯ ತಮಿಳರು :

೧೮೮೫ ರಲ್ಲಿ ಮಡಿಕೇರಿ ನಗರ ಸಭೆಯವರು ತಮಿಳರಿಗಾಗಿ ಸಾಲೆಯೊಂದನ್ನು ತೆರೆದರು. ಈ ಸಾಲೆಯಲ್ಲಿ ೧೮೮೬ರಲ್ಲಿ ೨೬ ಬಾಲಕರು ಮತ್ತು ೯ ಬಾಲಿಕೆಯರು ಅಭ್ಯಾಸ ಮಾಡುತ್ತಿದ್ದರು. ಆದರೆ ಮುಂದಿನ ಕೆಲವು ವರ್ಷಗಳಲ್ಲಿ ತಮಿಳರ ಸಂಖ್ಯೆಯು ಕಡಿಮೆಯಾದ್ದರಿಂದ ನಗರಸಭೆಯು ಆ ಸಾಲೆಯನ್ನು ಮುಚ್ಚಿತು.

(ಡ) ಪರಯಾರರು (ಈಗಿನ ಹರಿಜನರು) :

ಪೂರ್ವ ಕೊಡಗಿನಲ್ಲಿರುವ ಹೆಬ್ಬಳೆಯ ಪರಯಾರರ ವಿನಂತಿಯ ಮೇರೆಗೆ ೧೮೮೪ರಲ್ಲಿ ಅವರ ಮಕ್ಕಳ ಸಲುವಾಗಿ ಒಂದು ಸಾಲೆಯು ಸ್ಥಾಪಿಸಲ್ಪಟ್ಟಿತು. ತುಸು ತೊಂದರೆಯಿಂದ ಓದು, ಬರೆಹ, ಗಣಿತ ಬಲ್ಲ ಓರ್ವ ಪರಮಾ ಶಿಕ್ಷಕರು ದೊರೆತರು. ಆ ಸಾಲೆಯಲ್ಲಿ ೩೦ ವಿದ್ಯಾರ್ಥಿಗಳಿದ್ದರು.

(ಇ) ಆಡಳಿತೆಯ ಯಂತ್ರ :

೧೮೫೭ ರಲ್ಲಿ ಶಿಕ್ಷಣ ಇಲಾಖೆಯು ಅಸ್ತಿತ್ವದಲ್ಲಿ ಬಂದಿತು. ಈ ಇಲಾಖೆಯು ಮೈಸೂರ ಶಿಕ್ಷಣ ಇಲಾಖೆಯ ನಿರ್ದೇಶಕನ ನೇತೃತ್ವದಲ್ಲಿ ಇಡಲ್ಪಟ್ಟಿತು. ೧೮೬೩ರಲ್ಲಿ ಗ್ರಾಮಾಂತರ ಪ್ರದೇಶದ ಸಾಲೆಗಳ ತಪಾಸಣೆಯು ಮಡಿಕೇರಿಯಲ್ಲಿದ್ದ ಕೇಂದ್ರ ಸಾಲೆಯ ಪ್ರಿನ್ಸಿಪಾಲ ರೆ. ಜಿ. ರಿಚ್‌ರ್ಟ ಅವರಿಂದ ಆಗುತ್ತಿತ್ತು. ೧೮೭೧ರಲ್ಲಿ ಅವರ ಹುದ್ದೆಯು ಪ್ರಿನ್ಸಿಪಾಲ ಮತ್ತು ದೇಶೀಯ ಸಾಲೆಗಳ ತಪಾಸಣಾಧಿಕಾರಿ ಎಂದು ಆಯಿತು. ೧೮೭೧ರಲ್ಲಿ ಸಬ್‌-ಡೆಪ್ಯುಟಿ ಇನಸ್ಪೆಕ್ಟರನ ನೇಮಕವಾಯಿತು.

ಕ್ರಿ. ಶ. ೧೮೭೭ ರಲ್ಲಿ ಕೇಂದ್ರ ಸಾಲೆಯ ಪ್ರಿನ್ಸಿಪಾಲ ಮತ್ತು ಶಾಲಾ ತಪಾಸಣಾಧಿಕಾರಿ ಹೀಗೆ ಪ್ರತ್ಯೇಕ ಸ್ಥಳಗಳು ಮಂಜೂರಾದವು. ತಪಾಸಣಾಧಿ-ಕಾರಿಯ ತಿಂಗಳ ಸಂಬಳವನ್ನು ೫೦೦/- ರೂಪಾಯಿಯೆಂದು ನಿಗದಿಪಡಿಸಲಾಯಿತು. ಸಬ್‌-ಡೆಪ್ಯುಟಿ ಇನಸ್ಪೆಕ್ಟರನ ಹುದ್ದೆಯನ್ನು ತೆಗೆದೊಗೆಯಲಾಯಿತು. ಆದರೆ ೧೮೮೦ ರಲ್ಲಿ ಮತ್ತೆ ನಿರ್ಮಿಸಲಾಯಿತು. ೧೮೮೧ ರಲ್ಲಿ ಕೊಡಗಿನ ಶಿಕ್ಷಣ ಇಲಾಖೆಯು ಮೈಸೂರ ವಿದ್ಯಾ ಇಲಾಖಾ ನಿರ್ದೇಶಕನಿಂದ ಪ್ರತ್ಯೇಕವಾಯಿತು. ಕೊಡಗಿನ ಮುಖ್ಯ ಕಮೀಶನರನು ಸ್ಥಾನಬಲದಿಂದ ವಿದ್ಯಾ ಇಲಾಖೆಯ ನಿರ್ದೇಶಕನಾದನು. ಶಾಲಾ ತಪಾಸಣಾಧಿಕಾರಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟನು. ನಗರ ಸಭೆಯ ಸಾಲೆಗಳು ಆ ಸಭೆಯ ವಶದಲ್ಲಿಯೇ ಇದ್ದವು. ಕಮೀಶನರನು ಹಣಕಾಸಿನ ಕಾಗದ-ಪತ್ರಗಳಿಗೆ ಮೇಲ ಸಹಿ ಹಾಕುತ್ತಿದ್ದನು. ಸ್ಥಾನಿಕ ನಿಧಿ ಶಾಲಾ ಶಿಕ್ಷಕರು, ನೌಕರಿ-ಯಿಂದ ತೆಗೆಯಲ್ಪಟ್ಟರೆ, ಹಿಂಬಡತಿ ಮಾಡಲ್ಪಟ್ಟರೆ, ಮೂರು ತಿಂಗಳಿಗಿಂತ ಹೆಚ್ಚಿನ ಅವಧಿಯವರೆಗೆ ತಹಕೂಬ ಇಡಲ್ಪಟ್ಟರೆ ಮುಖ್ಯ ಕಮೀಶನರನ ಕಡೆಗೆ ಮೇಲ್ಮನವಿ-ಯನ್ನು ಸಲ್ಲಿಸಬಹುದಾಗಿತ್ತು.

ಇದು ೧೯ನೇ ಶತಮಾನದ ಕೊಡಗಿನ ಶಿಕ್ಷಣದ ಸಂಕ್ಷಿಪ್ತ ಇತಿಹಾಸ.ಕೊಡಗಿನ ಜನರು ಶೂರರೂ ಧೀರರೂ ಇದ್ದಂತೆ ಶಿಕ್ಷಣ ಪ್ರೇಮಿಗಳೂ ಸಹ ಇದ್ದರೆಂದು ಇದರಿಂದ ಕಂಡು ಬರುತ್ತದೆ. ಶಾಲೆಗಳನ್ನೂ, ವಸತಿ ಗೃಹಗಳನ್ನು ಕಟ್ಟಿಸಲು ಮುಂದೆ ಬಂದ ಉದಾಹರಣೆಗಳಿಂದ ಇದು ವ್ಯಕ್ತವಾಗುತ್ತದೆ. ಆದರೆ ಅರಣ್ಯ ಪ್ರದೇಶದಿಂದ ಕೂಡಿದ ಆ ನಾಡಿನಲ್ಲಿ ಅಂದು ಸಂಚಾರ ಹಾಗೂ ಸಂಪರ್ಕ ಸೌಕರ್ಯಗಳ ಅಭಾವದಿಂದ ಮತ್ತು ರಾಜಕೀಯ ಮೊದಲಾದ ಸ್ಥಿತ್ಯಂತರಗಳಿಂದ ಕೆಲವು ಅಂಶಗಳಲ್ಲಿ ಶಿಕ್ಷಣ ಪ್ರಸಾರವು ಸಾಕಷ್ಟು ಪ್ರಮಾಣದಲ್ಲಿ ಆಗದಿದ್ದುದು ಕಂಡು ಬರುತ್ತದೆ. ಆದರೆ ಈ ಶತಮಾನದಲ್ಲಿ ಕೊಡಗು ನಮ್ಮ ರಾಜ್ಯದಲ್ಲಿ ಶಿಕ್ಷಣ ವಿಷಯದಲ್ಲಿ ಮುಂದುವರಿದ ಜಿಲ್ಲೆಗಳಲ್ಲಿ ಒಂದು ಎಂದು ಪರಿಗಣಿಸಲ್ಪಡುತ್ತದೆ. ಇದು ಅಲ್ಲಿರುವ ಸಾಕ್ಷರರ ಸಂಖ್ಯೆ ಪ್ರಮಾಣದಿಂದ ವ್ಯಕ್ತವಾಗುತ್ತದೆ.

ಆಧಾರ

History of Education in Coorg (up to 1st November 1956)

by

A. C. Devegouda, D. P. I. in Mysore (Retd.)

and

D. N. Krishnayya, Head Master (Retd.)

◎◎◎

'ಡಿಪ್ಟಿ' ಯಾಗಿ ಚನ್ನಬಸಪ್ಪನು ಪ್ರಾಥಮಿಕ ಶಾಲೆಗಳು, ಶಿಕ್ಷಕರು ಟ್ರೇನಿಂಗ ಕಾಲೇಜ್, ಪಠ್ಯ ಪುಸ್ತಕ ರಚನೆ, ಮುದ್ರಣ ಮುಂತಾದ್ದರಲ್ಲಿ ಕನ್ನಡದ ಅಸ್ತಿವಾರವನ್ನು ಭದ್ರಪಡಿಸಿದ ಮಹಾನುಭಾವನು. ಮುಖ್ಯತಃ ಕನ್ನಡವೆಂದರೆ ಸಂಪೂರ್ಣ ಅಸಡ್ಡೆ ಇರುವ ಕಾಲದಲ್ಲಿ ತನ್ನ ಸಂಪರ್ಕಕ್ಕೆ ಬಂದವರೆಲ್ಲರಿಗೂ ಕನ್ನಡ ದೀಕ್ಷೆಯನ್ನು ಕೊಟ್ಟದ್ದುದು ಅವನ ಹೆಚ್ಚುಗಾರಿಕೆಯಾಗಿದೆ. ಅವನು ಹೋದ ಹೋದಲ್ಲಿ ಕನ್ನಡ ಭಾಷೆಯ ಮತ್ತು ಕರ್ನಾಟಕದ ವಿಷಯವಾಗಿ ಜನರಿಗೆ ತಿಳಿಸಿ ಹೇಳುವ ಯಾವ ಸಂಧಿಯನ್ನೂ ಕಳೆದುಕೊಳ್ಳುತ್ತಿದ್ದಿಲ್ಲ.

—ಫ. ಗು. ಹಳಕಟ್ಟಿ

(ಚನ್ನಬಸಪ್ಪ ಬಸವಲಿಂಗಪ್ಪ ಧಾರವಾಡ ಇವರ ಚರಿತ್ರೆಯ ಪುಸ್ತಕದಿಂದ)

ಮುಂಬೈ ಕರ್ನಾಟಕದ ಸಂಸ್ಥಾನೀ ಪ್ರದೇಶಗಳಲ್ಲಿದ್ದ ಹತ್ತೊಂಭತ್ತನೆಯ ಶತಮಾನದ ಶಿಕ್ಷಣದ ಒಂದು ನೋಟ

--ಗೋವಿಂದಮೂರ್ತಿ ದೇಸಾಯಿ

ಮುಂಬೈ ಕರ್ನಾಟಕದ ಧಾರ್ವಾಡ, ಬೆಳಗಾವಿ, ವಿಜಾಪುರ ಹಾಗು ಹಳೆ ಮುಂಬೈ ಪ್ರಾಂತದ ಸೊಲ್ಲಾಪುರ ಹಾಗು ಅದರ ಸುತ್ತುಮುತ್ತು ಇದ್ದ ಸಂಸ್ಥಾನೀ ಪ್ರದೇಶವನ್ನೆಲ್ಲಾ ಅಚ್ಚ ಕನ್ನಡನಾಡಿನ ಪ್ರದೇಶವೆಂದು ಗುರುತಿಸಲ್ಪಡುತ್ತಿದ್ದವು. ಹದಿಮೂರು ಸಂಸ್ಥಾನಗಳು ಈ ಕನ್ನಡ ಪ್ರದೇಶದಲ್ಲಿ ಪ್ರಭುತ್ವವನ್ನು ನಡೆಸುತ್ತಿದ್ದವು.

ಅ. ನಂ.	ಸಂಸ್ಥಾನಗಳು	ವಿಸ್ತಾರ (ಚ. ಮೈ.)	ಕನ್ನಡ ಪ್ರದೇಶ
೧.	ಅಕ್ಕಲಕೋಟಿ	೪೯೮	ಪೂರ್ಣ
೨.	ಔಂಧ	೫೦೧	೧/೩
೩.	ಕುರುಂದವಾಡ (ಹಿರಿ)	೧೮೨	೨/೩
೪.	ಕುರುಂದವಾಡ (ಕಿರಿ)	೧೧೬	ಪೂರ್ಣ
೫.	ಕೊಲ್ಹಾಪುರ	೩,೨೧೭	೧/೪
೬.	ಮಿರಜ (ಹಿರಿ)	೩೪೨	೧/೨
೭.	ಮಿರಜ (ಬುಧಗಾವ)	೧೯೬	ಪೂರ್ಣ
೮.	ಜತ್ತ	೯೮೦	ಪೂರ್ಣ
೯.	ಮುಧೋಳ	೩೬೮	ಪೂರ್ಣ
೧೦.	ರಾಮದುರ್ಗ	೧೬೯	ಪೂರ್ಣ
೧೧.	ಸಾಂಗ್ಲಿ	೧,೧೩೬	೧/೫
೧೨.	ಸವಣೂರ	೭೩	ಪೂರ್ಣ
೧೩.	ಜಮಖಂಡಿ	೫೨೪	೩/೪

ಶ್ರೀ ಗೋವಿಂದಮೂರ್ತಿ ದೇಸಾಯಿಯವರು ಸ್ಟೇಟ ಬ್ಯಾಂಕ ಆಫ್ ಇಂಡಿಯಾ ಬೆಂಗಳೂರ ಶಾಖೆಯಲ್ಲಿ ಸದ್ಯ ಕಾರ್ಯಮಾಡುತ್ತಿದ್ದು ತಮ್ಮ ರಂಜನಾತ್ಮಕ ಬರಹಗಳಿಂದಾಗಿ ನಮ್ಮೆಲ್ಲರಿಗೆ ಪರಿಚಿತರಾಗಿದ್ದಾರೆ.

ಅಚ್ಚ ಕನ್ನಡ ಪ್ರದೇಶಗಳಾಗಿದ್ದ ಅಕ್ಕಲಕೋಟೆ, ಕುರಂದವಾಡ, ಜತ್ತಗಳು ಈಗ ಸಂಪೂರ್ಣವಾಗಿ ಮಹಾರಾಷ್ಟ್ರದಲ್ಲಿ ವಿಲೀನಗೊಂಡಿವೆ. ಔಂಧಕ್ಕೆ ಸೇರಿದ್ದ ಗುಣದಾಳ ಗ್ರಾಮಗಳ ಗುಂಪು, ಮುಧೋಳ ಹಾಗು ಜಮಖಂಡಿ ಸಂಸ್ಥಾನದ ಬಹು-ಭಾಗವು ವಿಜಾಪುರ ಜಿಲ್ಹೆಗೆ ಸೇರಿವೆ. ಸಾಂಗ್ಲೀ ಸಂಸ್ಥಾನದ ಶಿರಹಟ್ಟಿ ಭಾಗ, ಮಿರಜದ ಲಕ್ಷ್ಮೇಶ್ವರ ಭಾಗ, ಜಮಖಂಡಿಯ ಕುಂದಗೋಳ, ಬುಧಗಾಂವದ ಗುಡಗೇರಿ–ಶಿಗ್ಲಿ ಪ್ರದೇಶ ಹಾಗು ಸವಣೂರು ಸಂಸ್ಥಾನ ಧಾರವಾಡ ಜಿಲ್ಲೆಯಲ್ಲಿ ಸಮಾವೇಶಗೊಂಡಿವೆ. ಕುರುಂದವಾಡ ವಡಂಗಾವ್, ಸಾಂಗ್ಲಿ ಸಂಸ್ಥಾನದ ತೇರದಾಳ ಶಹಪುರ–ದೊಡ್ಡವಾಡ ಪ್ರದೇಶ, ಕೊಲ್ಹಾಪುರದ ರಾಯಬಾಗ್, ತೊರಗಲ್, ಕಟಕೋಳ ಹಾಗು ರಾಮದುರ್ಗ ಸಂಸ್ಥಾನ ಪ್ರದೇಶಗಳು ಬೆಳಗಾವಿ ಜಿಲ್ಹೆಗೆ ಜೋಡಿಸಲ್ಪಟ್ಟಿವೆ. ಇವೇ ಸಂಸ್ಥಾನೀ ಕನ್ನಡ ಪ್ರದೇಶಗಳು.

ಸಾಂಗ್ಲಿ, ಮಿರಜ, ಕುರಂದವಾಡ ಹಾಗು ಜಮಖಂಡಿ ಸಂಸ್ಥಾನಗಳು ಪಟ-ವರ್ಧನ ಮನೆತನಕ್ಕೆ ಸೇರಿದ್ದು ೧೮೧೧ ರಲ್ಲಿ ಅಸ್ತಿತ್ವಕ್ಕೆ ಬಂದಿದ್ದವು. ಪುಣೆಯ ಪೇಶ್ವೆಯರು ಪರಶುರಾಮಪಂತ ಪಟವರ್ಧನ ಎಂಬ ಸುಪ್ರಸಿದ್ಧ ಸೇನಾಪತಿಗೆ ಜಹಗೀರ ನೀಡಿದ ತಾಸಗಾಂವ ಜಹಗಿರೇ ಈ ನಾಲ್ಕು ಸಂಸ್ಥಾನಗಳಿಗೆ ಜನ್ಮವಿತ್ತಿತ್ತು. ಜಮಖಂಡಿ ಸಂಸ್ಥಾನವು ಇಬ್ಭಾಗವಾಗಿ ಚಿಂಚಣಿ ಎಂಬ ಸಂಸ್ಥಾನವಾಗಿ ಅದು ಮುಂದೆ ಖಾಲಸಾ ಆಯಿತು. ಅದರಂತೆ ಮಿರಜ ಮತ್ತು ಕುರಂದವಾಡ ಸಂಸ್ಥಾನಗಳು ವಿಭಜನೆಗೊಂಡು ಹಿರಿ ಮತ್ತು ಕಿರಿ ಎಂಬ ಎರಡು ಭಾಗಗಳಾದವು. ಈ ನಾಲ್ಕೂ ಸಂಸ್ಥಾನಗಳು ಚಿತ್ತ ಪಾವನ ಬ್ರಾಹ್ಮಣ ಸಂಸ್ಥಾನಿಕರಿಗೆ ಸೇರಿದ್ದರಿಂದ ಸಂಸ್ಥಾನಿಕರ ಮಾತೃಭಾಷೆಯಾದ ಮರಾಠಿಯೇ ಈ ಭಾಗದ ಕನ್ನಡ ಪ್ರಜೆಗಳ ಮೇಲೆ ಹೇರಲ್ಪಟ್ಟಿತ್ತು. ಅದರಂತೆ, ಸವಣೂರೊಂದನ್ನು ಬಿಟ್ಟು, ಉಳಿದೆಲ್ಲ ಸಂಸ್ಥಾನಿಕರು ಮರಾಠರಾಗಿದ್ದರಿಂದ ಸ್ವಾಭಾವಿಕವಾಗಿಯೇ ಅವರ ಭಾಷೆ ಮರಾಠಿಯಾಗಿತ್ತು. ಹೀಗಾಗಿ ಈ ಸಂಸ್ಥಾನಿ ಭಾಗವೆಂದರೆ ಮರಾಠಿ ಭಾಷೆಯ ಪ್ರಭಾವಕ್ಕೊಳಗಾದ ಪ್ರದೇಶವಾಗಿತ್ತು. ಅಂತಲೇ ಕನ್ನಡ ನಾಡಿನಲ್ಲಿದ್ದ ಈ ಸಂಸ್ಥಾನಗಳಿಗೆ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನ ಪ್ರದೇಶ ವೆಂದು ಅನ್ನುತ್ತಿದ್ದರು. ಇಪ್ಪತ್ತೆರಡು ಹಳ್ಳಿಗಳ ಸಣ್ಣ ಸಂಸ್ಥಾನವಾದ ಸವಣೂರಲ್ಲಿ ಮಾತ್ರ ಕನ್ನಡವಿತ್ತು. ಆ ಸಂಸ್ಥಾನದ ಶಿಕ್ಷಣದ ರೀತಿ-ನೀತಿಗಳೆಲ್ಲಾ ಧಾರವಾಡ ಜಿಲ್ಲೆಯ ಶಿಕ್ಷಣದ ಧೋರಣೆಯ ಮೇಲೆ ಅವಲಂಬಿತವಾಗಿತ್ತು.

ಈ ಸಂಸ್ಥಾನದ ಪ್ರದೇಶದಲ್ಲಿ ಅಂದು ವಾಕ್ ಸ್ವಾತಂತ್ರ್ಯವೇ ಇರುತ್ತಿರಲಿಲ್ಲ. ಹರಿಕೀರ್ತನೆ, ಭಜನೆ, ಪುರಾಣಗಳಂತಹ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸ-ಬೇಕಾದರೆ ಸರ್ಕಾರದ ಅನುಮತಿ ಬೇಕಾಗುತ್ತಿತ್ತು. ಜನಜಾಗೃತಿಯೇ ಇಲ್ಲದ ಮೇಲೆ ಶಿಕ್ಷಣ ಪ್ರಸಾರದತ್ತ ಯಾರು ಲಕ್ಷವನ್ನು ಹಾಕಬೇಕು ?

೧೮೮೫ ರಲ್ಲಿ ಕಾಂಗ್ರೆಸ್ಸು ಸ್ಥಾಪನೆಯಾದಂದಿನಿಂದಲೇ ಈ ಸಂಸ್ಥಾನಗಳ ಪ್ರಜೆಗಳು ಕಾಂಗ್ರೆಸ್ ಅಧಿವೇಶನಕ್ಕೆ ಹೋಗುತ್ತಿದ್ದರು. ಅಂದಿನ ಕಾಂಗ್ರೆಸ್ ಘಟನೆಯಲ್ಲಿ ಸಂಸ್ಥಾನಗಳ ಸಮಸ್ಯೆಗಳಲ್ಲಿ ಕಾಂಗ್ರೆಸ್ ಪ್ರವೇಶಿಸಬಾರದೆಂಬ ನಿಯಮವಿತ್ತು. ಅಪರೂಪಕ್ಕೊಮ್ಮೆ ಕಾಂಗ್ರೆಸ್ ಅಧಿವೇಶನಗಳಲ್ಲಿ ಸಂಸ್ಥಾನೀ ಪ್ರಜೆಗಳ ವಿಚಾರದ ಬಗ್ಗೆ ಗೊತ್ತುವಳಿ ಆಗುತ್ತಿದ್ದವು. ಆಗಿನ ಕಾಂಗ್ರೆಸ್ ಮುಖಂಡರು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದರೂ, ಸಂಸ್ಥಾನಿಕರನ್ನು ಒಳ್ಳೇ ಸ್ನೇಹದಿಂದ ಕಾಣುತ್ತಿದ್ದರು. ೧೮೯೪ರ ಕಾಂಗ್ರೆಸ್ ಅಧಿವೇಶನದಲ್ಲಿ ಮೈಸೂರು ಮಹಾರಾಜರ ನಿಧನದ ಬಗ್ಗೆ ಒಂದು ಸಂತಾಪ ಸೂಚಕ ಗೊತ್ತುವಳಿ ಪಾಸಾಗಿತ್ತು. ರೆಸಿಡೆಂಟರ ಆಡಳಿತೆಯಲ್ಲಿದ್ದ ಸಂಸ್ಥಾನಗಳಲ್ಲಿ ವೃತ್ತ ಪತ್ರಿಕೆಗಳನ್ನು ನಿರ್ಬಂಧಿಸಿದ್ದರಿಂದ, ಅದನ್ನು ಖಂಡಿಸುವ ಒಂದು ನಿರ್ಣಯವು ೧೮೯೬ ರ ಕಾಂಗ್ರೆಸ್ ಅಧಿವೇಶನದಲ್ಲಿ ತೆಗೆದುಕೊಳ್ಳಲ್ಪಟ್ಟಿತ್ತು. "ದುರಾಡಳಿತ ಇಲ್ಲವೆ ದುರ್ನಡತೆಯ ಆಪಾದನೆಯ ಬಗ್ಗೆ ಯೋಗ್ಯ ಟ್ರಿಬ್ಯುನಲ್ ಮುಂದೆ ವಿಚಾರಣೆ ಆಗದೆ ಹಾಗು ಆಪಾದನೆ ಸಿದ್ಧವಾಗದ ವಿನಃ ಯಾವದೇ ಸಂಸ್ಥಾನಿಕರನ್ನು ಪದಚ್ಯುತಗೊಳಿಸಬಾರದು" ಎಂಬಾಶಯದ ಗೊತ್ತುವಳಿಗಳು ೧೨ ನೇ ೧೩ ನೇ ಹಾಗು ೧೮ ನೇ ಕಾಂಗ್ರೆಸ್ ಅಧಿವೇಶನಗಳಲ್ಲಿ ಪಾಸಾದವು. ಸಂಸ್ಥಾನಿಕರನ್ನು ಸೈನ್ಯದಲ್ಲಿ ಕಮೀಶನ್ಡ್ ಆಫೀಸರರನ್ನಾಗಿ ನಿಯಮಿಸುವ ಬ್ರಿಟೀಶ ಸರ್ಕಾರದ ನೀತಿಯನ್ನು ಅಭಿನಂದಿಸುವ ಗೊತ್ತುವಳಿ ೧೭ ನೇ ಅಧಿವೇಶನದಲ್ಲಿ ಸ್ವೀಕರಿಸಲ್ಪಟ್ಟಿತ್ತು. ಆದರೆ ಆ ಸಂಸ್ಥಾನಗಳ ಪ್ರಜೆಗಳ ಕಷ್ಟದ ಬಗ್ಗೆ ಕಾಂಗ್ರೆಸ್ ಅಂದು ಒಂದು ಮಾತನ್ನೂ ಆಡುತ್ತಿರಲಿಲ್ಲ. ಪ್ರಾಯಶಃ ಈ ಸಂಸ್ಥಾನಿಕರಿಂದ ಸ್ವಾತಂತ್ರ್ಯ ಬೇಗನೇ ಬರಬಹುದೆಂಬ ಕಲ್ಪನೆ ಅಂದಿನ ಮುಖಂಡರಲ್ಲಿ ಮೂಡಿ ಬಂದಿರಲು ಸಾಕು. ಹೀಗಾಗಿ ಯಾವ ರಾಜಕೀಯ ಒತ್ತಾಯವೂ ಈ ಸಂಸ್ಥಾನೀ ಪ್ರಜೆಗಳ ಆಗು-ಹೋಗುಗಳ ಬಗ್ಗೆ ಸಂಸ್ಥಾನಿಕರ ಮೇಲೆ ಬರುತ್ತಿರಲಿಲ್ಲ.

ಸಂಸ್ಥಾನೀ ಪ್ರದೇಶಗಳಲ್ಲಿ ಶಿಕ್ಷಣದ ಬಗ್ಗೆ ಸರಕಾರವೂ ಯಾವ ಆಸ್ಥೆಯನ್ನೂ ವಹಿಸುತ್ತಿರಲಿಲ್ಲ. ಆಯಾ ಜಿಲ್ಹೆಯ ಬ್ರಿಟೀಶ ಪ್ರದೇಶದಲ್ಲಿ ನಡೆಯುವ ಶೈಕ್ಷಣಿಕ ಚಟವಟಿಕೆಗಳನ್ನೇ ಈ ಸಂಸ್ಥಾನೀ ಪ್ರದೇಶಗಳೂ ಮಾದರಿಯಾಗಿ ತೆಗೆದುಕೊಳ್ಳುತ್ತಿದ್ದವು. ಹೀಗಾಗಿ ಜಿಲ್ಹೆಯ ಪಠ್ಯಪುಸ್ತಕಗಳೇ ಈ ಭಾಗದಲ್ಲಿ ಪಠ್ಯಪುಸ್ತಕಗಳಾಗುತ್ತಿದ್ದವು. ಆದರೆ ಮರಾಠಿ ಭಾಷೆಯ ಪ್ರಭಾವ ಮಾತ್ರ ಅತಿಯಾಗಿತ್ತು. ಅಂದು ಈ ಸಂಸ್ಥಾನೀ ಪ್ರದೇಶಗಳಲ್ಲಿ ಸವಣೂರ ಸಂಸ್ಥಾನ ಒಂದನ್ನು ಬಿಟ್ಟರೆ, ಸರಕಾರೀ ಭಾಷೆ ಮರಾಠಿಯಾಗಿತ್ತು. ಹೀಗಾಗಿ ನೌಕರಿ ಪಡೆಯುವವರಿಗೆ ಮರಾಠಿ ಬರಲೇ ಬೇಕಿತ್ತು.

ಆಗಿನ ಶಿಕ್ಷಣವೆಂದರೆ ಕನ್ನಡ ಮುಲ್ಕೀ ಪರೀಕ್ಷೆ ಅಥವಾ ಮ್ಯಾಟ್ರಿಕ್. ಮುಲ್ಕೀ ಪರೀಕ್ಷೆಗೆ ಮಾತ್ರ ಸಂಸ್ಥಾನಗಳ ಎಲ್ಲ ಶಾಲೆಗಳು ಆಯಾ ಜಿಲ್ಹಾ ಕೇಂದ್ರದಲ್ಲಿ ಬ್ರಿಟೀಶ

ಪ್ರದೇಶದವರು ಅಥವಾ ಮುಂಬೈ ಪ್ರಾಂತಿಕ ಸರಕಾರದವರು ನಡೆಸುತ್ತಿದ್ದ ಮುಲ್ಕೀ ಪರೀಕ್ಷೆಗೆ ಕೂಡಬೇಕಾಗುತ್ತಿತ್ತು. ಅದರಂತೆಯೇ ಮುಂಬೈ ವಿಶ್ವವಿದ್ಯಾಲಯದವರು ನಡೆಸುತ್ತಿದ್ದ ಮ್ಯಾಟ್ರಿಕ್ ಪರೀಕ್ಷೆಗೆ ಈ ಭಾಗದ ವಿದ್ಯಾರ್ಥಿಗಳು ಕೂಡಬೇಕಾ-ಗುತ್ತಿತ್ತು. ಇದರಿಂದ ಸಂಸ್ಥಾನೀ ಪ್ರದೇಶಗಳಿಗಾಗಿಯೇ ಸಂಸ್ಥಾನಿಕರು ತಮ್ಮ ಸಂಸ್ಥಾನಗಳಲ್ಲಿ ಯಾವ ಶೈಕ್ಷಣಿಕ ಧೋರಣೆಯನ್ನೂ ರೂಪಿಸುತ್ತಿರಲಿಲ್ಲ. ಈ ಭಾಗದಲ್ಲಿ ಬೇರೆ ವಿಶ್ವವಿದ್ಯಾಲಯವಿರಲಿ ಯಾವ ಕಾಲೇಜಗಳು ಕೂಡ ಇರಲಿಲ್ಲ. ಈ ಭಾಗದ-ವರೆಲ್ಲಾ ಆಗ ಧಾರವಾಡವನ್ನೇ ಹೆಚ್ಚಿನ ಶಿಕ್ಷಣಕ್ಕೆ ಅವಲಂಬಿಸಬೇಕಾಗುತ್ತಿತ್ತು.

ಸಂಸ್ಥಾನೀ ಶಾಲೆಗಳಲ್ಲಿ, ಸವಣೂರೊಂದನ್ನು ಬಿಟ್ಟು, ಕಡ್ಡಾಯವಾಗಿ ಮರಾಠಿ ಕಲಿಯಬೇಕಾಗುತ್ತಿತ್ತು. ಕನ್ನಡ ನಾಲ್ಕನೇ ಇಯತ್ತೆಯವರೆಗೆ ಒಂದು ಮರಾಠಿ ಮೌಖಿಕ ಪರೀಕ್ಷೆ ನಡೆಯುತ್ತಿತ್ತು. ಆಗ ಮರಾಠಿ 'ಬಾಲಬೋಧ' ಲಿಪಿಯಲ್ಲಿರದೆ, 'ಮೋಡಿ' ಲಿಪಿಯಲ್ಲಿ ಇರುತ್ತಿತ್ತು. ಅದರಲ್ಲಿಯೇ ಕನ್ನಡ ಮಕ್ಕಳು ಮೌಖಿಕ ಪರೀಕ್ಷೆ ಕೊಡಬೇಕಾಗುತಿತ್ತು. ಸಾಂಗ್ಲೀ ಸಂಸ್ಥಾನದಲ್ಲಿಯಂತೂ ಇದು ಕಡ್ಡಾಯ-ವಾಗಿತ್ತು. ಸವಣೂರಲ್ಲಿ ಮಾತ್ರ ಸಂಪೂರ್ಣ ಕನ್ನಡದಲ್ಲಿಯೇ ಶಿಕ್ಷಣ ನಡೆಯುತ್ತಿತ್ತು. ಆಡಳತೆಯ ಭಾಷೆಯು ಕನ್ನಡವಾಗಿತ್ತು. ಆದರೆ ಉಳಿದ ಎಲ್ಲ ಸಂಸ್ಥಾನೀ ಪ್ರದೇಶ-ಗಳಲ್ಲಿ ಮರಾಠಿಯೇ ಪ್ರಾಬಲ್ಯವನ್ನು ಪಡೆದಿತ್ತು. ಆಗ ಸರಕಾರೀ ನೌಕರಿ ಮಾಡು-ವವರಿಗೆಲ್ಲಾ 'ಮೋಡಿ' ಲಿಪಿಯ ಮರಾಠಿ ಭಾಷೆಯನ್ನು ಓದಲು ಹಾಗು ಬರೆಯಲು ಬರಬೇಕಾಗುತ್ತಿತ್ತು. ಅವರು ಸಹಿಯನ್ನು ಕೂಡ ಮೋಡಿಯಲ್ಲಿಯೇ ಮಾಡುತ್ತಿದ್ದರು. ಹೀಗಾಗಿ ಈ ಪ್ರದೇಶದಲ್ಲಿ ಮರಾಠಿಯೇ ಪ್ರಬಲವಾಗಿತ್ತು.

ಅಂದಿನ ಪಠ್ಯ ವಿಷಯಗಳಲ್ಲಿ ಗಣಿತ, ಭೂಮಿತಿ, ಇತಿಹಾಸ ಭೂಗೋಲ, ಆರೋಗ್ಯ ಶಾಸ್ತ್ರ, ಭಾಷಾಭ್ಯಾಸಗಳು ಪ್ರಾಥಮಿಕ ಶಿಕ್ಷಣ ಮಟ್ಟದಲ್ಲಿ ಬೋಧಿಸಲ್ಪಡು-ತ್ತಿದ್ದವು. ಇವುಗಳ ವ್ಯತಿರಿಕ್ತ ಸಂಸ್ಥಾನೀ ಪ್ರದೇಶದ ಮಕ್ಕಳು ಕೆಲ ಸಂಸ್ಥಾನಗಳಲ್ಲಿ, ಮೋಡಿ ಲಿಪಿಯಲ್ಲಿರುವ ಮರಾಠಿಯ ಒಂದು ಪುಸ್ತಕ ಹಾಗು ಕಡ್ಡಾಯವಾಗಿ ಆ ಸಂಸ್ಥಾನದ ಭೂಗೋಲವನ್ನು ಅಭ್ಯಸಿಸಲೇ ಬೇಕಾಗುತ್ತಿತ್ತು. ಮಾಧ್ಯಮಿಕ ಶಿಕ್ಷಣ ಮಟ್ಟದಲ್ಲಿ ಬೀಜಗಣಿತ, ರಸಾಯನಶಾಸ್ತ್ರ, ವಿಜ್ಞಾನ ಹಾಗೂ ಸಂಸ್ಕೃತಗಳು ಈ ಭಾಗ-ದಲ್ಲಿ ಕಲಿಸಲ್ಪಡುತ್ತಿದ್ದವು. ಸವಣೂರ ಸಂಸ್ಥಾನದಲ್ಲಿ ಬೋಧಭಾಷೆ ಮಾಧ್ಯಮಿಕ ಮಟ್ಟದಲ್ಲಿ ಇಂಗ್ಲೀಷಿನಲ್ಲಿ ನಡೆಯುತ್ತಿತ್ತು. ಆದರೆ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಕನ್ನಡವನ್ನು ಬಳಸುವ ಸ್ವಾತಂತ್ರ್ಯವನ್ನು ಪಡೆದಿದ್ದರು.

ಅಂದು ಹೆಚ್ಚಾಗಿ ಮೌಖಿಕ ಪರೀಕ್ಷೆಗಳೇ ನಡೆಯುತ್ತಿದ್ದವು. ಅಥವಾ ಪಾಟಿ-ಯಲ್ಲಿ ಬಳಪದಿಂದ ಬರೆದರೆ ನಡೆಯುತ್ತಿತ್ತು. ಸಾಂಗ್ಲಿ ಸಂಸ್ಥಾನದಲ್ಲಿ ಪರೀಕ್ಷೆಗೆ ಸಾಂಗ್ಲಿಯಿಂದಲೆ ಒಬ್ಬ ಅಧಿಕಾರಿ ಬರುತ್ತಿದ್ದರು. ಅವರಿಗೆ ಕನ್ನಡವೇ ಬರುತ್ತಿರಲಿಲ್ಲ. ಮರಾಠಿ ಅವರ ಮಾತೃಭಾಷೆ. ಹೀಗಾಗಿ ಪರೀಕ್ಷೆಗೆ ಬಂದರೆ ಹೆಡ್‌ಮಾಸ್ತರರು

ದ್ವಿಭಾಷಿಯಾಗಿ ಡೆಪುಟಿಯವರ ಪ್ರಶ್ನೆಯನ್ನು ಕನ್ನಡದಲ್ಲಿ ಭಾಷಾಂತರಿಸಿ ವಿದ್ಯಾರ್ಥಿಗೂ ಹಾಗು ವಿದ್ಯಾರ್ಥಿಯ ಕನ್ನಡ ಉತ್ತರವನ್ನು ಮರಾಠಿಯಲ್ಲಿಯೂ ಅವರು ಹೇಳ ಬೇಕಾಗುತ್ತಿತ್ತು. ಇದೊಂದು ಮೋಜಿನ ವಿಷಯ. ಡೆಪುಟಿ "ಮಾಸ್ತರ್, ಅವನಿಗೆ ನಾಲ್ಕನೆ ಪಾಠ ಓದಲು ಹೇಳಿರಿ" ಎನ್ನಬೇಕು ಮರಾಠಿಯಲ್ಲಿ ಮಾಸ್ತರರು ವಿದ್ಯಾರ್ಥಿಗೆ ಕನ್ನಡದಲ್ಲಿ ನಾಲ್ಕನೇ ಪಾಠ ಓದು ಅನ್ನಬೇಕು. ವಿದ್ಯಾರ್ಥಿ ತನ್ನ ಅಂಕಲಿಪಿ ತೆರೆದು ಮರಾಠಿ ಶಬ್ದಗಳ ಮೇಲೆ ಕನ್ನಡದಲ್ಲಿ ಬರೆದುಕೊಂಡು ಓದುತ್ತಿದ್ದನು. ಅವನಿಗೆ ನೋಡೀ ಭಾಷೆ ಬರುತ್ತಿರಲಿಲ್ಲ.

ಆ ಮೇಲೆ "ಮಾಸ್ತರ, ಕಾವಳಾ ಮಂಟ್ಲತರ ಕಾಯ್, ವಿಚಾರಾ?" (ಮಾಸ್ತರರೇ 'ಕಾವಳಾ' ಅಂದರೆ ಕನ್ನಡದಲ್ಲಿ ಏನು? ಎಂದು ಕೇಳಿರಿ.) ಎಂದು ಮರಾಠಿಯಲ್ಲಿ ಕೇಳಬೇಕು. ಮಾಸ್ತರರು "ಸಾಹೇಬರು ಈ ಪಾಠದಲ್ಲಿ ಬರುವ 'ಕಾವಳಾ' ಅಂದರ ಏನು ಅಂತ ಕೇಳತಾರ. ಕಾಗೆ ಅಂತ ಹೇಳು" ಎಂದು, ಪ್ರಶ್ನೆಯ ಜೊತೆ ಉತ್ತರವನ್ನೂ ಹೇಳಿಬಿಡುತ್ತಿದ್ದರು. ಆಗ ಹೆಡ್‌ಮಾಸ್ತರರು "ಬರೋಬರ ಸಾಂಗಿತ್ಲ" ಎಂದು ಹೇಳಿ ಮುಂದೆ ನಡೆಯುತ್ತಿದ್ದರು. ಅವರಿಗೆ ತಮ್ಮ ಶಾಲೆಯ ಪರಿಣಾಮ ಒಳ್ಳೆಯದಾಗಲೆಂಬ ಉದ್ದೇಶ. ಹೀಗಾಗಿ ಡೆಪ್ಯುಟಿ ಶಿರಹಟ್ಟಿಗೆ ಪರೀಕ್ಷೆಗೆ ಬಂದರೆ ಎರಡು ತಿಂಗಳು ವಾಸ್ತವ್ಯ. ಇದೇ ರೀತಿಯ ಮೋಜು ಉಳಿದ ಸಂಸ್ಥಾನೀ ಪ್ರದೇಶಗಳಲ್ಲಿ ಹೆಚ್ಚು ಕಡಿಮೆ ನಡೆಯುತ್ತಿತ್ತು.

ಸಂಸ್ಥಾನಿಕರಲ್ಲಿ ಶಿಕ್ಷಣದ ಬಗ್ಗೆ ಸರಕಾರದ ಆಸ್ಥೆಯೇ ಇರುತ್ತಿರಲಿಲ್ಲ. ಸಂಸ್ಥಾನಿಕರ ಕುಲದೇವರಾದ ಗಣಪತಿಯ ಉತ್ಸವದ ಮುಂದೆ ಈ ಪಟವರ್ಧನ ಮನೆತನದ ಸಂಸ್ಥಾನಗಳಲೆಲ್ಲಾ ಒಂದು ವಾರದ ರಜೆ. ಮಹಾರಾಜರಿಗೆ ಗಂಡುಮಗು ಹುಟ್ಟಿದರೆ, ನವಾಬರ ಮಗಳ ಮದುವೆಯಾದರೆ ಸಂಸ್ಥಾನದ ತುಂಬಾ ರಜೆ ಹಾಗು ಶಾಲೆಯ ಮಕ್ಕಳ ಬಾಯಿಗೆಲ್ಲ ಮಿಠಾಯಿ. ವಿಚಿತ್ರವೆಂದರೆ ಈ ಸಂಸ್ಥಾನೀ ಪ್ರದೇಶಗಳಲ್ಲಿ ಹತ್ತೊಂಭತ್ತನೇ ಶತಮಾನದ ಅಂಚಿನವರೆಗೂ ಒಂದು ಮಾಧ್ಯಮಿಕ ಶಾಲೆ ಇರಲಿಲ್ಲ. ಇನ್ನು ಕಾಲೇಜುಗಳು ಇದ್ದಿರುವ ಸಂಭವವೇ ಇಲ್ಲ! ಪ್ರಾಥಮಿಕ ಶಾಲೆಗಳು ಮಾತ್ರ ಇದ್ದವು. ಶಿರಹಟ್ಟಿಯ ಕನ್ನಡ ಗಂಡು ಹಾಗು ಹೆಣ್ಣುಮಕ್ಕಳ ಶಾಲೆ, ವಾಚನಾಲಯ ಹಾಗು ನಗರಸಭೆಗೆ ನೂರು ವರುಷಗಳು ಸಂದಿವೆ. ಪ್ರಾಥಮಿಕ-ಶಿಕ್ಷಣವಷ್ಟೇ ಆಗ ಪ್ರಸಾರದಲ್ಲಿತ್ತು. ಶಿರಹಟ್ಟಿ ಬಿಟ್ಟರೆ ಲಕ್ಷ್ಮೇಶ್ವರ ಹಾಗು ಸವಣೂರುಗಳು ಸ್ವಲ್ಪ ಸುಸಂಸ್ಕೃತವೆಂದು ಕರೆಸಿಕೊಳ್ಳಲ್ಪಡುತ್ತಿದ್ದವು. ಆದರೆ ರಾಜಮಹಾರಾಜರ ದಬ್ಬಾಳಿಕೆ ಯಿಂದ ಪ್ರಜೆಗಳೆಲ್ಲಾ ನರಸತ್ತವರಾಗಿದ್ದರು! ಹೀಗಾಗಿ ಶಿಕ್ಷಣವೆಂದರೆ ಸರಕಾರವೇ ತನ್ನ ಧೋರಣೆಗೆ ಅನುಸರಿಸಿ ರೂಪಿಸಿದ ಶಿಕ್ಷಣವಾಗಿತ್ತು. ಮುಂಬೈ ಪ್ರಾಂತದ ಶಿಕ್ಷಣದ ಪ್ರಭಾವವೇ ಈ ಸಂಸ್ಥಾನೀ ಪ್ರದೇಶದ ಕನ್ನಡ ಪ್ರದೇಶದ ಶಿಕ್ಷಣದ ಮೇಲೆ ಆಗುತ್ತಿತ್ತು.

೧೯ ನೆಯ ಶತಮಾನದಲ್ಲಿ ಹೈದರಾಬಾದ ಕರ್ನಾಟಕದಲ್ಲಿ ಶಿಕ್ಷಣ

—ಶ್ರೀ ಆಯ್. ಎಸ್. ಬಿದರಿ

ಸಂಕ್ಷಿಪ್ತ ಭೌಗೋಲಿಕ ಮತ್ತು ಐತಿಹಾಸಿಕ ಹಿನ್ನೆಲೆ :—

ನಮ್ಮ ದೇಶವು ಸ್ವತಂತ್ರವಾಗುವ ಮೊದಲು ಅಸ್ತಿತ್ವದಲ್ಲಿದ್ದ ಹೈದರಾಬಾದ ಸಂಸ್ಥಾನವು ತೆಲಂಗಣ, ಮರಾಠವಾಡಾ ಮತ್ತು ಕರ್ನಾಟಕ ಹೀಗೆ ಮೂರು ಪ್ರದೇಶಗಳಿಂದ ಕೂಡಿದ್ದಿತು. ೧೯೪೭ ರಲ್ಲಿ ನಮ್ಮ ರಾಷ್ಟ್ರವು ಸ್ವತಂತ್ರವಾಯಿತು; ಮುಂದೆ ೧೯೫೬ ರಲ್ಲಿ ರಾಜ್ಯ ಪುನರ್ಘಟನಾ ಆಯೋಗದ ವರದಿಯ ಪ್ರಕಾರ ಹೈದರಾಬಾದ ಸಂಸ್ಥಾನವು ವಿಭಜಿಸಲ್ಪಟ್ಟಿತು. ತೆಲಂಗಣ ಆಂಧ್ರ ಪ್ರದೇಶಕ್ಕೆ ಸೇರಿಸಲ್ಪಟ್ಟಿತು. ಮರಾಠವಾಡಾ ಮತ್ತು ಕನ್ನಡ ಮಾತನಾಡುವ ಪ್ರದೇಶಗಳು ಅನುಕ್ರಮವಾಗಿ ಮಹಾರಾಷ್ಟ್ರ ಮತ್ತು ವಿಶಾಲ ಮೈಸೂರ (ಈಗಿನ ಕರ್ನಾಟಕ) ರಾಜ್ಯಗಳಿಗೆ ಸೇರಿದವು. ಕರ್ನಾಟಕಕ್ಕೆ ಸೇರಿದ ಜಿಲ್ಹೆಗಳೆಂದರೆ ಗುಲಬರ್ಗಾ, ರಾಯಚೂರು ಮತ್ತು ಬೀದರ. ಈ ಮೂರೂ ಜಿಲ್ಹೆಗಳ ಒಟ್ಟು ಕ್ಷೇತ್ರ ೩೫೬೪೯ ಚದುರು ಕಿ. ಮೀಟರ ಇದ್ದು ೧೯೮೧ ನೇ ಜನಗಣತಿಯ ಮೇರೆಗೆ ಇವುಗಳ ಒಟ್ಟು ಜನಸಂಖ್ಯೆಯು ೪೮೪೯೪೮೧೬ ಆಗಿರುತ್ತದೆ. ಈ ಮೂರು ಜಿಲ್ಹೆಗಳಲ್ಲಿ ಗುಲಬರ್ಗಾ ಜಿಲ್ಲೆಯು ದೊಡ್ಡದಿದ್ದು ಗುಲಬರ್ಗಾ ಶಹರವು ವಿಭಾಗೀಯ ಮುಖ್ಯ ಪಟ್ಟಣವಾಗಿದೆ. ರಾಯಚೂರ ಜಿಲ್ಹೆಯ ಬಹುಭಾಗವು ನೀರಾವರಿಗೆ ಒಳಪಟ್ಟಿದೆ.

ಭವ್ಯ ಪ್ರಾಚೀನತೆಯಿದ್ದ ಈ ಪ್ರದೇಶವು ಬಾದಾಮಿಯ ಪಶ್ಚಿಮ ಚಾಲುಕ್ಯರ ಆಳಿಕೆಗೆ ಒಳಪಟ್ಟಿದ್ದಿತು; ಅದೇ ಸಮಯಕ್ಕೆ ವೀರಶೈವ ಸಾಮಾಜಿಕ ಕ್ರಾಂತಿಯಾಯಿತು. ಬೌದ್ಧ, ಜೈನ, ಶೈವ, ವೀರಶೈವ ಹಾಗೂ ಇಸ್ಲಾಂ ಧರ್ಮಗಳ ನೆಲೆವೀಡಾದ ಈ ನಾಡು ಈ ಎಲ್ಲ ಧರ್ಮಗಳ ಸಮನ್ವಯ ಹಾಗೂ ಸೌಹಾರ್ದತೆಯ ಸ್ಥಾನವೆಂದು ಪ್ರಸಿದ್ಧವಾಗಿತ್ತು. ಚಾಲುಕ್ಯರ ತರುವಾಯ ಸುಮಾರು ಕೆಲ ದಿನಗಳ ನಂತರ ಈ ಪ್ರದೇಶವು ಬಹಮನಿ ಸುಲ್ತಾನರ ಆಳಿಕೆಗೆ ಒಳಪಟ್ಟಿತು. ಬೀದರ ಶಹರವು ಬಹಮನೀಯರ ಮೂಲ ಸ್ಥಾನವಾಗಿದ್ದಿತು. ಹೀಗೆ ಪ್ರಮುಖ ಧರ್ಮಗಳ ಸಂಸ್ಕೃತಿಗಳ ಸಾಹಿತ್ಯದ ಹಾಗೂ ಜನಜೀವನದ ಪ್ರತಿಬಿಂಬವನ್ನು ಈ ಪ್ರದೇಶದಲ್ಲಿ ಕಾಣಬಹುದು. ಒಟ್ಟಿನಲ್ಲಿ ಈ ಪ್ರದೇಶವು ವಿವಿಧ ಸಂಸ್ಕೃತಿಗಳ ತೂಗು ತೊಟ್ಟಿಲೆಂದು ಹೆಸರಾಗಿದೆ. ಈ ಧರ್ಮಗಳ ಜೊತೆಗೆ ಆರ್ಯ ಬ್ರಾಹ್ಮಣರಿಂದ ಪುರಸ್ಕರಿಸಲ್ಪಟ್ಟ ದೇಶೀಯ ಪದ್ಧತಿಯನ್ನು ಕಾಣಬಹುದು. ಬೌದ್ಧ ಶಿಕ್ಷಣ ಕ್ರಮವು ಮೂಲತಃ ಧಾರ್ಮಿಕವಾಗಿದ್ದಿತು.

ಆದರೆ ವಾಸ್ತವಿಕವೂ ವೃತ್ತಿ ಪರವೂ ಸಹ ಆಗಿದ್ದುದನ್ನು ಕಾಣಬಹುದು. ಅದು ಈ ನಾಡಿನಲ್ಲಿ ಉಚ್ಚಮಟ್ಟದ ತಳಹದಿ ಹಾಕಿತು. ಜನರಿಗೆ ಶುದ್ಧ, ಸಾದಾ ಮತ್ತು ಆದರ್ಶ ಜೀವನ ನಡೆಸಲು ಪ್ರೋತ್ಸಾಹಿಸಿತು ಜೈನ ಗುರುಗಳು ತಮ್ಮ ಮತ ತತ್ವಗಳನ್ನು ಜನರಾಡುವ ಭಾಷೆಯಲ್ಲಿಯೇ ಪ್ರಚುರಗೊಳಿಸಿದರು. ಆದುದರಿಂದ ಅನೇಕ ಜೈನ ಕವಿಗಳು ಇಲ್ಲಿ ಬಾಳಿ ತಮ್ಮ ವಿದ್ವತ್ ಕೃತಿಗಳಿಂದ ನಾಡ ಸಿರಿವಂತಿಕೆಯನ್ನು ಹೆಚ್ಚಿಸಿ ವಾಗ್ದೇವಿಯ ಸಿರಿಮುಡಿಯನ್ನು ಅಲಂಕರಿಸಿದರು. ಈ ಪ್ರದೇಶದಲ್ಲಿ ಕೆಲವು ಜೈನ ಅಧ್ಯಯನ ಕೇಂದ್ರಗಳಿದ್ದವು. ಅವುಗಳಲ್ಲಿ ರಾಯಚೂರ ಜಿಲ್ಲೆಯ ಹರವಿ ಮತ್ತು ಕೊಪ್ಪಳದಲ್ಲಿದ್ದ ಕೇಂದ್ರಗಳನ್ನು ಹೆಸರಿಸಬಹುದು. ಕ್ರಿ. ಶ. ೧೪೪೨ ರಲ್ಲಿ ದೇವರಸನೆಂಬ ಅರಸನು ಹರವಿಯಲ್ಲಿ ಚೈತ್ಯಾಲಯವನ್ನು ಕಟ್ಟಿಸಿದನು.

ಬಹಮನಿ ಅರಸರ ನಂತರ ಮೊಘಲರ ಆಳಿಕೆಗೆ ಸೇರಿದ ಈ ಪ್ರದೇಶವು ಔರಂಗ ಜೇಬನ ಮರಣಾನಂತರ ಅವನ ಸರದಾರರಲ್ಲಿ ಪ್ರಮುಖನೂ ದಕ್ಷಿಣದ ಸುಭೇದಾರನೂ ಆಗಿದ್ದ ನಿಜಾಮ-ಉಲ್-ಮುಲ್ಕನು ಸ್ವತಂತ್ರನಾಗಿ ಈ ಪ್ರದೇಶವನ್ನು ಆಳ-ತೊಡಗಿದನು. ಹೀಗೆ ನಿಜಾಮರ ಆಳಿಕೆಯು ಪ್ರಸ್ತಾಪಿತವಾಯಿತು. ನಿಜಾಮ ಸರಕಾರದ ಆಳಿಕೆಯಲ್ಲಿ ಅನೇಕ ಕನ್ನಡ ಕವಿಗಳು ಪ್ರಸಿದ್ಧಿ ಪಡೆದರು.

ಶಿಕ್ಷಣದಲ್ಲಿ ವೀರಶೈವರು :

೧೨ನೇ ಶತಮಾನದ ಮಧ್ಯದಲ್ಲಿ ವೀರಶೈವ ಆಂದೋಲನವು ಜನತೆಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನದ ಮೇಲೆ ಅದ್ವಿತೀಯ ಪರಿಣಾಮ ಬೀರಿತು. ಈ ಆಂದೋಲನದ ಅಂಗವಾಗಿ ಅನೇಕ ವೀರಶೈವ ಶರಣ-ಶರಣೆಯರು ಜನರಾಡುವ ತಿಳಿಗನ್ನಡದಲ್ಲಿ ವಚನಗಳನ್ನು ರಚಿಸಿದರು. ಧರ್ಮ, ಸಮಾಜ, ವ್ಯಕ್ತಿ, ಸಮುದಾಯ-ಹೀಗೆ ಸಕಲರು ಅನುಭವ ಮಂಟಪದಲ್ಲಿ ನಡೆಯುವ ಚರ್ಚೆ ವಿಚರ್ಚೆಗಳಲ್ಲಿ ಭಾಗ ವಹಿಸುತ್ತಿದ್ದರು. ಅನುಭವ ಮಂಟಪವು ಒಂದು ಮಹಾನ್ ಶಿಕ್ಷಣ ಸಂಸ್ಥೆ-ಯಾಗಿತ್ತೆಂದರೆ ಅತಿಶಯೋಕ್ತಿಯಾಗದು. ಇದರ ಕೇಂದ್ರ ಸ್ಥಳವಾದ ಕಲ್ಯಾಣ ಪಟ್ಟಣವು ನಾಲಂದ ವಿಶ್ವವಿದ್ಯಾಲಯದ ಮಾದರಿಯಾಗಿತ್ತೆಂದೇ ತಿಳಿಯಲಾಗಿತ್ತು. ಕಾಶ್ಮೀರ, ಕಾಶಿ, ಓಡಿಸಾ, ಆಂಧ್ರಪ್ರದೇಶ, ತಮಿಳನಾಡು, ಗುಜರಾತ, ಕೇರಳ ಮೊದಲಾದ ಪ್ರದೇಶಗಳಿಂದ ಪಂಡಿತರು ಕಲ್ಯಾಣಕ್ಕೆ ಬರುತ್ತಿದ್ದರು. ಕಲ್ಯಾಣ ಕ್ರಾಂತಿಯನಂತರ ವೀರಶೈವ ಮಠಗಳು ಹಳ್ಳಿ-ಪಟ್ಟಣಗಳಲ್ಲಿ ಸ್ಥಾಪಿತವಾಗಿ ಜನ ಸಾಮಾನ್ಯರಿಗೆ ಅನ್ನ, ವಸತಿ, ವಿದ್ಯೆಯನ್ನು ನೀಡುವ ಪವಿತ್ರಸ್ಥಾನಗಳಾದವು. ಶಿಕ್ಷಣವು ಸಾಮಾಜಿಕವೂ ಆಧ್ಯಾತ್ಮಿಕವೂ ಆಗಿದ್ದಿತು. ಮಠಗಳು ಸಾಹಿತ್ಯಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಅಭ್ಯಾಸದ ಕೇಂದ್ರಗಳಾದವು. ಕೆಲವು ಮಠಗಳಲ್ಲಿ ಹಸ್ತಪ್ರತಿ ಗ್ರಂಥಾಲಯಗಳಿದ್ದವು. ಓದು, ಬರಹ, ಅಂಕಗಣಿತಗಳಲ್ಲಿ ಸಹ ಶಿಕ್ಷಣವು ಇಲ್ಲಿ

ಲಭ್ಯವಾಗುತ್ತಿತ್ತು. ಸುಲಭ ತ್ರಿಪದಿ, ಚೌಪದಿ, ಮತ್ತು ಸಾಂಗತ್ಯಗಳನ್ನು ವಿವರಿಸುತ್ತಿದ್ದರು.

ಬ್ರಾಹ್ಮಣೀಯ ಶಿಕ್ಷಣ :

ಮನುಷ್ಯನ ವ್ಯಕ್ತಿತ್ವದ ಸರ್ವಾಂಗೀಣ ಬೆಳವಣಿಗೆಯು ಈ ಶಿಕ್ಷಣದ ಗುರಿಯಾಗಿತ್ತು. ಜ್ಞಾನದೊಂದಿಗೆ ನೀತಿ ನಿರ್ಮಾಣಕ್ಕೆ ಸಹ ಮಹತ್ವ ಕೊಡಲಾಗಿತ್ತು. ಇಡೀ ಜೀವನ ನಿರ್ವಹಣೆಗಾಗಿ ಶಿಕ್ಷಣವು ಕೊಡಲ್ಪಡುತ್ತಿತ್ತು. ಅಭ್ಯಾಸ ಕ್ರಮವು ವೇದಗಳು, ಇತಿಹಾಸ, ಪುರಾಣ, ವ್ಯಾಕರಣ, ಗಣಿತ, ಜೋತಿಷ್ಯಶಾಸ್ತ್ರ ಇತ್ಯಾದಿ ವಿಷಯಗಳನ್ನು ಒಳಗೊಂಡಿತ್ತು; ಶಿಕ್ಷಣವು ವೈಯಕ್ತಿಕವಾಗಿತ್ತು. ಈ ಪದ್ಧತಿಯು ನಮ್ಮ ಪ್ರಾಚೀನ ಸಂಸ್ಕೃತಿ ಮತ್ತು ಸಾಹಿತ್ಯದ ಸಂರಕ್ಷಣೆಗೆ ಮಹತ್ವವಿತ್ತಿದ್ದಿತು.

ವಿದ್ಯಾಕೇಂದ್ರಗಳು :

ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಪ್ರಾಚೀನ ಮತ್ತು ಮಧ್ಯಯುಗದಲ್ಲಿ ಅನೇಕ ವಿದ್ಯಾಕೇಂದ್ರಗಳಿದ್ದವು. ಅವುಗಳಲ್ಲಿ ಸಾಲೊಟಗಿ, ನಾಗಾಯಿ, ಕುಕನೂರ, ಕುರಡಿ, ಗಬ್ಬೂರ ಇವುಗಳನ್ನು ಹೆಸರಿಸಬಹುದು. ಸಾಲೊಟಗಿ ಕಾಲೇಜದಲ್ಲಿ ೭೦೦ ವಿದ್ಯಾರ್ಥಿಗಳಿದ್ದರು. ಅವರಿಗೆ ಉಚಿತ ಊಟ–ವಸತಿಯ ಸೌಕರ್ಯವಿದ್ದಿತು. ಈ ಕಾಲೇಜಿನ ಸುವ್ಯವಸ್ಥೆಗಾಗಿ ೨೪೦ ಎಕರೆ ಜಮೀನು ಕೊಡಲ್ಪಟ್ಟಿತ್ತು. ಗುಲಬರ್ಗಾ ಜಿಲ್ಹೆಯ ಚಿತ್ತಾಪುರ ಹತ್ತಿರವಿರುವ ನಾಗಾಯಿಯಲ್ಲಿಯ ಅಗ್ರಹಾರದಲ್ಲಿ ೭೦೦ ವಿದ್ಯಾರ್ಥಿಗಳು ವೇದ–ಶಾಸ್ತ್ರಗಳನ್ನು ಅಭ್ಯಾಸ ಮಾಡುತ್ತಿದ್ದರು.

ಮುಸ್ಲಿಂ ಶಿಕ್ಷಣ :

ಬಹಮನಿ ಸುಲ್ತಾನರ ಆಳಿಕೆಯಲ್ಲಿ ಖ್ವಾಜಾ ಬಂದೇ ನವಾಜ ಅವರು ಪ್ರಖ್ಯಾತಿ ಪಡೆದರು. ಅವರು ೬೦ ಕ್ಕಿಂತ ಹೆಚ್ಚು ಪುಸ್ತಕಗಳನ್ನು ಬರೆದರು ಡೆಕ್ಕನ್ ಉರ್ದು ಗದ್ಯ ಎಂಬ ಹೊಸ ಉರ್ದು ಮಾದರಿಯನ್ನು ಪ್ರಚುರ ಪಡಿಸಿದರು. ಗುಲಬರ್ಗಾಕ್ಕೆ ಬಂದ ಔರಂಗಜೇಬನು ಆ ಉರ್ದು ಗದ್ಯ ಪುಸ್ತಕಗಳನ್ನು ನೋಡಿ ಮದರಸಾ ಸಲುವಾಗಿ ಒಂದು ಇಮಾರತಿಯನ್ನು ಕಟ್ಟಿಸಿದನು. ಮದರಸಾ ಹೊಂದಿಕೊಂಡು ಒಂದು ಗ್ರಂಥಾಲಯವೂ ಇದ್ದಿತು. ಶಿಕ್ಷಕರಿಗೆ ಹಾಗೂ ಪ್ರವಾಸಿಕರಿಗೆ ವಸತಿ ಸೌಕರ್ಯವನ್ನು ಒದಗಿಸಿದನು. ಈ ಮದರಸಾದಲ್ಲಿ ನೂರಾರು ವಿದ್ಯಾರ್ಥಿಗಳಿದ್ದರು. ಮೌಲ್ವಿಗಳು ಪರ್ಶಿಯನ್, ಉರ್ದು, ಅರೇಬಿಕ್ ಇತ್ಯಾದಿ ವಿಷಯಗಳನ್ನು ಕಲಿಸುತ್ತಿದ್ದರು. ಗ್ರಂಥಾಲಯದಲ್ಲಿ ೧೦೦೦೦ ಪುಸ್ತಕಗಳಿದ್ದವು.

ಬಹಮನಿಸುಲ್ತಾನರ ಆಳಿಕೆಯಲ್ಲಿ ಬೀದರ ಇದು ಪ್ರಸಿದ್ಧ ಅಧ್ಯಯನ ಕೇಂದ್ರವಾಗಿತ್ತು. ಬಹಮನಿ ಸುಲ್ತಾನನ ಮುಖ್ಯ ಮಂತ್ರಿಯಾಗಿದ್ದ ಮಹ್ಮುದ ಗವಾನನು

ರಾಜ್ಯದಲ್ಲಿ ಅನೇಕ ಮಕ್ತಬ್ (ಪ್ರಾಥಮಿಕ ಸಾಲೆ)ಗಳನ್ನೂ ಮದ್ರಸಾ (ಪ್ರೌಢಸಾಲೆ-ಕಾಲೇಜು)ಗಳನ್ನು ಸ್ಥಾಪಿಸಿದನು. ಬೀದರದಲ್ಲಿ ಇದ್ದ ಕಾಲೇಜದಲ್ಲಿ ವಿದ್ಯಾರ್ಥಿಗಳಿಗೆ ಕಲಿಸುವ ಸಲುವಾಗಿ ಅನೇಕ ಮೌಲ್ವಿಗಳನ್ನು ನೇಮಿಸಲಾಗಿತ್ತು. ಇಸ್ಲಾಂ ಧರ್ಮ ಶಾಸ್ತ್ರ, ಸಂಸ್ಕೃತಿ, ತತ್ವಜ್ಞಾನ, ವೈದ್ಯಕೀಯ ವಿಜ್ಞಾನ, ಖಗೋಲ ಶಾಸ್ತ್ರ, ಇತಿಹಾಸ, ಕೃಷಿ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ೩೦೦೦ ಪುಸ್ತಕಗಳುಳ್ಳ ಗ್ರಂಥಾಲಯವು ಆ ಕಾಲೇಜದಲ್ಲಿ ಇದ್ದಿತು; ವಿದೇಶಿ ಪ್ರವಾಸಿಕರು ಈ ಕಾಲೇಜನ್ನು ನೋಡಲು ಬರುತ್ತಿದ್ದರು. ರಾಯಚೂರ ಜಿಲ್ಹೆಯಲ್ಲಿಯೂ ಮಕ್ತಬ್‌ಗಳು ಹಾಗೂ ಒಂದೆರಡು ಮದ್ರಸಾಗಳು ಇದ್ದುವೆಂದು ಊಹಿಸಲಾಗಿದೆ.

ಪ್ರಾರಂಭಿಕ ಶಿಕ್ಷಣ (೧೮೦೦–೧೮೫೪) :

ಅಬ್ದುಲ್‌ಖಾದರ ಸರವರಿ ಈತನು 'ಹೈದರಾಬಾದ ಡೆಕ್ಕನಕಿ ತಾಲೀಮಿ ಥರಾಕಿ' ಗ್ರಂಥದಲ್ಲಿ ಹೇಳಿರುವಂತೆ ಹೈದರಾಬಾದ ಸಂಸ್ಥಾನದಲ್ಲಿ ಧರ್ಮ ಮತ್ತು ಧಾರ್ಮಿಕ ಗ್ರಂಥಗಳ ಅಭ್ಯಾಸವು ಶಿಕ್ಷಣದ ತಳಹದಿಯಾಗಿದ್ದಿತು. ಹೈದರಾಬಾದ ಕರ್ನಾಟಕದ ಪ್ರದೇಶಗಳಿಗೆ ಈ ಮಾತು ಅಕ್ಷರಶಃ ಅನ್ವಯಿಸುತ್ತದೆಂದು ಬೇರೆ ಹೇಳಬೇಕಿಲ್ಲ. "ಶಿಕ್ಷಣವು ಪಂಡಿತರಿಂದ ಮತ್ತು ಮೌಲ್ವಿಗಳಿಂದ ಗುಡಿಗಳಲ್ಲಿ, ಮಸೀದೆಗಳಲ್ಲಿ ಮತ್ತು ಮಕ್ತಬ್‌ಗಳಲ್ಲಿ ನಡೆಯುತ್ತಿತ್ತು. ಆಳರಸರು ಆ ಪಂಡಿತರಿಗೆ ಮತ್ತು ಮೌಲ್ವಿಗಳಿಗೆ ಅವರು ಸಲ್ಲಿಸುವ ಸೇವೆಗಾಗಿ ಇನಾಮುಗಳನ್ನು, ಪಿಂಚನಿಯನ್ನು, ಜಹಗೀರುಗಳನ್ನು ಕೊಡುತ್ತಿದ್ದರು. ಕೆಲವು ಸಲ ಜಹಗೀರದಾರರು, ಮುನಸುಫ-ದಾರರು, ದೇಶಮುಖರು, ದೇಶಪಾಂಡೆಯವರು ಇಂಥ ಪಂಡಿತರಿಗೆ ಪೋಷಣೆ ಈಯುತ್ತಿದ್ದರು. ಅನೇಕ ಹಳ್ಳಿಗಳಲ್ಲಿ ಅಸ್ತಿತ್ವದಲ್ಲಿದ್ದ ಪಾಠಶಾಲೆಗಳಿಗೆ ಮತ್ತು ಮಕ್ತಬ್‌ಗಳಿಗೆ ಪಟೇಲರು, ಪಟವಾರಿಗಳು ಮತ್ತು ಸಾರ್ವಜನಿಕರು ಸಹಾಯ ಸಲ್ಲಿಸುತ್ತಿದ್ದರು. ಈ ಶಿಕ್ಷಣ ಸಂಸ್ಥೆಗಳಲ್ಲಿ ಓದು, ಬರೆಹ, ಅಂಕಗಣಿತ ಇವುಗಳ ಜ್ಞಾನವು ಲಭಿಸುತ್ತಿತ್ತು. ಮೌಲ್ವಿಗಳು ಕುರಾಣದ ಜೊತೆಗೆ ಪರ್ಶಿಯನ್, ಉರ್ದು ಮತ್ತು ಅರೇಬಿಕ್ ವಿಷಯಗಳನ್ನು ಕಲಿಸುತ್ತಿದ್ದರು." ೧೯ನೇ ಶತಮಾನದ ಆರಂಭದ ದಶಕಗಳಲ್ಲಿ ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಪ್ರಚಲಿತದಲ್ಲಿದ್ದುದು ದೇಶೀಯ ಶಿಕ್ಷಣ ಕ್ರಮವಾಗಿದ್ದಿತು. ಎರಡು ಪ್ರಕಾರದ ಸಾಲೆಗಳಿದ್ದುವೆಂದು ಅವನು ಹೇಳುತ್ತಾನೆ. ಕೆಳಮಟ್ಟದ ಸಾಲೆಗಳಲ್ಲಿ ಪ್ರಾಥಮಿಕ ಶಿಕ್ಷಣವು ಲಭಿಸುತ್ತಿದ್ದರೆ ಮೇಲಿನ ಸಾಲೆಗಳಲ್ಲಿ ಧರ್ಮ, ತರ್ಕಶಾಸ್ತ್ರ, ನ್ಯಾಯಶಾಸ್ತ್ರಗಳು ಕಲಿಸಲ್ಪಡುತ್ತಿದ್ದವು. ಪದವಿ ವರ್ಗಗಳಾಗಲಿ, ಪರೀಕ್ಷಾ ಕ್ರಮವಾಗಲಿ ಇರಲಿಲ್ಲ. ಉಚ್ಚ ಶಿಕ್ಷಣ ಸಂಸ್ಥೆಗಳು ವಿದ್ವಾಂಸರಿಂದ ನಡೆಸಲ್ಪಡುತ್ತಿದ್ದವು. ಇವುಗಳಲ್ಲದೆ, ಸರಕಾರವು ನಡೆಸುತ್ತಿದ್ದ ಶಿಕ್ಷಣ ಸಂಸ್ಥೆಗಳೂ ಇದ್ದವು. ಸರದಾರರ ಮಕ್ಕಳ ಸಲುವಾಗಿ ವಸತಿ ಸೌಕರ್ಯವುಳ್ಳ ಸಾಲೆಗಳು ಇದ್ದವು.

ಇಂಥವುಗಳಲ್ಲಿ ಬೀದರದಲ್ಲಿ ಮಹಮ್ಮದ ಗವಾನನು ಸ್ಥಾಪಿಸಿದ ಮಹಮ್ಮದೀಯ ಸಾಲೆಯು ಜಗತ್‌ಪ್ರಸಿದ್ಧವಾಗಿತ್ತೆಂದು ತಿಳಿದು ಬರುತ್ತದೆ.

ಸಂಕ್ಷಿಪ್ತದಲ್ಲಿ ಹೇಳುವುದಾದರೆ, ಈ ಪ್ರದೇಶದಲ್ಲಿ ನೂರಾರು ಪಾಠ ಸಾಲೆಗಳು ಹಾಗೂ ಅನೇಕ ಮಕ್ತಬ್‌ಗಳು ಇದ್ದುವೆಂದು ಕಂಡುಬರುತ್ತದೆ. ಬೀದರ ಜಿಲ್ಹೆಯಲ್ಲಿ ಮಹಮ್ಮದ ಗವಾನನು ಸ್ಥಾಪಿಸಿದ ಸಾಲೆಯ ಮಾದರಿಯಲ್ಲಿ ಅನೇಕ ಸಾಲೆಗಳು ಇದ್ದವು. ಇದೇ ತೆರನಾಗಿ ಗುಲಬುರ್ಗಾದಲ್ಲಿರುವ ಬಂದೇನವಾಜ ಮಸೀದೆಯಲ್ಲಿ ಮೌಲ್ವಿಗಳು ವರ್ಗಗಳನ್ನು ನಡೆಸುತ್ತಿದ್ದರು. ಗುಡಿಗಳಲ್ಲಿ ಮತ್ತು ಮಠಗಳಲ್ಲಿ ಧರ್ಮ ಗುರುಗಳು ಮತ್ತು ಮಠಾಧೀಶರು ಬೋಧನಾ ಕಾರ್ಯ ಮಾಡುತ್ತಿದ್ದರು. ಗುಲ-ಬರ್ಗಾ, ರಾಯಚೂರು ಮತ್ತು ಬೀದರ ಈ ಜಿಲ್ಹೆಗಳಲ್ಲಿ ಪ್ರಾಥಮಿಕ ಶಿಕ್ಷಣವು ಮಠಗಳಲ್ಲಿ, ಮಕ್ತಬ್‌ಗಳಲ್ಲಿ, ಮಸೀದೆಗಳಲ್ಲಿ, ವಿಹಾರಗಳಲ್ಲಿ ಇಲ್ಲವೆ ಆಶ್ರಮಗಳಲ್ಲಿ ನಡೆಯುತ್ತಿತ್ತು. ಆ ದಿನಗಳಲ್ಲಿ ಮೌಲ್ವಿಗಳು, ಪುರೋಹಿತರು ಮತ್ತು ಜಂಗಮರು ಶಿಕ್ಷಕರಾಗಿದ್ದರು. ಆದರೆ ಯೋಗ್ಯ ಶಿಕ್ಷಣ ಕ್ರಮವಿರಲಿಲ್ಲವೆಂಬುದನ್ನು ಒಪ್ಪಿಕೊಳ್ಳಲೇಬೇಕು. ಈ ಸಾಲೆಗಳಲ್ಲಿ ಸಂಯೋಜನೆಯಾಗಲಿ, ಸಹಕಾರವಾಗಲಿ ಇರಲಿಲ್ಲ. ಆದರೆ ಬೋಧನಾ ವಿಸ್ತಾರವು ಮಾತ್ರ ಇದ್ದುದಾಗಿ ತಿಳಿದುಬರುತ್ತದೆ. ಒಟ್ಟಿನಲ್ಲಿ ಶಿಕ್ಷಣವು ಅಸ್ತವ್ಯಸ್ತ ರೀತಿಯಲ್ಲಿ ಸಾಗಿದ್ದಿತು.

ಆಧುನಿಕ ಶಿಕ್ಷಣದ ಆರಂಭ (೧೮೫೮–೧೯೦೦):

ನವಾಬ ನಾಸೀರಉದ್ದೌಲ (೧೮೨೭-೫೭)ನ ಆಳಿಕೆಯಲ್ಲಿ ಬ್ರಿಟಿಷರ ಆಡಳಿತೆಗೆ ಒಳಪಟ್ಟ ಭಾರತದಲ್ಲಿ ಪ್ರಾಚ್ಯ ಹಾಗೂ ಆಂಗ್ಲ ಶಿಕ್ಷಣ ಪದ್ಧತಿಗಳೆಂಬ ಎರಡು ಕ್ರಮಗಳು ಅಸ್ತಿತ್ವದಲ್ಲಿದ್ದವು. ಹೈದರಾಬಾದ ಸಂಸ್ಥಾನವು ಈ ಪದ್ಧತಿಗಳಿಗೆ ಹೊರತಾಗಿರಲಿಲ್ಲ. ಈ ಸಂಸ್ಥಾನಕ್ಕೆ ಒಳಪಟ್ಟ ಗುಲಬರ್ಗಾ, ರಾಯಚೂರ ಮತ್ತು ಬೀದರ ಜಿಲ್ಹೆಗಳಲ್ಲಿ ಈ ಎರಡೂ ಶಿಕ್ಷಣ ಕ್ರಮಗಳೂ ಆ ಶಿಕ್ಷಣ ನೀಡುವ ಸಾಲೆಗಳೂ ತುಸು ಹೆಚ್ಚು ಕಡಿಮೆ ಇದ್ದುವೆಂದೇ ಹೇಳಬಹುದು. ೧೮೫೪ರಲ್ಲಿ ಪ್ರಕಟಿಸಲ್ಪಟ್ಟ ವುಡ್‌ನ ವರದಿಯು, ಆ ಮೊದಲು, ತುದಿ–ಮೊದಲಿಲ್ಲದ ಶಿಕ್ಷಣಕ್ರಮಕ್ಕೆ ಒಂದು ವ್ಯವಸ್ಥಿತ ಕ್ರಮವನ್ನು ಒದಗಿಸಿತಲ್ಲದೆ ಭರತ ಖಂಡದ ಶಿಕ್ಷಣದಲ್ಲಿ ಆಮೂಲಾಗ್ರ ಕ್ರಾಂತಿಯನ್ನುಂಟು ಮಾಡಿತು. ವಿಶ್ವವಿದ್ಯಾಲಯಗಳ ಸ್ಥಾಪನೆ, ಶಿಕ್ಷಣದಲ್ಲಿ ವಿವಿಧ ಹಂತಗಳ ಏರ್ಪಾಟು ಮತ್ತು ವಿದ್ಯಾ ಇಲಾಖೆಯ ಸ್ಥಾಪನೆ, ಪಠ್ಯಕ್ರಮದ ಉದಯ— ಹೀಗೆ ಎಲ್ಲ ಮುಖಗಳಲ್ಲಿ ಸುವ್ಯವಸ್ಥೆಯನ್ನೂ, ಸುಸಂಬದ್ಧತೆಯನ್ನೂ ಅದು ಉಂಟು ಮಾಡಿತು. ಇದಕ್ಕೂ ಪೂರ್ವದ ಶಿಕ್ಷಣವು ಇದಕ್ಕೆ ಬಂದು ತಲುಪಿದರೆ, ಇದರ ನಂತರದ ಶಿಕ್ಷಣವು ಇದರಿಂದ ಹರಿದುಬಂದಿದೆ.

ಹೈದರಾಬಾದ ಕರ್ನಾಟಕ ಪ್ರದೇಶದ ಶಿಕ್ಷಣ ಕ್ರಮವು ಈ ಅವಧಿಯಲ್ಲಿ ವುಡ್‌ನ ವರದಿಯನ್ವಯ ರೂಪಿಸಲ್ಪಟ್ಟಿತು. ಆದರೆ ಒಂದು ಸಂಗತಿಯನ್ನು ಮರೆಯಲಾಗದು.

ವುಡ್‌ನ ವರದಿಯ ಪೂರ್ವದಲ್ಲಿಯೇ ಅಂದರೆ ೧೮೫೩ರಲ್ಲಿ ಹೈದರಾಬಾದ ಸಂಸ್ಥಾನದ ಸುಪ್ರಸಿದ್ಧ ಹಾಗೂ ವಿದ್ವಾಂಸ ಆಡಳಿತಗಾರನಾದ ಸರ್ ಸಾಲಾರಜಂಗ ಈತನು ಹೈದರಾಬಾದಿನಲ್ಲಿ ದರೂಲ ಉಲೂಮ ಎಂಬ ಪ್ರಾಚ್ಯ ಶಿಕ್ಷಣ ಮಹಾಸಂಸ್ಥೆಯನ್ನು ಸ್ಥಾಪಿಸಿದ್ದನು. ಈ ಸಂಸ್ಥೆಯು ಒಂದು ಶೈಕ್ಷಣಿಕ ಮಂಡಳಿಯ ಕೆಳಗೆ ಸ್ಥಾಪಿತವಾಗಿದ್ದಿತು. ಈ ಸಂಸ್ಥೆಯು ಹೈದರಾಬಾದದ ಸಂಸ್ಥಾನದ ಇತರ ಭಾಗಗಳಲ್ಲಿಯಂತೆ ಕರ್ನಾಟಕಕ್ಕೆ ಒಳಗಾಗಿರುವ ಗುಲಬರ್ಗಾ, ರಾಯಚೂರ, ಬೀದರ ಜಿಲ್ಲೆಗಳಲ್ಲಿಯೂ ಸಹ ಶಿಕ್ಷಣದ ಬೆಳವಣಿಗೆಗೆ ದಾರಿಮಾಡಿಕೊಟ್ಟಿತು. ಸರ್ ಸಾಲಾರ ಜಂಗರ ಶಬ್ದಗಳಲ್ಲಿಯೇ ಹೇಳುವುದಾದರೆ, "ದರೂಲ ಉಲೂಮ ಪ್ರಾಚ್ಯ ವಿದ್ಯೆಯ ಕೇಂದ್ರವಾಗಿದ್ದಿತು; ಇದು ಇಡೀ ದಕ್ಷಿಣ ಹಿಂದುಸ್ತಾನಕ್ಕೆ; ನಮ್ಮ ಸ್ವಂತ ಪ್ರಾಚ್ಯಗ್ರಂಥಗಳ ಮುಖಾಂತರ ಪುರಾತನ ಸಂಸ್ಕೃತಿಯನ್ನು ಜನತೆಯಲ್ಲಿ ಪಸರಿಸುವ ಸಾಧನವಾಗಿದ್ದಿತು". ಈ ಸಂಸ್ಥೆಯಲ್ಲಿ ಅರೇಬಿಕ್, ಪರ್ಸಿಯನ್, ಮರಾಠಿ, ತೆಲುಗು ಮತ್ತು ಆಂಗ್ಲ ಭಾಷೆಗಳನ್ನು ಕಲಿಸಲಾಗುತ್ತಿತ್ತು. ವಿದ್ಯಾರ್ಥಿಗಳನ್ನು ಆಕರ್ಷಿಸುವ ಸಲುವಾಗಿ ಶಿಷ್ಯವೇತನಗಳನ್ನೂ ಬಹುಮಾನಗಳನ್ನೂ ಕೊಡಲಾಗುತ್ತಿತ್ತು. ದರೂಲ ಉಲೂಮ ಸಂಸ್ಥೆಯು ಉಚ್ಚ, ಪ್ರಾಥಮಿಕ ಮತ್ತು ಆಡಳಿತ ಶಿಕ್ಷಣದ ಮಹಾದ್ವಾರಗಳನ್ನು ತೆರೆಯಿತೆಂದೇ ಹೇಳಬಹುದು. ಅದು ಶೈಕ್ಷಣಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿತ್ತು. ತಾಲೂಕ ಮತ್ತು ಜಿಲ್ಹಾ ಸ್ಥಳಗಳಲ್ಲಿ ಸಾಲೆಗಳನ್ನು ತೆರೆಯಲಿಕ್ಕೆ ನಾಂದಿಯಾಯಿತು. ಸಾರ್ವಜನಿಕ ಶಿಕ್ಷಣ ಇಲಾಖೆಯ ಉದಯಕ್ಕೆ ಪೀಠಿಕೆಯೆನಿಸಿತು. ತಾಲೂಕ ಮತ್ತು ಜಿಲ್ಹೆಯ ಸ್ಥಳಗಳಲ್ಲಿಯಂತೆ ಹಳ್ಳಿಗಳಲ್ಲಿ ಸಹ ಶಿಕ್ಷಣ ಸಂಸ್ಥೆಗಳನ್ನು ತೆರೆಯಲು ಸಹಾಯಕಾರಿಯಾಯಿತು. ೧೮೫೯ರಲ್ಲಿ ಹೊರಡಿಸಿದ ಆಜ್ಞೆಯನ್ವಯ ತಿಂಗಳಿಗೆ ೮೭ ರೂಪಾಯಿಗಳ ವೆಚ್ಚದಲ್ಲಿ ಪ್ರತಿಯೊಂದು ತಾಲೂಕ ಸ್ಥಳದಲ್ಲಿ ಮತ್ತು ತಿಂಗಳಿಗೆ ೧೫೦ ರೂಪಾಯಿ ವೆಚ್ಚದಲ್ಲಿ ಪ್ರತಿ ಜಿಲ್ಹಾ ಸ್ಥಳದಲ್ಲಿ ಒಂದೊಂದು ಪರ್ಸಿಯನ್ ಹಾಗೂ ಒಂದೊಂದು ದೇಶಭಾಷಾ ಸಾಲೆಗಳನ್ನು ತೆರೆಯಲಾಯಿತು. ಈ ಸಾಲೆಗಳಲ್ಲಿಯ ಅಭ್ಯಾಸ ಪತ್ರಿಕೆಯು ಗಣಿತ, ಇತಿಹಾಸ, ಭೂಗೋಲ ಮತ್ತು ಭಾಷೆಗಳನ್ನು ಒಳಗೊಂಡಿದ್ದಿತು.

ಪ್ರತಿಯೊಂದು ತಾಲೂಕ ಸಾಲೆಗೆ ಒಂದು ಆಡಳಿತ ಮಂಡಳಿಯಿದ್ದಿತು. ಈ ಮಂಡಳಿಯಲ್ಲಿ ಇಬ್ಬರು ಪಟೇಲರು, ಇಬ್ಬರು ಪಟವಾರಿಗಳು ಹಾಗೂ ತಹಸೀಲದಾರರು ಸದಸ್ಯರಾಗಿರುತ್ತಿದ್ದರು. ತಹಸೀಲದಾರರು ಮಂಡಳಿಯ ಅಧ್ಯಕ್ಷರಾಗಿರುತ್ತಿದ್ದರು. ಜಿಲ್ಹಾ ಸಾಲೆಯ ಆಡಳಿತ ಮಂಡಳಿಯಲ್ಲಿ ಒಬ್ಬ ಪಟೇಲ, ಓರ್ವ ಪಟವಾರಿ, ಓರ್ವ ತಹಸೀಲದಾರ ಮತ್ತು ಡಿ. ಎಸ್. ಪಿ. ಅವರು ಸದಸ್ಯರಾಗಿರುತ್ತಿದ್ದರು. ಹೀಗೆ ಶಿಕ್ಷಣವು ಕಂದಾಯ ಇಲಾಖೆಯವರ ಸ್ವತ್ತಾಗಿತ್ತೆಂದು ತಿಳಿಯುತ್ತದೆ. ಕಂದಾಯ ಇಲಾಖೆಯ ಅಧಿಕಾರಿಗಳು ತಪಾಸಣಾಧಿಕಾರಿಗಳೆಂದು ಕಾರ್ಯ ನಿರ್ವಹಿಸುತ್ತಿದ್ದರು. ೧೮೬೯ ರ

ವರೆಗೆ ಕಂದಾಯ ಇಲಾಖೆಯು ಈ ಸಾಲೆಗಳನ್ನು ವಹಿಸಿಕೊಂಡಿದ್ದಿತು. ಹೀಗೆ ೧೮೫೬ ರಿಂದ ೧೮೬೯ ರ ವರೆಗೆ ಸಾಮಾನ್ಯ ಶಿಕ್ಷಣದ ತಳಪಾಯವು ಈ ಭಾಗದಲ್ಲಿ ಹಾಕಲ್ಪಟ್ಟಿತು.

೧೮೬೯ ರಲ್ಲಿ ಸಂಕೀರ್ಣ ಇಲಾಖೆಗೆ ಓರ್ವ ಸಚಿವರು ಹಾಗೂ ಅವರ ಕೈಕೆಳಗೆ ಓರ್ವ ಶಿಕ್ಷಣ ಕಾರ್ಯದರ್ಶಿಯು ನೇಮಿಸಲ್ಪಟ್ಟರು. ೧೮೭೦ ರಲ್ಲಿ ಶಿಕ್ಷಣ ಇಲಾಖೆಯು ಸ್ಥಾಪಿಸಲ್ಪಟ್ಟಿತು. ಶ್ರೀ ಡಬ್ಲ್ಯು. ಎಚ್. ವಿಲ್ಕಿನ್‌ಸನ್‌ನು ಪ್ರಥಮ ಡಿ. ಪಿ. ಆಯ್. ಎಂದು ನೇಮಕಗೊಂಡರು. ೧೮೭೨ ರಲ್ಲಿ ಮೌಲ್ವಿ ಇನಿಡ್ ಉಲ್ಲಾ ರಹಮಾನ ಖಾನನು ಶಿಕ್ಷಣ ಇಲಾಖೆಯ ನಿರ್ದೇಶಕನಾದನು. ಅವನು ಸಾಲೆಗಳ ಸಲುವಾಗಿ ಪಠ್ಯಕ್ರಮವನ್ನು, ತಪಾಸಣಾಧಿಕಾರಿಗಳು ಮುಖ್ಯಾಧ್ಯಾಪಕರು ಮತ್ತು ಉಳಿದ ಶಿಕ್ಷಕರ ಸಲುವಾಗಿ ನಿಯಮ–ನಿಬಂಧನೆಗಳನ್ನು ರೂಪಿಸಿದನು. ೧೮೭೩ ರಲ್ಲಿ ಬರಹ ಪರೀಕ್ಷೆಯನ್ನು ಪ್ರಾರಂಭಿಸಿದನು. ೧೮೭೪ ರಲ್ಲಿ ನಾರ್ಮಲ್ ಸ್ಕೂಲಿನಲ್ಲಿ ತರಬೇತಿ ಹೊಂದಿದ ೪ ಉಪ ತಪಾಸಣಾಧಿಕಾರಿಗಳನ್ನು ನೇಮಿಸಿದನು. ಜಿಲ್ಹಾ ಸಾಲೆಯಲ್ಲಿಯ ವಿದ್ಯಾರ್ಥಿಗಳ ಸಂಖ್ಯೆಯು ೫೦ ಕ್ಕಿಂತ ಕಡಿಮೆ ಇರಕೂಡದೆಂದು ಮತ್ತು ತಾಲೂಕ ಸಾಲೆಯ ವಿದ್ಯಾರ್ಥಿಗಳ ಸಂಖ್ಯೆಯು ೩೦ ಕ್ಕಿಂತ ಕಡಿಮೆ ಇರಕೂಡದೆಂದು ಆಜ್ಞೆ ವಿಧಿಸಿದನು. ಶಹರ ಮತ್ತು ಜಿಲ್ಹಾ ಸ್ಥಳಗಳಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ಶುಲ್ಕ ಆಕರಿಸಿದನು.

೧೮೮೩ ರಲ್ಲಿ ನವಾಬ ಇಮಾದುಲ್ ಮುಲ್ಕ ಬಹಾದ್ದೂರ ಈತನು ಡಿ. ಪಿ. ಆಯ್. ಮತ್ತು ಶಿಕ್ಷಣ ಇಲಾಖೆಯ ಕಾರ್ಯದರ್ಶಿಯಾದನು. ನವಾಬ ಸರ್ ಮೆಹಬೂಬ ಅಲಿ ಖಾನನ ಘೋಷಣೆಯನ್ವಯ ಶಿಕ್ಷಣ ಇಲಾಖೆಯ ನಿರ್ದೇಶಕನು ಶಿಕ್ಷಣ ಇಲಾಖೆಯನ್ನು ಪುನರ್ ಸಂಘಟಿಸಿದನು. ಶಿಕ್ಷಣಕ್ಕೆ ಸಂಬಂಧಿಸಿದ ಸರಕಾರೀ ಧೋರಣೆಯು ಅಂತಿಮವಾಗಿ ರೂಪಿಸಲ್ಪಟ್ಟಿತು. ೧೦೦೦೦ ಜನಸಂಖ್ಯೆಯಿರುವ ಪ್ರತಿಯೊಂದು ಪಟ್ಟಣದಲ್ಲಿ ಒಂದು ಆ್ಯಂಗ್ಲೋ–ವ್ಹರ್ನ್ಯಾಕ್ಯುಲರ ಮಧ್ಯಮ ಸಾಲೆಯು ಪ್ರೌಢ ಸಾಲೆಯಾಗಿ ಮೇಲ್ದರ್ಜೆಯನ್ನು ಪಡೆಯಿತು. ಅನುದಾನ ಪದ್ಧತಿಯ ಪ್ರಯೋಜನವು ಜಿಲ್ಹೆಗಳಿಗೂ ವಿಸ್ತರಿಸಲ್ಪಟ್ಟಿತು. ೧೮೮೫–೮೭ರ ಅವಧಿಯಲ್ಲಿ ಮೇಲಿನ ಇಲ್ಲವೆ ಕೆಳಗಿನ ಮಧ್ಯಮ ಸಾಲೆಗಳು ರಾಯಚೂರ, ಬೀದರ ಮತ್ತು ಸುರುಪುರಗಳಲ್ಲಿ ಸ್ಥಾಪಿಸಲ್ಪಟ್ಟವು.

ಕ್ರಿ. ಶ. ೧೮೮೭–೮೮ ರ ವರೆಗೆ ಹೈದರಾಬಾದ ಸಂಸ್ಥಾನದ ಕನ್ನಡ ಜಿಲ್ಹೆಗಳಲ್ಲಿ ಅಂದರೆ ಗುಲಬರ್ಗಾ, ರಾಯಚೂರ ಮತ್ತು ಬೀದರ ಜಿಲ್ಹೆಗಳಲ್ಲಿ ಬೋಧನಾ ಮಾಧ್ಯಮವು ಮರಾಠಿಯಾಗಿದ್ದಿತು. ಎಲ್ಲ ಪಟೀಲರ, ಪಟವಾರಿಗಳ ಬಳಕೆಯ ಭಾಷೆಯು ಮರಾಠಿ ಆಗಿದ್ದಿತು. ಕೋರ್ಟು ಕಚೇರಿಗಳಲ್ಲಿ ಬಳಕೆಯಲ್ಲಿದ್ದ ಭಾಷೆಯು ಸಹ ಮರಾಠಿಯೇ ಆಗಿದ್ದಿತು. ಆದರೆ ಜನರು ತಮ್ಮ ಮನೆಗಳಲ್ಲಿ ಹಾಗೂ ಜೀವನ ವ್ಯವಹಾರದಲ್ಲಿ ಕನ್ನಡವನ್ನೇ ಉಪಯೋಗಿಸುತ್ತಿದ್ದರು. ಏಕೆಂದರೆ ಅದುವೇ ಅವರ

ಮಾತೃಭಾಷೆಯಾಗಿತ್ತು. ಸರಕಾರವು ಇದನ್ನು ಗುರುತಿಸಿತು. ಕನ್ನಡದಲ್ಲಿ ವಿಪುಲ ಸಾಹಿತ್ಯವಿದೆಯೆಂಬುದನ್ನು ಸಹ ಅರಿತುಕೊಂಡಿತು. ಆದುದರಿಂದ ಕನ್ನಡ ಮಾತನಾಡುವ ಈ ಜಿಲ್ಲೆಗಳಲ್ಲಿ ಪ್ರಾಥಮಿಕ ಶಿಕ್ಷಣವು ಕನ್ನಡದಲ್ಲಿಯೇ ಸಾಗಬೇಕೆಂದು ಆಜ್ಞಾಪಿಸಿತು. ಈ ಆಜ್ಞೆಯು ಖಾಸಗಿ ಸಂಘ–ಸಂಸ್ಥೆಗಳಿಂದ ನಡೆಸಲ್ಪಡುತ್ತಿದ್ದ ಸಾಲೆಗಳಿಗೂ ಅನ್ವಯಿಸಿತು. ಈ ಸಾಲೆಗಳು ಸರಕಾರದಿಂದ ಅನುದಾನ ಪಡೆಯುತ್ತಿದ್ದವು.

ಎಲ್ಲ ಪ್ರಾಥಮಿಕ ಸಾಲೆಗಳ ವರ್ಗೀಕರಣ ಕಾರ್ಯವು ಅವುಗಳ ತಪಾಸಣೆಯ ನಂತರ ೧೮೮೫ ರಲ್ಲಿ ಸುವ್ಯವಸ್ಥಿತ ರೀತಿಯಲ್ಲಿ ನಡೆಯಿತು. ಪರೀಕ್ಷಾ ಪರಿಣಾಮಗಳ ಆಧಾರದ ಮೇಲೆ ಅನುದಾನವನ್ನೀಯುವ ಪದ್ಧತಿಯು ೧೮೮೮ ರಲ್ಲಿ ಪ್ರಾರಂಭವಾಯಿತು. ಕ್ರಿಶ್ಚಿಯನ್ ಮಿಶನರಿಗಳು ರಾಯಚೂರಲ್ಲಿ ಸೇಂಟ ಮೇರಿ ಪ್ರಾಥಮಿಕ ಸಾಲೆಯನ್ನು ತೆರೆದರು. ನಾಮಪಲ್ಲಿಯಲ್ಲಿ ಒಂದು ಮಧ್ಯಮ ಸಾಲೆಯು ಪ್ರಾರಂಭಿಸಲ್ಪಟ್ಟಿತು. ೧೮೮೬ ರಲ್ಲಿ ಶಿಷ್ಯವೇತನ ಕ್ರಮವು ಸಂಘಟಿತವಾಯಿತು. ಸಾಮಾನ್ಯ, ವಿಶಿಷ್ಟ, ತಾಂತ್ರಿಕ, ಇಂಗ್ಲೀಷ ಮತ್ತು ಭಾರತೀಯವೆಂದು ಐದು ರೀತಿಯ ಶಿಷ್ಯವೇತನಗಳು ಇದ್ದುವೆಂದು ಕಂಡು ಬರುತ್ತದೆ. ಇವು ಅನುಕ್ರಮವಾಗಿ ಸಾಮಾನ್ಯ, ವಿಶಿಷ್ಟ, ತಾಂತ್ರಿಕ, ಆಂಗ್ಲ ಹಾಗೂ ದೇಶೀಯ ಭಾಷೆಗಳ ಶಿಕ್ಷಣ ಪಡೆಯುತ್ತಿದ್ದ ವಿದ್ಯಾರ್ಥಿಗಳಿಗೆ ಕೊಡಲ್ಪಡುತ್ತಿರಬಹುದೆಂದು ಅವುಗಳ ಹೆಸರಿನಿಂದಲೇ ಗೊತ್ತಾಗುತ್ತದೆ. ಕ್ರಿ. ಶ. ೧೭೭೫ ರಲ್ಲಿ ಶಾಲೆಗಳ ತಪಾಸಣೆಯ ಸಲುವಾಗಿ ಉಪ ತಪಾಸಣಾಧಿಕಾರಿಗಳನ್ನು ನೇಮಿಸಲಾಯಿತು. ಅಲ್ಲಿಯ ವರೆಗೆ ಸಾಲೆಗಳ ತಪಾಸಣಾ ಕಾರ್ಯವನ್ನು ಕಂದಾಯ ಇಲಾಖೆಯ ಅಧಿಕಾರಿಗಳೇ ಮಾಡುತ್ತಿದ್ದರು. ೧೮೭೫ ರಿಂದ ಈ ಕೆಲಸವು ಶಾಲಾ ಉಪ ತಪಾಸಣಾಧಿಕಾರಿಗಳಿಗೆ ಒಪ್ಪಿಸಲ್ಪಟ್ಟಿತು. ಶಿಕ್ಷಣ ವಿಷಯದಲ್ಲಿ ಸರಕಾರಕ್ಕೆ ಸಲಹೆ ನೀಡುವ ಸಲುವಾಗಿ ಕ್ರಿ. ಶ. ೧೮೮೪ ರಲ್ಲಿ ಸಲಹಾ ಸಮಿತಿಯು ನೇಮಕವಾಯಿತು. ಈ ಸಮಿತಿಯು ೧೯೦೮ ರ ವರೆಗೆ ಕಾರ್ಯ ಮಾಡುತ್ತ ಮುಂದುವರಿಯಿತು.

ನವಾಬ ಇಮಾದುಲ್ ಮುಲ್ಕ ಬಹಾದ್ದೂರನ ಆಳಿಕೆಯಲ್ಲಿ ಶಿಕ್ಷಣವು ಮಹತ್ವದ ಇಲಾಖೆಯಾಯಿತು. ವಿಭಾಗೀಯ ಕೇಂದ್ರಗಳಲ್ಲಿ ಪ್ರೌಢ ಸಾಲೆಗಳು ಸ್ಥಾಪಿಸಲ್ಪಟ್ಟವು. ೧೮೯೧ ರಲ್ಲಿ ಮಧ್ಯಮಶಾಲಾ ಪರೀಕ್ಷೆಯು ಅಸ್ತಿತ್ವದಲ್ಲಿ ಬಂದಿತು. ೧೮೮೪ ರಲ್ಲಿ ಪಠ್ಯ ಪುಸ್ತಕ ರಚನಾ ಸಮಿತಿಯು ಸ್ಥಾಪಿಸಲ್ಪಟ್ಟಿತು. ೧೮೯೫–೯೬ ರಲ್ಲಿ ಆಂಗ್ಲ ಭಾಷೆಯಲ್ಲಿ ವಿದೇಶೀ ಅಭ್ಯಾಸಗಳನ್ನು ಮುಂದುವರಿಸುವ ವಿದ್ಯಾರ್ಥಿಗಳಿಗೆ ಶಿಷ್ಯವೇತನಗಳನ್ನು ಕೊಡುವ ಸಲುವಾಗಿ ಆಂಗ್ಲ ಶಿಷ್ಯವೇತನ ಸಮಿತಿಗಳು ಸ್ಥಾಪಿತವಾದವು. ಪಠ್ಯ ಪುಸ್ತಕ ರಚನಾ ಸಮಿತಿಯವರು ವಿವಿಧ ತರಗತಿಗಳಲ್ಲಿ ಅಭ್ಯಾಸಮಾಡುವ ವಿದ್ಯಾರ್ಥಿಗಳ ಸಲುವಾಗಿ ಪಠ್ಯ ಪುಸ್ತಕಗಳನ್ನು ತಯಾರಿಸತೊಡಗಿದರು. ವಿದೇಶೀ ಅಭ್ಯಾಸಕ್ಕೆ ಪ್ರೋತ್ಸಾಹ ದೊರೆಯಿತು. ಮಧ್ಯಮ ಶಾಲಾ ಪರೀಕ್ಷೆಯ ಪ್ರಾರಂಭ

ದಿಂದ ವಿದ್ಯಾರ್ಥಿಗಳು ಮನ ಮುಟ್ಟಿ ಅಭ್ಯಾಸ ಮಾಡತೊಡಗಿದರು. ಶಿಕ್ಷಕರಿಗೆ ದುಡಿಯಲು ಪ್ರೇರಣೆ ದೊರಕಿದಂತಾಯಿತು. ಶಿಕ್ಷಣದ ಗುಣಮಟ್ಟವು ಸುಧಾರಿಸಲು ಇವೆಲ್ಲವೂ ಕಾರಣೀಭೂತವಾದವು. ಈ ಎಲ್ಲ ದೃಷ್ಟಿಯಿಂದ ನವಾಬ ಇಮಾದುಲ್ ಮುಲ್ಕ ಬಹಾದ್ದೂರನು ಹೈದರಾಬಾದ ಸಂಸ್ಥಾನದಲ್ಲಿ ಶಿಕ್ಷಣದ ಜನಕನೆಂದೆನಿಸಿ-ಕೊಂಡನು.

ಆಂಗ್ಲ ಶಿಕ್ಷಣ :

ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಪ್ರಪ್ರಥಮ ಆಂಗ್ಲ ಸಾಲೆಯು ಗುಲಬುರ್ಗಾದಲ್ಲಿ ೧೮೭೫ ರಲ್ಲಿ ಪ್ರಾರಂಭಿಸಲ್ಪಟ್ಟಿತು. ಅದಕ್ಕೆ ಆ್ಯಂಗ್ಲೊವರ್ನ್ಯಾ-ಕ್ಯುಲರ ಸಾಲೆಯೆಂದು ಕರೆಯಲಾಯಿತು. ಮದ್ರಾಸ ವಿಶ್ವವಿದ್ಯಾಲಯಕ್ಕೆ ಹೊಂದಿಕೆಯಾಗಿದ್ದ ಅನಿಶ್ಚಿತತೆಗಳ ಕಾರಣದಿಂದ ಆಂಗ್ಲ ಶಿಕ್ಷಣವು ಸಾಕಷ್ಟು ಪ್ರಗತಿ ಹೊಂದಲಿಲ್ಲ. ೧೯ ನೇ ಶತಮಾನದ ಅಂತ್ಯದವರೆಗೆ ಇದೇ ಪರಿಸ್ಥಿತಿ ಉಳಿಯಿತು.

ಬಾಲಿಕೆಯರ ಶಿಕ್ಷಣ :

ಬಾಲಿಕೆಯರ ಶಿಕ್ಷಣಕ್ಕೆ ಮಿಶನರಿಗಳ ಪ್ರಯತ್ನಗಳೇ ಪ್ರಮುಖ ಕಾರಣಗಳು. ಅವರ ಪ್ರಯತ್ನದಿಂದಲೇ ಬಾಲಿಕೆಯರ ಶಿಕ್ಷಣವು ಪ್ರೋತ್ಸಾಹಿಸಲ್ಪಟ್ಟಿತು. ಪ್ರಗತಿ ಹೊಂದಿತು. ಮುಂದೆ ಸರಕಾರವು ಅನುದಾನದ ರೂಪದಲ್ಲಿ ಮತ್ತು ತನ್ನದೇ ಆದ ಇಂಥ ಸಾಲೆಗಳನ್ನು ಪ್ರಾರಂಭಿಸಿ ಬಾಲಿಕೆಯರ ಶಿಕ್ಷಣಕ್ಕೆ ಚಲನೆಯಿತ್ತಿತು. ೧೮೮೨-೮೩ ರ ಸಮಯಕ್ಕೆ ಸಹ ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಕೇವಲ ಬಾಲಿಕೆಯರ ಸಲುವಾಗಿ ಒಂದಾದರೂ ಆಂಗ್ಲ ಮಧ್ಯಮ ಸಾಲೆಗಳು ಇರಲಿಲ್ಲ. ರಾಯಚೂರಿನಲ್ಲಿ ೧೮೮೭ ನೇ ಇಸ್ವಿಯಲ್ಲಿ ಸೇಂಟ ಮೇರಿ ಕಾನ್ವೆಂಟ ಶಾಲೆಯು ಪ್ರಾರಂಭಿಸಲ್ಪಟ್ಟಿತು. ಅದು ೧೯೫೭ ರ ವರೆಗೆ ಮಧ್ಯಮ ಸಾಲೆಯಾಗಿಯೇ ಉಳಿಯಿತು.

ದೇಶೀಯ ಭಾಷಾ ಶಿಕ್ಷಣ ಮತ್ತು ಮಧ್ಯಮ ಶಾಲಾ ಪರೀಕ್ಷೆ :

ದೇಶೀಯ ಭಾಷಾ ಸಾಲೆಗಳ ಸಲುವಾಗಿ ಮೂರು ಬೇರೆ ಬೇರೆ ಪಠ್ಯಕ್ರಮ-ಗಳಿದ್ದವು. ಒಂದು ಉರ್ದು ಸಾಲೆಗಳಿಗಾಗಿ, ಇನ್ನೊಂದು ಮರಾಠಿ ಸಾಲೆಗಳ ಸಲುವಾಗಿ ಮತ್ತೊಂದು ತೆಲುಗು ಸಾಲೆಗಳ ಸಲುವಾಗಿ. ಕನ್ನಡ ಸಾಲೆಗಳ ಸಲುವಾಗಿ ಪ್ರತ್ಯೇಕ ಪಠ್ಯಕ್ರಮವಿಲ್ಲದಿದ್ದುದು ಒಂದು ವಿಶೇಷ. ಆ ಸಾಲೆಗಳು ಮರಾಠಿ ಪಠ್ಯ ಕ್ರಮವನ್ನೇ ಅನುಸರಿಸುತ್ತಿರಲಿಕ್ಕೆ ಸಾಕು. ಮದ್ರಾಸ ಸರಕಾರದವರು ಕೆಳಗಿನ ಮಾಧ್ಯಮಿಕ ಪರೀಕ್ಷೆಯನ್ನು ಮಧ್ಯಮ ಶಾಲಾ ಪರೀಕ್ಷೆಯಿಂದ ಸ್ಥಳಾಂತರಿಸಿದ್ದರಿಂದ ೧೮೯೧ ರಲ್ಲಿ ರಾಜ್ಯ ಮಾಧ್ಯಮ ಶಾಲಾ ಪರೀಕ್ಷೆಯು ಪ್ರಾರಂಭವಾಯಿತು.

ತರಬೇತಿ ಸಾಲೆಗಳು :

ಗುಲಬರ್ಗಾದಲ್ಲಿ ೧೮೮೯-೯೦ ರಲ್ಲಿ ಉರ್ದು ಶಿಕ್ಷಕರ ಸಲುವಾಗಿ ಒಂದು ನಾರ್ಮಲ್ (ಟ್ರೇನಿಂಗ) ಸಾಲೆಯು ಪ್ರಾರಂಭಿಸಲ್ಪಟ್ಟಿತು. ಆದರೆ ಮುಂದೆ ಅದನ್ನು

ಹೈದರಾಬಾದಕ್ಕೆ ಸ್ಥಳಾಂತರಿಸಲಾಯಿತು. ಮತ್ತು ದರೂಲ ಉಲೂಮಕ್ಕೆ ಜೋಡಿಸಲಾಯಿತು. ವರಂಗಲ್ಲದಲ್ಲಿ ಸ್ಥಾಪಿಸಲ್ಪಟ್ಟ ಇಂಥದೇ ಇನ್ನೊಂದು ಸಾಲೆಯನ್ನು ಸಹ ಹೈದರಾಬಾದಕ್ಕೆ ಒಯ್ಯಲಾಯಿತು. ಇದು ೧೯೬೨ ರಲ್ಲಿ ಗುಲಬರ್ಗಾದಲ್ಲಿ ಸ್ಥಾಪಿಸಲ್ಪಟ್ಟ ನಾರ್ಮಲ್ ಸಾಲೆಯನ್ನೂ, ವರಂಗಲ್ಲಿನಲ್ಲಿ ಪ್ರಾರಂಭಿಸಲ್ಪಟ್ಟ ಅಂಥದೇ ಸಾಲೆಯನ್ನು ಕೂಡಿಸಲಾಯಿತು. ಹೀಗೆ ಕೂಡಿ ಒಂದಾದ ಸಾಲೆಗೆ ಸರಕಾರೀ ನಾರ್ಮಲ್ ಸಾಲೆ ಹೈದರಾಬಾದ ಎಂದು ಹೆಸರಿಸಲಾಯಿತು.

ವಿಶ್ವವಿದ್ಯಾಲಯ ಶಿಕ್ಷಣ :

ಹೈದರಾಬಾದ ಕರ್ನಾಟಕದಲ್ಲಿ, ಅದೇಕೆ, ಇಡೀ ಹೈದರಾಬಾದ ಸಂಸ್ಥಾನದಲ್ಲಿ ೧೯೦೦ ರ ವರೆಗೆ ವಿಶ್ವವಿದ್ಯಾಲಯವೇ ಇರಲಿಲ್ಲ. ಕನ್ನಡ ಪ್ರದೇಶದಲ್ಲಿಯ ಪ್ರತಿಭಾವಂತ ವಿದ್ಯಾರ್ಥಿಗಳು ಹೈದರಾಬಾದದಲ್ಲಿದ್ದ ನಿಜಾಮ ಕಾಲೇಜಿಗೆ ಉಚ್ಚ ಶಿಕ್ಷಣ ಪಡೆಯುವ ಸಲುವಾಗಿ ಹೋಗುತ್ತಿದ್ದರು. ಈ ಕಾಲೇಜ ಮದ್ರಾಸ ವಿಶ್ವವಿದ್ಯಾಲಯಕ್ಕೆ ಸಂಲಗ್ನವಾಗಿದ್ದಿತು. ಹಿಂದೆ ಹೇಳಿದ ದರೂಲ ಉಲೂಮ ಸಂಸ್ಥೆಯು ಪಂಜಾಬ ವಿಶ್ವವಿದ್ಯಾಲಯದ ಸಂಲಗ್ನತೆ ಪಡೆದಿತ್ತು. ಆ ವಿಶ್ವವಿದ್ಯಾಲಯವು ಪ್ರಾಚ್ಯ ವಸ್ತು ಶಾಸ್ತ್ರ ಪದವಿಗಳ ಪರೀಕ್ಷೆಯನ್ನು ನಡೆಸುತ್ತಿತ್ತು. ಈ ಪರೀಕ್ಷೆಗೆ ಕೂಡ್ರುವ ವಿದ್ಯಾರ್ಥಿಗಳು ಅತ್ಯುತ್ತಮ ತರಬೇತಿಯನ್ನು ಪಡೆಯಬೇಕಾಗುತ್ತಿತ್ತು. ಈ ಪರೀಕ್ಷೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು ಸಮರ್ಥ ಆಡಳಿತಗಾರರಾಗಲು ಯೋಗ್ಯರಾಗುತ್ತಿದ್ದರು.

ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣ :

ಇಡೀ ಹೈದರಾಬಾದ ಸಂಸ್ಥಾನದಲ್ಲಿ ೧೯೬೦ ರ ವರೆಗೆ ಔದ್ಯೋಗಿಕ ಶಾಲೆಗಳು ಇರಲಿಲ್ಲ. ಆ ಇಸ್ವಿಯಲ್ಲಿ ಔದ್ಯೋಗಿಕ ಸಾಲೆಯೊಂದು ಪ್ರಪ್ರಥಮವಾಗಿ ಸ್ಥಾಪಿಸಲ್ಪಟ್ಟಿತು. ವರಂಗಲ್ಲಿನಲ್ಲಿ ಸ್ಥಾಪಿತವಾದ ಈ ಸಾಲೆಯಲ್ಲಿ ಓದು, ಬರೆಹ, ಗಣಿತ ಈ ವಿಷಯಗಳ ಜೊತೆಗೆ, ಚಿತ್ರಕಲೆ ಮತ್ತು ನಕ್ಷೆಗಳನ್ನೂ ತೆಗೆಯುವದನ್ನು ಕಲಿಸಲಾಗುತ್ತಿತ್ತು. ಈ ಕಲೆಗಳನ್ನು ಪ್ರಾಯೋಗಿಕವಾಗಿ ಅನ್ವಯಿಸುವ ಸಲುವಾಗಿ ಜಮುಖಾನೆ ನೇಯುವದನ್ನೂ, ಬಡಿಗತನವನ್ನು, ರೇಸಿಮೆ ವಸ್ತ್ರಗಳ ತಯಾರಿಕೆಯನ್ನು ಮತ್ತು ಕುಂಬಾರಿಕೆಯನ್ನೂ ಕಲಿಸುವ ಏರ್ಪಾಟು ಇದ್ದಿತು. ಈ ಕಸಬುಗಳಲ್ಲಿ ವಿದ್ಯಾರ್ಥಿಗಳು ತರಬೇತು ಪಡೆಯುತ್ತಿದ್ದರು. ಔರಂಗಾಬಾದದಲ್ಲಿ ಇಂಥ ಇನ್ನೊಂದು ಸಾಲೆಯು ಪ್ರಾರಂಭಿಸಲ್ಪಟ್ಟಿತು. ಈ ಸಾಲೆಗಳಲ್ಲಿ ತರಬೇತು ಪಡೆದ ವಿದ್ಯಾರ್ಥಿಗಳು ಮುಂಬಯಿಯಲ್ಲಿದ್ದ ಸರ್ ಜೆ. ಜೆ. ಕಲಾ ಶಾಲೆಯಲ್ಲಿ ನಡೆಯುತ್ತಿದ್ದ ವಾರ್ಷಿಕ ಪರೀಕ್ಷೆಗೆ ಕೂಡ್ರಲು ಹೋಗುತ್ತಿದ್ದರು. ವರಂಗಲ್ಲಿನಲ್ಲಿ ಒಂದು ಎಂಜನೀಯರಿಂಗ ಸಾಲೆಯೂ ಇದ್ದಿತು. ಔರಾಂಗಾಬಾದ ಔದ್ಯೋಗಿಕ ಸಾಲೆಯನ್ನು ಪುನರ್ ಸಂಘಟಿಸಲಾಯಿತು. ಆ ಸಾಲೆಯಲ್ಲಿ ಮೊದಲು ಇದ್ದ ಕಸೂತಿ, ಬಡಿಗತನ, ಕೆತ್ತನೆಯ ಕೆಲಸ,

ಚಿತ್ರಕಲೆ ಇವುಗಳ ಜೊತೆಗೆ ಹೊಲಿಗೆ, ಚಕ್ಕಡಿ ನಿರ್ಮಾಣ, ಹೊಳಪು ಕೊಡುವದು, ವಿದ್ಯುಚ್ಛಕ್ತಿ, ಪತ್ತಾರಿಕೆ, ಕಮ್ಮಾರಿಕೆ, ನೇಕಾರಿಗೆ, ಲೋಹ ಕೆತ್ತನೆ–- ಈ ಕಸಬುಗಳು ಜೋಡಿಸಲ್ಪಟ್ಟವು. ಈ ಎಲ್ಲ ಔದ್ಯೋಗಿಕ ತರಬೇತುಗಳ ಜೊತೆಗೆ ಪ್ರಾಥಮಿಕ ಶಿಕ್ಷಣ ಮತ್ತು ಧರ್ಮ ಬೋಧನೆಗಳನ್ನು ಸಹ ಕಲಿಸಲಾಗುತ್ತಿತ್ತು.

ಹೈದರಾಬಾದ ಕರ್ನಾಟಕ ಪ್ರದೇಶದ ವಿದ್ಯಾರ್ಥಿಗಳು ಮೇಲೆ ವಿವರಿಸಿದ ತಾಂತ್ರಿಕ ಮತ್ತು ಔದ್ಯೋಗಿಕ ಸಾಲೆಗಳಿಗೆ ಆಯಾ ಕಸಬುಗಳಲ್ಲಿ ವಿದ್ಯೆ ಸಂಪಾದಿಸಲು ಮತ್ತು ನೈಪುಣ್ಯ ಪಡೆಯಲು ಹೋಗಬೇಕಾಗುತ್ತಿತ್ತು. ಪ್ರಾಥಮಿಕ ಹಾಗೂ ಧಾರ್ಮಿಕ ಶಿಕ್ಷಣವು ಸಹ ಅಲ್ಲಿ ಲಭ್ಯವಾಗುತ್ತಿದ್ದುದರಿಂದ ಅನುಕೂಲತೆಯಿದ್ದ ಹಾಗೂ ಆಸ್ಥೆಯುಳ್ಳ ಪಾಲಕರು ತಮ್ಮ ಮಕ್ಕಳನ್ನು ಅಂಥ ಸಾಲೆಗಳಿಗೆ ಕಳಿಸುತ್ತಿದ್ದರು. ೧೯೦೬–೧೯೦೯ರ ಅವಧಿಯಲ್ಲಿ ಬೀದರದಲ್ಲಿ ಬಿದಿರಿನ ಕೆಲಸ ಕಲಿಸುವ ಸಾಲೆಯು ಪ್ರಾರಂಭಿಸಲ್ಪಟ್ಟರೆ, ಗುಲಬರ್ಗಾ ಜಿಲ್ಹೆಯ ನಾರಾಯಣಪೇಟದಲ್ಲಿ ಚಿತ್ರಕಲೆ, ನೇಯ್ಗೆ ಮತ್ತು ಬಡಿಗತನ ಕಲಿಸುವ ಸಾಲೆಯು ಸ್ಥಾಪಿಸಲ್ಪಟ್ಟಿತು.

ಶಾರೀರಿಕ ಶಿಕ್ಷಣ : ಆರಂಭದಲ್ಲಿ ಗರಡೀಸಾಧಕದ ಶಿಕ್ಷಕನನ್ನು ಪ್ರತಿಯೊಂದು ಸರಕಾರೀ ಪ್ರೌಢ ಸಾಲೆಯಲ್ಲಿ ನೇಮಿಸಲಾಗುತ್ತಿತ್ತು. ಅವನು ತನ್ನ ಸಾಲೆಯಲ್ಲಿ ಡ್ರಿಲ್ ಕಲಿಸುತ್ತಿದ್ದನಲ್ಲದೆ, ವಿಭಾಗೀಯ ಕೇಂದ್ರಗಳಲ್ಲಿದ್ದ ಮಧ್ಯಮ ಸಾಲೆಗಳಿಗೆ ನಿಯತಕಾಲಿಕ ಸಂದರ್ಶನವೀಯುತ್ತಿದ್ದನು. ೧೮೯೬ರಲ್ಲಿ ಪ್ರತಿ ಜಿಲ್ಹೆಯ ಮುಖ್ಯ ಸ್ಥಳದಲ್ಲಿದ್ದ ಪ್ರತಿಯೊಂದು ಪ್ರಥಮ ವರ್ಗದ ಮಧ್ಯಮ ಸಾಲೆಗೆ ಓರ್ವ ಗರಡಿಸಾಧಕ ಶಿಕ್ಷಕನನ್ನು ನೇಮಿಸಲಾಯಿತು. ಹೀಗೆ ನೇಮಕವಾಗುವ ಶಿಕ್ಷಕರು ಸೇಂಟ ಜಾರ್ಜ ವ್ಯಾಕರಣ ಸಾಲೆಯಲ್ಲಿ ಆರು ತಿಂಗಳು ತರಬೇತು ಪಡೆಯುತ್ತಿದ್ದರು.

ಸಮಾರೋಪ : ಮೇಲಿನ ವಿವರಣೆಯಿಂದ ಹೈದರಾಬಾದ ಸಂಸ್ಥಾನದ ಕನ್ನಡ ಪ್ರದೇಶದಲ್ಲಿ ೧೮೦೦–೧೯೦೦ರ ಅವಧಿಯಲ್ಲಿ ಶಿಕ್ಷಣ ವಿಶೇಷವಾಗಿ ಉಚ್ಚ ಶಿಕ್ಷಣ, ತಾಂತ್ರಿಕ, ಔದ್ಯೋಗಿಕ, ವೈದ್ಯಕೀಯ ಶಿಕ್ಷಣದ ಪ್ರಸಾರವು ಅತ್ಯಂತ ಹಿಂದುಳಿದಿತ್ತೆಂದು ಕಂಡುಬರುತ್ತದೆ. ಆಗಿನ ಕಾಲದ ಬ್ರಿಟಿಷ ಹಿಂದುಸ್ತಾನದಲ್ಲಿ ಇದ್ದ ಶಿಕ್ಷಣ ಸಂಸ್ಥೆಗಳ ಪ್ರಮಾಣದಿಂದ ಹೀಗೆ ಹೇಳಬಹುದಾಗಿದೆ. ರಾಜಕೀಯ ಸ್ಥಿತ್ಯಂತರ ಜನತೆಯ ಅಜ್ಞಾನ, ವಿವಿಧ ಭಾಗಗಳ ಹಾಗೂ ಭಾಷೆಗಳ ಜನರಲ್ಲಿದ್ದ ಪರಸ್ಪರ ಅಪರಿಚಯತ್ವ–- ಇವೇ ಮೊದಲಾದವು ಕಾರಣವಾಗಿರಬಹುದು. ನಮ್ಮ ರಾಜ್ಯದಲ್ಲಿ ಸಮಾವೇಶವಾಗಿರುವ ಇತರ ಪ್ರದೇಶಗಳೊಂದಿಗೆ ಹೋಲಿಸಿದರೆ ಸಹ ಹೈದರಾಬಾದ ಕರ್ನಾಟಕ ಪ್ರದೇಶವು ಶಿಕ್ಷಣದಲ್ಲಿ ಹಿಂದುಳಿದಿದೆಯೆಂದೇ ಎಲ್ಲರ ಅಭಿಪ್ರಾಯವಾಗಿರುವದನ್ನು ನಾವು ಕಾಣುತ್ತೇವೆ; ಕೇಳುತ್ತೇವೆ. ನಾಡ ಏಳ್ಗೆಗೆ ಶಿಕ್ಷಣವೇ ತಾರಕವು.

ಆಧಾರ

"History of Education in Hyderabad Karnatak— by Dr. A. C. Devegouda, D.P.I. in Mysore (Retd.) & Dr. S. M. Hunshyal Principal Hamdarad Junior College Raichur.

ಭಾಗ–೩

ಕೆಲವು ಆಧುನಿಕ ಶಿಕ್ಷಣ ಸಮಸ್ಯೆಗಳು

*ವಯಸ್ಕರ ಶಿಕ್ಷಣದಲ್ಲಿ ಪ್ರಾಥಮಿಕ ಶಿಕ್ಷಕರ ಪಾತ್ರ

—ಬಿ. ಸಿ. ಪಾಟೀಲ

ಬಹುಸಂಖ್ಯಾತ ಅನಕ್ಷರತೆಯು ಭಾರತದ ಪಾಪ ಮತ್ತು ಕಳಂಕವಾಗಿದೆ. ಅದನ್ನು ತೊಡೆದು ಹಾಕಬೇಕು.

—ಮಹಾತ್ಮಾ ಗಾಂಧೀಜಿ

ಪೀಠಿಕೆ :

ಭಾರತವು ಸ್ವತಂತ್ರ ರಾಷ್ಟ್ರವಾಗಿ ೧೯೪೭ ರಿಂದ ತನ್ನೆಲ್ಲ ಜನತೆಗೆ ಹೊಸ ಜೀವನವನ್ನು ಕೊಡುವ ಮಾರ್ಗದಲ್ಲಿ ಶ್ರಮಿಸುತ್ತಿರುವದು ನಮ್ಮೆಲ್ಲರಿಗೆ ತಿಳಿದ ವಿಷಯ. ಯಾವುದೇ ರಾಷ್ಟ್ರವು ಸ್ವಾತಂತ್ರ್ಯದಿಂದ ಬದುಕಬೇಕಾದರೆ ಆ ರಾಷ್ಟ್ರದ ಜನತೆಯ ಜೀವನದಲ್ಲಿ ಸ್ವಾತಂತ್ರ್ಯದ ಉಸಿರಾಟ ನಡೆದಿರಬೇಕಾದುದು ಗಮನಾರ್ಹವಾದುದು. ವ್ಯಕ್ತಿಯು ಸ್ವಾತಂತ್ರ್ಯದ ಜೀವನವನ್ನು ನಡೆಸದಿದ್ದಾಗ ಅಂಥ ವ್ಯಕ್ತಿ ಇರುವ ಸಮಾಜ ಸಂಪೂರ್ಣ ಸ್ವಾತಂತ್ರ್ಯದಿಂದ ಬದುಕಲಾರದು. ವ್ಯಕ್ತಿಯಲ್ಲಿ ಸ್ವತಂತ್ರ ವ್ಯಕ್ತಿತ್ವದ ನಿರೂಪಣೆಯು ರಾಷ್ಟ್ರದ ಸ್ವಾತಂತ್ರ್ಯಕ್ಕೆ ಅಡಿಗಲ್ಲಾಗಿದೆ. ಸ್ವಾತಂತ್ರ್ಯದ ಅರಿವು ಮೂಡಿದಾಗ ಮಾತ್ರ ವ್ಯಕ್ತಿಯ ಜೀವನದಲ್ಲಿ ಪ್ರಜ್ಞೆ ಬೆಳೆದು ತನಗೂ ತಾನಿರುವ ಸಮಾಜಕ್ಕೂ ಸುಖ–ಸಂಪತ್ತನ್ನೂ, ಶಾಂತಿ–ಸೌಹಾರ್ದತೆಯನ್ನೂ ತರಬಲ್ಲನೆಂದು ತಿಳಿಯಬಹುದು. ಪ್ರಜ್ಞಾವಂತ ಜನತೆಯಿಂದ ಕೂಡಿದ ರಾಷ್ಟ್ರವು ಏಳ್ಗೆ ಹೊಂದಿ ಜನತೆಯ ಆಸೆ–ಆಕಾಂಕ್ಷೆಗಳನ್ನು ಈಡೇರಿಸುವಲ್ಲಿ ಯಶಸ್ಸನ್ನು ಗಳಿಸಬಹುದಾಗಿದೆ. ಯಾವ ರಾಷ್ಟ್ರವೇ ಆಗಲಿ ತನ್ನ ಪ್ರಜೆಗಳಲ್ಲಿ ಪ್ರಜ್ಞೆ ಬರುವಂತೆ ಯೋಗ್ಯ ಪರಿಸರ, ಪುರಸ್ಕಾರ ಒದಗಿಸಿಕೊಟ್ಟಾಗ ಅವರಲ್ಲಿ ವಾಸ್ತವಿಕ ಜೀವನ ಸಾಗಿಸುವ ಸದಿಚ್ಛೆಯುಂಟಾಗುವದು ಸಹಜ. ವ್ಯಕ್ತಿಗೂ, ಅವನಿರುವ ಸಮಾಜಕ್ಕೂ ಕಲ್ಯಾಣದ ಸೋಂಕು ತಟ್ಟಬೇಕಾದಲ್ಲಿ ಅವನ ಜೀವನ ವಾಸ್ತವಿಕತೆಯಿಂದ ಸಿಡಿದು ಹೋಗಿರಬಾರದು. ವಾಸ್ತವಿಕ ಜೀವನದಿಂದ ವ್ಯಕ್ತಿಯ ಜೀವನದಲ್ಲಿ ಹೊಸತನವನ್ನು ಕಂಡು

ಶ್ರೀ ಬಿ. ಸಿ. ಪಾಟೀಲ ಅವರು ಕರ್ನಾಟಕ ವಿಶ್ವವಿದ್ಯಾಲಯದ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯರು. ಸತತವಾದ ಅಭ್ಯಾಸ ಮತ್ತು ಪಾಂಡಿತ್ಯಪೂರ್ಣ ಲೇಖನಗಳು, ಸ್ಫೂರ್ತಿದಾಯಕ ಭಾಷಣಗಳಿಂದ ನಾಡಿಗೆ ಪರಿಚಿತರಾದವರು. ಶಿಕ್ಷಣ ಸಮಸ್ಯೆಗಳ ಬಗೆಗೆ ಹಲವಾರು ವೈಚಾರಿಕ ಪುಸ್ತಕಗಳನ್ನು ಹೊರತಂದಿದ್ದಾರೆ.

*ಡೆಪ್ಯುಟಿ ಚನ್ನಬಸಪ್ಪನವರ ಪುಣ್ಯತಿಥಿಯ ಶತಮಾನೋತ್ಸವ ದಿನಾಚರಣೆಯ ಸಂದರ್ಭ ದಿನಾಂಕ ೪-೧-೧೯೮೧ ರಂದು ಮಾಡಿದ ಭಾಷಣ ಸಾರ.

ಕೊಳ್ಳಬಹುದು. ಹೊಸತನದ ಮೆಟ್ಟಿಲುಗಳನ್ನೇರಿ ಔನ್ನತ್ಯದೆಡೆಗೆ ಸಾಗಿ ಜೀವನ ಸಾಕ್ಷಾತ್ಕಾರದೆಡೆಗೆ ಮುನ್ನುಗ್ಗಬಹುದು. ವಾಸ್ತವಿಕ ಜೀವನ ಬೆಳೆದು ಬರಬೇಕಾದಲ್ಲಿ ವ್ಯಕ್ತಿಗೆ ಶಿಕ್ಷಣದ ಸಂಭ್ರಮ ದೊರೆಯಬೇಕಾದುದು ಅನಿವಾರ್ಯ. ಶಿಕ್ಷಣದ ಕುಲುಮೆಯಲ್ಲಿ ವ್ಯಕ್ತಿಯು ಪ್ರವೇಶಿಸಿದಾಗ ಹೊಸ ಪ್ರಜ್ಞೆ ಬೆಳೆದ ವ್ಯಕ್ತಿಯನ್ನು ಕಾಣುತ್ತೇವೆ. ಜನತೆಯಲ್ಲಿ ಪ್ರಜ್ಞೆ ಬರಬೇಕಾದರೆ ಅವರಿಗೆ ಶಿಕ್ಷಣದ ಲಾಭವೊದಗಿದಾಗ ಮಾತ್ರ ಸಾಧ್ಯವೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಕಳವಳ :

ನಮ್ಮ ರಾಷ್ಟ್ರದಲ್ಲಿ ಶಿಕ್ಷಣ ಪ್ರಸಾರದ ಕಾರ್ಯ ವೇಗದಿಂದ ನಡೆದು ಬಂದಿದ್ದರೂ ಅದರ ಲಾಭ ಯಾರು ಯಾರಿಗೆ,ಎಷ್ಟೆಷ್ಟು ದೊರಕಿದೆಯೆಂಬುದನ್ನು ಕೂಲಂಕುಷವಾಗಿ ತಿಳಿದುಕೊಂಡಾಗ ವ್ಯಥೆಯಾಗದಿರದು. ಕೋಟ್ಯಾನು ಕೋಟಿ ಜನತೆಗೆ ಶಿಕ್ಷಣದ ಸೋಂಕು ತಟ್ಟದ್ದನ್ನು ಕಂಡಾಗ ಕಳವಳವೂ ಆಗುತ್ತದೆ. ಅಜ್ಞಾನವು ಅವರ ಜೀವನದ ಹಾಸು-ಹೊಕ್ಕಾದಾಗ ಅವರ ಜೀವನ ಎಂತೆಂಬುದನ್ನು ಊಹಿಸಬೇಕಾಗಿಲ್ಲ. ನಮ್ಮೆದುರಿಗೆ ಅಂಥ ಜೀವನ ಸದಾ ಕಾಣುತ್ತಿರುವಾಗ ಅದರ ವಿವರಣೆ ಕೊಡುವದು ವ್ಯರ್ಥ ಪ್ರಲಾಪ. ಬಡತನ, ಅಜ್ಞಾನ, ರೋಗ-ರುಜಿನಗಳು, ರೋಷ-ದ್ವೇಷಗಳು ಜನತೆಯ ಜೀವನದಲ್ಲಿ ಬೇರೂರಿದಾಗ ಯೋಗ್ಯವಲ್ಲದ ಜೀವನದ ಹೊರತು ಬೇರೆ ಏನನ್ನು ಕಾಣಬಹುದು ? ರಾಷ್ಟ್ರ ಗುಲಾಮಗಿರಿಯಲ್ಲಿದ್ದಾಗ ಇಂಥ ಅಯೋಗ್ಯ ಜೀವನ ಅಪಹಾಸ್ಯಕಾರಿಯಲ್ಲವೆನ್ನಬಹುದು. ಆದರೆ ಅಂಥ ಜೀವನವನ್ನು ಸ್ವತಂತ್ರ ರಾಷ್ಟ್ರವೆನಿಸಿದ ಭಾರತದಲ್ಲಿ ೩೩ ವರ್ಷಗಳ ನಂತರವೂ ಕಂಡಾಗ, **ನಮಗೇನಾಗಬೇಕಾಗಿದೆ** ಎನ್ನುವ ಚಿಂತೆ ಮೂಡುತ್ತದೆ. **ಇಂದಿಗೂ ಅಜ್ಞಾನದ ಬೃಹದಾಕಾರದ ಪ್ರಚೋದನೆ ನಡೆದಿದೆ. ಅದಕ್ಕೆ ಪುರಸ್ಕಾರವೂ ಕಂಡು ಬರುತ್ತದೆ.** ಅಜ್ಞಾನಕ್ಕೆ ಪುರಸ್ಕಾರ ದೊರೆಯುವವರೆಗೆ ಹೊಸದನ್ನು ಕಟ್ಟುವ ಕನಸು ಕನಸಾಗಿಯೇ ಉಳಿಯುತ್ತದೆ. ಎಲ್ಲ ಜನತೆಗೆ ಶಿಕ್ಷಣ ಒದಗಬೇಕು, ತಿಳುವಳಿಕೆ ದೊರೆಯಬೇಕು. ಅವರಲ್ಲಿ ತಮ್ಮ ಬಗೆಗೆ, ಸಮಾಜದ ಬಗೆಗೆ ಅರಿವುಂಟಾಗಬೇಕು. ಅವರ ವ್ಯಕ್ತಿತ್ವದಲ್ಲಿ ಪ್ರಗತಿಯುಂಟಾಗಬೇಕು ಎನ್ನುವ ವಿಚಾರಧಾರೆ ತೀವ್ರಗತಿಯಲ್ಲಿ ರಾಷ್ಟ್ರದಲ್ಲಿ ಬೆಳೆದು ಬಂದಾಗ, ಈ ವಿಚಾರ ಧಾರೆಯ ಮೇಲೆ ಕಾರ್ಯಾಚರಣೆ ನಡೆದಾಗ ನವ ಸಮಾಜ ನಿರ್ಮಾಣದ ದಿಕ್ಕಿನಲ್ಲಿ ಹೊಸ ತಿರುವು ಮೂಡುತ್ತದೆ.

ಆತ್ಮವಿಶ್ವಾಸ :

ವ್ಯಕ್ತಿ ತನ್ನ ಕಾಲ ಮೇಲೆ ತಾನು ನಿಲ್ಲಬೇಕಾದರೆ ಅವನಲ್ಲಿ ಆತ್ಮವಿಶ್ವಾಸ ಕುದುರಬೇಕಾದುದು ಅವಶ್ಯ. ಆತ್ಮವಿಶ್ವಾಸವಿಲ್ಲದ ವ್ಯಕ್ತಿ ಯೋಗ್ಯವಾದುದನ್ನು ಸಾಧಿಸಲಾರ. ಆತ್ಮವಿಶ್ವಾಸದ ಕುದುರುವಿಕೆಗೆ ಶಿಕ್ಷಣವು ಮಹಾನದಿಯಾಗಬೇಕು.

ನನಗೆ ಆತ್ಮವಿದೆ; ದೇಶ ಸಹಾಯ ಸಲ್ಲಿಸಿದರೆ ವಿಶ್ವಾಸ ಬೆಳಿಸಿಕೊಳ್ಳುತ್ತೇನೆ ಎನ್ನುವ ವಿಚಾರಧಾರೆಯನ್ನು ಮೂಡಿಸುವ ಪ್ರಯತ್ನ ಇಂದು ಭರದಿಂದ ನಡೆಯಬೇಕಾಗಿದೆ. ಜನಶಕ್ತಿಯ ಹ್ರಾಸ ತಡೆಯಬೇಕಾದಲ್ಲಿ ಅವರಲ್ಲಿ ತಮ್ಮ ಆಂತರಿಕ ಶಕ್ತಿಯ ಬಗೆಗೆ ವಿಶ್ವಾಸ ಮೂಡಿಸಬೇಕಾದುದು ಅನಿವಾರ್ಯ. ವ್ಯಕ್ತಿಯಲ್ಲಿ ವಿಶ್ವಾಸ ಬೆಳವಣಿಗೆ ಯಾಗಬೇಕಾದರೆ ಅದಕ್ಕೆ ಚೇತೋಹಾರಿಯಾದ ಶಿಕ್ಷಣ ಒದಗಲೇಬೇಕು. ಶಿಕ್ಷಣದ ಪ್ರಸಾರ ಬಹು ತೀವ್ರಗತಿಯಿಂದ ನಡೆಯಬೇಕು. ವ್ಯವಸ್ಥಿತ ರೀತಿಯಲ್ಲಿ ಪರಿಣಾಮ ಕಾರಿಯಾದ ರೀತಿಯಲ್ಲಿ ಶಿಕ್ಷಣವು ಒದಗುವ ಕಾಲ ಸನ್ನಿಹಿತವಾಗಿದೆ. ತಡಮಾಡಿದರೆ ರಾಷ್ಟ್ರದ ತಾಳ್ಮೆಯನ್ನು ಗೇಲಿ ಮಾಡಿದಂತಾಗುತ್ತದೆ. ಇಂದು ಈ ಪರಿಸ್ಥಿತಿಯ ಸೂಚನೆಗಳೂ ಕಂಡುಬರುತ್ತಿವೆ. **ನಮ್ಮ ಶಿಕ್ಷಣ, ಜನರಲ್ಲಿರುವ ಪರಿಣತಿಯನ್ನು ಬೆಳೆಸಿ, ಅಭಿಮಾನವನ್ನು ಕಲುಕಿಸಿ, ಆತ್ಮವಿಶ್ವಾಸವನ್ನು ಹೆಚ್ಚಿಸುವಲ್ಲಿ ಸಾರ್ಥಕವಾಗಬೇಕಾಗಿದೆ.** ತಾನು ಕಲಿಯದೆ, ದುಡಿಯದೆ ಚಿನ್ನಾಟವಾಡುವದು ಅಪಮಾನಕರವೆಂಬ ಭಾವನೆ ಮೂಡಿದಾಗ ದೇಶ ಬೆಳಕನ್ನು ಕಾಣಬಹುದು. ಶಿಕ್ಷಣ ದಿಂದ ಜನತೆಯ ವ್ಯಕ್ತಿತ್ವದ ಸರ್ವತೋಮುಖ ಬೆಳವಣಿಗೆಯಾಗಿ ಬೆಳೆಯುತ್ತಿರುವ ರಾಷ್ಟ್ರದಲ್ಲಿ ತಮ್ಮ ಪಾತ್ರ ಏನೆಂಬುದನ್ನು ತಿಳಿಯಲು ಸಹಾಯವಾಗುತ್ತದೆ. ರಾಷ್ಟ್ರದ ಪ್ರಗತಿಗಾಗಿ ದುಡಿಯುವ ಛಲ ಅವರಲ್ಲಿ ಬೆಳೆಯುತ್ತದೆ. ಅವರ ಕಠಿಣ ದುಡಿಮೆಯ ಫಲವಾಗಿ ಸಂಪತ್ತು ಬೆಳೆದಾಗ ದೇಶಕ್ಕೆ ಹೊಸ ಮೆರಗು ಖಂಡಿತವಾಗಿ ಕಾಣುವ ದುಂಟು. ನಮ್ಮ ರಾಷ್ಟ್ರದಲ್ಲಿ ಬಡತನ ನಿರ್ಮೂಲನವಾಗಬೇಕಾದರೆ ತಾನು ಬಡವ, ತನ್ನಲ್ಲಿ ಬಡತನವನ್ನು ಬೆಳೆಸಿಕೊಂಡಿದ್ದೇನೆ, ತಾನು ಅದನ್ನು ಹೊಡೆದೋಡಿಸಬೇಕು; ಅದು ತನಗೆ ಸಾಧ್ಯವೆನ್ನುವ ಪ್ರಜ್ಞೆಯನ್ನು ಬೆಳೆಸಿಕೊಳ್ಳಲು ಅನಕ್ಷರಸ್ಥ ಬಡವರಿಗೆ ಸಹಾಯ ಸಲ್ಲಿಸಬೇಕು. ಈ ಪ್ರಜ್ಞೆ ಬೆಳೆಯಬೇಕಾದರೆ ಅವರಿಗೆ ಅಕ್ಷರ ಜ್ಞಾನ ಒದಗಿಸಿ, ಅವರವರ ಸಾಮರ್ಥ್ಯಕ್ಕೆ ಯೋಗ್ಯವಾದ ಹಾಗೂ ಪೂರಕವಾದ ಪ್ರಾವೀಣ್ಯ ಬೆಳೆಸಿ, ಅವರನ್ನು ಕೆಲಸಕ್ಕೆ ಹಚ್ಚಿದಲ್ಲಿ ಮತ್ತು ಆ ಕೆಲಸದಲ್ಲಿ ಪ್ರೇರೇಪಿಸಿದರೆ ಬಡತನ ನಿರ್ಮೂಲನವಾಗುತ್ತದೆಂದು ಧೈರ್ಯದಿಂದ ಹೇಳಬಹುದು. ಬಡತನದ ತೊಲಗು ವಿಕೆಯ ಜೊತೆಯಲ್ಲಿ ಇಂಥ ಜನಕೋಟಿಯ ಜೀವನ ಸುಸಂಸ್ಕೃತವಾಗಬೇಕಾದರೆ, ಅವರಲ್ಲಿ ಅವರ ಆಸೆ–ಆಕಾಂಕ್ಷೆಗಳ, ಬೇಕು–ಬೇಡಿಕೆಗಳ, ಅಭಿರುಚಿಗಳ, ಹವ್ಯಾಸಗಳ, ಅಭಿವೃತ್ತಿಗಳ ಜೀವನವನ್ನು ಬದಲಾಯಿಸುವ ಚಟವಟಿಕೆಗಳಿಗೆಲ್ಲ ಶಿಕ್ಷಣದ ಸಂಪೂರ್ಣ ಪೋಷಣೆ ದೊರೆತಾಗ ಸಾಧ್ಯವಾಗುತ್ತದೆ.

ವಿಫಲತೆ :

ನಮ್ಮ ರಾಷ್ಟ್ರದಲ್ಲಿ ಸಾಕ್ಷರತೆಯ ಪ್ರಮಾಣವನ್ನು ಅಂದಿನಿಂದಲೂ ಇಂದಿನವರೆಗೆ ನೋಡಿದಾಗ, ಜನತೆಯ ಜೀವನಕ್ಕೆ ಹೊಸ ಮೆರಗನ್ನು ಕೊಡುವ ದಿಸೆಯಲ್ಲಿ ವಿಫಲತೆ ಯನ್ನು ಕಾಣುತ್ತೇವೆ. ನಿರಕ್ಷರಿಗಳ ಪ್ರಮಾಣ ಕೋಟಿ ಕೋಟಿ ಸಂಖ್ಯೆಯಲ್ಲಿ

ಹೆಚ್ಚಾಗುತ್ತಿದೆ. ಸಾಕ್ಷರತೆಯ ಪ್ರತಿಶತ ಪ್ರಮಾಣ ಹೆಚ್ಚಾಗಿದೆ ನಿಜ. ಆದರೂ ಜನಸಂಖ್ಯಾ ಸ್ಫೋಟದ ಪರಿಣಾಮವಾಗಿ ವರ್ಷ ವರ್ಷವೂ ನಿರಕ್ಷರಿಗಳ ಸಂಖ್ಯೆ ನಾಗಾಲೋಟದಿಂದ ಬೆಳೆಯುತ್ತಲೇ ಸಾಗಿದೆ. ಸಾಮೂಹಿಕ ನಿರಕ್ಷರತೆಯು ಮತ್ತಷ್ಟು ಉಲ್ಬಣಗೊಳ್ಳುತ್ತಿದೆ. ದೇಶದಲ್ಲಿ ಸಾಕ್ಷರತಾ ಪ್ರಚಾರಕ್ಕಾಗಿ ಅನೇಕ ರೀತಿಯಲ್ಲಿ ಪ್ರಯತ್ನಗಳು ನಡೆದಿವೆ. ಸರಕಾರ ಮತ್ತು ಖಾಸಗಿ ಸಂಘ-ಸಂಸ್ಥೆಗಳು ನಿರಕ್ಷರತೆಯ ನಿರ್ಮೂಲನೆಗಾಗಿ ಹೆಚ್ಚಿನ ಪ್ರಮಾಣದ ಪ್ರಯತ್ನಗಳನ್ನು ಮಾಡುತ್ತಿರುವದು ಕಂಡು ಬರುವದು. ಇತ್ತೀಚಿನ ವರ್ಷಗಳಲ್ಲಿ ಸಾಕ್ಷರತೆಯ ಪ್ರಸಾರದ ಸಲುವಾಗಿ ಹಣವನ್ನು ಸಾಕಷ್ಟು ಪ್ರಮಾಣದಲ್ಲಿ ವೆಚ್ಚ ಮಾಡಿರುವದೂ ಉಂಟು. ಆದರೂ ಈ ದಿಸೆಯಲ್ಲಿ ಹಣದ ವ್ಯಯ ಹಾಗೂ ಮಾಡಿದ ಪ್ರಯತ್ನಕ್ಕೆ ತಕ್ಕಂತೆ ಸಮಾಧಾನಪಟ್ಟುಕೊಳ್ಳು-ವಂತಹ ಇಲ್ಲವೆ ಸಂತೋಷಪಡುವಂತಹ ಯಾವುದೇ ಪ್ರಗತಿ ಕಂಡುಬರುತ್ತಿಲ್ಲ. ಇದಕ್ಕೆ ಕಾರಣಗಳು ಅನೇಕ. ಅದರಲ್ಲಿಯೇ ಬಡತನ, ಅಜ್ಞಾನ, ನಿರುದ್ಯೋಗ ಇವು ಮುಖ್ಯವಾದವುಗಳೆಂದು ಹೇಳಬಹುದು. ಈ ಪ್ರಮುಖ ಕಾರಣಗಳಿಂದ ಕಲಿಯುವಿಕೆಯ ಬಗೆಗೆ ಶಿಕ್ಷಣದ ಬಗೆಗೆ ಸದಭಿಪ್ರಾಯ ಮೂಡಿಲ್ಲ; ಮಹತ್ವ ಗೊತ್ತಾಗಿಲ್ಲ; ಅಭಿಪ್ರೇರಣೆ ಇಲ್ಲ; ಅಲಕ್ಷ್ಯತನ ಬೇರೂರಿದೆ. ಕಲಿತರೆ ಏನಾಗಬೇಕಾಗಿದೆ ಎಂಬ ತಾತ್ಸಾರದ ಮನೋಭಾವನೆ, ನಮಗೇಕೆ ಬೇಕೆಂಬ ದೌರ್ಬಲ್ಯ, ನಾನು ಕಲಿಯುವದು ಅಸಾಧ್ಯವೆಂಬ ಭೀತಿಯ ಬೆಳವಣಿಗೆ. ಒಟ್ಟಿನಲ್ಲಿ ನಿರಕ್ಷರಿ ಅಕ್ಷರಸ್ಥನಾಗಿಲ್ಲ. ಅವನಲ್ಲಿ ಸಾಕ್ಷರನಾಗಬೇಕೆಂಬ ಅರಿವು ಮೂಡಿಲ್ಲ. ಆ ದಿಸೆಯಲ್ಲಿ ಅವನು ಮುನ್ನುಗ್ಗುವಂತಿಲ್ಲ. ಇರುವವರೆಗೆ ಹೇಗಾದರೂ ಬದುಕಬೇಕೆಂಬ ಹವ್ಯಾಸ. ಹೊಟ್ಟೆಗೆ ಹಿಡಿ ಹಿಟ್ಟು ದೊರೆತರೆ ಸಾಕೆಂಬ ಕೆಳಮಟ್ಟದ ಸಮಾಧಾನ. ಆ ಹಿಡಿ ಹಿಟ್ಟಿಗಾಗಿ ಜೀವನ ದುದ್ದಕ್ಕೂ ಜಂಜಾಟ; ಹೋರಾಟ. ಹೋರಾಟದಲ್ಲಿ ಯಶಸ್ಸಾದರೆ ಬದುಕು; ಇಲ್ಲವಾದಲ್ಲಿ ಮೃತ್ಯುವಿನೊಡನೆ ಸೆಣಸಾಟ. ಇದು ನಮ್ಮ ಭಾರತದಲ್ಲಿ ಕಂಡು ಬರುತ್ತಿರುವ ಇಂದಿನ ದೃಶ್ಯ. ಈ ದೃಶ್ಯ ವಿಚಿತ್ರವೆನಿಸಿದರೂ ಸತ್ಯ. ಸಾಕ್ಷರರಾಗ ಬೇಕೆಂಬ ಇಚ್ಛೆ, ಈ ಮಹಾಕೋಟೆಯಲ್ಲಿ ಬರುವದಾದರೂ ಎಂತು ? ಸಮಯಾವಕಾಶವು ಎಲ್ಲಿ? ಆದರೆ ಈ ದೃಶ್ಯದ ಪರಿವರ್ತನೆಯನ್ನು ತರಬೇಕಾದುದು ಕರ್ತವ್ಯ. ಹೊಸ ಚಿತ್ರದ ನಿರ್ಮಾಣ ಮಾಡಲೇಬೇಕು. ಇಲ್ಲದಿದ್ದಲ್ಲಿ ಪ್ರಜಾಪ್ರಭುತ್ವ ರಾಷ್ಟ್ರವೆಂದು ಹೇಳಿಕೊಂಡ ನಾವು ಯಶಸ್ವಿಯಾಗುವದು ಕಷ್ಟಸಾಧ್ಯ. ಇದು ಕಟುಸತ್ಯ. ಪ್ರಜಾಪ್ರಭುತ್ವದ ಆಡಳಿತವನ್ನು ಹೊಂದಿದ ನಾವು ಅದರ ಯಶಸ್ಸಿಗಾಗಿ, ಬದುಕಿಗಾಗಿ, ಸಿರಿವಂತಿಕೆಗಾಗಿ ಜನರನ್ನು ಕನಿಷ್ಟಪಕ್ಷ ಸಾಕ್ಷರಿಗಳನ್ನಾಗಿ ಮಾಡುವದು ಅವಶ್ಯ.

ಗ್ರಾಮೀಣ ನಾಡು :

ನಮ್ಮದು ಗ್ರಾಮೀಣ ನಾಡು. ಐದು ಲಕ್ಷಕ್ಕೂ ಹೆಚ್ಚು ಹಳ್ಳಿಗಳು. ಪ್ರತಿಶತ ೮೦ರಷ್ಟು ಜನ ಗ್ರಾಮಾಂತರ ವಾಸಿಗಳು. ಬಡತನದ ಬೇಗುದಿಯಲ್ಲಿ ಬಳಲಿ,

ಜೀವನ ನಿರ್ವಹಣೆಗಾಗಿ ಶಹರಗಳಿಗೆ ವಲಸೆ ಹೋಗುವದೂ ಉಂಟು. ಜನಸಂಖ್ಯೆಯ ದೃಷ್ಟಿಯಿಂದ ಈ ವಲಸೆ ಹೋಗುವ ಜನರ ಪ್ರಮಾಣವನ್ನು ಹೋಲಿಸಿದಾಗ ಭಯಾನಕವೆನಿಸುವದು. ಹಳ್ಳಿಗಾಡಿನಲ್ಲಿರುವ ಅಜ್ಞ ಜನತೆ, ಹೊಟ್ಟೆಯ ಪಾಡಿಗಾಗಿ ತಮ್ಮ ಜೀವನಪರ್ಯಂತ ಅಲ್ಲಿ-ಇಲ್ಲಿ ಸುಳಿದಾಡಿ ಕೊನೆಗೊಮ್ಮೆ ಪಟ್ಟಣ ಸೇರುವದುಂಟು. ಪಟ್ಟಣದಲ್ಲಿ ಒಂದಿಲ್ಲೊಂದು ರೀತಿಯಲ್ಲಿ ಜೀವನ ಸಾಗಿಸುವದೂ ಕಂಡುಬರುತ್ತದೆ. ಜೀವನ ನಿರ್ವಹಣೆಗಾಗಿ ಸಂಕಷ್ಟಗಳ ಸರಮಾಲೆಯಲ್ಲಿ ಸದಾವಕಾಲವೂ ಜೀವಿಸುವದನ್ನು ಕಂಡಾಗ ಇವರ ಜೀವನದ ಸುಧಾರಣೆಯಲ್ಲಿ ಬೆಳೆಯುವ ಭಾರತ ಏನನ್ನು ಮಾಡಬೇಕೆಂದು ವಿಚಾರಿಸುವ ಕಾಲವಿದು. ಹೇಗಾದರೂ ಮಾಡಿ ಬದುಕಿದ ಜೀವನ ಕಂಡು ಜನರು ಬದುಕಿದ್ದಾರೆನ್ನುವದು ಬೆಳೆಯುವ ರಾಷ್ಟ್ರಕ್ಕೆ ಶೋಭೆಯಲ್ಲ. ಜನತೆಯ ಅಜ್ಞಾನದ ವಿರುದ್ಧ ಹೋರಾಟವನ್ನು ತೀವ್ರಗೊಳಿಸದ ಹೊರತು ರಾಷ್ಟ್ರದ ಜೀವನ ಭದ್ರವಾಗುವದಿಲ್ಲ. ಈ ದಿಸೆಯಲ್ಲಿ ಮೊದಲ ಹೆಜ್ಜೆಯೆಂದು ಅನಕ್ಷರತೆಯ ವಿರುದ್ಧ ಹೋರಾಡಲೇಬೇಕು. ಈ ಹೋರಾಟಕ್ಕೆ ಅಜ್ಞ ಜನತೆಯನ್ನು ಅಣಿಗೊಳಿಸುವದು ಸುಲಭಸಾಧ್ಯವಲ್ಲ. ಕಲಿತು, ಜೀವನದಲ್ಲಿ ಬದಲಾವಣೆಯನ್ನು ಕಂಡು ಬದುಕಿಕೊಳ್ಳಬೇಕೆಂಬ ಅಭಿಪ್ರೇರಣೆಯನ್ನು ಜನತೆಯಲ್ಲಿ ಮೂಡಿಸುವದು ಮಹಾನ್ ಸಮಸ್ಯೆಯಾಗಿದೆ. ಅವರ ಜೀವನಕ್ಕೊಂದು ಗುರಿ ತೋರಿಸಲು, ಅದನ್ನು ತಮ್ಮದನ್ನಾಗಿಸಿಕೊಳ್ಳಲು ಸಹಾಯ ಮಾಡುವದು ಅವಶ್ಯವಾದುದು. ಗುರಿಯ ಕಲ್ಪನೆ ಮೂಡಿದಾಗ ವ್ಯಕ್ತಿ ಗುರಿಸಾಧನೆಯತ್ತ ನಡೆಯಬಲ್ಲ. ಇಂದಿಲ್ಲ ನಾಳೆ ಗುರಿಯ ಸಾನ್ನಿಧ್ಯವನ್ನು ಪಡೆಯಬಲ್ಲ. ಗುರಿಯ ಸಾನಿಧ್ಯ ಪಡೆಯುವಲ್ಲಿ ವಿಶೇಷ ಪರಿಶ್ರಮ ಪಡುವ ವ್ಯಕ್ತಿತ್ವದ ನಿರೂಪಣೆ ಮಾಡಬೇಕಾಗಿದೆ. ಈ ದಿಸೆಯಲ್ಲಿ ಅಜ್ಞಾನದ ವಿರುದ್ಧ ಹೋರಾಟ ಅಗತ್ಯ. ಸಾಕ್ಷರತೆಗೆ ಬೆಲೆಯುಂಟು. ಅಭಿಪ್ರೇರಣೆ ಹೊಂದಿದ ವ್ಯಕ್ತಿ ತಾನೇ ತನಗಾಗಿ ಗುರಿಯನ್ನಿಟ್ಟುಕೊಳ್ಳಬಲ್ಲ. ತನ್ನ ಬೆಳವಣಿಗೆಯ ಜೊತೆಯಲ್ಲಿ ರಾಷ್ಟ್ರದ ಬೆಳವಣಿಗೆಗೆ ಸಹಾಯ ಸಲ್ಲಿಸಲೂ ಬಲ್ಲ.

ರಾಷ್ಟ್ರವು ಹಾಕಿಕೊಂಡ ಅನೇಕ ಕಾರ್ಯಕ್ರಮಗಳಲ್ಲಿ ಜನಕೋಟಿಯು ಸಕ್ರಿಯವಾಗಿ ಭಾಗವಹಿಸುವದು ಮುಖ್ಯ. ಸೇವಾಮನೋಭಾವನೆ ಬೆಳೆಯಬೇಕಾದುದೂ ಅಗತ್ಯ. ಸೇವೆಯಿಂದ ವ್ಯಕ್ತಿಯೂ ಬೆಳೆಯುತ್ತಾನೆ, ಸಮಾಜವೂ ಬೆಳೆಯುತ್ತದೆ. ಕಾಯಕದ ಕಲ್ಪನೆ ಬೆಳೆದು ಹೊಸ ಹುಮ್ಮಸು ಅವನಲ್ಲಿ ಚಿಮ್ಮುತ್ತದೆ.

ಕೃಷಿಗೆ ಪ್ರಾಧಾನ್ಯತೆ :

ಕೃಷಿ ಪ್ರಧಾನವಾದ ನಮ್ಮ ರಾಷ್ಟ್ರದಲ್ಲಿ ಕೃಷಿಗೆ ಪ್ರಾಧಾನ್ಯ ನೀಡಿದ್ದನ್ನು ಕಾಣುತ್ತೇವೆ. ಹೆಚ್ಚಿನ ಉತ್ಪತ್ತಿ ನಮ್ಮದಾಗಿದೆ. ವಿವಿಧ ರೀತಿಯ ಸಂಶೋಧನೆಗಳಿಂದಾಗಿ ಕೃಷಿ ರಂಗದಲ್ಲಿ ಹೊಸತನವನ್ನು ಕಾಣುತ್ತೇವೆ. ಆದರೆ ಅದೆಷ್ಟು ಜನಕ್ಕೆ

ಈ ಹೊಸತನ ಮುಟ್ಟಿದೆ ? ಪ್ರತಿಯೊಬ್ಬ ರೈತನಿಗೂ, ಕೂಲಿಕಾರನಿಗೂ —ಬೆವರು ಸುರಿಸಿ ದುಡಿಯುವ ಪ್ರತಿಯೊಬ್ಬ ವ್ಯಕ್ತಿಗೂ ಕೃಷಿರಂಗದಲ್ಲಿ ಬೆಳೆದು ಬಂದ ಹೊಸತನದ ಅರಿವು ಮೂಡುವಂತಾದರೆ ಹೊಸ ರಾಷ್ಟ್ರ ಕಾಣಬಹುದು. ಈ ಪ್ರಜ್ಞೆ ಮೂಡ ಬೇಕಾದರೆ ಎಲ್ಲರಿಗೂ ವಿಶಿಷ್ಟವಾದ ಕಲಿಯುವ ಅವಕಾಶಗಳನ್ನು ಕೊಡುವದು ಅವಶ್ಯ. ನೈಸರ್ಗಿಕ ಸಂಪನ್ಮೂಲಗಳನ್ನೂ, ಭೂಮಿಯನ್ನೂ ಕಾಪಾಡಿಕೊಂಡು ಬರುವ ವಿಚಾರ ಧಾರೆ ಜನತೆಯಲ್ಲಿ ಇನ್ನು ಮೂಡಿಲ್ಲ. ಇದು ತಾಪದಾಯಕ. ಶತಮಾನಗಳಿಂದ ಬೆಳೆದು ಬಂದಿರುವ ಗುಡಿ ಕೈಗಾರಿಕೆಗಳನ್ನು ಉಳಿಸಿ ಬೆಳೆಸಬೇಕಾಗಿದೆ. ಈ ದಿಸೆಯಲ್ಲಿ ಅಕ್ಷರ ಜ್ಞಾನದ ಜೊತೆಗೆ ಅನೇಕ ಶೈಕ್ಷಣಿಕ ಅವಕಾಶಗಳನ್ನು ಕೊಡುವದು ಅನಿವಾರ್ಯ. ನಮ್ಮ ಸಂಸ್ಕೃತಿಗೆ, ಈ ಅವಕಾಶಗಳು ಪೂರಕವಾಗುವವು.

ಆರೋಗ್ಯ ಪ್ರಜ್ಞೆ :

ಹಳ್ಳಿಯ ಜನತೆಯಲ್ಲಿ ತಮ್ಮ ಆರೋಗ್ಯದ ಪ್ರಜ್ಞೆಯನ್ನು ಯಾವ ರೀತಿಯಲ್ಲಿ ಬೆಳೆಸಬೇಕೆಂಬುದು ಮಹಾನ್ ಸಮಸ್ಯೆಯಾಗಿದೆ. ಆರೋಗ್ಯ, ಸ್ವಚ್ಛತೆ, ಮತ್ತು ಪೌಷ್ಟಿಕ ಆಹಾರದ ಕೊರತೆಯನ್ನು ಕಾಣುತ್ತೇವೆ. ಕಂಡೂ ಕಾಣದಂತಿರುವದು ಯೋಗ್ಯವಲ್ಲ. ಸರಕಾರ, ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಈ ದಿಸೆಯಲ್ಲಿ ಸುಧಾರಣೆ ಯನ್ನು ತರಲು ಸರ್ವವಿಧದ ಪ್ರಯತ್ನ ಮಾಡುತ್ತಿರುವದು ನಮಗೆ ತಿಳಿದ ವಿಷಯ. ಆದರೆ ಅವರ ಪ್ರಯತ್ನಗನುಗುಣವಾಗಿ ಪರಿಣಾಮ ಮೂಡಿಲ್ಲ. ಇದಕ್ಕೆ ಮುಖ್ಯ ಕಾರಣ ಅನಕ್ಷರತೆ, ಅಜ್ಞಾನ. ಸಂಪೂರ್ಣ ಆರೋಗ್ಯದ ತಿಳಿವಳಿಕೆಯಿಲ್ಲದ ಜನತೆಯಿಂದ ಕೂಡಿದ ರಾಷ್ಟ್ರವು ತನ್ನ ಸ್ವಾತಂತ್ರ್ಯಕ್ಕೆ ಧಕ್ಕೆ ತಂದುಕೊಳ್ಳಬಹುದು. —ಸ್ವಾತಂತ್ರ್ಯ ಉಳಿಯಬೇಕಾದರೆ ಸಾಮರ್ಥ್ಯವುಳ್ಳ, ದುಡಿಮೆಯ, ಶಿಸ್ತಿನ,ಕ್ರಿಯಾಶೀಲ ವ್ಯಕ್ತಿತ್ವವುಳ್ಳ ಜನ ಹೊರ ಹೊಮ್ಮಬೇಕು. ಈ ವಿಚಾರ ಗ್ರಹಿಸಲು ಎಲ್ಲರೂ ವಿದ್ಯಾವಂತರಾಗ-ಬೇಕಾದುದು ಅನಿವಾರ್ಯ.

ನಾಗರಿಕತೆಗೆ ಶಿಕ್ಷಣ :

ಸ್ವತಂತ್ರ ರಾಷ್ಟ್ರದಲ್ಲಿ ನಾಗರಿಕತೆಗಾಗಿ ಶಿಕ್ಷಣ ದೊರೆಯಬೇಕಾದುದು ಅತ್ಯವಶ್ಯ. ಇತ್ತೀಚಿನ ದಿನಗಳಲ್ಲಿ ಜನತೆಯಲ್ಲಿ ನಾಗರಿಕತೆಯ ಲಕ್ಷಣಗಳು ಕ್ಷಯಿಸತೊಡಗಿವೆ. ಹಕ್ಕುಗಳ ತಪ್ಪು ಕಲ್ಪನೆಯಿಂದಾಗಿ ಜವಾಬ್ದಾರಿಗಳ ಕಲ್ಪನೆ ಕಡಿಮೆಯಾಗಿದೆ. ಹೀಗಾಗಿ, ಸಾಮಾಜಿಕ ಅನಿಷ್ಟಗಳು ಬೆಳೆಯುತ್ತಿರುವದನ್ನು ಕಾಣುತ್ತೇವೆ. 'ರಾಷ್ಟ್ರ ಒಂದು' ಎಂಬ ಕಲ್ಪನೆ ಮಾಯವಾದಲ್ಲಿ ಯಾವ ರಾಷ್ಟ್ರ ಏನನ್ನು ಸಾಧಿಸಬಲ್ಲುದು ? ಹೀಗೆ ವಿಚಾರಿಸಿದಾಗ ರಾಷ್ಟ್ರದ ಜನತೆಗೆ ವಿದ್ಯೆ ಒದಗಿಸುವದಕ್ಕೆ ಆದ್ಯತೆ ಕೊಡಲೇ ಬೇಕಾಗುವದು.

ರಾಷ್ಟ್ರಕ್ಕೆ ಒಂದು ಉದ್ದೇಶವಿದೆ ಎಂದು ತಿಳಿದಾಗ, ಆ ಉದ್ದೇಶದ ಅರಿವನ್ನು ಜನತೆಯಲ್ಲಿ ಮೂಡಿಸುವ ಪ್ರಯತ್ನ ನಡೆಯಬೇಕಾದ ಕಾಲವಿದು. ಇಂದು ಪ್ರತಿ-

ಯೊಬ್ಬನ ಜೀವನಕ್ಕೆ ಉದ್ದೇಶದ ನಿರ್ಧಾರಬೇಕು. ಈ ನಿರ್ಧಾರದ ಬೆಳವಣಿಗೆಗಾಗಿ ಶಿಕ್ಷಣ ಎಲ್ಲರಿಗೂ ಮುಟ್ಟಲೇಬೇಕು. ಶಿಕ್ಷಣ ಕೊಡುವ ನಿರ್ಧಾರ ರಾಷ್ಟ್ರದ್ದಾದಾಗ, ಶಿಕ್ಷಣ ಪಡೆಯುವ ನಿರ್ಧಾರ ಜನತೆಯದ್ದಾದಾಗ ಬೆಳವಣಿಗೆಯ ಹೊಂಬೆಳಕನ್ನು ಕಾಣಬಹುದು. ಅದುವೇ ನಮ್ಮೆಲ್ಲರ ಸೌಭಾಗ್ಯವಾಗುತ್ತದೆ. ಈ ಸೌಭಾಗ್ಯದ ಬಾಗಿಲನ್ನು ತಲುಪುವಲ್ಲಿ ಅದೆಷ್ಟು ಪರಿಶ್ರಮ ಪಡೆದರೂ ಕಷ್ಟವಲ್ಲ. ಅಲ್ಲಿ ಆನಂದವಿದೆ; ಸುಖ–ಶಾಂತಿಯಿದೆ.

ಇಂದು ನಮ್ಮ ರಾಷ್ಟ್ರ ಕಷ್ಟದಲ್ಲಿದೆ. ಈ ಕಷ್ಟದ ಕೂಗನ್ನೂ ಕೇಳಿಯೂ ಸುಮ್ಮನೆ ಕೂಡ್ರುವಂತಿಲ್ಲ. ನಮ್ಮ ರಾಷ್ಟ್ರದ ಸತ್ವ ಪರೀಕ್ಷೆ ನಡೆದಿದೆ. ಈ ಸತ್ವ ಪರೀಕ್ಷೆಗೆ ಒಳಪಟ್ಟ ಜನತೆ ಸಂಕಷ್ಟಗಳ ಅಗ್ನಿಕುಂಡದಲ್ಲಿ ಬಿದ್ದು ದಾಟಿ ಜೀವನದಲ್ಲಿ ಯಶಸ್ಸನ್ನು ಕಾಣಬೇಕಾದರೆ ಆತ್ಮಶಕ್ತಿಯ ಬೆಳವಣಿಗೆ ಅತ್ಯವಶ್ಯ. ಈ ಆತ್ಮಶಕ್ತಿಯ ಬೆಳವಣಿಗೆಗೆ ಶಿಕ್ಷಣವು ತನ್ನದೇ ಆದ ವಿಶಿಷ್ಟ ಕಾಣಿಕೆಯನ್ನು ಕೊಡಬಲ್ಲುದು.

ಇಂದು ನಮ್ಮ ಸಮಾಜದಲ್ಲಿ ಆತ್ಮಗೌರವ ಹಾಗೂ ಸ್ವಂತಿಕೆಯ ವ್ಯಕ್ತಿತ್ವವು ಅಪರೂಪದ ವಸ್ತುವಾಗಿದೆ. ಆತ್ಮಗೌರವವನ್ನು ಬೆಳೆಸಿಕೊಳ್ಳುವಲ್ಲಿ ಶಿಕ್ಷಣ ಅಪಾರ ಸೇವೆ ಸಲ್ಲಿಸುತ್ತದೆ. ಅರಿವಿಗೆ ಜಾಗ್ರತೆ ಒದಗಿಸುತ್ತದೆ. ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಆತ್ಮಗೌರವದ ಅರಿವನ್ನುಂಟು ಮಾಡಬೇಕಾದರೆ, ಅಸಂಖ್ಯ ಪ್ರಮಾಣದಲ್ಲಿ ಅವರ ಬೆಳವಣಿಗೆಗೆ ಪೂರಕವಾದ ಅನುಭವಗಳನ್ನು ಒದಗಿಸುವದು ಅವಶ್ಯ. ಇಂಥ ಅನುಭವ ಗಳನ್ನು ಒದಗಿಸುವಲ್ಲಿ ವಯಸ್ಕರ ಶಿಕ್ಷಣವು ಪ್ರಮುಖ ಪಾತ್ರವಾಡುತ್ತದೆ. ನಿರಕ್ಷರತೆಯು ವ್ಯಕ್ತಿಯ ಬೆಳವಣಿಗೆಗೆ ಮತ್ತು ದೇಶದ ಸಾಮಾಜಿಕ, ಆರ್ಥಿಕ ಅಭಿವೃದ್ಧಿಗೆ ಆತಂಕಕಾರಿಯಾಗಿದೆ ಎಂದು ತಿಳಿಯುತ್ತದೆ. ಶಿಕ್ಷಣವು ಕೇವಲ ಶಾಲೆ–ಕಾಲೇಜುಗಳಿಗೆ ಸೀಮಿತವಾಗಿರದೆ, ಹೆಚ್ಚಾಗಿ ಕಾರ್ಯ ಮತ್ತು ಜೀವನ ಸನ್ನಿವೇಶ ಗಳಲ್ಲಿ ನಡೆಯುತ್ತದೆ. ಕಲಿಕೆ, ಕೆಲಸ ಮತ್ತು ಜೀವನ ಇವುಗಳನ್ನು ಬೇರ್ಪಡಿಸುವದು ಅಸಾಧ್ಯ. ಇವುಗಳಲ್ಲಿ ಒಂದನ್ನೊಂದು ಸಮನ್ವಯ ಗೊಳಿಸಿದಾಗ ಮಾತ್ರ ಅವುಗಳಿಗೆ ಅರ್ಥ ಪ್ರಾಪ್ತವಾಗುವದು. ಪ್ರಗತಿಯ ಕಾರ್ಯ ವಿಧಾನದಲ್ಲಿ ತೊಡಗಿದ ಜನರ ಸಾಧನೆಗಳು ಸಿದ್ಧಿಗಳಷ್ಟೇ ಮಹತ್ವದವು. ನಿರಕ್ಷರಿಗಳು ಮತ್ತು ನತದೃಷ್ಟರು ತಮ್ಮ ಸ್ವಾತಂತ್ರ್ಯವನ್ನು ಸಾಕ್ಷರತೆ, ಸಂಭಾಷಣೆ ಮತ್ತು ಕೃತಿಗಳ ಮೂಲಕ ಮಾತ್ರ ಪ್ರದರ್ಶಿಸಬಲ್ಲರು. ಈ ಎಲ್ಲ ವಿಚಾರಗಳನ್ನು ಒಳಗೊಂಡ ಶಿಕ್ಷಣದ ಕಾರ್ಯಕ್ರಮ ಗಳು ಜನತೆಗೆ ಮುಟ್ಟಿದಾಗ ಮಾತ್ರ ಜನರ ಬದುಕು ಹಸನಾಗಬಲ್ಲದು.

ವಯುಸ್ಕರ ಶಿಕ್ಷಣದ ಕಲ್ಪನೆ :

ಶಿಕ್ಷಣವು ಜೀವನದುದ್ದಕ್ಕೂ ಸಾಗುವ ಅಖಂಡ ಪ್ರವಾಹವೆಂಬ ಸಿದ್ಧಾಂತವನ್ನು ಆಧರಿಸಿದ ವಯಸ್ಕರ ಶಿಕ್ಷಣವು "ಜೀವಿಸುವ ಸಲುವಾಗಿ ಮತ್ತು ಹೊಣೆಯರಿತ ನಾಗರಿಕತೆಯ ಸಲುವಾಗಿ ಕಲಿಯುವದು "ಎಂದು ಪರ್ಯಾಯವಾಗಿ ಕರೆಯಲ್ಪಡುತ್ತದೆ.

ಅದು ಸಮತೆಯುಳ್ಳ ಸಾಮಾಜಿಕ ವ್ಯವಸ್ಥೆಯನ್ನು ನಿರ್ಮಿಸುವಲ್ಲಿ ಪ್ರಬಲ ಹಾಗೂ ಪರಿಣಾಮಕಾರಿಯಾದ ಸಾಧನವಾಗಿದೆ. ಇಂತಹ ಸಮತಾವಾದದ, ಸಾಮಾಜಿಕ ವ್ಯವಸ್ಥೆಯನ್ನು ಸ್ಥಾಪಿಸುವದು ಪ್ರಜಾಪ್ರಭುತ್ವವನ್ನು ಅಂಗೀಕರಿಸಿದ ನಮ್ಮೆಲ್ಲರ ಪ್ರಮುಖ ಕರ್ತವ್ಯವಾಗಿದೆ. ಅದರಂತೆ, ದೇಶದ ಸಂಪತ್ತನ್ನು ಹೆಚ್ಚಿಸುವಲ್ಲಿ, ಉಪಭೋಗಿಸುವಲ್ಲಿ, ದುರ್ಬಲ ಮತ್ತು ನೂಕಲ್ಪಟ್ಟ ಸಮಾಜದ ವರ್ಗಗಳು ಸಹ ಉಳಿದ ವರ್ಗಗಳ ಜನರಂತೆಯೇ ಸರಿಸಮಾನರು ಎಂಬ ಅರಿವು ಎಲ್ಲರಲ್ಲಿ ಸಕ್ರಿಯವಾಗಿ ಮೂಡಿಬರುವದು ಅತ್ಯಂತ ಅವಶ್ಯವಿದೆ. ಈ ಬಗೆಯ ತಿಳಿವಳಿಕೆಯನ್ನು, ವಿಶೇಷವಾಗಿ ಕಲಿತವರು ಒಡಮೂಡಿಸಿಕೊಂಡು, ನಿರಕ್ಷರಿಗಳ, ನತದೃಷ್ಟರ, ದೀನದಲಿತರ ಮತ್ತು ನೂಕಲ್ಪಟ್ಟವರ ಏಳ್ಗೆಗೆ ಶ್ರಮಿಸಿದರೆ, ಅವರಲ್ಲಿ ಆತ್ಮವಿಶ್ವಾಸವನ್ನು ಹುಟ್ಟಿಸಿದರೆ, ಮತ್ತು ಅವರನ್ನು ತಮ್ಮ ಸರಿಸಮಾನತೆಗೆ ತರುವ ಕಾರ್ಯದಲ್ಲಿ ಪ್ರಯತ್ನಿಸಿದರೆ, ದೇಶವು ಸುಖ–ಸಮೃದ್ಧಿ, ಶಾಂತಿ–ದಾಂತಿಗಳ ಸುಂದರ ನಾಡಾಗುವದರಲ್ಲಿ ಸಂದೇಹವಿಲ್ಲ.

ವಯಸ್ಕರ ಶಿಕ್ಷಣವು ದೀನ–ದರಿದ್ರರಲ್ಲಿ ಆತ್ಮವಿಶ್ವಾಸವನ್ನುಂಟು ಮಾಡುವ ಹಾಗೂ ಸ್ವಪ್ರಯತ್ನದಿಂದ ಅವರು ತಮ್ಮ ಸ್ಥಿತಿ–ಗತಿಗಳನ್ನು ಸುಧಾರಿಸಿಕೊಳ್ಳುವ ಸಾಧನವಾಗಿದೆ. ಅದು ದುರ್ಬಲ ವರ್ಗದ ಜನತೆಗೆ ತಮ್ಮ ಹಕ್ಕು–ಬಾಧ್ಯತೆಗಳನ್ನು ಅರ್ಥೈಸಿಕೊಡುವ ಮತ್ತು ಕರ್ತವ್ಯದ ಅರಿವನ್ನು ಹುಟ್ಟಿಸುವ ಮಹತ್ವದ ಸಾಧನವೂ ಅಹುದು. ಅದು ಸಮಾಜದ ಯಾವುದೇ ಒಂದು ವರ್ಗಕ್ಕೆ ಸೀಮಿತವಾಗಿರದೆ ಎಲ್ಲ ವರ್ಗಗಳಲ್ಲಿರುವ ನಿರಕ್ಷರಿಗಳಿಗೆ ಸಂಬಂಧಿಸಿದುದಾಗಿದೆ. ಅದು ನಿರಕ್ಷರಿ ಪ್ರೌಢರ ಮಾನಸಿಕ ಕ್ಷಿತಿಜವನ್ನು ವಿಸ್ತೃತಗೊಳಿಸುತ್ತದೆ. ಅವರ ಮನೋವೃತ್ತಿಯನ್ನು ವಿಕಸನಗೊಳಿಸುತ್ತದೆ. ಕೌಶಲ್ಯಗಳನ್ನು ಅಭಿವೃದ್ಧಿಗೊಳಿಸುತ್ತದೆ. ಅಭಿಪ್ರಾಯಗಳನ್ನು ತೀಕ್ಷ್ಣಗೊಳಿಸುತ್ತದೆ. ಅಭಿಪ್ರೇರಣೆಯನ್ನು ಅಭಿವೃದ್ಧಿಸುತ್ತದೆ. ಜೀವನದ ಮೌಲ್ಯಗಳನ್ನು ಸುಧಾರಿಸುತ್ತದೆ. ಹೀಗೆ ಸುಂದರವಾಗಿ, ಬಂಧುರವಾಗಿ, ಮನೋಹರವಾಗಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡ ಈ ವ್ಯಕ್ತಿಗಳು ದೇಶದ ಸಾಕ್ಷರರ ಮಾಲಿಕೆಯಲ್ಲಿ ಸೇರ್ಪಡೆಯಾಗುವರಲ್ಲದೆ, ತಮ್ಮ ವಿಸ್ತೃತ ಕ್ಷಿತಿಜವನ್ನು, ವಿಕಸಿತ ಮನೋವೃತ್ತಿಯನ್ನು, ಸೂಕ್ಷ್ಮಾತಿಶಯದ ಅಭಿಪ್ರಾಯಗಳನ್ನು, ವರ್ಧಿತ ಅಭಿಪ್ರೇರಣೆಯನ್ನು, ಉತ್ತುಂಗ ಜೀವನದ ಮೌಲ್ಯಗಳನ್ನು, ದೇಶದ ಸಮೃದ್ಧಿಗೆ, ಶಾಂತಿ–ದಾಂತಿಗೆ, ಕ್ಷೇಮಾಭಿವೃದ್ಧಿಗೆ ವಿನಿಯೋಗಿಸಲು ಶಕ್ತರಾಗುವರು. ಅಂತಹ ಮನೋಭೂಮಿಕೆಯನ್ನು ಪಡೆಯುವರು.

ಸಾಕ್ಷರತೆಯು ವ್ಯಕ್ತಿಯ ಮಾರ್ಪಾಡಿಗೆ ಮತ್ತು ಪ್ರಗತಿಗೆ ಪ್ರಬಲ ನಿಯೋಗವಾಗಿದೆ. ಜನತೆಯಲ್ಲಿ ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ರಾಜಕೀಯ ಪ್ರಜ್ಞೆಯನ್ನು ಅಭಿವೃದ್ಧಿಗೊಳಿಸುವ ಪ್ರಮುಖ ಸಾಧನವಾಗಿದೆ. ಇಂತಹ ಪರಿಣಾಮಕಾರೀ ಸಾಧನದಿಂದ ನಮ್ಮ ಅಸಂಖ್ಯಾತ ನಿರಕ್ಷರಿ ದೇಶಬಾಂಧವರನ್ನು ಸಾಕ್ಷರಿಗಳನ್ನಾಗಿ,

ತನ್ಮೂಲಕ ನಾಡಿನ ಪ್ರಜ್ಞಾವಂತ ನಾಗರಿಕರನ್ನಾಗಿ ಮಾಡುವದು ನಮ್ಮೆಲ್ಲರ ಕರ್ತವ್ಯವಾಗಿದೆ. ದೇಶದ ಜ್ವಲಂತ ಸಮಸ್ಯೆಯೆನಿಸಿದ ವಯಸ್ಕರ ಶಿಕ್ಷಣದ ಬೃಹದಾಕಾರದ ಅರಿವು ನಮಗಿರಬೇಕಾದುದು ನಮ್ಮೆಲ್ಲರ ಹಿತದ ದೃಷ್ಟಿಯಿಂದ ಅವಶ್ಯವಾಗಿದೆ. ಸಮಾಜದ ಶ್ರೀ ಸಾಮಾನ್ಯರು ದೇಶದ ಆಗು-ಹೋಗುಗಳ ಬಗೆಗೆ ಸಕ್ರಿಯ ಪಾತ್ರವನ್ನು ನಿರ್ವಹಿಸಬೇಕಾದುದು ಅನಿವಾರ್ಯ. ಈ ವಿಚಾರದ ಪ್ರಖರತೆಯ ಮೂಲ ಕಾರಣದಿಂದಾಗಿ ಇಡೀ ರಾಷ್ಟ್ರವೇ ಇತ್ತೀಚೆಗೆ ಎದ್ದಂತೆ ತೋರುತ್ತದೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅಜ್ಞ ಜನತೆಯನ್ನು ಜಾಗ್ರತಾವಸ್ಥೆಗೆ ತರುವ ಪ್ರಯತ್ನಗಳನ್ನು ಮಾಡುತ್ತಿವೆ. ವಯಸ್ಕರ ಶಿಕ್ಷಣದ ಬಗೆಗೆ ಸದ್ಯದ ವಿಚಾರಧಾರೆಯು ಕೆಳಗೆ ಕಾಣಿಸಿದ ಸಂಗತಿಗಳನ್ನು ಆಧರಿಸಿದೆ--

(೧) ನಿರಕ್ಷರತೆಯು ವ್ಯಕ್ತಿಯ ಬೆಳವಣಿಗೆಗೆ ಮತ್ತು ದೇಶದ ಸಾಮಾಜಿಕ, ಆರ್ಥಿಕ ಅಭಿವೃದ್ಧಿಗೆ ಆತಂಕಕಾರಿಯಾಗಿದೆ.

(೨) ಶಿಕ್ಷಣವು ಕೇವಲ ಶಾಲೆ-ಕಾಲೇಜುಗಳಿಗೆ ಸೀಮಿತವಾಗಿರದೆ, ಹೆಚ್ಚಾಗಿ ಕೆಲಸದ ಮತ್ತು ಜೀವನದ ಸನ್ನಿವೇಶಗಳಲ್ಲಿ ನಡೆಯುತ್ತಿದೆ.

(೩) ಕಲಿಕೆ, ಕೆಲಸ ಮತ್ತು ಜೀವನ ಇವುಗಳನ್ನು ಬೇರ್ಪಡಿಸುವದು ಅಸಾಧ್ಯ. ಇವುಗಳಲ್ಲಿ ಒಂದನ್ನೊಂದು ಸಮನ್ವಯ ಗೊಳಿಸಿದಾಗ ಮಾತ್ರ ಇವುಗಳಿಗೆ ಅರ್ಥ ಪ್ರಾಪ್ತವಾಗುತ್ತದೆ.

(೪) ಪ್ರಗತಿಯ ಕಾರ್ಯವಿಧಾನದಲ್ಲಿ ತೊಡಗಿಸಿದ ಜನರ ಸಾಧನೆಗಳು ಸಿದ್ಧಿಗಳಷ್ಟೇ ಮಹತ್ವದವು.

(೫) ನಿರಕ್ಷರಿಗಳು ಮತ್ತು ನತದೃಷ್ಟರು ತಮ್ಮ ಸ್ವಾತಂತ್ರ್ಯವನ್ನು ಸಾಕ್ಷರತೆ, ಸಂಭಾಷಣೆ ಮತ್ತು ಕೃತಿಗಳ ಮೂಲಕ ಪ್ರದರ್ಶಿಸಬಲ್ಲರು.

ಸಾಕ್ಷರತೆಯ ಜೊತೆಗೆ, ವಯಸ್ಕರ ಶಿಕ್ಷಣವು ಕಲಿಯುವವರ ಪರಿಸರ ಮತ್ತು ಅವಶ್ಯಕತೆಗಳಿಗೂ ಸಮಂಜಸವಿರುವದು ಅವಶ್ಯ. ಈ ಹಂತದಲ್ಲಿ ವಯಸ್ಕರ ಶಿಕ್ಷಣದ ಗೊತ್ತು-ಗುರಿಗಳ ಕಲ್ಪನೆಯು ಸ್ಫುಟವಾಗಿರಬೇಕಾದುದು ಅಗತ್ಯ. ಗುರಿಗಳನ್ನು ಕೆಳಗೆ ನಮೂದಿಸಿದೆ :—

ಗುರಿಗಳು :

(೧) ಅನಕ್ಷರನನ್ನು ಸಾಕ್ಷರನನ್ನಾಗಿ ಮಾಡುವದು.

(೨) ಆರೋಗ್ಯ ಹಾಗೂ ಪರಿಸರದ ಸ್ವಚ್ಛತೆ ಕಾಯ್ದುಕೊಳ್ಳುವದರ ಮಹತ್ವವನ್ನು ತಿಳಿಸುವದು.

(೩) ವಯಸ್ಕರ ಆರ್ಥಿಕ ಸ್ಥಿತಿ–ಗತಿಗಳನ್ನು ಸುಧಾರಿಸುವದು ಕಾಯಕದ ಜೀವನ ಸಾಗಿಸಲು ಸಹಾಯ ಮಾಡುವದು.

(೪) ಪೌರತ್ವದಲ್ಲಿ ತರಬೇತಿ ನೀಡುವದು.

(೫) ಬಿಡುವಿನ ವೇಳೆಯ ಸದುಪಯೋಗ ಮಾಡಿಕೊಳ್ಳುವದು.

(೬) ಸಾಮಾಜಿಕ ಬಾಂಧವ್ಯವನ್ನು ಸಾಧಿಸುವದು; ಸಹಬಾಳ್ವೆಯ ಜೀವನಕ್ಕೆ ಅಣಿಗೊಳಿಸುವದು.

(೭) ವಯಸ್ಕರ ಕಾರ್ಯ ಸಾಮರ್ಥ್ಯವನ್ನು ಹೆಚ್ಚಿಸುವದರ ಜೊತೆಗೆ ರಾಷ್ಟ್ರದ ಸಂಪತ್ತನ್ನು ಹೆಚ್ಚಿಸಲು ನಿಸರ್ಗ ಸಂಪತ್ತನ್ನು ಸೂಕ್ತವಾಗಿ ಬಳಸುವದು.

(೮) ಸಕಲರ ಕಲ್ಯಾಣಕ್ಕಾಗಿ ಅವಶ್ಯಕವಾದ ಸಹಕಾರ ಭಾವನೆಯನ್ನು ಅಭಿವೃದ್ಧಿಪಡಿಸುವದು. ಸಹನೆಯ ಜೀವನ ನಡೆಸುವಲ್ಲಿ ಸಹಾಯ ಸಲ್ಲಿಸುವದು.

(೯) ಸಾಮಾಜಿಕ ಆದರ್ಶತತ್ವದಲ್ಲಿ ವ್ಯಕ್ತಿ ನಿಷ್ಠೆಯನ್ನು ಬಲಪಡಿಸುವದು.

(೧೦) ಗ್ರಾಮ, ಪಟ್ಟಣಗಳ ಮಟ್ಟದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಮುಖಂಡತ್ವದ ಗುಣಮಟ್ಟ ಎತ್ತರಿಸುವದು. ನಾಯಕತ್ವದ ಪರಿಕಲ್ಪನೆಯನ್ನು ಮೂಡಿಸಿ, ಎಲ್ಲರೂ ತಮ್ಮ ತಮ್ಮ ರೀತಿಯಲ್ಲಿ, ವಿವಿಧ ಕ್ಷೇತ್ರಗಳಲ್ಲಿ ಔನ್ನತ್ಯ ಸಾಧನೆಯ ಜೊತೆಗೆ, ಕರ್ಣಧಾರತ್ವವನ್ನು ವಹಿಸುವ ಸದವಕಾಶಗಳನ್ನು ಒದಗಿಸುವದು.

ಈ ಗುರಿಗಳನ್ನು ತಿಳಿದುಕೊಂಡರೆ, ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಿಕ್ಕೆ ಸಹಾಯವಾಗುತ್ತದೆ. ಗುರಿಯ ಕಲ್ಪನೆಯಲ್ಲಿ ನಾವು ಯಾವ ರೀತಿಯಲ್ಲಿ ಕ್ರಿಯಾ. ಶೀಲರಾಗಬೇಕೆಂದು ತಿಳಿಯಲಿಕ್ಕೆ ಅನಕೂಲವಾಗುತ್ತದೆ. ಗುರಿ ಸಾಧನೆ ಮುಖ್ಯ. ಇಂಥ ಸಾಧನೆಯಲ್ಲಿ ಸಾಧನಗಳ ಪಾತ್ರವೂ ಹಿರಿದು. ಕ್ರಮಿಸುವ ಮಾರ್ಗದ ಅರಿವಿನ ಜೊತೆಯಲ್ಲಿ, ಹೇಗೆ ಸಾಗಬೇಕೆಂಬ ದೃಢ ಸಂಕಲ್ಪವೂ ಮೂಡಿ ಬಂದಾಗ ಮಾರ್ಗವು ತೀವ್ರಗತಿಯಲ್ಲಿ ಸಾಗುತ್ತದೆ. ಗುರಿ ಸಾಧ್ಯವಾಗುತ್ತದೆ. ವಯಸ್ಕರ ಶಿಕ್ಷಣದಲ್ಲಿ ಪ್ರಜ್ಞಾವಂತ ಜನರ ಪಾತ್ರ ಹಿರಿದಾಗಿರುವದನ್ನು ಕಂಡಿದ್ದೇವೆ. ಅದರಲ್ಲಿಯೂ ಶಿಕ್ಷಕರ ಪಾತ್ರವು ಅವರ್ಣನೀಯ. ನಾಡಿನ ಮುಂದೆಲ್ಲ ಹಳ್ಳಿಗಳು ಪಸರಿಸುವ ದೃಶ್ಯ ಭಾರತದ್ದಾಗಿದೆ. ಪ್ರತಿಶತ ೮೦ ರಂತೆ ಭಾರತೀಯರು ಗ್ರಾಮವಾಸಿಗಳು. ಎಲ್ಲ ಗ್ರಾಮಗಳಲ್ಲಿ ಶಾಲೆಗಳಿಲ್ಲದಿರಬಹುದು. ಆದರೂ ಸ್ವತಂತ್ರ ಭಾರತದಲ್ಲಿ ಮೂಲೆ–ಮೂಲೆಗಳಲ್ಲಿ ಗ್ರಾಮಗಳಿಗೆ ಶಾಲೆಗಳನ್ನು ಒದಗಿಸುವ ದಿಸೆಯಲ್ಲಿಯ ಸಾಧನೆ ಶ್ಲಾಘ-

ನೀಯ. ಪ್ರಾಥಮಿಕ ಹಂತದ ಕಲಿಕೆಯ ಅವಕಾಶಗಳು ಹೆಚ್ಚುತ್ತಿರುವ ಚಿತ್ರವನ್ನು ನೋಡುತ್ತೇವೆ. ಪ್ರಾಥಮಿಕ ಶಿಕ್ಷಕರ ಸಂಖ್ಯೆ ಅಪರಮಿತವಾಗಿ ಬೆಳೆದಿರುವದು ಸತ್ಯ. ಈ ಹಂತದಲ್ಲಿ ಭಾರತದ ತುಂಬ ಪಸರಿಸಿದ ಪ್ರಾಥಮಿಕ ಶಾಲಾ ಶಿಕ್ಷಕರು ವಯಸ್ಕರ ಶಿಕ್ಷಣದಲ್ಲಿ ಯಾವ ಪಾತ್ರವನ್ನಾಡಬಹುದೆಂಬುದನ್ನು ವಿಚಾರಿಸಿದಾಗ ಕೆಳಗಿನ ಅಂಶ-ಗಳು ಎದ್ದು ಕಾಣುತ್ತವೆ. ಸೇವಾ ಭಾವನೆ, ಕಾಯಕದ ಕಲ್ಪನೆ, ದೇಶದ ಉದ್ಧಾರ-ದಲ್ಲಿ ತಮ್ಮ ಪಾತ್ರ ಹಿರಿದೆಂಬ ಮನೋಭೂಮಿಕೆ ಇವು ಶಿಕ್ಷಕನ ಶಕ್ತಿಯಾದಾಗ ಅವನು ಚೇತೋಹಾರಿಯಾಗುವದರಲ್ಲಿ ಸಂದೇಹವಿಲ್ಲ.

ಅಡೆತಡೆಗಳು : ನಿರಕ್ಷರತಾ ನಿರ್ಮೂಲನೆಯ ಕಾರ್ಯದಲ್ಲಿ ಅನೇಕ ಅಡೆತಡೆ ಗಳುಂಟು. ನಿರಕ್ಷರಿಗಳಲ್ಲಿ ಕಲಿಯುವ ಶಕ್ತಿಯಿದೆ, ಮನಸ್ಸಿಲ್ಲ; ಕಲಿಕೆಯ ಬಗೆಗೆ ಸದ್ಭಾವನೆ ಮೂಡಿಲ್ಲ. ಇದರ ಅಭಾವದಿಂದಾಗಿ ಅಭಿಪ್ರೇರಣೆಯ ಕೊರತೆಯಾಗಿದೆ. ಆದುದರಿಂದ ಯೋಗ್ಯ ಮಾರ್ಗದರ್ಶನ ನೀಡುವದೇ ಒಂದು ಸಮಸ್ಯೆ. ನಿರಕ್ಷರ ಕುಕ್ಷಿಗಳನ್ನು ಅವರ ಬೆಳವಣಿಗೆಗಾಗಿ, ಏಳ್ಗೆಗಾಗಿ ಅಕ್ಷರಸ್ಥರನ್ನಾಗಿ ಮಾಡಬೇಕಾದರೆ ಎಲ್ಲರನ್ನೂ ಒಂದೆಡೆ ಏಕಕಾಲಕ್ಕೆ ಕೂಡಿಸಿ ಕಲಿಕೆಯ ಅವಕಾಶಗಳನ್ನು ಕೊಡುವದು ಹಾಗೂ ಮಾರ್ಗದರ್ಶನ ಮಾಡುವದು ಹೆಚ್ಚಿನ ಸಮಸ್ಯೆಯಾಗಿದೆ. ಗುಂಪು–ಗುಂಪು-ಗಳಲ್ಲಿ ವಿಂಗಡಿಸಿ ಕಲಿಯುವ ಅವಕಾಶ ಕೊಡುವಲ್ಲಿ ವಿಫಲತೆಯೇ ಹೆಚ್ಚಾಗಿ ಕಾಣ-ಬಹುದು. ಬೆಳೆಯುವ ರಾಷ್ಟ್ರವೆನಿಸಿದ ಭಾರತದಲ್ಲಿ ಹಣಕಾಸಿನ ತೊಂದರೆಯಂತೂ ಹೇಳತೀರದು. ನಿರಕ್ಷರತೆಯ ವಿರುದ್ಧ ಹೋರಾಟವನ್ನು ಸರಕಾರವೇ ಮಾಡಲಿ ಎಂದು ಕೈಕಟ್ಟಿಕೊಂಡು ಕುಳಿತರೆ ಸಮಾಜದ ಋಣವನ್ನು ನಾವು ತೀರಿಸಿದಂತಾಗುವದಿಲ್ಲ.

ಅನಕ್ಷರಸ್ಥರು ಒಂದು ವಯೋಮಿತಿಗೆ ಸೇರಿದವರಾಗಿಲ್ಲ. ವಿವಿಧ ವಯಸ್ಸಿಗೆ ವಿವಿಧ ಅಭಿರುಚಿ, ಗ್ರಹಣಶಕ್ತಿ, ಆಸಕ್ತಿಗಳು ಇರುವದು ಸಹಜ. ಇಂಥ ಪರಿಸ್ಥಿತಿ-ಯಲ್ಲಿ ಶಿಕ್ಷಣ ನೀಡುವವರಿಗೆ ಅನೇಕ ತೊಂದರೆಗಳು ಉದ್ಭವಿಸುವದುಂಟು. ಇದರ ಜೊತೆಗೆ ಜನರ ವರ್ಗ, ಧರ್ಮ, ಪಂಥ, ಕೌಟುಂಬಿಕ ಹಿನ್ನೆಲೆ, ಆರ್ಥಿಕ ಪರಿಸರ, ಇವೆಲ್ಲಕ್ಕೂ ಮಿಗಿಲಾಗಿ ಅವರ ಸಂಸ್ಕೃತಿ ಅಡ್ಡಿಯನ್ನುಂಟು ಮಾಡುವದು ಸಹಜ.

ಮಾರ್ಗದರ್ಶನ ನೀಡುವವರ ಸಾಮರ್ಥ್ಯ, ಯೋಗ್ಯತೆ, ಅನುಭವಗಳ ಕೊರತೆ ಯಿಂದಾಗಿ ರಾಷ್ಟ್ರದಲ್ಲಿ ಶಿಕ್ಷಣದ ಪ್ರಸಾರವಾಗಲಿ, ಅನಕ್ಷರತೆಯ ವಿರುದ್ಧದ ಹೋರಾಟ ವಾಗಲಿ ಇನ್ನೂ ಯಶಸ್ಸನ್ನು ಕಾಣಬೇಕಾಗಿದೆ. ಕಲಿಸುವವರು ಮತ್ತು ಮಾರ್ಗ-ದರ್ಶಕರು, ಅನುಭವಿಕರೂ, ಎಲ್ಲ ರೀತಿಯ ಸಾಮರ್ಥ್ಯ ಹೊಂದಿದವರೂ, ವಯಸ್ಕರ ಮನೋವಿಜ್ಞಾನದ ಅಭ್ಯಾಸ ಮಾಡಿದವರೂ ಇರಬೇಕಾಗುತ್ತದೆ. ಅಂಥ ಜನರ ಕೊರತೆಯಿಂದಾಗಿ ಅಕ್ಷರ ಪ್ರಸಾರದ ಕಾರ್ಯ ಸಾಕಷ್ಟು ಯಶಸ್ವಿಯಾಗಿಲ್ಲವೆಂದು ತಿಳಿದು, ವಿದ್ಯಾರ್ಥಿಗಳು, ಅನುಭವಿಕ ತರುಣರು ತಮ್ಮ ಪರಿಸರದಲ್ಲಿ ಜನರ ವಿಶ್ವಾಸವನ್ನು ಬೆಳೆಸಿಕೊಂಡು ಪ್ರಯತ್ನಶೀಲರಾದರೆ ಒಳಿತೆಂದು ಬೇರೆ ಹೇಳಬೇಕಾಗಿಲ್ಲ.

ಬಡತನದ ಜೇಗೆಯಲ್ಲಿ ತೊಳಲಾಡುವ ಜನರು ಹಗಲಿರುಳು ದುಡಿದು ಬದುಕಿಗಾಗಿ ಹೋರಾಡುವಾಗ ವಿಶ್ರಾಂತಿಯೆಲ್ಲಿ ? ವಿಶ್ರಾಂತಿಯಿಲ್ಲದಾಗ ಕಲಿಯುವ ಬಯಕೆ ಹೇಗೆ ಮೂಡೀತು ? ಇದು ಒಂದು ಸಮಸ್ಯೆಯೆಂದು ಹೇಳಬಹುದು. ಸಮಸ್ಯೆಗಳು ಅನೇಕ. ಕೆಲವನ್ನು ಮಾತ್ರ ಹೇಳಿದ್ದಾಯಿತು. ಆದರೆ ಸಮಸ್ಯೆಗಳನ್ನು ಎದುರಿಸುವ ಧೀಮಂತ ಶಕ್ತಿಯನ್ನು ತಂದುಕೊಳ್ಳದ ಹೊರತು ಯಾವ ಪುರುಷಾರ್ಥವೂ ಸಾಧಿಸದು. ಸಮಸ್ಯೆಗಳನ್ನು ಎದುರಿಸುವಲ್ಲಿಯೇ ಜೀವನ ಸೌಂದರ್ಯ ಅಡಗಿದೆ.

ಪ್ರಾಥಮಿಕ ಶಿಕ್ಷಕರ ಪಾತ್ರ :

(೧) ವಯಸ್ಕರ ಶಿಕ್ಷಣದಲ್ಲಿ ಸಾಕ್ಷರತೆಯು ಒಂದು ಅಂಶ ಮಾತ್ರ. ಹಳ್ಳಿಯ ಜನ-ಜೀವನವನ್ನು ಪರಿಶುದ್ಧಪಾಗಿಸುವದು— ಅರ್ಥಾತ್ ಸ್ವಚ್ಛತೆ, ಆರೋಗ್ಯ, ಪರಸ್ಪರ ಸ್ನೇಹ, ಸಹಕಾರ, ಸೌಹಾರ್ದತೆ, ಕರ್ತವ್ಯ ದಕ್ಷತೆ, ದುರಾಭ್ಯಾಸಗಳಿಂದ ದೂರವಿರಿಸುವದು, ಇತ್ಯಾದಿ ಸಂಗತಿಗಳನ್ನು ರೂಢಿಸಿಕೊಳ್ಳುವಂತೆ ಮಾಡುವದು ವಯಸ್ಕರ ಶಿಕ್ಷಣದ ವ್ಯಾಪ್ತಿಯಾಗಿರುವಾಗ, ಪ್ರಾಥಮಿಕ ಶಿಕ್ಷಕರು ತಮ್ಮ ದಿನನಿತ್ಯದ ಜೀವನವನ್ನೇ ಗ್ರಾಮದ ಜನರು ಅನುಸರಿಸುವಂತೆ ಮಾಡಿದರೆ ಅವರಿಗೆ ಶಿಕ್ಷಣವನ್ನು ಇತ್ತಂತೆಯೇ ಸರಿ. ಸಮಾಜದಲ್ಲಿ ಶಿಕ್ಷಕರಿಗೆ ಗೌರವ ದೊರೆಯುವದು ಸಹಜ. ಅನಕ್ಷರಸ್ಥ ವಯಸ್ಕರು ಶಿಕ್ಷಕರನ್ನು ಮರ್ಯಾದೆಯಿಂದ ಕಾಣುವ ಚಿತ್ರ ನಮ್ಮ ಭಾರತದಲ್ಲಿ ಎಂದಿನಿಂದಲೂ ನಡೆದು ಬಂದಿದೆ. ಇದು ನಮ್ಮ ಸಂಸ್ಕೃತಿಯಲ್ಲಿ ಹಾಸು-ಹೊಕ್ಕಾಗಿದೆ. ಅಲ್ಲಿ-ಇಲ್ಲಿ ಇದಕ್ಕೆ ವ್ಯತಿರಿಕ್ತವಾದ ಚಿತ್ರವೂ ಇರಬಹುದು. ಇಂಥ ವಿರೋಧಾಭಾಸದ ಚಿತ್ರವನ್ನೇ ಎತ್ತಿಕೊಂಡು ನಮ್ಮನ್ನಾರು ಕೇಳುವರು ಎಂಬ ಮಾನಸಿಕ ರೋಗಕ್ಕೆ ತುತ್ತಾಗುವದು ಬೇಡ. ನಮ್ಮ ಜೀವನ ಪರಿಶುದ್ಧವಾದಲ್ಲಿ ಅದರ ಪ್ರಭಾವ ಪರಿಸರದಲ್ಲಿ ಆಗದಿರದು. ಶಿಕ್ಷಕರ ಜೀವನ ಶೈಲಿಯನ್ನು ತಿಳಿದೋ ತಿಳಿಯದೆಯೋ ಅನುಕರಣ ಮಾಡುವದು ಖಂಡಿತ. ಇದನ್ನರಿತ ಶಿಕ್ಷಕರು ಆದರ್ಶದ ಜೀವನ ಸಾಗಿಸಿ, ಸಮಾಜದಲ್ಲಿ ಶಿಕ್ಷಣ ಪ್ರಸಾರ ಮಾಡುವದುಂಟು. ಜೀವನವೇ ಶಿಕ್ಷಣ. ಈ ವಿಚಾರವನ್ನು ಗ್ರಹಿಸಿ ಜೀವನ ಸಾಗಿಸಬೇಕಾದುದು ಪ್ರಾಥಮಿಕ ಶಾಲಾ ಶಿಕ್ಷಕರ ಕರ್ತವ್ಯ. ಈ ಕರ್ತವ್ಯಕ್ಕೆ ಚ್ಯುತಿಯಾಗದಿರಲಿ.

(೨) ಗ್ರಾಮೀಣ ಅಭಿವೃದ್ಧಿ ಇಲಾಖೆ, ವಾರ್ತಾ ಇಲಾಖೆ, ಒಕ್ಕಲುತನ ಇಲಾಖೆ, ಆರೋಗ್ಯ ಇಲಾಖೆ— ಮುಂತಾದ ಇಲಾಖೆಗಳಿಗೆ ಸಂಪರ್ಕವಿಟ್ಟುಕೊಂಡು ಗ್ರಾಮೀಣ ಜನರಿಗೆ ಸಹಾಯ ಸಲ್ಲಿಸಬಹುದು. ಸ್ವಚ್ಛತೆ, ಆರೋಗ್ಯ, ರೋಗರುಜಿನಗಳ ತಿಳಿವಳಿಕೆ, ಒಕ್ಕಲುತನದ, ಹೈನಾಭಿವೃದ್ಧಿಯ ಸುಧಾರಿತ ಕಲ್ಪನೆಯ ಸಲುವಾಗಿ ಚಲನಚಿತ್ರ, ಚಿತ್ರಪಟಗಳ ಪ್ರದರ್ಶನ, ಭಾಷಣಗಳು, ಚರ್ಚೆಗಳು— ಇವೇ ಮೊದಲಾದವನ್ನು ಏರ್ಪಡಿಸುವಲ್ಲಿ ಪ್ರಾಥಮಿಕ ಶಿಕ್ಷಕರ ಪಾತ್ರ ಹಿರಿದು. ಗ್ರಾಮೀಣ ಜೀವನದ ಸುಧಾರಣೆಗೆ ಅವಶ್ಯವಿರುವ ಸಂಗತಿಗಳ ಅರಿವು ಶಿಕ್ಷಕರದಾದಾಗ, ಅರಿವಿನ

ಪ್ರಭಾವದಿಂದಾಗಿ ಗ್ರಾಮಸ್ಥರಿಗೆ ಹೇಗೆ ಸಹಾಯ ಸಲ್ಲಿಸಬಹುದೆಂಬುವ ಮಾರ್ಗದಲ್ಲಿ ಮುನ್ನಡೆಯುತ್ತಾರೆ. ಸರಕಾರಿ, ಅರೆಸರಕಾರಿ ಹಾಗೂ ಇನ್ನುಳಿದ ಸೇವಾ ಸಂಸ್ಥೆಗಳ ಸಹಾಯ ಪಡೆಯುವಲ್ಲಿ ಸಫಲರಾಗುತ್ತಾರೆ; ಜನಜೀವನದ ಸುಧಾರಣೆಗೆ ಬುನಾದಿಯಾಗುತ್ತಾರೆ.

(೩) ಗ್ರಾಮಗಳಲ್ಲಿ ಜಾತ್ರೆ, ಉತ್ಸವ ನಡೆಯುವದು ನಮ್ಮ ನಾಡಿನ ಸಂಸ್ಕೃತಿಯಲ್ಲಿ ಬೆಳೆದು ಬಂದಿದೆ. ಈ ಜಾತ್ರೆ— ಉತ್ಸವಗಳನ್ನು ವಯಸ್ಕರ ಶಿಕ್ಷಣಕ್ಕೆ ಉಪಯೋಗಿಸಿಕೊಂಡು ಶಿಕ್ಷಕ ಅಪಾರ ಸೇವೆಯನ್ನು ಸಲ್ಲಿಸಬಲ್ಲ. ಕೈಗಾರಿಕಾ ಪ್ರದರ್ಶನ, ಪಶುಪಾಲನಾ ದಿನಾಚರಣೆ, ಕೃಷಿ ಸಮ್ಮೇಳನ, ಗೃಹವಿಜ್ಞಾನ ಪ್ರದರ್ಶನ, ವೊದಲಾದವುಗಳನ್ನು ಏರ್ಪಡಿಸುವದರ ಮುಖಾಂತರ ನಾಯಕತ್ವ ವಹಿಸಿ ಅಜ್ಞ ಜನತೆಯನ್ನು ಶಿಕ್ಷಕನು ಎಚ್ಚರಿಸಬಲ್ಲ. ವಿದ್ಯಾರ್ಥಿಗಳ ಸ್ವಯಂ ಸೇವಾ ಪದಕಗಳನ್ನು ಏರ್ಪಡಿಸಿ ನೀರಿನ ಸರಬರಾಜು, ಸ್ವಚ್ಛತೆ ಕಾಯ್ದುಕೊಳ್ಳುವದು ಇತ್ಯಾದಿ ಕೆಲಸ ಮಾಡಬಹುದು.

(೪) ಮಾದರಿ ಹಳ್ಳಿಯ ಕಲ್ಪನೆಗೆ ಸಾಕಾರ ರೂಪು ಕೊಡಬಹುದು. ಇದು ಶಿಕ್ಷಕರಿಗೆ ಸಾಧ್ಯ. ಈಗಾಗಲೇ ಹಲವಾರು ಹಳ್ಳಿಗಳು ಇದನ್ನು ಸಾಧಿಸಿವೆ. ಈ ಸಾಧನೆಯ ಹಿಂದೆ ಶಿಕ್ಷಕರು ತಮ್ಮ ಜೀವನವನ್ನು ಸವೆಸಿದ್ದಾರೆ; ಆನಂದ ಪಟ್ಟಿದ್ದಾರೆ; ಜೀವನದ ಸಫಲತೆಯ ಕನಸನ್ನು ನನಸಾಗಿಸಿಕೊಂಡಿದ್ದಾರೆ. ಇಂಥ ಸಫಲತೆಯನ್ನು ಪಡೆಯುವ ದಿಸೆಯಲ್ಲಿ ಕಾರ್ಯೋನ್ಮುಖರಾಗಿ ದುಡಿದಾಗ ಭಾಗ್ಯದ ಬಾಗಿಲು ತೆರೆಯುವದು ಖಂಡಿತ. ಇಂಥ ಭಾಗ್ಯ ಎಲ್ಲ ಪ್ರಾಥಮಿಕ ಶಿಕ್ಷಕರದಾಗಲಿ.

(೫) ನಮ್ಮ ನಾಡಿನ ತುಂಬೆಲ್ಲ ಅನೇಕ ಮಹಾಮಾನವರು ಆಗಿ ಹೋಗಿರುವದುಂಟು. ಅವರನ್ನು ನೆನೆಯುವ ಸಂಸ್ಕೃತಿ ನಮ್ಮದು. ಇಂಥ ಸಂದರ್ಭಗಳಲ್ಲಿ ವಿಧಾಯಕ ಸಾಮಾಜಿಕ ಕಾರ್ಯ ಕೈಕೊಳ್ಳುವ ಮುಖಾಂತರ ಶಿಕ್ಷಕರು ಪ್ರಾತಃ ಸ್ಮರಣೀಯ ಸೇವೆ ಸಲ್ಲಿಸಬಹುದು.

(೬) ಶಾಲೆಗಳು ಜ್ಞಾನ ಮಂದಿರಗಳಾಗಬೇಕು. ಜನರ ನೂಕು–ನುಗ್ಗಲು ಕಾಣಬೇಕು. ಜ್ಞಾನಮಂದಿರದ ಬಾಗಿಲುಗಳು ಸದಾವಕಾಲವೂ ತೆರೆದಿರಬೇಕಾದುದು ಇಂದು ಅವಶ್ಯವಾಗಿದೆ. ಈ ಜ್ಞಾನ ಮಂದಿರಗಳು ಸಮಾಜದ ಸೊತ್ತು; ಸಮಾಜಕ್ಕೆ ಉಪಯುಕ್ತವಾಗಬೇಕಾದುದು ಅನಿವಾರ್ಯ. ಸಾಕ್ಷರತಾ ಪ್ರಸಾರದ ಕಾರ್ಯದಲ್ಲಿ ಸಾಲೆಗಳು ಸಹಾಯಸಲ್ಲಿಸಬೇಕಾದುದು ಅವುಗಳ ಆದ್ಯ ಕರ್ತವ್ಯ. ಇಲ್ಲಿ ಶಿಕ್ಷಕರೇ ಧುರೀಣರು.

(೭) ನಿರಕ್ಷರಕುಕ್ಷಿಗಳು ಅಕ್ಷರಜ್ಞಾನ ಪಡೆದಾಗ, ಅವರಿಗೆ ಅನಾಯಾಸ ವಾಗಿ ಓದಲು ಬರುವ ಸಾಹಿತ್ಯವನ್ನು ಒದಗಿಸುವದು ಶಿಕ್ಷಕರ ಕರ್ತವ್ಯ. ಇಂಥ ಸುಲಭ ಸಾಹಿತ್ಯವನ್ನು ಶಿಕ್ಷಕರು ರಚಿಸಬೇಕು. ದಿನನಿತ್ಯ ಜೀವನದ, ಪರಿಸರದ

ಬೆಳವಣಿಗೆಯ ಚಿತ್ರವನ್ನು ಚಿತ್ರಿಸುವ ಸಾಹಿತ್ಯವನ್ನು ಶಿಕ್ಷಕರು ರಚಿಸಬಲ್ಲರು. ಚಿತ್ರ-ಪಟಗಳನ್ನು ತಯಾರಿಸುವಾಗ, ಗ್ರಾಮೀಣ ಜೀವನದ ಚಿತ್ರಗಳ ಕೆಳಗೆ ಸಣ್ಣ ಸಣ್ಣ ವಾಕ್ಯಗಳಲ್ಲಿ ಅವುಗಳ ವರ್ಣನೆಯಿರಲಿ. ಹಳ್ಳಿಯ ಔದ್ಯೋಗಿಕ ಹಾಗೂ ಸಾಮಾಜಿಕ ಜೀವನವೇ ಇಂಥ ಚಿತ್ರಪಟಗಳ ವಸ್ತುವಾಗಬೇಕು. ಇದು ಕ್ರಿಯಾಶೀಲ ಸಾಕ್ಷರತೆಗೆ ಸಹಾಯವಾಗುತ್ತದೆ.

(೮) ನಮ್ಮಲ್ಲಿ ಇಂದು ನಿರುದ್ಯೋಗ ಸಮಸ್ಯೆ ಭೂತಾಕಾರವಾಗಿ ಬೆಳೆಯ ತೊಡಗಿದೆ. ಗ್ರಾಮದಲ್ಲಿಯ ವಿದ್ಯಾವಂತ ನಿರುದ್ಯೋಗಿ ಯುವಕರು ವಯಸ್ಕರ ಶಿಕ್ಷಣದಲ್ಲಿ ಬಹುಮುಖ್ಯ ಪಾತ್ರವನ್ನಾಡಬಲ್ಲರು. ಸರಕಾರ ಈ ದಿಸೆಯಲ್ಲಿ ಪ್ರಯತ್ನ ಮಾಡುತ್ತಿದೆ. ಇದು ಸ್ತುತ್ಯ. ನಿರುದ್ಯೋಗಿ ಯುವಕರಿಗೆ ತಾಂತ್ರಿಕ ಜ್ಞಾನ ಒದಗಿಸಿ ವಯಸ್ಕರ ಶಿಕ್ಷಣ ಪ್ರಸಾರದ ಉತ್ತಮ ಕಾರ್ಯಕರ್ತರನ್ನು ಮಾಡುವ ದಿಸೆಯಲ್ಲಿ ಶಿಕ್ಷಕರು ಪ್ರಯತ್ನಶೀಲರಾಗಬೇಕು. ಚಾಲಕಶಕ್ತಿಯಾಗಬೇಕು. ಆಗಾಗ್ಗೆ ನಿರಕ್ಷರಿಗಳು ಸಾಧಿಸಿದ ಪ್ರಗತಿಯನ್ನು ಅವಲೋಕಿಸಿ ಮಾರ್ಗದರ್ಶನ ಮಾಡಬೇಕು- ಸಾಕ್ಷರತಾ ಪ್ರಸಾರದ ಮಾರ್ಗಗಳಲ್ಲಿ ಶಿಕ್ಷಕರು ಮಾದರಿಗಾಗಿ ಕಲಿಸಿ ತೋರಿಸಿ ಅಕ್ಷರಗಳ ಪರಿಚಯ ಎಷ್ಟು ಸುಲಭ ಎಂಬುದರ ಕಲ್ಪನೆ ಮಾಡಿಕೊಡಬೇಕು.

(೯) ಪಾಲಕರ ದಿನಾಚರಣೆ, ಶಾಲೆಯ ವಾರ್ಷಿಕೋತ್ಸವ ಮೊದಲಾದ ಸಂದರ್ಭಗಳಲ್ಲಿ ವಯಸ್ಕರ ಶಿಕ್ಷಣದ ಮಹತ್ವವನ್ನು ಬಿತ್ತರಿಸುವ ಏಕಾಂಕ ನಾಟಕ, ಪ್ರಹಸನಗಳನ್ನು ನೆರವೇರಿಸಬೇಕು. ವಿನೋದಾವಳಿಗಳು ಸಾಕ್ಷರತೆಯ ಮಹತಿಯ ಸಾಂಸ್ಕೃತಿಕ ಪ್ರಾತ್ಯಕ್ಷಿಕೆಗಳಾಗಬೇಕು.

(೧೦) ವಯಸ್ಕರ ಶಿಕ್ಷಣವು ಮಕ್ಕಳ ಕಲಿಕೆಗೆ ಪೂರಕವೆಂಬುದನ್ನು ಮರೆ-ಯುವಂತಿಲ್ಲ. ಮಕ್ಕಳ ಹಾಜರಿ ಸುಧಾರಣೆಗೆ, ಪ್ರಾಥಮಿಕ ಸಾಲೆಯ ಪ್ರಗತಿಗೆ ವಯಸ್ಕರ ಶಿಕ್ಷಣ ಅವಶ್ಯವೆಂಬ ಅರಿವು ಶಿಕ್ಷಕರಿಗಿರಲಿ. ವಯಸ್ಕರ ಶಿಕ್ಷಣ ಮತ್ತು ಪ್ರಾಥಮಿಕ ಶಿಕ್ಷಣ ಒಂದೇ ನಾಣ್ಯದ ಎರಡು ಮುಖಗಳು. ಶಿಕ್ಷಕರು ಇದನ್ನು ತಿಳಿದಾಗ ಅವರ ಜೀವನವೇ ಬದಲಾಗುವದು.

(೧೧) ಅನಕ್ಷರಸ್ಥ ಸ್ತ್ರೀಯರ ಸಂಖ್ಯೆ ಹೆಚ್ಚಿರುವ ನಮ್ಮ ನಾಡಿನಲ್ಲಿ ಶಿಕ್ಷಕಿಯರ ಪಾತ್ರ ಹಿರಿದು. ಶಿಕ್ಷಕಿಯರು ತಾವು ನೆಲೆಸಿರುವ ಓಣಿಯಲ್ಲಿಯ ಮನೆಗಳಿಗೆ ಹೋಗಿ ಅವರ ಇರುವಿಕೆಯ ತಿಳಿವಳಿಕೆ ಮಾಡಿಕೊಡುವ ಪ್ರಯತ್ನದ ಹಾದಿ ತುಳಿದಾಗ ಅವರ ಜೀವನಕ್ಕೆ ಮೆರಗು ಬರುವದುಂಟು.

(೧೨) ವಯಸ್ಕರ ಶಿಕ್ಷಣ ಪ್ರಸಾರ ಕಾರ್ಯವು ಯಶಸ್ವಿಯಾಗಬೇಕಾದರೆ, ಶಿಕ್ಷಕರು ಕೆಲಸ ಮಾಡುವ ಹಳ್ಳಿಗಳಲ್ಲಿಯೇ ವಾಸಿಸುವದು ಅನಿವಾರ್ಯ. ಎಡತಾಕುವ ಶಿಕ್ಷಕನಿಂದ ಸಮಾಜಕ್ಕೆ ಆಘಾತ ತಪ್ಪಿದ್ದಲ್ಲ; ಶಿಕ್ಷಣದ ಕೆಲಸ ಸಾಧ್ಯವಿಲ್ಲ, ಎಡತಾಕುವದು ಅಧರ್ಮ. ಶಿಕ್ಷಕರಿಗೆ ಈ ದಿಸೆಯಲ್ಲಿ ಅರಿವು ಮೂಡಲಿ.

(೧೩) ಸಾಧಿಸಿದ ಕೆಲಸವು ಸಂಭಾವನೆಯ ಅಳತೆಗೋಲಾಗಬೇಕು. ದುಡಿಯುವ ಹಾಗೂ ದುಡಿಯದ ಶಿಕ್ಷಕರನ್ನು ಒಂದೇ ಎಂದು ತಿಳಿಯುವ ದುರ್ಬುದ್ಧಿ ಹೋಗದ ಹೊರತು ಪ್ರಗತಿಯನ್ನು ಸಾಧಿಸಲಾರೆವು. ಯೋಗ್ಯತೆಗೆ ಮನ್ನಣೆ, ಅಯೋಗ್ಯತೆಗೆ ಖಂಡನೆ ನಮ್ಮಲ್ಲಿ ಬೆಳೆದುಬಂದಾಗ ಮಾತ್ರ ಒಳಿತನ್ನು ಕಾಣಬಹುದು. ಉತ್ತಮ ಕಾರ್ಯಕ್ಕೆ ಮನ್ನಣೆಯಿದೆ. ಯೋಗ್ಯರನ್ನು ಪುರಸ್ಕರಿಸುತ್ತಾರೆ ಎಂದು ಕಂಡುಬಂದಾಗ ಶಿಕ್ಷಕರ ಪ್ರಯತ್ನ ಹೆಚ್ಚಾಗುವದುಂಟು. ದುಡಿಮೆಗೆ ತಕ್ಕ ಪ್ರತಿಫಲ ಶಿಕ್ಷಕರಿಗೆ ಸಿಗಲಿ. ಹೀಗಾದಾಗ, ಪ್ರಾಮಾಣಿಕ ಪ್ರಯತ್ನ ಹೊರಹೊಮ್ಮುವದುಂಟು.

(೧೪) ಸಾಕ್ಷರತೆಯ ಉಳವಿಗೆ, ಬೆಳವಣಿಗೆಗೆ, ಅರ್ಥಾತ್ ಹೊಸ ಸಾಕ್ಷರಿಗಳಿಗೆ ಸುಲಭ ಪುಸ್ತಿಕೆಗಳನ್ನು ಶಿಕ್ಷಕರು ತಯಾರಿಸುವದು ಸಾಧ್ಯವಿದೆ. ಶಿಕ್ಷಕರನ್ನು ಬಿಟ್ಟು ಬೇರೆಯವರಾರು ಮಾಡಬೇಕು? ಶಿಕ್ಷಕರ ಜೀವನದಲ್ಲಿ ಇದು ಒಂದು ಮಹತ್ವದ ಅಂಶ.

(೧೫) ಮಕ್ಕಳ ಶಿಕ್ಷಣ ಹಾಗೂ ವಯಸ್ಕರ ಶಿಕ್ಷಣ— ಇವೆರಡನ್ನೂ ಗಮನದಲ್ಲಿರಿಸಿಕೊಂಡು ಶಿಕ್ಷಕರ ಕೆಲಸವನ್ನು ಅಳೆಯಬೇಕು. ಇದು ಶಿಕ್ಷಕರಿಗೆ ತಿಳಿದಾಗ ವಯಸ್ಕರ ಶಿಕ್ಷಣಕ್ಕೆ ಪ್ರಾಧಾನ್ಯ ಕೊಡುವ ಜೀವನ ಅವರದಾಗುತ್ತದೆ.

ಸಾರಾಂಶ: ಕೊನೆಯದಾಗಿ ವಯಸ್ಕರ ಶಿಕ್ಷಣದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರು ಹಲವಾರು ರೀತಿಗಳಲ್ಲಿ ಕಾರ್ಯೋನ್ಮುಖರಾಗಬಹುದು. ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಸಮಸ್ಯೆಗಳನ್ನು ಎದುರಿಸಬಲ್ಲೆ; ಬಿಡಿಸಬಲ್ಲೆ ಎಂಬ ಮನೋಧೈರ್ಯ ಬೆಳೆಯದ ಹೊರತು ಸಫಲತೆಯನ್ನು ಕಾಣಲಾರೆವು. ಇಂದಿನ ಶಿಕ್ಷಕರು ವಯಸ್ಕರ ಶಿಕ್ಷಣದಲ್ಲಿ ತಮ್ಮ ಪಾತ್ರದ ಆಳವಾದ ಅರ್ಥಮಾಡಿಸಿಕೊಂಡು ಮಿಂಚಿನ ವೇಗದಲ್ಲಿ ಕಾರ್ಯ ಮಾಡದಿದ್ದರೆ ಕರಾಳ ಚಿತ್ರವನ್ನು ಕಾಣಬೇಕಾಗುವದು. ಅಂಥ ದೌರ್ಭಾಗ್ಯ ಪ್ರಾಥಮಿಕ ಶಿಕ್ಷಕರದು ಆಗಬಾರದೆಂದು ಆಶಿಸುವೆ. ಯಾವ ವ್ಯಕ್ತಿಯೂ ಕಾರ್ಯ ಬಾಹುಲ್ಯದಿಂದ ಮಡಿದಿಲ್ಲ. ಅಸಾಧ್ಯ ಎಂಬ ಚಿಂತೆ ಮೂಡಿಸಿಕೊಂಡು ನಶಿಸಿದ್ದಾನೆ. ವಯಸ್ಕರ ಶಿಕ್ಷಣದ ಪ್ರಸಾರ ಕಾರ್ಯ ಚಿಂತೆಯಾಗದಿರಲಿ; ಜೀವನದ ಉಸಿರಾಗಲಿ. ಮನೋಧರ್ಮದ ಮುಂದೆ ಇನ್ನಾವ ಧೈರ್ಯ, (ಧೈರ್ಯವಾಗುವದುಂಟು?) ಎಲ್ಲ ಧೈರ್ಯಕ್ಕಿಂತಲೂ ಮಾನಸಿಕ ಧೈರ್ಯ ಮೇಲು. ಇದನ್ನು ಶಿಕ್ಷಕರಾದವರು ಬೆಳಸಿಕೊಂಡರೆ ಯಾವ ಕಾರ್ಯವೂ ಅಸಾಧ್ಯವಲ್ಲ. ಎಲ್ಲವೂ ಸಾಧ್ಯ. "ನನ್ನಿಂದ ಸಾಧ್ಯ" ಎಂಬ ಧೈರ್ಯವನ್ನು ತಂದುಕೊಳ್ಳುವಾ.

೦೦೦

*ಶಿಕ್ಷಣ ಸಂಸ್ಥೆಗಳಲ್ಲಿ ಸಾಂಘಿಕ ಜೀವನ

—ಕೆ. ಬಿ. ತೇರಗಾಂವಕರ

ಶಿಕ್ಷಣವೆಂದರೆ ಕೇವಲ ಸಾಕ್ಷರತೆಯಲ್ಲ, ಅಕ್ಷರಾಭ್ಯಾಸವಲ್ಲ, ಅದು ಮಗುವಿನ ಸಮಗ್ರ ವ್ಯಕ್ತಿತ್ವದ ಸಂಸ್ಕಾರ. ಮಕ್ಕಳು ದೊಡ್ಡವರಾಗಿ ತಮ್ಮ ಕಾಲ ಮೇಲೆ ತಾವು ನಿಲ್ಲಬಲ್ಲ ಸಾಮರ್ಥ್ಯವುಳ್ಳವರಾಗುವತನಕ ಜೋಪಾನ ಮಾಡುವದು ಪಾಲಕರ ಹೊಣೆ. ಮಕ್ಕಳಿಗೆ ಸೂಕ್ತ ಅವಕಾಶಗಳನ್ನು ಕಲ್ಪಿಸಿ, ಅವರ ಅನುಭವಗಳನ್ನು ಹೆಚ್ಚಿಸಿ, ಅವರ ಪೂರ್ತಿ ಬೆಳವಣಿಗೆಗೆ ತಕ್ಕ ಮಾರ್ಗದರ್ಶನ ಮಾಡಬೇಕಾದುದು ಶಿಕ್ಷಕರ ಕರ್ತವ್ಯ. ಹೀಗೆ ಶಿಕ್ಷಣ ಒದಗಿಸಲು ಮನೆ, ಮಠ, ಶಾಲೆ-ಇವು ಕೇಂದ್ರ ಗಳಾಗಿದ್ದವು.

ಪ್ರಾಚೀನ ಭಾರತದಲ್ಲಿ 'ಗುರುಕುಲ' ಅಥವಾ ಗುರು ಮನೆ (ಆಶ್ರಮ) ಶಿಕ್ಷಣದ ಕೇಂದ್ರವಾಗಿತ್ತು. ಅಲ್ಲಿ ವಿದ್ಯಾರ್ಥಿಗಳು ವಾಸವಾಗಿರುತ್ತಿದ್ದರು. ಪ್ರಾರ್ಥನೆಯೊಂದಿಗೆ ನಿತ್ಯದ ಕಾರ್ಯಕ್ರಮಗಳು ಆರಂಭವಾಗುತ್ತಿದ್ದವು. ಗುರುಗಳು ಪಾಠ ಹೇಳುತ್ತಿದ್ದರು. ಕಂಠಪಾಠಮಾಡಿ ಗುರುಗಳು ಹೇಳಿದ ಪಾಠಗಳನ್ನು ವಿದ್ಯಾರ್ಥಿಗಳು ಮನನ ಮಾಡಿ-ಕೊಳ್ಳುತ್ತಿದ್ದರು. ಗುರುಗಳು ಕೇಳಿದ ಪ್ರಶ್ನೆಗಳಿಗೆ ವಿದ್ಯಾರ್ಥಿಗಳು ಮೌಖಿಕವಾಗಿ ಉತ್ತರಿಸುತ್ತಿದ್ದರು. ಇದೆಲ್ಲ ಅಂದಿನ ಬೋಧನಾಕ್ರಮ ಹಾಗು ಪರೀಕ್ಷಾ ವಿಧಾನ-ಗಳು. ಇದರ ಜೊತೆಗೆ ಸಾಂಘಿಕ ಜೀವನದ ವ್ಯವಸ್ಥೆಯೂ ಇತ್ತು. ವಿದ್ಯಾರ್ಥಿಗಳೆಲ್ಲ ಗುರುಕುಲ ವಾಸಕ್ಕೆ ಅಗತ್ಯವಿದ್ದ ಕಾರ್ಯಗಳನ್ನು ಹಂಚಿಕೊಂಡು ಮಾಡ ಬೇಕಾಗುತ್ತಿತ್ತು. ಗುರುಕುಲದ ಸ್ವಚ್ಛತೆ, ನೀರು ಪೂರೈಕೆ, ಉರುವಲಿನ ವ್ಯವಸ್ಥೆ, ಅಡಿಗೆಯ ಸಿದ್ಧತೆ, ಬಡಿಸುವಕಾರ್ಯ-ಮುಂತಾದ ಕಾರ್ಯಗಳನ್ನು ವಿದ್ಯಾರ್ಥಿಗಳೇ ಮಾಡುತ್ತಿದ್ದರು. ಗುರುಗಳು ಅವರಿಗೆಲ್ಲ ಸೂಕ್ತ ಮಾರ್ಗದರ್ಶನ ಮಾಡುತ್ತಿದ್ದರು. ಯಾವ ಕೆಲಸವಾಗಲಿ, ಗುರುಗಳು ತಿಳಿಸಿದಂತೆ, ಮಾಡುವದು ವಿದ್ಯಾರ್ಥಿಗಳ ಧರ್ಮ. ಅಲ್ಲಿ ಯಾವದೇ ತರದ ಭೇದಭಾವಗಳಿಲ್ಲ. ರಾಜರ ಮಕ್ಕಳೂ ಗುರುಕುಲದಲ್ಲಿ ವಾಸಿಸುತ್ತಿದ್ದರು. ಅವರೂ ಸಹ ಜೀವನದ ಅನುಭವ ಪಡೆಯುತ್ತಿದ್ದರು. ಸ್ವಾವ-

---

ಸಾರ್ವಜನಿಕ ವಿದ್ಯಾ ಇಲಾಖೆಯಲ್ಲಿ ವಿಭಾಗೀಯ ಉಪನಿರ್ದೇಶಕರೆಂದು ನಿವೃತ್ತರಾದ ಶ್ರೀ ಕೆ. ಬಿ. ತೇರಗಾಂವಕರ ಅವರು ಜೀವನ ಶಿಕ್ಷಣದ ಅಧ್ವರ್ಯುಗಳು. ಮುಂಬೈ ಕರ್ನಾಟಕ ದಲ್ಲಿಯ ಜೀವನ ಶಿಕ್ಷಣ ಪ್ರಯೋಗದ ಯಶಸ್ಸಿನ ಹಿನ್ನೆಲೆಯಲ್ಲಿ ಶ್ರೀ ಕೆ. ಬಿ. ತೇರಗಾಂವಕರ ಅವರಂತಹ ಶಿಕ್ಷಣವೇತ್ತರ ರಚನಾತ್ಮಕ ಕಾರ್ಯದ ಹಿನ್ನೆಲೆ ಇದೆ. ಸದ್ಯ ಇವರು ಧಾರವಾಡದಲ್ಲಿ ಇಲೆಕ್ಟ್ರಿಕ್ ಗ್ರಿಡ್ ಹತ್ತರದ ವಿವೇಕಾನಂದ ನಗರದಲ್ಲಿ ವಾಸಿಸುತ್ತಾರೆ.

*ಪ್ರಸ್ತುತ ಲೇಖನ ಶ್ರೀಯುತರು ೪-೧-೮೧ ರಂದು ಮಾಡಿದ ಭಾಷಣದ ಸಾರವಾಗಿದೆ.

ಲಂಬನದ ಪಾಠವೇ ಗುರುಕುಲವಾಸದ ಮರ್ಮವಾಗಿತ್ತು. **ಈ ಬಗೆಯ ಅಂದಿನ ಸಾಂಘಿಕ ಜೀವನದ ಪ್ರಯೋಗವು ಇಂದಿಗೂ ಆದರ್ಶಪ್ರಾಯವಾಗಿದೆ, ಅನುಕರಣೀಯವಾಗಿದೆ.**

ಮಧ್ಯಯುಗದಲ್ಲಿ **ಮನೆ** ಮತ್ತು **ಮಠ**–ಇವು ಮಕ್ಕಳ ವಿದ್ಯಾಭ್ಯಾಸದ ತಾಣಗಳಾದವು. ವಿದ್ಯಾವಂತರು ತಮ್ಮ ಮಕ್ಕಳಿಗೆ ಮನೆಯಲ್ಲಿಯೇ ಓದು–ಬರೆಹ–ಲೆಕ್ಕಗಳನ್ನೂ ಕಲಿಸುತ್ತಿದ್ದರು. ಮತ್ತೆ ಕೆಲವರು ಚರ್ಚುಗಳಲ್ಲಿ ಇಲ್ಲವೆ ಮಠಗಳಲ್ಲಿ–ಮಕ್ಕಳ ವಿದ್ಯಾಭ್ಯಾಸ ಮಾಡಿಸುತ್ತಿದ್ದರು. ಅಕ್ಷರಾಭ್ಯಾಸದ ಜೊತೆಗೆ ನೈತಿಕ ಪಾಠಗಳನ್ನೂ ಅಲ್ಲಿ ಕಲಿಸಲಾಗುತ್ತಿತ್ತು. ಆಗ ನೈತಿಕ ಶಿಕ್ಷಣಕ್ಕೆ ಮಹತ್ವಕೊಡಲಾಗಿತ್ತು. ಒಳ್ಳೆಯ ಜೀವನದ ಸಂಸ್ಕಾರವು ಅಂದಿನ ಶಿಕ್ಷಣದ ಹಿರಿ ಗುರಿಯಾಗಿತ್ತು. ಶಿಕ್ಷಕರ ಆದರ್ಶ ಜೀವನವು ಮಕ್ಕಳಿಗೆ ಪರಿಣಾಮಕಾರಕವಾಗಿತ್ತು. ಸುಶಿಕ್ಷಿತಜನರೂ ಮನೆಯಲ್ಲಿ ಪೋಷಕ ವಾತಾವರಣ ಒದಗಿಸುತ್ತಿದ್ದರು. ಮನೆ – ಮಠಗಳು ವಿದ್ಯಾರ್ಥಿಜೀವನಕ್ಕೆ ಪೋಷಕಶಕ್ತಿಗಳಾಗಿದ್ದವು. **ಕುಟುಂಬದಲ್ಲಿ ಹಾಗೂ ಶಾಲಾ ಮಠಗಳಲ್ಲಿ ಮಕ್ಕಳು ಸಾಂಘಿಕ ಜೀವನದ ಅನುಭವ ಪಡೆಯುತ್ತಿದ್ದರು.**

ಯುರೋಪದಲ್ಲಿ ಔದ್ಯೋಗಿಕ ಕ್ರಾಂತಿ ಮತ್ತು ಪುನರುಜ್ಜೀವನದ ಚಳವಳಿ ಪ್ರಾರಂಭವಾದಂದಿನಿಂದ **ಶಿಕ್ಷಣದಲ್ಲಿ ಹೊಸ ಗಾಳಿ** ಬೀಸತೊಡಗಿತು. ಹೊಸ ಪ್ರದೇಶಗಳು ಶೋಧವಾದವು, ಯಂತ್ರಗಳು ಪ್ರಾರಂಭವಾದವು. ಆಳರಸರ, ಸಿರಿವಂತರ ತೆಗಳಿಕೆಯ ಕಾಲ, ಪ್ರಜಾಪ್ರಭುತ್ವದ ಹಾಗು ಬಡಜನರ ಉದ್ಧಾರದ ಉದಯ! ಇದೊಂದು ಸಂಧಿಕಾಲ! ಶೋಧನೆಯ ಗಾಳಿ, ಚಿಕಿತ್ಸಾದೃಷ್ಟಿಯ ಅರುಣೋದಯ ಆವರಿಸಿದವು. ವೈಜ್ಞಾನಿಕ ದೃಷ್ಟಿ, ವೈಚಾರಿಕ ವಿಕಾಸ— ಇವು ವಿಜ್ಞಾನ ಮತ್ತು ತಂತ್ರಜ್ಞಾನದ ಫಲಗಳು. ಹೊಸ ಜ್ಞಾನ ಮತ್ತು ಕೌಶಲ್ಯಗಳು ಸಾಮಾಜಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಹೆಚ್ಚಿಸಲು ಕಾರಣವಾದವು.

ಬ್ರಿಟಿಶರ ಆಳ್ವಿಕೆಯು ಹಿಂದುಸ್ತಾನದಲ್ಲಿ ಆರಂಭವಾದಾಗ, ಅನೇಕ ಸ್ಥಳೀಯ ಸಂಸ್ಥಾನಗಳಿದ್ದವು. ಅಲ್ಲಲ್ಲಿ ಭಿನ್ನ ಭಿನ್ನ ಪ್ರಕಾರಗಳ ಶಿಕ್ಷಣ ಸಂಸ್ಥೆಗಳು ಪ್ರಚಲಿತವಾಗಿದ್ದವು. ಮುಂಬಯಿ ಕರ್ನಾಟಕದಲ್ಲಿ ಅಯ್ಯನವರ ಮನೆಗಳು, ಮಠಗಳು, ಬ್ರಾಹ್ಮಣರ ಅಗ್ರಹಾರಗಳು ಇತರರ ದೇವಸ್ಥಾನಗಳು, ಚರ್ಚಗಳು, ಮಸೀದೆಗಳು, ಪ್ರಾಥಮಿಕ ಶಿಕ್ಷಣವನ್ನು ಒದಗಿಸುವ ೧೯ನೆಯ ಶತಮಾನದಲ್ಲಿಯ ಶಿಕ್ಷಣ ಸಂಸ್ಥೆಗಳಾಗಿದ್ದವು. ಇವೆಲ್ಲ ಗುರುಮನೆಗಳಿದ್ದಂತೆಯೇ! ಗುರುಮನೆಯಲ್ಲಿ ವಾಸಮಾಡುವ ವಿದ್ಯಾರ್ಥಿಗಳೂ ಓದಿನ ಜೊತೆಗೆ ಗುರುಮನೆಯ ಸೇವಾಕಾರ್ಯಗಳಲ್ಲಿ ತೊಡಗಿರುತ್ತಿದ್ದರು. ಗುರುಬೋಧೆ ಸೇವಾಕಾರ್ಯಕ್ಕೂ ಪ್ರೇರಕ ಶಕ್ತಿಯಾಗಿತ್ತು. ಅಂದಿನ **ಗುರುಸೇವೆಯೂ ಒಂದು ಬಗೆಯ ಸಹಜೀವನದ ಕುರುಹು ಆಗಿತ್ತು.** ಇಂದಿನ

ಸಾಂಘಿಕ ಜೀವನದ ಪರಿಕಲ್ಪನೆಯು ಅಂದಿನ ಗುರುಮನೆಯ ಶಿಕ್ಷಣದಲ್ಲಿ ಅಡಕವಾಗಿತ್ತು. ಉಚ್ಚ ಶಿಕ್ಷಣದ ವಿದ್ಯಾಪೀಠಗಳೂ ಇದೇ ಮಾದರಿಯ ಖಾಸಗೀ ಸಂಸ್ಥೆಗಳೂ ಇದ್ದವು.

೧೯೩೭ರಲ್ಲಿ **ಗಾಂಧೀಜಿಯವರು** ಭಾರತದ ಶಿಕ್ಷಣದ ಕಡೆಗೆ ಗಮನಹರಿಸಿದರು. ಬಡಮಕ್ಕಳಿಗೂ ಉಚಿತ ಮತ್ತು ಸಾರ್ವತ್ರಿಕ ಶಿಕ್ಷಣ ದೊರೆಯುವ ಬಗೆ ಎಂತು? ಎಂಬುದನ್ನು ಆಲೋಚಿಸತೊಡಗಿದರು. ಮೂಲ ಶಿಕ್ಷಣದ ಮೂಲ ವಿಚಾರಗಳನ್ನು ಗಾಂಧೀಜಿ ಕೊಟ್ಟರು. ಅವುಗಳನ್ನು ಆಧರಿಸಿ, **ಡಾ. ಝಾಕೀರ ಹುಸೇನ ಸಮಿತಿ** ಮೂಲ ಶಿಕ್ಷಣಕ್ಕೆ (Basic Education) ಮೂರ್ತ ಸ್ವರೂಪ ಕೊಟ್ಟಿತು. ಅದನ್ನು ರಾಷ್ಟ್ರೀಯ ಶಿಕ್ಷಣವೆಂದೂ ಕರೆಯಲಾಯಿತು. ಸ್ವಾತಂತ್ರ್ಯನಂತರ ಪ್ರಾಥಮಿಕ ಶಿಕ್ಷಣವೆಂದರೆ ಮೂಲ ಶಿಕ್ಷಣವೇ ಎಂಬುದು ಸ್ಥಿರ ಸ್ವರೂಪ ಹೊಂದಿತು. ನಮ್ಮ ದೇಶದಲ್ಲಿ ಮೂಲ ಶಿಕ್ಷಣದ ತತ್ವಗಳು ಪ್ರಚಾರವಾಗತೊಡಗಿದವು. ಕೊನೆಗೆ ಜೀವನ ಶಿಕ್ಷಣ ಎಂಬ ಹೆಸರನ್ನು ಪಡೆಯಿತು. ಅಡಾಲ್ಫ್ ಪೆರಿಯರ ಮತ್ತು ಜಾನ ಡ್ಯೂಯಿ ಅವರ–ಕೃತ ಶಾಲೆಗಳ (Activity Schools) ಸ್ವರೂಪಕ್ಕೆ ಸಾಮೀಪ್ಯ ಹೊಂದಿತು. ಸ್ವಾವಲಂಬಿ ಶಿಕ್ಷಣದ ವಿಚಾರ ಬಿಟ್ಟು ಸ್ವಾವಲಂಬನ ಪ್ರವೃತ್ತಿಯನ್ನು ಬೆಳಗುವ ಶಿಕ್ಷಣ ಎಂಬುದು ಸ್ಥಿರವಾಯಿತು. ಜೀವನ ಶಿಕ್ಷಣದ ತತ್ವಗಳು ಪ್ರಾಥಮಿಕ ಶಾಲೆಗಳಲ್ಲಿ ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿ ಕಾರ್ಯಗತವಾದುವು. ಅವುಗಳಲ್ಲಿ ಮುಖ್ಯವಾದ ಒಂದು ಅಂಶವೆಂದರೆ ಸಾಂಘಿಕ ಜೀವನ. ಅದನ್ನು ಈಗ ವಿವರಿಸೋಣ.

ಸಾಂಘಿಕ ಜೀವನದ ಮುಖ್ಯಾಂಶಗಳು

(೧) ಸ್ವಯಂ ಆಡಳಿತ (Self-Govt) ಶಾಲಾ ಸಂಸತ್ತು.

(೨) ಸಾಮೂಹಿಕ ಪ್ರಾರ್ಥನೆ (Community Prayer)

(೩) ಶ್ರಮದ ಕೆಲಸ (Manual Work)

(೪) ಸಮಾಜ ಸೇವಾ ಕಾರ್ಯಗಳು (Social Service)

(೫) ರಾಷ್ಟ್ರೀಯ ದಿನಾಚರಣೆಗಳು (National Days)

(೬) ಸಾಂಸ್ಕೃತಿಕ ಚಟುವಟಿಕೆಗಳು (Cultural Activities)

ಈ ಚಟುವಟಿಕೆಗಳಲ್ಲಿ ಅಡಕವಾದ ತತ್ವಗಳು

(೧) ಸ್ವಯಂ ಆಡಳಿತ :

ಶಾಲೆ ಯಾರದು? ಸರಕಾರದ್ದೋ? ಸಮಾಜದ್ದೋ ಅಥವಾ ಸಂಸ್ಥೆಯದೋ? ವ್ಯಾವಹಾರಿಕವಾಗಿ ಇದು ಸರಿಯೇ? ಮಕ್ಕಳಲ್ಲಿ ಈ ಶಾಲೆ ನಮ್ಮದು ಎಂಬ ಭಾವನೆ

ಮೂಡಿಸುವದು ಶಿಕ್ಷಣದ ದೃಷ್ಟಿಯಿಂದ ಮಹತ್ವವಾದುದು. ಶಾಲೆಯಲ್ಲಿ ಶಾಲಾ ಸಂಸತ್ತನ್ನು (School Parliament) ಸಂಘಟಿಸಿ, ಅದರ ಮುಂದಾಳುಗಳನ್ನು ಗುರುತಿಸಿ, ಶಾಲೆಯ ಎಲ್ಲ ಸಮೂಹ ಕೆಲಸಗಳನ್ನು ಮಕ್ಕಳಿಗೆ ಒಪ್ಪಿಸುವ ವಿಧಾನವು ನೂತನವಾದುದು. ಮಕ್ಕಳಲ್ಲಿ ಶಿಸ್ತು, ಕಾರ್ಯತತ್ಪರತೆ, ಹೊಣೆಗಾರಿಕೆ, ನಾಯಕತ್ವ ಮುಂತಾದ ಅಮೂಲ್ಯ ತತ್ವಗಳನ್ನು ಬಿಂಬಿಸಲು, ಅವನ್ನು ಅಳವಡಿಸಿಕೊಳ್ಳಲು ಶಾಲಾಸಂಸತ್ತು ಸಹಾಯಕವಾಗಬಲ್ಲದು. **ಇದು ಪ್ರಜಾಪ್ರಭುತ್ವದ ತಳಹದಿ.** ಈ ತತ್ವವನ್ನು ಆಧರಿಸಿದ ಜೀವಿಕೆಯ ಅನುಭವವು (Democratic way af Living) ದೊರೆಯುತ್ತದೆ.

(೨) ಸಾಮೂಹಿಕ ಪ್ರಾರ್ಥನೆ :

ಈ ಕಲ್ಪನೆಯನ್ನು **ಗಾಂಧೀಜಿ** ತಮ್ಮ ನಿತ್ಯದ ಸಾರ್ವಜನಿಕ ಪ್ರಾರ್ಥನೆಯಲ್ಲಿ ಹೆಣೆದು ತೋರಿಸಿದರು. 'ಜಾಗತಿಕ ಕನಸಿನಿಂದ ಮೂಡಲಾರದ ಸಂಗತಿಗಳು ಪ್ರಾರ್ಥನೆಯಿಂದ ಸಾಧಿಸಲ್ಪಡುತ್ತವೆ' ಎಂದು ಆಂಗ್ಲಕವಿ **ಟೆನಿಸನ್** ಹೇಳಿದ್ದುಂಟು. ಪ್ರಾರ್ಥನೆಯು ಜೀವನದ ಉಸಿರು. ಜೀವನಕ್ಕೆ ನೆಮ್ಮದಿ, ಸುಖ ಶಾಂತಿಗಳ ಸಾಧನ, ದೇವರ ಬಲವನ್ನು ಪಡೆಯುವ ಸಾಧನ, ಮಾನವ ಕುಲ ಒಂದು ಎಂದು ನಂಬುವ-ನಡೆಯುವ ರೀತಿ. ಇದನ್ನು ಗಾಂಧೀಜಿ ಎತ್ತಿತೋರಿಸಿದರು. ಅವರ ಸಾಮೂಹಿಕ ಪ್ರಾರ್ಥನೆ ಹೀಗೆ ನಡೆಯುತ್ತಿತ್ತು: ಉಪನಿಷತ್ತಿನ ಶ್ಲೋಕ, ಕುರಾಣದಲ್ಲಿಯ ಶ್ಲೋಕ, ಬೈಬಲ್‌ನಲ್ಲಿಯ ಶ್ಲೋಕ, ಸಾಧು ಸಂತರ ಗೀತೆ- ಮುಂತಾದವುಗಳನ್ನು ಅನ್ನುವ ಪರಿಪಾಠವಿತ್ತು. ಅಲ್ಲದೆ ಇವನ್ನುಳಿದು ಬೇರೆ ಧರ್ಮದವರು ತಮ್ಮ ಸಮೂಹದಲ್ಲಿದ್ದರೆ, ಅವರ ಧರ್ಮದ ಉಕ್ತಿಗಳನ್ನೂ ಅನ್ನಲು ಅವಕಾಶವಿತ್ತು. ಕೊನೆಗೆ ಗಾಂಧೀಜಿಯವರು ಹಿತನುಡಿ ಹೇಳುತ್ತಿದ್ದರು. ಹೀಗೆ ನಡೆಯುತ್ತಿದ್ದ ಸಾಮೂಹಿಕ ಪ್ರಾರ್ಥನಾಕ್ರಮದಲ್ಲಿ— **ಸ್ವಧರ್ಮ ನಿಷ್ಠೆ** ಮತ್ತು **ಪರಧರ್ಮ ಸಹಿಷ್ಣುತೆ**- ಈ ತತ್ವವು ಪೋಣಿಸಿಕೊಂಡಿದೆ. **ರಾಷ್ಟ್ರದ ಐಕ್ಯತೆಯ ದೃಷ್ಟಿಯಿಂದ** ಈ ವಿಧಾನವು ಅಗತ್ಯವಾದದ್ದೆಂದು ಅವರು ಮನಗಂಡಿದ್ದರು. ಆದಕಾರಣ ಈ ಪ್ರಯೋಗವನ್ನು ಅವರು ಮುಂದುವರಿಸಿದ್ದರು. ಶಾಲೆಯೂ ಮಕ್ಕಳ ಸಮಾಜ. ಅಲ್ಲಿ ಎಲ್ಲ ಧರ್ಮ, ಜಾತಿ, ಭಾಷೆಗಳ ಸಮೂಹವನ್ನು ಕಾಣುವಿರಿ. ಅವರಿಗೆ **ಭಾವೈಕ್ಯದ ಕಲ್ಪನೆ** ನೇರವಾಗಿ ಹೃದಯ ತಟ್ಟುವದು. ಇದೊಂದು ಮಹತ್ವದ ಸಾಧನೆಯಲ್ಲವೇ ? ಈ ವಿಚಾರ ಪ್ರಣಾಲಿಯನ್ನು ಆಧರಿಸಿ, ನಮ್ಮ ಪ್ರಾಥಮಿಕ ಶಾಲೆಗಳಲ್ಲಿ ಹಾಗು ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿ ಸಾಮೂಹಿಕ ಪ್ರಾರ್ಥನೆಯು ಶಿಕ್ಷಣದ ಅವಿಭಾಜ್ಯ ಅಂಗವಾಗಿ ಸೇರಿಕೊಂಡಿದೆ. ಅಮೃತವಾಣಿ, ಪಂಚಾಂಗ-ಸುದ್ದಿ ಪ್ರಕಟನೆಗಳನ್ನೂ ಶಾಲಾರಂಭದ ಪ್ರಾರ್ಥನೆಯಲ್ಲಿ ಸೇರಿಸಲಾಗಿದೆ. ಈ ಪ್ರಾರ್ಥನಾ ವಿಧಾನವು ಮಕ್ಕಳಲ್ಲಿ ದೈವಿಕ ಭಾವನೆ, ನೈತಿಕ ವಿಚಾರ, ಹೃದಯ ಸಂಸ್ಕಾರ, ರಾಷ್ಟ್ರೀಯ ಜಾಗೃತಿ, ಜಾಗತಿಕ ನಾಗರಿಕತೆ-ಇವೆಲ್ಲವುಗಳನ್ನು ಪೋಷಿಸುತ್ತದೆ.

(೩) ಶ್ರಮದ ಕೆಲಸ : (Manual Work)

ಯುರೋಪದ ಔದ್ಯೋಗಿಕ ಕ್ರಾಂತಿಯ ಫಲವಾಗಿ ದೈಹಿಕ ಕೆಲಸವು ಶ್ರಮ ಗೌರವ ತತ್ವವನ್ನು ಪ್ರತಿನಿಧಿಸಿದೆ. ನಮ್ಮ ದೇಶದಲ್ಲಿ ಬುದ್ಧ, ಬಸವ, ಗಾಂಧಿ ಮುಂತಾದ ಮಹನೀಯರ ಬೋಧನೆಯ ಪ್ರಭಾವದಿಂದ ಶ್ರಮದ ಕೆಲಸಕ್ಕೆ ಗೌರವ ಬಂದಿದೆ. ಬುದ್ಧಿ ಜೀವಿಗಳ ಹಾಗು ಶ್ರಮ ಜೀವಿಗಳ ಅಂತರ ಕಡಿಮೆಯಾಗುತ್ತಲಿದೆ. ಉದ್ಯೋಗದಿಂದ ಮೇಲು-ಕೀಳು ಎಂಬುದನ್ನು ಕಿತ್ತೊಗೆಯಲಾಗಿದೆ. ಶಾಲೆಯ ಒಳಗಿನ ಹಾಗು ಹೊರಗಿನ ಸ್ವಚ್ಛತೆ (ಸಫಾಯಿ), ಕೈತೋಟದ ಕೆಲಸ, ಕುಡಿಯುವ ನೀರಿನ ಪೂರೈಕೆ ಇತ್ಯಾದಿ ದೈಹಿಕ ಕೆಲಸಗಳನ್ನು ಎಲ್ಲ ವಿದ್ಯಾರ್ಥಿಗಳು ಹಂಚಿ-ಕೊಂಡು ಮಾಡುವಂತಾದರೆ, ಅದೊಂದು ದೊಡ್ಡ ಸಾಮಾಜಿಕ ಕ್ರಾಂತಿಯಲ್ಲವೇ ? ವಿದ್ಯಾರ್ಥಿಗಳಲ್ಲಿ ಭೇದ ಭಾವ ಅಳಿದು, **ಸಮತೆ, ಸೋದರತೆ** ಉಂಟಾಗುವ ದಿಲ್ಲವೇ ? ಇದು ಅವಶ್ಯಕವಾಗಿಲ್ಲವೇ ? ಈ ವಿಚಾರವೇ ಗಾಂಧೀಜಿಯವರು ಬೋಧಿಸಿದ ಉದ್ಯಮ ಮೂಲ ಶಿಕ್ಷಣದ ಆಧಾರ. ಮಕ್ಕಳಲ್ಲಿ ಸ್ವಾವಲಂಬನ ಪ್ರವೃತ್ತಿ ಬೆಳೆಯಬೇಕು. ಅವರು ದುಡಿದು ಉಣ್ಣುವವರಾಗಬೇಕು, ಸಮಾಜಕ್ಕೆ ಭಾರವಾಗ-ಕೂಡದು.

(೪) ಸಮಾಜಸೇವಾ ಕಾರ್ಯಗಳು :

ಶಾಲಾ ಕುಟುಂಬ ಜೀವನದಲ್ಲಿ ಮಕ್ಕಳು ಕೂಡಿ ಕೆಲಸ ಮಾಡುವರು, ಪರಸ್ಪರ ಸಹಾಯ ಪಡೆಯುವರು. ಸ್ವಾರ್ಥದಿಂದ ಪರಹಿತದ ಕಡೆಗೆ ಒಲಿಯುವರು. ಹೀಗಾಗಿ ಸಮಾಜ ಸೇವಾ ಬುದ್ಧಿ ವಿಕಾಸವಾಗುವದು. ಶಾಲೆಯ ಕೆಲಸಗಳೆಲ್ಲ ಶಾಲಾ ಸಮಾಜದ ಹಿತಕ್ಕಾಗಿಯೇ ಇದ್ದುದರಿಂದ ಮತ್ತು ಸೇವಾ ಪಥಕಗಳ ಮೂಲಕ ತಮ್ಮ ಗ್ರಾಮದ ಹಿತಕ್ಕೋಸ್ಕರ ಸಮಾಜ ಸೇವಾ ಕಾರ್ಯಗಳನ್ನುಕೈಕೊಳ್ಳಲು ಸುಲಭ ಸಾಧ್ಯ.

(೫) ರಾಷ್ಟ್ರೀಯ ದಿನಾಚರಣೆಗಳು :

ಸಾಂಘಿಕ ಜೀವನದ ಅಂಗವಾಗಿ ರಾಷ್ಟ್ರೀಯ ದಿನಾಚರಣೆಗಳನ್ನು ಶಾಲೆಗಳಲ್ಲಿ ಮಾಡುವದುಂಟು. ರಾಷ್ಟ್ರ ಪುರುಷ-ಸ್ತ್ರೀಯರ ಬಗ್ಗೆ ಹಾಗು ರಾಷ್ಟ್ರದ ಘನತೆಯ ಬಗ್ಗೆ ನಾವು ವಿಚಾರ ಸಂಕಿರಣವನ್ನು ಏರ್ಪಡಿಸಬಹುದು. ಮಹಾನ್ ವ್ಯಕ್ತಿಗಳ ಉಪನ್ಯಾಸಗಳನ್ನೂ ಸಂಘಟಿಸಬಹುದು. ಇದರಿಂದ ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯ ಮನೋಭಾವನೆಯನ್ನು ವಿಕಾಸ ಮಾಡಬಹುದಾಗಿದೆ.

(೬) ಸಾಂಸ್ಕೃತಿಕ ಚಟುವಟಿಕೆಗಳು :

ಭಾಷಣ, ಸಂಗೀತ, ನೃತ್ಯ, ನಾಟಕ ಮೊದಲಾದ ಚಟುವಟಿಕೆಗಳನ್ನು ಸಾಂಘಿಕ ಜೀವನದ ಅಂಗವಾಗಿ ಏರ್ಪಡಿಸಬಹುದು. ವಿದ್ಯಾರ್ಥಿಗಳಲ್ಲಿ ಕಲಾ ವ್ಯಾಸಂಗ ಬೆಳೆ-ಯಲು ಅನುವು ದೊರೆಯುತ್ತದೆ. ಕ್ರೀಡಾ ಸ್ಪರ್ಧೆಗಳನ್ನು ಸಂಘಟಿಸಿ, ಮಕ್ಕಳಲ್ಲಿ ಆಟಗಾರಿಕೆಯ ತತ್ವವನ್ನು ಬಿಂಬಿಸಲು ಸಾಧ್ಯವುಂಟು.

ವಸತಿಗೃಹವುಳ್ಳ ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿ ಅಡಿಗೆ ಮಾಡುವದಾಗಲಿ ಅಥವಾ ಅಡಿಗೆ ಕೆಲಸಗಳಲ್ಲಿ ನೆರವಾಗುವದಾಗಲಿ, ನೀರು ತುಂಬುವ, ಊಟ ಬಡಿಸುವ, ಊಟದ ಮನೆ ಸ್ವಚ್ಛ ಮಾಡುವ ಮುಂತಾದ ಕೆಲಸಗಳನ್ನು ವಿದ್ಯಾರ್ಥಿ–ಶಿಕ್ಷಕರೇ (Pupil–Teachers) ಶ್ರಮ ವಿಭಾಗದ ಮೂಲಕ ತಾವೇ ತಮ್ಮ ವ್ಯವಸ್ಥೆಯನ್ನು ಮಾಡಿಕೊಳ್ಳುತ್ತಾರೆ. ಹೀಗಾಗಿ ಅವರ ಪರೋಪಕಾರ, ಸ್ವಾವಲಂಬನ, ಸಹ ಜೀವನ –ಈ ತತ್ವಗಳನ್ನು ಅನುಭವದಿಂದ ಕಲಿಯುವರು. **ಇದು ಕೂಡಿ ಬಾಳುವ ಕಲೆ.**

ಸಾಂಘಿಕ ಜೀವನವು ಕೂಡಿ ಬಾಳುವ–ಬೆಳೆಯುವ ಕಲೆಯ (Art of living together) ಒಂದು ಪ್ರಯೋಗ. ಆದಕಾರಣ ಇದು ಶಾಲಾ ಜೀವನದ ಒಂದು ಅಂಗ. ಶಿಕ್ಷಕರ ತರಬೇತಿಯ ಸಂಸ್ಥೆಗಳಲ್ಲಂತೂ ಅದೊಂದು ವಿಶಿಷ್ಟ ವಿಭಾಗ. ಅದರ ಮುಖಾಂತರ ವಿದ್ಯಾರ್ಥಿಗಳಲ್ಲಿ ಸ್ವಯಂ ಆಡಳಿತದ ಅನುಭವ ಲಭಿಸುತ್ತದೆ. ಅವರು ಪ್ರಜಾಪ್ರಭುತ್ವದ ಘಟಕಗಳಾದ ಕರ್ತವ್ಯ ಪ್ರಜ್ಞೆ, ಪ್ರಜಾ ಪ್ರಜ್ಞೆ, ಸಾಮಾಜಿಕ ಪ್ರಜ್ಞೆ, ನಾಡ ಪ್ರಜ್ಞೆ, ವಿಶ್ವ ಪ್ರಜ್ಞೆ, –-ಇವುಗಳನ್ನು ಪೋಷಿಸಿಕೊಳ್ಳಬಹುದು. ಪ್ರಜ್ಞಾವಂತರಾಗಿ ಬಾಳುವ, ಪ್ರತಿಭಾ ಸಂಪನ್ನರಾಗಿ ಬೆಳೆಯುವ ಪ್ರಸನ್ನ ನಾಗರಿಕರಾಗಿ ಸೇವೆ ಸಲ್ಲಿಸುವ ಘನ ವ್ಯಕ್ತಿಗಳು ಸಾಂಘಿಕ ಜೀವನದ ಫಲಗಳು, ಅಲ್ಲವೇ ?

ಹಿಂದಿನ ಶಾಲೆಗಳು ಓದಿನ ಮನೆಗಳಾಗಿದ್ದವು. ಇಂದಿನ ಶಾಲೆಗಳು ಕೃತಿ ಶಾಲೆಗಳಾಗಿವೆ. ನಾಳಿನ ಶಾಲೆಗಳು ಅನುಭವ ಕೂಟಗಳಾಗಲಿವೆ ! ಸಾಂಘಿಕ ಜೀವನವು ಆ ಕೂಟಗಳ ಸೂತ್ರ, ಸಮೂಹ ಮಾಧ್ಯಮಗಳು (Group Dynamics) ಅದರ ತಂತ್ರ. ಈ ಬದಲಾವಣೆಗಳನ್ನು ಶಿಕ್ಷಕರೂ, ಶಿಕ್ಷಣಾಧಿಕಾರಿಗಳೂ, ಶಿಕ್ಷಣ-ನೇತ್ತರೂ ಅರಿಯುವಂತಾಗಲಿ !

◎◎◎

ಕರ್ನಾಟಕದಲ್ಲಿ ಕಲಾ ಶಿಕ್ಷಣ

—ಟಿ. ಪಿ. ಅಕ್ಕಿ

ಕರ್ನಾಟಕವು ಲಲಿತಕಲೆ ಹಾಗೂ ಕುಶಲ ಕಲೆಗಳಿಂದ ಪ್ರಾಚೀನ ಕಾಲ ದಿಂದಲೂ ಪ್ರಸಿದ್ಧಿಯನ್ನು ಪಡೆದಿದೆ. ಹಿಂದಿನ ಐತಿಹಾಸಿಕ ಪ್ರಸಿದ್ಧಿಗೆ,ಗಣ್ಯ ಕಲಾ ವಿದರು ಬಾಳಿ ಬದುಕಿದ ಇಲ್ಲಿ, ಅಚ್ಚರಿಪಡುವಂತಹ ನಮ್ಮ ನಾಡಿನ ಶಿಲ್ಪಗಳೂ, ಚಿತ್ರಗಳೂ ಅದಕ್ಕೆ ನಿದರ್ಶನಗಳಾಗಿವೆ. ಭಾರತೀಯ ಸಂಸ್ಕೃತಿಯನ್ನು ಪ್ರತಿನಿಧಿಸುವ ಅಧಿಕಾರ ಬಹಳಮಟ್ಟಿಗೆ ನಮ್ಮ ಲಲಿತಕಲೆಗಳಿಗೆ ಉಂಟು. ಕಲೆ, ಸಾಹಿತ್ಯ ಕರ್ನಾಟಕ-ದಲ್ಲಿ ಕಾಲಮಾನಕ್ಕನುಸಾರವಾಗಿ ಆಯಾ ಕಾಲದ ನಾಗರಿಕತೆ, ಸಂಸ್ಕೃತಿಯ ಪ್ರಭಾವಕ್ಕೊಳಗಾಗುತ್ತ ಬಂದಿದೆ. ಕರ್ನಾಟಕ ಚಿತ್ರಶೈಲಿಯು ಚಿತ್ರಪರಂಪರೆಯು ಬಹು ದೊಡ್ಡ ಸಂಪತ್ತಾಗಿದೆ. ಸುಮಾರು ಐದು ಸಾವಿರ ವರ್ಷದ ಹಿಂದಿನ ಇತಿಹಾಸ ದಲ್ಲಿ ಕಲ್ಲಿನ ಮೂರ್ತಿಗಳು, ಬಂಗಾರ, ಬೆಳ್ಳಿಯ ಆಭರಣಗಳು, ತಾಮ್ರ, ಕಂಚಿನ ಮೂರ್ತಿಗಳು, ಮಣ್ಣಿನ ಆಟಿಗೆಯ ಸಾಮಾನುಗಳು ಕಲ್ಲಿನಲ್ಲಿ ಕೆತ್ತಿದ ಕುಸುರಿನ ಕೆಲಸ, ಗೋಡೆಗಳ ಮೇಲೆ ಪುರಾಣದ ಕತೆಗಳನ್ನು ಚಿತ್ರಿಸುವ ಭಿತ್ತಿ ಚಿತ್ರಗಳನ್ನು ನಾವು ನೋಡಬಹುದಾಗಿದೆ.

ಇಂತಹ ಭವ್ಯ ಕಲಾಕೃತಿಗಳ ಪರಂಪರೆಯನ್ನು ಹೊಂದಿದ ನಾಡಾದ ಕರ್ನಾಟಕದಲ್ಲಿ ಇತ್ತೀಚಿನ ಕೆಲವು ದಶಕಗಳ ಹಿಂದೆ ಕಲೆ ತನ್ನ ಪ್ರಾಶಸ್ತ್ಯವನ್ನು ಕಳೆದುಕೊಳ್ಳುತ್ತ ಬಂತು. ಚಿತ್ರಕಲೆ ಚಿತ್ರಿಸುವವರು, ನಾಟಕ, ನೃತ್ಯ, ಸಂಗೀತ ಮಾಡುವವರು–ಅಭ್ಯಸಿಸುವರು ಬಡವರು, ದುರ್ಬಲರು, ವೇಶ್ಯಾವೃತ್ತಿ ಮಾಡುವವರು ಎಂಬ ಕಲ್ಪನೆ ನಮ್ಮ ಜನರಲ್ಲಿ ಬೇರೂರಿತ್ತು. ಆದರೆ ಇತ್ತೀಚಿನ ಈ ಒಂದು ದಶಕದಲ್ಲಿ ಅದು ಯಾವ ಭೇದವೂ ಇಲ್ಲದಂತೆ ಸ್ವಲ್ಪ ಸ್ವಲ್ಪ ಬೆಳೆಯಲು ಪರಿಶ್ರಮಿಸುತ್ತಿರುವದು ಕಂಡುಬರುತ್ತಿದೆ. ಕಲೆ, ಸಾಹಿತ್ಯ, ನಾಟಕ, ಸಂಗೀತ ಮುಂತಾದ ಲಲಿತಕಲೆಗಳ ಸಂಸ್ಕೃತಿಯ ಪ್ರಸಾರಕ್ಕೆ ಹಾಗೂ ಅಭಿವೃದ್ಧಿಗೆ ಅಕಾಡೆಮಿಗಳು ಹುಟ್ಟಿಕೊಂಡು ತಮ್ಮ ತಮ್ಮ ಕಾರ್ಯ ನಿರ್ವಹಿಸುತ್ತಿವೆ.

ಕಲಾ ಶಿಕ್ಷಣಕ್ಕೆ ಹೆಚ್ಚಿನ ಸ್ಥಾನಮಾನವನ್ನು ರಾಜ್ಯ ಪುನರ್ರಚನೆಯ ಮೊದಲು ಮುಂಬಯಿ–ಕರ್ನಾಟಕ ಪ್ರದೇಶದ ಶಾಲೆಗಳಲ್ಲಿ ನೀಡಲಾಗಿತ್ತು. ಕಲಾಶಿಕ್ಷಣಕ್ಕಾಗಿ

---

*ಶ್ರೀ ಟಿ. ಪಿ. ಅಕ್ಕಿಯವರು ನಿವೃತ್ತ ಕಲಾ ಶಿಕ್ಷಕರು. ಗದಗಿನ ವಿಜಯ ಕಲಾಮಂದಿರದ ನಿರ್ದೇಶಕರು. ಮತ್ತು ಗದಗಿನ ಸಾಮಾಜಿಕ ಸಾಂಸ್ಕೃತಿಕ ಜೀವನದ ನೇತಾರರು. ಕರ್ನಾಟಕ ಲಲಿತಕಲಾ ಅಕೆಡೆಮಿಗೆ ಅಧ್ಯಕ್ಷರೆಂದು ಸರಕಾರ ಇವರನ್ನು ನಾಮಕರಣ ಮಾಡಿದ್ದು, ಕಲಾ ಶಿಕ್ಷಣಕ್ಕೆ ಹೊಸ ಆಯಾಮ ದೊರಕಿಸಲು ಇವರು ಕಾರ್ಯನಿರತರಾಗಿದ್ದಾರೆ.

ವೇಳಾ ಪತ್ರಿಕೆಯಲ್ಲಿ ಸಾಕಷ್ಟು ಅವಧಿ ನೀಡಲಾಗಿತ್ತು. ಡ್ರಾಯಿಂಗ ಗ್ರೇಡ ಪರೀಕ್ಷೆ ಹಾಗೂ ಉಚ್ಚ ಕಲಾ ಪರೀಕ್ಷೆಗಳಿಗಾಗಿ ವಿದ್ಯಾರ್ಥಿಗಳು ಅತ್ಯಧಿಕ ಸಂಖ್ಯೆಯಲ್ಲಿ ಅಭ್ಯಾಸ ಮಾಡುತ್ತಿದ್ದರು. ಇದೇ ರೀತಿ ಮುಂಬೈ ಕರ್ನಾಟಕ ಹಾಗೂ ಹೈದ್ರಾಬಾದ ಕರ್ನಾಟಕದವರು ಅನುಸರಿಸುವದನ್ನು ಗಮನಿಸಿ, ನಮ್ಮ ನವ ಮೈಸೂರ ರಾಜ್ಯದ ವಿದ್ಯಾ ಇಲಾಖೆಯು ಪರೀಕ್ಷಾವಿಭಾಗದವರು ಕಲಾ ಪರೀಕ್ಷೆಗಳನ್ನು ನಡೆಸಹತ್ತಿದರು. ಆದರೂ ಪ್ರಸ್ತುತ ಪರಿಸ್ಥಿತಿಯಲ್ಲಿ ಕಲಾ ಶಿಕ್ಷಣಕ್ಕೆ ಸಿಗಬೇಕಾದ ಪ್ರಾಶಸ್ತ್ಯ ಇನ್ನೂ ಸಿಕ್ಕಿಲ್ಲ ಎಂಬುದು ವಿಷಾದನೀಯ. ಕಲಾಶಿಕ್ಷಣವನ್ನು ಬರಿ ಹೆಸರಿಗಾಗಿ ಶಿಕ್ಷಣದಲ್ಲಿ ಸೇರಿಸಿದ್ದೇವೆ ಎಂದು ಹೇಳುವಂತಾಗಿದೆ ನಮ್ಮ ಪರಿಸ್ಥಿತಿ.

'ಶಿಕ್ಷಣಕ್ಕೆ ತಾಯಿ ಬೇರು ಕಲಾ ಶಿಕ್ಷಣ, Art should be the base of Education' ಎಂದು ಸಾರಿದ ಗ್ರೀಕ ತತ್ವಜ್ಞಾನಿ ಪ್ಲೇಟೋ ಹೇಳಿದಂತೆ ಪ್ರಾಥಮಿಕ ಹಂತದಿಂದ ಹೈಸ್ಕೂಲು, ಕಾಲೇಜು ವಿಶ್ವವಿದ್ಯಾಲಯ ಮಟ್ಟದವರೆಗೆ ಕಲಾ ಶಿಕ್ಷಣ ಕಡ್ಡಾಯವಾಗಬೇಕು. ಪ್ರಾಥಮಿಕ ಹಂತದಲ್ಲಿ, ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಕಲೆ ತೀರ ಅವಶ್ಯ. ನಮ್ಮ ಸರಕಾರ ಕಲಾ ಶಿಕ್ಷಣದ ಬಗೆಗೆ ಈ ದಿಶೆಯಲ್ಲಿ ಆಳವಾಗಿ ಚಿಂತಿಸುವಂತಾಗಬೇಕು. ನಮ್ಮ ನೆರೆಯ ರಾಜ್ಯಗಳಾದ, ಮಹಾರಾಷ್ಟ್ರ, ತಮಿಳು ನಾಡು, ಗುಜರಾತ, ಬಂಗಾಲ, ಆಂಧ್ರಗಳಲ್ಲೆಲ್ಲ ಸರಕಾರ ಕಲಾ ಶಾಲೆಗಳ ಪ್ರಗತಿಗೆ ಸುಮಾರು ಇಪ್ಪತ್ತು ಲಕ್ಷ ರೂಪಾಯಿಗಳ ವೆಚ್ಚ ಮಾಡುತ್ತಿದ್ದಾರೆ. ಅದರ ಸುವ್ಯವಸ್ಥೀಕರಣಕ್ಕಾಗಿ ಕೆಲವಡೆ ಪ್ರತ್ಯೇಕವಾದ ಡೈರೆಕ್ಟರೇಟನ್ನು ಸ್ಥಾಪಿಸಿದ ಕಾರ್ಯ ನಡೆದದ್ದುಂಟು. ಇಂಥ ವ್ಯವಸ್ಥೆ ನಮ್ಮಲ್ಲಿಲ್ಲ. ಕಲಾಭಿವೃದ್ಧಿಯ ಸಾಧನೆಯಲ್ಲಿ ಮೊದಲನೆಯ ಹಂತ ಕಲಾ ಶಿಕ್ಷಣದ ವ್ಯವಸ್ಥೆ. ಮಕ್ಕಳಲ್ಲಿ ಚಿಕ್ಕಂದಿನಿಂದಲೇ ಕಲಾಭಿ-ರುಚಿಯನ್ನು ಬೆಳೆಸುತ್ತ ಬರಬೇಕು. ಅಂದರೆ ಅವರಲ್ಲಡಗಿದ ಕಲೆಗೆ ಚೇತನ ನೀಡು ವಂತಾಗುತ್ತದೆ ಅದಕ್ಕಾಗಿ ಹೆಚ್ಚು ಹೆಚ್ಚು ಕಲಾ ಶಿಕ್ಷಕರನ್ನೂ ತರಬೇತಿಗೊಳಿಸ-ಬೇಕು. ಸುಮಾರು ಮೂವತ್ತಾರು ಸಾವಿರ ಪ್ರಾಥಮಿಕ ಶಾಲೆಗಳನ್ನು ಪಡೆದಿರುವ ನಮ್ಮ ರಾಜ್ಯದಲ್ಲಿ ಕಲಾ ಶಿಕ್ಷಣ ಕಲಿಸುವದಕ್ಕಾಗಿ ಕೇವಲ ಇಪ್ಪತ್ತು ಶಾಲೆಗಳಲ್ಲಿ ಮಾತ್ರ ಕಲಾ ಶಿಕ್ಷಕರು ಇದ್ದಾರೆ. ರಾಜ್ಯದ ದಕ್ಷಿಣ ಕರ್ನಾಟಕದ ಮಾಧ್ಯಮಿಕ ಶಾಲೆಗಳಲ್ಲಿ ಶೇಕಡಾ ೨೦ ರಷ್ಟು ಮಾತ್ರ ಕಲಾ ಶಿಕ್ಷಕರಿದ್ದಾರೆ. ಎಷ್ಟೋ ಕಡೆ ಇನ್ನೂ ಕಲಾ ಶಿಕ್ಷಕರೇ ನೇಮಕಗೊಂಡಿಲ್ಲದಿರುವದು ವಿಷಾದನೀಯ. ಉಳಿದ ವಿಷಯಗಳಂತೆ ಲಲಿತಕಲೆಯೂ ಕೂಡ ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತದಲ್ಲಿ ಪರೀಕ್ಷಾ ವಿಷಯವಾಗಬೇಕು. ಕಾಲೇಜು–ವಿಶ್ವವಿದ್ಯಾಲಯಗಳಲ್ಲಿ ಐಚ್ಛಿಕ ವಿಷಯವಾದರೂ ಆಗುವಂತಾದರೆ, ಕಲೆ ಸ್ವಲ್ಪ ಮಟ್ಟಿಗೆ ಅಭಿವೃದ್ಧಿ ಹೊಂದಲು ಅನುಕೂಲವಾಗುತ್ತದೆ.

ಶಿಕ್ಷಣ ಇಲಾಖೆಯಿಂದ ಮನ್ನಣೆ ಪಡೆದ ಕಲಾಮಂದಿರಗಳು ನಮ್ಮ ರಾಜ್ಯದಲ್ಲಿ ಮೊದಲಿಗಿಂತಲೂ ಈಗ ಹೆಚ್ಚಾಗಿದ್ದರೂ ಇಷ್ಟೊಂದು ಗ್ರಾಮಗಳನ್ನು ಹೊಂದಿರುವ ಅಪಾರ ಜನಸಂಖ್ಯೆಗೆ ಕೇವಲ ೧೩ ಕಲಾ ಮಂದಿರಗಳು ಮಾತ್ರ ಸಾಕಾಗಲಾರವು.

ಇವುಗಳಿಗೆ ಸರಕಾರ ನೀಡುವ ವಾರ್ಷಿಕ ಸಹಾಯಧನ ಕೇವಲ ೩ ಲಕ್ಷ ರೂಪಾಯಿ ಮಾತ್ರ! ಒಂದು ಹೈಸ್ಕೂಲಿಗೆ ಖರ್ಚು ಮಾಡುವ ಹಣಕ್ಕಿಂತಲೂ ಇದು ಬಹಳ ಕಡಿಮೆ. ಹೀಗೆ ಆರ್ಥಿಕ ಅನಾನುಕೂಲತೆಯಿಂದ ಅವು ಬಳಲುವಂತಾದರೆ, ಅವು ವ್ಯವಸ್ಥಿತವಾಗಿ ನಡೆಯಲಾರವು. ಕಲೆಯು ಅಭಿವೃದ್ಧಿ ಹೊಂದಲಾರದು. ಸಾಕಷ್ಟು ತೊಂದರೆಗಳನ್ನು ಅನುಭವಿಸಿ ಕಲಾವಿದರನ್ನು, ಶಿಲ್ಪಿಗಳನ್ನು ನಿರ್ಮಾಣ ಮಾಡುತ್ತ-ಲಿರುವ ಕಲಾಮಂದಿರಗಳಿಗೆ ಉಳಿದ ಶಾಲೆ ಕಾಲೇಜುಗಳಿಗೆ ನೀಡುವಂತೆ ಧನ ಸೌಲಭ್ಯಗಳನ್ನು ಸರಕಾರ ಒದಗಿಸಿಕೊಡಬೇಕು. ಅಂದರೆ ಪ್ರಾಚೀನತೆಯ ಪ್ರಸಿದ್ಧಿಯನ್ನು ಪಡೆದು ನಮ್ಮ ನಾಡಿನ ಕಲೆಯನ್ನು ಉಳಿಸಿಕೊಂಡು ಬರಲು ಹಾಗೂ ಕಲಾ ಶಿಕ್ಷಣ ಸುಧಾರಿಸಲು ಉತ್ತೇಜನ ದೊರೆಯುತ್ತದೆ.

ಸುಮಾರು ೨೫ ಲಕ್ಷ ರೂಪಾಯಿ ವೆಚ್ಚದಲ್ಲಿ ರಾಜ್ಯ ಸರಕಾರ ಉಚ್ಚಕಲಾ ಶಿಕ್ಷಣದ ಅಭಿವೃದ್ಧಿಗಾಗಿ ಬೃಹತ್ ಯೋಜನೆಯೊಂದನ್ನು ಇತ್ತೀಚೆಗೆ ರೂಪಿಸಿದೆ. ಇದು ಸಂತಸದ ವಿಷಯ. ಇದರ ಜೊತೆಗೆ ಇಡೀ ರಾಜ್ಯದಲ್ಲಿ ಒಂದೇ ತರಹದ ಶಿಕ್ಷಣ ಕ್ರಮ, ಪರೀಕ್ಷೆ, ಅಭ್ಯಾಸ ಕ್ರಮ ಹಾಗೂ ಶಿಕ್ಷಣದ ಇತರ ಸಿಬ್ಬಂದಿಗೆ ನೀಡುವಂತೆಯೇ ಕಲಾ ಶಿಕ್ಷಕ ಸಿಬ್ಬಂದಿಯವರಿಗೂ ವೇತನ ಶ್ರೇಣಿ ನೀಡಬೇಕು. ಇಂತಹ ಇನ್ನೂ ಅನೇಕ ಸಮಸ್ಯೆಗಳನ್ನು ಹೊಂದಿರುವ ಕಲಾಕ್ಷೇತ್ರದಲ್ಲಿ ದಿನ ನಿತ್ಯ ಚಿಂತನೆ ಕೈಗೊಳ್ಳುವ ಸಮಾಲೋಚಿಸುವ ಪ್ರತ್ಯೇಕವಾದ ಕಲಾ ನಿರ್ದೇಶಕ ಮಂಡಳಿಯೊಂದನ್ನು ಸರಕಾರ ರಚಿಸಬೇಕು. ಅಂದರೆ ಕಲಾವಿದರು, ಕಲಾಸಕ್ತರು ಚರ್ಚಿಸಿ, ಸಮಾಲೋಚಿಸಿ ಲಲಿತ-ಕಲಾ ಬೆಳವಣಿಗೆಯ ಬಗ್ಗೆ ಶ್ರಮಿಸಲು ಅನುಕೂಲವಾಗುತ್ತದೆ. ಇತರ ರಾಜ್ಯಗಳು ಈಗಾಗಲೇ ನಿರ್ದೇಶಕ ಮಂಡಳಿಯನ್ನೂ ರಚಿಸಿ ಕಾರ್ಯೋನ್ಮುಖವಾಗಿವೆ. ನಮ್ಮಲ್ಲಿ ಇದು ಇಲ್ಲದೇ ಇರುವದರಿಂದಲೇ ಸಮಾಧಾನಕರವಾದ ಕಾರ್ಯ ಕರ್ನಾಟಕದ ಕಲಾ ಶಿಕ್ಷಣ ರಂಗದಲ್ಲಿ ಇನ್ನೂ ನಡೆಯುತ್ತಿಲ್ಲ. ರಾಜ್ಯದ ಕನಿಷ್ಟ ಪ್ರತಿಯೊಂದು ಜಿಲ್ಲೆ-ಗಾದರೂ ಒಂದೊಂದು ಆರ್ಟ ಗ್ಯಾಲರಿಗಳನ್ನು ನಿರ್ಮಾಣ ಮಾಡಬೇಕು. ಅದರಿಂದ ಚಟುವಟಿಕೆಗಳು, ಪ್ರದರ್ಶನಗಳು ಹೆಚ್ಚು ಜೀವಂತಗೊಳ್ಳುತ್ತವೆ. ಈ ದಿಶೆಯಲ್ಲಿ ಕಾರ್ಯ ಮಾಡಲು ಅಕಾಡೆಮಿಯು ಯೋಚಿಸುತ್ತಿದೆ. ಆದರೆ ಸರಕಾರ ಈಗ ಅಕ್ಯಾಡೆಮಿಗೆ ನೀಡುವ ಆರ್ಥಿಕ ನೆರವು ಸಾಲದು, ಅದು ೨೫ ಲಕ್ಷ ರೂಪಾಯಿ-ಗಳಷ್ಟಾದರೂ ಹೆಚ್ಚಾಗಬೇಕು

ಕಲಾಭಿವೃದ್ಧಿಯ ಸಾಧನೆಯಲ್ಲಿ ಮೊದಲನೆಯ ಹಂತ ಕಲಾ ಶಿಕ್ಷಣದ ವ್ಯವಸ್ಥೆಯು ಸುರಳಿತವಾಗಬೇಕು. ವೈಜ್ಞಾನಿಕ, ತಾಂತ್ರಿಕ, ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಮುಂದುವರಿದ ಅನೇಕ ರಾಷ್ಟ್ರಗಳಲ್ಲಿ ಚಿತ್ರಕಲೆ ಮತ್ತು ಕುಶಲಕಲೆಗಳನ್ನು ಪ್ರಾಥಮಿಕ ಶಿಕ್ಷಣದ ಹಂತದಲ್ಲಿಯೇ ಕಡ್ಡಾಯವಾಗಿ ಕಲಿಸುತ್ತಿರುವ ಏರ್ಪಾಡು ಮಾಡಿದ್ದುದರಿಂದ ಅಲ್ಲಿಯ ಆಧುನಿಕ ಶಿಸ್ತಿನ ಸುಸಂಸ್ಕೃತ ಸಮಾಜದ ನಿರ್ಮಾಣಕ್ಕೆ

ಅದು ಅವಶ್ಯಕ ಹಾಗೂ ಅನಿವಾರ್ಯ ಎಂಬುದು ವ್ಯಕ್ತಗೊಳ್ಳುತ್ತದೆ. ಇಂಥ ಯೋಜನೆಯು ಆದಷ್ಟು ತೀವ್ರವಾಗಿ ಜಾರಿಗೆ ಬರುವಂತಾದರೆ, ಕರ್ನಾಟಕದಲ್ಲಿ ಕಲಾ ಶಿಕ್ಷಣ ತನ್ನದೇ ಆದ ಉಜ್ವಲವಾದ ಭವಿಷ್ಯವನ್ನು ಹೊಂದಿ, ಭವ್ಯಪರಂಪರೆಯನ್ನು ಉಳಿಸಿ–ಬೆಳೆಸಿಕೊಂಡು ಬರಲು ನೆರವಾಗಬಲ್ಲದು ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ಮುಂಬಯಿ ಕರ್ನಾಟಕದಲ್ಲಿ ಕನ್ನಡ ಸಸಿಯ ನಿಜವಾದ ಪರಾಮರಿಕೆಯು ಟ್ರೇನಿಂಗ ಕಾಲೇಜಿನ (ಧಾರವಾಡ) ಆವಾರದಲ್ಲಿಯೇ ನಡೆಯಿತು. ಅಲ್ಲಿಯ ಅಧ್ಯಾಪಕರೂ ಶಿಕ್ಷಕ ವಿದ್ಯಾರ್ಥಿಗಳೂ ಕನ್ನಡದ ಪ್ರೇಮವನ್ನು ಮೈಗೂಡಿಸಿ-ಕೊಂಡರು. ಮುಂದಿನ ಗ್ರಂಥ ರಚನೆಗೆ ಅಣಿಯಾದರು. ಚೆನ್ನಬಸಪ್ಪನ ಅನಂತರ ಟ್ರೇನಿಂಗ ಕಾಲೇಜಿಗೆ ಮುಖ್ಯಸ್ಥರಾಗಿ ಬಂದ ಹುಯಿಲಗೋಳ ಭುಜಂಗರಾವ ಮತ್ತು ಅನಂತರದ ಪ್ರಿನ್ಸಿಪಾಲ್, ವೈಸ್ ಪ್ರಿನ್ಸಿಪಾಲ್ ಹಾಗೂ ಇತರ ಅಧ್ಯಾಪಕರೆಲ್ಲರೂ ಕನ್ನಡ ಭಾಷೆ ಸಾಹಿತ್ಯಗಳನ್ನು ಪೋಷಿಸಿ ಕೊಂಡು ಬಂದಿದ್ದಾರೆ. ಅವರಲ್ಲಿ ಅನೇಕರು ಸ್ವತಃ ಪುಸ್ತಕಗಳನ್ನು ರಚಿಸಿದ್ದಾರೆ. ಕಾಲೇಜಿನಲ್ಲಿ ಮೊದಲು ಕಾರಕೂನನಾಗಿದ್ದ ಗುರುಬಸಪ್ಪ ಫಕೀರಪ್ಪ ಹಳಕಟ್ಟಿ ಇವನೂ ಸಹ ಕನ್ನಡ ಗ್ರಂಥ ರಚನೆಗೆ ಮನಸ್ಸುಗೊಟ್ಟನು. ಇತ್ತ ಶಿಕ್ಷಣ ಖಾತೆಯ ಡೆಪ್ಯುಟಿ; ಅಸಿಸ್ಟಂಟ ಇನಸ್ಪೆಕ್ಟರರು ಚೆನ್ನಬಸಪ್ಪನು ಹಾಕಿಕೊಟ್ಟಿದ್ದ ಕನ್ನಡ ನಿಷ್ಠೆಯ ಹಾದಿಯಲ್ಲಿಯೇ ಮುನ್ನಡೆದಿದ್ದಾರೆ.

ಡಾ॥ ಶ್ರೀನಿವಾಸ ಹಾವನೂರ

'ಹೊಸಗನ್ನಡ ಅರುಣೋದಯ'ದಿಂದ

ಅಂಗವಿಕಲರ ಶಿಕ್ಷಣ ಮತ್ತು ಪುನರ್‌ನಿವೇಶನ

—ಮ. ಗು. ಹಂದ್ರಾಳ

೧೯೮೧ ಅಂಗವಿಕಲರ ಅಂತರ್‌ರಾಷ್ಟ್ರೀಯ ವರುಷ. ಇಡೀ ವಿಶ್ವವೇ ಅಂಗ ವಿಕಲರ ಬಗೆಗೆ ಚಿಂತಿಸತೊಡಗಿದೆ. ಇದೊಂದು ಜಾಗತಿಕ ಸಮಸ್ಯೆಯಾಗಿ ಪರಿಣಮಿಸಿದೆ. ಈಗಲಾದರೂ ಇಂಥ ದೀನರ-ದುರ್ಬಲರ ಸಮಸ್ಯೆಯತ್ತ ಜಗತ್ತು ತೀವ್ರ ಗಮನವನ್ನು ಹರಿಸಿದೆಯಲ್ಲ! ಈ ಜಾಗ್ರತಿ ಮೂಡಿದ್ದೇ ಶುಭ ಲಕ್ಷಣ, ಆಧುನಿಕ ಆಶಾಕಿರಣ. ಹಿಂದೆ ಈ ಸಮಸ್ಯೆಗೆ ಶಿಕ್ಷಣ ತಜ್ಞರು ಅಷ್ಟೊಂದು ಗಮನ ಕೊಟ್ಟಿರಲಿಲ್ಲ, ಬೀದಿಯಲ್ಲಿ, ರೈಲು ನಿಲ್ದಾಣದಲ್ಲಿ, ಬಸ್‌ಸ್ಟ್ಯಾಂಡಿನಲ್ಲಿ, ಮಾರ್ಕೇಟ ಕೂಟಗಳಲ್ಲಿ. ದೇವಸ್ಥಾನಗಳಲ್ಲಿ ಅಂಗಹೀನರನ್ನು ನಾವು ನೋಡುತ್ತೇವೆ. ಅವರು ಭಿಕ್ಷುಕರಾಗಿ ಜೀವನ ಸಾಗಿಸುತ್ತಾರೆ. ದೈವಿಕ ಭಾವನೆಯುಳ್ಳವರು ೫ ಅಥವಾ ೧೦ ಪೈಸೆ ದಾನ ಕೊಡುವರು, ಬೇರೆ ಕೆಲವರು ಅನುಕಂಪ ತೋರಿಸುವರು. ಇದರಿಂದ ಅಂಗ ಹೀನರ ಸಮಸ್ಯೆ ಬಗೆ ಹರಿಯುವದಿಲ್ಲ. ಭಿಕ್ಷೆ ಬೇಡುವದು ಸುಲಭ ಕಾರ್ಯ. ಆದರೆ ಅಂಥ ಜನರು ಪರಾವಲಂಬಿಗಳಾಗುವರು. ಸಮಾಜದಲ್ಲಿ ಅವರಿಗೆ ಕೀಳು ಸ್ಥಾನ. ಭಿಕ್ಷಾವೃತ್ತಿ ಕೈಕೊಳ್ಳುವದಕ್ಕಾಗಿಯೇ ಅಂಗಹೀನರಾದವರೂ ಉಂಟು. ಭಿಕ್ಷೆಯಿಂದ ಹಣಗಳಿಸಿ, ಹೆರವರಿಗೆ ಬಡ್ಡಿ ಗಳಿಸುವದಕ್ಕಾಗಿ ಸಾಲಕೊಟ್ಟವರೂ ಉಂಟು, ಬ್ಯಾಂಕಿನಲ್ಲಿ ಹಣ ಇಟ್ಟವರೂ ಉಂಟು. ಇದು ಅಚ್ಚರಿಯಲ್ಲ! ಇದೆಲ್ಲಾ ಸಂಗತಿಯೇ! ಈ ಸಮಸ್ಯೆ ಕುರಿತು ನಮ್ಮ ರಾಜ್ಯದ ವಿಧಾನ ಪರಿಷತ್ತಿನಲ್ಲಿ ನಾನು ಶಾಸಕನಿದ್ದಾಗ ಒಂದು ಪ್ರಶ್ನೆ ಎತ್ತಿದ್ದೆ. ಆಗಿನ ಮಂತ್ರಿಗಳು ಭಿಕ್ಷುಕರ ಪುನರ್‌ನಿವೇಶನಕ್ಕಾಗಿ ಬೆಂಗಳೂರಲ್ಲಿ ಒಂದು ಸಂಸ್ಥೆಯಿದೆ, ಅದು ನಿಧಾನವಾಗಿ ಕೆಲಸ ಮಾಡುತ್ತಿದೆ ಎಂದು ಉತ್ತರ ನೀಡಿದ್ದುಂಟು. ಆದಾಗ್ಯೂ ಈಗಲೂ ಬೆಂಗಳೂರಲ್ಲಾಗಲಿ ಇತರ ಕಡೆಗಳಲ್ಲಾಗಲಿ ಭಿಕ್ಷುಕರ ಹಾವಳಿ ತಪ್ಪಿದೆಯೇ? ಇದು ಭಾರತದ ತುಂಬಾ ಹಬ್ಬಿಕೊಂಡ ಪ್ರಶ್ನೆ. ಕೇಂದ್ರ ಸರಕಾರವೇ ಸೂಕ್ತಕ್ರಮ ಕೈಕೊಳ್ಳಬೇಕು. ಭಿಕ್ಷುಕರನ್ನು ಒಂದೆಡೆ ಕಲೆ ಹಾಕಿ, ಅವರ ಸಾಮರ್ಥ್ಯಕ್ಕನುಗುಣವಾಗಿ, ಉದ್ಯೋಗಕ್ಕೆ ಹಚ್ಚಿ, ಅವರನ್ನು ಸ್ವಾವಲಂಬಿ ನಾಗರಿಕರನ್ನಾಗಿ ಪರಿವರ್ತಿಸುವಂತೆ ಸರಕಾರ ಯೋಜಿಸಬೇಕು, ಸಮಾಜ ಸಹಾಯ ನೀಡಬೇಕು. ಬರಿ ಅನುಕಂಪ, ಅಲ್ಪದಾನ ಇವು ಸೂಕ್ತ ಪರಿಹಾರಗಳಲ್ಲ.

ಇನ್ನು ದುರ್ಬಲ ಮಕ್ಕಳ ಶಿಕ್ಷಣದ ಬಗೆಗೆ ವಿಚಾರಿಸೋಣ, ಇಂಥ ಮಕ್ಕಳನ್ನು ಮೂರು ಗುಂಪುಗಳನ್ನಾಗಿ ವಿಂಗಡಿಸಬಹುದು :

(೧) ಅಂಗವಿಕಲರು : ಕುರುಡರು, ಕಿವುಡರು, ಮೂಕರು, ಊನರಾದವರು, ಅಶಕ್ತರು-ರೋಗ ಪೀಡಿತರು (Physically Handicapped)

(೨) ಮಾನಸಿಕ ವಿಕಲರು : (Mentally Handicapped)

(೩) ಸಾಮಾಜಿಕ ವಿಕಲರು : (Socially Handicapped)

ಕೊನೆಯ ಗುಂಪಿನವರ ಬಗೆಗೆ ಮೊದಲು ವಿಚಾರಿಸುವಾ. ತಮ್ಮ ವರ್ತನೆಯಲ್ಲಿ ವಿಕೃತ ಸ್ವರೂಪ ತೋರಿಸುವಂಥವರೇ ಸಾಮಾಜಿಕ ವಿಕಲರು. ಅವರು ಬಾಲಾಪರಾಧಿಗಳು (Deliquents) ಬಡತನ, ಅಸಹಾಯಕತೆ, ಮತ್ತು ದುಸ್ಸಂಗ–ಇವುಗಳ ಪರಿಣಾಮದಿಂದ ಚಿಕ್ಕ ಬಾಲಕರು ಅಸಾಮಾಜಿಕ ಕಾರ್ಯಗಳಲ್ಲಿ ತೊಡಗಿ ಅಪರಾಧಿಗಳಾಗುವ ಸಂಭವವುಂಟು. ಇಂಥ ಅಪರಾಧಿಗಳನ್ನು ಜುವೆನೈಲ್ ಕೋರ್ಟುಗಳಲ್ಲಿ ವಿಚಾರಣೆ ಮಾಡುವರು. ಆಮೇಲೆ ಅವರನ್ನು ಸಬ್‌ಜೇಲು, ರಿಮಾಂಡಹೋಮ ಅಥವಾ ಬೋರ್‍ಸ್ಟಲ್ ಸ್ಕೂಲುಗಳಲ್ಲಿ ಇಡುವರು. ಅವರಿಗೆ ಓದು–ಬರಹ–ಲೆಕ್ಕ ಮತ್ತು ಕೈಕುಶಲ ಕೆಲಸಗಳನ್ನು, ಬಡಿಗತನ, ಕೃಷಿಕೆಲಸ, ನೆಯ್ಗೆ ಮತ್ತು ಬೆತ್ತದ ಕೆಲಸ–ಮುಂತಾದವುಗಳನ್ನು ಅಲ್ಲಿ ಕಲಿಸಲಾಗುತ್ತಿದೆ. ಅಲ್ಲಿಯ ತರಬೇತಿಯ ಫಲವಾಗಿ ಆ ಬಾಲಕರು ತಕ್ಕ ಮಟ್ಟಿಗೆ ವಿದ್ಯೆ ಪಡೆದು, ಉದ್ಯಮಗಳನ್ನು ಕಲಿತು ಸ್ವಾವಲಂಬಿಗಳಾಗಿ ಉತ್ತಮ ನಾಗರಿಕರಾಗಬೇಕೆಂಬುದು ಇಂಥ ಶಾಲೆಗಳ ಘನವಾದ ಉದ್ದೇಶ. ದುಷ್ಟ ವಿಚಾರಗಳಿಂದ ದೂರವಾಗಿ ಅವರು ಸುಧಾರಿಸಿದ್ದು ತಿಳಿದ ಮೇಲೆ ಅವರನ್ನು ಬಿಡುಗಡೆ ಮಾಡುವರು. ನಾನು ಧಾರವಾಡ ಜಿಲ್ಹೆಯ ಶಿಕ್ಷಣಾಧಿಕಾರಿಯಾಗಿದ್ದಾಗ, ಇಲ್ಲಿಯ ಬೋರ್‍ಸ್ಟಲ್ ಸ್ಕೂಲಿನ ಮೇಲ್ವಿಚಾರಣಾ ಸಮಿತಿಯ ಸದಸ್ಯನಾಗಿದ್ದೆ. ಆಗ ಸುಧಾರಣೆ ಹೊಂದಿದ ಅಪರಾಧಿ ಬಾಲಕರನ್ನು ಶಿಕ್ಷೆಯ ಅವಧಿಗಿಂತ ಆರು ತಿಂಗಳು ಮುನ್ನ ಬಿಡುಗಡೆ ಮಾಡಿದ ಉದಾಹರಣೆಗಳೂ ನನ್ನ ನೆನಪಿನಲ್ಲುಂಟು. ಸರಕಾರವು ಇಂಥ ಬಾಲಾಪರಾಧಿಗಳನ್ನು ತಕ್ಷಣ ಗುರುತಿಸಿ, ಬೋರ್‍ಸ್ಟಲ್ ಸ್ಕೂಲ ರಿಮಾಂಡ-ಹೋಮ ಅಥವಾ ಸಬ್‌ಜೇಲುಗಳಿಗೆ ಸೇರಿಸಿ ಅವರನ್ನು ಸಾಮಾನ್ಯ ನಾಗರಿಕರಾಗುವಂತೆ ನಿಗಾವಹಿಸಬೇಕು. ಸಮಾಜ ಸುಧಾರಕರೂ ಇಂಥ ಬಾಲಕರನ್ನು ಅನಾಥಾಶ್ರಮಗಳಲ್ಲಿ ಇಟ್ಟು, ತಕ್ಕ ಶಿಕ್ಷಣ ಕೊಡಬೇಕು. ಇಲ್ಲವಾದರೆ, ಇಂಥ ಮಕ್ಕಳು ಭಿಕ್ಷುಕರಾಗುವರು. ದುಷ್ಟರ ಸಹವಾಸದಲ್ಲಿ ಬಿದ್ದು ದುಷ್ಟ ಕೃತಿಗಳನ್ನೇ ಮುಂದುವರಿಸುವರು. ಆದ್ದರಿಂದ ಈ ಪ್ರವಾಹ ತಡೆಗಟ್ಟುವದು ಸರಕಾರದ ಹೊಣೆ ಮತ್ತು ಸಮಾಜ ಸುಧಾರಕರ ಪವಿತ್ರ ಕರ್ತವ್ಯ.

ಈಗ ಮನೋದೌರ್ಬಲ್ಯವುಳ್ಳವರ (Mentally Handicapped) ಬಗೆಗೆ ವಿಚಾರಿಸುವಾ. ಬುದ್ಧಿಯಿಲ್ಲದ ಕಡಿಮೆ ದರ್ಜೆಯ ಮಕ್ಕಳಿಗಾಗಿ ವಿಶೇಷ ಗಮನ ಕೊಡುವದು ಅಗತ್ಯ. **ಬುದ್ಧಿ ಮಾಂದ್ಯರನ್ನು** ಹೀಗೆ ವರ್ಗೀಕರಿಸಲಾಗಿದೆ.

(೧) ಬುದ್ಧಿಮಾನ (I. Q.) ೮೫–೭೦ (೨) ದಡ್ಡರು ೭೦-೫೫

(೩) ಮಾನಸಿಕವಾಗಿ ಅಥವಾ ಬುದ್ಧಿಯಿಂದ ತೀರ ದುರ್ಬಲರು–೫೫ ರಿಂದ ಕೆಳಗೆ

ಬುದ್ಧಿ ಮಾಂದ್ಯ ಮಕ್ಕಳ ಬುದ್ಧಿಮಾನವನ್ನು ಅಳೆದು, ಅವರ ಮನೋಗತಿಗೆ ತಕ್ಕಂತೆ ಶಿಕ್ಷಣದ ಏರ್ಪಾಡು ಮಾಡಬೇಕಾಗುತ್ತದೆ. ಇದಕ್ಕಾಗಿ ಮನಶ್ಶಾಸ್ತ್ರಜ್ಞರ ನೆರವು ಪಡೆಯಬೇಕು. ಪ್ರತ್ಯೇಕ ಶಾಲೆಗಳನ್ನೂ ತೆರೆಯುವ ಅಗತ್ಯವುಂಟು. ಇಂಥ ವಿದ್ಯಾರ್ಥಿಗಳು ಇತರ ವಿದ್ಯಾರ್ಥಿಗಳೊಡನೆ ಹೊಂದಿಕೊಳ್ಳಲಾರರು. ಅವರ ವಿಷಯ ಗ್ರಹಣ ಮಂದಗತಿಯಿಂದ ಸಾಗುತ್ತದೆ. ಬಡತನದ ಮೂಲಕ ಪೌಷ್ಟಿಕ ಆಹಾರ ಅವರಿಗೆ ಸಿಗುವದಿಲ್ಲ. ಅನಿಯಮಿತತನ ಕಂಡು ಬರುತ್ತದೆ. ಅಲ್ಲದೆ ಅಂಥವರು ಪಾಲಕರಿಗೆ ಮನೆಗೆಲಸಗಳಲ್ಲಿ ಸಹಾಯ ಮಾಡಬೇಕಾಗುತ್ತದೆ. ಹೀಗಾಗಿ ಅವರ ಅಭ್ಯಾಸ (ಓದು) ಕಡಿಮೆಯಾಗುತ್ತದೆ. ಕಾರಣ ಅವರು ಅಭ್ಯಾಸ ವಿಷಯಗಳಲ್ಲಿ ಹಿಂದೆ ಉಳಿಯುತ್ತಾರೆ. ಪಾಠಗಳು ಅವರಿಗೆ ಚಿತ್ತಾಕರ್ಷಕವಾಗದಿದ್ದರೆ, ಅವರ ಕಲಿಕೆಯು ಕುಂಠಿತವಾಗುತ್ತದೆ. ಇಂಥ ಕಾರಣಗಳನ್ನು ಶಿಕ್ಷಕರು ಗೊತ್ತು ಹಚ್ಚಿ, ಪಾಲಕರ ಸಹಕಾರ ಕೋರಿ, ಪಾಠಗಳು ಆಕರ್ಷಕವಾಗುವಂತೆ ಬದಲಾಯಿಸಿ ಶಿಕ್ಷಣ ಸಾಗಿಸಬೇಕು. ಹೀಗೆ ಮಾಡಿದಲ್ಲಿ ಹಲವು ಬುದ್ಧಿಮಾಂದ್ಯರು ಸಾಮಾನ್ಯರ ಮಟ್ಟಕ್ಕೆ (Normal Level) ತಲುಪುವದು ಸಾಧ್ಯವಿದೆ. ಇಲ್ಲವಾದರೆ, ಅಂಥ ಮಕ್ಕಳು ಶಾಲೆ ತಪ್ಪಿಸುವದು, ಪಾಠಗಳಲ್ಲಿ ಅನಾಸಕ್ತಿ ತೋರಿಸುವದು ಮಾಡಿ, ಕೊನೆಗೆ ಅವರು ಉಡಾಳ ಪ್ರವೃತ್ತಿ ಬೆಳೆಸಿಕೊಂಡು ಬಾಲಾಪ-ರಾಧಿಗಳು (Deliquents) ಆಗುವ ಸಂಭವವೇ ಹೆಚ್ಚು. ಮಧ್ಯಾಹ್ನದ ಉಪಹಾರದ ಯೋಜನೆಯಿಂದ ಕೆಲವು ಇಂಥ ಮಕ್ಕಳು ಸುಧಾರಣೆ ಹೊಂದಿದ್ದಾರೆ. ಕೆಲವು ಮಕ್ಕಳು ಕಲಿಯುವದಕ್ಕೆ ಬೇಸರ ಮಾಡಿಕೊಳ್ಳುವರು, ಶಿಕ್ಷಕರ ಬಗೆಗೆ ಜಿಗುಪ್ಸೆ ತಳೆಯುವರು. ಇದಕ್ಕೆ ಮನೆಯ ವಾತಾವರಣವೂ ಕಾರಣವಿರಬಹುದು. ಮತ್ತೆ ಕೆಲವರಿಗೆ ಸಾಮಾಜಿಕ ವಾತಾವರಣವೂ ಕಾರಣವಿರಬಹುದು. ಇದರಿಂದ ಅವರು ಭಾವನಾತ್ಮಕ ಸ್ಥಿರತೆಯನ್ನು (Emotional Stability) ಕಳೆದುಕೊಳ್ಳುವರು. ಅವರಲ್ಲಿ ಮನಸ್ಸಿನ ತುಮುಲ (Mental Conflict) ಹೆಚ್ಚಾಗುವದು. ಅವರು ವಿಚಾರದಲ್ಲಿ ತೊಡಗು-ವರು. ವಿಚಾರ ಅತಿರೇಕವಾಗಿ ಅವರು ಚಿಂತೆಯ ಚಿತೆಯಲ್ಲಿ ನೊಂದು ಬೆಂಡಾಗುವರು. ಇಂಥ ಮಕ್ಕಳಿಗೆ ದಯಾದೃಷ್ಟಿ ನೀಡಬೇಕು. ಮತ್ತು ಸಹಾನುಭೂತಿ ತೋರಿಸಬೇಕು. ಅಂಥ ಮಕ್ಕಳನ್ನು ವಿಶ್ವಾಸದಲ್ಲಿ ತೆಗೆದುಕೊಳ್ಳಬೇಕು. ಅವರ ಮನಸ್ಸಿನ ಒಳನೋಟ-ವನ್ನು ತಿಳಿಯಲು ಯತ್ನಿಸಬೇಕು. ಅವರ ಮಾನಸಿಕ ಸಮತೋಲವನ್ನು ಮರಳಿ ತರುವಂತೆ ಮಾಡುವುದು ಅಗತ್ಯ (೧) ನಗರಗಳಲ್ಲಿ ಮತ್ತು ದೊಡ್ಡ ಊರುಗಳಲ್ಲಿ **ಶಿಶು ಮಾರ್ಗದರ್ಶನ ಚಿಕಿತ್ಸಾಲಯುಗಳನ್ನು (Child Guidance Clinics)** ಪ್ರಾರಂಭಿಸಬೇಕು. ಪ್ರಗತಿಪರ ದೇಶಗಳಲ್ಲಿ ಇಂಥ ಯೋಜನೆಗಳುಂಟು. ತಪ್ಪುದಾರಿ ತುಳಿಯುವ ಮಕ್ಕಳನ್ನು ಒಳ್ಳೇ ದಾರಿಗೆ ತರುವದಕ್ಕಾಗಿ, ಮನಸ್ಸಿನ ತೂಕವನ್ನು ಕಳೆದುಕೊಂಡವರು ಸಮ ಬುದ್ಧಿಗೆ ಬರುವಂತೆ, ಯತ್ನಗಳನ್ನು ಮಾಡ-ಬೇಕು. ಇಲ್ಲವಾದರೆ, ಅಂಥ ಮಕ್ಕಳು ಅಪರಾಧಿಗಳಾಗುವರು. ನಮ್ಮ ದೇಶದಲ್ಲಿ ಇಂಥ ವ್ಯವಸ್ಥೆಗಳನ್ನು ದೊಡ್ಡ ಪಟ್ಟಣಗಳಲ್ಲಿಯಾದರೂ ಮಾಡುವದು ತೀರ ಅಗತ್ಯ.

(೨) ಟ್ರೇನಿಂಗ್ ಕಾಲೇಜುಗಳಲ್ಲಿ ಇಂಥ ವ್ಯವಸ್ಥೆ ಇರಬೇಕು. (೩) ಹುಚ್ಚರ ಆಸ್ಪತ್ರೆ-ಯಲ್ಲಿ ಒಬ್ಬ ಮನಶಾಸ್ತ್ರಜ್ಞ ಇರತಕ್ಕದ್ದು. (೪) ಸಮಾಜ ಸೇವಾ ಸಂಸ್ಥೆಗಳಲ್ಲಿ ಇಂಥ ವಿದ್ಯಾರ್ಥಿಗಳನ್ನು ಇಡಬೇಕು. (೫) ಸರಕಾರಿ ಆಸ್ಪತ್ರೆಗಳಲ್ಲಿ ಇಂಥ ವಿದ್ಯಾರ್ಥಿಗಳ ಚಿಕಿತ್ಸೆಗೆ ಅವಕಾಶವಿರಬೇಕು. ಕೊನೆಯದಾಗಿ, **ಅಂಗವಿಕಲರ ಬಗೆಗೆ (Physically Handicapped)** ವಿಚಾರಿಸೋಣ, ಇಂಥವರಲ್ಲಿ ಮೂರು ಗುಂಪುಗಳನ್ನು ಮಾಡಬಹುದು :

(೧) ಶಕ್ತಿ ಕುಂದಿದ ಮಕ್ಕಳು (೨) ಮೇಲಿಂದ ಮೇಲೆ ಬೇನೆ-ಯಿಂದಬಳಲುವ ಮಕ್ಕಳು (೩) ಅಂಗ ಊನ ಮಕ್ಕಳು. ಮೊದಲಿನ ಎರಡು ಗುಂಪುಗಳಲ್ಲಿ ಸೇರುವ ಮಕ್ಕಳಿಗೆ ಸೂಕ್ತ ವೈದ್ಯಕೀಯ ಚಿಕಿತ್ಸೆ-ಗಳನ್ನು ಕೈಕೊಳ್ಳಬೇಕು. **ಅಂಗವಿಕಲರಲ್ಲಿ ಕುರುಡರು, ಕಿವುಡರು, ಮೂಕರು, ತೊದಲಿಸುವವರು** (Stammerers) ಮತ್ತು ಕುಂಟರು ಎಂದು ವರ್ಗೀ-ಕರಣ ಮಾಡಬಹುದು. ಅಮೇರಿಕೆಯಲ್ಲಿ ಇಂಥ ಮಕ್ಕಳ ಬಗೆಗೆ ಹೆಚ್ಚು ವಿಚಾರ ಮಾಡಿ, ಚಿಕಿತ್ಸಾ ಸಾಧನೆಗಳನ್ನು (Remidial Aids) ಕಂಡುಹಿಡಿ-ದಿದ್ದಾರೆ. ಜನಗಣತಿಯ ಕಾಲಕ್ಕೆ ಇಂಥ ಜನರ ಎಣಿಕೆಯನ್ನೂ ಮಾಡಲಾಗುತ್ತಿದೆ. ಅಮೇರಿಕೆಯ ಒಂದು ಜನಗಣತಿ (Census) ಯಿಂದ ಅಂಗವಿಕಲರು ಪ್ರತಿಶತ ಆರರಷ್ಟು ಮತ್ತು ಮನೋದುರ್ಬಲರು ಪ್ರತಿಶತ ಮೂರರಷ್ಟು ಇದ್ದರೆಂದು ತಿಳಿದುಬರುತ್ತದೆ. **ಅಂಗವಿಕಲರೂ ಜೀವನದಲ್ಲಿ ಸಮಾನ ಸುಖಸೌಕರ್ಯಗಳನ್ನು ಪಡೆಯಬೇಕಲ್ಲವೇ? ಇದು ಮಾನವೀಯತೆಯ ಗುರಿ.**

ಸಾಧನೆಗಳು : (೧) ಕುರುಡರಿಗಾಗಿ "**ಬ್ರೈಲ್**"–ಲಿಪಿ, (೨) ಕಿವುಡರಿಗಾಗಿ ಶ್ರುತಿಯಂತ್ರಗಳು (Hearing Aids) ಶ್ರುತಿವರ್ಧಕಗಳು (Electronic Amplifires) ಮತ್ತು ದೃಶ್ಯವಾಣಿಗಳು (Electric Visual Aids).

(೩) ಕೈಕಾಲು ಊನವುಳ್ಳವರಿಗೆ ಕೃತಕ ಅವಯವಗಳ ಪೂರೈಕೆ ಮತ್ತು ಚಿಕಿತ್ಸಾಲಯಗಳು (Orthopaedics)

ಮಿಸ್ ಹೆಲನ್ ಕೆಲರ ಎಂಬ ಅಮೇರಿಕೆಯ ಮಹಿಳೆಯ ಹೆಸರು ಜಗತ್ ಪ್ರಸಿದ್ಧವುಂಟು. ನೀವು ಕೇಳಿರಬಹುದು, ಆಕೆ ಹುಟ್ಟಿನಿಂದ ಕುರುಡಳೂ, ಕಿವುಡಳೂ ಮೂಕಳೂ ಆಗಿದ್ದಳು. ಆದಾಗ್ಯೂ ಆಕೆ ಪಧವೀಧರಳೂ, ಗ್ರಂಥಕರ್ತಳೂ, ಕವಿ-ಯಿತ್ರಿಯೂ ಆದಳು. ಇದೊಂದು ವಿಚಿತ್ರ ಘಟನೆ, ಅಲ್ಲವೆ? ಬ್ರೈಲ್‌ಲಿಪಿಯ ಶೋಧವನ್ನು ಆಕೆಯು ಮಾಡಿರುವಳು. ಭಾರತ ಸರಕಾರದ ಆಮಂತ್ರಣದ ಮೇರೆಗೆ ಆ ಮಹಿಳೆಯು ೧೯೫೬ ರಲ್ಲಿ ನಮ್ಮ ದೇಶವನ್ನು ಸಂದರ್ಶಿಸಿದ್ದಾಳೆ. ಭಾರತ ಸರಕಾರಕ್ಕೆ ಸೂಕ್ತ ಸಲಹೆಗಳನ್ನೂ ನೀಡಿದ್ದುಂಟು.

ಡೆಹರಾಡೂನ್‌ದಲ್ಲಿ ಕೇಂದ್ರಸರಕಾರವು–ಯುದ್ಧದಲ್ಲಿ ತೊಡಗಿ ಕುರುಡರಾದ ಸೈನಿಕರಿಗಾಗಿ– **ಸೇಂಟಡನ್‌ಸ್ಟನ್ ಹೊಸ್ಟೆಲ್** ಎಂಬ ಸಂಸ್ಥೆಯನ್ನು ಪ್ರಾರಂಭಿಸಿದ್ದಾರೆ. ಈ ಸಂಸ್ಥೆಯು ಬ್ರೇಲ್‌ಲಿಪಿಯನ್ನು ಭಾರತದ ಪ್ರಮುಖ ಭಾಷೆಗಳಲ್ಲಿ ಅಳವಡಿಸಿಕೊಳ್ಳುವ ಕ್ರಮುಗಳನ್ನು ಸಿದ್ಧಗೊಳಿಸಿತು. ಇಂಥ ಸಂಸ್ಥೆಗಳು ಹೆಚ್ಚಾಗಬೇಕು. ಗ್ರೇಟ್‌ಬ್ರಿಟನ್‌ದಲ್ಲಿ–ಕುರುಡ ವ್ಯಕ್ತಿಗಳಿಗಾಗಿ ಒಂದು ಕಾನೂನು (The Blind Persons' Act) ಉಂಟು. ಅದರನ್ವಯ ಕುರುಡ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣಕೊಡಲಾಗುವದು. ಮತ್ತು ಆಮೇಲೆ ಅವರಿಗೆ ನೌಕರಿಯ ಸವಲತ್ತುಗಳನ್ನೂ ನೀಡಲಾಗುವದು. ಈ ಮಾದರಿಗನುಸರಿಸಿ ೧೯೪೪ ರಲ್ಲಿ ಸಾರ್ಜಂಟ ವರದಿಯು ನಮ್ಮ ದೇಶದಲ್ಲಿಯೂ ಅಗತ್ಯವಿದೆ ಎಂದು ಎತ್ತಿ ತೋರಿಸಿದೆ. ನಮ್ಮ ದೇಶದಲ್ಲಿ ಕುರುಡರಿಗಾಗಿ ೧೮೮೭ ರಲ್ಲಿ ಅಮೃತಸರದಲ್ಲಿ ಮೊಟ್ಟಮೊದಲು ಒಂದು ಶಾಲೆ ಸ್ಥಾಪಿಸಲ್ಪಟ್ಟಿತು. ಯುನೆಸ್ಕೊ (UNESCO) ಸಿಫಾರಸುಗಳ ಪ್ರಕಾರ ಭಾರತೀಯ ಬ್ರೇಲ್‌ಲಿಪಿಯು ಸುಧಾರಿಸಲ್ಪಟ್ಟಿತು. ಕೇಂದ್ರ ಸರಕಾರದ ಸಲಹಾಸಮಿತಿಯು ನೇಮಿಸಿದ **ತಜ್ಞ ಬ್ರೇಲ್ ಸಮಿತಿಯು** ಈ ಕಾರ್ಯವನ್ನು ಮಾಡಿತು. ಭಾರತ ಸರಕಾರವು ಸೂಕ್ತ ಸಾಹಿತ್ಯ ಒದಗಿಸುವದಕ್ಕಾಗಿ ಕೇಂದ್ರ ಬ್ರೇಲ್ ಅಚ್ಚುಕೂಟವನ್ನು (The Central Braille Printing Press) ಪ್ರಾರಂಭಿಸಿದೆ. ಕುರುಡ ಮಕ್ಕಳಿಗಾಗಿ ವಿಶೇಷ ಶಾಲೆಗಳು ಹೆಚ್ಚೆಚ್ಚಾಗಿ ತೆರೆಯುವದು ಅವಶ್ಯಕ. ಕೇಂದ್ರ ಸರಕಾರದ **೧೯೬೦–೬೧** ರ ವಾರ್ಷಿಕ ವರದಿಯಲ್ಲಿ ಈ ಸಂಗತಿಗಳು ಬಂದಿವೆ :

(೧) ದೇಶದಲ್ಲಿ ಕುರುಡರ ಜನಸಂಖ್ಯೆ ಅಂದಾಜು ೨೦ ಲಕ್ಷ.

(೨) ದೇಶದಲ್ಲಿ ಕಿವುಡರ ಜನಸಂಖ್ಯೆ ಅಂದಾಜು ೭–೮ ಲಕ್ಷ.

(೩) ಮಾನಸಿಕ ವಿಕಲರ ಸಂಖ್ಯೆ ದೊರೆಯುತ್ತಿಲ್ಲ. ಆದಾಗ್ಯೂ ಪ್ರತಿಶತ ೪ ಕುಟುಂಬಗಳಲ್ಲಿ ಇಂಥ ಜನರು ಇರಬಹುದೆಂದು ಹೊಸದೆಹಲಿಯಲ್ಲಿ ಕೈಕೊಂಡ ಮಾದರಿ ಪರಿಶೀಲನೆಯಿಂದ ತಿಳಿಯುತ್ತದೆ.

ಸ್ವಾತಂತ್ರ್ಯಾನಂತರದ ಎರಡು ದಶಕಗಳಲ್ಲಿ ಕಂಡುಬಂದ ಅಂಕಿ ಅಂಶಗಳನ್ನು ಇಲ್ಲಿ ಕೊಡಲಾಗಿದೆ:— (Chart-I)

		ಶಾಲೆಗಳು		ವಿದ್ಯಾರ್ಥಿಗಳು	
ಅ.ನಂ.	ಪ್ರಕಾರ	೧೯೫೬	೧೯೬೬	೧೯೫೬	೧೯೬೬
೧.	ಕುರುಡರು	೪೯	೧೧೫	೨೨೪೫	೫೦೦೦
೨.	ಕಿವುಡರು–ಮೂಕರು	೩೪	೬೦	೨೨೯೦	೪೦೦೦
೩.	ಕೈಕಾಲು ಊನರು	೮	೬೫	೫೫೨	೧೦೦೦
೪.	ಮಾನಸಿಕ ವಿಕಲರು	—	೨೬	೨೨೬	೨೦೦೦
	ಒಟ್ಟು	೯೧	೨೩೬	೫೩೧೪	೧೨೦೦೦

ಕೊಠಾರಿ ಆಯೋಗವು ಈ ಸಮಸ್ಯೆಯನ್ನು ಪರಿಸೀಲಿಸಿದೆ. ೧೯೬೬ ರಲ್ಲಿ ಪ್ರಕಟವಾದ ವರದಿಯಲ್ಲಿ ಕಡ್ಡಾಯ ಶಿಕ್ಷಣದ ವಯೋಮಿತಿಯಲ್ಲಿದ್ದ ಮಕ್ಕಳ ಸಂಖ್ಯೆ: (Chart-II)

ಅ.ನಂ.	ಪ್ರಕಾರ	ಮಕ್ಕಳ ಸಂಖ್ಯೆ
೧.	ಕುರುಡರು	೪,೦೦,೦೦೦
೨.	ಕಿವುಡರು	೩,೦೦,೦೦೦
೩.	ಕೈಕಾಲ ಊನರು	೪,೦೦,೦೦೦
೪.	ಮಾನಸಿಕ ವಿಕಲರು	೧೪,೦೦,೦೦೦
	ಒಟ್ಟು	೨೫,೦೦,೦೦೦

ಮೇಲಿನ ಎರಡೂ ಕೋಷ್ಟಕಗಳಲ್ಲಿಯ ಅಂಕಿ ಅಂಶಗಳನ್ನು ಪರಿಶೀಲಿಸಿದಲ್ಲಿ ಇಂಥ ಮಕ್ಕಳಿಗಾಗಿ ಇದ್ದ ಶಾಲೆಗಳ ಸಂಖ್ಯೆ ತೀರ ಕಡಮೆ ಪ್ರಮಾಣದಲ್ಲುಂಟು ಎಂಬುದು ಸುಸ್ಪಷ್ಟವಾಗಿದೆ. ಹಣದ ಕೊರತೆಯಿಂದ ಇದು ಕಷ್ಟದ್ದು ಎಂದೂ ಹೇಳಬಹುದು. ಆದರೆ ಸರಕಾರ ತಕ್ಕಷ್ಟು ಗಮನ ಕೊಡದಿದ್ದರೆ, ಇಂಥ ಬಡಮಕ್ಕಳೆಲ್ಲ ಭಿಕ್ಷುಕರಾಗುವ ಸಂಭವವೇ ಹೆಚ್ಚು. ದುರ್ಬಲರ ಮಕ್ಕಳು ೧೯೬೬ ರಲ್ಲಿ ೧೨,೦೦೦ ಇದ್ದರು. ೧೯೫೬ರಲ್ಲಿ ೨,೫೦,೦೦೦ ಕ್ಕೆ ಇಂಥ ವಿದ್ಯಾರ್ಥಿಗಳ ಸಂಖ್ಯೆ ಏರಬಹುದೆಂದು ಕೊಠಾರಿ ಆಯೋಗವು ನಿರೀಕ್ಷಿಸಿದೆ.

ಹೊಸದಿಲ್ಲಿಯಲ್ಲಿ ಕುರುಡರಿಗಾಗಿ ರಾಷ್ಟ್ರೀಯ ಸಂಘವು, ಗುಜರಾತದ ಫಾನ್ಸಾದಲ್ಲಿಯ ಕೃಷಿತರಬೇತಿ ಕೇಂದ್ರವು ಉತ್ತಮ ಸೇವೆ ಸಲ್ಲಿಸುತ್ತಿವೆ. ಡೆಹರಾಡೂನದಲ್ಲಿಯ ರಾಷ್ಟ್ರೀಯ ಕೇಂದ್ರವು ಉತ್ತಮ ಸೇವೆ ಮಾಡುತ್ತಲಿದೆ. ಬ್ರೇಲ್ ಸಾಹಿತ್ಯವು ಸಿದ್ಧವಾಗಿ, ಅಲ್ಲಿಂದ ಇತರೆಡೆಗಳಿಗೆ ಕಳಿಸಲಾಗುತ್ತಿದೆ. ಅಲ್ಲದೆ, ಅಲ್ಲಿ ಕುರುಡರಿಗಾಗಿ ಒಂದು ಮಾದರಿ ಶಾಲೆಯೂ ಉಂಟು. ಅಲ್ಲಿ ಪ್ರೌಢ ಕುರುಡರಿಗಾಗಿ ಒಂದು ಟ್ರೇನಿಂಗ ಕೇಂದ್ರವೂ ಉಂಟು. ೧೫೦ ಕುರುಡ ಗಂಡಸರಿಗೆ ಮತ್ತು ೩೫ ಕುರುಡ ಮಹಿಳೆಯರಿಗೆ ಟ್ರೇನಿಂಗ ಕೊಡುವ ವ್ಯವಸ್ಥೆಯುಂಟು. ಈ ಸಂಸ್ಥೆಯು ೧೯೫೦ ರಲ್ಲಿಯೇ ಆರಂಭವಾಗಿದೆ. ಅದರ ಉಪಕೇಂದ್ರಗಳಲ್ಲಿಯೂ ಪುಕ್ಕಟೆ ಶಿಕ್ಷಣ, ವಸತಿ, ಊಟಗಳ ವ್ಯವಸ್ಥೆಯುಂಟು. ನಮ್ಮ ದೇಶದಲ್ಲಿ ಕಿವುಡರಿಗೂ ೭೦ ಕ್ಕಿಂತ ಹೆಚ್ಚು ಶಾಲೆಗಳಿವೆ. ಖಾಸಗೀ ಸಂಸ್ಥೆಗಳೇ ಹೆಚ್ಚು. ಇಂಥ ಶಾಲೆಗಳ ಶಿಕ್ಷಕರನ್ನು ತರಬೇತುಗೊಳಿಸುವ ಎರಡು ಸಂಸ್ಥೆಗಳುಂಟು. ಕಿವುಡರಿಗೂ ವೃತ್ತಿ ಶಿಕ್ಷಣ ಕೊಡಲಾಗುತ್ತಿದೆ. ಈಗ ಶ್ರವಣ ಯಂತ್ರಗಳೂ ಹೆಚ್ಚಾಗಿ ದೊರೆಯುತ್ತಲಿವೆ.

ಕರ್ನಾಟಕ ರಾಜ್ಯದಲ್ಲಿ ಅಂಗವಿಕಲರಿಗಾಗಿ ಮೂರು ಸರಕಾರೀ ಶಾಲೆಗಳುಂಟು: (೧) ಮೈಸೂರು, (೨) ಕಲಬುರ್ಗಿ ಮತ್ತು ಹುಬ್ಬಳ್ಳಿ—ಈ ನಗರಗಳಲ್ಲಿಯ ಈ ಶಾಲೆಗಳಲ್ಲಿ ಉಚಿತ ಶಿಕ್ಷಣ, ಊಟ, ವಸತಿ ಸೌಕರ್ಯಗಳುಂಟು. ಹುಬ್ಬಳ್ಳಿಯ ಶಾಲೆಯನ್ನು ನಾನು ಸಂದರ್ಶಿಸಿದ್ದೇನೆ. ಕುರುಡ ಮಕ್ಕಳು ಬ್ರೇಲ್ ಲಿಪಿಯಲ್ಲಿ ಓದು–ಬರೆಹ ಕಲಿಯುತ್ತಿದ್ದಾರೆ. ಗಣಿತದ ಸುಲಭ ಲೆಕ್ಕಗಳನ್ನು ಅವರು ಕಲಿಯುವರು. ಅಲ್ಲದೆ, ಸಾಮಾನ್ಯ ಜ್ಞಾನವನ್ನು ಒದಗಿಸಲಾಗುವದು. ಭಜನೆ ಮಾಡುವರು, ಭಾವಗೀತೆಗಳನ್ನೂ ರಾಷ್ಟ್ರಗೀತೆಗಳನ್ನೂ ಹಾಡುವರು, ವಾದ್ಯಗಳನ್ನು ನುಡಿಸುವರು. ಸಂಗೀತ ಕಲಿಸುವ ಯೋಜನೆಯೂ ಉಂಟು. ಹೆಣಿಕೆ, ನೆಯ್ಗೆ – ಮುಂತಾದ ಕೈಕುಶಲ ಕೆಲಸಗಳಲ್ಲಿಯೂ ತರಬೇತಿ ಪಡೆಯುವರು. ವಾಕ್ ಸ್ಪರ್ಧೆಯಲ್ಲಿ ಭಾಗವಹಿಸುವರು, ಆಕಾಶವಾಣಿಯಲ್ಲಿಯೂ ಅವರು ಪಾಲುಗೊಳ್ಳುವರು. ಹುಬ್ಬಳ್ಳಿಯ ಮಹಿಳಾ ವಿದ್ಯಾಪೀಠದಲ್ಲಿ ಕುರುಡರ ಶಿಕ್ಷಣಕ್ಕಾಗಿ ಒಂದು ಖಾಸಗೀ ಶಾಲೆಯುಂಟು. ಅದು ಸರದಾರ ವೀರನಗೌಡ ಪಾಟೀಲ ಅವರ ಅನುಕಂಪದ ಪ್ರತೀಕ. ಪಂಡಿತ ಡಾ. ಪುಟ್ಟರಾಜ ಗವಾಯಿ ಅವರು ಗದಗಿನಲ್ಲಿ ಕುರುಡ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಒಂದು ಆಶ್ರಮ ಶಾಲೆಯನ್ನು ನಡೆಸುತ್ತಿರುವರು. ಹೆಸರಾಂತ ಪಂಚಾಕ್ಷರಿ ಗವಾಯಿಗಳ ಪರಮ ಶಿಷ್ಯರು. ಅವರು ಕನ್ನಡ ಮತ್ತು ಹಿಂದೀ ಭಾಷೆಗಳಲ್ಲಿ ಕವನಗಳನ್ನು ನಾಟಕಗಳನ್ನು ಬ್ರೇಲ್ ಲಿಪಿಯಲ್ಲಿ ಬರೆದಿದ್ದಾರೆ. ಇದೊಂದು ಅಚ್ಚರಿಯ ಸಂಗತಿ ಅಲ್ಲವೇ? ಅವರ ಶಿಷ್ಯರು ಸಂಗೀತದಲ್ಲಿಯೂ ಪರಿಣತರಾಗಿದ್ದಾರೆ.

ಹೀಗೆ ಕುರುಡ–ಕಿವುಡ–ಮೂಕ–ಅಂಗಹೀನರಾದ ದುರ್ಬಲ ಹಾಗು ಮಕ್ಕಳ ಶಿಕ್ಷಣಕ್ಕೆ ಸರಕಾರ ಮತ್ತು ಸಮಾಜ ಕೂಡಿಯೇ ಗಮನ ಕೊಡುವದು ತೀರ ಅಗತ್ಯ-ವಾಗಿದೆ. ಮಾನವೀಯತೆಯ ದೃಷ್ಟಿಯಿಂದ ಅನಿವಾರ್ಯವೂ ಆಗಿದೆ. ಇದು ಈಗ ಯಾವದೊಂದು ರಾಜ್ಯದ ಇಲ್ಲವೆ ರಾಷ್ಟ್ರದ ಪ್ರಶ್ನೆಯಾಗಿಲ್ಲ. ಅದು ಜಾಗತಿಕ ಸಮಸ್ಯೆಯಾಗಿ ಪರಿಣಮಿಸಿದೆ. ಅಂತೆಯೇ ಇದು ಅಂಗವಿಕಲರ ಅಂತರ್ ರಾಷ್ಟ್ರೀಯ ವರ್ಷ. ಅವರ ಶಿಕ್ಷಣ ಮತ್ತು ಅವರ ಪುನರ್ ನಿವೇಶನ ಅಂದರೆ ಸಮಾಜದಲ್ಲಿ ಹೊಂದಾಣಿಕೆ (Re-habilition) ಜಗತ್ತಿನ ಗಮನವನ್ನೇ ಸೆಳೆದಿವೆ.

ಅಮೇರಿಕೆಯಲ್ಲಿ Good will Industries ಎಂಬ ಸಂಸ್ಥೆಯುಂಟು. ಅಲ್ಲಿ ಅಂಗವಿಕಲರಿಗೆ ತರಬೇತಿ ಕೊಡುವರು ಹರಿದ ಬಟ್ಟೆಗಳನ್ನು ಹೊಲಿಯುವ, ಖುರ್ಚಿ ಮೇಜು ಮುಂತಾದ ಕಟ್ಟಿಗೆಯ ಸಾಮಾನುಗಳ ದುರಸ್ತಿ ಮಾಡುವ ಕೆಲಸಗಳನ್ನು ಅಲ್ಲಿ ಕಲಿಸುವರು. ಹೀಗಾಗಿ ಅಲ್ಲಿ ದಿನಬಳಕೆಯ ಸಾಮಾನುಗಳೆಲ್ಲ ಸಿದ್ಧವಾಗುತ್ತವೆ. ಮಧ್ಯಮ ತರಗತಿಯ ಜನರು ಹೊಸ ವಸ್ತುಗಳನ್ನು ಕೊಳ್ಳುವದಕ್ಕಿಂತ ಈ ವಸ್ತು-ಗಳನ್ನು ಕೊಳ್ಳುವರು. ಇದು ಅನುಕರಣೀಯ.

ನಮ್ಮ ದೇಶದಲ್ಲಿ ಈ ವರ್ಷ ಹೊಸ ಹುಮ್ಮಸ ತೋರುತ್ತಿದೆ. ರೋಟರಿ ಕ್ಲಬ್ಸ, ಲಾಯನ್ಸ ಕ್ಲಬ್ಸ, ಇತರ ಸೇವಾ ಸಂಸ್ಥೆಗಳು ಅಂಕವಿಕಲರ ಪುನರ್ ನಿವೇಶನಕ್ಕಾಗಿ ಯತ್ನಗಳನ್ನು ನಡೆಸುತ್ತಿವೆ. ರಾಜ್ಯ ಸರಕಾರವೂ ಈ ದಿಸೆಯಲ್ಲಿ ದಿಟ್ಟ ಹೆಜ್ಜೆಗಳನ್ನು ಹಾಕುತ್ತಿದೆ. ಎಲ್ಲ ತರದ ವಿಕಲರ ಸಂಖ್ಯೆ ಹೆಚ್ಚುತ್ತಲಿದೆ. ಮಾನಸಿಕ ವಿಕಲರಿಗೋಸ್ಕರ ದೊಡ್ಡ ನಗರಗಳಲ್ಲಿ–– Child Guidance Clinics ತೆರೆಯಬೇಕು. ಅಂಧರು ಹೆಚ್ಚು ಪ್ರಮಾಣದಲ್ಲಿ ಇದ್ದಾರೆ. ಅವರಿಗಾಗಿ ಪ್ರತಿ ಜಿಲ್ಲೆಗೆ ಒಂದಾದರೂ ಶಾಲೆ ಇರತಕ್ಕದ್ದು. ಕಿವುಡರಿಗೆ ಮತ್ತು ಮೂಕರಿಗೆ ಶಿಕ್ಷಣ ಕೊಡುವ ಸಂಸ್ಥೆಗಳು ರಾಜ್ಯದ ರೆವ್ಹಿನ್ಯು ವಿಭಾಗಗಳಲ್ಲಿ ತೆರೆಯಲ್ಪಡಬೇಕು. ಕೈಕಾಲು ಊನರಿಗೆ ಕೃತ್ರಿಮ ಅವಯವ-ಗಳು ಬಡವರಿಗೆ ಪುಕ್ಕಟೆಯಾಗಿ ದೊರೆಯುವಂತೆ ಸರಕಾರ ವ್ಯವಸ್ಥೆ ಮಾಡಬೇಕು. ಖಾಸಗೀ ಸಂಸ್ಥೆಗಳು ಅಂಗವಿಕಲರಿಗಾಗಿ ಪ್ರತ್ಯೇಕ ಶಾಲೆಗಳನ್ನು ತೆರೆಯುವದಕ್ಕಾಗಿ ಶಿಷ್ಯವೇತನ, ಸಮವಸ್ತ್ರ, ಸಲಕರಣೆಗಳನ್ನು ಕೊಡುವದಕ್ಕೆ ಸರಕಾರ ಮುಂದೆ ಬರಬೇಕು. ತರಬೇತಿ ಪಡೆದ ಎಲ್ಲ ವಿದ್ಯಾರ್ಥಿಗಳನ್ನು ಸೂಕ್ತ ಉದ್ಯೋಗಗಳಲ್ಲಿ ತೊಡಗಿಸಿ, ಸ್ವಾವಲಂಬಿಗಳನ್ನಾಗಿ ಮಾಡುವದು ಸರಕಾರದ ಹೊಣೆ. ಅಂಥ ವ್ಯವಸ್ಥೆ-ಗಳನ್ನು ತಕ್ಷಣ ಏರ್ಪಡಿಸಿದರೆ ಮಾತ್ರ, ಅಂಗವಿಕಲರ ವರ್ಷ ಅವರಿಗೆಲ್ಲ ಹರುಷವನ್ನು ತರಬಲ್ಲದು.

ಮಾನವೀಯತೆಯ ದೃಷ್ಟಿಯಿಂದ ಅಲ್ಲಲ್ಲಿ ಅಂಗವಿಕಲರಿಗೆ ನೆರವು ನೀಡುವ-ದಕ್ಕಾಗಿ ಸಂಸ್ಥೆಗಳು ಹುಟ್ಟುತ್ತಲಿವೆ. ಹುಬ್ಬಳ್ಳಿಯಲ್ಲಿ ಒಂದು ಸೇವಾ ಸಂಸ್ಥೆಯು ಈಗ ಉತ್ತಮ ಕಾರ್ಯಕ್ರಮಗಳನ್ನು ರೂಪಿಸಿದೆ. ಬೆಳಗಾವಿಯ ಲಾಯನ್ಸ ಕ್ಲಬ್–ಕ್ಯಾನರಾ ಬ್ಯಾಂಕಿನ ನೆರವು ಪಡೆದು–ಅಂಗವಿಕಲರನ್ನು ಸ್ವಾವಲಂಬಿಗಳನ್ನಾಗಿ ಮಾಡಲು ಒಂದು ಯೋಜನೆಯನ್ನು ರೂಪಿಸಿದೆ. ಹೀಗೆ ನಮ್ಮ ರಾಜ್ಯದಲ್ಲಿಯ ಲಾಯನ್ಸ ಹಾಗು ರೊಟೇರಿಯನ್ಸ ಅಂಗವಿಕಲರ ಪುನರ್ ನಿವೇಶನಕ್ಕಾಗಿ ಸೂಕ್ತ ಯೋಜನೆಗಳನ್ನು ರೂಪಿಸಿ, ಕಾರ್ಯೋನ್ಮುಖರಾಗುತ್ತಿರುವುದು ಶುಭ ಲಕ್ಷಣವೇ ಸರಿ ! ರಾಷ್ಟ್ರದಲ್ಲಿ ಮೊದಲ ಬಾರಿಗೆ ಅಂಧರ ಬೆರಳಚ್ಚು ಯಂತ್ರವು **(Braille Type Writer)** ಇದೀಗ ಸಿದ್ಧವಾಗಿದೆ. ನಮ್ಮ ರಾಜ್ಯದ ರಾಜ್ಯಪಾಲರು ರಾಷ್ಟ್ರೀಯ ಅಂಧರ ಕಲ್ಯಾಣ ಸಂಸ್ಥೆಯ ಪ್ರಧಾನ ಪೋಷಕರಾಗಿದ್ದಾರೆ. ಅವರಿಗೆ ಕಾಣಿಕೆಯಾಗಿ ಒಂದು ಯಂತ್ರವನ್ನು ಅದರ ತಯಾರಕರಾದ **"ವೋಲ್ಟಾಸ್"** ಸಂಸ್ಥೆಯು ನೀಡಿದೆ. ಅದನ್ನು ಮಾನ್ಯ ರಾಜ್ಯಪಾಲ– ಗೋವಿಂದ ನಾರಾಯಣ ಅವರು ಸಂತೋಷದಿಂದ ಸ್ವೀಕರಿಸಿದ್ದಾರೆ. ಈ ಯಂತ್ರದಲ್ಲಿ ಸುಮಾರು ೬೫೦ ಬಿಡಿ ಭಾಗಗಳಿವೆ. ಈ ವರ್ಷದಲ್ಲಿ ೧೦೦೦ ಯಂತ್ರಗಳನ್ನು ಸಿದ್ಧಗೊಳಿಸುವ ಯೋಜನೆಯುಂಟು. ಅಂಧರ ಬೆರಳಚ್ಚು ಯಂತ್ರದ ಹೆಸರು— **'ತಾಜ'.**

ನಮ್ಮ ದೇಶದಲ್ಲಿ ಅಂತಾರಾಷ್ಟ್ರೀಯ ಅಂಗವಿಕಲರ ವರ್ಷದ ನಿಮಿತ್ತ ಇದೇ ವರ್ಷ ಅಂದರೆ (೧೯೮೧-೮೨) ರಲ್ಲಿ ೨೧ ರಾಜ್ಯಗಳು ಅಂಗವಿಕಲರಿಗೆ ಉದ್ಯೋಗಗಳಲ್ಲಿ ಸ್ಥಾನಗಳನ್ನು ಮೀಸಲಾಗಿಡಲು ಮುಂದೆ ಬಂದಿವೆ, ೯ ರಾಜ್ಯಗಳು ಭತ್ತೆಯನ್ನು ಮಂಜೂರ ಮಾಡಿವೆ.

ಗುಜರಾತವು ತನ್ನ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ೫೦೦ ಸ್ಥಳಗಳನ್ನು ತುಂಬುವಾಗ ಶೇಕಡಾ ೦.೫ ರಷ್ಟು ಸ್ಥಳಗಳನ್ನು ಅಂಗವಿಕಲರಿಗೆ ನೀಡಬೇಕೆಂದು ಸುಗ್ರೀವಾಜ್ಞೆಯನ್ನು (Ordinance) ಹೊರಡಿಸಿದೆ. ಅಂಗವಿಕಲರ ಹಿತಚಿಂತನೆಗಾಗಿ ನೇಮುಕವಾಗಿರುವ ಕೇಂದ್ರ ಸಲಹಾ ಸಮಿತಿ ಈ ವಿಷಯವನ್ನು ದಿ. ೩-೧೨-೧೯೮೧ ರಂದು ತಿಳಿಸಿದೆ. ಅಂಗವಿಕಲರ ಸಹಾಯಕ್ಕಾಗಿ ಕಾನೂನನ್ನು ರಚಿಸಲು ನೇಮಕವಾಗಿದ್ದ ತಂಡವು ದಿ. ೮-೧೨-೧೯೮೧ ರಷ್ಟರಲ್ಲಿ ಕಾರ್ಯ ಪೂರ್ತಿಗೊಳಿಸುವದೆಂದು ಅದೇ ಸಲಹಾ ಸಮಿತಿ ತಿಳಿಸಿದೆ. ಈ ವರ್ಷದಲ್ಲಿ ೨ ಕೋಟಿ ರೂಪಾಯಿ ವೆಚ್ಚಮಾಡುವ ಯೋಜನೆಯಿದೆ. ೫೦೦೦ ಅಂಗವಿಕಲರಿಗೆ ಶಿಕ್ಷಣ ಒದಗಿಸುವ ಕಾರ್ಯಕ್ರಮಗಳುಂಟು. ಅವರ ಪುನರ್ ವಸತಿಗಾಗಿ ಹಲವಾರು ಯೋಜನೆಗಳನ್ನು ರೂಪಿಸಲಿದೆ. ನಮ್ಮ ಕೇಂದ್ರ ಸರಕಾರದ ಧ್ಯೇಯ-ಧೋರಣೆಗಳಿಗೆ ಅನುಗುಣವಾಗುವಂತೆ ಕರ್ನಾಟಕ ರಾಜ್ಯವೂ ಸೂಕ್ತ ಕಾರ್ಯಕ್ರಮಗಳನ್ನು ಕೈಕೊಳ್ಳುವದು.

ನಮ್ಮ ರಾಜ್ಯವು ಅಂಗವಿಕಲರಿಗಾಗಿ ವಿಶೇಷ ಯೋಜನೆಯನ್ನು ರೂ. ೩೬ ಲಕ್ಷ ಅಂದಾಜಿನಲ್ಲಿ ಸಿದ್ಧಗೊಳಿಸಿದೆ. ಅಂಗವಿಕಲರು ಸಣ್ಣ ಪುಟ್ಟ ಕೈಗಾರಿಕೆಗಳನ್ನು ಸ್ಥಾಪಿಸುವದಕ್ಕಾಗಿ ಸಾಲದ ರೂಪದಲ್ಲಿ ಮೂಲ ಧನವನ್ನು ಒದಗಿಸುವದು ಒಂದು ಯೋಜನೆ. ವೃತ್ತಿ ತರಬೇತಿಗಾಗಿ ಹಾಗು ಚಿಕಿತ್ಸೆಗಾಗಿ ಬರುವ ಅಂಗವಿಕಲರಿಗಾಗಿ— ಬೆಂಗಳೂರು, ಬೆಳಗಾವಿ ಮತ್ತು ಕಲಬುರ್ಗಿ ನಗರಗಳಲ್ಲಿ ತಂಗುದಾಣಗಳನ್ನು (Guest Houses) ನಿರ್ಮಿಸುವದಕ್ಕೆ ಸರಕಾರ ಒಪ್ಪಿದೆ. ಇವುಗಳ ಸ್ಥಾಪನೆಗೆ ಸಂಘ ಸಂಸ್ಥೆಗಳು ಮುಂದೆ ಬಂದರೆ ಶೇಕಡಾ ೨೦ರಷ್ಟು ಸಹಾಯಧನವನ್ನು ಸರಕಾರ ನೀಡುವದು. ಬೆಂಗಳೂರಿನ ಸ್ವಯಂ ಸೇವಾ ಸಂಸ್ಥೆಯು ಈಗ ಮುಂದೆ ಬಂದಿದೆ. ಇದಕ್ಕಾಗಿ ಉಚಿತ ನಿವೇಶನ ನೀಡಲು ಬಿ. ಡಿ. ಎ. ಒಪ್ಪಿದೆ. ೫ ರಿಂದ ೭ ಲಕ್ಷ ರೂಪಾಯಿ ಸಾಲ ನೀಡಲು ನಗರ ಕಾರ್ಪೊರೇಶನ್ ಮುಂದೆ ಬಂದಿದೆ. ತಂಗುದಾಣ ಸ್ಥಾಪಿಸುವದಕ್ಕೆ ೧೫ ಲಕ್ಷ ರೂಪಾಯಿ ವೆಚ್ಚವಾಗಲಿದೆ. ಹೊಲಿಗೆ, ಮರಗೆಲಸ, ಹಿಟ್ಟಿನ ಗಿರಣಿ, ಎಣ್ಣೆ ಗಿರಣಿ, ಕೈಮಗ್ಗ ಪಾವರಲೂಮ್, ಚಿಕ್ಕ ಮುದ್ರಣ, ಕೋಳಿ ಸಾಕಾಣೆ, ಅಕ್ಕಿ ಗಿರಣಿ, ಹಾಲಿನ ಕೇಂದ್ರ, ನಾರಿನ ಕೈಗಾರಿಕೆ— ಇತ್ಯಾದಿಗಳನ್ನು ಸ್ಥಾಪಿಸಲು ಮುಂದೆ ಬರುವ ಅಂಗಊನರಿಗೆ ರಾಜ್ಯದ ಹಣಕಾಸಿನ ನಿಗಮ (Corporation) ದಿಂದ ಮೂಲಧನವನ್ನು (Capital) ಸಾಲ ರೂಪದಲ್ಲಿ

(Loan) ಒದಗಿಸಲಾಗುವದು. ಮುಂದೆ ತೃಪ್ತಿಕರ ಪರಿಸ್ಥಿತಿ ಪರಿಶೀಲಿಸಿ ಶೇಕಡಾ ೧೫ ರಷ್ಟನ್ನು ಸಹಾಯಧನವಾಗಿ ಪರಿಗಣಿಸಲಾಗುವದು.

ಮೈಸೂರಿನಲ್ಲಿರುವ ಕಿವುಡು ಹಾಗು ಕುರುಡ ಮಕ್ಕಳ ಶಾಲೆಯನ್ನು ಬೇರ್ಪಡಿಸಿ ಅಂಥ ಮಕ್ಕಳಿಗಾಗಿ ಪ್ರತ್ಯೇಕ ಶಾಲೆಗಳನ್ನು ನಡೆಸಲು ಸರಕಾರ ತೀರ್ಮಾನಿಸಿದೆ. ಪ್ರತ್ಯೇಕ ಸಿಬ್ಬಂದಿ ವೆಚ್ಚಕ್ಕಾಗಿ ೧.೭ ಲಕ್ಷ ರೂಪಾಯಿ ಮಂಜೂರು ಮಾಡಲಾಗಿದೆ.

ಬಳ್ಳಾರಿಯಲ್ಲಿ ಕಿವುಡು ಮಕ್ಕಳಿಗಾಗಿ ವಸತಿ ಶಾಲೆಯನ್ನು ಪ್ರಾರಂಭಿಸಲಾಗಿದೆ. ಕಲಬುರ್ಗಿಯಲ್ಲಿಯ ಕುರುಡ ಮಕ್ಕಳ ಶಾಲೆಗೆ ಹೆಚ್ಚಿನ ತರಗತಿಗಳನ್ನು ಮಂಜೂರು ಮಾಡಲಾಗಿದೆ. ಮೈಸೂರಿನಲ್ಲಿ ಕುರುಡರಿಗಾಗಿ ಬ್ರೇಲ್ ಮುದ್ರಣಾಲಯವನ್ನು ಮಂಜೂರು ಮಾಡಲಾಗಿದೆ. ಅಂಗವಿಕಲರ ಸಾಕ್ಷ್ಯಚಿತ್ರ ತಯಾರಿಸಲು ಒಂದು ಲಕ್ಷ ರೂಪಾಯಿ ಹಾಗು ಆರು (೬) ಸಾಕ್ಷ್ಯ ಚಿತ್ರ ಖರೀದಿಸಲು ೩೦,೦೦೦ ರೂ. ನೀಡಲಾಗಿದೆ. ರಾಜ್ಯ ಮಟ್ಟದ **ಅಂಗವಿಕಲರ ಕ್ರೀಡಾಕೂಟ** ಈಗಾಗಲೇ ಏರ್ಪಡಿಸಲಾಗಿದೆ. ರಾಷ್ಟ್ರ ಮಟ್ಟದ ಕ್ರೀಡಾಕೂಟಕ್ಕೂ ಸ್ಪರ್ಧಿಗಳನ್ನು ರಾಜ್ಯದಿಂದ ಕಳಿಸಲಾಗಿದೆ. ಇವುಗಳಿಗಾಗಿ ೩೪ ಲಕ್ಷ ರೂಪಾಯಿ ವೆಚ್ಚಮಾಡಲಾಗಿದೆ.

ರಾಜ್ಯ ಸರಕಾರ ೩ ಹಾಗು ೪ನೇ ದರ್ಜೆ ಹುದ್ದೆಗಳಲ್ಲಿ ಅಂಗವಿಕಲರಿಗೆ ಈ ವರ್ಷದಿಂದ ಇನ್ನು ಶೇಕಡಾ ೨ರಷ್ಟು ಹೆಚ್ಚು ಮಾಡಿದೆ— ಅಂದರೆ ಶೇಕಡಾ ೪ರಷ್ಟು ಸ್ಥಾನಗಳನ್ನು ಮೀಸಲಾಗಿ ಇಡಲಾಗುವದು. ಪ್ರಥಮ ಹಾಗು ದ್ವಿತೀಯ ದರ್ಜೆ ಗೆಜೆಟೆಡ್ ಹುದ್ದೆಗಳಲ್ಲಿ ಕೆಲವು ಸ್ಥಾನಗಳನ್ನು ಮೀಸಲಾಗಿಡುವ ಸಂಭವವೂ ಉಂಟು. ಹೀಗಾಗಿ ನಮ್ಮ ರಾಜ್ಯ ಸರಕಾರವು ಅಂಗವಿಕಲರ ಹಿತರಕ್ಷಣೆಗಾಗಿ ಪ್ರತಿ ವರ್ಷ ಒಂದೂವರೆ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡುವ ಯೋಜನೆಯನ್ನು ದಿನಾಂಕ ೩೧-೧೨-೧೯೮೧ ರಂದು ಪ್ರಕಟಿಸಿದೆ. ಇದು ಸ್ತುತ್ಯ ಉಪಕ್ರಮ. ಅಂಗವಿಕಲರ ವರುಷವು ಅಂಗವಿಕಲರಿಗೆ ಹರುಷವನ್ನು ತರಲಿ! ಅಂಗಶುದ್ಧ ಶಿರಿವಂತರು ಅಂಗ ವಿಕಲರ ಕ್ಷೇಮಕ್ಕಾಗಿ ತನು-ಮನ-ಧನ ಸಹಾಯ ನೀಡುವಂತಾಗಲಿ! ಈ ಪ್ರವಾಹ ನಿರಂತರ ಮುಂದೆ ಸಾಗಲಿ!

ಬರಲಿರುವ ಭಾರತೀಯ ಶಿಕ್ಷಣ

—ಲೇ. ವ್ಹಿ. ಜಿ. ಮಾರಿಹಾಳ

> All education springs from images of future, and all education creates images of the future.
>
> —*Toffler*

೧. ಪೀಠಿಕೆ :

ಈ ದೇಶದ ಬೌದ್ಧಿಕ ಕ್ಷೇತ್ರದಲ್ಲಿ ಅತಿವಿಮರ್ಶೆಗೆ, ಟೀಕೆಗೆ ಕೆಲವೊಮ್ಮೆ ಅವಹೇಳನಕ್ಕೆ ಒಳಗಾಗಿರುವ ವಿಷಯುಗಳಲ್ಲಿ 'ಶಿಕ್ಷಣ'ವು ಮುಖ್ಯವಾಗಿದೆ. ಎಂದೋ ಯಾರಿಗಾಗಿಯೋ ಯೋಜಿಸಲ್ಪಟ್ಟ ಶಿಕ್ಷಣವು ಇಂದಿಗೂ ಮುಂದುವರಿಯುತ್ತಿರುವುದು ಲಾಂಛನಾಸ್ಪದ! ಈ ಪಳೆಯುಳಿಕೆಗೆ, ಇಂದಿನ ಮನ್ವಂತರದ ತೇಪೆಗಳನ್ನು ಹೊಲಿದು ಹೊಸದೊಂದು ಶಿಕ್ಷಣದ 'ಕೌದಿ'ಯನ್ನು ನಾವು ಇತ್ತೀಚೆಗೆ, ಸ್ವಾತಂತ್ರ್ಯನಂತರದಲ್ಲಿ ನಿರ್ಮಿಸಿ ಸೊಗಸುಪಟ್ಟಿದ್ದೇವೆ. ಆದರೆ ಅದು ಇಂದಿನ ತಲೆಮಾರಿಗೆ ಹೊಂದಲಿಲ್ಲ; ಮುಂದಿನ ಜನಾಂಗದ ಬಗ್ಗೆಯೂ ಚಿಂತಿಸಲಿಲ್ಲ. ಈ ಹಿಂದಿನ ನೂರಾರು ವರ್ಷಗಳಲ್ಲಿ ಬ್ರಿಟಿಷರು ನಮಗಾಗಿ ಹಮ್ಮಿದ ಶಿಕ್ಷಣವ್ಯವಸ್ಥೆ ಆಗಬೇಕಾದದ್ದಾಗಿತ್ತು; ಭಾರತ ಇಂದು ಒಂದು ಪ್ರಗತಿಯತ್ತ ದ್ರುತಗತಿಯಲ್ಲಿ ಸಾಗುತ್ತಿರುವ ದೇಶ; ಅದರ ಬೇಕು-ಬೇಡಗಳು ಇಂದು ಬೇರೆ ತೆರನಾದವುಗಳಾಗಿವೆ. ನಮ್ಮ ಆಶೋತ್ತರಗಳು ಬೆಳೆದಿವೆ. ಈ ಹೊಸ ಪರಿಸ್ಥಿತಿಯನ್ನು ಅನುಲಕ್ಷಿಸಿ ಶಿಕ್ಷಣ ಬೆಳೆಯಬೇಕಿತ್ತು; ಬೆಳೆದಿಲ್ಲ.

ನಮ್ಮ ಶಿಕ್ಷಣ ಯಾವುದು ಒಂದೇ ಸಾಮಾಜಿಕ ಗುರಿಯನ್ನು ಅನುಸರಿಸಿ ಮೇಲೇಳಬಾರದು. ಅದರ ಗುರಿ ಬಹುವಿಧ; ನಮ್ಮ ಜನಾಂಗದ ಜೀವನದ ಎಲ್ಲ ಪದರುಗಳಿಗೂ ಅದು ಸಂವಾದಿ. ಅಂದಾಗ ನಮ್ಮ ಶಿಕ್ಷಣ ನಮ್ಮ ದೇಶದಲ್ಲಿ 'ನಿರ್ವಾತ' ಪರಿಸರದಲ್ಲಿ ಬೆಳೆಯಲಾರದು. ಇಲ್ಲಿ ನಮ್ಮ ಭೂತಕಾಲದ ಪರಿಸ್ಥಿತಿಯು ಇಂದಿನ 'ವರ್ತಮಾನ'ಕ್ಕೆ ನಾಂದಿಯಾಯಿತು. ಈ ವರ್ತಮಾನದ ಹಸಿರನ್ನು ಉಂಡು ನಮ್ಮ 'ಭವಿಷ್ಯತ್ತು' ಪರಿಪುಷ್ಟಗೊಳ್ಳಬೇಕು. ಟಾಫ್ಲರ್‌ರ ಮಾತಿನಲ್ಲಿ ಹೇಳಬೇಕೆಂದರೆ ಎಲ್ಲ ಶಿಕ್ಷಣವು ಭವಿಷತ್ತಿನ ಪ್ರತಿಮಾಸಂಕೇತಗಳಿಂದ ಪುಟಿಯುತ್ತದೆ; ಮತ್ತು ಎಲ್ಲ ಶಿಕ್ಷಣವು ಭವಿಷತ್ತಿನ ಪ್ರತಿಮಾಸಂಕೇತಗಳನ್ನು ಸೃಜಿಸುತ್ತದೆ.[೧] ಈ ದಿಸೆಯಲ್ಲಿ

ಶ್ರೀ ವ್ಹಿ. ಜಿ. ಮಾರಿಹಾಳ ಅವರು ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಚನ್ನಮ್ಮನ ಕಿತ್ತೂರಿನ ಅಭಿಮಾನಿ ಕಾರ್ಯಕರ್ತರಾದ ಇವರು ಅಭ್ಯಾಸ ಪೂರ್ಣ ಲೇಖನಗಳು ಮತ್ತು ಶೈಕ್ಷಣಿಕ ಪ್ರಕಟನೆಗಳ ಮೂಲಕ ಶಿಕ್ಷಣ ಕ್ಷೇತ್ರಕ್ಕೆ ಪರಿಚಿತರಾಗಿದ್ದಾರೆ

೧. S. C. Seth— 'Curricula for the 21st Century'; Hindu 15th Dec. 1981.

ನಮ್ಮ ಭವಿಷತ್ತು ಎಲ್ಲದುದಕ್ಕಿಂತಲೂ ಮಹತ್ವದ್ದು. ನಮ್ಮ ಭವಿಷ್ಯತ್ತಿನ ಬಗ್ಗೆ ಚಿಂತನೆ, ಪೂರ್ವಕಾರ್ಯಾಚರಣೆ ಅತ್ಯಂತ ಅಗತ್ಯದ ಮಾತಾಗಿದೆ; ನಮ್ಮ ಭವಿಷ್ಯತ್ತು ಇಂದಿನ ನಮ್ಮ ನಿರ್ಣಯಗಳನ್ನು ನೇರವಾಗಿ ಅವಲಂಬಿಸಿದೆ.

೨. ಪುರಾತನ ಪಾಠ್ಯ ಕ್ರಮ :

ಇಂದು ಈ ದೇಶದಲ್ಲಿ ಶಿಕ್ಷಣದ ಅಂಗಗಳಾಗಿರುವ ಶಾಲೆ–ಕಾಲೇಜು–ವಿಶ್ವ ವಿದ್ಯಾಲಯಗಳು ಭಾರತೀಯ ಪರಂಪರೆಯವಿಲ್ಲವೆಂದು ಒಪ್ಪಿಕೊಳ್ಳಲೇಬೇಕು. ಹಿಂದಿನ ನಮ್ಮ ಗುರುಕುಲಗಳು, ಘಟಿಕಾಸ್ಥಾನಗಳು, ಅಗ್ರಹಾರ, ಬ್ರಹ್ಮಪುರಿ, ಪಾಠಶಾಲೆ, ತೋಟಗಳು ಹಿಂದೆ ಸರಿದು ೧೯ ನೆಯ ಶತಮಾನದಲ್ಲಿ ಈ ಪಾಶ್ಚಾತ್ಯ ಶಿಕ್ಷಣಸಂಸ್ಥೆ-ಗಳು ನಮ್ಮ ದೇಶದಲ್ಲಿ ತಮ್ಮ ಪ್ರಭಾವವನ್ನು ಬೀರಲು ಕಾರಣವಾದವು. ಇಂದು ಅವು ಹಳೆಯವಾಗಿವೆ. ಅಲ್ಲಿ ಕಲಿಸಲ್ಪಡುವ ಪಾಠ್ಯಕ್ರಮ, ಅಭ್ಯಾಸಪತ್ರಿಕೆಗಳು ಹಳೆಯದಾದವು. ಒಂದು ದೃಷ್ಟಿಯಲ್ಲಿ ಇಂದು ನಾವು ಕಲಿಸುವ ಈ ಶಿಕ್ಷಣ ವ್ಯವಸ್ಥೆ ನಮ್ಮ ಪ್ರೀತಿಗಾಗಿ ಇದ್ದು,ಮಕ್ಕಳ ಬೇಡಿಕೆಯನ್ನು ಪ್ರತಿನಿಧಿಸದಿದ್ದುದೊಂದು ಚೋದ್ಯ. ನಮ್ಮ ಶಿಕ್ಷಣವು ನಮಗಾಗಲಿ, ನಮ್ಮ ಪೀಳಿಗೆಗಾಗಲಿ 'ಅಭಿಪ್ರೇರಣೆ' ಯಂತೆ ಕೆಲಸ ಮಾಡಲೇ ಇಲ್ಲ. ಇಂದು ಶಿಕ್ಷಕ–ಹರಳು ಹೋದ ಗೆಜ್ಜೆ! ಅವನು ಕಲಿಸಬೇಕು, ವಿದ್ಯಾರ್ಥಿಗಳು ಕಲಿಯಬೇಕು; ಆದರೆ, ವರ್ಗದಲ್ಲಿ ಕಲಿಯುವಿಕೆ ಯಾವರೀತಿ ನಡೆಯುತ್ತದೆ? ಇಂದಿನ ಈ ಶುಷ್ಕ ಕಲಿಯುವಿಕೆ–ಕಲಿಸುವಿಕೆಗಳು ಬದಲಾಗುವುದು ಅವಶ್ಯವಿಲ್ಲವೆ?

ಭಾರತದ ಶೈಕ್ಷಣಿಕ ವ್ಯವಸ್ಥೆಯು ಈ ಹಿಂದಿನ ನೂರು ವರ್ಷಗಳಲ್ಲಿ ಹಲವಾರು ಸಲ ಪರಿಶೀಲನೆಗೆ ಒಳಗೊಂಡಿದೆ :

ಭಾರತೀಯ ಶೈಕ್ಷಣಿಕ ಆಯೋಗ	೧೮೮೨
ಶೈಕ್ಷಣಿಕ ಆಯೋಗ	೧೯೦೨
ಸ್ಯಾಡ್ಲರ್ ಆಯೋಗ	೧೯೧೭
ರಾಧಾಕೃಷ್ಣನ್ ಆಯೋಗ	೧೯೪೮
ಮೊದಲಿದಾರ ಆಯೋಗ	೧೯೫೨
ಕೊಠಾರಿ ಆಯೋಗ	೧೯೬೪

ಇವಲ್ಲದೆ, ನಾವು ಇನ್ನೂ ಹಿಂದಕ್ಕೆ ಹೋದರೆ, ವುಡ್‌ನ ವರದಿ, (೧೮೫೪), ಹಾರ್ಟಿಗ್ ಸಮಿತಿ (೧೯೨೯), ಸಪ್ರು ಸಮಿತಿ (೧೯೩೪), ಅಬ್ಬೊಟ್ ವುಡ್ ವರದಿ (೧೯೩೬–೩೭), ಸಾರ್ಜಂಟ್ ವರದಿ (೧೯೪೪), ಮುಂತಾದ ಹಲವು ಹನ್ನೆರಡು ವಿದ್ವಾಂಸರ ಗುಂಪುಗಳು ಶಿಕ್ಷಣ ಕ್ಷೇತ್ರವನ್ನು ಹಿಂಜಿ ಅಭ್ಯಸಿಸಿ, ತಮ್ಮ ಅಸಹನೆ

ಯನ್ನು ಕಟುವಾಗಿ ಪ್ರದರ್ಶಿಸಿವೆ. ಈ ಅಹವಾಲು, ಜೆ. ಪಿ. ನಾಯಕರು ೧೯೭೫ ರಲ್ಲಿ ಹೇಳಿದ ಮಾತಿನವರೆಗೂ ಬಂದು ನಿಲ್ಲುತ್ತದೆ ಸೇಠ್‌ರ೨ ಮಾತಿನಲ್ಲಿ ಹೇಳಬೇಕೆಂದರೆ, ಈ ಎಲ್ಲ ಸರ್ವೇಕ್ಷಣಗಳು ಮೂರು ಮಾತುಗಳನ್ನು ಹೇಳುತ್ತವೆ:

೧. ಈ ಎಲ್ಲ ಸಮಿತಿಗಳು ಪ್ರಚಲಿತ ಶಿಕ್ಷಣದ ಬಗ್ಗೆ ತಮ್ಮ ಅತೃಪ್ತಿಯನ್ನು ವ್ಯಕ್ತಪಡಿಸಿವೆ.

೨. ಅವೆಲ್ಲವು ತೀವ್ರವಾದ ಶೈಕ್ಷಣಿಕ ಸುಧಾರಣೆಯ ಬಗ್ಗೆ ವಾದಿಸಿವೆ.

೩. ಅವೆಲ್ಲವೂ ಭವಿಷ್ಯತ್ತಿನ ಶಿಕ್ಷಣದ ಬಗ್ಗೆ ತಮ್ಮ ಆತಂಕವನ್ನು ಪ್ರಕಟಿಸಿವೆ.

೩. ಬರಲಿರುವ ಸಮಾಜದ ಬೇಡಿಕೆಗಳು :

ಮುಂಬರುವ ೨೧ ನೆಯ ಶತಮಾನದ, ನಮ್ಮ ಜನಾಂಗದ ಬೇಡಿಕೆಗಳೇನು ? :

ಕೇವಲ ಜ್ಞಾನಭಾಂಡಾರಿಗಳು ಬೇಕೆ ?

ಅವರೆಲ್ಲ ಅನೇಕ ಮಾಹಿತಿಗಳನ್ನು ಶೇಖರಿಸಿದವರಿರಬೇಕೆ ?

ಪ್ರಜಾಪ್ರಭುತ್ವವನ್ನು ಬಲ್ಲವರಿರಬೇಕೆ, ಬೇಡವೆ ? ಅದರಲ್ಲಿ ವಿಶ್ವಾಸಿಗಳಾಗ ಬೇಕೆ ?

ತಮ್ಮ ಸಮಸ್ಯೆಗಳನ್ನು ತಾವೇ ಪರಿಹರಿಸಿಕೊಳ್ಳುವ ಯೋಗ್ಯತೆ ಅವರಲ್ಲಿ ಇರಬೇಕೆ, ಬೇಡವೆ ?

ನಮ್ಮ ಪರಂಪರೆಯಲ್ಲಿ ಎಷ್ಟನ್ನು ಅವರು ಉಳಿಸಿಕೊಳ್ಳಬೇಕು ?

ಅವರು ಸೃಜನಶೀಲರಾಗಬೇಕೆ ? ನಾವೀನ್ಯತೆಗಳನ್ನು ಬಯಸಬೇಕೆ ? ಪ್ರಯೋಗ ಶೀಲರಾಗುವುದು ಅಗತ್ಯವೇ ?

ಮುಂಬರುವ ಆ ಭವಿಷತ್ತಿನ ಸಮಾಜವು ಸಮೃದ್ಧಿಯನ್ನು ಹೊಂದಿ ಸುಸಂಸ್ಕೃತ ವಾಗಿ ಬಾಳಬೇಕೆ ?

ಈ ರೀತಿಯಲ್ಲಿ ಬರಲಿರುವ ಸಮಾಜವು, ಆರ್ಥಿಕವಾಗಿ ಪರಿಪುಷ್ಟಗೊಳ್ಳಬೇಕು. ಅಲ್ಲಿ ಸಾಮಾಜಿಕ ಸ್ವಾಸ್ಥ್ಯ ನೆಲೆಗೊಳ್ಳಬೇಕು. ರಾಜಕೀಯ ಪ್ರಜ್ಞೆ ಆ ಸಮಾಜದಲ್ಲಿ ಭದ್ರವಾದ ಬುನಾದಿಯನ್ನು ಪಡೆದಿರಬೇಕು. ನೈತಿಕ ಉನ್ನತಿಯು, ಅದರಲ್ಲಿ ಜೀವನಾಡಿಯಾಗಬೇಕು; ಇದಕ್ಕಾಗಿ ನಮ್ಮ ಶಿಕ್ಷಣವು ಸಿದ್ಧವಾಗಬೇಕು. ಶಿಕ್ಷಣ–

೨ S. C. Sheth.— 'Education a Futuristic View,' Journal of Indian Education Vol. III, No. 6. March 1978.

ಸಮಾಜ–ಭವಿಷ್ಯತ್ತು ಇವುಗಳ ಮುಪ್ಪುರಿಯ ನಿರ್ಮಾಣದಿಂದ ಹೊಸ ಜನಾಂಗದ ಬೇಡಿಕೆಗಳು ತ್ವರಿತ ಗತಿಯಲ್ಲಿ ಈಡೇರುವಲ್ಲಿ ಯಾವಸಂದೇಹವಿಲ್ಲ. ಇಂದಿನ ಶಿಕ್ಷಣ ಈ ಹಿಂದಿನ ಇನ್ನೂರು ವರ್ಷಗಳ ಕೂಸು. ಅದು ಬರಲಿರುವ ಸಮಾಜಕ್ಕೆ ಪಥ್ಯ-ವಾಗಲಾರದು. ಇದಕ್ಕಾಗಿ ಬದಲಾದ ಶಿಕ್ಷಣ ವ್ಯವಸ್ಥೆ ಬೇಕು :

ಪಾಠ್ಯಕ್ರಮದಲ್ಲಿ ಬದಲಾವಣೆ

ಶೈಕ್ಷಣಿಕ ಆಡಳಿತದಲ್ಲಿ ಬದಲಾವಣೆ

ಪರಿಸರವನ್ನು ಹೊಂದಿಕೊಂಡು ಬೆಳೆಯುಬಲ್ಲ ಶಿಕ್ಷಣ

ಕಲಿಯುವವನ ಅಭಿಲಾಷೆ, ಆಕಾಂಕ್ಷೆ, ನಿರೀಕ್ಷೆ

ಆಶೋತ್ತರಗಳನ್ನು ಈಡೇರಿಸುವ ಶಿಕ್ಷಣ.

ಯುನೆಸ್ಕೊ ಕಾರ್ಯದರ್ಶಿಯಾಗಿದ್ದ ಶ್ರೀ ರೇನೆಯವರ ಮಾತಿನಲ್ಲಿ ಹೇಳಬೇಕೆಂದರೆ, ಶಿಕ್ಷಣವನ್ನು ಇನ್ನು ಕೇವಲ ಜೀವನದ ಸಿದ್ಧತೆಯೆಂದು ಪರಿಗಣಿಸಬಾರದು; ಆದರೆ ಅದನ್ನು ಜೀವನದ ಒಂದು ಅಂಗವೆಂದು ಪರಿಗಣಿಸಬೇಕು; ಈ ವ್ಯವಸ್ಥೆಯಲ್ಲಿ ಜ್ಞಾನದ ಅವಿರತ ಸಂಗ್ರಹದೊಂದಿಗೆ ಆ ಜ್ಞಾನ, ವಿಚಾರಗಳ ಅಪ್ರತಿಹತ ಪರೀಕ್ಷೆಯು ನಡೆಯ ಬೇಕು;[1] ಈ ದಿಸೆಯಲ್ಲಿ, ನಮ್ಮ ವಿದ್ಯಾರ್ಥಿಗಳು ಬದುಕುವ ಸಾಮರ್ಥ್ಯವನ್ನು ಹೊಂದಬೇಕು; ಅವರು, ಬದಲಾಗುತ್ತಿರುವ ಸಾಮಾಜಿಕ ಪರಿಸರಕ್ಕೆ ತೀವ್ರ ಹೊಂದಿ ಕೊಳ್ಳಬೇಕು; ನಮ್ಮ ಮೌಲ್ಯಗಳ ಪುನರೆಣಿಕೆ ಆಗಬೇಕು; ಈ ದೇಶವು ಉಳಿದ ದೇಶಗಳಿಗಿಂತ ಹಿಂದುಳಿಯಬಾರದು.

೪. ನಮ್ಮ ಯೋಜನೆಗಳು – ನಮ್ಮ ಶಿಕ್ಷಣ :

೧೯೫೦ ರಿಂದೀಚೆಗೆ ನಾವು ೫ ಪಂಚವಾರ್ಷಿಕ ಯೋಜನೆಗಳನ್ನು ಮುಗಿಸಿ-ದ್ದೇವೆ. ಈಗ ೬ ನೆಯ ಪಂಚವಾರ್ಷಿಕ ಯೋಜನೆ ಪ್ರಾರಂಭ. ಅದಕ್ಕಾಗಿ ಅಪಾರ ಹಣವೂ ವ್ಯಯವಾಗಿದೆ :

ಮೊದಲನೆಯ ಪಂಚವಾರ್ಷಿಕ ಯೋಜನೆ	—	೧೫೩	ಕೋಟಿ ರೂಪಾಯಿಗಳು
ಎರಡನೆಯ ಪಂಚವಾರ್ಷಿಕ ಯೋಜನೆ	—	೨೭೩	,, ,,
ಮೂರನೆಯ ಪಂಚವಾರ್ಷಿಕ ಯೊಜನೆ	—	೫೮೯	,, ,,
ನಾಲ್ಕನೆಯ ಪಂಚವಾರ್ಷಿಕ ಯೋಜನೆ	—	೮೨೨.೬೬	,, .,
ಐದನೆಯ ಪಂಚವಾರ್ಷಿಕ ಯೋಜನೆ	—	೩೨೦೦	,, ,,
ಆರನೆಯ ಪಂಚವಾರ್ಷಿಕ ಯೋಜನೆ	—	೩೫೦೦	,, ,,

[1] Bir Singh 'Education in the 1970's; The Education Quarterly, April 1973. Vol. 25, No.I.

ಇತ್ತೀಚಿನ ನಮ್ಮ ಜನಗಣತಿಯ ಪ್ರಕಾರ ನಮ್ಮ ಜನಸಂಖ್ಯೆ ೬೮ ಕೋಟಿ. ಅದಕ್ಕನುಸರಿಸಿ ಕಲಿಯುವವರ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳವಿದೆ. ೨೦೦೧ ನೆಯ ಇಸವಿಗೆ ನಮ್ಮ ಜನಸಂಖ್ಯೆ ಬಹಳಷ್ಟು ಹೆಚ್ಚಾಗುವುದರಲ್ಲಿ ಯಾವ ಸಂದೇಹವಿಲ್ಲ. ನಮ್ಮ ಪಂಚವಾರ್ಷಿಕ ಯೋಜನೆಗಳ ಮುಖಾಂತರ ದೇಶದಲ್ಲಿ ಪ್ರಗತಿ ಬಂದಿದೆ. ಆದರೆ ನಾವು ನಿರೀಕ್ಷಿಸಿದ ಫಲಿತಾಂಶ ಬಾರದಿದ್ದುದೊಂದು ಖೇದಕರ ವಿಷಯ. ನಮ್ಮ ಕನಿಷ್ಟ ಬೇಡಿಕೆಗಳೂ ಕೂಡ ಅವುಗಳಿಂದ ಪೂರೈಸುವದು ಆಗಿಲ್ಲ. ಬಡವರು ಕಡು ಬಡವರಾದರು, ಶ್ರೀಮಂತರು ಹೆಚ್ಚು ಶ್ರೀಮಂತರಾದರು. ಬಡತನದ ರೇಖೆಯ ಕೆಳಗೆ ಆರ್ಥಿಕವಾಗಿ ಶೇಕಡ ೪೦ ಜನ ಉಳಿದರೆ, ಎಲ್ಲ ರೀತಿಯಲ್ಲಿ ಶೇಕಡ ೭೦ ಜನ ಕೆಳಗೆ ಉಳಿದುದು ಇಂದು ಕಂಡುಬಂದ ಸತ್ಯ ಸಂಗತಿಯಾಗಿದೆ.

ಶಿಕ್ಷಣಕ್ಕಾಗಿ ಸಾರ್ವಜನಿಕ ವೆಚ್ಚ ಈ ರೀತಿ ಯೋಜನೆಗಳ ಮುಖಾಂತರ, ಯೋಜನೆಗಳಲ್ಲದೆ, ಉಳಿದ ಮೂಲಗಳಿಂದ ಹೆಚ್ಚುತ್ತಿದ್ದರೂ, ಬೇರೆ ದೇಶಗಳ ಮಾಲಿಕೆಯಲ್ಲಿ ನಮ್ಮದು ತೀರ ಕಳಪೆಯಾಗಿದೆ.೪

ಕೋಷ್ಟಕ : ೧ ಶಿಕ್ಷಣದ ಮೇಲೆ ಸಾರ್ವಜನಿಕ ವೆಚ್ಚ

ದೇಶ		(G. N. P.) ಒಟ್ಟು ರಾಷ್ಟ್ರೀಯ ಉತ್ಪಾದನೆ ಶೇಕಡ
ರಶಿಯಾ	—	೭.೩%
ಅಮೇರಿಕಾ	—	೬.೩%
ಡೆನ್ಮಾರ್ಕ	—	೬.೫%
ಕಾಸ್ಟರಿಕಾ	—	೬.೪%
ನಾರ್ವೆ	—	೬.೩%
ಭಾರತ	—	೪.೭% (ಬೇರೆ ಮೂಲಗಳಿಂದ)

೫. ಶಿಕ್ಷಣಕ್ಕಾಗಿ ವ್ಯಯ :

ಜಾಗತಿಕವಾಗಿ ವಿಚಾರಿಸಿದಾಗ, ಈ ದೇಶದ ಶಿಕ್ಷಣಕ್ಕಾಗಿ ವ್ಯಯಿಸಿದ ಹಣ ಕಡಿಮೆಯೆಂದೇ ಹೇಳಬೇಕು. ತಲಾ ಆದಾಯದ ರೀತಿಯಲ್ಲಿಯೂ ಅದು ಕಡಿಮೆ. ೪ ನೆಯ ಪಂಚವಾರ್ಷಿಕ ಯೋಜನೆಯ ನಂತರದಲ್ಲಿ ನಾವು ನಮ್ಮ ಶೈಕ್ಷಣಿಕ ಯೋಜನೆಯ ಬಗ್ಗೆ ವ್ಯವಸ್ಥಿತವಾಗಿ ವಿಚಾರಿಸುತ್ತಿದ್ದೇವೆಂದರೆ ತಪ್ಪಾಗಲಾರದು.

೪ UNESCO — Learning to be — the world today and tomorrow; UNESCO, Paris, 1972.

ಪ್ರೊ॥ ಮಿರ್ಡಾಲ್‌ರವರು ಯುರೋಪಿನಿಂದ ಈ ದೇಶಕ್ಕೆ ಬಂದು, ಆಗ್ನೇಯ ಏಶಿಯದ ಎಲ್ಲ ದೇಶಗಳ ಪ್ರಗತಿಯನ್ನು ಅಭ್ಯಸಿಸಿದರು. ಅದರ ಫಲಶ್ರುತಿಯಂತೆ ಅವರ ಮೇರು ಕೃತಿ,[೫] ಬಂತು. ಪ್ರಥಮತಃ ನಾವು ಕಂಡುಕೊಂಡ ಸತ್ಯವೆಂದರೆ— 'ಶಿಕ್ಷಣಕ್ಕಾಗಿ ನಾವು ವ್ಯಯಿಸುವ, ಹಣವು ಮಾನವ ಸಂಪನ್ಮೂಲಗಳ ಅಭಿವೃದ್ಧಿಗೆ ಭಾಂಡವಲದ ಹೂಡಿಕೆ' ಎಂಬ ಮಾತು. ಶಿಕ್ಷಣವು ನಮ್ಮ ಎಲ್ಲ ಪ್ರಗತಿಗೆ ತಳಪಾಯವೆಂಬ ಮಾತು ಆಗ ಸತ್ಯವಾಯಿತು. ಅದನ್ನು ನಂಬಿ ತಮ್ಮ ಶಿಕ್ಷಣ ಕ್ಷೇತ್ರದಲ್ಲಿ ಹೊಸ ಯುಗವನ್ನು ತಂದುಕೊಂಡ ದೇಶಗಳು ಈಗ ಪ್ರಗತಿಯ ದಾರಿಯಲ್ಲಿವೆ.

ಈ ಜಾಡಿನಲ್ಲಿ ಯೋಜನೆಗಳ ಮುಖಾಂತರ ವ್ಯಯವಾಗುವ ಹಣದೊಡನೆ, ವರ್ಷದಾದ್ಯಂತವೂ ಯೋಜನೆಗಳಿಂದ ಹೊರಭಾರೆಯಾಗಿ ಸುಮಾರು ೧೩೫೦ ಕೋಟಿ ರೂಪಾಯಿ ಪ್ರತಿವರ್ಷ ವ್ಯಯಿಸಲ್ಪಡುತ್ತದೆ. ಇದೂ ಕೂಡ ಇಂದಿನ ದೃಷ್ಟಿಯಲ್ಲಿ ಕಡಿಮೆಯಾದೀತು ! ಹಣದ ವ್ಯಯದ ಮೊತ್ತವೇ ಈ ಪ್ರಗತಿಯ ಊರುಗೋಲಾಗಲು ಕೆಲವು ತೊಡಕುಗಳೂ ಇವೆ. ಆಕಾಶದೆತ್ತರಕ್ಕೆ ಚಿಮ್ಮುತ್ತಿರುವ ಪೇಟಿ-ಧಾರಣೆಗಳು ನಮ್ಮ ಈ ವೆಚ್ಚಗಳಿಗೆ ಯಾವ ಗಿಡದ ತೊಪ್ಪಲು ? ಸುದೈವಕ್ಕೆ ಈ ದೇಶದ ಕೇಂದ್ರ ಸರಕಾರ ಘಟನಾತ್ಮಕವಾಗಿಯೂ, ಕಳಕಳಿಗಾಗಿಯೂ ಶಿಕ್ಷಣ ಕ್ಷೇತ್ರದಲ್ಲಿ ಮುಕ್ಕಾಲು-ಮೂರುವೀಸೆ ತನ್ನ ಪಾತ್ರವನ್ನು ಸ್ವೀಕರಿಸಿದೆ; ನೇತೃತ್ವವನ್ನು ನಿರ್ವಹಿಸಿದೆ. ಘಟನಾತ್ಮಕವಲ್ಲದಿದ್ದರೂ ಅದರ ಕಾರ್ಯಕ್ಷೇತ್ರ ಒಮ್ಮೆ ವಿಸ್ತರಿಸಲ್ಪಟ್ಟು, ಈಗ್ಯೂ ವಿಸ್ತರಿಸುತ್ತಲೇ ಇದೆ. ಆದರೆ ನಮ್ಮ ನಿರೀಕ್ಷೆಯ ಕಾರ್ಯ ಆಗದೆ ಇರುವುದೊಂದು ದೊಡ್ಡ ನ್ಯೂನತೆ. ಇಂದಿಗೂ ನಾವು ರಾಷ್ಟ್ರೀಯ ಶಿಕ್ಷಣ ಪದ್ಧತಿ ಎಂಬ ಒಂದು ಸಮಗ್ರ ದೇಶದ ಚಿಂತನೆಯನ್ನು ನಿರ್ಧರಿಸದೆ ಇರುವುದು ಕಳವಳಕಾರಿ. ನಮ್ಮ ಎಲ್ಲ ರಾಜ್ಯಗಳು-ಕೇಂದ್ರಾಡಳಿತ ಪ್ರದೇಶಗಳು, ಮತ್ತು ಕೇಂದ್ರ ಸರಕಾರಗಳು ಈಗ ಏಕ ರೂಪದಲ್ಲಿ ಚಿಂತನೆ ಮಾಡಿ ಒಂದು ನಿಶ್ಚಿತ ಕಾರ್ಯಕ್ರಮಕ್ಕೆ ಬರುವುದು ಸೂಕ್ತ. ೨೦೦೧ ನೆಯ ವರ್ಷದ ವಿದ್ಯಾರ್ಥಿಗಳಿಗಾಗಿ, ಅಂದಿನ ಸಮಾಜದ ಬೇಡಿಕೆಗಾಗಿ ಈಗ ಪೂರ್ವ ಪ್ರಾಥಮಿಕದಿಂದಲೇ ನಮ್ಮ ಕಾರ್ಯಕ್ಷೇತ್ರ ಪ್ರಾರಂಭವಾಗಬೇಕು. ಅಂದು ಪ್ರೌಢರಾಗುವ ಮಕ್ಕಳು ಇಂದು ಸನ್ನದ್ಧರಾಗಬೇಕಲ್ಲವೆ ?

೬. ಯುನೆಸ್ಕೊ ಆಯೋಗದ ವರದಿ[೬] :

ಇತ್ತೀಚಿನ ವರ್ಷಗಳಲ್ಲಿ ಅತ್ಯಂತ ಮಹತ್ವದ ಶೈಕ್ಷಣಿಕ ದಾಖಲೆಯೆಂದರೆ ಎರಡು : ಒಂದು, ನಮ್ಮ ಶೈಕ್ಷಣಿಕ ಆಯೋಗದ ವರದಿ (೧೯೬೪). ಎರಡು,

---

೫ Gunnar Myrdal— The Asian Drama; Allen Lane. The Penguvin Press, London, 1968.

೬ Rene Meheue—Learning to be,— The world of Education today and tommrow; (ಮುನ್ನುಡಿಯಿಂದ) UNESCO, Paris 1972.

ಯುನೆಸ್ಕೊ ಶೈಕ್ಷಣಿಕ ಆಯೋಗದ ವರದಿ. ಯುನೆಸ್ಕೊ ವರದಿಯು ನಮ್ಮ ಜಾಗತಿಕ ಶೈಕ್ಷಣಿಕ ಬೆಳುವಣಿಗೆಯಲ್ಲಿ ನಿಜವಾಗಿಯೂ ಒತ್ತುಕೊಟ್ಟು ಬರೆಯಬಹುದಾದ ಪ್ರಗತಿಪರ ದಾಖಲೆಯಾಗಿದೆ. ಜಾಗತಿಕ ಕ್ಷೇತ್ರದಲ್ಲಿ ಭೀಮವಾಗಿ ಬದುಕಿ, ಚಿಂತನ ಶೀಲರಾದ ಅನೇಕರು ಈ ದಾಖಲೆಗೆ ಜವಾಬ್ದಾರರಾಗಿದ್ದಾರೆ. ಅದರ ಕೆಲವು ಅಂಶ ಗಳನ್ನು ಇಲ್ಲಿ ಪರಾಂಬರಿಸುವುದು ಸುಯೋಗ್ಯವಾಗಿದೆ.

'ಒಂದು ರಾಷ್ಟ್ರದ, ಇಲ್ಲವೆ ಸಮಗ್ರ ಜಗತ್ತಿನ ಏಳಿಗೆಗೆ ಶಿಕ್ಷಣವು ಅಗತ್ಯವಾಗಿದೆ. ಅದರ ಬೆಳುವಣಿಗೆಯಲ್ಲಿ ಅನೇಕ ಸಮಸ್ಯೆಗಳು ಬರುತ್ತವೆ. ಈ ಸಮಸ್ಯೆಗಳಿಗೆ ವಸ್ತು ನಿಷ್ಠ ಪರಿಹಾರಗಳ ಅವಶ್ಯಕತೆ ಇದೆ. ನಮ್ಮ 'ನಿಸ್ಸತ್ವ ಶೈಕ್ಷಣಿಕ ಗುರಿಗಳಿಂದಾಗಿ ನಾವು ಈ ತೊಂದರೆಯಲ್ಲಿದ್ದೇವೆ. ನಮ್ಮ ಮೌಲಿಕ ಗುರಿಯಾಗಿರುವ—ಪೂರ್ಣ ಮಾನವನಿಗಾಗಿ ಶಿಕ್ಷಣ' ಬಂದಿದೆಯೇ? ರೆನೆ[೭]ರವರು ಹೇಳುತ್ತಾರೆ, 'ಶಿಕ್ಷಣವು ಜೀವನಪರ್ಯಂತ ವ್ಯಾಪಿಸಿರಬೇಕು; ಎಲ್ಲರಿಗೂ ದೊರಕಬೇಕು. ಅದು ಪ್ರತಿಯೊಬ್ಬನ ಜೀವನದ ಒಂದು ಅಂಶವಾಗಬೇಕು; ಸಮಾಜದ ಅಭಿವೃದ್ಧಿಯೊಡನೆ, ವ್ಯಕ್ತಿಯ ಆಂತರಿಕ ಶಕ್ತಿಗಳ ಸಾಕ್ಷಾತ್ಕಾರವೂ ಬೇಕು'.

ಶಿಕ್ಷಣವು ನಮ್ಮ ಬದುಕನ್ನು ಶ್ರೀಮಂತಗೊಳಿಸಬೇಕು. ಅದರ ಮುಖಾಂತರ ಜಗತ್ತು ಮಾನವ ಜೀವನಕ್ಕಾಗಿ ಉತ್ತಮಗೊಳ್ಳಬೇಕು. ನಮ್ಮ ಪೀಳಿಗೆಯು ತಮ್ಮ ಭವಿಷ್ಯಜ್ಜೀವನಕ್ಕಾಗಿ ಸನ್ನದ್ಧರಾಗಬೇಕು. ಆ ದಿಸೆಯಲ್ಲಿ ಶಿಕ್ಷಣವು ಒಂದು ಮುಖ್ಯ ವಾದ ಸಾರ್ವತ್ರಿಕ ವಿಷಯವಾಗಬೇಕು. ಈ ಆಯೋಗವು ಹೇಳಿದ ಒಂದು ಮಹತ್ವದ ಚಿರಸ್ಮರಣೀಯ ಮಾತೆಂದರೆ,— ಹಿಂದುಳಿದ ದೇಶಗಳು ಮುಂದುವರಿದ ದೇಶಗಳ ಅನುಕರಣೆ ಮಾಡಬಾರದು, ಎಂದು. ಕೂಂಬ್ಸ್‌ರ[೮] ಮಾತಿನಲ್ಲಿ ಹೇಳಬೇಕೆಂದರೆ, 'ಯಂತ್ರಕೈಗಾರಿಕೆಗಳಲ್ಲಿ ಪ್ರಗತಿಪರವಾಗಿ ಬೆಳೆದ ದೇಶಗಳನ್ನು ಅವುಗಳ ರೂಪ–ರೀತಿಗಳಲ್ಲಿ, ಶೈಕ್ಷಣಿಕವಾಗಿ ಅನುಕರಿಸುವುದರಿಂದ ಪ್ರಗತಿಯನ್ನು ಹೊಂದುತ್ತಿರುವ ದೇಶಗಳು ತೊಂದರೆಗಳಲ್ಲಿ ಬೀಳುವುದು ಸಾಧ್ಯ; ಯಾಕಂದರೆ, ಅವುಗಳ ಪರಿಸ್ಥಿತಿಗಳು ನಮಗೆ ಹೊಂದಲಾರವು' ಇದೇ ಮಾತನ್ನು ಕ್ಯಾಂಡಲ್‌ರು ಇನ್ನೂ ಸ್ಫುಟವಾಗಿ ಹೇಳುವ ಪರಿಯು ನಮಗೆಲ್ಲ ಮಾರ್ಗದರ್ಶಿ. 'ಜರ್ಮನ್ ಶೈಕ್ಷಣಿಕ ಪದ್ಧತಿಯು ಜರ್ಮನ್ ನೆಲದಲ್ಲಿ, ಜರ್ಮನ್[೯] ಬೀಜಗಳಿಂದ ಜರ್ಮನ್ ಸಾಂಸ್ಕೃತಿಕ ಪರಂಪರೆ ಗಳಲ್ಲಿ ಬೆಳೆದುಬರಬೇಕು'.

---

೭ UNESCO — Leaving to be — The world by Schooling today and tommorow, UNESCO Paris 1972.

೮ P. H. Coombs—The world Educational crisis; A. H. Whealer & Co. (P) Ltd. Alhabad, 1968.

೯ I. L. Kandel — The New Era in Education; George G. Harrap & Co. Ltd. London 1954.

ಹೊರದೇಶಗಳ ಅನುಕರಣೆ ಶಿಕ್ಷಣದಲ್ಲಿ ಸಲ್ಲ. ಇಂದಿನ ಜಾಗತಿಕ ಬದಲಾವಣೆಗಳು ಮುಂದಿನ ಜೀವನಕ್ಕೆ ಮಾರಕವಾದವುಗಳಾಗಿವೆ. ನಮ್ಮ ಅಸಮಾನತೆ, ಅಭಾವಗಳು, ನೋವು-ನರಳುವಿಕೆಗಳು, ಮೇಲುವರ್ಗ, ಕೀಳುವರ್ಗ, ಬಡವರು ಬಲ್ಲಿದರು ಮುಂತಾದ ತೊಂದರೆಗಳು ಶಿಕ್ಷಣ ಕ್ಷೇತ್ರಕ್ಕೆ ಆಹ್ವಾನದಂತೆ ಎದುರಾಗಿವೆ. ಹಲವು ಯುರೋಪಿಯನ್ ದೇಶಗಳಲ್ಲಿ ಈಗ ಜನಸಂಖ್ಯೆ ಕುಂಠಿತಗೊಳ್ಳುತ್ತಿದೆ. ಹೆಚ್ಚು ಮಕ್ಕಳನ್ನು ಹೆರಲು ಈಗ ಅಲ್ಲಿ ವಿನಂತಿಗಳಿವೆ. ಆ ಮಾತು ನಮ್ಮ ದೇಶಕ್ಕೆ ಮಾರಕವಾಗುತ್ತದೆ. ಪೌರ್ವಾತ್ಯ ದೇಶಗಳಲ್ಲಿ ನಮ್ಮ ದೇಶದ ಅವಸ್ಥೆ ಬಹುವಿಧ: ಭಾರತ ಕೆಲವು ಅಂಶಗಳಲ್ಲಿ ಪ್ರಗತಿ ಹೊಂದಿದ ದೇಶ. ಇನ್ನು ಕೆಲವು ಅಂಶಗಳಲ್ಲಿ ಅದು ತೀರ ಹಿಂದುಳಿದ ದೇಶ. ಇನ್ನು ಬೇರೆ ಅಂಶಗಳಲ್ಲಿ ಅದು ಅರೆ-ಪ್ರಗತಿಯ ದೇಶ. ಈ ರೀತಿ ಅದರ ಸ್ಥಿತಿ — ಕಲಸು ಮೇಲೋಗರ. ಸಾಕ್ಷರತೆಯನ್ನು ತರಲು, ಶಿಕ್ಷಣದಲ್ಲಿ ಕಡ್ಡಾಯ ಬಂತು. ಪ್ರೌಢ ಶಿಕ್ಷಣ ಈ ದೇಶಕ್ಕೆ ಬಂದು ಸುಮಾರು ನಲವತ್ತು ವರ್ಷಗಳಾದರೂ ಆದಂತಾಯಿತು. ಫಲಿತಾಂಶವೇನು? ಮೊನ್ನಿನ ಜನಗಣತಿ ಹೇಳುವ ಪ್ರಕಾರ, ಶೇಕಡ ೩೪% ಜನ ಈಗ ಸಾಕ್ಷರರು. ಬಹುಸಂಖ್ಯೆ ಜನ ಗ್ರಾಮೀಣ ಪರಿಸರದಲ್ಲಿದ್ದಾರೆ. ಈ ಬಹುಸಂಖ್ಯೆ ನಿರಕ್ಷರಿಗಳನ್ನು ಕಟ್ಟಿಕೊಂಡು ನಾವು ಆರ್ಥಿಕ ಉತ್ಪಾದನೆ ಹೆಚ್ಚಿಸಬೇಕು; ಸಾಮಾಜಿಕ ಸಮತೆಯನ್ನು ತರಬೇಕು; ರಾಜ್ಯಕೀಯ ಪ್ರಜ್ಞೆಯನ್ನು ಹೆಚ್ಚಿಸಬೇಕು. ಸಾಂಸ್ಕೃತಿಕ ವಿಕಾಸವೂ ಬರಬೇಕು. ಈ ದಿಸೆಯಲ್ಲಿ ನಾವು ಪಾಶ್ಚಾತ್ಯರನ್ನು ಅನುಕರಿಸಬಹುದೇ? ಅಮೇರಿಕೆಯಲ್ಲಿ ಯಂತ್ರ ಕೈಗಾರಿಕೆಗಳು ಬೆಳೆದಿವೆ; ಒಕ್ಕಲುತನದಲ್ಲಿಯೂ ಗಣನೀಯ ಬದಲಾವಣೆಗಳು ಬಂದು ಸಮೃದ್ಧಿಯನ್ನು ತಂದಿವೆ. ಉಳಿದವರು ದುಡಿಯಲು ಆ ದೇಶದಲ್ಲಿ ಸೇವಾ (Services) ಕ್ಷೇತ್ರವು ಬಹುದೊಡ್ಡ ಆಸ್ಪದಗಳನ್ನು ನಿರ್ಮಿಸಿ, ಶಿಕ್ಷಣ ಹೊಂದಿದವರನ್ನು ಹೀರಿಕೊಳ್ಳುತ್ತದೆ. ಈ ದೇಶದಲ್ಲಿ ಆ ರೀತಿಯ ಸೇವಾ ಅವಕಾಶಗಳು ಬೆಳೆದಿಲ್ಲ; ಅದಕ್ಕಾಗಿ ಶಿಕ್ಷಿತರ ನಿರುದ್ಯೋಗ ನಮಗೊಂದು ನಿರಂತರ ತಲೆಬೇನೆ! ತುಸು ಹೆಚ್ಚು ಸಂಖ್ಯೆ ಶಿಕ್ಷಣ ಹೊಂದಿದರೆ- ನಿರುದ್ಯೋಗ, ತುಸುವೇ ಕಡಿಮೆಯಾದರೆ ಹಾಹಾಕಾರ! ಈ ಒತ್ತಡಗಳನ್ನು ಎದುರಿಸುವ ಶಕ್ತಿ ನಮ್ಮ ಶಿಕ್ಷಣಕ್ಕೆ ಇಲ್ಲದಾಗಿದೆ.

೭. ಶಿಕ್ಷಣದ ಹಸಿವು:

ಈಗಿರುವ ಅನೇಕ ಬೇಡಿಕೆಗಳಲ್ಲಿ ಶಿಕ್ಷಣದ ಹಸಿವೂ ಒಂದು ಪ್ರಗಲ್ಭವಾಗಿ ಬೆಳೆದು ಬರುತ್ತಿದೆ. ವೈಝಿ ಹೇಳುತ್ತಾರೆ, 'ಶಿಕ್ಷಣಕ್ಕಾಗಿ ಬೇಡಿಕೆ ತ್ವರಿತಗತಿಯಲ್ಲಿ

ಹೆಚ್ಚುತ್ತಲೇ ಇದೆ. ಇದೊಂದು ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆ; ಅದು ಕಾಲ ಕಾಲಕ್ಕೆ ನಮ್ಮ ಸಮಾಜಗಳನ್ನು ಆವರಿಸಿಕೊಳ್ಳುತ್ತದೆ.೧೦ ನಮ್ಮ ಶಿಕ್ಷಣ ಕ್ಷೇತ್ರವು ಇತ್ತೀಚೆಗೆ ದೊಡ್ಡದಾಗಿ ವಿಸ್ತರಿಸಲ್ಪಡುತ್ತಲಿದೆ. ಅದರ ಈ ಹರಹು–ವಿಸ್ತಾರವು ಯಾರನ್ನಾದರೂ ದಿಗಿಲಗೊಳಿಸೀತು. ೧೯೫೭ ರಿಂದೀಚೆಗೆ ಈ ದೇಶದಲ್ಲಿ ಕಡ್ಡಾಯದ ಪ್ರಾಥಮಿಕ ಶಿಕ್ಷಣವು ದೇಶಾದ್ಯಂತ ವ್ಯಾಪಿಸಿತು. ಸರಕಾರಗಳು ಅದಕ್ಕಾಗಿ ಕಾಯ್ದೆ-ಗಳನ್ನು ರೂಪಿಸಿದವು. ಈ ಕಡ್ಡಾಯದ ಪ್ರಾಥಮಿಕ ಶಿಕ್ಷಣವು ೭ ನೆಯ ಇಯತ್ತೆಯ ವರೆಗೂ ಬಂದು ನಿಲುಕಿದಾಗ, ಮಕ್ಕಳಿಗೂ, ಪಾಲಕರಿಗೂ ಮುಂದೆ ಏನು ಮಾಡ ಬೇಕೆಂಬ ಪ್ರಶ್ನೆ ಬಂತು. ಅದರ ಫಲಿತಾಂಶವೇ ಇಂದು ಪ್ರತಿಯೊಂದು ದೊಡ್ಡ ಊರಿಗೆ ಒಂದು ಪ್ರೌಢಶಾಲೆ ಬಂದಿದೆ. ಇಷ್ಟಕ್ಕೇನೇ ತೃಪ್ತರಾಗದ ನಾವು ಈಗ ಜ್ಯೂನಿಯರ್ ಕಾಲೇಜುಗಳನ್ನು ತಂದಿದ್ದೇವೆ. ಈ ಕಾಲೇಜುಗಳು ಸೀನಿಯರ್ ಕಾಲೇಜುಗಳಿಗೆ ದಾರಿ ಮಾಡಿಕೊಟ್ಟಿವೆ. ನಂತರದ ಬೆಳವಣಿಗೆ ಎಂದರೆ, —ಇಂದು ಕನ್ನಡನಾಡಿನಲ್ಲಿ ಐದು ವಿಶ್ವವಿದ್ಯಾಲಯಗಳು ಬಂದಿವೆ. ಈ ಪ್ರವಣತೆ (Trend) ಯೇ ಮುಂದು-ವರಿದರೆ, ಯಾರಿಗೆ ಗೊತ್ತು — ಮುಂದೊಮ್ಮೆ ಜಿಲ್ಹೆಗೊಂದು ವಿಶ್ವವಿದ್ಯಾಲಯವು ಬರಬಾರದೇಕೆ ?

ಕನ್ನಡನಾಡಿನ ಇತ್ತೀಚಿನ ಈ ವಿಸ್ತರಣೆಯು ಅಗಾಧವಾದುದಾಗಿದೆ. ೧೯೫೬ ರಲ್ಲಿ ಕನ್ನಡದ ಬಹುಭಾಗವು ಒಂದು ಆಡಳಿತಕ್ಕೆ ಬಂದ ತರುಣದಲ್ಲಿ ನಮ್ಮ ನಿರೀಕ್ಷೆ ಇಂತಹ ಬೆಳವಣಿಗೆಗಾಗಿ ಇರಬಹುದೆಂಬುದು ಅರ್ಧ ಸತ್ಯ. ಎಲ್ಲರಿಗೂ ಶಿಕ್ಷಣ ಬೇಕಾಗುವ ಪ್ರಮೇಯಕ್ಕೆ ಇಂದಿನ ಸಾಮಾಜಿಕ, ಆರ್ಥಿಕ, ರಾಜಕೀಯ ಒತ್ತಡಗಳು ಅದಕ್ಕೆ ಕಾರಣವಾಗಿವೆ. ಒಂದೊಮ್ಮೆ ಕೇವಲ ಉಳ್ಳವರು, ಅನುಕೂಲ ಇದ್ದವರು ಶಿಕ್ಷಣ ಕ್ಷೇತ್ರಕ್ಕೆ ಬಂದರು. ಈಗ ಶಿಕ್ಷಣಕ್ಕಾಗಿ ಬೇಡಿಕೆ ಸಾರ್ವತ್ರಿಕವಾಗಿದೆ. ಸಾವಿರಾರು ವರ್ಷಗಳಿಂದ ಎಂದೂ ಶಿಕ್ಷಣ ಕ್ಷೇತ್ರಕ್ಕೆ ಬಾರದ ಮನೆತನಗಳಿಂದ ಇಂದು ನಮ್ಮ ಶಾಲೆಗಳಿಗೆ ಮಕ್ಕಳು ಬರುತ್ತಿದ್ದಾರೆ. ಈ ತೃಷೆ ಉಚ್ಚ ಶಿಕ್ಷಣದ ವರೆಗೂ ಓತಪ್ರೋತವಾಗಿ ಹರಿಯುತ್ತದೆ. ಬಯಸಿದವರಿಗೆಲ್ಲ ಈ ರೀತಿ ಶಿಕ್ಷಣ ಒದಗಿಸಿದ್ದು ಇಂದಿನ ತಲೆಮಾರಿನ ವೈಶಿಷ್ಟ್ಯ. ನಾವು ಯಾರಿಗೂ 'ಬೇಡ' ಎಂದು ಹೇಳುವ ಪ್ರಮೇಯವೇ ಇಲ್ಲ.

---

೧೦ J. Vaizey :— 'Planning of Higher Education in the 70', R. E. Bell & A. J. Youngson (Ed). —Present and Future in Higher Education; Tavistock Publication, 1970.

ಕೋಷ್ಟಕ: ೨ ಕರ್ನಾಟಕ ರಾಜ್ಯದ ಶೈಕ್ಷಣಿಕ ಬೆಳವಣಿಗೆಯ ಪರಿ೧೧

ವರ್ಷ	ಪೂರ್ವ ಪ್ರಾಥಮಿಕ ಶಾಲೆಗಳು	ವಿದ್ಯಾರ್ಥಿಗಳ ಸಂಖ್ಯೆ	ಶಿಕ್ಷಕರು	ಪ್ರಾಥಮಿಕ ಶಾಲೆಗಳು	ವಿದ್ಯಾರ್ಥಿಗಳು	ಶಿಕ್ಷಕರು	ಹಾಯ-ಸ್ಕೂಲುಗಳು	ವಿದ್ಯಾರ್ಥಿ-ಗಳು	ಶಿಕ್ಷಕರು
೧೯೫೫–೫೬	೯೫	೯೪೪೨	೧೬೧	೨೨೫೦	೧೫೧೪೮೧೯	೪೭೫೫೨	೪೮೬	೧೭೦೮೬೫	೮೬೬
೧೯೬೦–೬೧	೨೦೧	೧೨೧೬೦	೨೬೯	೨೭೦೫೦	೧೮೬೧೫೨೬	೫೫೭೮೪	೭೭೮	೧೭೧೯೫೩	೯೬೬೩
೧೯೬೭–೬೮	೬೧೦	—	—	೩೨೨೧೦	—	೯೧೯೫೨	೧೮೩೩	—	೧೦೩೩೪
೧೯೭೦–೭೧	೭೯೮	—	—	೩೨೬೯೨	—	—	೨೦೦೨	—	
೧೯೭೭–೭೮	೨೪೨೬	—	—	೩೪೪೩೩	—	—	೨೩೬೪	—	
೧೯೭೯–೮೦	೩೧೧೮	೧೦೦೯೩೨B	೨೫೯೬	೩೪೭೦೬	೨೮೫೩೬೦೬B	೧೩೭೯೬೦	೨೪೯೮	೩೮೫೦೬೨	೨೯೬೩೨
		೯೦೮೦೬G			೨೦೯೫೬೬೯G			೨೧೫೫೨೦	

೧೧Philipose Mathai (Ed.) Karnatak State Educational Progress; Statsitical Brochere, 1979-80. (Mimographed).

೮. ಈ ಬೆಳವಣಿಗೆಯ ಕಾರಣಗಳು :

ಶಿಕ್ಷಣದ ಈ ಬೇಡಿಕೆಗೆ ನಾವು ಎರಡು ಪ್ರಬಲ ಕಾರಣಗಳನ್ನು ಕೊಡ-ಬಹುದಾಗಿದೆ :

ಜನತೆಯಲ್ಲಿ ತಲಾ ವರಮಾನದ ಹೆಚ್ಚಳ.

ಶಿಕ್ಷಣಕ್ಕಾಗಿ ಹಸಿವು.

ಇವುಗಳಿಗೆ ಪೂರಕವಾಗಿ, ಸರಕಾರದ ಪ್ರೋತ್ಸಾಹನೆ, ಕಡ್ಡಾಯಗಳೂ ಸೇರಿಕೊಂಡವು. ಸಾವಿರಾರು ಮನೆತನಗಳಲ್ಲಿ, ಮೊದಲ ಬಾರಿ ಮಕ್ಕಳು ಓದುವುದಕ್ಕಾಗಿ ಶಾಲೆಗೆ ಬರತೊಡಗಿದ್ದಾರೆ. ಅದರೊಂದಿಗೆ, ತಮ್ಮ ಸ್ಥಳಗಳಲ್ಲಿಯೇ ತಮ್ಮ ಮೋಕ್ಷವನ್ನು ಹುಡುಕಿಕೊಳ್ಳುವ ಮಡಿವಂತಿಕೆ ತೊಲಗಿದೆ. ಅನೇಕ ಶಿಕ್ಷಣ ಹೊಂದಿದ ತರುಣರು ಈಗ ದೇಶದ, ಜಗತ್ತಿನ ಮೂಲೆ–ಮೂಲೆಗಳಲ್ಲಿ ದುಡಿಯುತ್ತಿದ್ದಾರೆ. ನಮ್ಮ ಪ್ರಜಾಪ್ರಭುತ್ವದ ಅವಶ್ಯಕತೆಗಳಲ್ಲಿ ಶಿಕ್ಷಣವೂ ಒಂದಾಗಿದೆ. ಅನೇಕರ ಜೀವನದಲ್ಲಿ ಶಿಕ್ಷಣವು ಬದುಕಿನ ದಾರಿಯಾಯಿತು.

ಇಂದಿನ ವೈಜ್ಞಾನಿಕ ಯುಗದ ಬೆಳವಣಿಗೆಗಳಿಂದಾಗಿ, ಶಿಕ್ಷಣ ಒಂದು ನಿರ್ಧಾರಿತ ಅವಶ್ಯಕತೆಯಾಗಿದೆ. ಇಂದಿನ ತಲೆಮಾರಿನ ಸಂಕೀರ್ಣ ಬದುಕಿನಲ್ಲಿ ವ್ಯವಸ್ಥಿತವಾಗಿ ಜೀವಿಸಲು ನಿರಕ್ಷರತೆ ಶಾಪವಾಗಿದೆ. ನಾವು ಈಗ ವೈಜ್ಞಾನಿಕ ಮಾನವೀಯ ದರ್ಶನ-ದತ್ತ ತೀವ್ರವಾಗಿ ಸರಿಯುತ್ತಿದ್ದೇವೆ. ಸೃಜನಶೀಲತೆಗೆ ಈಗ ಅರ್ಥ ಬಂದಿದೆ. ಹೊಸ ಮೌಲ್ಯಗಳಿಗಾಗಿ ಅನ್ವೇಷಣೆಯೂ ಕೂಡಿಕೊಂಡಿದೆ. ಪ್ರಜಾಪ್ರಭುತ್ವದಲ್ಲಿ, ಪ್ರತಿಯೊಂದು ಹಂತ ಕ್ಷೇತ್ರಗಳಲ್ಲಿ, ವೈಯಕ್ತಿಕ–ಸಾಮೂಹಿಕ ಹೊಣೆಗಾರಿಕೆಯ ಸಂದರ್ಭಗಳು ಹಲವು. ಅವುಗಳ ನಿಸ್ತರಣೆ ನಾಗರಿಕ ಜೀವಿಯ ಕರ್ತವ್ಯ. ಇದುವೇ ಮುಂದಿನ ನಮ್ಮ ಚರಮ ಗುರಿಯಾದ 'ಪೂರ್ಣ ಮಾನವತೆಯತ್ತ' ನಮ್ಮನ್ನು ಕೊಂಡೊಯ್ಯ-ಬಹುದಾಗಿದೆ.

ಇದಕ್ಕೆ ತಾತ್ಪೂರ್ತಿಕವಾದ ಇನ್ನೊಂದು ಆಕರ್ಷಣೆಯೆಂದರೆ ನಮ್ಮ ಮಾನವ ಸಂಪನ್ಮೂಲಗಳಿಗೆ, ಆಫ್ರಿಕೆ, ಮಧ್ಯಪೂರ್ವ ದೇಶಗಳ ಬೇಡಿಕೆ.

ಉಮಾಪತಿಗಳು,[೧೨] ಈ ಸಮಸ್ಯೆಗೆ ಕಾರಣಗಳನ್ನು ಇನ್ನೊಂದು ರೀತಿಯಲ್ಲಿ ಹೇಳುತ್ತಾರೆ. 'ಶೈಕ್ಷಣಿಕ ಗೊತ್ತು ಗುರಿಗಳನ್ನು ನಿರ್ವಾತ ಪರಿಸರದಲ್ಲಿ ಯೋಜಿಸ-ಲಾಗುವುದಿಲ್ಲ. ಭಾರತದ ನೇತಾರರು ನಮ್ಮ ದೇಶದ ಅಭಿವೃದ್ಧಿ, ಅದಕ್ಕಾಗಿ ಶಿಕ್ಷಣದ

---

೧೨ K. Shetty Umapathy — 'Educational Goal & National Development', New Frontiers in Education, Vol. IV No 3 July-Sept. 1974.

ವೈಫಲ್ಯಗಳನ್ನು ಅರಿತಿದ್ದರು. ಶಿಕ್ಷಣದ ಸುಧಾರಣೆಯ ಮುಖಾಂತರ ದೇಶದಲ್ಲಿ ಅಭಿವೃದ್ಧಿಯನ್ನು ತರಲು ಆಗ ಪ್ರಯತ್ನಿಸಿದರು'.

ಇಂದಿನ ಜನಾಂಗವು ತಮ್ಮ ಅಭಿವೃದ್ಧಿಗಾಗಿ ಮತ್ತೆ ಹಲವು ವರ್ಷ ಸಹನೆ-ಯಿಂದ ನಿಲ್ಲುವುದು ಅಸಾಧ್ಯ. ಅವರಿಗೆ ಪ್ರಗತಿಬೇಕು; ಈ ಪ್ರಗತಿ ತೀವ್ರ ಬರಬೇಕು. ಅದಕ್ಕಾಗಿಯೇ ಶಿಕ್ಷಣದ ಆಶ್ರಯ !

೯. ರಾಷ್ಟ್ರೀಯ ಬೆಳವಣಿಗೆ :

ದೇಶಕ್ಕೆ ಸ್ವಾತಂತ್ರ್ಯ ಬಂದು, ರಾಜಕೀಯ ಸ್ವಾತಂತ್ರ್ಯ ಬಂದರೂ ಅದರ ಹಿನ್ನೆಲೆಯಾಗಿ, ಆರ್ಥಿಕ–ಸಾಮಾಜಿಕ–ಸಾಂಸ್ಕೃತಿಕ ಸ್ವಾತಂತ್ರ್ಯ ಬಾರದಿದ್ದರೆ ಈ ರಾಜಕೀಯ ಸ್ವಾತಂತ್ರ್ಯಕ್ಕೆ ಯಾವ ಅರ್ಥವಿದೆ? ನಾವು ಈಗ ಅನೇಕ ವಿಷಯಗಳಲ್ಲಿ ಬೆಳುವಣಿಗೆಯನ್ನು ಕಾಣಬೇಕು :

ಆಹಾರದ ಉತ್ಪಾದನೆಯಲ್ಲಿ ಸ್ವಯಂ ಪರಿಪೂರ್ಣತೆ

ಆರ್ಥಿಕ ಬೆಳುವಣಿಗೆ

ಯಾಂತ್ರೀಕರಣ

ಎಲ್ಲರಿಗೂ ಉದ್ಯೋಗಗಳು

ಭಾವನಾತ್ಮಕ ಹೊಂದಾಣಿಕೆ – ಸಂಸ್ಕೃತಿ ಸಂವರ್ಧನೆ

ಉತ್ಪಾದನೆಯಲ್ಲಿ ಹೆಚ್ಚಳ

ಮಾನವೀಯ ಸಂಪನ್ಮೂಲಗಳ ಅಭಿವೃದ್ಧಿ

ಮೌಲ್ಯಗಳ ಪುನರುತ್ಥಾನ.

ಇತ್ತೀಚಿನ ಕೊಠಾರಿ ಆಯೋಗವು ಹೇಳಿದ ರೀತ್ಯ,ನಮ್ಮ ರಾಷ್ಟ್ರೀಯ ಅಭಿವೃದ್ಧಿಯ ವೇಗವನ್ನು ಕುದುರಿಸಬೇಕಿದ್ದರೆ ಈಗ ಒಂದು ದೂರದೃಷ್ಟಿಯ, ಧೈರ್ಯದ, ಯೋಗ್ಯವಾಗಿ ವ್ಯಾಖ್ಯಾನಿಸಿದ ಶೈಕ್ಷಣಿಕಧೋರಣೆಯ, ಅವಶ್ಯಕತೆಯಿದೆ. ಅದನ್ನು ನಿರ್ಧಾರಿತ, ಸತ್ವಶಾಲಿ ವೀರ್ಯವಂತ ಸ್ತರಕ್ಕೆ ಕೊಂಡೊಯ್ಯಬೇಕಾದರೆ ನಾವು ಮೊದಲು ಆ ಕ್ಷೇತ್ರವನ್ನು ಸುಧಾರಿಸಬೇಕು ವಿಸ್ತರಿಸಬೇಕು.[೧೩]

ಮುಂಬರುವ ಎರಡು ದಶಕಗಳಿಗಾದರೂ ನಾವು ನಮ್ಮ ಶಿಕ್ಷಣವನ್ನು ಯೋಜಿಸಬೇಕು. ೧೯೮೧ ರ ಜನಗಣತಿಯ ರೀತ್ಯ ನಮ್ಮ ಜನಸಂಖ್ಯೆ ೬೮ ಕೋಟಿ. ಈ

---

೧೩ D. S Kothari (Ed) The National Commission Report 1964-66 Government of India, New Delhi;

ಸಂಖ್ಯೆ ದ್ವಿಗುಣಿತವಾಗುವುದು ಸಾಧ್ಯ. ನಮ್ಮ ವಿದ್ಯಾರ್ಥಿಗಳ ಸಂಖ್ಯೆ ಆಗ ಏನಿಲ್ಲೆಂದರೂ ೧೭೦ ಲಕ್ಷಕ್ಕೂ ಮಿಕ್ಕಬಹುದು. ಆಗ ನಮಗೆ ೪೦ ಲಕ್ಷ ಶಿಕ್ಷಕರು ಬೇಕು; ಹತ್ತು ಲಕ್ಷ ಶಿಕ್ಷಣ ಸಂಸ್ಥೆಗಳು ಬೇಕು; ಈ ಸಂಸ್ಥೆಯಲ್ಲಿ ಸಿದ್ಧರಾಗುವ ವಿದ್ಯಾರ್ಥಿಗಳು ಉತ್ಪಾದನಾಕ್ಷಮರಾಗಬೇಕು. ಅವರು ನಮ್ಮ ದೇಶದ ಅಭಿವೃದ್ಧಿಯಲ್ಲಿ ಪಾಲುಗೊಳ್ಳಬೇಕು. ನಿರುದ್ಯೋಗ ಪ್ರಶ್ನೆಯೇ ಆಗ ಉಳಿಯಬಾರದು. ಈ ದೇಶಕ್ಕೆ ಅಂದು ಬೇಕಾಗಬಹುದಾದ ಮಾನವೀಯ ಸಂಪನ್ಮೂಲಗಳ ಉತ್ಪಾದನೆ ಈಗಿನಿಂದಲೇ ಪ್ರಾರಂಭವಾಗುವುದು ಅತ್ಯವಶ್ಯ. ನಮ್ಮ ದೇಶದ ಇಂದಿನ–ನಾಳಿನ ಬೇಡಿಕೆಗಳಿಗೆ ನಮ್ಮ ಶಿಕ್ಷಣವು ಸಂವಾದಿಯಾಗಿ ಕೆಲಸಮಾಡಬೇಕು. ನಮ್ಮ ಶೈಕ್ಷಣಿಕ ಯೋಜನೆಗಳು ಇಂದಿನ ನಾಳಿನ ಬೇಡಿಕೆಗಳನ್ನು ಅನುಲಕ್ಷಿಸಬೇಕು.

ಕೋಷ್ಟಕ : ೩ ಜನಸಂಖ್ಯೆಯಲ್ಲಿ ಹೆಚ್ಚಳ[೧೪]

ಅ.ನಂ.	ವರ್ಷ	ಲಕ್ಷಗಳಲ್ಲಿ ಜನಸಂಖ್ಯೆ	ಶೇಕಡ ಹೆಚ್ಚಳ
೧.	೧೯೦೧	೨೯೪	—
೨.	೧೯೧೧	೩೧೫	೬.೭%
೩.	೧೯೨೧	೩೧೯	೦.೯%
೪.	೧೯೩೧	೩೫೩	೧೦.೯%
೫.	೧೯೪೧	೩೮೯	೧೫.೦೬%
೬.	೧೯೫೧	೩೫೭	೧೩.೩%
೭.	೧೯೬೧	೪೩೯	೨೧.೬%
೮.	೧೯೭೧	೫೪೮	೨೪.೭%
೯.	೧೯೮೧	೬೮೦ (ಅಜಮಾಸು)	೨೪.೨%

೧೪ A. I. U. Higher Education and Development; Association of Indian Universities, Rouse Avenue, New Delhi.

ಕೋಷ್ಟಕ: ೪ ವಿವಿಧ ಶಿಕ್ಷಣ ಕ್ಷೇತ್ರಗಳಲ್ಲಿ ವಿದ್ಯಾರ್ಥಿಗಳು

ಅ. ನಂ.	ಪ್ರಾಥಮಿಕ ೧ನೆಯ ವರ್ಗದಿಂದ ೪ನೆಯ ವರ್ಗ (ಲಕ್ಷಗಳಲ್ಲಿ)	ಮಧ್ಯಮ ಪ್ರಾಥಮಿಕ ೫ನೆಯ ವರ್ಗದಿಂದ ೮ನೆಯ ವರ್ಗ (ಲಕ್ಷಗಳಲ್ಲಿ)	ಮಾಧ್ಯಮಿಕ ೮ನೆಯ ವರ್ಗದಿಂದ ೧೦ನೆಯ ವರ್ಗ (ಲಕ್ಷಗಳಲ್ಲಿ)	೧೧ನೆಯ ವರ್ಗದಿಂದ ೧೨ನೆಯ ವರ್ಗ (ಲಕ್ಷಗಳಲ್ಲಿ)	ಸ್ನಾತಕ	M. A. M. Sc. ಸ್ನಾತಕೋತ್ತರ
೧೯೫೦–೫೧	೧೪೦	೩೦	೧೫	೩	೨೦,೦೦೦	೨೦,೦೦೦
೧೯೫೫–೫೬	೧೭೦	೫೦	೨೦	೫	೩೦,೦೦೦	೨೫,೦೦೦
೧೯೬೦–೬೧	೨೫೦	೭೦	೪೦	೮	೪೦,೦೦೦	೫೦,೦೦೦
೧೯೬೫–೬೬	೩೭೦	೧೩೦	೬೦	೧೦	೮೦,೦೦೦	೮೦,೦೦೦
೧೯೭೦–೭೧	೬೧೦	೨೧೦	೯೦	೨೦	—	೧,೦೦,೦೦೦
೧೯೭೫–೭೬	೭೨೦	೩೨೦	೧೩೦	೩೦	೧೦,೦೦,೫೦೦	—
೧೯೮೦–೮೧	೮೦೦	೪೨೦	೧೮೦	೫೦	೧೫,೦೦,೦೦೦	೧,೫೦,೦೦೦
೧೯೮೫–೮೬	೭೬೦	೪೯೦	೨೪೦	೭೦	೨೦,೦೦,೮೦೦	೨,೦೦,೦೦೦
೧೯೯೦–೯೧	೮೯೦	೫೪	೩೧೦	೯೦	೩೦,೦೦,೦೦೦	೩,೦೦,೦೦೦

೧೦. ಶಿಕ್ಷಣ-ಅಭಿವೃದ್ಧಿ :

ಒಂದು ಕಾಲದಲ್ಲಿ ಅಭಿವೃದ್ಧಿ ಎಂದರೆ ಕೇವಲ ಆರ್ಥಿಕ ಉತ್ಪಾದನೆ ಮಾತ್ರ ಗಣನೆಗೆ ಬರುತ್ತಿತ್ತು; ಈ ಉತ್ಪಾದನೆಯ ಅಳತೆಯನ್ನು ಜಿ. ಎನ್. ಪಿ. (G.N.P.) ಯಿಂದ ಅಳೆಯಲಾಗುತ್ತಿತ್ತು. ಈಗ ಅದು ಬದಲಾಗಿದೆ. ಇಂದಿನ ರೀತಿಯಲ್ಲಿ 'ಜೀವನದ ಗುಣಮಟ್ಟ'ವನ್ನು ಅಳತೆಮಾಡುವ ಹೊಸ ವಿಧಾನವನ್ನು ಅನುಸರಿಸಿ ಈ ಅಳತೆಯನ್ನು ಮಾಡಲಾಗುತ್ತಿದೆ. ನಮ್ಮಂತಹ ಅಭಿವೃದ್ಧಿಪರ ದೇಶಗಳಲ್ಲಿ ಇನ್ನೂ ಈ ಜಿ. ಎನ್. ಪಿ. ಯು ಅಳತೆಗೋಲಾಗಿ ಉಳಿದಿದೆ. ವೀರರಾಘವನ್‌ರ ದೃಷ್ಟಿಯಲ್ಲಿ[೧೫] ರಾಷ್ಟ್ರೀಯ ಅಭಿವೃದ್ಧಿಯನ್ನು ಈಗ ಮತ್ತೊಮ್ಮೆ ವ್ಯಾಖ್ಯಾನಿಸಲಾಗಿದೆ; ಹೊಸ ವ್ಯಾಖ್ಯೆಯ ಪ್ರಕಾರ ಅಭಿವೃದ್ಧಿಯಲ್ಲಿ ಜಿ. ಎನ್. ಪಿ. ಅಲ್ಲದೆ, ಆದಾಯದ ಸಮಾನ ಹಂಚುವಿಕೆ, ಪೂರ್ಣಉದ್ಯೋಗ, ಬಡತನದ ನಿರ್ಮೂಲನ, ಕನಿಷ್ಠಮಟ್ಟದಗಿನ ಸಾಮಾಜಿಕ ಸೇವೆಗಳ ಒದಗಣೆ, ಸಾಂಸ್ಕೃತಿಕ ಸಂತೃಪ್ತಿಗಳ ಹೆಚ್ಚಳಿಕೆಗಳು ಮುಂತಾದವುಗಳನ್ನು ಸೇರಿಸಲಾಗಿದೆ.'

ಅಭಿವೃದ್ಧಿಯ ಬಗ್ಗೆ ಈಗಿನ ಪರಿಕಲ್ಪನೆ ಬದಲಾಗುವಲ್ಲಿ ಇನ್ನೂ ಅನೇಕ ಅಂಶಗಳನ್ನು ಈಗ ಶೈಕ್ಷಣಿಕ ಅರ್ಥ ಶಾಸ್ತ್ರಜ್ಞರು ಕೂಡಿಸಿದ್ದಾರೆ. ಕೇವಲ ಭಾಂಡವಲದ ಸೃಷ್ಟಿಯಷ್ಟೇ ಅಭಿವೃದ್ಧಿಯಾಗಲಾರದು. ಅದೊಂದು ಎಲ್ಲವನ್ನೂ ಸ್ವೀಕರಿಸಿದ, ಜೀವನದ ಎಲ್ಲ ಅಂಗಗಳನ್ನೂ ತಬ್ಬಿಕೊಂಡ, ಸಮಾಜದ ಎಲ್ಲ ಸಂಘಟನೆಗಳಿಗೂ ವಿಸ್ತಾರಗೊಳ್ಳುವ ಪರಿಕಲ್ಪನೆಯಾಗಿದೆ. ಅದರೊಂದಿಗೆ ಅದು ಸಂಸ್ಕೃತಿಗೂ ಮೇಲೇರುತ್ತದೆ.

ನಮ್ಮ ಇತ್ತೀಚಿನ ಕೊಠಾರಿ ಆಯೋಗದ ಪ್ರಕಾರ ಅಭಿವೃದ್ಧಿಯು ನಾಲ್ಕು ಅಂಶಗಳಿಗೂ ಕೂಡಿದೆ :

೧ ಆಹಾರದಲ್ಲಿ ಸ್ವಯಂಪೂರ್ಣತೆ

೨ ಆರ್ಥಿಕ ಬೆಳುವಣಿಗೆ ಮತ್ತು ಪೂರ್ಣ ಉದ್ಯೋಗ

೩ ಸಾಮಾಜಿಕ ಮತ್ತು ರಾಷ್ಟ್ರೀಯ ಭಾವೈಕ್ಯ

೪ ರಾಜ್ಯಕೀಯ ಸ್ವಾಸ್ಥ್ಯ ಮತ್ತು ಬೆಳುವಣಿಗೆ

ಇದೆಲ್ಲ ನಮಗೆ ದೊರೆಯುವದು— ನಮ್ಮ ಜನತೆಯನ್ನು ಹೊಸಜೀವನ ಹೊಸ ದಾರಿಗಳಿಗೆ ಕೊಂಡೊಯ್ದಾಗ ಮಾತ್ರ ಸಾಧ್ಯ. ಈ ಮಾತನ್ನು ಹೇಳುವಲ್ಲಿ

---

೧೫ J. Veeraraghavan—'Higher Education and Development charging strategies in the Indian context; A I.V.—(Ed) Higher Education and Development; Association of Indian Univ. Delhi, 1975.

ನಾವು ಶಿಕ್ಷಣಕ್ಕೆ ಬಹುದೊಡ್ಡ ಜವಾಬ್ದಾರಿಯನ್ನು ಕೊಡುತ್ತಿದ್ದೇವೆ. ಅಂದಾಗ ಅದನ್ನು ನಮ್ಮ ಜನಜೀವನಕ್ಕೆ ನೇರಸಂಬಂಧಿಯನ್ನಾಗಿ ಮಾಡಬೇಡವೆ? ನಮ್ಮ ಜನತೆಯ ಆಶೋತ್ತರಗಳಿಗೆ ಸಂವಾದಿಯನ್ನಾಗಿಸಬೇಡವೇ? ನಮ್ಮ ಅಭಿವೃದ್ಧಿಯ ಸನ್ನಾಹದಲ್ಲಿ ಅದನ್ನು ಸಂಬಂಧಿಸಬೇಡವೇ? ನಮ್ಮ ಪರಂಪರೆಯ ಚಿರಂತನ ಮೌಲ್ಯಗಳನ್ನು ಇಂದಿನ ಸಾಮಾಜಿಕ–ರಾಷ್ಟ್ರೀಯ ಪರಿಸರದಲ್ಲಿ ತರಬೇಡವೆ?

ಇವೆಲ್ಲವುಗಳ ಒಟ್ಟು ಪರಿಣಾಮವೆಂದರೆ, ನಾವು ನಮ್ಮ ಭವಿಷ್ಯತ್ತಿಗಾಗಿ ಅಂದಾಜುಗಳನ್ನು, ಯೋಜನೆಗಳನ್ನು ಸಿದ್ಧಗೊಳಿಸಬೇಕು. ಈ ಅಂದಾಜಗಳು, ಏನೇ ಇದ್ದರೂ, ಒಂದು ಅಂದಾಜು ನಮಗೆ ಬೇಕೇಬೇಕು.

೧೧. ನಮ್ಮ ಭವಿಷ್ಯತ್ತಿನ ಅಂದಾಜುಗಳು :

ಒಂದು ಮಾತು ಈಗ ಸತ್ಯ— ನಮ್ಮ ಜನಸಂಖ್ಯೆ, ನಾವು ಎಷ್ಟು ಪ್ರಯತ್ನಿಸಿ-ದರೂ,— ಹೆಚ್ಚಾಗಲೇಬೇಕು. ಭಾರತದ ಜನಸಂಖ್ಯೆ ೨೦೦೧ A. D. ಸುಮಾರಿಗೆ ಹೆಚ್ಚಾಗುತ್ತದೆ. ೨೦೦೦ ವರ್ಷಕ್ಕೆ ಭಾರತದ ಬೇಡಿಕೆಗಳ ಬಗ್ಗೆ ದ್ವಿತೀಯ ಅಖಿಲ ಭಾರತ ಆರ್ಥಿಕ ಅಭ್ಯಾಸಿ ತಂಡವು ಕೆಳಗಿನಂತೆ ಅಂದಾಜು ಮಾಡಿದೆ. ಅಂದಿನ ಬೆಳವಣಿಗೆಯ ಪ್ರಮಾಣವು ೬.೨% ಎಂದು ಈಗ ನಿಗದಿ ಮಾಡಲಾಗಿದೆ.

ಕೋಷ್ಟಕ : ೫ ಕೆಲವು ಬೆಳವಣಿಗೆಯ ಅಂದಾಜುಗಳು[೧೬]

ಅ.ನಂ.	ವಿಷಯ	೧೯೭೩–೭೪	೧೯೮೫–೮೬	೨೦೦೦ A.D.
೧.	ಜಿ.ಎನ್.ಪಿ.(೧೯೭೨–೭೩) ದರಗಳು ಕೋ.	೪೫೦೫೦	೮೮೫೨೪	೨೨,೭೬೭೦
೨.	ಜನಸಂಖ್ಯೆ (ಲಕ್ಷಗಳಲ್ಲಿ)	೫೪೭೦	೭೩೪೦	೯೪೫೦
೩.	ಜಿ. ಎನ್. ಪಿ. ತಲಾ ಆದಾಯ (ರೂಪಾಯಿಗಳು)	೮೨೪	೧೨೦೬	೨೪೮೯
೪.	ಜಿ.ಎನ್.ಪಿ. (ತಲಾ ಆದಾಯ ಪೌಂಡಗಳಲ್ಲಿ)	೧೦೩	೧೫೧	೩೦೧
೫.	ಆಹಾರಧಾನ್ಯಗಳು (ಲಕ್ಷ ಟನ್‌ಗಳಲ್ಲಿ)	೧೦೪೦	೧೭೦೦	೨೭೪೦
೬.	ಹತ್ತಿ—(ಮೀಟರುಗಳಲ್ಲಿ)	೭೮೦೦	೧೪೧೦೦	೩೧೧೮೫
೭.	ಕಾಗದ–ಇತ್ಯಾದಿ (೦೦೦ ಟನ್)	೮೩೦	೨೧೦೦	೭೮೪೪
೮.	ಪತ್ರಿಕಾ ಕಾಗದ (೦೦೦ ಟನ್)	೪೩	೪೨೦	೧೨೬೬೩
೯.	ಸಿಮೆಂಟು (ಲಕ್ಷ ಟನ್)	೧೬೦	೪೪೦	೧೮೩೦
೧೦.	ವಿದ್ಯುತ್ (M.V.N.)	೭೨೦೦೦	೨೪೫೦೦೦	೧೩೭೧೬೧೩

೧೬ The Indian Economy in 2000 A. D., Tata Economic Consultancy Service, Sept, 1974, Page 19.

ಈ ಬೆಳವಣಿಗೆಗಳಲ್ಲಿ ಇನ್ನೂ ಅನೇಕ ವಸ್ತುಗಳನ್ನು ಸೇರಿಸಬಹುದು. ಆದರೆ, ಇದಕ್ಕೆ ಮುಂದಿನ ೨೫ ವರ್ಷಗಳಲ್ಲಿ ನಾವು ಮಾಡಬೇಕಾದ ಪ್ರಯತ್ನಗಳೇನು ? ತಲಾ ಆದಾಯ ನಾವು ೨೦೦೦ ವರ್ಷಕ್ಕೆ ೨೪೮೯/– ರೂಪಾಯಿ ಎಂದು ಹೇಳುತ್ತೇವೆ. ಈ ಗೆಯ್ಮೆಯನ್ನು ಅನೇಕ ಹಿಂದುಳಿದ ದೇಶಗಳು ಸಾಧಿಸಿದ್ದು ೧೯೭೩ ರಷ್ಟು ಹಿಂದೆಯೇ, ಅವು ಇದಕ್ಕಿಂತ ಮೇಲೆ ಹೋಗಿವೆ! ಜಗತ್ತಿನ ಮುಖ್ಯ ೨೦ ದೇಶಗಳು ೨೦೦೦/– ಡಾಲರ್‌ತಲಾ ಆದಾಯಕ್ಕೆ ಈಗಾಗಲೇ ನಿಲುಕಿದುದು ಅನೇಕ ಕಡೆಗೆ ವರದಿಯಾಗಿದೆ.

ಮುಂಬರಲಿರುವ ಅದ್ಭುತ ಯುಗ :

ಇನ್ನು ಮುಂದಿನ ಯುಗ–ಬಾಹ್ಯಾಕಾಶದ ಯುಗ. ಅದಕ್ಕಾಗ್ಗಿ ನಾವು ಈಗ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದೇವೆ. ಈ ಯುಗದ ವೈಶಿಷ್ಟ್ಯವೆಂದರೆ ಅಸಾಧಾರಣ ವೈಜ್ಞಾನಿಕ ಬೆಳವಣಿಗೆಗಳು, ಮತ್ತು ಆಶ್ಚರ್ಯಕರ ತಾಂತ್ರಿಕ ವಿದ್ಯೆಯಲ್ಲಿಯ ಗೆಯ್ಮೆಗಳು. ಈಗ ನಡೆದಿರುವುದು ಕೇವಲ ಪ್ರಾರಂಭಿಕ. ಈ ಪ್ರಗಲ್ಭ ಬೆಳವಣಿಗೆಗೆ ಸಮದಂಡಿಯಾಗಿ ನಾವು ಇಂದು ಬೆಳೆಯಬೇಕಾದುದು ಕ್ರಮಪ್ರಾಪ್ತ. ಇಂದು ಸಂಶೋಧಿಸಿದ ಅನೇಕ ಹೊಸ ಸಂಶೋಧನೆಗಳು ನಾಳೆ ಎನ್ನುವುದರಲ್ಲಿ ಇತಿಹಾಸವಾಗಿ, ವಸ್ತುಸಂಗ್ರಹಾಲಯವನ್ನು ಸೇರುವುದು ನಾವು ಕಾಣುತ್ತಿರುವ ಸತ್ಯಕಥೆ.

ನಮ್ಮ ವಾಹನಗಳ ವೇಗ ಇಂದಿನ ಲೆಕ್ಕದಲ್ಲಿ ಅಪಾರವಾಗಿದೆ. ಇಂದು ಹೊಸ ಜ್ಞಾನವೂ ಅಷ್ಟೇ ವೇಗದಿಂದ ಬರುತ್ತಲಿದೆ. ಈ ಹಿಂದೆ ಹಲವಾರು ದಶಕಗಳಲ್ಲಿ ಸಂಗ್ರಹಿಸಬಹುದಾದ ವೈಜ್ಞಾನಿಕ ಮಾಹಿತಿ ಇಂದು ಕೆಲವೇ ತಿಂಗಳುಗಳಲ್ಲಿ ಸಾಧ್ಯ-ವೆಂಬುದು ಈಗ ಖಚಿತಪಡಿಸಲಾಗಿದೆ. ಸಂಪರ್ಕ–ಸಾಮೀಪ್ಯಗಳೂ ಹೆಚ್ಚು ನಿಕಟವಾ-ಗುತ್ತಿವೆ. ಮಾನವೀಯ ಸಭ್ಯತೆ (Civilization) ಯ ಪರಿಧಿ ವಿಸ್ತಾರಗೊಳ್ಳುತ್ತಲಿದೆ. ಮನುಷ್ಯ ಪ್ರಯತ್ನದಿಂದಾಗಿ ವಿರಾಮದ ವೇಳೆ ಹೆಚ್ಚಿದೆ. ಅದನ್ನು ಹೊಸ ಸಂಶೋಧನೆ ಗಳಿಗಾಗಿ ಮುಡುಪಾಗಿರಿಸಲಾಗುತ್ತಿದೆ. ರಾವ್‌ರವರ ಮಾತಿನಲ್ಲಿ ಹೇಳಬೇಕೆಂದರೆ,* ಅಣುವಿನಿಂದ ಶಕ್ತಿಯನ್ನು ಬೇರ್ಪಡಿಸಿದುದು,ವಿದ್ಯುತ್ ಶಕ್ತಿಯ ಗಣನೀಯ ಬೆಳವಣಿಗೆ, ಮತ್ತು ಬಾಹ್ಯಾಕಾಶದಲ್ಲಿ ಹೊರಗೆ ಮಾನವನು ಕಾರ್ಯನಿರತನಾಗುವ ಶಕ್ತಿಯನ್ನು ಪಡೆದುದು, ಇವು ಮಾನವನ ಈ ತಲೆನೂರಿನ ಕ್ರಾಂತಿಕಾರಿ ಗೆಯ್ಮೆಗಳಾಗಿವೆ........"

ಕರಾಳವಾದ ದುಃಖದಾಯಕ ಬದುಕಿನಲ್ಲಿದ್ದ ಅನೇಕ ಹಿಂದುಳಿದ ಪ್ರಗತಿಪರ, ಅರೆಪ್ರಗತಿಯ ದೇಶಗಳ ಒಂದೇ ಒಂದು ಆಶಾಕಿರಣವೆಂದರೆ— ಅವು ಉಪಯೋಗಿಸು-ತ್ತಿರುವ ವಿಜ್ಞಾನ ಮತ್ತು ತಂತ್ರಜ್ಞಾನ. ಇಂದು ಬದುಕು ನಿಚ್ಚಳವಾಗಲು ಹೊಸ-ಹೊಸ ಶೋಧಗಳು ಅವಿರತ ನಡೆದಿವೆ. ಒಕ್ಕಲುತನದಲ್ಲಿಯ ನಮ್ಮ ಸಾಹಸ ಇದುವೇ ಮುಂದುವರಿದಲ್ಲಿ ನಮ್ಮ ಆಹಾರದ ತೊಂದರೆ ನಿರಂತರ ತಪ್ಪುವುದರಲ್ಲಿ ಯಾವ

* Shri U. R. Rao— 82nd Annual Convocation Address; Karnataka University-Dharwar 1982 (Jan. 7th)

ಸಂದೇಹವಿಲ್ಲ. ವಿದ್ಯುತ್‌ನ್ನು ಉಪಯೋಗಿಸುವ ಕಲೆ ಈಗ ನಿಜವಾಗಿಯೂ ಕುತೂಹಲಕಾರಿ. ನಮ್ಮ ಆಕಾಶಯಾನ ತಾಸಿಗೆ ೪೦,೦೦೦ ಕಿ. ಮಿ. ಓಡುವಷ್ಟು ಜ್ವಲಂತವಾಯಿತು. ಸಂಪರ್ಕ ಸಾಧನಗಳಲ್ಲಿಯೂ ನಾವು ಬಹುದೊಡ್ಡ ಸಾಧನೆಯನ್ನು ಪಡೆಯುತ್ತಲಿದ್ದೇವೆ. ಔಷಧಗಳ ಸಂಶೋಧನೆಗಳಿಂದಾಗಿ ಮನುಷ್ಯಜೀವನದ ಚರ್ಯೆ ಬದಲಾದಂತೆ, ಒಕ್ಕಲುತನದಲ್ಲಿ ಕ್ರಾಂತಿ ಬಂತು. ಈ ವಿಜ್ಞಾನ–ಮತ್ತು ತಂತ್ರಜ್ಞಾನಗಳ ಸಹಾಯದಿಂದ ನಾವು ಮುಂಬರುವ ಹೊಸ ಸಮಾಜವನ್ನು ನಿರ್ಮಿಸಬೇಕಾದುದು ಈಗ ನಿರ್ಧಾರಿತ ವಿಷಯವಾಗಿದೆ. ಈ ದಿಸೆಯಲ್ಲಿ ಅವೆರಡೂ ನಮ್ಮ ಜನಜೀವನದಲ್ಲಿ ಇನ್ನೂ ದೊಡ್ಡ ಪ್ರಮಾಣದಲ್ಲಿ ಪ್ರವೇಶಿಸಬೇಕಾಗಿದೆ. ಮುಂಬರುವ ಜೀವನದಲ್ಲಿ ಅವುಗಳ ಪಾತ್ರ ಹಿರಿದಾದದ್ದು.

ಲಂಗುಲಗಾಮಿಲ್ಲದ ಹರಾಹುರಿ:

ಮುಂಬರುವ ಹೊಸ ಲೋಕದ ಕಲ್ಪನೆ ಗಟ್ಟಿಗೊಂಡಂತೆ, ಇಂದು ಬೆಳೆದ 'ಕಸ–ಕಳೆ' ಅದೂಕೂಡ ಗಮನಾರ್ಹವಾದ ಪ್ರಶ್ನೆಯಾಗಿದೆ. ಯಾವ ಸಂಯಮಗಳೂ ಅಶಕ್ತವಾದ ರೀತಿಯಲ್ಲಿ ಭ್ರಷ್ಟಾಚಾರವು ಜನಜೀವನವನ್ನು ಅರ್ಬುದದಂತೆ ಸುತ್ತಿಕೊಂಡಿದೆ. ನಿರುದ್ಯೋಗ, ಶಿಕ್ಷಣಹೊಂದಿದವರ ನಿರುದ್ಯೋಗ ಕಡಿಮೆಯಾಗುವ ಮುನ್ಸೂಚನೆ ಇನ್ನೂವರೆಗೂ ಬರಲಿಲ್ಲ. ಬೆಲೆಗಳು ಪೇಟೆಗಳಲ್ಲಿ ಏರುತ್ತಲೇ ಹೋಗುತ್ತಲಿವೆ. ನಮ್ಮ ಸಾಮಾಜಿಕ ಆರ್ಥಿಕ ಸ್ಥಿತಿಗಳು ಶಿಥಿಲಗೊಂಡು ತೀರ ಉಲ್ಬಣ ಸ್ಥಿತಿಯಲ್ಲಿರುವ "ಸೂಚ್ಯಾಂಕ" ಗಳನ್ನು ಪ್ರತಿದಿನ ನಾವು ಕಾಣುತ್ತಿದ್ದೇವೆ.

ಇಂದಿನ ಸಾಮಾಜಿಕ ಅನಿಷ್ಟಗಳೂ ಅನೇಕ. ಅವು ತಲೆಮರೆಸಿಕೊಳ್ಳುವಷ್ಟರಲ್ಲಿ ಆಮೂಲಾಗ್ರ ಅವನ್ನೆಲ್ಲ ಕಿತ್ತಿಹಾಕಬೇಕು. ಬಡತನ, ಕೇವಲ ಬಡತನವಾಗಿ ಉಳಿಯದೆ, ಇಂದು ಕಡುಬಡತನವಾಗುತ್ತಲಿದ್ದು, ಶೇಕಡ ೭೦ ಕ್ಕೂ ಮಿಃಕ್ಕಿ ಬಡತನದ ರೇಖೆಯ ಕೆಳಗೆ ನಮ್ಮ ಜನ ಇರುವುದು ಯಾವ ದೇವರಿಗೆ ಪ್ರೀತಿ? ಚೋದ್ಯವೆಂದರೆ, ಈ ನಮ್ಮ ಕಡುಬಡವರಿಗೆ, ತಾವು ಬಡವರೆಂಬ ವಿಚಾರವೂ ಗೊತ್ತಿಲ್ಲದಂತಹ ವಿಚಿತ್ರ ಸನ್ನಿವೇಶದಲ್ಲಿ ಅವರು ತಮ್ಮ ಬಾಳನ್ನು ಮುಂದುವರಿಸಿದ್ದಾರೆ. ದಿನಕ್ಕೆ ಒಂದು ಊಟವಲ್ಲ, ವಾರಕ್ಕೆ ಒಂದು ಊಟಕ್ಕೂ ಗತಿ ಇಲ್ಲದವರು ಈ ನಾಡಿನಲ್ಲಿ ಎಷ್ಟು ಜನ? ಆಹಾರದ ಒಂದು ಚೂರು, ಅವರಿಗೆ ಬೇಡವೇ? ಈ ಕನಿಷ್ಠ ಅನುಕೂಲಕ್ಕಾಗಿ ಅವರು ಇನ್ನೂ ಎಷ್ಟು ಶತಮಾನ ಕಾಯಬೇಕು?

ಎಷ್ಟೋ ಸಾವಿರ ವರ್ಷಗಳಿಂದ ಒಂದು ತೆರನಾದ ಆಡಳಿತಗಳಿಗೆ ಹೊಂದಿಕೊಂಡ ಅನೇಕ ದೇಶಗಳಿಗೆ ಈಗ ಪ್ರಜಾಪ್ರಭುತ್ವಕ್ಕಾಗಿ "ಪ್ರೀತಿ" ಹುಟ್ಟಿಕೊಂಡಿದೆ. ಈ "ತುಟ್ಟಿ" ರಾಜಕೀಯ ಅನುಭವವನ್ನು ನಮ್ಮ ದೇಶಗಳು ಪಚನಮಾಡಿಕೊಳ್ಳುವುದು ದುರ್ಭರ. "ಪ್ರಜಾಪ್ರಭುತ್ವದಿಂದ ನಾವು ನಮ್ಮ ಜೀವನದ ಉದ್ಧಾರ

ಮಾಡಿಕೊಳ್ಳುವುದು ಹೆಚ್ಚು ಅನುಕೂಲಕರ, ಹೆಚ್ಚು ಸಾಧು" ಎಂಬ ಮಾತು ನಮ್ಮ ನಾಡೋಜರಲ್ಲಿ ಬಿಂಬಿತವಾಗುವುದು ಅಷ್ಟೇ ಅಗತ್ಯದ ಮಾತಾಗಿದೆ.

ಆರ್ಥಿಕ, ಸಾಮಾಜಿಕ, ರಾಜಕೀಯ, ಮತ್ತು ಸಾಂಸ್ಕೃತಿಕ ಕ್ಷೇತ್ರಗಳ ಈ "ಕಸ" ವನ್ನು ಕಳೆಯುವುದೂ ಕೂಡ ಈಗ ಅಗತ್ಯದ ಮಾತಾಗಬೇಕು. ನಾವು ಈ ಅನಿಷ್ಟಗಳನ್ನು ಬೆನ್ನಿಗೆ ಬಿಗಿದುಕೊಂಡು ಮುಂದುವರಿಯಲು ಸಾಧ್ಯವಾದೀತೆ? ನಮ್ಮ ಹೊಲಗಳಲ್ಲಿ ಹುಲುಸಾದ ಬೆಳೆಬರುವುದು ಅದರಲ್ಲಿಯ ಕಸ–ಕಳೆ–ಕರಿಕೆಯನ್ನು ನಿರ್ಮೂಲನಮಾಡಿದಾಗ ಮಾತ್ರ.

೧೨. ನಮ್ಮ ಪೂರ್ವ ತಯಾರಿಗಳು :

ನಮ್ಮ ಇಂದಿನ ಆರ್ಥಿಕ ಮತ್ತು ತಾಂತ್ರಿಕ ಸತ್ಯಗಳು ನಮ್ಮ ಜಗತ್ತಿನ ಇಂದಿನ ಸ್ಥಿತಿಗೆ ಒಂದು ಸ್ವರೂಪವನ್ನು ತಂದು ಕೊಟ್ಟಿರುವ ಸಂಗತಿ ನಿರ್ವಿವಾದ. ಯಂತ್ರ ಕೈಗಾರಿಕೆ ಬೃಹತ್ತಾಗಿ ಬೆಳೆಯುತ್ತಿದೆ; ಮುಂದೆ ಬೆಳೆದು ದೊಡ್ಡದಾಗಲೇಬೇಕು. ಬದಲಾವಣೆಗಳು ಬರಲೇಬೇಕು. ಒಂದೊಂದು ದೇಶವೂ 'ಪ್ರತ್ಯೇಕ' ಎಂಬ ಮಾತು ಕನಸಿನದಾಗಬಹುದಾದಷ್ಟು ಈಗ ಜಗತ್ತು ಉಡುಗಿದೆ. ಪ್ರತಿಯೊಂದು ದೇಶವೂ ಪರಸ್ಪರ ಅವಲಂಬನೆಯಿಂದ ಬದುಕಬೇಕಾದುದು ಈಗ ಐತಿಹಾಸಿಕ ಸತ್ಯ ಸಂಗತಿ.

ನಮ್ಮ ಪೂರ್ವ ತಯಾರಿಗಳು ಶಿಕ್ಷಣದಲ್ಲಿ ಏನು ? :

ನಮ್ಮ ಸಾಮಾಜಿಕ ಜೀವನದಲ್ಲಿ ಬದಲಾವಣೆ ಬರುತ್ತಲಿದೆ. ಆರ್ಥಿಕ ಕ್ಷೇತ್ರದಲ್ಲಿ ಬದಲಾವಣೆ ಕಾಣುತ್ತಲಿದೆ.

ಶಿಕ್ಷಣವು—ನಮ್ಮ ಜನತೆಯನ್ನು ಎಲ್ಲ ಹಂತಗಳಲ್ಲಿಯೂ ಬದುಕಲು ಸಿದ್ಧಗೊಳಿಸಬೇಕು.

'ಇಡಿಯ ಮಾನವ'ನನ್ನು ಸಿದ್ಧಗೊಳಿಸಲು ನಮ್ಮ ಶಿಕ್ಷಣ ತೀವ್ರ ರೂಪಗೊಳ್ಳಲಿ.

ಗ್ರಹಗಳ ಶೋಧಗಳಿಗೆ ಹೋಗುವ ಗಗನ ಯಾನಿಗಳನ್ನು ಸಿದ್ಧಗೊಳಿಸುವ ರೀತ್ಯ ನಾವು ಈಗ ನಮ್ಮ ತರುಣರನ್ನು,— ಅವರು ಮುಂದೆ ಬದುಕಬಹುದಾದ ನಮಗೆ ಹೊಳೆಯಲಾರದ, ಮುಂದಿನ ಜೀವನಕ್ಕೆ ಸಿದ್ಧಗೊಳಿಸಬೇಕು.

ಇದಕ್ಕಾಗಿ ಬಹುದೊಡ್ಡ ಊಹೆ, ತರ್ಕ, ಯೋಜನೆಗಳು ಶಿಕ್ಷಣದಲ್ಲಿ ಬರಬೇಕಾದುದು ಕ್ರಮ ಪ್ರಾಪ್ತ.

ಈ ಸಿದ್ಧತೆಯ ಪರಿಶ್ರಮ ನಮಗೆ ತಲೆಯೊಜ್ಜೆಯಾಗಕೂಡದು. ಇದೊಂದು ನಮಗೆಲ್ಲ ಆನಂದದ ಆಹ್ವಾನವಾಗಬೇಕು. ವೀರಾ[೧೭] ಹೇಳಿದಂತೆ ' ಈ ಜವಾಬ್ದಾರಿ

---

[೧೭] Vera M. Dean— 'The Future of Education; E. J. Hugher (Ed). —Education in world Perspective; Harper & Row Publishers, New york, 1962.

ಯನ್ನು ನಾವು ಒಂದು ಭಾರವೆಂದು ಗ್ರಹಿಸುವುದು ಬೇಡ; ಇದೊಂದು ಅನುಪಮ ಸಂದರ್ಭ. ಈ ಅವಕಾಶವನ್ನು ನಾವು ಈಗ ಸದುಪಯೋಗಪಡಿಸಿಕೊಂಡು, ನಮ್ಮ ಮಾನವೀಯ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಿ ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳಬೇಕು'.

ಇನ್ನು ಮುಂದೆ ಬರಬಹುದಾದ ಆ ಜೀವನವನ್ನು ವ್ಯವಸ್ಥಿತವಾಗಿ ಬದುಕಲು ಸಮರ್ಥರಾಗುವ ಶಿಕ್ಷಣವನ್ನು ನಾವು ಈಗ ನಮ್ಮ ಮುಂದಿನ ಪೀಳಿಗೆಗಾಗಿ ಯೋಜಿಸಬೇಕು.

ಅವರು ನಿಪುಣರಿರುವಂತೆ ಉಳಿದ ಗುಣಗಳಾದ ನೀತಿ, ನಿಯತ್ತು, ಚಾರಿತ್ರ್ಯ, ವ್ಯಕ್ತಿತ್ವ, ಮಾನವತೆಗಾಗಿ ಪ್ರೀತಿ, ದುಡಿಮೆಗಾಗಿ ಗೌರವ, ಪರಿಶ್ರಮದ ಹುಮ್ಮಸ್ಸು ಮುಂತಾದವು ಅವರಲ್ಲಿ ಕುದುರಬೇಕು.

ಪುಸ್ತಕಗಳಾಗಲಿ, ಶಾಲೆಗಳಾಗಲಿ ಕೊಡದಿರುವಂತಹ ಅನೇಕ ವ್ಯವಹಾರಿಕ ಸದ್ಗುಣಗಳೂ ನಮ್ಮ ಯುವಕರಿಗೆ ಬೇಕು. ಅವರಲ್ಲಿಯ ಊಹಾಶಕ್ತಿ, ಕಲ್ಪಕತೆ, ವಿನೋದದ ಸ್ವಭಾವ, ಸಹನಶೀಲತೆ, ಪ್ರಾಮಾಣಿಕತೆ, ಧೈರ್ಯ, ಜೀವನದ ಬಗ್ಗೆ ನಿಷ್ಠೆ ಮುಂತಾದವುಗಳು ಅಷ್ಟೇ ಮಹತ್ವದವಾಗಿದೆ.

ಈ ದಿಸೆಯಲ್ಲಿ ಶಿಕ್ಷಕರ ತರಬೇತಿ ಅತ್ಯಂತ ಮಹತ್ವದ ಅಂಶವಾಗಿದೆ. ತನ್ನ ಸಮಾಜ, ದೇಶ, ವಿಶ್ವದ ಆಗು–ಹೋಗುಗಳಲ್ಲಿ ಶಿಕ್ಷಕನು ಮುಕ್ತನಾಗಿ ಭಾಗವಹಿಸಬೇಕಾದುದು ಈಗ ಬೇಕು. ಅವನು ನೇತಾರನಾಗಬೇಕು.

ಯಾವುದೊಂದು ವಿಷಯ ಶಿಕ್ಷಣದಲ್ಲಿ 'ದಿಢೀರ' ರೀತಿಯಲ್ಲಿ ಸಲ್ಲ. ಅದಕ್ಕಾಗಿ ಚಿಂತನೆ ಬೇಕು; ಯೋಜನೆ ಬೇಕು; ಯಾವುದು ಮುಖ್ಯ, ಅದಕ್ಕೆ ಪ್ರಾಶಸ್ತ್ಯಬೇಕು; ಅದನ್ನು ತ್ರಿಕರಣಪೂರ್ವಕವಾಗಿ ಕಾರ್ಯರೂಪಕ್ಕೆ ತರುವ ನಿರ್ಧಾರದ ಆಡಳಿತ ವ್ಯವಸ್ಥೆ ಬೇಕು.

ನಮ್ಮ ಪಾಠ್ಯಕ್ರಮ ತೀವ್ರ ಬದಲಾಗಬೇಕು. ಶಿಕ್ಷಣ ಹಂತಗಳಾದ ಪ್ರಾಥಮಿಕ ಮಾಧ್ಯಮಿಕ–ಉಚ್ಚಶಿಕ್ಷಣ–ವೃತ್ತಿಶಿಕ್ಷಣ–ಕಸಬುಗಳಶಿಕ್ಷಣ ಮುಂತಾದ ಅನೇಕ ಹಂತಗಳಲ್ಲಿ ಸಹ–ಸಂಬಂಧ ಬೆಳೆಯಬೇಕು.

ಜಗತ್ತಿನಲ್ಲಿ ಮೂಲೆ–ಮೂಲೆಗಳಲ್ಲಿ ಅನೇಕ ಉತ್ತಮಾಂಶಗಳು ಬೆಳಕಿಗೆ ಬಂದಿವೆ. ಅವುಗಳನ್ನು ನಾವು ಸ್ವೀಕರಿಸಿ ನಮ್ಮ ಶಿಕ್ಷಣದಲ್ಲಿ ಅಳವಡಿಸಬೇಕು. ಆದರೆ 'ಮಕ್ಕೀಕಾ–ಮಕ್ಕಿ' ಅಲ್ಲ.

ಶಿಕ್ಷಣದಲ್ಲಿ ಮಾನವ ಸಂಪನ್ಮೂಲಗಳನ್ನು ತರಬೇತುಗೊಳಿಸುವ ಯೋಜನೆಗಳು ಬರಬೇಕು. ನಮ್ಮ ಶಿಕ್ಷಣವು ನಮ್ಮ ಒಕ್ಕಲುತನದ, ಯಂತ್ರ ಕೈಗಾರಿಕೆಗಳ, ಸೇವಾ ಕ್ಷೇತ್ರಗಳ ಬೇಡಿಕೆಗಳಿಗೆ ಸ್ಪಂದಿಸಬೇಕು.

ನಮ್ಮ ವಿದ್ಯಾರ್ಥಿಗಳಿಗಷ್ಟೇ ಶಿಕ್ಷಣವಲ್ಲ; ಅವರ ಪಾಲಕರಿಗೂ ಈಗ ಶಿಕ್ಷಣ ಬರಬೇಕಾಗಿದೆ. ಅದಕ್ಕಾಗಿ ಅನೌಪಚಾರಿಕ ಶಿಕ್ಷಣದ ಸ್ಥಾನವು ಭೂಮವಾದದ್ದಾಗಿದೆ. ನಮ್ಮ ಶೈಕ್ಷಣಿಕ ತಂತ್ರಶಾಸ್ತ್ರವು ಈ ದಾರಿಯಲ್ಲಿ ನಮ್ಮನ್ನು ಬಲುದೂರ ಕೊಂಡೊಯ್ಯಬಹುದು.

ಪ್ರೌಢಶಿಕ್ಷಣಕ್ಕೂ ಈಗ ಹೆಚ್ಚಿನ ಪ್ರಾಶಸ್ತ್ಯ ದೊರೆತು, ಮುಂಬರುವ ಯುಗದಲ್ಲಿ ಅವರಲ್ಲಿ ನಿರಕ್ಷರಿಗಳ ಸಂಖ್ಯೆ ನಶಿಸುವಂತಾಗಬೇಕು.

ಈ ದಿಸೆಯಲ್ಲಿ ವಿಶ್ವವಿದ್ಯಾಲಯಗಳ ಸ್ಥಾನವು ಮಹತ್ವದ್ದಾಗಿದೆ. ಕೊನೆಯದಾಗಿ ಕರ್ಲರವರು ಹೇಳಿದಂತೆ* ಈಗ ನಾವು ಜಗತ್ತಿನ ಜನತೆಯನ್ನು ಅಭಿವೃದ್ಧಿಪಡಿಸುವಲ್ಲಿ ಅವರಿಗೆ ತರಬೇತಿ ಶಿಕ್ಷಣಗಳನ್ನು ಕೊಡಲು ಶ್ರಮಿಸಬೇಕು. ಇದು ಕೇವಲ ಯಾವುದೊಂದು ಆರ್ಥಿಕ ಪ್ರಗತಿಯ ಸಂಕುಚಿತತೆಗಾಗಿ ಅಲ್ಲ; ಆದರೆ, ಇನ್ನೂ ಅನೇಕಗಳಿಗಾಗಿ'. ಈ ದೇಶಕ್ಕೆ ನಾನಾತೆರನಾದ ಮಾನವ ಸಂಪನ್ಮೂಲಗಳು ಬೇಕು. ಅವರೆಲ್ಲ ಶಿಕ್ಷಣ ಹೊಂದಿ ನಾಗಕರಿಕ ತರಬೇತು ಪಡೆದವರಿರಬೇಕು. ಅಲ್ಲಿ ಡಾಕ್ಟರರು, ಇಂಜನಿಯರರು, ಶಿಕ್ಷಕರು, ವಿಜ್ಞಾನಿಗಳು, ಒಕ್ಕಲುತನದ ವಿಜ್ಞಾನಿಗಳು ಬೇಕಾಗುವಂತೆ ಇವರೆಲ್ಲರನ್ನುನೇತಾರರನ್ನಾಗಿ ಇರಿಸಿಕೊಂಡು ದುಡಿಯಬೇಕಾದ ಉಪವೃತ್ತಿಗಳು (Sub-Professionals) ಬೇಕು. ಇದಕ್ಕಾಗಿ ನಮ್ಮಲ್ಲಿ ಈಗಿರುವ ಜ್ಞಾನ, ಕೌಶಲಗಳು, ಶಕ್ತಿಗಳು ಉಪಯೋಗಿಸಲ್ಪಡಬೇಕು. ನಮ್ಮ ಸುಪ್ತಶಕ್ತಿಗಳ ಹ್ರಾಸವಾಗದೆ ಅವುಗಳ ಹೂಟ ಮಹತ್ವದ್ದು.

೧೩. ಭವಿಷ್ಯತ್ತಿನ ಶಿಕ್ಷಣಕ್ಕಾಗಿ ವ್ಯೂಹ (Strategy) :

ಮುಂಬರುವ ಶಿಕ್ಷಣಕ್ಕಾಗಿ ನಾವು ಈಗಿನಿಂದಲೇ 'ವ್ಯೂಹ' ರಚನೆ ಮಾಡಬೇಕು. ಪ್ರಾರಂಭಿಕವಾಗಿ, ಅದು ನಮ್ಮ ಜನತೆಯ ಮಾನಸಿಕ ಕ್ಷೇತ್ರಕ್ಕೆ ಸಂಬಧಿಸಿದುದಾಗಿದೆ. ನಮ್ಮ ಜನತೆಯನ್ನು ಅಭಿವೃದ್ಧಿಗಾಗಿ ಸಿದ್ಧಗೊಳಿಸುವಲ್ಲಿ ಶಿಕ್ಷಣದ ಮುಖಾಂತರ ಆ ಗುರಿಯನ್ನು ನಾವು ಮುಟ್ಟಬಹುದೆಂಬ ಭರವಸೆ ಅವರಿಗೆ ಹೊಳೆಯಬೇಕು.

ಶೇಕಡ ೮೦ ರಷ್ಟು ಜನ ಇಂದಿಗೂ, ಈ ದೇಶದಲ್ಲಿ ಗ್ರಾಮೀಣ ಪರಿಸರದಲ್ಲಿದ್ದಾರೆ. ಅವರ ಜೀವನ ಪುನರುತ್ಥಾನಗೊಳ್ಳಬೇಕು :

ಒಕ್ಕಲುತನದ ಶಾಸ್ತ್ರ, ಅಭ್ಯಾಸ, ತರಬೇತಿ ಬೆಳೆಯಬೇಕು.

ವಿಸ್ತರಣಾ ಕಾರ್ಯಕ್ರಮ ಹೆಚ್ಚಬೇಕು.

ವಿಜ್ಞಾನ ಶಿಕ್ಷಣದ ಆಸ್ಪದಗಳು ಹೆಚ್ಚಬೇಕು.

---

* Adam Curle— Educational strategy for Developing Societies; Tavistock Publications, London 1963 P. 169

ಪ್ರಾಥಮಿಕ ಶಿಕ್ಷಣದ ನಂತರದಲ್ಲಿ, ಜೀವನಕ್ಕೆ ಪ್ರವೇಶಿಸುವವರಿಗೆ ಒಕ್ಕಲುತನದ ಅನೇಕ ವೃತ್ತಿಗಳಿಗೆ ಪೂರಕವಾಗುವ ತರಬೇತಿ ದೊರೆಯಬೇಕು.

ಒಕ್ಕಲುತನದಲ್ಲಿ ಅರೆ ಉದ್ಯೋಗಕ್ಕೆ ಹೊಂದಲು ಅನೇಕ ಉಪ ವೃತ್ತಿಗಳ ಶಿಕ್ಷಣ ಬರಬೇಕು.

ಯಂತ್ರ ಕೈಗಾರಿಕೆಗಳ ವಿಸ್ತರಣೆ ಶಿಕ್ಷಣ–ತರಬೇತಿ–ಬರಬೇಕು.

ನಮ್ಮ ಕರ್ಮಚಾರಿಗಳ ಹೆಚ್ಚಳಿಕೆಗಾಗಿ, ಪ್ರೌಢಶಿಕ್ಷಣದಲ್ಲಿ ಗಣನೀಯ ಮಾರ್ಪಾಡುಗಳು ಬರಬೇಕು.

ಔಪಚಾರಿಕ ಶಿಕ್ಷಣದಲ್ಲಿಯೂ ಮಹತ್ವದ, ಕ್ರಾಂತಿಕಾರಿ ಬದಲಾವಣೆಗಳು ಬರುವುದು ಈಗ ಸೂಕ್ತ.

ಮಾಧ್ಯಮಿಕ ಶಿಕ್ಷಣಕ್ಕಿಂತ ಪೂರ್ವದ ಶಿಕ್ಷಣದ ಬಗ್ಗೆ ಜಾಗರೂಕತೆ.

ಮಾಧ್ಯಮಿಕ ಶಿಕ್ಷಣದ ವೃತ್ತೀಕರಣ.

ತ್ವರಿತಗತಿಯಲ್ಲಿ ವಿಸ್ತಾರಗೊಳ್ಳುತ್ತಿರುವ ಪ್ರಾಥಮಿಕ–ಮಾಧ್ಯಮಿಕ ಶಿಕ್ಷಣ ಕ್ಷೇತ್ರಗಳ ಉಸ್ತುವಾರಿ.

ನಮ್ಮ ವಿಶ್ವವಿದ್ಯಾಲಯಗಳು ಪಾಠ್ಯಕ್ರಮಗಳನ್ನು ಬದಲಿಸಬೇಕು. ಅವು ತರಬೇತುಪಡಿಸುವ ವಿದ್ಯಾರ್ಥಿಗಳು ನೇರವಾಗಿ ಸಮಾಜದಲ್ಲಿ ಸ್ವೀಕರಿಸಲ್ಪಡಬೇಕು. ವಿವಿಧ ತೆರನಾದ 'ಡಿಪ್ಲೋಮಾ' 'ಸರ್ಟಿಫಿಕೇಟ್' ಕಾರ್ಯಕ್ರಮಗಳನ್ನು ನಾವು ಈಗ ಅಲ್ಲಿ ತರುವುದು ಸೂಕ್ತ.

ವೀರ ರಾಘವರ ಅಭಿಪ್ರಾಯದಲ್ಲಿ[೧೯] ನಾವು ಈಗ ತ್ವರಿತರೀತಿಯಲ್ಲಿ ವೈಜ್ಞಾನಿಕ-ವಾದ ಸಾಮಾಜಿಕ ಸಂಶೋಧನೆಗಳನ್ನು ಕೈಕೊಳ್ಳಬೇಕು. ನಮ್ಮ ನಿರಂತರ ಮೌಲ್ಯಗಳನ್ನು ನಾವು ಸಂರಕ್ಷಿಸಿಕೊಳ್ಳಬೇಕು. ಅಪಾರ ಸಂಖ್ಯೆಯ ತರುಣವರ್ಗಕ್ಕೆ ಅವರ ಅವಶ್ಯಕತೆಗಳಿಗನುಸರಿಸಿ ತರಬೇತಿ ಬೇಕು. ನಮ್ಮ ಗ್ರಾಮೀಣ ಪರಿಸರವನ್ನು ಬದುಕಲು ಯೋಗ್ಯವಾಗುವಂತೆ ಮಾರ್ಪಡಿಸಬೇಕು. ಸುದೈವಕ್ಕೆ ಈಗ ಶಿಕ್ಷಣ ಸಮಸೂಚಿ ಪಟ್ಟಿಯಲ್ಲಿರುವುದರಿಂದ ನಮ್ಮ ಅನೇಕ ಸಮಸ್ಯೆಗಳು ತ್ವರಿತರೀತಿಯಲ್ಲಿ ಪರಿಹರಿಸಲ್ಪಡುವುದರಲ್ಲಿ ಯಾವ ಸಂದೇಹವಿಲ್ಲ.

---

೧೯ Veeraraghavan—'Higher Education and Development and changing strategies in the Indian context'; A. I. U. Higher Education and Development, 1975.

೧೬. ಈಗ ಏನು ಮಾಡಬಹುದು ?

—ನಮ್ಮ ಶಿಕ್ಷಣ ವ್ಯವಸ್ಥೆಯು ಈಗ ಯೋಜಿಸಲ್ಪಡಬೇಕು. ಪ್ರಾಥಮಿಕ ಶಿಕ್ಷಣದ ನಂತರದ ಎಲ್ಲ ಹಂತಗಳ ಬೆಳುವಣಿಗೆಗಳ ಬಗ್ಗೆ ಎಚ್ಚರಿಕೆಯು ಕಾಪು ಬೇಕು. ಪಾಶ್ಚಾತ್ಯ ದೇಶಗಳಲ್ಲಿ ಈಗ ಹೊಸ ಮನ್ವಂತರ ಬಂದಿದೆ. ತಮ್ಮ ಸಮಸ್ಯೆಗಳಿಗೆ 'ಸಿಸ್ಟಿಮ್ಸ್ ರೀತಿ' ಗಳನ್ನು ಅವರು ಅನುಸರಿಸುತ್ತಿದ್ದಾರೆ. ನಾವೂ ಕೂಡ ಈಗ ಹಿಂದೆ ಬೀಳಬಾರದು.

—ಶೈಕ್ಷಣಿಕ ಕ್ಷೇತ್ರದಲ್ಲಿ ನವೀಕರಣ ಬರಬೇಕು. ಅದಕ್ಕೂ ಪೂರ್ವದಲ್ಲಿ ಸಂಶೋಧನೆಗಳು ಬರಬೇಕು. ಈ ಸಂಶೋಧನೆಗಳು ನಮ್ಮ ಕಾರ್ಯಾನುಸರಣೆಗೆ ಒತ್ತು ಕೊಡಬೇಕು.

—ಜನತೆಯಲ್ಲಿ ಶಿಕ್ಷಣದ ಬಗ್ಗೆ ವಿಶ್ವಾಸವನ್ನು ಕುದುರಿಸುವುದೂ ಅಷ್ಟೇ ಅಗತ್ಯದ ಕೆಲಸವಾಗಿದೆ. ಶಿಕ್ಷಣದಿಂದ ಅವರ ಸಮಸ್ಯೆಗಳು ಪರಿಹರಿಸಲ್ಪಡುವ ಭರವಸೆ ಅವರಿಗೆ ದೊರೆಯಬೇಕು.

—ನಮ್ಮ ಶೈಕ್ಷಣಿಕ ಸಂಶೋಧನೆಗಳು ಈಗ ಇನ್ನೂ ಶೈಶವಾವಸ್ಥೆಯಲ್ಲಿವೆ. ಅವು ಪ್ರೌಢಗೊಳ್ಳಬೇಕು. ಈ ಸಂಶೋಧನೆಗಳ ಜವಾಬ್ದಾರಿಯನ್ನು ವಿಶ್ವವಿದ್ಯಾಲಯಗಳು ನಿರ್ವಹಿಸಬೇಕು. ಅವುಗಳ ಫಲಿತಾಂಶಗಳು ಶಿಕ್ಷಣ ಕ್ಷೇತ್ರದಲ್ಲಿ ಅಳವಡಿಸಲ್ಪಡಬೇಕು.

—ಶಿಕ್ಷಣ ಕ್ಷೇತ್ರದಲ್ಲಿ ಮಾಡಬೇಕಾದುದೆಲ್ಲವನ್ನೂ ಒಂದೇ ಸಲಕ್ಕೆ, ಸಾಮೂಹಿಕವಾಗಿ ಮಾಡಲು ಆಗಲಿಕ್ಕಿಲ್ಲ. ನಮ್ಮ ಆರ್ಥಿಕ ತೊಂದರೆಗಳು ಅದಕ್ಕೆ ಮೂಲ ಕಾರಣ; ಅದಕ್ಕಾಗಿ ನಾವು ಪ್ರಾಶಸ್ತ್ಯಗಳನ್ನು ಇರಿಸಿಕೊಳ್ಳಬಹುದಾಗಿದೆ.

—ನಮ್ಮ ಆಡಳಿತವು ಇನ್ನೂ ಪುನರ್‌ನವೀಕರಿಸಲ್ಪಡಬೇಕು. ಬದಲಾದ ನಮ್ಮ ಶಿಕ್ಷಣ ಕ್ಷೇತ್ರದ ಆಶೋತ್ತರಗಳನ್ನು ಅದು ಈಡೇರಿಸಲು ಸನ್ನದ್ಧವಾಗಬೇಕು.

—ಈ ಕ್ಷೇತ್ರದ ಮಹತ್ವದ ಮಾನವ ಸಂಪನ್ಮೂಲಗಳೆಂದರೆ—ಶಿಕ್ಷಕರು. ಅವರ ನವೀಕರಣವೂ ಈಗ ಬೇಕು.

—ಕಲಿಯುವ-ಕಲಿಸುವ ಧಾರೆಗಳಲ್ಲಿಯೂ ನವೀಕರಣ ಬರಬೇಕು. ಇವುಗಳಿಗೆಲ್ಲ ಜೀವನಾಡಿಯಂತೆ ಹಣದ ಒದಗಣೆ ಇದೆ. ಯಾವುದೇ ಸಂದರ್ಭದಲ್ಲಿಯೂ ಶಿಕ್ಷಣಕ್ಕೆ ಹಣದ ತೊಂದರೆ ಬರಬಾರದು. ೧೯೭೭ ರಲ್ಲಿ ಕೂಡಿದ ರಾಷ್ಟ್ರೀಯ ಶಿಕ್ಷಣ ಸಮ್ಮೇಲನವು[೨೦] ನುಡಿದಂತೆ, ನಮ್ಮ ಗುರಿಯು ಕ್ರಮೇಣ ಶಿಕ್ಷಣಕ್ಕೆ ಹೆಚ್ಚು ಭಾಂಡವಲವನ್ನು ಹೂಡುವುದೇ ಆಗಬೇಕು. ಅದು ನಂತರ ಶೇಕಡ ೬ ರಷ್ಟು ರಾಷ್ಟ್ರೀಯ ಆದಾಯದ ಹೂಡುವಿಕೆಗೆ ನಿಲುಕಬೇಕಾದುದು ಕ್ರಮ ಪ್ರಾಪ್ತ.

೨೦ Shriman Narayan (Chairman)— 'National Educational Conference;' Quest in Education, -Vol 15 No 1. Jan. 1978.

ಸಾಮಾಜಿಕವಾಗಿ ಉಪಯುಕ್ತ ಅಭಿವೃದ್ಧಿ ಕಾರ್ಯ :

ನಮ್ಮ ಶಿಕ್ಷಣ ಬೆಳೆದು ಬಂದ ದಾರಿ ಎರಡು ನೂರು ವರ್ಷಗಳ ಹಿನ್ನೆಲೆಯನ್ನು ಹೊಂದಿದೆ. ಸ್ವಾತಂತ್ರ್ಯ ನಂತರದಲ್ಲಿ ಮೂವತ್ತು ವರ್ಷಕ್ಕೂ ಮಿಕ್ಕಿದಂತಾಯಿತು. ಇಷ್ಟಾದರೂ ಶೇಕಡ ೭೦% ರಷ್ಟು ಕಡು ಬಡವರು ! ೩೬% ರಷ್ಟು ಸಾಕ್ಷರರು ! ಶೇಕಡ ೮೦ ರಷ್ಟು ಇನ್ನೂ ಗ್ರಾಮೀಣ ಪರಿಸರದ ಒಕ್ಕಲುತನವನ್ನು ನಂಬಿಕೊಂಡವರು! ೧೯೮೦ ರಲ್ಲಿ ನಮ್ಮ ಒಟ್ಟು ರಾಷ್ಟ್ರೀಯ ಉತ್ಪಾದನೆ (G. N. P.) ೪.೫% ಕ್ಕಿಂತ ಮೇಲೇರಲಿಲ್ಲ. ಒಕ್ಕಲುತನದ ಅಭಿವೃದ್ಧಿ ೩% ಮಾತ್ರ ಆಗಿದೆ. ಯಂತ್ರ ಕೈಗಾರಿಕೆಗಳಲ್ಲಿ ಶೇಕಡ ೮% ಆಯಿತು. ರಾಷ್ಟ್ರೀಯ ಆದಾಯ ಹಣದ ರೂಪದಲ್ಲಿ—೯೨೦೦೦ ಕೋಟಿ ರೂಪಾಯಿಗಳು. ತಲಾ ಆದಾಯ ರೂ. ೧೩೫೦/– ಮಾತ್ರ ಆಗಿದೆ.

ಈ ದಿಸೆಯಲ್ಲಿ ೧೯೮೬ ರ ನಂತರ ನಮ್ಮ ಶಿಕ್ಷಣದಲ್ಲಿ ನಾವು ಶೇಕಡ ೨೦% ಶಾಲಾ ಮಕ್ಕಳು ವೃತ್ತಿ ತರಬೇತಿಯಲ್ಲಿ, ಶೇಕಡ ೫೦% ರಷ್ಟು ಎಸ್. ಎಸ್. ಎಲ್. ಸಿ. ನಂತರದಲ್ಲಿ ವಿವಿಧ ತರಬೇತುಗಳಲ್ಲಿ ಸೇರುವುದನ್ನು ಇತ್ತೀಚಿನ ಕೊಠಾರಿ ಆಯೋಗದವರು ನಿರೀಕ್ಷಿಸಿದ್ದಾರೆ.* ಇಂದಿನ ಕೂಗು,— ಯಾಂತ್ರೀಕರಣ ! ಈ ಯಾಂತ್ರೀಕರಣದಿಂದ ನಾವು ಉತ್ಪಾದನೆಯನ್ನು ಹೆಚ್ಚಿಸಬೇಕು. ಈ ಉತ್ಪಾದನೆಯು ನಿಂತಿರುವುದು, ಎರಡು ಅಂಶಗಳನ್ನು ಅವಲಂಬಿಸಿ :

೧. ನಮ್ಮ ಮಾನವ ಸಂಪನ್ಮೂಲಗಳು.

೨. ನಮ್ಮ ಉಳಿದ ಸಂಪನ್ಮೂಲಗಳು.

ಈ ಮಾನವ ಸಂಪನ್ಮೂಲವನ್ನು ಶಿಕ್ಷಣದ ಮುಖಾಂತರ ಯಂತ್ರಯುಗಕ್ಕೆ ತರುವಾಗ, ವಿಜ್ಞಾನದ ಶಿಕ್ಷಣ, ತಾಂತ್ರಿಕ ಶಿಕ್ಷಣ, ಎಂಜಿನಿಯರಿಂಗ್ ಶಿಕ್ಷಣ ಅಗತ್ಯವಾದವುಗಳಾಗಿವೆ. ಆದರೆ, ಇದು ಒಮ್ಮೆಲೇ ಸಾಧ್ಯವಾಗಲಾರದು. ಓರ್ವ ಎಂಜನಿಯರ್ ಸಿದ್ಧಗೊಳ್ಳಲು ಸುಮಾರು ೨+೭+೩+೨+೩ ವರ್ಷಗಳ ಹಿನ್ನೆಲೆಯಿದೆ. ಆ ದಿಸೆಯಲ್ಲಿ ಪ್ರಾಥಮಿಕ ಹಂತದಲ್ಲಿ, ಮಾಧ್ಯಮಿಕ ಹಂತದಲ್ಲಿ, ಉಚ್ಚ ಹಂತದಲ್ಲಿ ನಾವು ಮಾಡಬಹುದಾದ ಇಂದಿನ ಕಾರ್ಯಕ್ರಮಗಳ ಪ್ರಭಾವ ಮುಂದಿನ ೨೦ ವರ್ಷಗಳ ಬುತ್ತಿಯಾಗುತ್ತದೆ. ನಮಗೆ ಅರೆಕೌಶಲದ, ಕೌಶಲದ, ಉಸ್ತುವಾರಿಯ, ಉಚ್ಚ ತಾಂತ್ರಿಕ, ಯಂತ್ರ ಕೈಗಾರಿಕೆಗಳ ಮಾನವ ಸಿಬ್ಬಂದಿ ಬೇಕು. ಪ್ರಾಥಮಿಕ ಹಂತದಲ್ಲಿ ಕಾರ್ಯಾನುಭವದಿಂದಲೇ ಈ ಮಾತು ಸತ್ಯಗೊಳ್ಳುವದು ಅಗತ್ಯ. ಈ ವಿಚಾರದಲ್ಲಿ ಇತ್ತೀಚಿನ

---

*D. S. Kothari —Education Commission Report Govt. of India, New Delhi, 1964–66.

ಈಶ್ವರಭಾಯಿ ಪಟೇಲ ಸಮಿತಿಯುವರು೧ ಶಿಫಾರಸು ಮಾಡಿದ 'ಸಾಮಾಜಿಕವಾಗಿ ಉಪಯುಕ್ತ ಅಭಿವೃದ್ಧಿಯ ಕೆಲಸ'ದ ಹರಹನ್ನು ನಾವು ತೀವ್ರ ಗುರುತಿಸಬೇಕು.

ಇದನ್ನೇ ಆದಿಶೇಷಯ್ಯ ಸಮಿತಿಯು೨ ಮತ್ತೂ ವಿಚಾರಿಸಿದೆ. ಹಾಯಸ್ಕೂಲ ನಂತರದ ಪಿ. ಯು. ಸಿ. ವರ್ಗಗಳಲ್ಲಿ ವೃತ್ತಿ ಶಿಕ್ಷಣದ ಬಗ್ಗೆ ಈ ಸಮಿತಿಯು ಅನೇಕ ಕ್ರಾಂತಿಕಾರಿ ಶಿಫಾರಸುಗಳನ್ನು ಮಾಡಿ, ಮಹಾತ್ಮಾ ಗಾಂಧೀಜಿಯವರು ಸಂಶೋಧಿಸಿ, ಪ್ರಚಲಿತಗೊಳಿಸಿದ, 'ಮೂಲ ಶಿಕ್ಷಣ'ದ ಬೇರುಗಳನ್ನೇ ಗಟ್ಟಿಗೊಳಿಸಿ, ಇಂದಿನ-ಮುಂದಿನ ನಮ್ಮ '೧೦+೨' ರ ಶಿಕ್ಷಣಕ್ಕೆ ಬುನಾದಿಯನ್ನು ಹಾಕಿದ್ದಾರೆ.

೧೦+೨+೩ ಇದು ನಮ್ಮ ಶಿಕ್ಷಣವನ್ನು ಸಾಮಾಜಿಕವಾಗಿ ಉಪಯುಕ್ತವನ್ನಾಗಿ ಮಾಡುವ ಎತ್ತುಗಡೆಯಲ್ಲಿನ ಪಡಿಕಟ್ಟು. ಇತ್ತೀಚಿನ ಒಂದು ವಿದ್ವಾಂಸರ ವರದಿ ಹೇಳುವಂತೆ, ಕ್ರಿ. ಶ. ೨೦೦೦ ಕ್ಕೆ 'ಆರ್ಟ್ಸ' 'ಸಾಯಿನ್ಸ್' 'ಕಾಮರ್ಸ್' ವಿದ್ಯಾರ್ಥಿಗಳ ಸಂಖ್ಯೆ ಇದೇ ರೀತಿ ಮುಂದುವರಿದದ್ದಾದರೆ— ಅದು ಅಪರಿಮಿತವಾಗಿ ಬೆಳೆದು ದೇಶಕ್ಕೆ ನಿರುದ್ಯೋಗದ ತೊಂದರೆಯನ್ನು ತರುತ್ತದೆ. ವೃತ್ತಿಮೂಲ ಶಿಕ್ಷಣ ಕ್ಷೇತ್ರಗಳು ಈಗ ಹೆಚ್ಚಾಗಬೇಕು. ನಮ್ಮ ಒಕ್ಕಲುತನವೂ ಈಗ ಯಂತ್ರಕೈಗಾರಿಕೆಯಂತೆ ಬೆಳೆಯಲು ಉಪಕ್ರಮಿಸಿದೆ. ಸೇವಾಕ್ಷೇತ್ರಗಳೂ ಬೆಳೆಯುತ್ತಲಿವೆ. ಈ ದಾರಿಯಲ್ಲಿ ನಮ್ಮ ಶಿಕ್ಷಣದ ಪಡಿಕಟ್ಟನ್ನು (Structure) ಬದಲಿಸಬೇಕಾದ ಶೀಘ್ರ ಪ್ರಮೇಯ ಬಂದಿದೆ.

ಅದಕ್ಕಾಗಿ ಪ್ರಾಥಮಿಕ ಹಂತದಲ್ಲಿ ಕಾರ್ಯಾನುಭವವು ಬರುವಂತೆ, ಮಾಧ್ಯಮಿಕ ಕ್ಷೇತ್ರದಲ್ಲಿ ಅದುವೇ ಪಡಿಲೊಡೆದು ವೃತ್ತಿ ಶಿಕ್ಷಣಕ್ಕೆ ಬರಬೇಕು. ಉಚ್ಚ ಶಿಕ್ಷಣದ ಹಂತವನ್ನು ಮುಟ್ಟುವಾಗ ಅದರ ಹರಹು-ವ್ಯಾಪ್ತಿಗಳು ಸಾಕಷ್ಟು ಅಭಿವೃದ್ಧಿಶೀಲವಾಗಬೇಕು.

೧೫. ಉಪಸಂಹಾರ :

ನಮ್ಮ ಶಿಕ್ಷಣವು ಶಕ್ತಿವಂತವಾಗಿ ಬೆಳೆದುಬರಬೇಕು. ಅದು ನಮ್ಮ ಮುಂದಿನ ಪೀಳಿಗೆಗೆ ದಾರಿದೀಪವಾಗಬೇಕು. ಈ ದೇಶದ ಶಿಕ್ಷಣ ಈ ದೇಶಕ್ಕಷ್ಟೇ ಪರಿಸೀಮಿತವಾಗಿಲ್ಲ. ನಮ್ಮ ಬೆಳವಣಿಗೆಗಳು ಉಳಿದ ದೇಶಗಳಿಗೂ ನಿಲುಕಬಹುದಾಗಿದೆ. ಕೂಂಬ್ಸ್ ಹೇಳುತ್ತಾರೆ : 'ನಿಮ್ಮ ಶೈಕ್ಷಣಿಕ ಪದ್ಧತಿ ಯಾವ ಸ್ವರೂಪದ್ದೇ ಇರಲಿ, ಈ ಗ್ರಹದ ಅನೇಕ ಪ್ರದೇಶಗಳಲ್ಲಿ ಈಗ ಸೇವೆ ಮಾಡಬೇಕಾದ ದೊಡ್ಡ ಸಮಾಜವು ತೊಂದರೆಗೊಳಗಾದರೆ, ಆಗ ಯಾವ ದೇಶವೇ ಆಗಲಿ, ಅದು ಎಷ್ಟೇ ಶ್ರೀಮಂತವಿರಲಿ, ಈ

೧ ಈಶ್ವರಭಾಯಿ ಪಟೇಲ ಸಮಿತಿ—'Socially useful productive work' July-Nov-1977.

The Concept of SUPW.

೨ Malcom Adisheshaiah Committee Report, 1978.

ಪರಿಣಾಮಗಳಿಗೆ ಪಕ್ಕಾಗಲೇಬೇಕು. ನಮ್ಮ ಶೈಕ್ಷಣಿಕ ತೊಂದರೆಗಳು ಪ್ರತಿಯೊಬ್ಬರ ತೊಂದರೆಗಳಾಗಿವೆ.*

ದೇಶದ ಅಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರವೇನೆಂಬುದಕ್ಕೆ ಈ ಹಿಂದೆ ವಿವಿಧ ಸಲಹೆ-ಸೂಚನೆಗಳು ಬಂದವು. ದೇಶದ ಪ್ರಗತಿಗೆ ಏನು ಮಾಡಬೇಕೆಂಬುದಕ್ಕೆ ಶಿಕ್ಷಣದ ಸಾಮೀಪ್ಯವು ಪರಿಹಾರದಂತೆ ಬಂದಿದೆ. ನಂತರ 'ಶಿಕ್ಷಣದ ವಿಸ್ತರಣೆ' ಒಂದು ಕಾಲಕ್ಕೆ ಪರಿಹಾರದಂತೆ ಸೂಚಿಸಲ್ಪಟ್ಟಿತು. ಈ ವಿಸ್ತರಣೆಗೆ ಅಂಗಗಳಾಗಿ, ಗುಣಮಟ್ಟವಿರುವಂತೆ, ಗಾತ್ರವೂ ಕೂಡಿಕೊಂಡಿತು. ದೇಶದ ಅಭಿವೃದ್ಧಿಗೆ ವೃತ್ತಿ ಮೂಲ ಕೌಶಲಗಳಲ್ಲಿ ತರಬೇತಿಯಿಂದ ನಾವು ಏನನ್ನಾದರೂ ಪಡೆಯಬಹುದೆಂಬ ಮಾತೂ ಈಗ ಹುಸಿಯಾಯಿತು. ೧೯೭೦ರಲ್ಲಿ ತಾಂತ್ರಿಕ ಶಿಕ್ಷಣದ ವಿಸ್ತರಣೆಯಿಂದ ನಮಗಾದ ತೇಜೋವಧೆ ಸಣ್ಣದಲ್ಲ. ನಮ್ಮ ಶಿಕ್ಷಣದ ಹರಹು-ವ್ಯಾಪ್ತಿಗಳನ್ನು ಅರ್ಥೈಸಿ ನಾವು ಮುಂದುವರಿಯುವುದು ಸೂಕ್ತ.

ದೇಶದ ಅಭಿವೃದ್ಧಿಗೆ ಹಂತಗಳುಂಟು. ಈ ಹಂತಗಳಿಗೆ ಸಂವಾದಿಯಾದ ಶೈಕ್ಷಣಿಕ ಹಂತಗಳನ್ನು ನಾವು ನಿರ್ಮಿಸಿ ಅವುಗಳೊಡನೆ ಹೊಂದಿಸುವುದೂ ಕೌಶಲದ ಕಾರ್ಯವಾಗಿದೆ. ತರುಣರನ್ನು ಎಷ್ಟೊಂದು ವರ್ಷಗಳವರೆಗೆ (ಸುಮಾರು ೨೩, ೨೫ ವರ್ಷಗಳು) ನಾವು ಅವರನ್ನು ಶಿಕ್ಷಣ ಕ್ಷೇತ್ರಗಳಲ್ಲಿ ಇರಿಸಲು ಸಾಧ್ಯ? ಈ ವಾಸ್ತವ್ಯ ದಿಂದ ಅವರು ನಮ್ಮ ಆರ್ಥಿಕ ಪ್ರಗತಿಗೆ ಯಾವ ರೀತಿ ಸಹಾಯಕರಾಗಬಹುದು? ನಮ್ಮ ಮಾನವೀಯ ಸಂಪನ್ಮೂಲಗಳನ್ನು ಎಣಿಕೆ ಮಾಡುವುದು ಹೇಗೆ? ನಾವು ಈಗ ನಮ್ಮ ದೇಶದಲ್ಲಿ ಬದಲಾವಣೆಗಳನ್ನು ತರುತ್ತಿದ್ದೇವೆ. ಆ ದಿಸೆಯಲ್ಲಿ ನಮ್ಮ ಸಂಸ್ಕೃತಿಯಲ್ಲಿಯ ಉತ್ತಮಾಂಶಗಳನ್ನು ಹಿಡಿದಿಟ್ಟುಕೊಂಡು, ಅವುಗಳನ್ನು ಹೊಸ ಶೈಕ್ಷಣಿಕ ಮನ್ವಂತರಗಳಿಗೆ ಹೂಡುವುದೆಂತು? ಪ್ರಜಾಪ್ರಭುತ್ವವು ನಿರಂತರವಾಗಿ ಉಳಿದು ಶಕ್ತಿವಂತವಾಗಿ ಬೆಳೆಯಬೇಕಾದರೆ ನಮ್ಮ ನಾಗರಿಕರಲ್ಲಿ ಯಾವ ವ್ಯಕ್ತಿತ್ವ-ಚಾರಿತ್ರ್ಯಗಳು ಕಲಿಸಲ್ಪಡಬೇಕು? ಸಾಮಾಜಿಕ ಬದಲಾವಣೆ ಬರಬೇಕಿದ್ದರೂ ಸಾಮಾಜಿಕ ದುರಂತವನ್ನು ತಪ್ಪಿಸಿ ಈ ಬದಲಾವಣೆಗಳು ಬರುವುದು ಹೇಗೆ?

ಇಂದಿನ ನಮ್ಮ ಸಮಾಜವು ಹಿಂದುಳಿದುಕೊಂಡೇ ಬದುಕಲು ಈಗ ಇಚ್ಛೆ ಪಡುವುದಿಲ್ಲ. ಹಸಿವು-ಬಡತನಗಳನ್ನು ಅವರು ಇನ್ನು ಸಹಿಸಲಾರರು. ಯಾವುದೆಲ್ಲ ಅವರಿಗೆ ತೀವ್ರ ಬೇಕು. ಹ್ಯಾನ್‌ಸನ್-ಬ್ರೆಂಬೆಕ್‌ರು ಹೇಳುವಂತೆ, ಇಂದು ನಮ್ಮ ಶಿಕ್ಷಣವು ಅಭಿವೃದ್ಧಿಪರದೇಶಗಳಲ್ಲಿ ದೊಡ್ಡ ಉದ್ದಿಮೆ. ಸರಕಾರ ಒಂದನ್ನು ಬಿಟ್ಟರೆ, ಶಿಕ್ಷಣವು ಪ್ರತಿಯೊಬ್ಬ ಮಾನವನ ಜೀವನದಲ್ಲಿಯೂ ನೇರವಾಗಿ ಪ್ರವೇಶಿಸುವುದಲ್ಲದೆ,

P. H. Coombs– The world Educational Crisis,– A systems Analysis; A. A. Whealer & Co. Alhabad, 1968.

ಅವರ ಮೇಲೆ ತನ್ನ ಪ್ರಭಾವವನ್ನು ಬೀರುತ್ತದೆ. ಇಂದು ಶಿಕ್ಷಣಕ್ಕಾಗಿ ವೆಚ್ಚಗಳು ಉಳಿದ ವೆಚ್ಚಗಳಿಗಿಂತ ಹೆಚ್ಚುತ್ತಲಿವೆ. ಪರದೇಶಗಳಿಂದಲೂ ಹಣ ಈ ದೇಶಗಳಿಗೆ ಹರಿಯುತ್ತಲಿದೆ. ಆದರೂ ಶಿಕ್ಷಣ ದೊಡ್ಡದಾಗಿ ಬೆಳೆಯಲಿಲ್ಲ; ಅದುಪ್ರಭಾವಶಾಲಿಯೂ ಆಗಲಿಲ್ಲ. ಅದನ್ನು ಶಕ್ತಿಶಾಲಿಯಾಗಿ ಮಾಡಬಹುದಾದ ಮಾನವ ಸಂಪನ್ಮೂಲ ಅಲ್ಲಿಯೇ ಇದೆ. ಆದರೆ ಕೇವಲ ಮಾನವ ಅಭಿಲಾಷೆಗಳಾಗಲಿ, ಆಕಾಂಕ್ಷೆಗಳಾಗಲಿ, ಮಾನವನ ಸುಪ್ತಶಕ್ತಿಗಳಷ್ಟೇ ಈ ಪ್ರಗತಿಗಾಗಿ ಸಾಕಾಗಲಾರವು. ಈ ಸುಪ್ತಶಕ್ತಿಗಳನ್ನು ಜಾಣ್ಮೆಯಿಂದ ಹೂಡಿ, ನಮ್ಮ ಪ್ರಗತಿಯನ್ನು ಸಾಧಿಸಬಹುದಾಗಿದೆ.* ”

ಮುಂಬರುವ ೨೧ ನೆಯ ಶತಮಾನಕ್ಕಾಗಿ ನಾವು ಇಂದಿನಿಂದಲೇ ಕಾರ್ಯತತ್ಪರರಾಗಬೇಕು. ನಮ್ಮ ಜನಸಂಖ್ಯೆ ಅದರ ಹೃದಯದಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಗುರುತಿಸಲ್ಪಡಬೇಕು. ಆದರೊಡನೆ ಈಗ ಶೈಕ್ಷಣಿಕ ಯೋಜನೆಗಳು ಯೋಜಿಸಲ್ಪಡಬೇಕು. ಈ ಯೋಜನೆಗಳನ್ನು ನಿರ್ಮಿಸುವಲ್ಲಿ ನಮ್ಮ ದೇಶದ ಬೇಡಿಕೆಗಳು ಧ್ವನಿತವಾಗಬೇಕು. ಪ್ರಜಾಪ್ರಭುತ್ವವನ್ನು ನಾವು ಸಂರಕ್ಷಿಸಿಕೊಂಡು, ಮಾನವನ ವೈಯಕ್ತಿಕ ಪ್ರಗತಿಗೆ ಪ್ರೋತ್ಸಾಹನೆಯೊಡನೆ ಈ ಸಾಮೂಹಿಕ ಪ್ರಗತಿಯನ್ನು ತರಲು ಈಗ ದೊಡ್ಡದಾದ ರೀತಿಯಲ್ಲಿ ನಾವು ಸಮರ ಸನ್ನಾಹವನ್ನು ಮಾಡುವುದರಲ್ಲಿಯೇ ಈ ಜನಾಂಗದ ಉದ್ಧಾರವಿದೆ.

ಆಕರಗಳು

1. V. Eshwar Reddy— ‘Model Education for the Future’ Journal of Indian Education, Vol. III No. 6, March 1978.

2. J. Vaizey— ‘Planning of Higher Education in the Seventies’, R.E. Bell & A.J. Youngson (Ed.) Present and Future in Higher Education, Tavistock Publications, 1970.

3. UNESCO— Learning to be— the world of Education today and tommorow; United Nation's Educational, scintific and Cultural Organisation, Paris, 1972.

* J. W. Hanson,C. S. Brembeck—Education and Development of Nations; Holt, Renehart and Winston Chicago, 1966.

4. A. B. Shah (Ed.)— The Social Context of Education; Allied Publishers, Pvt. Ltd., Bombay, 1978.

5. D.S. Kothari (Ed)- The Education Commission's Report; Govt. of India, New Delhi, 1966.

6. P. H. Coombs— The World Educational Crisis; A. H. Wheeler. Co. Ltd., Alhabad, 1968.

7. E. J. Hughes— (Ed.) Education in World Perspective; Harper & Row, Publishers, NewYork 1962.

7. E. J. Harbinson & C A. Myers— Education, Man power, and Economic Growth; Oxford & I. B. H. Publishing Co., 1964

8. J. P. Naik—Policy and Performance in Indian Education; Orient Longmans, New Delhi, 1975.

9. Don Adams (Ed.)— Education in National Development; Routledge & Kegan Paul, London, 1971.

10. UNESCO— Man Power Aspects of Educational Planning; International Institute for Educational Planning; Paris, 1968.

11. J. Vaizey— Education in Modern World; World University Library, London, 1967.

12. T. W. Schultz— The Economic Value of Education; Columbia University Press, London, 1967.

13. G. P. Saxena— 'Crisis of Education'; The Education Quarterly, April, 1973.

14. S. Panandikar— 'Secondary Education in the Seventees'; The Education Quarterly, Oct., 1970.

15. L. J. Burrows— 'Educational Innovations and Change'; Trends in Education, Vol. July 1274.

16. Anand Guruge— ' Second Generation Educational Planning; New Frontiers in Education, Vol. III, No. 2, Aug.-1973.

17. K. L. Joshi— Problems of Higher Education in India: Popular Prakashan, Bombay, 1976.

18. S. K. Saini— Development of Education in India; Cosmo Publications, New Delhi, 1980.

19. UNESCO— The Fourth Regional Conference of Ministers of Education, and those Responsible for Economic Planning in Asia Oceania; E. P. A. Bulletin Vol. I No. 3. Oct., 1978.

20. Gunnar Myrdal— Asian Drama; Allen Lane, The Penguin Press, London, 1968.

◎◎◎

ಕರ್ನಾಟಕದಲ್ಲಿ ಶಾರೀರಿಕ ಶಿಕ್ಷಣ ತರಬೇತಿ ಸಂಸ್ಥೆಗಳು ಮತ್ತು ಪ್ರಾಥಮಿಕ ಶಾಲೆಗಳಲ್ಲಿ ಶಾರೀರಿಕ ಶಿಕ್ಷಣ

—ಎಸ್. ಸಿ. ಚರಂತಿಮಠ

ಪೃಥ್ವಿಯ ಮೇಲೆ ಮಾನವಜೀವಿಯ ಹುಟ್ಟು ಎಂದಿನಿಂದ ಆಯಿತೋ ಅಂದಿನಿಂದ ಶರೀರ ಶಿಕ್ಷಣದ ಇತಿಹಾಸ ಪ್ರಾರಂಭವಾಯಿತು. ಮಾನವ ಚೇತನ ಸ್ವರೂಪಿ; ಚಟುವಟಿಕೆಯುಳ್ಳ ಪ್ರಾಣಿ. ತನ್ನ ಆಹಾರ ಆಸರೆಗಾಗಿ ಏನಾದರೊಂದು ಚಟುವಟಿಕೆಯನ್ನು ಮಾಡುತ್ತಲೇ ಇರುತ್ತಾನೆ. 'ಮಾನವನು ದೈಹಿಕ, ಬೌದ್ಧಿಕ ಹಾಗೂ ನೈತಿಕ ಬೆಳವಣಿಗೆಗಾಗಿ ತಾನು ಕೈಕೊಳ್ಳುವ ಶಾರೀರಿಕ ಚಟುವಟಿಕೆಗಳೇ ಶರೀರ ಶಿಕ್ಷಣ'. ಶಾರೀರಿಕ ಚಟುವಟಿಕೆಗಳ ವಿನಃ ಮನುಷ್ಯನ ಸಂಪೂರ್ಣ ಬೆಳವಣಿಗೆಯು ಅಸಾಧ್ಯ.

ಕರ್ನಾಟಕದಲ್ಲಿ ಶರೀರ ಶಿಕ್ಷಣ ತರಬೇತಿ ಹೊಸದೇನು ಅಲ್ಲ. ಕರ್ನಾಟಕದ ಅರಸರಾದ ಕದಂಬ, ಚಾಲುಕ್ಯ, ಹೊಯ್ಸಳ, ವಿಜಯನಗರ ಮತ್ತು ಮೈಸೂರ ಅರಸರು ಕ್ರೀಡೆ, ಕಲೆ, ಸಾಹಿತ್ಯಪ್ರೇಮಿಗಳಾಗಿದ್ದರು. ಕುದುರೆಸವಾರಿ, ಕತ್ತಿವರಸೆ, ಈಜು, ಡೋಣಿ ನಡೆಸುವದು ಮೊದಲಾದ ಸ್ಪರ್ಧೆಗಳನ್ನು ಏರ್ಪಡಿಸಿ ಕ್ರೀಡಾಪಟುಗಳನ್ನು ಸತ್ಕರಿಸಿ ಸನ್ಮಾನಿಸುತ್ತಿದ್ದರು.

ಇಪ್ಪತ್ತನೆಯ ಶತಮಾನದ ಆರಂಭದ ಅವಧಿಯು ಸಾಂಪ್ರದಾಯಿಕ ಮತ್ತು ಆಧುನಿಕ ಪ್ರಕಾರದ ಶಾರೀರಿಕ ಶಿಕ್ಷಣ, ದೈಹಿಕ ಚಟುವಟಿಕೆ ಮತ್ತು ಆಟಪಾಟಗಳ ಸಂಗಮ– ಕಾಲವೆನ್ನಬಹುದು. ಆಗ ವಿದ್ಯಾ ಸಂಸ್ಥೆಗಳ ಹೊರತಾಗಿ ವ್ಯಾಯಾಮ ಶಾಲೆ, ತಾಲೀಮಖಾನೆ ಇವು ಸಾಮಾನ್ಯ ಜನರಿಗೆ ದೈಹಿಕ ಚಟುವಟಿಕೆಗಳ ಕೇಂದ್ರಗಳಾಗಿದ್ದವು.

ಕ್ರಿ. ಶ. ೧೯೨೦ನೆಯ ವರುಷವು ಭಾರತದಲ್ಲಿ ಶಾರೀರಿಕ ಶಿಕ್ಷಣ ಕ್ಷೇತ್ರದಲ್ಲಿ ಮನ್ವಂತರವನ್ನೇ ಪ್ರಾರಂಭಿಸಿತೆನ್ನಬಹುದು. ಆ ವರುಷದಲ್ಲಿ ಶಾರೀರಿಕ ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕರಿಗೆ ತರಬೇತಿಯನ್ನು ಕೊಡಲು ಮದ್ರಾಸದಲ್ಲಿ "ವಾಯ್.ಎಂ.ಸಿ.ಎ." ಶಾ. ಶಿ. ಕಾಲೇಜು ದಿ॥ ಎಚ್. ಸಿ. ಬಕ್ ಇವರ ಹಿರಿತನವಲ್ಲಿ ಪ್ರಾರಂಭಿಸಲ್ಪಟ್ಟಿತು.

ಶ್ರೀ ಎಸ್. ಸಿ. ಚರಂತಿಮಠರು ವಿಜ್ಞಾನ, ಕಲೆ, ಶಿಕ್ಷಣ, ಶಾರೀರಿಕ ಶಿಕ್ಷಣ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಪಡೆದ ಸದಾ ವ್ಯಾಸಂಗಿಗಳು. ಬೆಳಗಾವಿ ವಿಭಾಗದ ಶಾರೀರಿಕ ಶಿಕ್ಷಣದ ಹಿರಿಯ ಅಧಿಕಾರಿಗಳಾದ ಇವರು ಸಧ್ಯ ಬೆಳಗಾವಿಯಲ್ಲಿ ವಾಸಿಸುತ್ತಿದ್ದಾರೆ. ಹಿತಮಿತ ಮಾತು ಸಹೃದಯತೆಯಿಂದಾಗಿ ಸರ್ವರ ಮೆಚ್ಚಿಗೆ ಗಳಿಸಿದ್ದಾರೆ.

ಅಂದಿನಿಂದ ಶಾ. ಶಿ. ಚಟುವಟಿಕೆಗಳಿಗೆ ವೈಜ್ಞಾನಿಕ ವಿಚಾರಗಳನ್ನು ಕೊಡಲಾಯಿತು. ಪ್ರಾರಂಭದಲ್ಲಿ ಶಾರೀರಿಕ ಶಿಕ್ಷಣ ತರಬೇತಿಗೆ ಅಷ್ಟೊಂದು ಪ್ರೋತ್ಸಾಹವು ಕಂಡು ಬರಲಿಲ್ಲ. ಆದರೆ ಮುಂದೆ ಈ ತರಬೇತಿ ಸಂಸ್ಥೆಯು ಸಾಕಷ್ಟು ಪ್ರಗತಿಯನ್ನು ಹೊಂದಿತು. ಇಂದಿಗೂ ಇದೊಂದು ಮಾದರಿಯ ಸಂಸ್ಥೆಯಾಗಿ ಕಾರ್ಯವನ್ನು ನಿರ್ವಹಿಸುತ್ತಿದೆ. ಭಾರತದಲ್ಲಿ ಈಚೆಗೆ ಪ್ರಾರಂಭಿಸಲ್ಪಟ್ಟ ಶಾ. ಶಿ. ತರಬೇತಿ ಸಂಸ್ಥೆಗಳಿಗೆ ವಾಯ್. ಎಮ್. ಸಿ. ಎ. ಶಾ. ಶಿ. ತರಬೇತಿ ಕಾಲೇಜು ಮಾತೃಸ್ಥಾನದಲ್ಲಿ ಇದೆ ಎಂದು ಹೇಳಬಹುದು.

ಆಗಿನ ಮುಂಬೈ ರಾಜ್ಯದಲ್ಲಿ ಶಾಲಾ ತರಬೇತಿಯ ಅವಶ್ಯಕತೆಗಳನ್ನು ಗಮನಿಸಿ ೧೯೩೮ ನೆಯ ಇಸ್ವಿಯಲ್ಲಿ (ಮುಂಬೈ) ಕಾಂದಿವಲಿಯಲ್ಲಿ ಶಾ. ಶಿ. ತರಬೇತಿ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಇಲ್ಲಿ ಮುಖ್ಯವಾಗಿ ಪದವೀಧರರಿಗೆ ಶಾ. ಶಿ. ದಲ್ಲಿ ತರಬೇತಿಯನ್ನು (D. P. ED.) ಕೊಡಲಾಗುತ್ತಿದ್ದಿತು. ಇದರ ಜೊತೆಗೆ ಶಾ. ಶಿ. ಕ್ಷೇತ್ರದಲ್ಲಿ ಶಿಕ್ಷಕರ ಕೊರತೆಯನ್ನು ನೀಗಿಸಲು ಮ್ಯಾಟ್ರಿಕ್ ಪಾಸಾದವರಿಗೆ ಅಥವಾ ಪಾಸಾಗದವರಿಗೆ ಶಾ. ಶಿ. ಅಲ್ಪಾವಧಿ ತರಬೇತಿಯನ್ನು ಕೆಲ ವರುಷಗಳವರೆಗೆ ಕೊಡಲಾಗುತ್ತಿದ್ದಿತು. ಶ್ರೀ ಪಿ. ಎಮ್. ಜೋಸಫರು ಈ ಮಹಾವಿದ್ಯಾಲಯದ ಪ್ರಥಮ ಪ್ರಾಚಾರ್ಯರು. ಸುಮಾರು ೨೦ ವರುಷಗಳವರೆಗೆ ಇವರು ಕಾಲೇಜಿನ ಚುಕ್ಕಾಣಿಯನ್ನು ಹಿಡಿದಿದ್ದರು. ಈ ತರಬೇತಿ ಸಂಸ್ಥೆಯ ಪ್ರಭಾವವು ಮುಂಬೈ ಕರ್ನಾಟಕ ಭಾಗದ ಮೇಲೆ ಹಾಗೂ ವಾಯ್. ಎಮ್. ಸಿ. ಎ. ಕಾಲೇಜಿನ ಪ್ರಭಾವವು ಆಗಿನ ಮೈಸೂರು ಸಂಸ್ಥಾನ ಹಾಗು ಮದ್ರಾಸ ಕರ್ನಾಟಕ ಭಾಗದ ಮೇಲೆ ಸಾಕಷ್ಟು ಆಯಿತು.

ಇದರ ಪರಿಣಾಮವಾಗಿ ಇಂದು ಕರ್ನಾಟಕದಲ್ಲಿ ಸಾಕಷ್ಟು ಶಾರೀರಿಕ ಶಿಕ್ಷಣ ತರಬೇತಿ ಸಂಸ್ಥೆಗಳು ತಲೆ ಎತ್ತಿರುವವು. ೧೯೫೬ ರಲ್ಲಿ ಬೆಳಗಾವಿಯಲ್ಲಿ ಬೆನನ್‌ಸ್ಮಿಥ್ ಶಾ. ಶಿ. ತರಬೇತಿ ಮಹಾವಿದ್ಯಾಲಯ ತಲೆಎತ್ತಿತು ೧೯೫೬ರಲ್ಲಿ ಎಮ್.ವ್ಹಿ.ಎ.ಎಸ್. ಶಾ. ಶಿ. ಮಹಾವಿದ್ಯಾಲಯ ಧಾರವಾಡದಲ್ಲಿ ಪ್ರಾರಂಭಿಸಲ್ಪಟ್ಟಿತು. ರಾಜ್ಯಸರಕಾರ ದವರು ಶಾ. ಶಿ. ಶಿಕ್ಷಕರಿಗೆ ತರಬೇತಿಯನ್ನು ಕೊಡಲು ೧೯೫೯ ರಲ್ಲಿ ಶಾ. ಶಿ. ತರಬೇತಿ ಮಹಾವಿದ್ಯಾಲಯವನ್ನು ಬೆಂಗಳೂರಲ್ಲಿ ಕಂಠೀರವ ಸ್ಟೇಡಿಯಂನಲ್ಲಿ ಪ್ರಾರಂಭಿಸಿದರು. ಬೆಂಗಳೂರು ವಾಯ್. ಎಮ್. ಸಿ. ಎ. ದವರೂ ಶಾ. ಶಿ. ತರಬೇತಿ ವಿದ್ಯಾಲಯ ವನ್ನು ಪ್ರಾರಂಭಿಸಿದರು. ಬೆಳಗಾಂವಿ ಧಾರವಾಡ ಹಾಗೂ ಬೆಂಗಳೂರು (ವಾಯ್. ಎಮ್. ಸಿ. ಎ.) ಶಾ.ಶಿ. ಮಹಾವಿದ್ಯಾಲಯಗಳಲ್ಲಿ ಎಸ್. ಎಸ್. ಎಲ್. ಸಿ. ಪಾಸಾದವರಿಗೆ ಶಾ. ಶಿ. ದಲ್ಲಿ ಸರ್ಟಿಫಿಕೇಟ ಕೋರ್ಸು ನಡೆಸಲಾಗಿದ್ದಿತು. ಬೆಂಗಳೂರ ಶಾ. ಶಿ. ಸರಕಾರಿ ಮಹಾವಿದ್ಯಾಲಯದಲ್ಲಿ ಪದವೀಧರರಿಗೆ ಶಾರೀರಿಕ ಶಿಕ್ಷಣದಲ್ಲಿ ಡಿಪ್ಲೋಮಾ ಕೋರ್ಸನ್ನು ನಡೆಸಲಾಗುತ್ತಿದ್ದಿತು. ಈ ನಾಲ್ಕು ಶಾ. ಶಿ. ತರಬೇತಿ

ಮಹಾವಿದ್ಯಾಲಯಗಳು ಸಾಕಷ್ಟು ವರುಷಗಳ ವರೆಗೆ ಪರಿಣಾಮಕಾರಿಯಾಗಿ ಶಾ. ಶಿ. ತರಬೇತಿಯನ್ನು ಕೊಡುತ್ತಲಿವೆ.

ದಿನಗಳೆದಂತೆ ಶಾ. ಶಿ. ದಲ್ಲಿ ಜಾಗೃತಿಯೂ ಕಂಡುಬಂದಿತು. ಆದುದರಿಂದ ಆಗಿನ ಬೆಂಗಳೂರ ಸರಕಾರಿ ಶಾ. ಶಿ. ತರಬೇತಿ ಸಂಸ್ಥೆಯಲ್ಲಿ (M. P. Ed.) ಮಾಸ್ಟರ್ ಆಫ್ ಫಿಜಿಕಲ್ ಎಜ್ಯುಕೇಶನ್ ಕೋರ್ಸು ಪ್ರಾರಂಭಿಸಲ್ಪಟ್ಟಿತು. ಸಾಕಷ್ಟು ಶಿಕ್ಷಕರು ಈ ಮಹಾವಿದ್ಯಾಲಯದಿಂದ M. P. Ed. ಪದವಿಗಳನ್ನು ಪಡೆದಿರುವರು. ಈಗ ಈ ಮಹಾವಿದ್ಯಾಲಯ ಬೆಂಗಳೂರ ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸಲ್ಪಟ್ಟಿದೆ. ಇತ್ತಿತ್ತಲಾಗಿ ಈ ಮಹಾ ವಿದ್ಯಾಲಯದಲ್ಲಿ ಕೆಲವು ವಿದ್ಯಾರ್ಥಿಗಳು ಡಾಕ್ಟರೇಟ ಮಾಡುತ್ತಿರುವದು ಮಹತ್ವದ ಸಂಗತಿಯಾಗಿದೆ. ಮೈಸೂರು ವಿಶ್ವವಿದ್ಯಾಲಯದಲ್ಲಿಯೂ ಒಂದು ಶಾ. ಶಿ. ಮಹಾವಿದ್ಯಾನಿಲಯ ನಡೆಯುತ್ತಲಿದ್ದು ಅಲ್ಲಿ ಬಿ. ಪಿ. ಇ. ಡಿ. ಹಾಗೂ ಎಮ್. ಪಿ. ಇಡಿ ವರ್ಗಗಳು ನಡೆಸಲ್ಪಡುತ್ತವೆ.

೧೯೮೦–೮೧ ನೆಯ ವರುಷದಲ್ಲಿ ಕರ್ನಾಟಕ ರಾಜ್ಯದಲ್ಲಿ ಶಾ. ಶಿ. ದ ಎರಡು ಮಹಾವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಪದವಿ ವಿಭಾಗಗಳು ನಡೆಯುತ್ತಲಿವೆ. ನಾಲ್ಕು ಶಾರೀರಿಕ ಶಿಕ್ಷಣ ಮಹಾವಿದ್ಯಾಲಯಗಳಲ್ಲಿ ಶಾ. ಶಿ. ಪದವಿ ತರಗತಿಗಳು (B. P. Ed.) ನಡೆಯುತ್ತಲಿವೆ. ಅದರಂತೆ ಒಂಬತ್ತು ಮಹಾ-ವಿದ್ಯಾಲಯಗಳಲ್ಲಿ ಸರ್ಟಿಫಿಕೇಟ ಕೋರ್ಸುಗಳು ನಡೆಯುತ್ತಲಿವೆ. ಈ ವರುಷ ಸರಕಾರದವರು ಇನ್ನು ಕೆಲವು ಶಾ. ಶಿ. ಮಹಾವಿದ್ಯಾಲಯಗಳನ್ನು ತೆರೆಯಲು ಅನುಮತಿಯನ್ನು ಕೊಟ್ಟಿರುವರು.

ಪ್ರಾಥಮಿಕ ಶಾಲೆಗಳಲ್ಲಿ ಶರೀರಶಿಕ್ಷಣ ಶಾಲಾಕಾರ್ಯಕ್ರಮದ ಒಂದು ಅವಿಭಾಜ್ಯ ಅಂಗ. ಮಕ್ಕಳಿಗೆ ಆಟವೆಂದರೆ ಬಲು–ಪ್ರೀತಿ. ಪಾಠಕ್ಕಿಂತ ಅವರಿಗೆ ಆಟದ ಕಡೆಗೇ ಹೆಚ್ಚು ಗಮನ. ಆಟ ಮನವನ್ನು ರಂಜಿಸುವದಲ್ಲದೇ ಜೊತೆ ಜೊತೆಗೆ ದೇಹ ಧಾರ್ಡ್ಯತೆಗೂ ಸಹಾಯಕಾರಿಯಾಗಿದೆ. ಎಳೆವಯಸ್ಸಿನಲ್ಲಿಯೇ ಮಕ್ಕಳು ಕ್ರೀಡೆಯ ಕಡೆಗೆ ಗಮನಕೊಟ್ಟರೆ ಮುಂದೆ ಕ್ರೀಡೆಯೊಂದು ಹವ್ಯಾಸವಾಗಿ ಬೆಳೆದು ಬರುವದು. ಮಗು ಬೆಳೆದಂತೆ ಕ್ರೀಡೆ,ವಿದ್ಯಾರ್ಥಿಗೆ ಆರೋಗ್ಯ–ಭಾಗ್ಯ ಮನರಂಜನೆ ಒಳ್ಳೆಯ ಜನರ ಸಂಗವನ್ನು ನೀಡುವದು. ಆದರೆ ಪ್ರಾಥಮಿಕ ಹಂತದಲ್ಲಿಯೇ ನಾವು ಕೆಲವು ನ್ಯೂನತೆಗಳನ್ನು ಕಾಣುತ್ತೇವೆ. ಆರೋಗ್ಯ ಭಾಗ್ಯವೇ ಇಲ್ಲದ ಮಕ್ಕಳು ಹಾಗೂ ರೋಗರುಜಿನಗಳಿಂದ ಬಳಲುವ ಮಕ್ಕಳು ಆಟದ ಕಡೆ ಅಷ್ಟು ಲಕ್ಷಕೊಡುವದಿಲ್ಲ. ಇಂತಹ ವಿದ್ಯಾರ್ಥಿಗಳಿಗೆ ಆಟವೂ ಒಂದು ಕೆಲಸವಾಗಿ ಪರಿಣಮಿಸಿ ಅವರು ಅತಿ ಕಡಿಮೆ ವೇಳೆಯಲ್ಲಿ ದಣಿದು ಕುಳಿತುಕೊಳ್ಳುವರು. ಇಲ್ಲವೆ ಶಾಲೆಯನ್ನು ತಪ್ಪಿಸಿ ಮನೆಯ ಕಡೆಗೆ ಹೊರಡುವರು. ಎಲ್ಲ ವಿಷಯಗಳಿಗೆ ಕೊಟ್ಟ ಮಹತ್ವವನ್ನು ಇದಕ್ಕೆ ಕೊಡುವದಿಲ್ಲ. " ಶಾರೀರಿಕ ಶಿಕ್ಷಣ ಅವಧಿ ಬಿಡು " ಎಂದು ಅಲಕ್ಷತನ ತೋರಿ ಓಡಿಯೂ ಹೋಗುವರು.

ಕ್ರೀಡಾ ಕಾರ್ಯಕ್ರಮಗಳಿಗೆ ಶಾಲೆಗಳಲ್ಲಿ ಅನೇಕ ಅನುಕೂಲತೆಗಳನ್ನು ಒದಗಿಸಿ ಕೊಡಬೇಕಾಗುವದು.

ಶಾರೀರಿಕ ಶಿಕ್ಷಣವೆಂದರೆ ಶರೀರದ ಮುಖಾಂತರ ಶರೀರಕ್ಕೆ ಕೊಡುವ ಶಿಕ್ಷಣ, ಶಿಕ್ಷಣದ ವ್ಯಾಖ್ಯೆಗಳನ್ನು ಅನೇಕ ಶಿಕ್ಷಣತಜ್ಞರು ಅನೇಕ ಸಂದರ್ಭಗಳಲ್ಲಿ ಅನೇಕ ರೀತಿಯಿಂದ ಕೊಟ್ಟಿರುವರು. ಎಲ್ಲ ವ್ಯಾಖ್ಯೆಗಳ ಮೂಲ ವಿಚಾರವು ಮಗುವಿನ ಸರ್ವತೋಮುಖ ಅಭಿವೃದ್ಧಿಯೇ ಆಗಿದೆ. ಸರ್ವತೋಮುಖ ಅಭಿವೃದ್ಧಿ ಎಂದರೆ ದೈಹಿಕ ಮಾನಸಿಕ, ನೈತಿಕ ಹಾಗೂ ಸಾಮಾಜಿಕ ಅಭಿವೃದ್ಧಿಯು. ಮಗುವನ್ನು ದೈಹಿಕವಾಗಿ ಮಾನಸಿಕವಾಗಿ ಬೇರ್ಪಡಿಸಲು ಸಾಧ್ಯವಿಲ್ಲ. ಮಗು ಎಂದರೆ ಮೇಲೆ ಹೇಳಿದ ಎಲ್ಲ ಅಭಿವ್ಯಕ್ತಿಗಳನ್ನೊಳಗೊಂಡ ಒಂದು ಪೂರ್ಣ ಮಗು ಎಂದು ಹೇಳಬಹುದು. ಮಕ್ಕಳ ಪರಿಪೂರ್ಣ ವಿಕಾಸಕ್ಕೆ ಅವಶ್ಯವಾದ ಈ ಕ್ರೀಡಾಕಾರ್ಯಕ್ರಮಗಳನ್ನು ಪ್ರಾಥಮಿಕ ಶಾಲೆಗಳಲ್ಲಿ ಸಂಘಟಿಸಲು ಈ ಹೊತ್ತು ನಮಗೆ ಅವಶ್ಯವಾಗಿ ಬೇಕಾದ ಅನುಕೂಲತೆಗಳಾವವು? ಅವುಗಳನ್ನು ಸಮಾಜವಾಗಲೀ ಸರಕಾರವಾಗಲೀ ಒದಗಿಸಿ ಕೊಟ್ಟಿರುವವೇ? ಎಂಬ ಅನೇಕ ಪ್ರಶ್ನೆಗಳಿಗೆ ಉತ್ತರಗಳನ್ನು ದೊರಕಿಸಲು ಪ್ರಯತ್ನಿಸಬೇಕಾಗಿದೆ.

ಪ್ರಾಥಮಿಕ ಶಾಲೆಗಳಲ್ಲಿ ಕ್ರೀಡಾ ಕಾರ್ಯಕ್ರಮಗಳನ್ನು ಸುಸಂಘಟಿತವಾಗಿ ಏರ್ಪಡಿಸಲು ನಮಗೆ ಅವಶ್ಯವಾದ ಕೆಲವು ಅನುಕೂಲತೆಗಳು ಇರಬೇಕಾಗುವವು. ಅವುಗಳಲ್ಲಿ ಮುಖ್ಯವಾದವುಗಳೆಂದರೆ (೧) ಕ್ರೀಡಾಂಗಣ (೨) ತರಬೇತಿ ಪಡೆದ ಶಿಕ್ಷಕರು, (೩) ಆಟದ ಸಲಕರಣೆಗಳು. ಇವುಗಳನ್ನುಳಿದ ಇತರ ಅವಶ್ಯಕತೆಗಳು ಇಲ್ಲವೆಂದಿಲ್ಲ. ಆದರೆ ಅವೆಲ್ಲವುಗಳಿಗೆ ವಿಶೇಷ ಪ್ರಾಧಾನ್ಯತೆಯನ್ನೀಯದ ಮೇಲೆ ಹೇಳಿದ ಮುಖ್ಯವಾದ ಮೂರು ಅವಶ್ಯಕತೆಗಳು ಎಷ್ಟರಮಟ್ಟಿಗೆ ಎಲ್ಲ ಪ್ರಾಥಮಿಕ ಶಾಲೆಗಳಲ್ಲಿ ಪೂರೈಸಲ್ಪಟ್ಟಿವೆ ಎಂಬುದನ್ನು ನೋಡೋಣ.

ಆಟದ ಬೈಲು ಅಥವಾ ಕ್ರೀಡಾಂಗಣ:—

ಪ್ರತಿಯೊಂದು ಪ್ರಾಥಮಿಕ ಶಾಲೆಗೆ ಎಷ್ಟು ದೊಡ್ಡ ಆಟದ ಬೈಲು ಬೇಕೆಂಬುದು ಆ ಶಾಲೆಯ ಮಕ್ಕಳ ಸಂಖ್ಯೆಯನ್ನು ಅವಲಂಬಿಸಿದೆ. ಪ್ರತಿಯೊಬ್ಬ ವಿದ್ಯಾರ್ಥಿಗೆ ಪ್ರಾಥಮಿಕ ಶಾಲೆಯಲ್ಲಿ ೨೫೦ ಚ. ಅಡಿ ಹಾಗೂ ಉಚ್ಚ ಪ್ರಾಥಮಿಕ ಶಾಲೆಯಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೆ ೪೦೦ ಚ. ಅಡಿ ಸ್ಥಳ ಬೇಕಾಗುವದೆಂದು ಶಾ. ಶಿ. ತಜ್ಞರೂ ಮದ್ರಾಸ Y. M. C. A. ಕಾಲೇಜ ಸಂಸ್ಥಾಪಕರೂ ಆದ ದಿ. ಶ್ರೀ ಎಚ್. ಸಿ. ಬಕ್ ಅವರು ಹೇಳಿದ್ದಾರೆ. ಅಮೇರಿಕೆಯಲ್ಲಿ ಪ್ರತಿಯೊಂದು ಪ್ರಾಥಮಿಕ ಶಾಲೆಗೆ ೫ ಎಕರೆ ಹಾಗೂ ಶಾಲೆಯು ಆಟದ ಬಯಲಿಗೆ ೧೦ ಎಕರೆ ಭೂಮಿ ಬೇಕಾಗುವದೆಂದು ಪ್ರತ್ಯೇಕವಾಗಿ ಕಾಯ್ದಿಡುವದುಂಟು. ಇದೇ ಪ್ರಕಾರ ಇಂಗ್ಲಂಡದಲ್ಲಿ ಪ್ರಾಥಮಿಕ ಶಾಲೆಗಳಿಗೆ ೩ ಎಕರೆ ಹಾಗೂ ಉಚ್ಚ ಪ್ರಾಥಮಿಕ ಶಾಲೆಗಳಿಗೆ ೫ ಎಕರೆ ಆಟದ ಬೈಲು

ಇರಬೇಕೆಂದು ಕಟ್ಟಳೆಯನ್ನು ಹಾಕಿರುವರು. ಆದರೆ ಇಲ್ಲಿಯ ಪ್ರಾಥಮಿಕ ಹಾಗೂ ಉಚ್ಚ ಪ್ರಾಥಮಿಕ ಶಾಲೆಗಳ ಸ್ಥಿತಿಯು ವಿಚಿತ್ರವಾಗಿವೆ. ಪ್ರಾಥಮಿಕ ಹಾಗೂ ಉಚ್ಚ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸುವಾಗ್ಗೆ ಆಟ ಆಡಲು ಬಯಲು ಸ್ಥಳ ಸಾಕಷ್ಟು ಇದೆಯೇ? ಮಕ್ಕಳು ಕುಳಿತುಕೊಳ್ಳಲು ಸಾಕಷ್ಟು ಸ್ಥಳಾವಕಾಶ ಇದೆಯೇ? ಎಂಬ ಪ್ರಶ್ನೆಗಳಿಗೆ ಉತ್ತರವನ್ನೀಯಬೇಕಾಗುವದು. ಇದಕ್ಕೆ ನಮ್ಮ ತನಿಖಾಧಿಕಾರಿಗಳು ಹಾಗೂ ಹಿರಿಯರು ಕೊಡುವ ಉತ್ತರಗಳು ವಿಚಿತ್ರವಾಗಿರುತ್ತವೆ. ಶಾಲೆಯ ಪರಿಸರದಲ್ಲಿರುವ ಹಿರಿಯರು ಇದನ್ನು ಗಮನಿಸದೇ ತನಿಖಾಧಿಕಾರಿಗಳಿಗೆ "ಮುಂದೆ ಒದಗಿಸಲಾಗುವದು ಎಂದು ಬರೆಯಿರಿ" ಎಂದು ಹೇಳುವುದುಂಟು. ಅದರಂತೆ ತನಿಖಾಧಿಕಾರಿಗಳು ಹಾರಿಕೆಯ ಉತ್ತರಗಳನ್ನೇ ಬರೆಯುವರು. ಎಷ್ಟೋ ಸಲ ತನಿಖಾಧಿಕಾರಿಗಳು ಇದಾವುದನ್ನು ಗಮನಿಸದೇ ಹೆಚ್ಚಿನ ವರ್ಗಗಳನ್ನು ತೆರೆಯಲು ಅನುಕೂಲ ಮಾಡಿಕೊಟ್ಟಿರುವುದುಂಟು. ಅನೇಕ ಪ್ರತಿಭಾನ್ವಿತ ವ್ಯಕ್ತಿಗಳ ಒತ್ತಡಕ್ಕಾಗಿ ಎಷ್ಟೋ ಕಡೆಗೆ ಅನಾನುಕೂಲ ಪರಿಸ್ಥಿತಿಯಲ್ಲಿಯೂ ಶಾಲೆಗಳು ಪ್ರಾರಂಭವಾಗುತ್ತವೆ. ಕಡ್ಡಾಯ ಶಿಕ್ಷಣದ ಹೊಣೆಯನ್ನು ಹೊತ್ತ ನಂತರವಂತೂ ಯಾವ ಅನಾನುಕೂಲತೆಗಳನ್ನು ಗಮನಿಸದೆ, ಸಿಕ್ಕ ಸಿಕ್ಕ ಕಡೆಗೆ ಶಾಲೆಗಳು ಪ್ರಾರಂಭವಾಗಿವೆ. ಹಳ್ಳಿಗಳಲ್ಲಿ ಗುಡಿಸಲುಗಳಲ್ಲಿ, ದೇವಾಲಯಗಳಲ್ಲಿ ಶಾಲೆಗಳು ನಡೆಸಲ್ಪಟ್ಟವೆ. ಬೆಳೆದ ಪಟ್ಟಣಗಳಲ್ಲಿ ಮೇಲುಪ್ಪರಿಗೆಯಲ್ಲಿ ಪೇಟೆಯಲ್ಲಿ, ಸ್ಥಳಾವಕಾಶ ಇಲ್ಲದ ಕಟ್ಟಡಗಳಲ್ಲಿ ಶಾಲೆಯು ನಡೆಸಲ್ಪಡುವುದುಂಟು. ಹೀಗಾಗಿ ವಿಶಾಲವಾದ ಆಟದ ಬಯಲಿನ ಅನುಕೂಲತೆ ಇದ್ದ ಪ್ರಾಥಮಿಕ ಶಾಲೆಗಳು ಸಿಗುವದು ತೀರ ವಿರಳ.

ವಿಶಾಲವಾದ ಆಟದ ಬಯಲು ಇದ್ದರೆ ಅದರ ಬಗೆಗೆ ಜನರು ತೋರಿಸುವ ನಡುವಳಿಕೆಯೇ ಬೇರೆ. ಆ ವಿಶಾಲ ಸ್ಥಳದಲ್ಲಿ ಜನರು ತಿಪ್ಪೆಯ ಗುಂಡಿಯನ್ನು ತೋಡಿ ಅಥವಾ ಅಲ್ಲಿ ಕಾಲುದಾರಿಯನ್ನು ಮಾಡಿ ಅದನ್ನು ಹಾಳು ಮಾಡುವದುಂಟು. ಹಳ್ಳಿಯ ಪರಿಸ್ಥಿತಿ ಇದಾದರೆ ಪಟ್ಟಣದ ಆಟದ ಬಯಲು ಗೋಳಿನ ಕಥೆಯೇ ಬೇರೆ. ಇಲ್ಲಿಯ ಊರ ಹಿರಿಯರು ಇವುಗಳನ್ನು ಕಾಪಾಡದೇ ಅದರಲ್ಲಿಯೇ ಊರ ಅನು-ಕೂಲತೆಗೆ ಬೇಕಾಗುವ ನಗರ ಸಭೆಗಳನ್ನು ಅಥವಾ ಅಂಗಡಿಗಳನ್ನು ಕಟ್ಟಿ ಹಾಳು ಮಾಡಿದ ಉದಾಹರಣೆಗಳುಂಟು. ಈ ಎಲ್ಲ ತೊಂದರೆಗಳಿಂದ ಉಳಿದು, ಮಕ್ಕಳಿಗೆ ನಿಜವಾಗಿಯೂ ಉಪಯುಕ್ತವಾದ ಆಟದ ಬಯಲುಗಳಿದ್ದ ಪ್ರಾಥಮಿಕ ಶಾಲೆಗಳು ತೀರ ವಿರಳ. ವಿಶಾಲವಾದ ಆಟದ ಬಯಲು ಇದ್ದು ಆಟದ ಅನುಕೂಲತೆಗಳು ಇದ್ದ ಶಾಲೆಗಳು ಧನ್ಯವಾದವುಗಳು. ಸಾಧ್ಯವಿದ್ದಲೆಲ್ಲ ಪ್ರಾಥಮಿಕ ಹಾಗೂ ಉಚ್ಚ ಪ್ರಾಥಮಿಕ ಶಾಲೆಗಳಿಗೆ ಆಟದ ಬಯಲುಗಳನ್ನು ಸಮಾಜ ಹಾಗೂ ಸರಕಾರ ಒದಗಿಸಿ-ಕೊಡುವದು ಮಕ್ಕಳ ಕಲ್ಯಾಣದ ದೃಷ್ಟಿಯಿಂದ ವಿಹಿತ.

ಎಷ್ಟೋ ಕಡೆಗೆ ಆಟದ ಬಯಲು ಇದ್ದರೂ ತರಬೇತಿ ಪಡೆದ ಶಿಕ್ಷಕರ ಕೊರತೆಯು ಮುಖ್ಯವಾಗಿ ಕಂಡು ಬರುವುದು. ಪ್ರಾಥಮಿಕ ಅಥವಾ ಉಚ್ಚ ಪ್ರಾಥಮಿಕ ಶಾಲೆಯ ಶಿಕ್ಷಕರೆಂದರೆ ಎಲ್ಲ ವಿಷಯಗಳಲ್ಲಿಯೂ ಅವರು ಪರಿಣಿತರಿರ-ಬೇಕು. ಶಾ. ಶಿ. ತರಬೇತಿಯನ್ನು ಪಡೆದಿರಲಿ ಬಿಟ್ಟಿರಲಿ ಮಕ್ಕಳನ್ನು ಆಟದ ಬಯಲಿಗೆ ಕರೆದುಕೊಂಡು ಹೋಗಿ ಆಟವಾಡಲು ಹಚ್ಚುವದು ಶಿಕ್ಷಕರ ಕೆಲಸವಾಗಿದೆ. ಆಟಗಳಲ್ಲಿ ತರಬೇತಿ ಪಡೆಯದ ಶಿಕ್ಷಕರು ಅಥವಾ ಆಟಗಳಲ್ಲಿ ಆಸಕ್ತಿ ಇಲ್ಲದ ಶಿಕ್ಷಕರು ಶರೀರ ಶಿಕ್ಷಣದ ಬಗೆಗೆ ಅನಾಸಕ್ತಿ ತೋರುವರು. ತಾವು ವರ್ಗಗಳಲ್ಲಿ ಕುಳಿತು ಮಕ್ಕಳಿಗೆ "ಆಟದ ಬಯಲಿಗೆ ಹೋಗಿರಿ" ಎಂದು ಹೇಳುವರು. ಬಹಳ ಶಿಕ್ಷಕರಲ್ಲಿ ಈ ಮನೋ-ಭಾವನೆ ಕಂಡು ಬರುವದು. ಇವರು ಮಕ್ಕಳಿಗೆ ಸರಿಯಾದ ತರಬೇತಿ ಕೊಡದೆ ಅವರಲ್ಲಿಯೂ ನಿರುತ್ಸಾಹವನ್ನುಂಟು ಮಾಡುವರು. ಇದರಿಂದ ವಿದ್ಯಾರ್ಥಿಗಳು ಉಳಿದ ವಿಷಯಗಳಿಗೆ ಹೆಚ್ಚಿನ ಮಹತ್ವ ಕೊಡುವರು.

ಪ್ರಾಥಮಿಕ, ಉಚ್ಚ ಪ್ರಾಥಮಿಕ ಶಾಲೆಗಳಲ್ಲಿಯ ಶಿಕ್ಷಕರಿಗೆ ಶಾ. ಶಿ. ಶಿಕ್ಷಣದಲ್ಲಿ, ಕ್ರೀಡೆಗಳಲ್ಲಿ ತರಬೇತಿ ಅಗತ್ಯ. ತರಬೇತಿಯನ್ನು ಪೂರ್ಣಾವಧಿ ತರಬೇತಿ, ಅಲ್ಪಾವಧಿ ತರಬೇತಿ ಎಂದು ವಿಂಗಡಿಸಬಹುದು. ಪ್ರತಿಯೊಬ್ಬ ಶಿಕ್ಷಕ ಶಿಕ್ಷಕಿಯರಿಗೆ ಪೂರ್ಣಾವಧಿ ತರಬೇತಿಯನ್ನು ಕೊಟ್ಟರಂತೂ ಅತ್ಯುತ್ತಮವಾಗುವದು. ಆದರೆ ಇದು ಸುಲಭ ಸಾಧ್ಯವಾದ ಕೆಲಸವಲ್ಲ. ಎಲ್ಲರಿಗೂ ಪೂರ್ಣಾವಧಿ ತರಬೇತಿಯನ್ನು ಕೊಡಲು ಸರಕಾರಕ್ಕೆ ಸಾಧ್ಯವಾಗಲಿಕ್ಕಿಲ್ಲ. ಆದರೆ ಶಾ. ಶಿಕ್ಷಣದಲ್ಲಿ ಅಲ್ಪಾವಧಿ ತರಬೇತಿಯನ್ನು ಕೊಡಲು ಸಾಧ್ಯವಾಗುವದು. ಆಸಕ್ತಿಯುಳ್ಳ ತರುಣ ಶಿಕ್ಷಕರಿಗೆ ಅಲ್ಪಾವಧಿಯ ತರಬೇತಿಯನ್ನು ಕೊಡುವದರಿಂದ ಪ್ರಾಥಮಿಕ ಹಾಗೂ ಉಚ್ಚ ಪ್ರಾಥಮಿಕ ಶಾಲೆಗಳಲ್ಲಿಯ ಮಕ್ಕಳಿಗೆ ತಕ್ಕ ಮಟ್ಟಿಗಾದರೂ ಶಿಸ್ತನ್ನು ಹಾಗೂ ಕ್ರೀಡಾ ಮನೋಭಾವವನ್ನು ಬೆಳೆಸಲು ಸಾಧ್ಯವಾಗಬಹುದು. ಪ್ರತಿಯೊಂದು ಪ್ರಾಥಮಿಕ ಹಾಗೂ ಉಚ್ಚ ಪ್ರಾಥಮಿಕ ಶಾಲೆಯಲ್ಲಿ ಶಾ. ಶಿಕ್ಷಣದಲ್ಲಿ ಅಲ್ಪಾವಧಿ ತರಬೇತಿಯನ್ನು ಪಡೆದ ಇಬ್ಬರು, ಮೂವರು ಶಿಕ್ಷಕರಾದರೂ ಇರುವದು ಒಳಿತು. ಸರಕಾರದವರು ಒಂದು ಆಜ್ಞೆಯನ್ನು ಹೊರಡಿಸಿ ಏಳು ಶಿಕ್ಷಕರಿರುವ ಉಚ್ಚ ಪ್ರಾಥಮಿಕ ಶಾಲೆಗಳಿಗೆ ಒಬ್ಬ ಶಾ. ಶಿಕ್ಷಣ ಶಿಕ್ಷಕರನ್ನು ನಿಯಮಿಸಬೇಕೆಂಬ ಯೋಜನೆಯನ್ನು ಮಾಡಿರುವರು. ಒಬ್ಬ ಶಾ. ಶಿಕ್ಷಣ ಶಿಕ್ಷಕರನ್ನು ನಿಯಮಿಸುವದರಿಂದ ಉಚ್ಚ ಪ್ರಾಥಮಿಕ ಶಾಲೆಗಳ ಮಕ್ಕಳ ಪ್ರಶ್ನೆ ಸ್ವಲ್ಪ ಮಟ್ಟಿಗೆ ಬಗೆಹರಿಯಬಹುದು. ಆದರೂ ಅಲ್ಪಾವಧಿ ಶಾ. ಶಿಕ್ಷಣ ತರಬೇತಿಯನ್ನು ಕೆಲವೊಂದು ಜನ ಪ್ರಾ. ಶಾ. ಶಿಕ್ಷಕರಿಗೆ ಪ್ರತಿ ವರುಷವೂ ಕೊಡಲೇ ಬೇಕು. ಇದರಿಂದ ಪ್ರಾಥಮಿಕ ಶಾಲೆಗಳಲ್ಲಿ ಕ್ರೀಡಾ ಚಟುವಟಿಕೆಗಳಿಗೆ ಮತ್ತು ಮಕ್ಕಳಲ್ಲಿ ಶಿಸ್ತನ್ನು ಬೆಳೆಸಲು ಅನುಕೂಲವಾಗುವದು. ಇದಲ್ಲದೆ ಪ್ರಾಥಮಿಕ ಶಿಕ್ಷಕರ ತರಬೇತಿ ಕೇಂದ್ರಗಳಲ್ಲಿಯ ಎಲ್ಲ ಶಿಕ್ಷಣಾರ್ಥಿಗಳಿಗೆ ಶಾ. ಶಿಕ್ಷಣವನ್ನು ಕಡ್ಡಾಯವಾಗಿ

ಕೊಡಲೇಬೇಕು. ಇಲ್ಲವಾದಲ್ಲಿ ಅವರು ಮುಂದೆ ನೇಮಣೂಕಗೊಳ್ಳುವ, ಸೇವೆ ಸಲ್ಲಿಸುವ ಶಾಲೆಗಳಲ್ಲಿಯ ಮಕ್ಕಳಿಗೆ ಶಾ. ಶಿಕ್ಷಣದಲ್ಲಿ ಸರಿಯಾದ ಮಾರ್ಗದರ್ಶನ ನೀಯಲು ಅಸಮರ್ಥರಾಗುವರು. ಈ ಮೇಲಿನ ಎಲ್ಲ ಅಂಶಗಳನ್ನು ಗಮನಿಸಿ ಶಿಕ್ಷಕರಿಗೆ ಶಾ. ಶಿಕ್ಷಣದಲ್ಲಿ ಅಲ್ಪಾವಧಿ ತರಬೇತಿಯನ್ನು ಕೊಡುವದು ವಿಹಿತವಾಗಿದೆ.

ಎಷ್ಟೋ ಪ್ರಾಥಮಿಕ ಶಾಲೆಗಳಲ್ಲಿ ಆಟದ ಮೈದಾನ ತರಬೇತಿ ಪಡೆದ ಶಿಕ್ಷಕರು ಇದ್ದರೂ ಆಟಕ್ಕೆ ಬೇಕಾಗುವ ಉಪಕರಣಗಳ ಕೊರತೆಯಿಂದ ಶಾಲೆಗಳಲ್ಲಿ ಕ್ರೀಡೆಗಳಿಗೆ ಪ್ರೋತ್ಸಾಹವಿಲ್ಲದಂತಾಗುತ್ತದೆ. ಶಾಲೆಗಳು ಕ್ರೀಡೋಪಕರಣಗಳನ್ನು ಕೊಳ್ಳುವ ಬಗ್ಗೆ ಸರಕಾರದವರು ಒಂದು ಪ್ರಕಟಣೆಯನ್ನು ಹೊರಡಿಸಿ ಮಕ್ಕಳಿಂದ ಸಂಗ್ರಹಿಸಲ್ಪಟ್ಟ ಆಟದ ಫೀ ಹಣದ ೪೦% ಹಣವನ್ನು ಕ್ರೀಡೋಪಕರಣಗಳಿಗೆ ಶಾಲೆಯವರು ಪ್ರತಿ ವರುಷ ಖರ್ಚು ಮಾಡಬೇಕೆಂದು ಆಜ್ಞೆ ಇತ್ತಿರುವರು. ಪ್ರತಿಯೊಂದು ಶಾಲೆಯವರು ಪ್ರತಿ ವರುಷ ತಪ್ಪದೇ ಕ್ರೀಡಾ ಉಪಕರಣಗಳಿಗಾಗಿ ೪೦% ಹಣವನ್ನು ಖರ್ಚು ಮಾಡಿದರೆ ಸ್ವಲ್ಪ ಪ್ರಮಾಣದಲ್ಲಾದರೂ ಉಪಕರಣಗಳ ಸಂಗ್ರಹವಾಗುವದು. ಕೆಲವು ಹಳ್ಳಿಗಳಲ್ಲಿ ಉಚ್ಚ ಪ್ರಾಥಮಿಕ ಶಾಲೆಗಳಲ್ಲಿ ಐದನೆಯ ತರಗತಿಯು ೧೦–೧೫ ಮಕ್ಕಳಿಂದ ಪ್ರಾರಂಭಿಸಲ್ಪಡುವದು. ಇವರು ಆಟಗಳಿಗಾಗಿ ಕೊಡುವ ಫೀ ಹಣವು ತೀರ ಕಡಿಮೆ. ಆದರ ೪೦% ಎಂದರೆ ಅತ್ಯಲ್ಪ ಹಣವಾಗಿ ಶಾಲೆಗಳು ಯಾವ ಕ್ರೀಡೋಪಕರಣಗಳನ್ನು ಕೊಳ್ಳುವ ಸ್ಥಿತಿಯಲ್ಲಿರುವದಿಲ್ಲ. ಇಂತಹ ಪ್ರಸಂಗದಲ್ಲಿ ಶಿಕ್ಷಕರು ಊರ ಪ್ರಮುಖರನ್ನು ಭೆಟ್ಟಿಯಾಗಿ ಶಾಲೆಯ ಪರಿಸ್ಥಿತಿಯನ್ನು ಅವರಿಗೆ ತಿಳಿಸಿ ಅವರಿಂದ ದೇಣಿಗೆಯಾಗಿ ಕ್ರೀಡೋಪಕರಣಗಳನ್ನು ಪಡೆಯಬಹುದು.

ಕೆಲವು ಶಾಲೆಗಳಲ್ಲಿ ಕ್ರೀಡೋಪಕರಣಗಳು ಸಾಕಷ್ಟಿದ್ದರೂ ಅವುಗಳನ್ನು ಮಕ್ಕಳ ಉಪಯೋಗಕ್ಕೆ ಕೊಡದೆ ಮುಖ್ಯ ಗುರುಗಳ ಕಪಾಟಿನಲ್ಲಿಯೋ ಅಥವಾ ವರ್ಗಗುರುಗಳ ಕಪಾಟಿನಲ್ಲಿಯೋ ಈ ಕ್ರೀಡಾ ಉಪಕರಣಗಳು ಹಾಗೆಯೇ ಉಳಿದು ಕೊನೆಗೆ " ನಿರುಪಯುಕ್ತವಾಗಿವೆ " ಎಂದು ಶಾಲಾ ತನಿಖಾಧಿಕಾರಿಗಳಿಂದ ಬರೆಯಿಸುವ ಸಾಹಸಕ್ಕೆ ಶಿಕ್ಷಕರು ಅಥವಾ ಮುಖ್ಯ ಗುರುಗಳು ಇಳಿದ, ಇಳಿಯುತ್ತಿರುವ ಉದಾಹರಣೆಗಳು ಸಾಕಷ್ಟು ಉಂಟು. ಈ ಕ್ರೀಡೋಪಕರಣಗಳನ್ನು ಮಕ್ಕಳಿಗೆ ಉಪಯೋಗಿಸುವದಕ್ಕೆ ಕೊಡದೆ ಇರುವದಕ್ಕೆ ಅನೇಕ ಕಾರಣಗಳು ಇರಬಹುದು. ಶಾಲಾ ಕ್ರೀಡೋಪಕರಣಗಳು ಮುರಿದರೆ, ಕಳುವಾಗಿ ಹೋದರೆ, ಆಟಕ್ಕೆ ನಿರುಪಯುಕ್ತವಾದರೆ ಅದರ ಹಣವನ್ನು ತುಂಬುವವರಾರು ? ಎಂದು ಕೆಲವು ಶಿಕ್ಷಕರು ಸಂಶಯ ತಾಳಿ ಸಂದಿಗ್ಧ ಪ್ರಶ್ನೆಗಳಿಂದ ಕ್ರೀಡೋಪಕರಣಗಳನ್ನು ಹಾಗೆಯೇ ಇಡುವದಕ್ಕೆ ಕಾರಣಗಳಾಗಿರಬಹುದು. ಆಟದ ಸಾಮಾನುಗಳು ಇರುವದು, ಆಡಿ ಮನರಂಜನೆಗೊಳ್ಳಲು, ತಾಳಬದ್ಧವಾಗಿ ಚಟುವಟಿಕೆಗಳನ್ನು ಮಾಡಲು ಹೊರತು ಕಪಾಟಿನಲ್ಲಿ ಮುಚ್ಚಿ ಇಡಲಿಕ್ಕೆ ಅಲ್ಲ ಎಂದು ಎಲ್ಲರೂ ತಿಳಿದುಕೊಳ್ಳಬೇಕು. ಹಾಳಾದ, ಮುರಿದ ಉಪಕರಣಗಳನ್ನು

ತನಿಖಾಧಿಕಾರಿಗಳಿಗೆ ತೋರಿಸಿ ಕಡಿಮೆ ಮಾಡಿಸಬಹುದು. ಹೊಸ ಕ್ರೀಡಾ ಉಪಕರಣಗಳನ್ನು ಶಾಲೆಯ ಹಣ ಕೊಟ್ಟು ನಿಯಮದಂತೆ ಕೊಳ್ಳಲು ಸೂಕ್ತ ಸ್ಥಳವೆಂದರೆ "ಜನತಾ ಬಜಾರ" ಇಲ್ಲಿ ಕೊಂಡ ಉಪಕರಣಗಳಿಗೆ ಕೊಟೇಶನ ಕರೆಯುವ ಅವಶ್ಯಕತೆ ಇಲ್ಲ. ಬೆಳಗಾವಿ ವಿಭಾಗದಲ್ಲಿ ಪ್ರಾಥಮಿಕ ತರಬೇತಿ ಸಂಸ್ಥೆಗಳ ವಿದ್ಯಾರ್ಥಿಗಳಿಗೆ ಹಾಗೂ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದವರೆಗೆ ಕ್ರೀಡಾ ಕೂಟಗಳನ್ನು ಸರಕಾರದ ಸಹಾಯಧನವಿಲ್ಲದೆ ಪ್ರತಿ ವರುಷವೂ ನಡೆಯಿಸಬೇಕೆಂದು ೧೯೬೪ ರಲ್ಲಿ ನಿರ್ಧರಿಸಲಾಯಿತು. ಅದರಂತೆ ಎಲ್ಲ ಜಿಲ್ಹೆಗಳಲ್ಲಿ ಈ ಕ್ರೀಡಾ ಕೂಟಗಳು ಪ್ರತಿ ವರುಷವೂ ತಪ್ಪದೇ ನಡೆಯಿಸಲ್ಪಡುತ್ತಲಿವೆ. ಪ್ರಾಥಮಿಕ ಶಾಲಾ ಮಕ್ಕಳ ಲೇಝಿಮ್ ಹಾಗೂ ಕೋಲಾಟ ಪ್ರದರ್ಶನಗಳು ತುಂಬಾ ಜನಪ್ರಿಯವಾಗಿದೆ. ಈ ಪ್ರದರ್ಶನಗಳನ್ನು ಮೈಸೂರು ದಸರಾ ಉತ್ಸವದಲ್ಲಿ, ದಿಲ್ಲಿಯ ಗಣರಾಜ್ಯೋತ್ಸವದಲ್ಲಿ ಪ್ರದರ್ಶಿಸಿದ ಉದಾಹರಣೆಗಳುಂಟು.

೧೯೭೧ ರಲ್ಲಿ ಕರ್ನಾಟಕ ಸರಕಾರದವರು ಒಂದು ಆಜ್ಞೆಯನ್ನು ಹೊರಡಿಸಿ ಉಚ್ಚ ಪ್ರಾಥಮಿಕ ಶಾಲೆಗಳಲ್ಲಿ ಏಳು ಶಿಕ್ಷಕರಿರುವಲ್ಲಿ ಒಬ್ಬ ಶಾ. ಶಿಕ್ಷಣದಲ್ಲಿ ಸರ್ಟಿಫಿಕೇಟ ಪಡೆದ (C. P. Ed.) ಶಿಕ್ಷಕರಿರಬೇಕೆಂದು ಆದೇಶವನ್ನಿತ್ತಿದ್ದಾರೆ. ಅಲ್ಲದೆ ೧ ರಿಂದ ೭ ನೆಯ ವರ್ಗಗಳ ವಿದ್ಯಾರ್ಥಿಗಳಿಗೆ ಶಾ. ಶಿಕ್ಷಣ ಪರೀಕ್ಷೆಯನ್ನು ತೆಗೆದುಕೊಂಡು, ಈ ವಿಷಯದ ಗುಣಗಳನ್ನು ಅರ್ಹತೆಯನ್ನು ನಿರ್ಧರಿಸುವದಕ್ಕೆ (Ranking) ಗಣನೆಗೆ ತೆಗೆದುಕೊಳ್ಳಬೇಕೆಂದೂ ಆದರೆ ಅನುತ್ತೀರ್ಣರಾದವರನ್ನು ಅದೇ ವರ್ಗದಲ್ಲಿ ಉಳಿಸಬಾರದೆಂದೂ ತಿಳಿಸಲಾಯಿತು. ಆದರೆ ಶಾ. ಶಿ. ಶಿಕ್ಷಕರ ಕೊರತೆಯಿಂದ ಬಹುಸಂಖ್ಯ ಉಚ್ಚ ಪ್ರಾಥಮಿಕ ಶಾಲೆಗಳಲ್ಲಿ ಶಾರೀರಿಕ ಶಿಕ್ಷಣ ಪರೀಕ್ಷೆಗಳನ್ನು ತೆಗೆದುಕೊಳ್ಳಲಾಗುವದಿಲ್ಲ. ವರ್ಗ ಶಿಕ್ಷಕರು ತಮಗೆ ಅನುಕೂಲವಾದಂತೆ ವಿದ್ಯಾರ್ಥಿಗಳ ಯೋಗ್ಯತೆಗಳನ್ನು ಅಳೆದು ಶಾ. ಶಿಕ್ಷಣದಲ್ಲಿ ಗ್ರೇಡುಗಳನ್ನು ಕೊಡುತ್ತಿರುವದುಂಟು.

ಪ್ರಾಥಮಿಕ ಶಾಲೆಗಳಲ್ಲಿ ಈಗ ಶಾ. ಶಿ. ದಲ್ಲಿ ತರಬೇತಿ (ಅಲ್ಪಾವಧಿ) ಪಡೆದ ಅಥವಾ ಪಡೆಯದ ವರ್ಗ ಶಿಕ್ಷಕರು ಸ್ವೀಡಿಶ್ ರೀತಿಯ ತಾಳಬದ್ಧ ಅಂಗಸಾಧನೆಯ ವ್ಯಾಯಾಮ ಹಾಗೂ ಜನಪ್ರಿಯವಾದ ಲೇಝಿಮ್, ಡಂಬೆಲ್ಸ, ಹೂಪ್ಸ, ಕಾಠಿ ಮೊದಲಾದ ಚಿಕ್ಕ ಚಿಕ್ಕ ಸಾಧನೆಗಳನ್ನು ಉಪಯೋಗಿಸಿ ಮಾಡುವ ತಾಳಬದ್ಧ ಚಟುವಟಿಕೆಗಳು ಹಾಗೂ ಉಪಕರಣಗಳಿಲ್ಲದೆ ಆಡುವಂತಹ ಕಬಡ್ಡಿ, ಕುಂಟಾಟ, ಮುಟ್ಟಾಟ, ಖೋ ಖೋ ಮೊದಲಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವದು ಕಂಡುಬರುತ್ತದೆ.

೧೯೮೧-೮೨ ನೆಯ ವರುಷದಲ್ಲಿ ಪ್ರಥಮಬಾರಿಗೆ ಶಾ. ಶಿ. ತರಬೇತಿ ಕಾಲೇಜುಗಳ ಶಿಕ್ಷಣಾರ್ಥಿಗಳ ಕ್ರೀಡಾಕೂಟವು ಬೆಳಗಾವಿ ವಿಭಾಗಮಟ್ಟದಲ್ಲಿ ನಡೆಸಲ್ಪಡುತ್ತಲಿದೆ.

ಶಾರೀರಿಕ ಶಿಕ್ಷಣ ಶಿಕ್ಷಕರ ಕೊರತೆಯು ಉಚ್ಚ ಪ್ರಾಥಮಿಕ ಶಾಲೆಗಳಲ್ಲಿ ಎದ್ದು ಕಾಣುತ್ತದೆ. ಪ್ರತಿ ವರುಷ ಪ್ರತಿ ಜಿಲ್ಹೆಯಲ್ಲಿ ೬ ಅಥವಾ ೭ ದೈಹಿಕ ಶಿಕ್ಷಣ ಶಿಕ್ಷಕರನ್ನು ನಿಯಮಿಸಲಾಗುತ್ತದೆ. ಈ ರೀತಿಯಿಂದ ಶಾ. ಶಿ. ಶಿಕ್ಷಕರು ನಿಯಮಿಸಲ್ಪಟ್ಟರೆ ಎಲ್ಲ ಉಚ್ಚ ಪ್ರಾಥಮಿಕ ಶಾಲೆಗಳಲ್ಲಿ ಈ ಶಿಕ್ಷಕರು ನಿಯಮಿಸಲ್ಪಡುವದು ಅಸಾಧ್ಯವಾಗುವದು. ಸರಕಾರದವರು ಆಜ್ಞೆಯನ್ನು ಮಾಡಿದ್ದರೂ ಅದರಲ್ಲಿ ಕೆಲವು ಆಡಳಿತಾತ್ಮಕ ತೊಂದರೆಗಳಿರುವದನ್ನು ಉಚ್ಚ ಅಧಿಕಾರಿಗಳು ಮೇಲಿಂದ ಮೇಲೆ ಹೇಳುತ್ತಾರೆ. ಸರಕಾರವು ಉದಾರತೆಯನ್ನು ತೋರಿ ಈ ಆಡಳಿತಾತ್ಮಕ ತೊಂದರೆಗಳನ್ನು ದೂರೀಕರಿಸಿ ಶಾರೀರಿಕ ಶಿಕ್ಷಣ ಶಿಕ್ಷಕರನ್ನು ಎಲ್ಲ ಉಚ್ಚ ಪ್ರಾಥಮಿಕ ಶಾಲೆಗಳಲ್ಲಿ ನಿಯಮಿಸಿದರೆ ಮಕ್ಕಳ ಹಿತದ ದೃಷ್ಟಿಯಿಂದ ಒಳಿತಾಗುವದು. ಹಾಗೂ ಸರಕಾರವು ಈ ದಿಶೆಯಲ್ಲಿ ಕೈಕೊಂಡ ಕ್ರಮವು ಎಲ್ಲರಿಗೂ ಹಿತಕರವಾಗುವದು.

ಒಟ್ಟಿನಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಶಾರೀರಿಕ ಶಿಕ್ಷಣವು ಉಚ್ಚ ಮಟ್ಟದಲ್ಲಿ ಕಲಿಸಲ್ಪಟ್ಟರೆ ಮಕ್ಕಳಲ್ಲಿಯ ಸುಪ್ತಶಕ್ತಿಗಳನ್ನು ಕಂಡುಹಿಡಿದು ಉತ್ತಮ ತರಬೇತಿಯನ್ನಿತ್ತು ಉತ್ತಮ ಕ್ರೀಡಾಪಟುಗಳನ್ನಾಗಿಸಿದರೆ, ಅವರು ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಜಯಗಳಿಸುವದನ್ನು ಕಾಣಬಹುದು.

◎◎◎

ಘಳಿಸಿದ ದುಡ್ಡು ಎಂದಾದರೂ ಹಾಳಾಗಿ ಹೋಗುತ್ತದೆ. ಲಕ್ಷ್ಮೀ ಸ್ಥಿರವಲ್ಲವೆಂತ ಶಾಸ್ತ್ರ ಕೂಗುತ್ತದೆ. ಮತ್ತು ಯಾವತ್ತರೂ ನೋಡಿದ್ದದೆ. ಅಂದರೆ ಸತ್ಕಾರ್ಯಗಳಿಗೆ ಖರ್ಚು ಮಾಡಿ ಪುಣ್ಯ ಮತ್ತು ಕೀರ್ತಿಗಳನ್ನು ಘಳಿಸುವದು ಶಾಹಣೆರ ಕೆಲಸ.

—ಡೆಪ್ಯುಟಿ ಚೆನ್ನಬಸಪ್ಪನವರು

ಪ್ರಾಥಮಿಕ ಶಿಕ್ಷಣದ ಸಮಸ್ಯೆಗಳು

(Problems of Primary Edueation)

—ಶ್ರೀ ಮ. ಗು. ಹಂದ್ರಾಳ

(೪-೧-೧೯೮೧ ರಂದು ಮಾಡಿದ ಭಾಷಣ)

ಪ್ರಾಥಮಿಕ ಶಿಕ್ಷಣದ ಸಮಸ್ಯೆಗಳು ಅನೇಕ. ಅವುಗಳಲ್ಲಿ ಮುಖ್ಯವಾದವುಗಳನ್ನು ಇಲ್ಲಿ ತೋರಿಸಲಾಗಿದೆ :

೧) ಹಾಳು ಮತ್ತು ಕೊಳೆ (Wastage and stagnation)

೨) ಉಚಿತ, ಒತ್ತಾಯದ ಮತ್ತು ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ (Free Compulsory and Universal Primary Education)

೩) ದೊಡ್ಡ ತರಗತಿಗಳು (Large Classes)

೪) ಏಕೋಪಾಧ್ಯಾಯ ಶಾಲೆಗಳು (Single-Teacher School)

೫) ಪಾಲಕರ ಮತ್ತು ಸಾರ್ವಜನಿಕರ ಸಹಕಾರ (Parents and Public Co-operation)

೬) ಶಾಲಾ ಕಟ್ಟಡಗಳು

೭) ಶಿಫ್ಟ ಪದ್ಧತಿ (Shift System)

೮) ಶಿಕ್ಷಕರ ಯೋಗ್ಯತೆ-ದಕ್ಷತೆ (Competent Teachers)

೯) ಸಾಧನ ಸಲಕರಣೆಗಳು (Equipment)

ಈ ಸಮಸ್ಯೆಗಳನ್ನು ಒಂದೊಂದಾಗಿ ಪರಿಶೀಲಿಸೋಣ.

೧. ಹಾಳು ಮತ್ತು ಕೊಳೆ (Wastage and Stagnation):

ಇದೊಂದು ಪ್ರಾಥಮಿಕ ಶಿಕ್ಷಣದ ಪ್ರಗತಿಯಲ್ಲಿ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಉಚಿತ ಹಾಗೂ ಕಡ್ಡಾಯದ ಪ್ರಾಥಮಿಕ ಶಿಕ್ಷಣದ ಯೋಜನೆಯ ಫಲವಾಗಿ ಪ್ರಾಥಮಿಕ-ಶಿಕ್ಷಣವು ಸಾಕಷ್ಟು ಪ್ರಗತಿ ಹೊಂದಿದೆ. ಶೇಕಡಾ ೮೦-೯೦ ರಷ್ಟು ವಿದ್ಯಾರ್ಥಿಗಳನ್ನು ಶಾಲೆಗಳಲ್ಲಿ ಸೇರಿಸಿದ್ದೇವೆ. ಈ ಅಂಕಿ ಸಂಖ್ಯೆಗಳನ್ನು ಪರಿಶೀಲಿಸಿದಲ್ಲಿ ಕಡ್ಡಾಯದ ಶಿಕ್ಷಣದ ಯೋಜನೆಯು ಯಶಸ್ವಿಯಾಗಿದೆ ಎಂದು ಹೇಳಬಹುದು. ಶಾಲೆಗಳು ಹೆಚ್ಚಾಗಿವೆ. ಉಪಾಧ್ಯಾಯರ ಹಾಗೂ ವಿದ್ಯಾರ್ಥಿಗಳ ಸಂಖ್ಯೆಗಳೂ ಬೆಳೆದಿವೆ. ಹಣವೂ ಹೆಚ್ಚೆಚ್ಚು ವೆಚ್ಚವಾಗುತ್ತಲಿದೆ. ಶಿಕ್ಷಣದ ವಿಸ್ತರಣೆ ಸಾಕಷ್ಟು ಆಗಿದೆ. ಆದರೆ ಗುಣ ಮೌಲ್ಯ ಇಳಿಮುಖವಾಗಿದೆ. ಅಲ್ಲದೆ, ಪ್ರಾಥಮಿಕ

ಶಿಕ್ಷಣದಲ್ಲಿ ಎರಡು ದೊಡ್ಡ ಅವಳಿ-ಜವಳಿ ರೋಗಗಳು (Twin diseases) ಕಾಣಿಸಿಕೊಳ್ಳುತ್ತಲಿವೆ. ಅವನ್ನು ಈಗ ತಿಳಿಯುವಾ. ೧ನೇ, ೨ನೇ ತರಗತಿಯಲ್ಲಿಯ ಎಲ್ಲ ಮಕ್ಕಳು ಒಂದೊಂದು ವರ್ಷಕ್ಕೆ ಒಂದೊಂದು ತರಗತಿಯಲ್ಲಿ ಪಾಸಾಗುತ್ತಿಲ್ಲ ಎಂದರೆ ಶೇಕಡಾ ೩೧ ರಷ್ಟು ವಿದ್ಯಾರ್ಥಿಗಳು ನಪಾಸಾಗಿ, ಎರಡು ಮೂರು ವರ್ಷಗಳನ್ನು ಒಂದೇ ತರಗತಿಯಲ್ಲಿ ಉಳಿದುಕೊಂಡು ಕಾಲಹರಣ ಮಾಡುತ್ತಿರುವರು. ಇದನ್ನು ಕೊಳೆ (Stagnation) ಎಂದೂ ಕರೆಯುವರು. ಇನ್ನೊಂದು ವಿಚಾರ. ೧ನೇ ತರಗತಿಯಲ್ಲಿ ಸೇರಿದ ಮಕ್ಕಳಲ್ಲಿ ಶೇಕಡಾ ೫೮.೪ ರಷ್ಟು ಪ್ರಮಾಣದಲ್ಲಿ ೪ ನೇ ತರಗತಿಗೆ ತಲಪುವದಿಲ್ಲ. ಇದನ್ನು ಪ್ರಾಥಮಿಕ ಶಿಕ್ಷಣದಲ್ಲಿ ಹಾಳು (Wastage) ಎಂದೂ ಕರೆಯುವರು, ೩ ನೇ ತರಗತಿಯನ್ನು ಪಾಸಾಗಿ ೪ ನೇ ತರಗತಿಗೆ ಸೇರಿದವರನ್ನು ಸಾಕ್ಷರರೆಂದು (Literate) ತಿಳಿಯಬೇಕೆಂದು ಶಿಕ್ಷಣ ತಜ್ಞರಾದ ಅರ್. ವ್ಹಿ. ಪರೂಳೆಕರ ಇವರು ತಮ್ಮ (Mass Education in India) ಎಂಬ ಪುಸ್ತಕದಲ್ಲಿ ಸೂಚಿಸಿದ್ದಾರೆ. ಈ ವಿಚಾರ ಒಪ್ಪಿದಲ್ಲಿ, ಶೇಕಡಾ ೫೮.೪ ರಷ್ಟು ಪ್ರಮಾಣದಲ್ಲಿ ವಿದ್ಯಾರ್ಥಿಗಳು ನಿರಕ್ಷರಿಗಳಾಗಿಯೇ ಉಳಿಯುವರು, ಅಷ್ಟರಲ್ಲಿಯೇ ಅವರು ಶಾಲೆ ಬಿಟ್ಟು ಹೋಗುವರು. ಒಂದೇ ತರಗತಿಯಲ್ಲಿ ಒಂದು ವರ್ಷಕ್ಕಿಂತ ಹೆಚ್ಚು ಕಾಲ ಕಳೆಯುವ ವಿದ್ಯಾರ್ಥಿಗಳೇ ಈ ಸ್ಥಿತಿಗೆ ತಲುಪುವರು; ಎಂದರೆ ಕೊಳೆ ಎಂಬ ರೋಗವು ಹಾಳು ಎಂಬ ರೋಗಕ್ಕೆ ಎಳೆಯುತ್ತದೆ. (Stagnation leads to wastage) ಪ್ರಾಥಮಿಕ ಶಿಕ್ಷಣದಲ್ಲಿಯ **'ಕೊಳೆ'** ಮತ್ತು **'ಹಾಳು'** ಎಂಬ ಅವಳಿ ಜವಳಿ ರೋಗಗಳು ಬಲಿತು, ದೊಡ್ಡ ಪ್ರಮಾಣದಲ್ಲಿ ಹಣದ ಅಪವ್ಯಯ (Wasteful expenditure) ಆಗುತ್ತಲಿದೆ ಎಂಬುದು ವಿಷಾದಕರ! ೧ ನೇ ತರಗತಿಯಲ್ಲಿ ಸೇರಿದ ೧೦೦ ವಿದ್ಯಾರ್ಥಿಗಳಲ್ಲಿ ೫೮ ರಷ್ಟು ವಿದ್ಯಾರ್ಥಿಗಳು ೪ ನೇ ತರಗತಿಯನ್ನು ಸೇರುವದಿಲ್ಲ. ಆದಕಾರಣ ಪ್ರಾಥಮಿಕ ಶಿಕ್ಷಣದಲ್ಲಿ ಇಷ್ಟು ಪ್ರಮಾಣದಲ್ಲಿ ಹಾಳು ವೆಚ್ಚ ಉಂಟು. ಅಂದಮೇಲೆ ಕಡ್ಡಾಯದ ಪ್ರಾಥಮಿಕ ಶಿಕ್ಷಣವು ಯಶಸ್ವಿಯಾಗಿದೆಯೇ?

ಈ ಸಂಗತಿಯನ್ನು ಗಮನಿಸಿದಲ್ಲಿ ಪ್ರಾಥಮಿಕ ಶಿಕ್ಷಣವು ಯಶಸ್ವಿಯಾಗಿಲ್ಲ ಎಂಬುದು ಸ್ಪಷ್ಟವಾಯಿತು. **'ಹಾಳು-ಕೊಳೆ'** ಈ ಅವಳಿ-ಜವಳಿ ರೋಗಗಳನ್ನು ತಡೆಗಟ್ಟಬೇಕು.

ಉಪಾಯಗಳು : (Remedies)

೧) ಮಕ್ಕಳ ದಿನದ ಹಾಜರಿ (Attendance) ಸುಧಾರಣೆ: ಕೆಳ ತರಗತಿಯಲ್ಲಿಯ ವಿದ್ಯಾರ್ಥಿಗಳು ಶಾಲೆಗೆ ಅನಿಯಮಿತತನದಿಂದ ಬರುತ್ತಾರೆ; ಎಂದರೆ ಇಂದು ಬಂದವರು ನಾಳೆ ಬರಲಿಕ್ಕಿಲ್ಲ. ಮುಂಜಾನೆ ಬಂದವರು ಮಧ್ಯಾಹ್ನ ಶಾಲೆಗೆ ಬರುತ್ತಿಲ್ಲ. ಕೆಲವರು ಎಷ್ಟೋ ದಿನಗಳವರೆಗೆ ಶಾಲೆ ತಪ್ಪಿಸುವರು. ಇದನ್ನು

೨) ಉಚಿತ ಹಾಗು ಕಡ್ಡಾಯದ ಪ್ರಾಥಮಿಕ ಶಿಕ್ಷಣ ಯೋಜನೆಯ ಹಿನ್ನೆಲೆ :

ಭಾರತವು ಸ್ವತಂತ್ರವಾದ ಮೇಲೆ ತನ್ನದೇ ಆದ ಒಂದು ರಾಜ್ಯಘಟನೆ (Constitution) ರಚಿಸಿತು. ೨೬–೧–೧೯೫೦ ರಂದು ಘೋಷಿಸಲಾಯಿತು. ನಮ್ಮ ದೇಶದ ಹಿತರಕ್ಷಣೆಗಾಗಿ ಪ್ರಜಾತಂತ್ರ (Democracy) ರಾಜ್ಯ ಸೂತ್ರ ವನ್ನು ಒಪ್ಪಲಾಯಿತು. ಪ್ರತಿಯೊಬ್ಬನಿಗೂ ಸಮಾನ ಹಕ್ಕು ದೊರೆಯುವುದು ಮೂಲಭೂತ ಸಿದ್ಧಾಂತ. ಅದಕ್ಕನುಗುಣವಾಗಿ ನಮ್ಮ ದೇಶದ ರಾಜ್ಯಘಟನೆಯ ೪೫ ನೇ ಕಲಮಿನಲ್ಲಿ ಶಿಕ್ಷಣ ವಿಷಯದ ಬಗೆಗೆ ನಿಚ್ಚಳವಾದ ಧೋರಣವನ್ನು ನಮೂದಿಸಲಾಗಿದೆ. ಈ ಹೊಸ ಘಟನೆಯನ್ನು ಜಾರಿಯಲ್ಲಿ ತಂದ ಹತ್ತು ವರ್ಷಗಳ ಅವಧಿಯಲ್ಲಿ ಉಚಿತ ಹಾಗೂ ಕಡ್ಡಾಯದ ಪ್ರಾಥಮಿಕ ಶಿಕ್ಷಣದ ಯೋಜನೆಯನ್ನು ೬ ರಿಂದ ೧೪ ವರ್ಷ ಮುಟ್ಟುವವರೆಗೆ ನಮ್ಮ ದೇಶದ ಎಲ್ಲ ಮಕ್ಕಳಿಗೂ ಅನ್ವಯಿಸು ವಂತೆ ಯಾವದೇ ತರದ ಭೇದಭಾವ ಇಲ್ಲದೆ ಅಮಲಿನಲ್ಲಿ ತರಲಾಗುವದು ಎಂದು ರಾಜಘಟನೆಯು ಹೊಸ ಘೋಷಣೆಯನ್ನು ಸಾರಿತು. ಆದರೆ ಅನೇಕ ಆಪತ್ತು–ವಿಪತ್ತುಗಳು ಸ್ವಾತಂತ್ರ್ಯದ ಹೊಂಬೆಳಗಿನಲ್ಲಿ ಮೂಡಿಬಂದವು. ಕಾರಣ ಅನಿವಾರ್ಯ ವಾಗಿ ಈ ಶೈಕ್ಷಣಿಕ ಯೋಜನೆಯನ್ನು ನಿರ್ದಿಷ್ಟ ಅವಧಿಯಲ್ಲಿ ಅಮಲಿನಲ್ಲಿ ತರುವದು ಸಾಧ್ಯವಾಗಲಿಲ್ಲ. ೨ ಪಂಚವಾರ್ಷಿಕ ಯೋಜನೆಗಳು ಮುಗಿದರೂ ಕಡ್ಡಾಯದ ಶಿಕ್ಷಣದ ಯೋಜನೆಗೆ ಆಗ ಸ್ಥಾನ ಸಿಗಲಿಲ್ಲ. ನಮ್ಮ ಸುದೈವ! ನಮ್ಮ ದೇಶದ ಪ್ರಜೆಗಳ ಭಾಗ್ಯದ ಬಾಗಿಲು ಒಮ್ಮೆ ತೆರೆಯಿತು. ಅಜ್ಞಾನದ ಕತ್ತಲೆಯನ್ನು ಕಳೆಯಲು ಕಿರಣವು ಮೂಡಿತು. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಉಚಿತ ಹಾಗೂ ಕಡ್ಡಾಯದ ಪ್ರಾಥಮಿಕ ಶಿಕ್ಷಣದ ಯೋಜನೆಯು ತನ್ನ ನಿರ್ದಿಷ್ಟ ಸ್ಥಾನವನ್ನು ಒಮ್ಮೆ ಸ್ಥಿರಗೊಳಿಸಿತು. ಕೇಂದ್ರ ಸರಕಾರವು ಎಲ್ಲ ರಾಜ್ಯ ಸರಕಾರಗಳಿಗೆ ತನ್ನ ಆದೇಶವನ್ನು ಕಳುಹಿಸಿತು. ಆರ್ಥಿಕ ನೆರವನ್ನು ನೀಡಲು ಮುಂದೆ ಬಂದಿತು. ಆಗ ಮಾನ್ಯ ಗೋಪಾಲ ಕೃಷ್ಣ ಗೋಖಲೆಯವರು ಕಂಡ ಕನಸು ಈಗ ನನಸಾದುದು ಹೆಮ್ಮೆಯ ವಿಷಯ, ಅಲ್ಲವೆ?

೧೯೬೧ ನೇ ಫೆಬ್ರುವರಿ ತಿಂಗಳಲ್ಲಿ ಕೇಂದ್ರ ಸರಕಾರವು ಎಲ್ಲ ರಾಜ್ಯಗಳ ವಿದ್ಯಾ ಇಲಾಖೆಗಳ ಪ್ರತಿನಿಧಿಗಳ ಗೋಷ್ಠಿ (Seminar) ಏರ್ಪಡಿಸಿತು. ಹೊಸದಿಲ್ಲಿಯಲ್ಲಿ ಜರುಗಿದ ಇಂತಹ ವಿಚಾರ ಗೋಷ್ಠಿಯಲ್ಲಿ ಕರ್ನಾಟಕ ರಾಜ್ಯದ ಪ್ರತಿನಿಧಿಯಾಗಿ ಭಾಗವಹಿಸಲು ನನಗೂ ಅವಕಾಶ ದೊರೆತಿತ್ತು. ಕಡ್ಡಾಯದ ಪ್ರಾಥಮಿಕ ಶಿಕ್ಷಣದ ಯೋಜನೆಗೆ ಸಂಬಂಧಿಸಿದ ಎಲ್ಲ ಸಮಸ್ಯೆಗಳನ್ನು ಅಲ್ಲಿ ಕೂಲಂಕಷವಾಗಿ ಚರ್ಚಿಸಲಾಯಿತು. ಎಲ್ಲ ರಾಜ್ಯಗಳಲ್ಲಿ ಕೂಡಲೆ ಈ ಯೋಜನೆಯನ್ನು ಅಮಲಿನಲ್ಲಿ ತರುವದಕ್ಕೆ ಅವಶ್ಯವಿದ್ದ ವಿಚಾರ ಸಾಹಿತ್ಯವು ದೊರೆಯಿತು. ಭಾಗವಹಿಸಿದ

ಪ್ರತಿನಿಧಿಗಳಿಗೆಲ್ಲ ಒಳ್ಳೇ ಮಾರ್ಗದರ್ಶನ ಸಿಕ್ಕಿತು. ದಿಲ್ಲಿಯಲ್ಲಿ ನಡೆದ ಈ ವಿಚಾರ ಸಂಕಿರಣದ ಫಲವು ಹಳ್ಳಿ ಹಳ್ಳಿಗೂ ಮುಟ್ಟುವಂತಾಯಿತು. ನಮ್ಮ ದೇಶದ ವಿವಿಧ ರಾಜ್ಯಗಳಲ್ಲಿಯೂ ಒತ್ತಾಯದ ಶಿಕ್ಷಣದ ಯೋಜನೆಗಳು ರೂಪುಗೊಂಡವು.

ಸಾಧನೆ :

ನಮ್ಮ ದೇಶದಲ್ಲಿಯ ಪ್ರತಿಯೊಬ್ಬ ಮಗುವಿಗೆ ೬ ರಿಂದ ೧೪ ವಯೋಮಾನದ ಅವಧಿಯಲ್ಲಿ ಉಚಿತ ಪ್ರಾಥಮಿಕ ಶಿಕ್ಷಣದ ಅನುಕೂಲತೆಯು ದೊರೆಯಬೇಕೆಂಬುದು ಹಿರಿ ಗುರಿ ! ಇದನ್ನು ಸಾಗಿಸುವ ಬಗೆ ಎಂತು ? ೧೯೫೬-೫೭ ರಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿ ಶೈಕ್ಷಣಿಕ ಪರಿಶೀಲನೆಯನ್ನು (Educational Survey) ಮಾಡಲಾಯಿತು. ಯಾವ ಯಾವ ಹಳ್ಳಿಗಳಲ್ಲಿ ಕಿರಿ ಪ್ರಾಥಮಿಕ, ಹಿರಿ ಪ್ರಾಥಮಿಕ, ಹಾಗು ಪ್ರೌಢ ಶಾಲೆಗಳು ಇರಬೇಕೆಂಬುದನ್ನು ನಿರ್ದಿಷ್ಟ ಮಾಡಿ, ನಕ್ಷೆಗಳನ್ನು ತಯಾರಿಸಲಾಯಿತು. ೩೦೦ ಹಾಗೂ ಅದರ ಮೇಲ್ಪಟ್ಟ ಜನವಸತಿಯುಳ್ಳ ಶಾಲೆಗಳಿಲ್ಲದ ಹಳ್ಳಿಗಳಲ್ಲಿ (School-less Villages) ಮೊಟ್ಟ ಮೊದಲು ಹೊಸ ಶಾಲೆಗಳನ್ನು (New Schools) ತೆರೆಯಬೇಕು. ೩೦೦ ಕ್ಕಿಂತ ಕಡಿಮೆ ಜನಸಂಖ್ಯೆಯುಳ್ಳ ಸಣ್ಣ ಹಳ್ಳಿಗಳಲ್ಲಿ ೩೦ ರಿಂದ ೪೦ ರಷ್ಟು ಈ ಯೋಜನೆಗೆ ಒಳಪಟ್ಟ ವಯೋಮಾನದ ವಿದ್ಯಾರ್ಥಿಗಳು ಸಿಗುವದಿಲ್ಲ. ಅಲ್ಲಿ ಸ್ವತಂತ್ರ ಶಾಲೆಗಳನ್ನು ಕೊಡುವುದು ಬಹು ಭಾರದ ವಿಷಯ. ಆದ್ದರಿಂದ ಜೋಡು ಹಳ್ಳಿಗಳ ಮಧ್ಯೆ ಒಂದು ಶಾಲೆ ಇರುವುದು ಸುಲಭ ಸಾಧ್ಯವೂ ಉಚಿತವೂ ಎಂದು ಎಣಿಸಲಾಗಿದೆ. ನಮ್ಮ ದೇಶದಲ್ಲಿ ಆರ್ಥಿಕ ಹಾಗೂ ಇತರ ತೊಡಕುಗಳ ಮೂಲಕ ಕೆಲವೇ ಮನೆಗಳುಳ್ಳ ಚಿಕ್ಕ ಚಿಕ್ಕ ಹಳ್ಳಿಗಳು ಉಂಟು. ಅಂಥವುಗಳನ್ನು ಜೋಡಿಸಿ, ಗುಂಪು ಶಾಲೆಗಳನ್ನು (Group School) ಕೊಡುವ ಅವಕಾಶವು ವ್ಯವಹಾರ್ಯವಾಯಿತು. ಅಂತೂ ಜ್ಞಾನದ ಜ್ಯೋತಿಯು ಹಳ್ಳಿ ಹಳ್ಳಿಗೆ ಮನೆ ಮನೆಗೆ ಮುಟ್ಟುವ ಯೋಜನೆಯು ರೂಪುಗೊಂಡಿತು. ಅಲ್ಲದೆ, ೧೫೦೦ ಹಾಗೂ ಮೇಲ್ಪಟ್ಟು ಜನವಸತಿಯುಳ್ಳ ಹಳ್ಳಿಗಳಲ್ಲಿ ಹಿರಿಯ ಪ್ರಾಥಮಿಕ ಶಾಲೆಗಳನ್ನು (Senior Primary School) ತೆರೆಯಲಾಯಿತು. ಇಂಥ ಹಳ್ಳಿಗಳಲ್ಲಿ ಕಿರಿಯ ಪ್ರಾಥಮಿಕ ಶಾಲೆ (Junior Primary School) ಎಂದರೆ ೧ ರಿಂದ ೪ ತರಗತಿಗಳುಳ್ಳ ಶಾಲೆ ಇದ್ದರೆ ಅಲ್ಲಿ ೫, ೬ ೭ನೇ ತರಗತಿಗಳನ್ನು ಕ್ರಮವಾಗಿ ತೆರೆದು ಅದನ್ನು ವಿಸ್ತರಿಸಲಾಯಿತು, ಇದೂ ಅಲ್ಲದೆ ೫೦೦೦ ಹಾಗೂ ಮೇಲ್ಪಟ್ಟು ಜನವಸತಿಯುಳ್ಳ ಹಳ್ಳಿಗಳಲ್ಲಿ ಪ್ರೌಢ ಶಾಲೆಗಳು (High Schools) ಇರಬೇಕೆಂದು ಶೈಕ್ಷಣಿಕ ಪರಿಶೀಲನೆಯಲ್ಲಿ ತೋರಿಸಲಾಯಿತು. ಆದರೆ ಹೈಸ್ಕೂಲು ಶಿಕ್ಷಣದ ವಿಸ್ತಾರವನ್ನು ಪೂರ್ತಿಯಾಗಿ ಸರಕಾರವೇ ಹೊರುವುದು ಸಾಧ್ಯವಿಲ್ಲದ್ದರಿಂದ ಪ್ರೌಢ ಶಾಲೆಗಳನ್ನು ಹೊಸದಾಗಿ ಸ್ಥಾಪಿಸಲು ಮುಂದೆ ಬರುವ ಖಾಸಗಿ ಸಂಸ್ಥೆಗಳಿಗೆ ಧನ ಸಹಾಯ (Grant in aid) ಕೊಡುವ ಧೋರಣವನ್ನು ಸ್ವೀಕರಿಸಿತು.

ಒತ್ತಾಯ ಏಕೆ?

ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ೬ ರಿಂದ ೧೦ ವಯೋಮಾನದ ಮಕ್ಕಳಿಗೆ ಉಚಿತವಾದ ಪ್ರಾಥಮಿಕ ಶಿಕ್ಷಣವು ಒತ್ತಾಯದ್ದಾಗಿ ದೊರೆಯು ಲಾರಂಭಿಸಿತು. ಉಚಿತವಾದ ಪ್ರಾಥಮಿಕ ಶಿಕ್ಷಣದ ವಿಚಾರವನ್ನು ಬಹು ಜನರು ಮೆಚ್ಚುವರು: ಆದರೆ ಕಡ್ಡಾಯ (Compulsory) ಪದದ ಬಳಕೆಗೆ ಆಕ್ಷೇಪಿಸು ವರು. ಶಿಕ್ಷಣದ ಸೌಕರ್ಯಗಳನ್ನು ಸರಕಾರವು ಸಕಲರಿಗೆ ಒದಗಿಸಿಕೊಟ್ಟರೆ ಸಾಕು. ಇಚ್ಛೆಯುಳ್ಳವರು ಈ ಸೌಕರ್ಯಗಳ ಲಾಭಗಳನ್ನು ಪಡೆಯುವರು. ಪ್ರತಿಯೊಬ್ಬ ಮಗುವು ೧ ರಿಂದ ೪ ತರಗತಿಯವರೆಗೆ ಶಿಕ್ಷಣ ಪಡೆಯಲೇಬೇಕೆಂದು ಸರಕಾರವು ಏಕೆ ಒತ್ತಾಯ ಮಾಡಬೇಕು?

ಒತ್ತಾಯ ಮಾಡುವುದು ಅಗತ್ಯ. ಬೇನೆ-ಬೇಸರಿಕೆ ಬಂದಾಗ ಮಗುವು ಔಷಧವನ್ನು ಅಕ್ಕರೆಯಿಂದ ಕುಡಿಯುವದಿಲ್ಲ. ಯಾಕೆ? ಔಷಧವು ಕಹಿಯಾಗಿದೆ ಎಂಬ ಭಾವನೆಯು ಮಗುವಿನ ಮನದಲ್ಲಿ ಮೂಡುವದು. ಆದರೆ ಇಂತಹ ಕಹಿಯಲ್ಲಿ ಸಿಹಿ ಅಡಗಿದೆ ಎಂದು ಗೊತ್ತು. ಅದೆಂದರೆ ಬೇನೆಯನ್ನು ಕಳೆಯುವ ಗುಣ ಉಂಟು ಎಂಬುದು. ಆದಕಾರಣ ತಾಯಿ ಕಕ್ಕುಲತೆಯಿಂದ ಒತ್ತಾಯ ಮಾಡಿಯಾದರೂ ತನ್ನ ಮಗುವಿಗೆ ಔಷಧವನ್ನು ಕುಡಿಸುವದಿಲ್ಲವೇ? ಇದು ಅನಿವಾರ್ಯವಾದ ವಿಧಾನವಲ್ಲವೇ? ಒತ್ತಾಯದ ಶಿಕ್ಷಣದ ಯೋಜನೆಯಲ್ಲಿ ಈ ವಿಚಾರ ಸೇರಿಕೊಂಡಿದೆ.

ಸಿದ್ಧತೆ:

ಕರ್ನಾಟಕ ರಾಜ್ಯದಲ್ಲಿ ೧೯೬೧ನೇ ಅಗಸ್ಟ ೧ನೇ ದಿನಾಂಕದಿಂದ ಉಚಿತ ಹಾಗು ಕಡ್ಡಾಯದ ಶಿಕ್ಷಣದ ಕಾನೂನು ಅಮಲಿನಲ್ಲಿದೆ. ೬ ವಯಸ್ಸು ಆದ ಎಲ್ಲ ಮಕ್ಕಳನ್ನು ಶಾಲೆಗಳಿಗೆ ಸೇರಿಸುವದಕ್ಕಾಗಿ ಪ್ರತಿ ವರುಷ ಅಂತಹ ಮಕ್ಕಳ ಯಾದಿಯನ್ನು (Census Register of Childern) ಸಿದ್ಧಗೊಳಿಸಲಾಗುವದು. ನಮ್ಮ ದೇಶ ದಲ್ಲಿ ದಾರಿದ್ರ್ಯ, ಅನಾರೋಗ್ಯ, ಮೂಢನಂಬಿಕೆ ಮೊದಲಾದ ತೊಡಕುಗಳ ಜಾಲದಲ್ಲಿ ಜನತೆ ಸಿಲುಕಿ ಇನ್ನೂ ತೊಳಲಾಡುತ್ತಿದೆ. **ನಾವು ಬಡವರು, ನಮಗೇಕೆ ವಿದ್ಯೆ?** ನಾವು ದುಡಿಯುವರು, ಸಿರಿವಂತರಲ್ಲ, ನಮಗೇಕೆ ಶಿಕ್ಷಣ? ನಾವು ಹಿಂದುಳಿದವರು, ನಮಗೇಕೆ ಸಂಸ್ಕೃತಿಯ ಹುಚ್ಚು! ಇದೆಲ್ಲ ಬೇಕಿಲ್ಲ ಎಂಬ ವಿಚಾರಗಳ ತಾಕಲಾಟದಲ್ಲಿ ಜನ ಕೆಳಗಿಳಿಯುತ್ತದೆ. ಎಚ್ಚರಿಸಬೇಕು! ಬಡ ಜನರಂತೂ ತಮ್ಮ ಮಕ್ಕಳನ್ನು ಕುರಿ ಕಾಯಲಿಕ್ಕೆ, ದನ ಮೇಯಿಸುವದಕ್ಕೆ, ಶಿಶುಗಳನ್ನು ಆಡಿಸಲಿಕ್ಕೆ ಅಥವಾ ಹೊಲಕ್ಕೆ ಹೋಗಿ ಬುತ್ತೀ ಕೊಡಲಿಕ್ಕೆ ಮುಂತಾದ ಕೆಲಸ ಕಾರ್ಯಗಳಿಗಾಗಿ ಉಪಯೋಗಿಸುವದುಂಟು. ಆದಕಾರಣ ಪಾಲಕರ ಮನ ಹದಗೊಳಿಸುವುದು ಪ್ರಥಮ ಕಾರ್ಯವಾಯಿತು. ೬-೧೦ ವಯೋಮಾನದ ೧೦ ಲಕ್ಷ್ಯ ಹೆಚ್ಚಿನ ಮಕ್ಕಳನ್ನು ನಮ್ಮ ಶಾಲೆಗಳಲ್ಲಿ ಸೇರಿಸಬೇಕಾಯಿತು. ಈ ಕಾರ್ಯವನ್ನು ನೆರವೇರಿಸಲು ಹೊಸ ಶಾಲೆಗಳನ್ನು ತೆರೆಯಲಾಯಿತು. ಜನತೆಯ ಸಹಕಾರ ಪಡೆಯಲು **ಶಾಲಾ ಅಭಿವೃದ್ಧಿ**

ಸಮಿತಿಗಳನ್ನು (School Betterment Committees) ರೂಪಿಸಲಾಯಿತು. ತಾಲೂಕು, ಜಿಲ್ಲೆ, ರಾಜ್ಯ ಮಟ್ಟಗಳಲ್ಲಿ ವಿಚಾರ ಗೋಷ್ಠಿಗಳನ್ನು ಏರ್ಪಡಿಸಲಾಯಿತು. ಶಾಲಾ ತಪಾಸಣಾಧಿಕಾರಿಗಳನ್ನೂ, ಶಿಕ್ಷಕ-ಶಿಕ್ಷಕಿಯರನ್ನೂ ಈ ಯೋಜನೆಯಲ್ಲಿ ನಿಷ್ಠೆಯಿಂದ ದುಡಿಯಲು ಅಣಿಗೊಳಿಸಲಾಯಿತು. ಗ್ರಾಮಗಳಲ್ಲಿಯ ಮಕ್ಕಳು ತಮ್ಮ ಪಾಲಕರಿಗೆ ಬಹುಮುಖದಿಂದ ಮನೆಗೆಲಸಗಳಲ್ಲಿ ನೆರವಾಗುವರು. ಆದಕಾರಣ ಪಾಲಕರು ತಮ್ಮ ಮಕ್ಕಳನ್ನು ಶಾಲೆಗಳಿಗೆ ಕಳಿಸಲು ನಿರಾಕರಿಸುವರು. ಕಾನೂನಿನ ಒತ್ತಾಯದಿಂದ ಶಿಕ್ಷೆ ಮಾಡಲು ಹವಣಿಸಿದರೆ ಕೆಲ ಪಾಲಕರು ದಂಡದ ಹಣವನ್ನು ಕೊಡಲು ಸಿದ್ಧರಾಗುವರೇ ಹೊರತು ಮಕ್ಕಳನ್ನು ಶಾಲೆಗೆ ಕಳಿಸುವದಿಲ್ಲ. ಒಂದೆಡೆ ಆರ್ಥಿಕ ದುರವಸ್ಥೆ, ಇನ್ನೊಂದೆಡೆ ಅಜ್ಞಾನದ ಆವರಣ. ಇವೆರಡೂ ಅವರನ್ನು ಜಗ್ಗುತ್ತಿದೆ.

ಪ್ರಚಾರ :

ಜನಮನ ಹದಗೊಳಿಸಲು ತಕ್ಕ ಪ್ರಚಾರ ಬೇಕು. ಅಂತೆಯೇ ಶಾಲೆಗಳು ಪ್ರಾರಂಭವಾದ ಮೇಲೆ ಎಂದರೆ ಜೂನ ತಿಂಗಳಲ್ಲಿ ಒತ್ತಾಯದ ಶಿಕ್ಷಣದ ಕಾನೂನಿಗೆ ಒಳಪಟ್ಟ ಎಲ್ಲ ಮಕ್ಕಳನ್ನು ಶಾಲೆಗಳಲ್ಲಿ ಸೇರಿಸುವದಕ್ಕಾಗಿ ಪ್ರಚಾರ ಕಾರ್ಯಗಳನ್ನು (Enrollment Drives) ಕೈಕೊಳ್ಳಲಾಯಿತು ಸೂಕ್ತಫಲಕಗಳನ್ನು ಸಿದ್ಧಗೊಳಿಸಿ ಜನತೆಯಲ್ಲಿ ಜಾಗೃತಿಯನ್ನುಂಟುಮಾಡಲು ಪ್ರಭಾತಫೇರಿ, ಸಭೆ-ಸಮಾರಂಭಗಳನ್ನು ಸಂಘಟಿಸಲಾಯಿತು. ಜ್ಞಾನದ ಜ್ಯೋತಿಯನ್ನು ಮನೆ ಮನೆಗೆ ಮುಟ್ಟಿಸುವ ಮಹಾಕಾರ್ಯದಲ್ಲಿ ಅಧಿಕಾರಿಗಳ ಹಾಗೂ ಜನತೆಯ ಸಹಾಯ, ಸಹಾನುಭೂತಿ, ಸಹಕಾರ ಕೋರಲಾಯಿತು. ಶಾಲೆಗೆ ಬರುವ ವಯಸ್ಸಿನ ಮಕ್ಕಳನ್ನು ಶಾಲೆಗೆ ಕಳಿಸಿ, ಬೆಳೆಯುವ ಮಕ್ಕಳ ವೈಯಕ್ತಿಕ ವಿಕಾಸಕ್ಕೆ ತಕ್ಕ ಪೋಷಣೆ ನೀಡಿ, ಅವರ ಕುಟುಂಬದ ಹೆಚ್ಚಳ ಹಾಗೂ ನಾಡಿನ ಪ್ರಗತಿ ಇವು ಪರಿಣಮಿಸುವಂತೆ ಮಾಡುವುದು ಪ್ರತಿಯೊಬ್ಬ ಭಾರತೀಯನ ಆದ್ಯ ಕರ್ತವ್ಯ ಎಂಬ ಸಂದೇಶವನ್ನೂ ಸಾರಲಾಯಿತು. ಶಿಕ್ಷಕರೂ ಅಧಿಕಾರಿಗಳೂ ಈಗಲೂ ಆ ದಿಶೆಯಲ್ಲಿ ಕಾರ್ಯಮುಂದುವರಿಸಿದ್ದಾರೆ.

ಪ್ರಗತಿ :

ತೃತೀಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಒತ್ತಾಯದ ಕಾನೂನಿಗೆ ಒಳಪಟ್ಟ ೬-೧೧ ವಯಸ್ಸಿನ ಮಕ್ಕಳಲ್ಲಿ ಕನಿಷ್ಠ ೧೦೦ಕ್ಕೆ ೮೦ ರಷ್ಟಾದರೂ ಮಕ್ಕಳು ಶಾಲೆಗಳನ್ನು ಸೇರಬೇಕೆಂದು ಕೇಂದ್ರ ಸರಕಾರವು ನಿರ್ದಿಷ್ಟ ಪಡಿಸಿದೆ. ಈಗಾಗಲೇ ಪ್ರಚಾರ ಕಾರ್ಯದ ಫಲವಾಗಿ ೧೦೦ಕ್ಕೆ ೬೫ ರಿಂದ ೯೦ರ ವರೆಗೆ ನಮ್ಮ ರಾಜ್ಯದ ಬೇರೆ ಬೇರೆ ತಾಲೂಕುಗಳಲ್ಲಿ ಮಕ್ಕಳು ಶಾಲೆಗಳಲ್ಲಿ ದಾಖಲು ಆಗಿರುವರು. ಹಳ್ಳಿಯ ಪಂಚಾಯತ ಸದಸ್ಯರು. ತಾಲೂಕು ಹಾಗೂ ಜಿಲ್ಲೆಗಳ ಅಭಿವೃದ್ಧಿ ಸಮಿತಿಗಳು, ಶಿಕ್ಷಣ ಪ್ರೇಮಿಗಳು, ಶಿಕ್ಷಣಾಧಿಕಾರಿಗಳು, ಶಿಕ್ಷಕ-ಶಿಕ್ಷಕಿಯರು ಎಲ್ಲರೂ ಸೇರಿ

ಉತ್ತಮ ರೀತಿಯಿಂದ ಪ್ರಚಾರ ಮಾಡಿ, ಮಕ್ಕಳ ದಾಖಲೆಯ ಕಾರ್ಯದಲ್ಲಿ ತಕ್ಕ ಫಲಿತಾಂಶವನ್ನು ಪಡೆದಿರುವರು, ಈಗಲೂ ಪ್ರಯತ್ನಗಳು ನಡೆದಿವೆ.

೩) ದೊಡ್ಡ ತರಗತಿಗಳು : (Large Classes)

ಕಡ್ಡಾಯ ಶಿಕ್ಷಣದ ಪರಿಣಾಮವಾಗಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದ್ದರಿಂದ, ಶಿಕ್ಷಕರ ಸಂಖ್ಯೆ ಕಡಿಮೆ ಇದ್ದುದರಿಂದ ೧ ನೇ ೨ ನೇ ತರಗತಿಗಳಲ್ಲಿ ಹೆಚ್ಚು ವಿದ್ಯಾರ್ಥಿಗಳ ಸಂಖ್ಯೆ ಇತ್ತು. ಒಂದು ತರಗತಿಯಲ್ಲಿ ೬೦-೬೫ ವಿದ್ಯಾರ್ಥಿಗಳೂ ಇದ್ದರು. ಇದರಿಂದ ತರಗತಿಗಳಲ್ಲಿ ವಿದ್ಯಾರ್ಥಿಗಳನ್ನು ಕಾಯುವದೇ ಒಂದು ದೊಡ್ಡ ಕೆಲಸವಾಗಿ, ಹೇಗೆ ಹೇಗೊ ವಿದ್ಯಾಭ್ಯಾಸ ಮಾಡಿಸುತ್ತಿದ್ದರು. ಇಂಥ ಸಮೂಹ ಶಿಕ್ಷಣದಿಂದ ವಿದ್ಯಾರ್ಥಿಗಳಿಗೆ ವೈಯಕ್ತಿಕವಾಗಿ ಗಮನ ಕೊಡುವದು ಸಾಧ್ಯವಾಗುತ್ತಿರಲಿಲ್ಲ. ವಿದ್ಯಾರ್ಥಿಗಳ ತಪ್ಪುಗಳನ್ನು ತಿದ್ದುವದಕ್ಕೂ ಕಠಿಣವೆನಿಸಿತು. ಬೋಧನೆಯು ಫಲಪ್ರದವಾಗುತ್ತಿರಲಿಲ್ಲ. ಆದಕಾರಣ ಒಂದು ತರಗತಿಯಲ್ಲಿ ೪೦ ವಿದ್ಯಾರ್ಥಿಗಳಿಗಿಂತ ಹೆಚ್ಚು ಇರಕೂಡದು; ಅವರ ದಿನದ ಹಾಜರಿ ಸರಾಸರಿ ೩೦ ಇದ್ದರೂ ಸಾಕು ಎಂಬ ನಿರ್ಣಯಕ್ಕೆ ಬರಲಾಗಿದೆ. ಹೀಗೆ ತರಗತಿಯ ಗಾತ್ರವನ್ನು (Size of the Class) ನಿರ್ದಿಷ್ಟಪಡಿಸಲಾಗಿದೆ. ತರಗತಿಯ ಗಾತ್ರ ಕಡಿಮೆ ಇದ್ದರೆ, ವಿದ್ಯಾರ್ಥಿಗಳ ಪ್ರಗತಿಯ ಕಡೆಗೆ ವೈಯಕ್ತಿಕವಾಗಿ ಗಮನ ಕೊಡಲು ಶಿಕ್ಷಕರಿಗೆ ಅನುಕೂಲವಾಗುತ್ತದೆ. ಅಲ್ಲದೆ, ಬೋಧನೆಯ ಗುಣಮಟ್ಟವನ್ನು ಹೆಚ್ಚಿಸಲಿಕ್ಕೂ ಸಾಧ್ಯವಾಗುವದೆಂದು ಆಶಿಸಲಾಗಿದೆ.

೪) ಏಕೋಪಾಧ್ಯಾಯ ಶಾಲೆಗಳು : (Single-Teacher Schools)

ನಮ್ಮ ರಾಜ್ಯದಲ್ಲಿ ೧೪,೦೦೦ ಕ್ಕೂ ಮಿಕ್ಕಿ ಏಕೋಪಾಧ್ಯಾಯ ಶಾಲೆಗಳಿವೆ. ಒಟ್ಟು ಪ್ರಾಥಮಿಕ ಶಾಲೆಗಳಲ್ಲಿ ಅಂಥ ಶಾಲೆಗಳು ಪ್ರತಿಶತ ೪೦ ರಷ್ಟು ಪ್ರಮಾಣದಲ್ಲುಂಟು; ಅವುಗಳ ಬಗೆಗೆ **ಮೂರು** ಪ್ರಶ್ನೆಗಳು ಉದ್ಭವಿಸುತ್ತವೆ :

೧) ಏಕೋಪಾಧ್ಯಾಯ ಶಾಲೆಗಳನ್ನು ರದ್ದುಪಡಿಸಬೇಕೇ ?

೨) ಅಸಮರ್ಪಕ ಬೋಧನೆ ಅಲ್ಲಿ ನಡೆಯುತ್ತಿಲ್ಲವೆ ?

೩) ಅವುಗಳನ್ನು ಸುಧಾರಿಸಬಹುದೇ ?

ಈ ಪ್ರಶ್ನೆಗಳನ್ನು ಒಂದೊಂದಾಗಿ ವಿವರಿಸೋಣ.

೧) ಭಾರತವು ಹಳ್ಳಿಗಳ ನಾಡು. ಪ್ರತಿಶತ ೮೦ ರಷ್ಟು ಹಳ್ಳಿಗಳಿವೆ. ಕರ್ನಾಟಕ ರಾಜ್ಯದಲ್ಲಿಯ ಪರಿಸ್ಥಿತಿಯು ಅಷ್ಟೇ ! ಚಿಕ್ಕ ಚಿಕ್ಕ ಹಳ್ಳಿಗಳೂ ಬಹಳಷ್ಟು ಉಂಟು. ಶಾಲೆಗಳಿಗೆ ಸಾಕಷ್ಟು ವಿದ್ಯಾರ್ಥಿಗಳು ದೊರೆಯುತ್ತಿಲ್ಲ. ೩೦೦ ಜನಸಂಖ್ಯೆಯುಳ್ಳ ಗ್ರಾಮಗಳಲ್ಲಿ ೪೦ ವಿದ್ಯಾರ್ಥಿಗಳು ದೊರೆಯಬಹುದು. ಅಷ್ಟೆ !

ಉಚಿತ ಹಾಗೂ ಕಡ್ಡಾಯದ ಪ್ರಾಥಮಿಕ ಶಿಕ್ಷಣದ ಯೋಜನೆಯ ಪ್ರಕಾರ ಅಂಥ ಹಳ್ಳಿಗಳಿಗೂ ವಿದ್ಯಾಭ್ಯಾಸದ ಸೌಕರ್ಯ ಒದಗಿಸುವುದು ಅಗತ್ಯವಾಗಿದೆ. ಇಂಥ ಶಾಲೆಗಳಲ್ಲಿ ಒಬ್ಬ ಶಿಕ್ಷಕನನ್ನು ನೇಮಿಸುವುದು ಅನಿವಾರ್ಯ. ಅದು ಸರಕಾರದ ಧೋರಣವಾಗಿದೆ. ಈ ಕಾರಣಗಳ ಮೂಲಕ ಏಕೋಪಾಧ್ಯಾಯ ಶಾಲೆಗಳನ್ನು ನಡೆಸುವುದು ಅಗತ್ಯವೂ ಆಗಿದೆ.

೨) ಈ ಶಾಲೆಗಳಲ್ಲಿ ದೊರೆಯುತ್ತಿರುವ ಶಿಕ್ಷಣವು ಸಮರ್ಪಕವಾಗಿಲ್ಲ. ಒಬ್ಬ ಶಿಕ್ಷಕನು ಒಂದಕ್ಕಿಂತ ಹೆಚ್ಚು ತರಗತಿಗಳಿಗೆ ಶಿಕ್ಷಣ ಕೊಡಬೇಕಾಗುತ್ತದೆ, ಅದೇಕೆ ? ಒಬ್ಬ ಶಿಕ್ಷಕನು ೧ ರಿಂದ ೪ ತರಗತಿಗಳಿಗೆ ಕಲಿಸಬೇಕು. ಒಂದು ತರಗತಿಗೆ ಒಬ್ಬ ಶಿಕ್ಷಕ ಇದ್ದರೆ, ಶಿಕ್ಷಣವು ಚೆನ್ನಾಗಿ ಸಾಗುತ್ತದೆ. ಮಕ್ಕಳ ಸಂಖ್ಯಾಮಾನದಿಂದ ಏಕೋಪಾಧ್ಯಾಯ ಶಾಲೆಗಳಲ್ಲಿ ಬಹುವರ್ಗಗಳನ್ನು ನಡೆಸಬೇಕಾಗುವದು ಇದರಿಂದ ಉತ್ತಮ ಶಿಕ್ಷಣ ಕೊಡಲಿಕ್ಕೆ ಕಠಿಣವೆನಿಸುತ್ತದೆ. ಅಭ್ಯಾಸ ವಿಷಯ ಪತ್ರಿಕೆಯಂತೆ ವಿಷಯಗಳನ್ನು ಫಲವತ್ತಾಗಿ ಸಾಗಿಸುವದು ಸಾಧ್ಯವಾಗಲಿಕ್ಕಿಲ್ಲ. ಇದೊಂದು ಅನಿಷ್ಟ ಅಂಶ.

೩) ಇಂಥ ಶಾಲೆಗಳಲ್ಲಿಯ ಶಿಕ್ಷಣವನ್ನು ಸಾಕಷ್ಟು ಅಲ್ಲದಿದ್ದರೂ, ತಕ್ಕಷ್ಟು ಸುಧಾರಿಸುವುದು ಸಾಧ್ಯವಿದೆ. ಕೆಳಗಿನ ಸಂಗತಿಗಳನ್ನು ಗಮನಿಸಬೇಕು :

(ಅ) ಟ್ರೇಂಡ್ ಮತ್ತು ಅನುಭವಿಕ ಶಿಕ್ಷಕರನ್ನು ಇಂಥ ಶಾಲೆಗಳಲ್ಲಿ ನೇಮಿಸಬೇಕು. (ಆ) ಹಿರೇಮಣಿಗೆ ಮೇಲ್ವಿಚಾರಣೆಯ ತರಬೇತು ಕೊಡಬೇಕು. ತನ್ನ ಅಭ್ಯಾಸಕ್ಕೆ ತೊಂದರೆಯಾಗದಂತೆ, ಅವನು ಶಿಕ್ಷಕನಿಗೆ ನೆರವಾಗಬೇಕು. (ಇ) ಸೂಕ್ತ ವೇಳಾಪತ್ರಿಕೆಯನ್ನು ತಯಾರಿಸಿಕೊಳ್ಳಬೇಕು. (ಈ) ಉಪಯುಕ್ತ, ಸುಲಭ, ಆಕರ್ಷಕ ಉಪಕರಣಗಳನ್ನು ಬಳಸಿ, ಶಿಕ್ಷಕನು ಪಾಠ ಹೇಳಬೇಕು. (ಉ) ಒಂದು ತರಗತಿಗೆ ಒಂದು ವಿಷಯ ಒಂದು ಅವಧಿಪೂರ್ಣ ಕಲಿಸಬೇಕು. ಉಳಿದ ತರಗತಿಗಳಿಗೆ ಓದು, ಬರೆಹಗಳ ರೂಢಿ ಕೆಲಸ ಕೊಡಬೇಕು. (ಊ) ಮೂಲ ಜ್ಞಾನಕ್ಕೆ ಚ್ಯುತಿ ಬರದಂತೆ, ಸುಲಭ ಅಭ್ಯಾಸ ಪತ್ರಿಕೆಯನ್ನು ಒದಗಿಸುವುದು ಅಗತ್ಯ. ಸರಕಾರ ಈ ಕಾರ್ಯ ಮಾಡಬೇಕು.

೫) ಪಾಲಕರ ಮತ್ತು ಸಾರ್ವಜನಿಕರ ಸಹಕಾರ :

(Parents and Public Co-operation)

ಶಿಕ್ಷಣ ಕಾರ್ಯವು ಶಿಕ್ಷಕರಿಗೆ ಸೇರಿದ್ದು. ಶಾಲೆಗಳನ್ನು ನಡೆಯಿಸುವುದು ಸರಕಾರದ ಹೊಣೆ. ಪಾಲಕರೇನು ಮಾಡಬೇಕು ? ಸಾರ್ವಜನಿಕರಿಗೆ ಏನು ಸಂಬಂಧ ? ಎಂದು ಮುಂತಾಗಿ ಕೇಳಬಹುದು. ಅಲ್ಲವೇ ? ತೋರಿಕೆಗೆ ಇದು ಸರಿಯೆನಿಸುವುದು.

೧) ಶಿಕ್ಷಕರು ಶಾಲೆಯಲ್ಲಿ ಕಲಿಸುವರು. ಕಲಿಸಿದ ವಿಷಯವನ್ನು ದೃಢೀಕರಿಸುವದಕ್ಕೆ ಮನೆಗೆಲಸ (Home Work) ಕೊಡುವರು. ಪಾಲಕರು ಮನೆಯಲ್ಲಿ ಅವರಿಗೆ ಬೇರೆ ಬೇರೆ ಕೆಲಸ ಕೊಡುವರು. ಇದರಿಂದ ಅವರಿಗೆ ಶಿಕ್ಷಕರು ಕೊಟ್ಟ ಪಾಠಗಳಿಗೆ ಸಂಬಂಧಿಸಿದ ಮನೆಗೆಲಸ ಮಾಡಲು ಸಮಯ ಸಿಗಲಿಕ್ಕಿಲ್ಲ. ಆದಕಾರಣ ಶಿಕ್ಷಕರ ಬೋಧನೆಯ ಪರಿಣಾಮ ಫಲಪ್ರದವಾಗಲಿಕ್ಕಿಲ್ಲ. ವಿದ್ಯಾರ್ಥಿಗಳ ಅಭ್ಯಾಸ ಪ್ರಗತಿ ಕುಂಠಿತವಾಗಬಹುದು. ಶಿಕ್ಷಕರು ಅಭ್ಯಾಸದ **ಮನೆಗೆಲಸ ತಪ್ಪಿಸುವ ವಿದ್ಯಾರ್ಥಿಗಳನ್ನು ವೈಯಕ್ತಿಕವಾಗಿ ವಿಚಾರಿಸಬೇಕು, ಪಾಲಕರನ್ನೂ, ಕಂಡು, ಸೂಕ್ತ ಸಲಹೆ ನೀಡಬೇಕು.** ಇನ್ನೊಂದು ವಿಷಯ.

೨) ಕೆಲವು ವಿದ್ಯಾರ್ಥಿಗಳು ಶಾಲೆಗೆ ನಿಯಮಿತವಾಗಿ ಬರುವದಿಲ್ಲ. ಈ ಅನಿಯಮಿತತನಕ್ಕೆ ವಿದ್ಯಾರ್ಥಿಗಳ ಅಲಕ್ಷ್ಯ, ಅನಾಸ್ಥೆಗಳೂ ಕಾರಣವಿರಬಹುದು. ಅಲ್ಲದೇ ಪಾಲಕರೂ ಮಕ್ಕಳಿಗೆ ಬೇರೆ ಕೆಲಸಗಳನ್ನೂ ಹಚ್ಚುವರು. ಆದಕಾರಣ ಅಂಥ ವಿದ್ಯಾರ್ಥಿಗಳು ಪಾಲಕರನ್ನೂ ಕಂಡು, ಸೂಕ್ತ ಸಲಹೆ ನೀಡಬೇಕು. ಹೀಗೆ **ವಿದ್ಯಾರ್ಥಿಗಳ ದಿನದ ಹಾಜರಿ ಸುಧಾರಿಸುವದಕ್ಕೆ ಪಾಲಕರ ಸಹಕಾರ ಅಗತ್ಯ.**

೩) **ಮಕ್ಕಳ ಆರೋಗ್ಯ :** ಕೆಲವು ವಿದ್ಯಾರ್ಥಿಗಳು ಶಾಲೆಗೆ ಬರುವ ಪೂರ್ವದಲ್ಲಿ ಹಲ್ಲು ಉಜ್ಜುವದಿಲ್ಲ, ಕಣ್ಣಲ್ಲಿ ಪಿಚ್ಚು ಇರಬಹುದು; ಕೆಲವರಿಗೆ ಸಾಂಕ್ರಾಮಿಕ ರೋಗಗಳೂ ಇರಬಹುದು; ಕೆಲವರು ಹೊಲಸಾದ ಬಟ್ಟೆ ತೊಟ್ಟು ಶಾಲೆಗೆ ಬರುವರು. ಇಂಥ ವಿದ್ಯಾರ್ಥಿಗಳ ಬಗೆಗೆ ಶಿಕ್ಷಕರು ಪಾಲಕರೊಡನೆ ವಿಚಾರಿಸಿ, ಅವರ ಸಹಕಾರ ಕೋರಬೇಕು.

ಪಾಲಕರ ಸಹಕಾರ ಹೇಗೆ ಪಡೆಯುಬೇಕು?

೧) ಪಾಲಕರನ್ನು ಶಿಕ್ಷಕರು ಕಾಣಬೇಕು.

೨) ಶಾಲೆಗಳಲ್ಲಿ ಪಾಲಕರ ಸಭೆ ಕರೆದು, ವಿಚಾರ ವಿನಿಮಯ ಮಾಡಬೇಕು.

೩) ಪಾಲಕರ ಸಂಘವನ್ನು ಸಂಘಟಿಸಿ, ಅದರ ಮುಖಾಂತರ ಚಟುವಟಿಕೆಗಳನ್ನು ಚುರುಕುಗೊಳಿಸಬೇಕು.

ಇನ್ನು **ಸಾರ್ವಜನಿಕರ ಸಹಕಾರದ ವಿಚಾರ.** ಶಾಲೆಗಳಲ್ಲಿ ಶಿಕ್ಷಕರನ್ನೂ, ಶಿಕ್ಷಕರಿಗೆ ಪಠ್ಯ ಪುಸ್ತಕಗಳನ್ನೂ, ಕೆಲವು ಸಲಕರಣೆಗಳನ್ನೂ ಸರಕಾರ ಒದಗಿಸುತ್ತದೆ. ಆದಾಗ್ಯೂ ಕೆಲವು ಶಾಲೆಗಳಲ್ಲಿ ಎಲ್ಲ ಮಕ್ಕಳಿಗೂ ಕೂಡ್ರುವ ಆಸನಗಳು ಇರಲಿಕ್ಕಿಲ್ಲ. ಸ್ಥಳಾವಕಾಶ ಕಡಿಮೆ ಇರಬಹುದು. ಸೂಕ್ತ ಪಾಠೋಪಕರಣಗಳೂ ಇರಲಿಕ್ಕಿಲ್ಲ. ಇಂಥ ಕೊರತೆಗಳನ್ನು ಪೂರೈಸುವದಕ್ಕೆ ಹಣದ ಕೊರತೆಯಿಂದ ಸರಕಾರಕ್ಕೆ ಸಾಧ್ಯವಾಗಲಿಕ್ಕಿಲ್ಲ ಆದುದರಿಂದ **ಸಾರ್ವಜನಿಕರ ಸಹಕಾರ ಅಗತ್ಯ.** ಆಗಾಗ ಸಭೆ-

ಸಮ್ಮೇಲನಗಳನ್ನು ಏರ್ಪಡಿಸಿ, ಶಾಲೆಗೆ ಅಗತ್ಯವಿದ್ದ ಸಂಗತಿಗಳನ್ನು ಸಾರ್ವಜನಿಕರಿಗೆ ತಿಳಿಸಿ ಹೇಳಿ, ಅವರ ಸಹಕಾರ ಶಿಕ್ಷಕರು ಕೋರಬೇಕು. ಶಾಲೆಗಳಲ್ಲಿ ನಡೆಯುವ ಸಾಂಸ್ಕೃತಿಕ ಚಟುವಟಿಕೆಗಳೂ, ಆಟ-ನೋಟಗಳೂ, ಶಾಲಾ ವಾರ್ಷಿಕೋತ್ಸವವೂ ಸಾರ್ವಜನಿಕರ ಸಹಕಾರಕ್ಕೆ ಸಹಾಯಕವಾಗಿದೆ. ದಕ್ಷ ಶಿಕ್ಷಕರು ಇಂಥಸಂದರ್ಭಗಳನ್ನು ಬಳಸಿ, ಉದಾರಿಗಳಿಂದ ಹೆಚ್ಚಿನ ಕೋಣೆಗಳನ್ನೂ ಪೀಠೋಪಕರಣಗಳನ್ನೂ ಪಾಠೋಪಕರಣಗಳನ್ನೂ ಪಡೆಯಲು ಯತ್ನಿಸಬೇಕು.

೬. ಶಾಲಾ ಕಟ್ಟಡಗಳು :

ಕಡ್ಡಾಯ ಶಿಕ್ಷಣ ಯೋಜನೆಯನ್ವಯ ಪ್ರತಿವರ್ಷ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತಲೇ ಇರುತ್ತದೆ. ಶಾಲಾ ಕಟ್ಟಡಗಳನ್ನು ವರ್ಷೇ ವರ್ಷೇ ನಿರ್ಮಾಣ ಮಾಡಬೇಕಾಗುವದು. ಹೊಸದಾಗಿ ಶಾಲೆಗೆ ಸೇರುವ ಮಕ್ಕಳಿಗೆ ಆವರಣ ಆಕರ್ಷಕ ವಾಗಿರಬೇಕು. ಇದಕ್ಕೆ ಸರಕಾರವು ತಕ್ಕಷ್ಟು ಹಣ ಒದಗಿಸಬೇಕಾಗುವುದು. ಎಷ್ಟೋ ಪ್ರಾಥಮಿಕ ಶಾಲೆಗಳು ಗುಡಿ, ಮಸೀದೆಗಳಲ್ಲಿ ನಡೆಯುತ್ತಿವೆ. ಬಾಡಿಗೆ ಇಮಾರತಿ-ಗಳನ್ನೂ ಉಪಯೋಗಿಸಲಾಗುತ್ತಿದೆ ಸರಕಾರವೇ ಹೊಸ ಶಾಲಾ ಕಟ್ಟಡಗಳನ್ನು ಸಾಕಷ್ಟು ಪ್ರಮಾಣದಲ್ಲಿ ಕಟ್ಟಿಸಲು ಸಾಧ್ಯವಾಗುವದಿಲ್ಲ. ಈ ದಿಶೆಯಲ್ಲಿ ಜನತೆಯ ಸಹಕಾರ ಅಗತ್ಯ. ಈ ಕಾರ್ಯವನ್ನು ತಾಲೂಕಾ ಅಭಿವೃದ್ಧಿ ಮಂಡಲಗಳಿಗೆ ವಹಿಸಿಕೊಡಲಾಗಿದೆ. ಸರಕಾರದ ವಂತಿಗೆ ಹಣ ತಕ್ಕಷ್ಟು ದೊರೆಯುವದಿಲ್ಲ. ಆದ ಕಾರಣ ಉದಾರ ದಾನಿಗಳಿಗೆ ಶಾಲಾ ಕೋಣೆಗಳನ್ನು ಕಟ್ಟಿಸಲಿಕ್ಕೆ ಅವುಗಳಿಗೆ ಅವರ ಹೆಸರು ಇಡಲಿಕ್ಕೆ ಸರಕಾರ ಪ್ರೋತ್ಸಾಹ ನೀಡುತ್ತಲಿದೆ. ಶಾಲಾ ತಪಾಸಣಾಧಿಕಾರಿ ಗಳೂ ಶಿಕ್ಷಕರೂ ಕೆಲವು ಗ್ರಾಮಗಳಲ್ಲಿ ಉತ್ತಮ ಕಾರ್ಯ ಮಾಡಿದ್ದಾರೆ, ಮಾಡುತ್ತ ಲಿದ್ದಾರೆ. ಇದು ಸ್ತುತ್ಯವಾದುದು.

೭) ಶಿಫ್ಟ ಪದ್ಧತಿ :

ಸ್ಥಳಾವಕಾಶದ ಅಭಾವದ ಮೂಲಕ ಕೆಲವು ಶಾಲೆಗಳಲ್ಲಿ ಶಿಫ್ಟ ಪದ್ಧತಿಯನ್ನು ಅನುಸರಿಸಲಾಗುತ್ತಿದೆ. ಶಿಫ್ಟ ಪದ್ಧತಿಯೆಂದರೆ-ಕೆಲವು ತರಗತಿಗಳನ್ನು ಬೆಳಿಗ್ಗೆ ೭ ರಿಂದ ೧೨ ಗಂಟೆಯವರೆಗೆ, ಮತ್ತೆ ಇತರ ತರಗತಿಗಳನ್ನು ಮಧ್ಯಾಹ್ನ ೧೨ ಗಂಟೆಯಿಂದ ಸಾಯಂಕಾಲ ೫ ಗಂಟೆಯವರೆಗೆ ನಡೆಸಿ, ಪಠ್ಯ ಕ್ರಮಗಳನ್ನು ಸಾಗಿಸುವ ಯೋಜನೆ ಕೆಲವು ಉಪಾಧ್ಯಾಯರು ಬೆಳಿಗ್ಗೆ, ಮತ್ತೆ ಕೆಲವರು ಮಧ್ಯಾಹ್ನ ಶಾಲಾವಧಿಗಳಿಗೆ ಬರಬೇಕಾಗುವುದು. ಮುಖ್ಯಾಧ್ಯಾಪಕರು, ಕೆಲವು ಉಪಶಿಕ್ಷಕರು ಎರಡೂ ಸಮಯಗಳಲ್ಲಿ ಬರಬೇಕಾಗುವದು. ಈ ಯೋಜನೆಯಿಂದ ಉಪಾಧ್ಯಾಯರಿಗೆ ಸಾಕಷ್ಟು ತೊಂದರೆಯಾಗುವುದುಂಟು. ವೇಳಾ ಪತ್ರಿಕೆಯನ್ನು ಸಿದ್ಧಗೊಳಿಸು ವಲ್ಲಿಯೂ ತೊಂದರೆಗಳಾಗುವದುಂಟು. 'ಶಿಫ್ಟ' ಪದ್ಧತಿಯು ಒತ್ತಾಯದ ಶಿಕ್ಷಣದ

ಯೋಜನೆಯು ಪ್ರಸಾರ ಕಾರ್ಯದಲ್ಲಿ ಅನಿವಾರ್ಯವಾಗಿ ಪರಿಣಮಿಸಿದೆ. ಒತ್ತಾಯದ ಶಿಕ್ಷಣದ ಪ್ರಥಮ ಹಂತದಲ್ಲಿ ಪರದೇಶಗಳಲ್ಲಿಯೂ ಶಿಫ್ಟ ಪದ್ಧತಿಯನ್ನು ಅನುಸರಿಸ ಲಾಯಿತು. ಈ ಕ್ರಮದಿಂದ ಬೋಧನೆಗೆ ಸಾಕಷ್ಟು ಅವಕಾಶ ದೊರೆಯುವದಿಲ್ಲ. ಅಲ್ಲದೆ, ಕೆಲವು ವಿದ್ಯಾರ್ಥಿಗಳಿಗೆ ಒಂದು ಒಪ್ಪತ್ತು ಸಮಯವನ್ನು ವ್ಯರ್ಥ ಕಳೆಯ ಬೇಕಾಗುವುದು. ಹಲವು ಮಕ್ಕಳು ತಮ್ಮ ಪಾಲಕರಿಗೆ ನೆರವು ನೀಡುವರು. ಈ ಕಾರಣದಿಂದ ಗ್ರಾಮೀಣ ಪ್ರದೇಶಗಳಲ್ಲಿಯ ಪರಿಸ್ಥಿತಿಗೆ ಶಿಫ್ಟ ಪದ್ಧತಿಯು ಅನುಕೂಲ ವೆಂದೇ ಹೇಳಬಹುದು. ನಗರಗಳಲ್ಲಿಯ ಶಾಲೆಗಳಲ್ಲಿ ಸ್ಥಳಾವಕಾಶದ ಅಭಾವ ಬಹಳಷ್ಟು ಉಂಟು. ಈ ಕಾರಣಗಳಿಂದ ಶಿಫ್ಟ ಪದ್ಧತಿಯು ನಗರಗಳಲ್ಲಿಯೂ ಬಳಕೆ ಯಲ್ಲಿದೆ. **ಶಿಫ್ಟ ಪದ್ಧತಿಯು ಒಂದು ಅನಿವಾರ್ಯ ರೂಢಿ.** ಕೆಲವು ಕಾಲ ಇದನ್ನು ಅನುಸರಿಸಬೇಕಾಗುವುದು. ಶಾಲಾ ಕಟ್ಟಡಗಳನ್ನು ಹೆಚ್ಚೆಚ್ಚು ಕಟ್ಟಿಸಿದಂತೆ ಈ ರೂಢಿ ತಪ್ಪಿಸುವುದು ಸೂಕ್ತ; ಏಕೆಂದರೆ ಉತ್ತಮ ಶಿಕ್ಷಣ ಒದಗಿಸುವದಕ್ಕೆ ಇದೊಂದು ಆತಂಕ.

೮) ಉಪಾಧ್ಯಾಯರ ಯೋಗ್ಯತೆ, ದಕ್ಷತೆ :

ಶಾಲಾ ಮಕ್ಕಳು ಹೆಚ್ಚಾದಂತೆ ಉಪಾಧ್ಯಾಯರ ಸಂಖ್ಯೆ ಹೆಚ್ಚಾಗಬೇಕು. ಈ ಯೋಜನೆಯು ಬೆಳೆದಂತೆ ಹೆಚ್ಚೆಚ್ಚು ಶಿಕ್ಷಕರನ್ನೂ ಶಿಕ್ಷಕಿಯರನ್ನೂ ಹೊಸದಾಗಿ ನೇಮಿಸಿಕೊಳ್ಳಲಾಯಿತು. ಕೇವಲ ಹೊಸ ಶಿಕ್ಷಕರನ್ನು ಹೆಚ್ಚಿಸಿದರೆ ತೀರದು. ಇದ್ದ ಶಿಕ್ಷಕರಿಗೆ ತರಬೇತು ಕೊಡುವದಕ್ಕಾಗಿ ಹೆಚ್ಚೆಚ್ಚು ಟ್ರೇನಿಂಗ ಸಂಸ್ಥೆಗಳನ್ನೂ ತೆರೆಯ ಲಾಯಿತು. ಈ ಯೋಜನೆಯು ಫಲಪ್ರದವಾಗುವಲ್ಲಿ ಟ್ರೇಂಡ್ ಶಿಕ್ಷಕರ ಅವಶ್ಯ ಕತೆಯೂ ಉಂಟು. ೩ನೇ ಪಂಚವಾರ್ಷಿಕ ಯೋಜನೆಯ ಅಂತ್ಯದಲ್ಲಿ ಟ್ರೇಂಡ್ ಶಿಕ್ಷಕರ ಸಂಖ್ಯೆಯು ೧೦೦ಕ್ಕೆ ೮೦ರಷ್ಟು ಪ್ರಮಾಣ ಏರಬೇಕೆಂದು ಆಶಿಸಲಾಗಿತ್ತು. ೧೯೬೯-೭೦ರಲ್ಲಿ ಪ್ರತಿಶತ ೬೮ ರಷ್ಟು ಪ್ರಮಾಣದಲ್ಲಿ ಟ್ರೇಂಡ್ ಶಿಕ್ಷಕರಿದ್ದರು. ಆದರೆ ಈಗ ಪ್ರತಿಶತ ೮೯.೭ಕ್ಕೆ ಏರಿದೆ. ಇದು ಸ್ತುತ್ಯ. ಒತ್ತಾಯದ ಶಿಕ್ಷಣದ ಯೋಜನೆ ಯಲ್ಲಿ ಶಿಕ್ಷಕಿಯರ ಕಾರ್ಯವು ಹೆಚ್ಚು ಫಲಪ್ರದವಾಗುವುದೆಂದು ಆಶಿಸಲಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಕೆಲವು ಶಿಕ್ಷಕಿಯರಿಗಾಗಿ ವಸತಿ ಗೃಹಗಳನ್ನು ಕಟ್ಟಿಸಲಾಗು ತ್ತಿದೆ; ಅಂಥಲ್ಲಿ ಉಪಾಧ್ಯಾಯರಿಗೆ ಹೆಚ್ಚೆಚ್ಚು ವಸತಿ ಸೌಕರ್ಯಗಳನ್ನು ಒದಗಿಸಿ ಕೊಡುವುದು ಸೂಕ್ತ. ಶಾಲಾ ಸುಧಾರಣಾ ಸಮಿತಿಗಳೂ ತಾಲೂಕಾ ಅಭಿವೃದ್ಧಿ ಮಂಡಲಗಳೂ ಅಧಿಕ ಆಸ್ಥೆ ವಹಿಸುವುದು ಒಳಿತು ಸರಕಾರ ಹೆಚ್ಚೆಚ್ಚು ಧನ ಸಹಾಯ ನೀಡಬೇಕು.

ಶಿಕ್ಷಣದಲ್ಲಿ ಗುಣ ಮಟ್ಟವನ್ನು ಹೆಚ್ಚಿಸುವದು ಒಂದು ಮಹತ್ಕಾರ್ಯ. ಹೀಗೆ ಮಾಡದಿದ್ದರೆ, ಶಿಕ್ಷಣದ ಬುನಾದಿಯೇ ಅಭದ್ರವಾಗುವದು. ಸರಕಾರವು ಶಿಕ್ಷಕರಿಗೆ

ಯೋಗ್ಯತೆಯನ್ನು ತಂದು ಕೊಡಲು, ಟ್ರೇಂಡ್ ಶಿಕ್ಷಕರ ಪ್ರಮಾಣವನ್ನು ಹೆಚ್ಚಿಸಲಾಗಿದೆ. ಸಾಕಷ್ಟು ಸಾಧನ-ಸಲಕರಣೆಗಳನ್ನೂ ಒದಗಿಸಬಹುದು. ಶಿಕ್ಷಕರಲ್ಲಿ ಕರ್ತವ್ಯ ದಕ್ಷತೆ ಉಂಟಾಗದಿದ್ದರೆ, ಮುಂದೇನು ? ಅವರೇ ಕಾರ್ಯಕರ್ತರು. ಆದಕಾರಣ ಶಿಕ್ಷಕರ ವೇತನ ಶ್ರೇಣಿಗಳನ್ನು ಸರಕಾರವು ಈಗ ಎತ್ತರಿಸಿದೆ : ಪೆನ್‌ಶನ್ ಯೋಜನೆಗಳನ್ನು ಮಾಡಿದೆ. ಇತರ ಸೌಕರ್ಯಗಳನ್ನೂ ನೀಡುತ್ತಿದೆ. ಶಿಕ್ಷಕರು ನೆಮ್ಮದಿಯಿಂದ ಕಾಯಕ ನಿರತರಾಗಬೇಕು. ಮಕ್ಕಳಿಗೆ ಯೋಗ್ಯ ವಿದ್ಯಾಭ್ಯಾಸ ಮಾಡಿಸಬೇಕು. ಅವರಲ್ಲಿ ಸದ್ಗುಣಗಳನ್ನು ನೆಲಸಿ, ಉತ್ತಮ ಸಂಸ್ಕಾರ ಮಾಡಬೇಕು. ಇಂದಿನ ಮಕ್ಕಳನ್ನು ನಾಳಿನ ಉತ್ತಮ ನಾಗರಿಕರನ್ನಾಗಿ ಸಿದ್ಧಗೊಳಿಸುವ ಕಾರ್ಯವೇ ಅವರ ನಿಜವಾದ ನಾಡ ಸೇವೆ ! ಶಿಕ್ಷಕರಲ್ಲಿ ಈ ಬಗೆಯ **ರಾಷ್ಟ್ರೀಯ ಅರಿವು,** (National consciousness) ಉಂಟಾಗುವದು ತೀರ ಅಗತ್ಯ. ನಮ್ಮ ದೇಶದ ಭವಿಷ್ಯವನ್ನು ರೂಪಿಸುವ ಈ ಸಂಧಿ ಕಾಲದಲ್ಲಿ ಶಿಕ್ಷಕರು ತಮ್ಮ ಕರ್ತವ್ಯದಲ್ಲಿ ಹಿಂದುಳಿಯಬಾರದು. ಕರ್ತವ್ಯದ ದಕ್ಷತೆಯ ಪಾಪಕ್ಕೆ ಅವರು ಗುರಿಯಾಗಿ, ಮಕ್ಕಳನ್ನೂ ದೇಶವನ್ನೂ ಹಾಳುಮಾಡುವ ಕೀಳು ಮಟ್ಟಕ್ಕೆ ಅವರು ಇಳಿಯದಂತೆ, ಪರಮಾತ್ಮನು ಸತ್‌ಪ್ರೇರಣೆಯನ್ನೀಯಲಿ !

೯) ಸಾಧನ ಸಲಕರಣೆಗಳು :

ಶಿಕ್ಷಣದ ಕಾರ್ಯವು ಉತ್ತಮವಾಗಿ ಸಾಗಬೇಕಾದರೆ, ತಕ್ಕ ಉಪಕರಣಗಳು ಬೇಕು. ಸರಕಾರದವರು ಕೆಲಮಟ್ಟಿಗೆ ಹೊಸ ಸಾಧನ-ಸಲಕರಣೆಗಳನ್ನು ಕೊಡುವರು. ಆದರೆ ಇದೆಲ್ಲವು ತಕ್ಕಷ್ಟು ಪ್ರಮಾಣದಲ್ಲಿ ದೊರೆಯಲಿಕ್ಕಿಲ್ಲ. ಹಾಗಾದರೆ, ಒಳ್ಳೆಯ ಶಿಕ್ಷಣ ನಮ್ಮ ಮಕ್ಕಳಿಗೆ ಆನಂದದಾಯಕ ಅನುಭವವನ್ನು ಒದಗಿಸಲು ಹೇಗೆ ಸಾಧ್ಯ ? ಶಾಲೆಗೆ ಸೇರಿದ ಮಕ್ಕಳು ಮರಳಿ ಮನೆಗೆ ತೆರಳುವರೆ ? ಹಾಗೆ ಮಾಡಲು ಅನುವು ಕೊಡುವುದು ಸೂಕ್ತವಲ್ಲ. ಅದಕ್ಕಾಗಿಯೇ ಶಾಲಾ ಸಮಿತಿಗಳು ಹೊಸ ತತ್ವ ಪ್ರಣಾಲಿಯ ಮೇಲೆ ರಚಿತವಾಗಿವೆ ಶಾಲೆಗಳಲ್ಲಿ ಅಗತ್ಯವಿದ್ದ ಎಷ್ಟೋ ಸಾಧನ-ಸಲಕರಣೆಗಳು ಇರಲಿಕ್ಕಿಲ್ಲ. ಶಾಲೆಗೆ ಒಂದು ಘಂಟೆ, ಗಡಿಯಾರ, ಕುಡಿಯುವ ನೀರಿನ ಪಾತ್ರೆ, ನಕ್ಷೆ, ನಕಾಶ, ಚಿತ್ರಗಳು, ಮಾಡೆಲ್‌ಗಳು, ಕುಳಿತುಕೊಳ್ಳಲು ಆಸನಗಳು, ಬ್ಯಾಂಡಸೆಟ್ ಮುಂತಾದವುಗಳು ಇರಬೇಕಲ್ಲವೇ ? ಕೊರತೆಯಿದ್ದ ಸಲಕರಣೆಗಳನ್ನು ಶಾಲಾ ಅಭಿವೃದ್ಧಿ ಸಮಿತಿಯವರು ಜನರ ಸಹಾಯದಿಂದ ಒದಗಿಸಲು ಯತ್ನಿಸಬೇಕು. ಕಾಣಿಕೆಗಳನ್ನು (Gifts) ಸಂಗ್ರಹಿಸಿ, ಅವುಗಳ ಮೇಲೆ ದಾನಿಗಳ ಹೆಸರು ಹಾಕಿಸಬೇಕು. ಈ ರೀತಿಯ ಉತ್ಸಾಹಪೂರಿತ ಕಾರ್ಯಗಳು ಹಳ್ಳಿ ಹಳ್ಳಿಗಳಲ್ಲಿ ಬೆಳೆದಂತೆ ತಾಲೂಕಾ ಮಟ್ಟದಲ್ಲಿ ಶಾಲಾ ಸುಧಾರಣಾ ಸಮಿತಿಗಳ ಸದಸ್ಯರ ಸ್ನೇಹ-ಸಮ್ಮೇಲನಗಳನ್ನು ಏರ್ಪಡಿಸಬೇಕು. ಇಂಥ ಪ್ರದರ್ಶನಗಳು ಜನತೆಯಲ್ಲಿ ಉದಾರ ಭಾವನೆಗಳನ್ನು ಹೆಚ್ಚಿಸಲು ಸ್ಫೂರ್ತಿಯ ಸೆಲೆಗಳಾಗಿ

ಪರಿಣಮಿಸುವವು. ಶಾಲಾ ತಪಾಸಣಾಧಿಕಾರಿಗಳೂ ಉತ್ಸಾಹದಿಂದ ಈ ದಿಶೆಯಲ್ಲಿ ಕಾರ್ಯ ನಿರ್ವಹಿಸಬೇಕು.

ಯೋಜನೆಯ ಯಶಸ್ಸು :

ಒತ್ತಾಯದ ಶಿಕ್ಷಣದ ಕಕ್ಷೆಯಲ್ಲಿ ಸೇರುವ ಮಕ್ಕಳಲ್ಲಿ ಪ್ರತಿಶತ ೮೦–೯೦ ರಷ್ಟು ಮಕ್ಕಳನ್ನು ಶಾಲೆಗಳಲ್ಲಿ ದಾಖಲು ಮಾಡಲಾಗಿದೆ. ಆದರೆ ಹಳ್ಳಿಗಳಲ್ಲಿ ಇಂಥ ಮಕ್ಕಳ ದಿನದ ಹಾಜರಿ ಸರಾಸರಿ ಪ್ರತಿಶತ ೬೦–೭೦ ರಷ್ಟು ಮಾತ್ರ ಉಂಟು. ಇದನ್ನು ಸುಧಾರಿಸುವುದು ಅಗತ್ಯ. ಎರಡನೆಯದಾಗಿ ೧ ನೇ ತರಗತಿಯಲ್ಲಿ ದಾಖಲಾದ ಮಕ್ಕಳು ಪ್ರತಿವರ್ಷ ಒಂದೊಂದು ತರಗತಿಯಲ್ಲಿ ತೇರ್ಗಡೆ ಹೊಂದುತ್ತ ವಿದ್ಯಾಭ್ಯಾಸ ಮಾಡುತ್ತಿಲ್ಲ. ಅದೇ ತರಗತಿಯಲ್ಲಿ ೨ ವರುಷ ಹಾಗು ಇನ್ನೂ ಹೆಚ್ಚು ಕಾಲ ಕಳೆಯುತ್ತಿರುವರು. ಇದನ್ನು **ಕೊಳೆ** (Stagnation) ಎಂದು ಕರೆಯುವರು. ಅಲ್ಲದೆ, ೧ ನೇ ತರಗತಿಯಲ್ಲಿ ದಾಖಲಾದ ಎಲ್ಲ ಮಕ್ಕಳೂ ೪ ನೇ ತರಗತಿಯನ್ನು ತಲುಪುವದಿಲ್ಲ; ಮಧ್ಯದಲ್ಲಿಯೇ ಕೆಲವರು ಶಾಲೆ ಬಿಟ್ಟು ಹೋಗುವರು, ಅಂಥವರು ಸಾಕ್ಷರರೆಂದು ಹೇಳುವುದು ಕಷ್ಟದ್ದು; ಆದಕಾರಣ ಇದನ್ನು ಶಿಕ್ಷಣದಲ್ಲಿಯ **ಅಪವ್ಯಯ** (Wastage) ಎಂದು ಹೇಳಲಾಗುತ್ತದೆ. ಪ್ರಾಥಮಿಕ ಶಿಕ್ಷಣದಲ್ಲಿಯ ಕೊಳೆ ಮತ್ತು ಅಪವ್ಯಯ ಎಂಬ ಅವಳಿ–ಜವಳಿ ರೋಗಗಳನ್ನು ನಿವಾರಿಸಿದರೆ ಮಾತ್ರ ಕಡ್ಡಾಯದ ಶಿಕ್ಷಣವು ಯಶಸ್ವಿಯಾದಂತೆ ! ಮಕ್ಕಳ ದಿನದ ಹಾಜರಿ ಸುಧಾರಿಸುವದೂ ಅಗತ್ಯ. ಗ್ರಾಮೀಣ ಶಾಲೆಗಳಲ್ಲಿ ಈ ಸಮಸ್ಯೆಗೆ ವಿಶೇಷ ಗಮನ ಕೊಡಬೇಕು. ಬೋಧನಾ ಕ್ರಮಗಳಲ್ಲಿ ಸುಧಾರಣೆ ಅವಶ್ಯಕ. ಶಿಕ್ಷಕರಲ್ಲಿ ಕರ್ತವ್ಯ ಪ್ರಜ್ಞೆ ಮೂಡಿ ಬರಬೇಕು. ಇದುವೇ ಮೂಲ ಶಕ್ತಿ.

◎◎◎

'Mr. Channabasappa in whom this department has lost much more than an honest, experienced able and zealous inspector died on 4th January 1881.'

Report of Dept. of Public Instruction

ಭಾಗ ೪

(i) ಮುಂಬೈ ಕರ್ನಾಟಕದ ಮೂಲ ಶಿಕ್ಷಣ ಶಿಕ್ಷಕ ತರಬೇತಿ ಸಂಸ್ಥೆಗಳು (೩)

(ii) ಧಾರವಾಡ ಜಿಲ್ಲಾ ಶಾಲಾ ಶಿಕ್ಷಣ ೧೮೮೦–೧೯೮೧

ಅನುಬಂಧ

ಚನ್ನಬಸಪ್ಪನವರ ಶತಮಾನೋತ್ಸವ ಸಮಿತಿಯ ಸದಸ್ಯರು

ಮುಂಬೈ ಕರ್ನಾಟಕದಲ್ಲಿ ಜೀವನ ಶಿಕ್ಷಣ ತರಬೇತಿ

—ಶ್ರೀ ಎಸ್. ಬಿ. ಹಳಕಟ್ಟಿ

ಶಿಕ್ಷಣ ಕ್ಷೇತ್ರದಲ್ಲಿ ತನ್ನ ಹೆಸರನ್ನು ಚಿರಸ್ಥಾಯಿಗೊಳಿಸಿದ ರಾಷ್ಟ್ರ ಮಟ್ಟದ ಒಂದು ಸಂಸ್ಥೆಯ ಇತಿಹಾಸವನ್ನು ಪ್ರಸ್ತುತ ಲೇಖನದ ಮೂಲಕ ನಿರೂಪಿಸುವದು ನಿಜಕ್ಕೂ ಒಂದು ಸಾಹಸದ ಕಾರ್ಯವೇ ಸರಿ. ಒಂದು ಸಂಸ್ಥೆಯು ಅಸ್ಥಿತ್ವಕ್ಕೆ ಬರುವ ಪೂರ್ವದಲ್ಲಿ ನಡೆದ ವಿಚಾರಗಳು ಅದರ ಹುಟ್ಟಿಗೆ ಬಹುಮಟ್ಟಿಗೆ ಕಾರಣಗಳನ್ನು ಒದಗಿಸುತ್ತವೆ. ಈ ಸಂಸ್ಥೆ ೧೯೪೭ ರಲ್ಲಿ ಸ್ಥಾಪಿಸಲ್ಪಟ್ಟಿದ್ದರೂ ಅದರ ಹಿನ್ನೆಲೆಯಲ್ಲಿ ಹತ್ತು ವರುಷಗಳಿಂದ ನಡೆದ ಪರಿಶ್ರಮದ ಫಲ ಈ ಸಂಸ್ಥೆ ಮೂಡಿ ಬರುವದಕ್ಕೆ ಕಾರಣವಾದುದರಿಂದ ಆ ಕೆಲವು ವಿಚಾರಗಳನ್ನು ಪ್ರಸ್ತುತ ಲೇಖನದಲ್ಲಿ ಅಳವಡಿಸ-ಬೇಕಾಗಿ ಬಂದುದು ಅನಿವಾರ್ಯ. ಅದಕ್ಕೆಂದೇ ಜೀವನ ಶಿಕ್ಷಣದ ಪ್ರಾರಂಭದ ಕೆಲವು ಸಂಗತಿಗಳನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ.

ಶಿಕ್ಷಣವು ಎಂದಿನಿಂದಲೂ ನಡೆದು ಬಂದ ಕ್ರಮವಾಗಿದೆ. ಜೀವಿಯು ಮೂರ್ತ ಸ್ವರೂಪಕ್ಕೆ ಬಂದಂದಿನಿಂದ ಪ್ರಾರಂಭವಾಗಿ ಅವನ ಕೊನೆಯ ಉಸಿರಿನವರೆಗೂ ಒಂದಿಲ್ಲ ಒಂದು ರೀತಿಯಿಂದ ಅದು ಸಾಗಿಯೇ ಇರುತ್ತದೆ. ಶಿಕ್ಷಣ ಕ್ರಮವು ಕಾಲಮಾನ ಪರಿಸ್ಥಿತಿಗೆ ಅನುಗುಣವಾಗಿ ಬದಲಾಗುತ್ತ ಹೋದುದನ್ನು ನಾವು ಕಾಣುತ್ತೇವೆ. ಮೊದ ಮೊದಲು ಅದು ಜೀವಿಯ ಜೀವನ ಕ್ರಮವನ್ನು ರೂಪಿಸುವಲ್ಲಿ ನೆರವಾಗುವುದ-ರಿಂದ ಪ್ರಾರಂಭವಾಗಿ ಕುಟುಂಬಕ್ಕೆ ಸೀಮಿತವಾಗಿದ್ದು ತಂದೆ ತಾಯಿಗಳಿಂದ ನಡೆ-ಯಿಸಲ್ಪಡುತ್ತಿದ್ದರೆ ನಂತರ ಅದರ ವ್ಯಾಪ್ತಿ ವಿಸ್ತಾರವಾಗಿ, ಶಿಕ್ಷಣದ ಹೊಣೆಗಾರಿಕೆಯು ಒಂದು ಸಂಸ್ಥೆಗೆ ವಹಿಸಿಕೊಟ್ಟುದುದನ್ನು ನಾವು ಕಾಣುತ್ತೇವೆ. ಶಿಕ್ಷಣದ ಉಗಮ ಕುಟುಂಬದಲ್ಲಿ ಆರಂಭವಾಗಿ ಅದರ ಹೊಣೆಗಾರಿಕೆಯು ಒಂದು ಸಂಸ್ಥೆಗೆ ವರ್ಗಾಯಿ-ಸಲ್ಪಟ್ಟಿದ್ದರೂ ಕುಟುಂಬ, ಸಮಾಜ, ನಿಸರ್ಗ, ಐತಿಹಾಸಿಕ ಧಾರ್ಮಿಕ ಸಾಮಾಜಿಕ ಆದರ್ಶ ವ್ಯಕ್ತಿಗಳ ಜೀವನ ಹಾಗೂ ಇತರ ಸಂಘ ಸಂಸ್ಥೆಗಳು ಮಾನವನ ಜೀವನ ವನ್ನು ರೂಪಿಸುವಲ್ಲಿ, ಅವನಿಗೆ ಶಿಕ್ಷಣವನ್ನು ಒದಗಿಸುವಲ್ಲಿ ಮಹತ್ವದ ಪಾತ್ರಗಳನ್ನು ವಹಿಸಬಲ್ಲವೆಂಬುದನ್ನು ಎಲ್ಲರೂ ಬಲ್ಲರು. ಇದು ಒಂದು ರೀತಿಯಿಂದ ಶಿಕ್ಷಣದ ವ್ಯಾಪ್ತಿಯನ್ನು ವಿವರಿಸುತ್ತಿದ್ದರೆ ಅದನ್ನು ಕೊಡುವ ಕ್ರಮದಲ್ಲಿಯೂ ನಾವು ಅನೇಕ

ಶ್ರೀ ಎಸ್. ಬಿ. ಹಳಕಟ್ಟಿಯವರು ಶಾಲಾ ತನಿಖಾಧಿಕಾರಿಯಾಗಿ, ಪ್ರಶಿಕ್ಷಕರಾಗಿ ತಮ್ಮ ಪ್ರಯೋಗ ಜನ್ಯ ಚಿಂತನಶೀಲ ಬರಹ ಮತ್ತು ವಿಶ್ಲೇಷಣೆಗಳಿಂದ ಶಿಕ್ಷಕ ವರ್ಗಕ್ಕೆ ಪರಿಚಿತ-ರಾಗಿದ್ದಾರೆ. ದಕ್ಷ ಸಹಾಯಕ ವಿದ್ಯಾಧಿಕಾರಿಯೆಂದು ನಿವೃತ್ತಿ ಹೊಂದಿದ ಇವರು ಧಾರವಾಡ ದಲ್ಲಿ ಶುಕ್ರವಾರ ಪೇಟೆಯಲ್ಲಿ ವಾಸಿಸುತ್ತಿದ್ದಾರೆ.

ಬದಲಾವಣೆಗಳನ್ನು ಕಾಲ ಕಾಲಕ್ಕೆ ಕಾಣುತ್ತೇವೆ. ಮೊದಲು ಶಿಕ್ಷಣವು ಓದು, ಬರೆಹ, ಲೆಕ್ಕಾಚಾರಕ್ಕೆ ಸೀಮಿತವಾಗಿದ್ದು ಅದನ್ನು ಒದಗಿಸುವಲ್ಲಿ ಬಾಲಕನನ್ನು ಬರಿದಾದ ಕೊಡವೆಂದು ಭಾವಿಸಿ ಹೊರಗಿನಿಂದ ಈ ಜ್ಞಾನವನ್ನು ತುಂಬುವದು ಶಿಕ್ಷಕನ ಕರ್ತವ್ಯ ವೆಂದು ತಿಳಿಯಲಾಗಿತ್ತು. ಹೀಗೆಂದಾಗ "ಶಿಕ್ಷೆ"ಯು ಶಿಕ್ಷಣದ ಅವಿಭಾಜ್ಯ ಅಂಗ ವಾಗಿತ್ತು. ಮಾನವನ ಮನಸ್ಸಿನ ವರ್ತನೆಯ ಅಭ್ಯಾಸಕ್ಕೆ ತೊಡಗಿ ಅದೊಂದು ಶಾಸ್ತ್ರ ವಾಗಿ ಮೂಡಿ ಬಂದಾಗ ಶಿಕ್ಷಣಕ್ಕೊಂದು ಹೊಸ ತಿರುವು ಬಂದುದನ್ನು ನಾವು ಕಾಣ-ಬಹುದಾಗಿದೆ. ಶಿಕ್ಷಣಕ್ರಮದಲ್ಲಿ ಮಗುವಿನ ಸ್ವಚ್ಛಂದ ಚಟುವಟಿಕೆಗೆ ಪ್ರಾಧಾನ್ಯತೆ ಬಂದು ಶಿಕ್ಷಣದ ಆಕರ್ಷಣೆಯ ಕೇಂದ್ರ ಬಿಂದುವು, ವಿಷಯ ಪ್ರಾಧಾನ್ಯತೆಯಿಂದ "ಮಗು" ಪ್ರಾಧಾನ್ಯತೆಯ ಕಡೆಗೆ ಒಲಿದುದನ್ನು ನಾವು ನೋಡುತ್ತೇವೆ. ಈ ಎಲ್ಲ ಕ್ರಮಗಳಿಗೆ ಮಾನಸ ಶಾಸ್ತ್ರದ ಕೊಡುಗೆ ಅಮೌಲ್ಯವಾದುದು. ಶಿಕ್ಷಣದ ಇತಿಹಾಸ ವನ್ನು ಅವಲೋಕಿಸಿದರೆ ಅದು ವೇದ ಕಾಲದಿಂದ ಪ್ರಾರಂಭವಾಗಿ, ನಾಲಂದಾ ತಕ್ಷ ಶಿಲೆಯವರೆಗಿನ ಪ್ರಾಚೀನ ವಿಶ್ವವಿದ್ಯಾಲಯಗಳಿಗೆ ಬಂದಾಗ ಅದು ಜಗತ್ತಿನ ಪ್ರಾಜ್ಞರ ಗಮನವನ್ನು ತನ್ನತ್ತ ಆಕರ್ಷಿಸಿದ ಕಾಲವೊಂದಿದ್ದಿತೆಂಬುದನ್ನು ಯಾರೂ ಮರೆಯು-ವಂತಿಲ್ಲ. ಅದಾದ ನಂತರ ಶಿಕ್ಷಣದ ಪ್ರಗತಿಯ ಇತಿಹಾಸದ ಪುಟಗಳಲ್ಲಿ ನಾವು ಪಾಶ್ಚಿಮಾತ್ಯ ಶಿಕ್ಷಣದತ್ತ ನೋಡಬೇಕಾಗಿ ಬಂದುದನ್ನು ನಾವು ಕಾಣುತ್ತೇವೆ.

ಹಳೆಯ ಜ್ಞಾನವನ್ನು ಹೊಸದರೊಡನೆ ಹೊಂದಿಸುವ ವಿಚಾರವನ್ನು ಹರ್ಬಾರ್ಟನು ಮೊದಲಬಾರಿಗೆ ಶಿಕ್ಷಣದಲ್ಲಿ ತಂದನು. ತದನಂತರ ಝೀಲರ, ಡಿಗ್ಯಾಮೋ, ಕರ್ನಲ್ ಪಾರ್ಕರ ಎಂಬವರು ವಿಷಯ ಕೇಂದ್ರೀಕರಣ ಪದ್ಧತಿಯನ್ನು (Theory of Concentration of Studies) ಬಳಕೆಯಲ್ಲಿ ತಂದರು. ನಂತರ ಫ್ರೊಬೆಲ್‌ನ ಕಾಲಕ್ಕೆ ಇದೇ ವಿಚಾರವು ಮಾನಸಿಕ ಮಟ್ಟವನ್ನು ಬಿಟ್ಟು ಆಟದ ರೂಪವನ್ನು ತಾಳಿತು. ಮುಂದೆ ಮಾಕ್‌ಡ್ಯುಗಲ್ಲನ ಮನಃಶಾಸ್ತ್ರದ ಕೊಡುಗೆ (Purpossive School of Psychology) ಹಾಗೂ ಜೊನ್ ಡ್ಯೂಯಿಯ ವ್ಯವಹಾರಿಕ ತತ್ವಜ್ಞಾನ (Pragmatic Philosophy) ಉದ್ದೇಶ ಪೂರಿತ ಚಟುವಟಿಕೆಯನ್ನು ಕೇಂದ್ರವನ್ನಾಗಿ ಮಾಡಿ ಅದರ ಸುತ್ತಲೂ ವಿಷಯಗಳನ್ನು ಜೋಡಿಸಲು ನೆರವಾಯಿತು. ಇದುವೇ ಮುಂದುವರಿದು ಯೋಜನಾ ಪದ್ಧತಿಯಾಗಿ ರೂಪುಗೊಂಡಿತು. ಇದರಿಂದಾಗಿ ಶಿಕ್ಷಣ ಕ್ರಮದಲ್ಲಿ ಕ್ರಿಯಾತ್ಮಕ ಚಟುವಟಿಕೆ ಕಾಲಿಟ್ಟಿತು. ಈ ವಿಚಾರಗಳನ್ನು ಪಾಶ್ಚಿಮಾತ್ಯ ದೇಶಗಳಲ್ಲಿ ನಾವು ಕಾಣಬಹುದಾಗಿದ್ದಿತು.

ಇತ್ತ ಭಾರತದಲ್ಲಿ ಸ್ವಾತಂತ್ರ್ಯ ಸೂರ್ಯನ ಹೊಂಬೆಳಕನ್ನು ಕಾಣುತ್ತಲಿದ್ದ ನೇತಾರರು ಭಾರತ ಸ್ವಾತಂತ್ರ್ಯವನ್ನು ಪಡೆಯಲು ಅದಕ್ಕೆ ಬೇಕಾಗುವ ತ್ಯಾಗಮಯ ಜೀವನ, ದೇಶಾಭಿಮಾನ, ಸ್ವತಂತ್ರ ವಿಚಾರ ದೃಷ್ಟಿ, ಸೋದರ ಭಾವ, ಶೋಷಣೆ ರಹಿತ ಸಮಾಜ ರಚನೆ, ಮುಂತಾದ ವಿಚಾರಗಳನ್ನು ಮಕ್ಕಳ ಮನದಲ್ಲಿ ಮೂಡಿಸಿ ನವ

ಸಮಾಜವನ್ನು ರೂಪಿಸುವಲ್ಲಿ ಶಿಕ್ಷಣವು ಪ್ರಾಮುಖ್ಯ ಪಾತ್ರವನ್ನು ವಹಿಸಬಲ್ಲದೆಂಬು-ದನ್ನು ತಿಳಿದು ಸ್ವಾಭಿಮಾನಿ ಪೀಳಿಗೆಯನ್ನು ರೂಪಿಸಲೋಸುಗ ರಾಷ್ಟ್ರೀಯ ಶಾಲೆಗಳನ್ನು ತೆರೆಯುವಲ್ಲಿ ಮುಂದಾದರು. ಅದುವೇ ಈ ದೇಶಕ್ಕೆ ಬೇಕಾದ ಸ್ವತಂತ್ರ ಶಿಕ್ಷಣ ಕ್ರಮವನ್ನು ರೂಪಿಸಬಲ್ಲ "ಕೇಂದ್ರ" (Nuclius) ಬಿಂದುವಾಗಿ ಪರಿಣಮಿಸಿತು. ಸ್ವಾತಂತ್ರ್ಯ ಆಂದೋಲನದ ಮುಂದಾಳತ್ವವನ್ನು ವಹಿಸಿದ ಅನೇಕ ಹಿರಿಯರಲ್ಲಿ ಗಾಂಧೀಜಿಯವರು ಒಬ್ಬರಾದರೂ ಅವರ ಕೊಡುಗೆ ಅಪಾರ ಹಾಗೂ ಅಮೌಲ್ಯವಾದುದು. ಅವರೊಬ್ಬರು ಪ್ರಯೋಗಶೀಲ ಪ್ರವಾದಿಯಾಗಿದ್ದರು. ದೇಶದ ಸ್ವಾತಂತ್ರ್ಯಕ್ಕೆ ಹಾಗೂ ನವಸಮಾಜ ರಚನೆಗೆ ಶಿಕ್ಷಣವು ಭದ್ರಬುನಾದಿಯಾಗಬಲ್ಲದೆಂಬುದನ್ನು ಅರಿತ ಮಹಾತ್ಮಾ ಗಾಂಧೀಜಿಯವರು ಶಿಕ್ಷಣದ ರೂಪ ರೇಷೆಯ ಬಗ್ಗೆ ಸದಾ ಚಿಂತಿಸುತ್ತಿದ್ದರು. ಅವರು ತಮ್ಮ ಅನೇಕ ಪ್ರಗತಿಪರ ವಿಚಾರಗಳನ್ನು ತಮ್ಮ ಮುಖ ಪತ್ರಿಕೆಯಾದ "ಹರಿಜನ" ಪತ್ರಿಕೆಯ ಮೂಲಕ ಪ್ರಕಟಿಸುತ್ತಿದ್ದರು. ಭಾರತದ ಶಿಕ್ಷಣ ಕ್ರಮವನ್ನು ಕುರಿತಾದ ವಿಚಾರಗಳು ೧೯೩೭ ನೆಯ ಜುಲೈ ತಿಂಗಳಲ್ಲಿ "ಹರಿಜನ" ಪತ್ರಿಕೆಯಲ್ಲಿ ಪ್ರಕಟವಾದವು. ಅಂದಿನಿಂದ ಶಿಕ್ಷಣ ತಜ್ಞರಲ್ಲಿ ಆ ವಿಚಾರಗಳನ್ನು ಕುರಿತು ಚಿಂತನೆ, ಮಂಥನ ಪ್ರಾರಂಭವಾಯಿತು. ಈ ಎಲ್ಲ ವಿಚಾರ, ಚಿಂತನೆಯ ಫಲವಾಗಿ ಮೂಡಿ ಬಂದುದು ಗಾಂಧೀಜಿಯವರ ಅಧ್ಯಕ್ಷತೆಯ ಕೆಳಗೆ ವರ್ಧಾದಲ್ಲಿ ದಿನಾಂಕ ೨೨, ೨೩ ಅಕ್ಟೋಬರ ೧೯೩೭ ರಂದು ಸಮಾವೇಶಗೊಂಡ ಪ್ರಥಮ ಶಿಕ್ಷಣ ಸಮ್ಮೇಲನ. ಆ ಸಮ್ಮೇಳನದಲ್ಲಿ ನಾಲ್ಕು ಗೊತ್ತುವಳಿಗಳು ಅಂಗೀಕರಿಸಲ್ಪಟ್ಟವಲ್ಲದೆ ಅವುಗಳನ್ನು ಕುರಿತು ಚರ್ಚಿಸಿ ಅಭ್ಯಾಸಕ್ರಮವನ್ನು ರೂಪಿಸುವದಕ್ಕಾಗಿ ಡಾ. ಝುಕೀರಹುಸೇನ ಅವರ ಅಧ್ಯಕ್ಷತೆಯ ಕೆಳಗೆ ಒಂದು ಸಮಿತಿಯು ರಚಿಸಲ್ಪಟ್ಟಿತು. ಆ ಸಮಿತಿಯು ೧೯೩೭ ನೆಯ ಡಿಸೆಂಬರ ತಿಂಗಳಲ್ಲಿ ತನ್ನ ಅಭ್ಯಾಸಕ್ರಮವನ್ನು ರೂಪಿಸಿತು. ಅದರಲ್ಲಿ ಮುಖ್ಯವಾಗಿ ಹತ್ತು ಸೂತ್ರಗಳನ್ನು ಅಂಗೀಕರಿಸಿ ಅವುಗಳನ್ನು ಅನುಷ್ಠಾನಕ್ಕೆ ತರುವ-ದಕ್ಕಾಗಿ ವಿವರವಾದ ಅಭ್ಯಾಸ ಕ್ರಮವನ್ನು ರಚಿಸಿತು.

ಯಾವುದೇ ಒಂದು ಶಿಕ್ಷಣ ಕ್ರಮವನ್ನು ಪ್ರಾರಂಭಿಸಲು ಅದಕ್ಕೆ ಬೇಕಾಗುವ ಶಿಕ್ಷಕರನ್ನು ಮೊದಲು ತಯಾರು ಮಾಡಬೇಕಾಗುತ್ತದೆ. ಈ "ನಯೀ ತಾಲೀಮಿನ" ಪುರಸ್ಕರ್ತರು ಮಹಾತ್ಮಾ ಗಾಂಧೀಜಿಯವರಾದ್ದರಿಂದ ಅವರು ವಾಸಿಸುತ್ತಿದ್ದ ವರ್ಧಾಆಶ್ರಮವೇ ಈ ಶಿಕ್ಷಣದ ತರಬೇತಿಯ ಕೇಂದ್ರವಾಗಿ ಪರಿಣಮಿಸಿತು. ಈ ಹೊಸ ಶಿಕ್ಷಣದ ವಿಚಾರವನ್ನು ತಮ್ಮಲ್ಲಿ ಬಳಕೆಯಲ್ಲಿ ತರಲು ಮುಂದೆ ಬಂದ ರಾಜ್ಯಗಳೆಂದರೆ ಮುಂಬೈ, ಬಿಹಾರ, ಮಧ್ಯಪ್ರಾಂತ ಮುಂತಾದವುಗಳಾಗಿದ್ದವು. ಈ ರಾಜ್ಯಗಳಿಂದ ಶಿಕ್ಷಣದ ಹೊಸ ವಿಚಾರಗಳನ್ನು ತಿಳಿಯಲು ಶಿಕ್ಷಣಾರ್ಥಿಗಳು ವರ್ಧಾ ಆಶ್ರಮಕ್ಕೆ ಹೋಗಲು ಪ್ರಾರಂಭಿಸಿದರು. ೧೯೩೮ ರಲ್ಲಿ ಆಗಿನ ಮುಂಬೈ ಪ್ರಾಂತದಲ್ಲಿ ಈ ಹೊಸ ಶಿಕ್ಷಣವನ್ನು ಪ್ರಾರಂಭಿಸಲು ನಿರ್ಣಯಿಸಿದ್ದರಿಂದ ಕರ್ನಾಟಕ, ಮಹಾರಾಷ್ಟ್ರ ಹಾಗೂ

ಗುಜರಾಥ ಭಾಗಗಳಿಂದ ವರ್ಧಾಕ್ಕೆ ಮಾಧ್ಯಮಿಕ ಶಿಕ್ಷಕರನ್ನು ಕಳಿಸಲಾಯಿತು. ಹೀಗೆ ನಮ್ಮಲ್ಲಿಂದ ವರ್ಧಾಕ್ಕೆ ಮೂರು ವಾರಗಳ ತರಬೇತಿಗೆ ಹೋದವರೆಂದರೆ ಸರ್ವಶ್ರೀ ಎಸ್. ಆರ್. ತಟ್ಟಿ, ಆರ್. ವ್ಹಿ. ದೇಸಾಯಿ, ಬಿ. ಎಮ್. ಶಿಂತ್ರಿ, ಕಿಣಿ ಹಾಗೂ ಶ್ರೀಮತಿ ನಂದಾವರ ಎಂಬವರಾಗಿದ್ದರು. ಅವರು ಅಲ್ಲಿ ಮೂರು ವಾರಗಳ ತರಬೇತಿಯನ್ನು ಪಡೆದು ಬಂದ ನಂತರ ಮೊದಲ ಹಂತವಾಗಿ ಆಯ್ಕೆ ಮಾಡಿದ ಅನುಭವಿಕ ಶಿಕ್ಷಕರಿಗೆ ಮೂಲೋದ್ಯೋಗದ ಅಲ್ಪಾವಧಿ ತರಬೇತಿಯನ್ನು ಧಾರವಾಡದಲ್ಲಿ ಕೊಡ-ಲಾಯಿತು. ಏಕೆಂದರೆ "ಆರಿಸಿಕೊಂಡ ಕೈಗಾರಿಕೆಯನ್ನು ಕ್ರಮಬದ್ಧವಾಗಿ, ಶಾಸ್ತ್ರಾನು-ಸಾರವಾಗಿ ಫಲಕಾರಿಯಾಗುವಂತೆ, ನಿಪುಣತೆ ಲಭಿಸುವಂತೆ ಕಲಿಯಬೇಕು ಬೌದ್ಧಿಕ ಕಾರ್ಯಕ್ಕಾಗಲೀ ಆರ್ಥಿಕ ಸ್ವಾವಲಂಬನಕ್ಕಾಗಲೀ ಒಂದು ಮಾರ್ಗ ಎಂದು ಕರೆಯಲಾಗದು. ಅದು ಸಾಧನ ಸಾಧ್ಯ ಎರಡೂ ಆಗಬೇಕು" ಎಂಬ ನಿರ್ಣಯದ ಮೂಲಕ ಈ ಗ್ರಾಮ ಕೈಗಾರಿಕೆಗಳು "ನಯೀ ತಾಲೀಮು"ದಲ್ಲಿ ಒಂದು ಮುಖ್ಯ ಸ್ಥಾನವನ್ನು ಪಡೆದಿದ್ದವು. ಈ ಒಲವನ್ನುಂಟು ಮಾಡಲು ಮೊದಲು ಶಾಲೆಗಳಲ್ಲಿ ಮೂಲೋದ್ಯೋಗವನ್ನು ಪ್ರಾರಂಭಿಸಿದರು. ಸರಕಾರವು ಈ ಶಿಕ್ಷಣವನ್ನು ಮೊದಲು ಪ್ರಾಯೋಗಿಕವಾಗಿ ಆ ನಂತರ ಸಾರ್ವತ್ರಿಕವಾಗಿ ಕಾರ್ಯಾಚರಣೆಯಲ್ಲಿ ತರಬೇಕೆಂದು ನಿರ್ಣಯಿಸಿದ್ದರಿಂದ ಕರ್ನಾಟಕ ಭಾಗದ ಧಾರವಾಡ ತಾಲೂಕಿನಲ್ಲಿ,ಆಯ್ಕೆ ಮಾಡಿದ ೧೭ ಶಾಲೆಗಳಲ್ಲಿ ಹಾಗೂ ಧಾರವಾಡದಲ್ಲಿಯ ಎರಡು ಶಾಲೆಗಳಲ್ಲಿ ಈ ಶಿಕ್ಷಣವನ್ನು ಪ್ರಾಯೋಗಿಕವಾಗಿ ಆಚರಣೆಯಲ್ಲಿ ತರಲು ನಿರ್ಧರಿಸಿ ಈ ಶಾಲೆಗಳ ಸಮೂಹವನ್ನು ಹೊಂದಿಕೆಯ ಕ್ಷೇತ್ರ (Compact Area) ವೆಂದು ಕರೆದರು. ಅದೇ ರೀತಿ ಮಹಾರಾಷ್ಟ್ರ ಹಾಗೂ ಗುಜರಾಥ ಭಾಗಗಳಲ್ಲಿಯೂ ಪ್ರಾಯೋಗಿಕ ಕ್ಷೇತ್ರಗಳು ಪ್ರಾರಂಭವಾದವು. ಈ ಶಾಲೆಗಳಲ್ಲಿ ಮೊದಲು ಮೂಲೋದ್ಯೋಗವು ಪ್ರಾರಂಭಿಸಲ್ಪಟ್ಟು ನಂತರ ಶಿಕ್ಷಣ ಕ್ರಮವನ್ನು ಆರಂಭಿಸಲಾಯಿತು. ಈ ಶಾಲೆಗಳಲ್ಲಿ ಕೆಲಸ ಮಾಡಲು ಶಿಕ್ಷಕರನ್ನು ತಯಾರಿಸಲು ಮೂಲ ಶಿಕ್ಷಣ ತರಬೇತಿ ಕೇಂದ್ರವು ೧೯೩೮–೩೯ ರಲ್ಲಿ ಧಾರವಾಡದ ಟ್ರೇನಿಂಗ ಕಾಲೇಜದ ಪ್ರಾಯೋಗಿಕ ಶಾಲೆಯ ಆವರಣದಲ್ಲಿ ಪ್ರಾರಂಭವಾಯಿತು. ಅದರ ಪ್ರಥಮ ಪ್ರಿನ್ಸಿಪಾಲರೆಂದು ಶ್ರೀ ಎಸ್. ಆರ್. ತಟ್ಟಿಯವರು ನಿಯಮಕಗೊಂಡರು. ಶ್ರೀ ಆರ್. ವ್ಹಿ. ದೇಸಾಯಿ, ಶ್ರೀ ಕೆ. ಬಿ. ತೇರಗಾಂವಕರ, ಶ್ರೀಮತಿ ನಂದಾವರ, ಶ್ರೀ ಜಿ. ಎಮ್. ನ್ಯಾಮತಿ ಮೊದಲಾದವರು ಈ ತರಬೇತಿ ಸಂಸ್ಥೆಯ ಶಿಕ್ಷಕರಾಗಿದ್ದರು. ಶ್ರೀ ಬಿ. ಎಮ್. ಶಿಂತ್ರಿಯವರು ಹೊಂದಿಕೆಯ ಕ್ಷೇತ್ರದ ಮೇಲ್ವಿ-ಚಾರಕರಾಗಿದ್ದರು. ಅವರಿಗೆ ನೆರವಾಗಲು ಶ್ರೀ ಎಸ್. ಎಸ್. ಅಳಗವಾಡಿ ಹಾಗೂ ಶ್ರೀ ಕಿಣಿಯವರು ಮೂಲೋದ್ಯೋಗ ಪರಿವೀಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಈ ಮೂಲ ಶಿಕ್ಷಣ ತರಬೇತಿ ಸಂಸ್ಥೆಯಲ್ಲಿ ತರಬೇತಿ ಪಡೆಯಲು ಮ್ಯಾಟ್ರಿಕ್ ಪರೀಕ್ಷೆ ಪಾಸಾದ ಟ್ರೇಂಡ ಶಿಕ್ಷಕರನ್ನು ಆಯ್ಕೆ ಮಾಡಲಾಗಿತ್ತು. ಅವರ ತರಬೇತಿಯ ಅವಧಿ ಒಂದು ವರ್ಷದ್ದಾಗಿದ್ದು ಅವರಿಗೆ ಮೂಲೋದ್ಯೋಗ ಹಾಗೂ ಮೂಲ ಶಿಕ್ಷಣದ ಬಗ್ಗೆ

ತರಬೇತಿ ಕೊಡಲಾಗುತ್ತಿದ್ದಿತು. ಇಲ್ಲಿ ತರಬೇತಿ ಪಡೆದ ಶಿಕ್ಷಕರನ್ನು ಹೊಂದಿಕೆಯ ಕ್ಷೇತ್ರದ ಶಾಲೆಗಳಲ್ಲಿ ನಿಯಮಿಸಲಾಗುತ್ತಿದ್ದಿತು. ಈ ರೀತಿ ಪ್ರಾರಂಭವಾದ ಪ್ರಾಯೋಗಿಕ ಕ್ಷೇತ್ರ ತನ್ನ ಎಂಟು ವರುಷಗಳ ಪ್ರಯೋಗಾವಸ್ಥೆಯನ್ನು ಪೂರೈಸಿದ ನಂತರ ಕಂಡು ಬಂದ ಸಂಗತಿಗಳ ಆಧಾರದ ಮೇಲೆ ಅದನ್ನು ಸಾರ್ವತ್ರಿಕ ಗೊಳಿಸಬೇಕೆಂಬ ನಿರ್ಣಯವನ್ನು ಅಂದಿನ ಮುಂಬೈ ರಾಜ್ಯವು ತೆಗೆದುಕೊಂಡಿತು. ಅದರ ಫಲವಾಗಿ ಪುಣೆಯಲ್ಲಿ ಪ್ರಾಥಮಿಕ ಶಿಕ್ಷಕರ ತರಬೇತಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಪದವೀಧರ ಶಿಕ್ಷಕರಿಗಾಗಿ ಐದು ವಾರಗಳ ಒಂದು ಅಲ್ಪಾವಧಿ ತರಬೇತಿಯು ಪ್ರಾರಂಭವಾಯಿತು. ಈ ತರಬೇತಿಯಲ್ಲಿ ಶಿಕ್ಷಣ ಪಡೆದವರು ತರಬೇತಿ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸಲು ಸಮರ್ಥರಾದರೂ ದೊಡ್ಡ ಪ್ರಮಾಣದಲ್ಲಿ ಈ ತರಬೇತಿಯನ್ನು ಒದಗಿಸಲು ಪ್ರತ್ಯೇಕ ಸಂಸ್ಥೆ ಅವಶ್ಯವೆಂಬುದನ್ನು ಸರಕಾರ ಮನಗಂಡಿತು. ಅದೇ ಸಮಯಕ್ಕೆ ಭಾರತ ದೇಶ ಸ್ವತಂತ್ರ ರಾಷ್ಟ್ರವಾಗುವ ಮಾತುಕತೆಗಳು ನಡೆದಿದ್ದವು.

ಮುಂಬೈ ಸರಕಾರವು ೧೯೪೭ ರಲ್ಲಿ ಪ್ರಪ್ರಥಮಬಾರಿ ಇಡೀ ರಾಜ್ಯಕ್ಕೆ ಮೊಟ್ಟ ಮೊದಲು ಬಾರಿ ಪದವೀಧರರಿಗೆ ಒಂದು ವರ್ಷದವರೆಗೆ ಜೀವನ ಶಿಕ್ಷಣದಲ್ಲಿ ತರಬೇತಿ ಕೊಟ್ಟು ಅವರನ್ನು "ಬಿ. ಟಿ." ಪದವಿಗೆ ಸಮಾನವೆಂದು ಪರಿಗಣಿಸಿ ಅವರಿಗೆ ಡಿ. ಬಿ. ಇ. ಡಿಪ್ಲೋಮಾ ಕೊಡಬೇಕೆಂದು ನಿರ್ಧರಿಸಿತು. ಇಂಥ ಸಂಸ್ಥೆಯನ್ನು ತೆರೆಯಲು ಕರ್ನಾಟಕದ ಭಾಗವೇ ಅತ್ಯುತ್ತಮವಾದುದೆಂದು ಸರಕಾರ ಗೊತ್ತು ಪಡಿಸಿತು. ಏಕೆಂದರೆ ಅಷ್ಟರೊಳಗೆ ತಾಲೂಕಿನ ಹೊಂದಿಕೆಯ ಪ್ರಾಯೋಗಿಕ ಕ್ಷೇತ್ರವು ಜೀವನ ಶಿಕ್ಷಣದಲ್ಲಿ ಸಾಕಷ್ಟು ಪ್ರಸಿದ್ಧಿಯನ್ನು ಗಳಿಸಿತ್ತು. ಅದರಿಂದ ಜೀವನ ಶಿಕ್ಷಣ ತರಬೇತಿ ಸಂಸ್ಥೆಯನ್ನು ಮುಂಬೈ ಸರಕಾರದವರು ೧೯೪೭ ರಲ್ಲಿ ಬೆಳಗಾಂವಿಯ ಬಿ. ಟಿ. ಕಾಲೇಜದಲ್ಲಿ ಪ್ರಾರಂಭಿಸಿದರು. ಬೆಳಗಾಂವಿಯ ಬಿ. ಟಿ. ಕಾಲೇಜಿನ ಆಗಿನ ಪ್ರಿನ್ಸಿಪಾಲರಾದ ಶ್ರೀಮತಿ ಸುಲಭಾ ಪಾಣಂದಿಕರವರೆ ಹೊಸದಾಗಿ ಪ್ರಾರಂಭಿಸಲ್ಪಟ್ಟ ಈ ಸಂಸ್ಥೆಯ ಪ್ರಿನ್ಸಿಪಾಲರೆಂದೂ ಕಾರ್ಯನಿರ್ವಹಿಸುತ್ತಿದ್ದರು. ಶ್ರೀ ಆರ್. ಡಿ. ದರಾಸರಿ ವ್ಹಾಯಿಸ್ ಪ್ರಿನ್ಸಿಪಾಲರೆಂದೂ ಸರ್ವಶ್ರೀ. ಕೆ. ಬಿ. ತೇರಗಾಂವಕರ (ದ್ವಿತೀಯದರ್ಜೆ) ಎ. ಬಿ. ಶೇಖ, ಡಿ. ಆರ್. ದೇಸಾಯಿ, ವ್ಹಿ. ಪಿ. ಮಹಾಜನ ಮುಂತಾದವರು ಅಸಿಸ್ಟಂಟ ಲೆಕ್ಚರರ್ ಎಂತಲೂ ಸರ್ವಶ್ರೀ ಜಿ. ಎಮ್. ನ್ಯಾಮತಿ, (ನೂಲುನೆಯ್ಗೆ) ಧುಮಾಳ (ಕಟ್ಟಿಗೆ ಕೆಲಸ) ಹಾಗೂ ಜೋಶಿ (ರಟ್ಟಿನಕೆಲಸ) ಇವರು ಮೂಲೋದ್ಯೋಗ ಶಿಕ್ಷಕರೆಂದು ಕೆಲಸಮಾಡುತ್ತಿದ್ದರು. ಶ್ರೀ ಜಿ. ಎಮ್. ನ್ಯಾಮತಿಯವರು ಈ ಸಂಸ್ಥೆಯ ಪ್ರಾರಂಭದಿಂದ ತಮ್ಮ ನಿವೃತ್ತಿಯವರೆಗೆ ಜೀವನ ಶಿಕ್ಷಣದ ಶ್ರೇಯೋಭಿವೃದ್ಧಿಗೆ ಶ್ರಮಿಸಿದ ಶಿಕ್ಷಕರಾಗಿದ್ದಾರೆ. ಈ ತರಬೇತಿಯ ಸಂಸ್ಥೆಯಲ್ಲಿ ತರಬೇತಿ ಪಡೆಯಲು ಪದವೀಧರರನ್ನು ಆಹ್ವಾನಿಸಲಾಗಿದ್ದಿತು. ಕರ್ನಾಟಕ ಮಹಾರಾಷ್ಟ್ರ ಹಾಗೂ ಗುಜರಾತ ವಿಭಾಗಗಳಿಂದ

ಅರ್ಜಿಗಳು ಬಂದಿದ್ದು ಅವರ ಆಯ್ಕೆಯನ್ನು ಸಂದರ್ಶನದ ಮೂಲಕವೂ ಹಾಗೂ ಪದವೀ ಪರೀಕ್ಷೆಯಲ್ಲಿ ಪಡೆದ ಗುಣಗಳ ಆದ್ಯತೆಯ ಮೇಲೆಯೂ ಮಾಡಲಾಯಿತು. ನಾನೂ ಕೂಡ ಈ ತರಬೇತಿಯ ಆಯ್ಕೆಗೆ ಅರ್ಜಿ ಮಾಡಿಕೊಂಡಿದ್ದೆ ಆದರೆ ಮೊದಲ ಹಂತದಲ್ಲಿ ನನ್ನ ಆಯ್ಕೆ ಆಗಲಿಲ್ಲ. ಮುಂದೆ ಈ ಸಂಸ್ಥೆಯಲ್ಲಿ ತರಬೇತಿಗೆ ಬಂದವರಲ್ಲಿ ಕೆಲವರು ಬಿಟ್ಟು ಹೋದುದರಿಂದ ನನ್ನನ್ನು ಅಗಸ್ಟ ತಿಂಗಳಲ್ಲಿ ಆಯ್ಕೆ ಮಾಡಿದರು. ನಾನು ಈ ತರಬೇತಿಗೆ ಅಗಸ್ಟ ತಿಂಗಳ ಮೂರನೆಯ ವಾರದಲ್ಲಿ ಸೇರಿಕೊಂಡೆನು. ಈ ಸಂಸ್ಥೆಯಲ್ಲಿ ೪೦ ವಿದ್ಯಾರ್ಥಿಗಳಿಗೆ ತರಬೇತಿ ಪಡೆಯಲು ಅವಕಾಶವಿದ್ದಿತು. ಆದರೆ ತರಬೇತಿಯನ್ನು ಕೊನೆಯ ವರೆಗೆ ಪೂರೈಸಿದವರೆಂದರೆ ಕರ್ನಾಟಕದ ೨೦, ಮಹಾ-ರಾಷ್ಟ್ರದ ೯ ಹಾಗೂ ಗುಜರಾಥದ ೪ ವಿದ್ಯಾರ್ಥಿಗಳೆಂಬುದು ತಿಳಿದು ಬರುತ್ತದೆ. ತರಬೇತಿಯ ಅವಧಿಯಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೆ ರೂ. ೪೦/– ಶಿಷ್ಯ ವೇತನ ದೊರೆಯುತ್ತಿದ್ದಿತು. ಅದರ ಜೊತೆಗೆ ಹಾಸ್ಟೆಲ್‌ದಲ್ಲಿ ವಾಸವಾಗಿದ್ದು ಅಲ್ಲಿಯ ಸಾಂಘಿಕ ಚಟುವಟಿಕೆಗಳಲ್ಲಿ ಪಾಲುಗೊಳ್ಳಲೇಬೇಕೆಂಬ ನಿರ್ಬಂಧವಿದ್ದಿತು.

ಕಾಲೇಜಿನ ದೈನಂದಿನ ಚಟುವಟಿಕೆಗಳು ಬೆಳಗಿನ ೫ ಗಂಟೆಗೆ ಏಳುವ ಸೂಚನಾ ಗಂಟೆಯೊಂದಿಗೆ ಪ್ರಾರಂಭವಾಗುತ್ತಿದ್ದವು. ೬ ಗಂಟೆಗೆ ಸಾಮೂಹಿಕವಾಗಿ ಪ್ರಾರ್ಥನೆಯ ನಂತರ ಸಫಾಯಿ ಕಾರ್ಯಕ್ರಮಗಳು ಜರುಗುತ್ತಿದ್ದವು, ವಸತಿ ಗೃಹದ ಸುತ್ತಲಿನ ಸ್ವಚ್ಛತೆ, ಕುಡಿಯುವ ನೀರಿನ ಪೂರೈಕೆ, ಅಡಿಗೆಗೆ ನೆರವಾಗುವದು, ಊಟ, ಉಪಹಾರ ಬಡಿಸುವದು, ಪೇಟೆಯಿಂದ ಸಾಮಾನು ತರುವದು ಇತ್ಯಾದಿ ಇರುತ್ತಿದ್ದವು. ಸಫಾಯಿಯ ನಂತರ ಉಪಹಾರ ಒದಗಿಸಲಾಗುತ್ತಿದ್ದಿತು. ಉಪಹಾರದ ಜೊತೆಗೆ ನೀರಿನ ಹೊರತಾಗಿ ಯಾವುದೇ ಪಾನೀಯವನ್ನು ಕೊಡಲಾಗುತ್ತಿದ್ದಿಲ್ಲ. ಉಪಹಾರದ ನಂತರ ೭.೩೦ ರಿಂದ ಮೂಲೋದ್ಯೋಗಗಳು ನಡೆಯುತ್ತಿದ್ದವು. ಈ ಸಂಸ್ಥೆಯಲ್ಲಿ ನೂಲುವದು ಹಾಗೂ ನೇಯುವದು ಮತ್ತು ಕಟ್ಟಿಗೆಯ ಕೆಲಸ ಹಾಗೂ ರಟ್ಟಿನ ಕೆಲಸಗಳೆಂದು ಎರಡು ಉದ್ಯೋಗಗಳು ಸಾಗುತ್ತಿದ್ದವು. ಕೈತೋಟದ ಕೆಲಸವನ್ನು ಎಲ್ಲರೂ ಮಾಡಬೇಕಾಗುತ್ತಿದ್ದಿತು. ಮಧ್ಯಾಹ್ನ ೧೨ ಕ್ಕೆ ಊಟದ ನಂತರ ೨.೩೦ ರ ವರೆಗೆ ವಿಶ್ರಾಂತಿ ಹಾಗೂ ಸ್ವಾಧ್ಯಾಯ. ಮಧ್ಯಾಹ್ನ ೨–೩೦ ರಿಂದ ೫–೩೦ ರ ವರೆಗೆ ವಿಷಯಗಳು ನಡೆಯುತ್ತಿದ್ದವು. ಈ ಕಾಲೇಜಿನಲ್ಲಿ ಕನ್ನಡ, ಮರಾಠಿ ಹಾಗೂ ಗುಜರಾತೀ ಮಾತೃಭಾಷೆಯ ವಿದ್ಯಾರ್ಥಿಗಳಿದ್ದುದರಿಂದ ಉಪನ್ಯಾಸಗಳು ಇಂಗ್ಲೀಷ ದಲ್ಲಿ ಸಾಗುತ್ತಿದ್ದವು. ವಿಷಯಗಳಿಗಾಗಿ ವಸತಿ ಗೃಹದ ಮಧ್ಯದಲ್ಲಿರುವ ಕೋಣೆಯನ್ನೇ ಬಳಸಲಾಗುತ್ತಿದ್ದಿತು. ಶಿಕ್ಷಣಾರ್ಥಿಗಳಿಗೆ ಹಾಗೂ ಉಪನ್ಯಾಸಕರಿಗೆ "ಬನಿಯಾ" ಡೆಸ್ಕುಗಳನ್ನು ಒದಗಿಸಲಾಗಿದ್ದಿತು. ಉಪನ್ಯಾಸಗಳು ಚರ್ಚೆಯೊಂದಿಗೆ ಮುಕ್ತಾಯ-ವಾಗುತ್ತಿದ್ದವು. ಈ ತರಬೇತಿಯಲ್ಲಿ "ಬಿ. ಟಿ." ತರಬೇತಿಯಲ್ಲಿಯ ಎಲ್ಲ ವಿಷಯಗಳ ಜೊತೆಗೆ ಜೀವನ ಶಿಕ್ಷಣದ ಬಗ್ಗೆ ಹೆಚ್ಚಿನ ಮಾಹಿತಿ ಒದಗಿಸಲಾಗುತ್ತಿದ್ದಿತಲ್ಲದೆ

ಮೂಲೋದ್ಯೋಗ, ಸಾಂಘಿಕ ಜೀವನ ಮುಂತಾದವುಗಳೂ ಇರುತ್ತಿದ್ದುದರಿಂದ ಇಲ್ಲಿ ಬೆಳಗಿನ ೫ ರಿಂದ ರಾತ್ರಿ ೧೦ ಗಂಟೆಯ ವರೆಗೆ ಒಂದಿಲ್ಲ ಒಂದು ಚಟುವಟಿಕೆ ಎಡ ಬಿಡದೆ ಸಾಗುತ್ತಿದ್ದವು. ಇಲ್ಲಿ ಪ್ರಾಯೋಗಿಕ ಪಾಠಗಳನ್ನು ಕೊಡಲು ಅವಕಾಶವಿಲ್ಲದ್ದ ರಿಂದ ಆಯಾ ಭಾಷೆಯ ವಿದ್ಯಾರ್ಥಿಗಳು ಪಾಠ ಕೊಡಲು ತಮ್ಮ ಭಾಷೆಯ ಹೊಂದಿಕೆಯ ಕ್ಷೇತ್ರದ ಶಾಲೆಗಳಿಗೆ ಹೋಗಬೇಕಾಯಿತು. ಡಿಸೆಂಬರ ತಿಂಗಳಲ್ಲಿ ಕನ್ನಡ ಮಾತೃಭಾಷೆಯು ವಿದ್ಯಾರ್ಥಿಗಳು ಧಾರವಾಡಕ್ಕೆ, ಮರಾಠಿ ವಿದ್ಯಾರ್ಥಿ ಗಳು ಲೋಣಿಗೆ, ಗುಜರಾತೀ ವಿದ್ಯಾರ್ಥಿಗಳು ಕಾತರಗಾಂವಕ್ಕೆ ಪಾಠಕೊಡಲು, ಗ್ರಾಮ ನಿರೀಕ್ಷಣೆಮಾಡಲು ಹೋಗಿದ್ದರು. ಧಾರವಾಡ ಹೊಂದಿಕೆಯ ಕ್ಷೇತ್ರಕ್ಕೆ ಬಂದ ವಿದ್ಯಾರ್ಥಿಗಳೆಲ್ಲ ಧಾರವಾಡದ ಗುಲಗಂಜಿಕೊಪ್ಪದ ಜೀವನ ಶಿಕ್ಷಣ ಶಾಲೆಯಲ್ಲಿ ಒಂದು ವಾರದವರೆಗೆ ಪಾಠಕೊಟ್ಟರು. ನಂತರ ಆ ಇಪ್ಪತ್ತು ವಿದ್ಯಾರ್ಥಿಗಳು ಎರಡು ಗುಂಪುಗಳಾಗಿ ಒಂದು ಗುಂಪು ಶ್ರೀ ಕೆ. ಬಿ. ತೇರಗಾಂವಕರ ನೇತೃತ್ವದಲ್ಲಿ ಅಮ್ಮಿನ ಭಾವಿಯಲ್ಲಿ ವಾಸ್ತವ್ಯಮಾಡಿ ಪಾಠ ಕೊಟ್ಟರೆ ಇನ್ನೊಂದು ಗುಂಪು ಉಪ್ಪಿನ ಬೆಟಗೇರಿ ಯಲ್ಲಿ ಶ್ರೀ ಮ. ಗು. ಹಂದ್ರಾಳವರ ನೇತೃತ್ವದಲ್ಲಿ ಪಾಠಕೊಟ್ಟರು. ಈ ಎರಡೂ ಗುಂಪುಗಳು ಮೂರು ವಾರಗಳವರೆಗೆ ವಾಸ್ತವ್ಯಮಾಡಿ ತಮ್ಮ ಪ್ರಾಯೋಗಿಕ ಪಾಠ ಗಳನ್ನು ಪೂರೈಸುವದರ ಜೊತೆಗೆ ಆಯಾಗ್ರಾಮಗಳ ಗ್ರಾಮನಿರೀಕ್ಷಣೆ ಹಾಗೂ ಸಾಮಾಜಿಕ ಕಾರ್ಯಕ್ರಮಗಳನ್ನು ಊರವರ ನೆರವಿನಿಂದ ನೆರವೇರಿಸಿದರು. ಈ ವಾಸ್ತವ್ಯದ ಅವಧಿಯಲ್ಲಿ ಶೈಕ್ಷಣಿಕ ಚರ್ಚೆ ಸಮ್ಮೇಲನ ಹಾಗೂ ಮನರಂಜನೆಯ ಕಾರ್ಯಕ್ರಮಗಳನ್ನು ನೆರವೇರಿಸುವದನ್ನು ಮರೆಯುತ್ತಿದ್ದಿಲ್ಲ. ಇಲ್ಲಿ ರೂಢಿಗಾಗಿ ಕೊಡಲಾಗುತ್ತಿದ್ದ ಪಾಠಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳದಿದ್ದರೆ ಪ್ರಸ್ತುತ ಲೇಖನವು ಅಪೂರ್ಣವೆಂದೆನಿಸುವದೆಂಬ ದೃಷ್ಟಿಯಿಂದ ಅವುಗಳನ್ನು ಹೇಳಬಯಸುವೆ. ಈ ಮೊದಲು ಪಾಠಗಳನ್ನು ಕೊಡುವಾಗ ಹರ್ಬಾರ್ಟನ ಪಂಚಸೋಪಾನಗಳನ್ನು ಅನುಸರಿಸಲಾಗುತ್ತಿದ್ದಿತು. ಮಗುವಿನ ಸುತ್ತಲಿನ ಪರಿಸರದ ಮೂಲಕ ನೈಸರ್ಗಿಕ, ಸಾಮಾಜಿಕ, ಆರ್ಥಿಕ, (ಮೂಲೋದ್ಯೋಗ ಚಟುವಟಿಕೆ) ನಿತ್ಯ ನೈಮಿತ್ತಿಕ, ಚಟುವಟಿಕೆಗಳ ಮೂಲಕ ನಡೆಯುವ ಪಾಠದ ರೂಪರೇಷೆಯನ್ನು ತಯಾರಿಸುವಲ್ಲಿ ಶ್ರೀ ಕೆ. ಬಿ. ತೇರಗಾಂವಕರರು ವಿಶೇಷ ಪರಿಶ್ರಮ ವಹಿಸಿದುದು ತಿಳಿಯುತ್ತದೆ. ಈ ದಿಸೆಯಲ್ಲಿ ಕರ್ನಾಟಕವು ರಾಜ್ಯದ ಉಳಿದ ಭಾಗಗಳಿಗೆ (ಮಹಾರಾಷ್ಟ್ರ, ಗುಜರಾಥ) ಮಾರ್ಗದರ್ಶಿಯಾಗಿದ್ದಿತೆಂಬುದು ಹೆಮ್ಮೆಯ ವಿಷಯವಾಗಿದೆ. ಹಳ್ಳಿಯ ವಾಸ್ತವ್ಯವು ಹಳ್ಳಿಯ ಸಮಸ್ಯೆಗಳನ್ನು ಅರಿಯಲು ಅನುವು ಮಾಡಿಕೊಡುವುದರ ಜೊತೆಗೆ ನೈಜ ಶಿಕ್ಷಣದ ದರ್ಶನವನ್ನವರಿಗೆ ಮಾಡಿಸುತ್ತಿದ್ದಿತು.

ತರಬೇತಿಯ ಅವಧಿಯಲ್ಲಿ ಪ್ರತಿಯೊಬ್ಬ ಶಿಕ್ಷಣಾರ್ಥಿಯು ಆಯಾ ಉಪನ್ಯಾಸ ಕರು ಕೊಡುವ ವಿಷಯಗಳ ಮೇಲೆ ಪ್ರಬಂಧಗಳನ್ನು ಬರೆದು ನಿಶ್ಚಿತಪಡಿಸಿದ ದಿನಾಂಕ ಗಳಂದು ಅವರಿಗೆ ಪರಿಶೀಲನೆಗಾಗಿ ಒಪ್ಪಿಸಬೇಕಾಗಿದ್ದಿತು. ಅಲ್ಲದೆ ಪ್ರತಿಯೊಬ್ಬರೂ

ಒಂದು ಸುದೀರ್ಘವಾದ ಪ್ರಬಂಧವನ್ನು (Experssion work) ಬರೆದುಕೊಡ ಬೇಕಾಗುತ್ತಿದ್ದಿತು. ಅಲ್ಲದೆ ಪ್ರತಿಯೊಬ್ಬರು ತಮ್ಮ ದೈನಂದಿನ ದಿನಚರಿಯನ್ನಿಡ ಬೇಕಾಗುತ್ತಿದ್ದಿತು. ಹಾಗೂ ಅದನ್ನು ತಪಾಸಣೆಗಾಗಿ ಪ್ರತಿವಾರವೂ ತಪ್ಪದೆ ಗೊತ್ತುಪಡಿಸಿದ ಶಿಕ್ಷಕರಿಗೆ ಒಪ್ಪಿಸಬೇಕಾಗುತ್ತಿದ್ದಿತು. ಮೂಲೋದ್ಯೋಗದಲ್ಲಿಯೂ ದೈನಂದಿನ ಲೆಕ್ಕವನ್ನು ಇಡುವುದರ ಜೊತೆಗೆ ಒಂದು ವರ್ಷದಲ್ಲಿ ನಿಗದಿಪಡಿಸಿದ ಕಾರ್ಯವನ್ನು ಪೂರೈಸಬೇಕಾಗುತ್ತಿದ್ದಿತು. ಶಿಕ್ಷಣಾರ್ಥಿಗಳು ತಮ್ಮ ದೈನಂದಿನ ಕಾರ್ಯಗಳಲ್ಲಿ ತೋರುವ ಆಸಕ್ತಿಗಳನ್ನು ಪ್ರತ್ಯಕ್ಷವಾಗಿ ನಿರೀಕ್ಷಿಸಿ ಗುರುತಿಸಲಾಗುತ್ತಿದ್ದಿತೆಂಬುದು ತಿಳಿಯುತ್ತದೆ. ಒಂಬತ್ತು ತಿಂಗಳ ಈ ತರಬೇತಿಯು ನಿಜವಾಗಿಯೂ ತರಬೇತಿಗೆ ಒಳಪಡುವವರ ಜೀವನದಲ್ಲಿ ಮಾರ್ಪಾಡನ್ನು ಮಾಡದೆ ಬಿಡುತ್ತಿರಲಿಲ್ಲ. ಇದು ಪ್ರತಿಯೊಬ್ಬನನ್ನು ಸಮಾಜಕ್ಕೆ ಉಪಯುಕ್ತನಾದ ಸ್ವಾವಲಂಬೀ ವ್ಯಕ್ತಿಯನ್ನು ರೂಪಿಸುವಲ್ಲಿ ನೆರವಾಗುತ್ತಿದ್ದಿತೆಂಬುದನ್ನು ನಾವು ಕಾಣಬಹುದಾಗಿದ್ದಿತು.

ತರಬೇತಿಯ ಅವಧಿಯಲ್ಲಿ ಪ್ರತಿಯೊಬ್ಬ ಶಿಕ್ಷಣಾರ್ಥಿಗೆ ರೂ. ೪೦/– ಸ್ಟಾಯಿಪೆಂಡ ಕೊಡಲಾಗುತ್ತಿದ್ದಿತು. ಆ ಸ್ಟಾಯಿಪೆಂಡ ಹಣದಲ್ಲಿಯೇ ಶಿಕ್ಷಣದ ಎಲ್ಲ ವೆಚ್ಚವೂ ಪೂರೈಸುವಂತಿದ್ದಿತು. ತರಬೇತಿಯ ನಂತರ ತೆಗೆದುಕೊಳ್ಳಲಾದ ಪರೀಕ್ಷೆಯಲ್ಲಿ ಉತ್ತೀರ್ಣರಾದ ಎಲ್ಲರಿಗೂ ಡಿ. ಬಿ. ಇ. (Diploma in Basic Education) ಎಂಬ ಡಿಪ್ಲೋಮಾವನ್ನು ಕೊಡಲಾಗುತ್ತಿದ್ದಿತು. ಇದು ನೌಕರಿಯ ನಿಯಮಕಾತಿಗೆ ಹಾಗೂ ಬಡತಿಗೆ "ಬಿ ಟಿ." ಪದವಿಗೆ ಸರಿಸಮಾನವೆಂದು ಪರಿಗಣಿಸಲಾಗುತ್ತಿದ್ದಿತು. ಆದರೆ ವಿಶ್ವವಿದ್ಯಾಲಯವು ಡಿ. ಬಿ. ಇ. ಡಿಪ್ಲೊಮಾಕ್ಕೆ ಮಾನ್ಯತೆ ಕೊಟ್ಟಿರಲಿಲ್ಲ. ಆದರೆ ೧೯೬೪ರಲ್ಲಿ ವಿಶ್ವವಿದ್ಯಾಲಯದ ಬಿ. ಎಡ್. ಕಾಲೇಜದ ಪ್ರಿನ್ಸಿಪಾಲರಾದ ಶ್ರೀಮತಿ ಎಸ್. ಪಾಣಂದಿಕರರ ಪ್ರಯತ್ನದಿಂದಾಗಿ ಡಿ. ಬಿ. ಇ. ಹಾಗೂ ಅನಂತರದ ಡಿ. ಈಡಿ. (Basic) ಡಿಪ್ಲೊಮಾ ಪಡೆಯುವವರಿಗೆ ಎಮ್. ಈಡಿ. ಪರೀಕ್ಷೆಗೆ ಅಭ್ಯಾಸ ಮಾಡಲು ಕರ್ನಾಟಕ ವಿಶ್ವವಿದ್ಯಾಲಯದವರು ಅನುಕೂಲ ಮಾಡಿಕೊಟ್ಟಿದ್ದರಿಂದ ಅನೇಕರು ತಮ್ಮ ಶಿಕ್ಷಣವನ್ನು ಮುಂದುವರಿಸಿ ಎಮ್. ಈಡಿ. ಪದವಿಯನ್ನು ಪಡೆಯುವಂತಾಗುವದರ ಜೊತೆಗೆ ಡಿ. ಬಿ. ಇ. ಡಿಪ್ಲೊಮಾಕ್ಕೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಮಾನ್ಯತೆ ದೊರೆತುದರಿಂದ ಅದರ ಸ್ಥಾನಮಾನ ಹೆಚ್ಚುವಲ್ಲಿ ನೆರವಾಯಿತು—

ಮೊದಲನೆಯ ಗುಂಪಿನವರು ತಮ್ಮ ತರಬೇತಿಯನ್ನು ಪೂರ್ತಿಗೊಳಿಸಿದ ನಂತರ ಅವರನ್ನು ಆಯ್ಕೆಮಾಡುವ ಕಾಲಕ್ಕೆ ಗೊತ್ತುಪಡಿಸಿದ ಕರಾರಿನಂತೆ ಅವರೆಲ್ಲರಿಗೆ ಈ ಭಾಗದಲ್ಲಿದ್ದ ತರಬೇತಿ ಸಂಸ್ಥೆಗಳಲ್ಲಿ ಶಿಕ್ಷಕರೆಂದು ನಿಯಮಿಸಲಾಯಿತು. ಅಂದರೆ ೧೯೪೪ರಿಂದ ಪ್ರಾಥಮಿಕ ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿ ಜೀವನ ಶಿಕ್ಷಣ ತರಬೇತಿಯು ಪ್ರಾರಂಭವಾಯಿತು. ಆದರಂತೆ ಈ ಮೊದಲು ಪ್ರಾಯೋಗಿಕ ಕೇಂದ್ರವೆಂದು

ಪ್ರಾರಂಭಿಸಲ್ಪಟ್ಟ ಜೀವನ ಶಿಕ್ಷಣ ಕೇಂದ್ರವು ಧಾರವಾಡದ ಗಂಡುಮಕ್ಕಳ ಟ್ರೇನಿಂಗ ಕಾಲೇಜದಲ್ಲಿ ವಿಲೀನವಾಯಿತು.

ಬೆಳಗಾಂವಿಯಲ್ಲಿ ೧೯೪೭ ರಲ್ಲಿ ಪ್ರಾರಂಭಿಸಲ್ಪಟ್ಟ ಪದವೀಧರ ಜೀವನ ಶಿಕ್ಷಣ ಕೇಂದ್ರವು ಪ್ರಾದೇಶಿಕ ಸಂಸ್ಥೆಯಾಗಿ ಮಾರ್ಪಟ್ಟಿತ್ತು. ಇದೇ ಮಾದರಿಯ ಸಂಸ್ಥೆಗಳು ಗುಜರಾತ ಹಾಗೂ ಮಹಾರಾಷ್ಟ್ರಗಳಲ್ಲಿ ತೆರೆಯಲ್ಪಟ್ಟವು. ಕನ್ನಡ ವಿಭಾಗದ ಇಂಥ ಸಂಸ್ಥೆಯು ಧಾರವಾಡದ ಟ್ರೇನಿಂಗ ಕಾಲೇಜದ ಮ್ಯೂಜಿಯಮ್ ಹಾಲಿನಲ್ಲಿ ೧೯೪೮ ರಲ್ಲಿ ಪ್ರಾರಂಭವಾಯಿತು. ಶ್ರೀ ಕೆ. ಬಿ. ತೇರಗಾಂವಕರರು ಅದರ ಪ್ರಿನ್ಸಿಪಾಲ ರೆಂದು ನಿಯಮಕಗೊಂಡರು. ವರ್ಧಾದಲ್ಲಿ ತರಬೇತಿ ಪಡೆದ ಸರ್ವಶ್ರೀ ಎಸ್. ಬಿ. ಪಾಟೀಲ ಹಾಗೂ ಎನ್. ಆರ್. ಹಿರೇಮಠರು ಈ ಸಂಸ್ಥೆಯಲ್ಲಿ ಉಪನ್ಯಾಸಕರೆಂದು ನಿಯಮಕಗೊಂಡರು. ಅದರಂತೆ ವರ್ಧಾದಲ್ಲಿ ಶಿಕ್ಷಣ ಪಡೆದ ಶ್ರೀ ಎಮ್. ಜಿ. ಹಂದ್ರಾಳರು ನಾಲ್ಕು ಜಿಲ್ಹೆಗಳ ಮೂಲೋದ್ಯೋಗ ವೀಕ್ಷಕರೆಂದು ನಿಯಮಿಸಲ್ಪಟ್ಟಿದ್ದರು. ಸಂಸ್ಥೆಯಲ್ಲಿ ಮೂಲೋದ್ಯೋಗ ಪರಿಣತರೆಂದು ಶ್ರೀ ಜಿ. ಎಮ್. ನ್ಯಾಮತಿ ಹಾಗೂ ಶ್ರೀ ಸಿಂದಗಿಯವರು ನಿಯಮಗೊಂಡರು. ಈ ಸಂಸ್ಥೆಯಲ್ಲಿ ಶಿಕ್ಷಣ ಪಡೆಯಲು ಬಿ. ಟಿ. ತರಬೇತಿಯನ್ನು ಪಡೆದಂತಹ ಅನುಭವಿಕ ಶಿಕ್ಷಕರನ್ನು ಆಯ್ಕೆಮಾಡಲಾಯಿತು. ಇಲ್ಲಿ ಶಿಕ್ಷಣದ ಬೋಧನೆ ಕನ್ನಡದಲ್ಲಿಯೇ ನಡೆಯುತ್ತಿದ್ದುದರಿಂದ ಇದುವೇ ಪ್ರಪ್ರಥಮವಾಗಿ ಕನ್ನಡ ಮಾಧ್ಯಮದ ಸ್ನಾತಕೋತ್ತರ ಸಂಸ್ಥೆಯಾಗಿ ರೂಪುಗೊಂಡು, ಕನ್ನಡದ ಮೂಲಕ ಶಿಕ್ಷಣಕೊಡಲು ಸಾಧ್ಯವೇ ? ಎಂಬ ಪ್ರಶ್ನೆಗೆ ಸಮರ್ಪಕ ಉತ್ತರ ಕೊಡುವ ಸಂಸ್ಥೆಯಾಗಿ ಪರಿಣಮಿಸಿತು. ಶಿಕ್ಷಣಕ್ಷೇತ್ರದಲ್ಲಿ ಅನೇಕ ವರುಷಗಳವರೆಗೆ ಕೆಲಸಮಾಡಿ ಅನುಭವ ಪಡೆದ ಶಿಕ್ಷಕರು ಇಲ್ಲಿ ತರಬೇತಿಗೆ ಬಂದುದರಿಂದ ಇಲ್ಲಿಯ ಚರ್ಚೆಗಳು ಒಳ್ಳೆಯ ರಸವತ್ತಾಗಿ ನಡೆಯುತ್ತಿದ್ದವೆಂಬುದು ತಿಳಿದು ಬರುತ್ತದೆ. ಉಳಿದ ಶೈಕ್ಷಣಿಕ ಸಂಸ್ಥೆಗಳಲ್ಲಿ ಕಂಡು ಬರುವ ಆಸನಗಳ ವ್ಯವಸ್ಥೆ ಇಲ್ಲಿ ಕಂಡುಬರುತ್ತಿರಲಿಲ್ಲ. ಇಲ್ಲಿ ಎಲ್ಲರೂ "ಬನಿಯಾ" ಡೆಸ್ಕುಗಳನ್ನು ಉಪಯೋಗಿಸುತ್ತಿದ್ದರು. ಒಮ್ಮೆ ಈ ಸಂಸ್ಥೆಗೆ ಸಂದರ್ಶನವನ್ನಿತ್ತ ಬಿ. ಎಡ್ ಕಾಲೇಜದ ಪ್ರಿನ್ಸಿಪಾಲರು ವರ್ಗಗಳು ನಡೆಯುತ್ತಿರುವ ಕೋಣೆಯನ್ನು ಪ್ರವೇಶಿಸಿ ಆಶ್ಚರ್ಯ ಚಕಿತರಾಗಿ, ಪ್ರಿನ್ಸಿಪಾಲರೆಲ್ಲಿ ? ಎಂದು ಪ್ರಶ್ನಿಸಿದರು. ವಿದ್ಯಾರ್ಥಿಗಳ ಮಧ್ಯದಲ್ಲಿ ಕುಳಿತ ಪ್ರಿನ್ಸಿಪಾಲರು ಎದ್ದು ಬಂದು ಅವರನ್ನು ಎದುರುಗೊಂಡಾಗ ಅವರಿಗೆ ಆಶ್ಚರ್ಯ ಕಾಯ್ದಿದ್ದಿತು. ಸಾದಾ ಖಾದಿ ಉಡುಪಿನಲ್ಲಿದ್ದ ಅವರನ್ನು ನೋಡಿ, ಪ್ರಿನ್ಸಿಪಾಲರು ನೀವೇನಾ ! ಎಂದು ಅವರೊಡನೆ ಚರ್ಚಿಸುತ್ತ ಸಂಸ್ಥೆಯ ನಿರೀಕ್ಷಣೆಗೆ ಹೊರಟು ಹೋದರು. ಸಾಂಪ್ರದಾಯಗಳು ನಮ್ಮ ಮೇಲೆ ಉಂಟು ಮಾಡಿದ ಪರಿಣಾಮವನ್ನು ನಾವು ಇದರಿಂದ ಕಂಡುಕೊಳ್ಳಬಹುದು.

ಶಿಕ್ಷಣ ಕ್ಷೇತ್ರದಲ್ಲಿ ಕಾಲಿಟ್ಟವರಿಗೆ ತರಬೇತಿಯೊಂದು ತಲೆನೋವೆಂದು ಹೇಳಿದರೆ ಅತಿಶಯೋಕ್ತಿಯೇನೂ ಅಲ್ಲವಷ್ಟೆ ? ಇಂಥ ತರಬೇತಿಯನ್ನು ತಪ್ಪಿಸಿಕೊಳ್ಳಲು

ಪ್ರಯತ್ನಿಸುವರೇ ಅನೇಕ ಜನ. ಇದರಿಂದ ನಾವು ತರಬೇತಿಗೆ ಬಂದವರ ಮನೋಭಾವವನ್ನು ತಿಳಿಯಬಹುದಾಗಿದೆ. ತರಬೇತಿಗೆ ಬಂದವರಲ್ಲಿ ಅನೇಕರು ಅನುಭವಿಕರು. ಈಗಾಗಲೇ ಒಂದು ಜೀವನಕ್ರಮಕ್ಕೆ ಹೊಂದಿಕೊಂಡವರಾಗಿದ್ದರಿಂದ ಅವರೆಲ್ಲರೂ ಸುಲಭವಾಗಿ ಹೊಸದಕ್ಕೆ ಹೊಂದಿಕೊಳ್ಳುವವರಾಗಿರಲಿಲ್ಲ. ಅದೂ ಅಲ್ಲದೆ ಇಲ್ಲಿಯ ಪ್ರಾಮಾಣಿಕ ಮುಕ್ತ ಮನಸ್ಸಿನ ಚರ್ಚೆ ಅವರನ್ನು ಹೆಚ್ಚು ಚರ್ಚಾಸಕ್ತರನ್ನಾಗಿ ಮಾಡಿದುದರಲ್ಲಿ ಸಂಶಯವಿಲ್ಲ. ಅದಕ್ಕೆಂದೇ ಇಲ್ಲಿಯ ಚರ್ಚೆಗಳು ಒಳ್ಳೆಯ ರಸವತ್ತಾಗಿ ನಡೆಯುತ್ತಿದ್ದವೆಂಬುದು ತಿಳಿಯುತ್ತದೆ. ಪ್ರಾರಂಭದಲ್ಲಿ ನಡೆಯುತ್ತಿದ್ದ ಬಿರುಸಿನ ಚರ್ಚೆ ಕ್ರಮೇಣ ಅವುಗಳಲ್ಲಿಯ ಬಿಸಿ ಇಳಿದು ಜ್ಞಾನಾರ್ಜನೆಯ ಜಿಜ್ಞಾಸು ಚರ್ಚೆಗಳಾಗಿ ಪರಿವರ್ತನಗೊಂಡುದನ್ನು ನೋಡಿದರೆ ಅವರೆಲ್ಲರ ಮೇಲೆ ಆದ ಶಿಕ್ಷಣದ ಪ್ರಭಾವವನ್ನು ನಾವು ಗಮನಿಸಬಹುದು. ಇಲ್ಲಿಯ ಸಫಾಯಿ, ಸಾಂಸ್ಕೃತಿಕ ಚಟುವಟಿಕೆ, ಊಟದ ವ್ಯವಸ್ಥೆ, ಮುಂತಾದವುಗಳನ್ನು ಪ್ರಜಾಸತ್ತಾತ್ಮಕ ರೀತಿಯಿಂದ ಆಯ್ಕೆಗೊಂಡ ಮಂತ್ರಿಮಂಡಳವು ಪ್ರತಿ ತಿಂಗಳೂ ಈ ಎಲ್ಲ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದಿತು. ಆಯಾ ತಿಂಗಳುಗಳ ಕೊನೆಯಲ್ಲಿ ಮಂತ್ರಿ ಮಂಡಲದವರು ಒಪ್ಪಿಸುವ ವರದಿಯ ಕಾಲಕ್ಕೆ ನಡೆಯುವ ಮುಕ್ತಮನಸ್ಸಿನ ಚರ್ಚೆ ಪ್ರಜಾಸತ್ತೆಗೆ ಸರಿಯಾದ ತಳಹದಿಯನ್ನು ಹಾಕುವಲ್ಲಿ ಯಶಸ್ವಿಯಾದುದನ್ನು ನಾವು ಕಾಣಬಹುದಾಗಿದೆ. ಈ ತರಬೇತಿಯ ಇನ್ನೊಂದು ಅಂಗವಾದ ಹಳ್ಳಿಯ ವಾಸ್ತವ್ಯ ಗ್ರಾಮ ಪರಿಶೀಲನೆ (Village Survey) ಸಾಮಾಜಿಕ ಕಾರ್ಯಗಳು ಅನೇಕರ ಕಣ್ಣು ತೆರೆಯಿಸಿ ಹಳ್ಳಿಯ ನೈಜಬದುಕಿನ ಚಿತ್ರವನ್ನು ನೋಡುವ ಅವಕಾಶ ಅವರಿಗೆ ಒದಗಿಸಿಕೊಡುವದರ ಜೊತೆಗೆ ಅಂತಹ ಪರಿಚಯ ಮಾಡಿಕೊಟ್ಟುದರಿಂದ ಅವರ ಜೀವನದಲ್ಲಿ ಮಾರ್ಪಾಟು ಆದುದನ್ನು ಕಂಡವರಿದ್ದಾರೆ. ಅವರು ತಮ್ಮ ತರಬೇತಿಯನ್ನು ಪೂರ್ಣಮುಗಿಸುವಷ್ಟರಲ್ಲಿ ಅವರಲ್ಲಿ ಆದ ಬದಲಾವಣೆಯನ್ನು ನಿರೀಕ್ಷಿಸಿದರೆ ನಿಜವಾಗಿಯೂ ಈ ಶಿಕ್ಷಣಕ್ರಮವು ಅವರ ಮೇಲೆ ಪರಿಣಾಮ ಉಂಟುಮಾಡಿದುದನ್ನು ನಾವು ಕಾಣಬಹುದಾಗಿದ್ದಿತು. ಈ ರೀತಿಯಾಗಿ ತರಬೇತಿ ಹೊಂದಿದ ಶಿಕ್ಷಕರಿಗೆ ಜೀವನ ಶಿಕ್ಷಣದಲ್ಲಿ ತರಬೇತಿಗೊಳಿಸುವದು ೧೯೫೩ ರ ವರೆಗೆ ಸಾಗಿತು–ಅಷ್ಟರೊಳಗೆ ನಾಲ್ಕು ಜಿಲ್ಲೆಯಲ್ಲಿ ಜೀವನ ಶಿಕ್ಷಣದಲ್ಲಿ ತರಬೇತಿ ಹೊಂದಿದವರ ಸಂಖ್ಯೆ ಸಾಕಷ್ಟು ಪ್ರಮಾಣದಲ್ಲಿ ಆದುದರಿಂದಲೂ ಹೊಸ ಪದವೀಧರರು ಇಂತಹ ತರಬೇತಿಯನ್ನು ಪಡೆಯಲು ಆತುರರಾಗಿರುವುದನ್ನು ಕಂಡು ಸರಕಾರದವರು ಈ ಪಠ್ಯಕ್ರಮವನ್ನು ಬದಲಿಸಿ ಅದರಲ್ಲಿ ಬಿ. ಎಡ್. ಹಾಗೂ ಜೀವನ ಶಿಕ್ಷಣ ತರಬೇತಿಯ ಎಲ್ಲ ಅಂಶಗಳು ಒಳಗೊಳ್ಳುವಂತೆ ಮಾಡಿ ಒಂದು ವರುಷದ ಬಿ. ಎಡ್. ಗೆ ಸಮಾನವಾದ D. Ed (Basic) ಎಂಬ ಹೊಸ ಅಭ್ಯಾಸಕ್ರಮವನ್ನು ೧೯೫೩–೫೪ ರಿಂದ ಜಾರಿಯಲ್ಲಿ ತಂದರು.

ಈ ತರಬೇತಿಯು ಮೊದಲು ಬೆಳಗಾಂವಿಯಲ್ಲಿ ಪ್ರಾರಂಭವಾದಾಗ ಅದರಲ್ಲಿ ತರಬೇತಿ ಪಡೆದ ಪದವೀಧರರ ಸಂಖ್ಯೆ ಒಟ್ಟು ೩೩ ಅವರಲ್ಲಿ ೨೦ ಜನ ಕರ್ನಾಟಕದವರು ೯ ಜನ ಮಹಾರಾಷ್ಟ್ರದವರು ಹಾಗೂ ೪ ಜನ ಗುಜರಾತದವರು. ಅನಂತರ ೧೯೪೮ ರಿಂದ ೧೯೫೩ ರ ವರೆಗೆ ತರಬೇತಿ ಪಡೆದ ಬಿ. ಟಿ. ಪದವೀಧರರು ಈ ಶಿಕ್ಷಣವನ್ನು ಪಡೆದವರೆಂದರೆ ೧೨೭ ಜನರೆಂಬುದು ತಿಳಿಯುತ್ತದೆ. ಅವರೆಲ್ಲರೂ ಆ ಕಾಲಕ್ಕೆ ಇದ್ದ ೧೯ ಪ್ರಾಥಮಿಕ ಶಿಕ್ಷಕರ ತರಬೇತಿ ಕೇಂದ್ರಗಳಲ್ಲಿ (೫ ಸರಕಾರಿ ೧೪ ಖಾಸಗಿ) ಇಲ್ಲವೆ ಪ್ರಾಥಮಿಕ ಶಿಕ್ಷಣದ ಮೇಲ್ವಿಚಾರಕರಾಗಿ ಕೆಲಸ ಮಾಡುತ್ತಿದ್ದರು. ಅಷ್ಟರೊಳಗಾಗಿ (೧೯೫೭) ಧಾರವಾಡ ವಿಭಾಗದ ಎಲ್ಲ ತರಬೇತಿ ಸಂಸ್ಥೆಗಳಲ್ಲಿ ಒಂದು ಮುಖ್ಯ ಮೂಲೋದ್ಯೋಗ ಹಾಗೂ ಎರಡು ಉಪ ಮೂಲೋದ್ಯೋಗಗಳನ್ನು ಆಯ್ದುಕೊಂಡು ಆ ಸಂಸ್ಥೆಗಳು ಜೀವನ ಶಿಕ್ಷಣ ಕೇಂದ್ರಗಳಾಗಿ ಮಾರ್ಪಟ್ಟುದರಿಂದ ಸಾಕಷ್ಟು ಜನ ಪ್ರಾಥಮಿಕ ಶಿಕ್ಷಕರು ಈ ಶಿಕ್ಷಣದಲ್ಲಿ ತರಬೇತಿಯನ್ನು ಪಡೆದರು.

ಸ್ನಾತಕೋತ್ತರ ಪದವೀಧರ ಜೀವನ ಶಿಕ್ಷಣ ಕೇಂದ್ರದ ಅಭ್ಯಾಸ ಕ್ರಮವನ್ನು ೧೯೫೩-೫೪ ರಲ್ಲಿ ಬದಲಿಸಿದ್ದರಿಂದ ಎರಡು ವರುಷಗಳ ತರಬೇತಿಯನ್ನು (ಬಿ. ಟಿ. ಹಾಗೂ ಡಿ. ಬಿ. ಇ.) ಒಂದೇ ವರುಷದಲ್ಲಿ ಮುಗಿಸುವಂತಾಯಿತು. ಈ ಕ್ರಮವು ಹಣ ಹಾಗೂ ವೇಳೆಯ ಉಳಿತಾಯವನ್ನು ಮಾಡಿದುದು ತಿಳಿಯುತ್ತದೆ. ಆ ಕಾಲಕ್ಕೆ ಈ ಸಂಸ್ಥೆಯ ಸಂಚಾಲಕತ್ವವನ್ನು ಶ್ರೀ ಮ. ಗು. ಹಂದ್ರಾಳವರು ವಹಿಸಿಕೊಂಡಿದ್ದರು. ಆಗ ಶಿಕ್ಷಣಾರ್ಥಿಗಳಿಗೆ ರೂ. ೩೦/- ಸ್ಟೈಪೆಂಡ ಕೊಡಲಾಗುತ್ತಿದ್ದಿತಲ್ಲದೆ ಅವರಿಂದ ಪ್ರತಿ ಟರ್ಮಿಗೆ ರೂ. ೧೨೦/- ಫೀ ವಸೂಲ ಮಾಡಲಾಗುತ್ತಿದ್ದಿತು. ಅವರಿಗೆ ತರಬೇತಿಯ ಕೊನೆಗೆ D.Ed. (Basic) ಎಂಬ ಡಿಪ್ಲೋಮಾ ಕೊಡಲಾಗುತ್ತಿದ್ದಿತು. ಈ ಶಿಕ್ಷಣ ಕ್ರಮವು ೧೯೫೮-೫೯ ರ ವರೆಗೆ ನಡೆಯಿತು. ಈ ಅವಧಿಯಲ್ಲಿ ೧೮೧ ಜನರು ಈ ಶಿಕ್ಷಣದ ಲಾಭವನ್ನು ಪಡೆಯುವದರ ಜೊತೆಗೆ ವಿವಿಧ ಶೈಕ್ಷಣಿಕ ಸಂಸ್ಥೆಗಳಲ್ಲಿ ನಿಯಮಕಗೊಂಡರು.

ಸನ್ ೧೯೫೯-೬೦ ರ ಸುಮಾರಿಗೆ ನವಮೈಸೂರು ರಾಜ್ಯ ನಿರ್ಮಾಣವಾಗಿ ಮೂರು ವರ್ಷಗಳಾಗಿದ್ದಿತು. ಶ್ರೀ ಜಿ. ರಾಮಚಂದ್ರನ್ ಇವರ ಅಧ್ಯಕ್ಷತೆಯಲ್ಲಿ ನಿಯಮಿಸಲ್ಪಟ್ಟ "ಮೂಲ ಶಿಕ್ಷಣ ಪ್ರಗತಿ ಪರಿಶೀಲನಾ ಸಮಿತಿ" ಯ ವರದಿಯು ಕೇಂದ್ರ ಸರಕಾರದಿಂದ ಪ್ರಕಟಿಸಲ್ಪಟ್ಟು ಕೆಲವೇ ವರುಷಗಳಾಗಿದ್ದವು. ಈ ಎಲ್ಲ ಅಂಶಗಳನ್ನು ಗಮನಿಸಿ ಸರಕಾರವು ಪುನಃ ೧೯೫೯-೬೦ ರಿಂದ ಈ ಸಂಸ್ಥೆಯಲ್ಲಿ ತರಬೇತಿ ಪಡೆದ ಶಿಕ್ಷಕರನ್ನು ಜೀವನ ಶಿಕ್ಷಣ ತರಬೇತಿಗೆ ಆಯ್ಕೆಮಾಡಲು ಪ್ರಾರಂಭಿಸಿದರು. ಇದೇ ಸಂದರ್ಭದಲ್ಲಿಯೇ ದೊಡ್ಡಬಳ್ಳಾಪುರದಲ್ಲಿಯ ಸ್ನಾತಕೋತ್ತರ ಜೀವನ ಶಿಕ್ಷಣ ಮಹಾವಿದ್ಯಾಲಯವು ಈ ಸಂಸ್ಥೆಯಲ್ಲಿ ವಿಲೀನವಾದುದರಿಂದ ಈ ಸಂಸ್ಥೆಯು ನಮ್ಮ ರಾಜ್ಯದಲ್ಲಿ ಜೀವನ ಶಿಕ್ಷಣವನ್ನು ನೀಡುವ ಏಕೈಕ ಸಂಸ್ಥೆಯಾಗಿ ಮಾರ್ಪಟ್ಟಿತು,

ಹಾಗೂ ಹೆಚ್ಚಿನ ಉತ್ಸಾಹದಿಂದ ಅದು ತನ್ನ ಕಾರ್ಯ ಚಟುವಟಿಕೆಯನ್ನು ಮುಂದುವರಿಸುವಂತಾಯಿತು. ರಾಜ್ಯದ ಎಲ್ಲ ತರಬೇತಿ ಸಂಸ್ಥೆಗಳಲ್ಲಿ ಏಕರೂಪವಾದ ಅಭ್ಯಾಸಕ್ರಮ ಜಾರಿಗೆ ಬಂದು ಎಲ್ಲ ತರಬೇತಿ ವಿದ್ಯಾಲಯದಲ್ಲಿ ಮೂಲಶಿಕ್ಷಣ ಕ್ರಮಕ್ಕೆ ಮಾನ್ಯತೆ ದೊರೆಯಿತು. ಮತ್ತು ಈ ವಿದ್ಯಾಲಯದಲ್ಲಿ ಸ್ನಾತಕೋತ್ತರ ತರಬೇತಿ ಪಡೆದ ಪದವೀಧರ ಶಿಕ್ಷಕರೇ ಸಾಮಾನ್ಯವಾಗಿ ಪ್ರಾಥಮಿಕಶಿಕ್ಷಣ ತರಬೇತಿ ವಿದ್ಯಾಲಯಗಳಲ್ಲಿ ಪ್ರಶಿಕ್ಷಕರೆಂದು ನಿಯಮಿಸಲ್ಪಡುತ್ತಿದ್ದರು. ಮತ್ತು ಶಾಲಾ ತಪಾಸಣಾ ಅಧಿಕಾರಿಗಳೆಂದು ನೇಮಿಸುವಾಗ್ಗೆ ಸಹ ಜೀವನ ಶಿಕ್ಷಣ ವಿಧಾನದಲ್ಲಿ ತರಬೇತಿ ಹೊಂದಿದವರಿಗೆ ಪ್ರಾಶಸ್ತ್ಯ ಕೊಡಲಾಗುತ್ತಿತ್ತು. ಹೀಗಾಗಿ ಸ್ನಾತಕೋತ್ತರ ಜೀವನ ಶಿಕ್ಷಣ ತರಬೇತಿ ಕೇಂದ್ರ ಶಿಕ್ಷಕ ತರಬೇತಿ ಮತ್ತು ಪ್ರಾಥಮಿಕ ಶಿಕ್ಷಣದ ಪುನರುಜ್ಜೀವನ ಕಾರ್ಯದಲ್ಲಿ ಪ್ರೇರಕ ಸಂಸ್ಥೆಯಾಗಿ ಕರ್ನಾಟಕದಲ್ಲಿ ಕಾರ್ಯವೆಸಗಿದಂತಾಗಿದೆ. ಮುಂಬೈ ಕರ್ನಾಟಕದಲ್ಲಿ ಮುಖ್ಯವಾಗಿ ಹೊಂದಿಕೆ ಕ್ಷೇತ್ರದಲ್ಲಿ ಪ್ರಾಥಮಿಕ ಶಿಕ್ಷಣ ಕ್ರಮದಲ್ಲಿ ಸಾಧಿಸಿದ ಪ್ರಗತಿ ನಿಜಕ್ಕೂ ಉಲ್ಲೆಖನೀಯವಾಗಿದೆ. ಅದು ಅಖಿಲಭಾರತ ಸಮೀಕ್ಷೆಗಳಲ್ಲಿಯೂ ದಾಖಲಾಗಿದೆ. ಉತ್ಸಾಹ, ನಂಬಿಗೆ ಮತ್ತು ಸತತೋದ್ಯೋಗದಿಂದ ಉತ್ತಮ ಪ್ರಾಥಮಿಕ ಶಿಕ್ಷಣ ಕಟ್ಟಲು ಸಾಧ್ಯ ಎಂಬುದನ್ನು ಸ್ನಾತಕೋತ್ತರ ಜೀವನ ಶಿಕ್ಷಣ ಕೇಂದ್ರ ತನ್ನ ಕಾರ್ಯಚಟುವಟಿಕೆಗಳಿಂದ ಮುಂದಾಳ್ತನದಿಂದ ಸಿದ್ಧಮಾಡಿ ತೋರಿಸಿದೆ.

೧೯೫೮ ರಲ್ಲಿಯೇ ರಾಜ್ಯಸರಕಾರದವರು ಕೊಡಮಾಡಿದ ಆದೇಶದ ಮೇರೆಗೆ ಧಾರವಾಡದಲ್ಲಿ ಈ ಸಂಸ್ಥೆಯು ಜೀವನದ ಶಿಕ್ಷಣ ಸಪ್ತಾಹದ ಆಚರಣೆಯನ್ನು ಸಂಘಟಿಸಿ ಅದರ ಅಂಗವಾಗಿ ಎರಡು ದಿನಗಳ ಚರ್ಚಾಗೋಷ್ಠಿಯನ್ನು ಸಂಘಟಿಸಿತು. ಅದರ ಫಲವಾಗಿ "ಪ್ರಗತಿ ಪರಿಶೀಲನೆ" ಎಂಬ ಹೊತ್ತಿಗೆ ಹೊರಬಂದಿತು. ಅನಂತರ ೧೯೫೯ ರಲ್ಲಿ ಅಂಥ ವಿಚಾರಗೋಷ್ಠಿ ಜನೇವರಿ ತಿಂಗಳು ೨೧, ೨೨ ರಂದು ಬೆಳಗಾಂವಿಯಲ್ಲಿ ನಡೆದು "ಜೀವನ ಶಿಕ್ಷಣ ವಿಚಾರ ಮಂಥನ" ಎಂಬ ಪುಸ್ತಕವನ್ನು ಹೊರ-ತರಲಾಯಿತು.

ಮರುವರುಷ "ಭಾರತ ಸರಕಾರದ ವಿದ್ಯಾಶಾಖೆಯ ಶಿಕ್ಷಣ ಉಪಸಲಹೆಗಾರರಾದ ಡಾ॥ ಶುಕ್ಲಾ ಎಂ. ಎ. ಪಿ. ಎಚ್. ಡಿ. ಅವರ ೨೭–೮–೧೯೫೯ ರ ಪತ್ರ ನಂ. F. ೩೦–೧–೧೯೫೯ B2" ದಲ್ಲಿ ಕಾಣಿಸಿದ ಆದೇಶದಂತೆ ರಾಜ್ಯದಾದ್ಯಂತ ೨೦–೧–೧೯೬೦ ರಿಂದ ೨೬–೧–೧೯೬೦ ರ ವರೆಗೆ ಜೀವನ ಶಿಕ್ಷಣ ಸಪ್ತಾಹವನ್ನು ಆಚರಿಸಲು ಆಜ್ಞೆ ನೀಡಿ ಈ ಆಚರಣೆಗಾಗಿ ರೂ. ೭೫೦೦/– ಗಳನ್ನು ಸರಕಾರ ದಯಪಾಲಿಸಿದ್ದು ತಿಳಿಯುತ್ತದೆ. ಸರಕಾರದ ಆದೇಶದಂತೆ ಅಖಿಲ ಮೈಸೂರು ರಾಜ್ಯದ ಜೀವನ ಶಿಕ್ಷಣ ವಿಚಾರಗೋಷ್ಠಿಯು ೧೯೬೦ ಫೆ. ೧೧ರಿಂದ ಮೂರು ದಿನಗಳ ವರೆಗೆ ನಡೆದು ಅದರ ಅಂಗವಾಗಿ "ಜೀವನ ಶಿಕ್ಷಣ ಸಪ್ತಾಹ ದರ್ಶಿಕೆ" ಎಂಬ

ಹೊತ್ತಿಗೆಯನ್ನು ಹೊರಡಿಸಲಾಯಿತು. ಈ ಎಲ್ಲ ಸಂಗತಿಗಳು ಸಂಸ್ಥೆಯ ಕಾರ್ಯ ಚಟುವಟಿಕೆಯಲ್ಲಿ ನವ ಉತ್ಸಾಹವನ್ನು ತುಂಬಿದವೆಂದು ಹೇಳಬಹುದು.

ಈ ಅವಧಿಯಲ್ಲಿ ಇನ್ನೂ ಅನೇಕ ಯೋಜನೆಗಳು ಈ ಸಂಸ್ಥೆಗೆ ಕೊಡ ಮಾಡಲ್ಪಟ್ಟವು. ಸಾಲೆ ಕೇವಲ ಮಕ್ಕಳ ಶಿಕ್ಷಣದ ಹೊಣೆಹೊತ್ತ ಒಂದು ಸಂಸ್ಥೆ ಯಾಗಿರದೆ, ಗ್ರಾಮದ ಪುರೋಭಿವೃದ್ಧಿಯ ಕೇಂದ್ರ ಬಿಂದುವಾಗಿ ಪರಿಣಮಿಸಿತು. ಶಿಕ್ಷಕರು ಅದರ ನೇತಾರರಾದರು. ಈ ವಿಚಾರದ ಅನುಷ್ಠಾನಕ್ಕಾಗಿ ಆಯ್ದ ಕೆಲವು ಶಾಲೆಗಳನ್ನು ಸಮಾಜ ಕೇಂದ್ರ ಶಾಲೆಗಳಾಗಿ (Community Centre Schools) ಪರಿವರ್ತನಗೊಳಿಸಿ ಅಲ್ಲಿ ಚಟುವಟಿಕೆಯನ್ನು ಸಂಘಟಿಸುವ ಹೊಣೆ ಯನ್ನು ಈ ಸಂಸ್ಥೆಗೆ ಕೊಟ್ಟರು. ಆ ಶಾಲೆಗಳ ಮುಖ್ಯ ಶಿಕ್ಷಕರು ಕಲಿಸುವದರ ಜೊತೆಗೆ ಸಮಾಜದೊಡನೆ ಸಂಪರ್ಕ ಬೆಳಸಿ ಅವರ ಶಿಕ್ಷಣ ಆರೋಗ್ಯ ಹಾಗೂ ಮನರಂಜನೆಯ ಕಡೆಗೆ ಗಮನ ಕೊಡುವಂತೆ ವ್ಯವಸ್ಥೆ ಮಾಡಿದರು. ಇಂಥ ಶಾಲೆಯ ಗುರುಗಳಿಗೆ ಈ ಬಗ್ಗೆ ತರಬೇತಿಕೊಟ್ಟು ಅವರಿಗೆ ತಾತ್ಕಾಲಿಕ ಉಪಚಾರಕ್ಕಾಗಿ ಔಷಧಿಗಳನ್ನು ಒದಗಿಸಿದರು. ಮನರಂಜನೆಯ ಕಾರ್ಯಕ್ರಮಗಳಿಗೆ ಬೇಕಾಗುವ ಸಾಹಿತ್ಯ ಒದಗಿಸಿದರು. ಕಾರ್ಯಕ್ರಮ ನಡೆಯಿಸಲು ಬೇಕಾಗುವ ಬಯಲು ನಾಟ್ಯ ಗೃಹಗಳನ್ನು ಕಟ್ಟಿಸಲು ಸಹಾಯಧನ ಒದಗಿಸಿದರಲ್ಲದೆ ಪ್ರತಿ ವರುಷ ಮಕ್ಕಳಿಗೆ ಹಾಗೂ ಪ್ರೌಢರಿಗಾಗಿ ಪಂದ್ಯಾಟಗಳನ್ನು ಜರುಗಿಸಲು ಸಹಾಯಧನ ನೀಡಲಾಗಿತ್ತು ಶಾಲೆ ಹಾಗೂ ಸಮಾಜದಲ್ಲಿ ಮಧುರ ಬಾಂಧವ್ಯ ಉಂಟಾಗಲು ಈ ಕ್ರಮ ನೆರ ವಾಯಿತು. ಕಾಲಕಾಲಕ್ಕೆ ನಡೆಯುವ ಸಭೆ ಸಮಾರಂಭಗಳಲ್ಲಿ ಊರವರು ಹೆಚ್ಚಿನ ಪ್ರಮಾಣದಲ್ಲಿ ಪಾಲುಗೊಂಡು ತಮ್ಮ ವಿಚಾರಗಳನ್ನು ವ್ಯಕ್ತಮಾಡಲು ಅನುವು ದೊರೆ ಯಿತಲ್ಲದೆ ಸಾಲೆ ಸರಕಾರದ ಸಂಸ್ಥೆಯಾಗಿರದೆ ಸಮಾಜದ ಸಂಸ್ಥೆಯಾಗಿ ಪರಿಣಮಿ-ಸಿತು. ಇದರ ಜೊತೆಗೆ ಪ್ರೌಢರಿಗಾಗಿ ವಯಸ್ಕರ ಶಿಕ್ಷಣ ವರ್ಗಗಳು ನಡೆಯುತ್ತಿದ್ದವು ಹಾಗೂ ಅವರು ಕಲಿತುದನ್ನು ಮುಂದುವರಿಸಲು ಅನುಕೂಲವಾಗುವಂತೆ ಈ ಕೇಂದ್ರ ಗಳ ವತಿಯಿಂದ ಸಂಚಾರೀವಾಚನಾಲಯದ ಯೋಜನೆಯೂ ಕಾರ್ಯರೂಪಕ್ಕೆ ಬಂದಿತು. ಇಂಥ ೮ ಸಂಚಾರೀ ವಾಚನಾಲಯಗಳೂ ಈ ಸಂಸ್ಥೆಯ ಆಧೀನದಲ್ಲಿದ್ದು ಕಾರ್ಯಮಾಡುತ್ತಿದ್ದವು. ಒಂದು ಕೇಂದ್ರಸಾಲೆಗೆ ೧೦–೧೨ ಹಳ್ಳಿಗಳು ಜೋಡಿಸಲ್ಪ-ಟ್ಟಿದ್ದು ಆ ಪ್ರತಿಯೊಂದು ಹಳ್ಳಿಗೂ ಒಂದೊಂದು ಪುಸ್ತಕಗಳನ್ನಿಡಲು ಪೆಟ್ಟಿಗೆಯನ್ನು ಕೊಡಲಾಗಿತ್ತು. ಆ ಪುಸ್ತಕಗಳು ನಿಯಮಿತ ಕಾಲಕ್ಕೆ ಹಳ್ಳಿಯಿಂದ ಹಳ್ಳಿಗೆ ಒಂದು ಕ್ರಮದಿಂದ ಸುತ್ತುತ್ತಿದ್ದವು. ಈ ಪುಸ್ತಕಗಳನ್ನು ಹಳ್ಳಿಯಿಂದ ಹಳ್ಳಿಗೆ ಮುಟ್ಟಿಸುವ ವೆಚ್ಚವನ್ನೂ ಕೂಡಾ ಸರಕಾರವೇ ವಹಿಸಿಕೊಳ್ಳುತ್ತಿತ್ತು. ಪ್ರತಿವರ್ಷಕ್ಕೊಮ್ಮೆ ಈ ವಾಚನಾಲಯಗಳಿಗೆ ಹೊಸ ಪುಸ್ತಕಗಳನ್ನು ಸೇರಿಸಲಾಗುತ್ತಿತ್ತು. ಈ ಎಲ್ಲ ವ್ಯವಸ್ಥೆ ಯನ್ನು ನೋಡಿಕೊಳ್ಳಲು ಒಬ್ಬ ಕರ್ಣಿಕರನ್ನು ಸಂಸ್ಥೆಗೆ ಒದಗಿಸಲಾಗಿದ್ದಿತು.

ಸ್ನಾತಕೋತ್ತರ ಜೀವನ ಶಿಕ್ಷಣ ಮಹಾವಿದ್ಯಾಲಯವು ರಾಜ್ಯದಲ್ಲಿಯೇ ಏಕೈಕ ಸಂಸ್ಥೆಯಾಗಿ ೧೯೪೭ ರಲ್ಲಿ ಬೆಳಗಾಂವಿಯಲ್ಲಿ ಪ್ರಾರಂಭವಾಗಿ ೧೯೪೮ ರಿಂದ ಧಾರವಾಡ ದಲ್ಲಿ ಸತತವಾಗಿ ೨೫ ವರುಷಗಳ ವರೆಗೆ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಸೇವೆಯನ್ನು ಸಲ್ಲಿಸಿದೆ. ಈ ಸಂಸ್ಥೆ ಧಾರವಾಡದಲ್ಲಿ ಪ್ರಾರಂಭವಾದಾಗ ಅದರ ಪ್ರಿನ್ಸಿಪಾಲರೆಂದು ಶ್ರೀ ಕೆ. ಬಿ. ತೇರಗಾಂವಕರರು ಸಂಸ್ಥೆಯ ಸಂಚಾಲಕತ್ವವನ್ನು ವಹಿಸಿಕೊಂಡರು. ಅವರು ಜೀವನದ ಶಿಕ್ಷಣದ ಬಗ್ಗೆ ಸಲ್ಲಿಸಿದ ಸೇವೆ ಅವಿಸ್ಮರಣೀಯ ವಾದುದು. ಪಾಠದ ಟಿಪ್ಪಣಿ ಮೂಲೋದ್ಯೋಗದ ದಾಖಲೆಗಳು ಮುಂತಾದವುಗಳ ಬಗ್ಗೆ ತುಂಬಾ ಶ್ರಮವಹಿಸಿ ಕಾರ್ಯ ಮಾಡಿದ್ದಾರೆ. ಅವರು ಈ ಪ್ರಿನ್ಸಿಪಾಲ ಹುದ್ದೆಯನ್ನು ವಹಿಸಿಕೊಂಡಾಗ ಅದು ದ್ವಿತೀಯ ದರ್ಜೆಯ ಹುದ್ದೆಯಾಗಿದ್ದಿತು. ಅವರೇ ಈ ಸಂಸ್ಥೆಯ ಸಂಚಾಲಕತ್ವವನ್ನು ಪುನಃ ೧೯೫೭ ರಿಂದ ೧೯೫೯ ರ ವರೆಗೆ ವಹಿಸಿಕೊಂಡಾಗ ಪ್ರಿನ್ಸಿಪಾಲರ ಹುದ್ದೆಯ ಪ್ರಥಮದರ್ಜೆಯದಾಗಿದ್ದಿತು. ಈ ಸಂಸ್ಥೆಯ ದ್ವಿತೀಯ ಪ್ರಿನ್ಸಿಪಾಲರೇ ಶ್ರೀ ಮ. ಗು. ಹಂದ್ರಾಳರು. ಇವರು ಈ ಸಂಸ್ಥೆಯಲ್ಲಿ ೧೯೫೩–೫೬ ರ ವರೆಗೆ (ದ್ವಿತಿಯ ದರ್ಜೆಯವರಾಗಿ) ಹಾಗೂ ೧೯೬೨–೧೯೬೫ ರ ವರೆಗೂ (ಪ್ರಥಮ ದರ್ಜೆಯವರಾಗಿ) ವಹಿಸಿಕೊಂಡಿದ್ದರು. ಇವರು ವರ್ಧಾ ಆಶ್ರಮದಲ್ಲಿ ತರಬೇತಿಯನ್ನು ಪಡೆದವರಾಗಿದ್ದು ಪ್ರಾರಂಭದಿಂದಲೇ ಈ ಶಿಕ್ಷಣದಲ್ಲಿ ಆಸಕ್ತಿಯಿಂದ ಕಾರ್ಯಗೈದವರಾಗಿದ್ದರಲ್ಲದೆ "ಮೂಲ ಶಿಕ್ಷಣ"ವೆಂಬ ಗ್ರಂಥವನ್ನು ರಚಿಸಿ ಈ ಶಿಕ್ಷಣದಲ್ಲಿ ಕಾರ್ಯಮಾಡುವ ಶಿಕ್ಷಕರಿಗೆ ಮಾರ್ಗದರ್ಶಿಗಳಾ-ಗಿರುವರು. ಶ್ರೀ ಎಸ್. ವ್ಹಿ. ಜೇವೂರವರು ಈ ಸಂಸ್ಥೆಯ ಪ್ರಿನ್ಸಿಪಾಲರೆಂದು ೧೯೫೬ ರಲ್ಲಿಯೇ ಅಧಿಕಾರ ವಹಿಸಿಕೊಂಡರು ಅದೇ ಕಾಲಕ್ಕೆ ಪ್ರಿನ್ಸಿಪಾಲರ ಹುದ್ದೆ ಪ್ರಥಮ ದರ್ಜೆಗೆ ಏರಿತು. ಇವರು ಈ ಹುದ್ದೆಯಲ್ಲಿ ಒಂದು ವರ್ಷಗಳ ಕಾಲ ಕೆಲಸ ಮಾಡಿ-ದರು. ಈ ಸಂಸ್ಥೆಯಲ್ಲಿ ೧೮ ಜನ ಪ್ರಿನ್ಸಿಪಾಲರೆಂದು ಕಾರ್ಯ ನಿರ್ವಹಿಸಿದ್ದಾರೆ. ಅವರೆಲ್ಲರೂ ಈ ಸಂಸ್ಥೆಯ ಶ್ರೇಯಸ್ಸಿಗಾಗಿ ಶ್ರಮವಹಿಸಿ ಕಾರ್ಯಮಾಡಿದ್ದಾರೆ. ಅವರಲ್ಲಿ ಶ್ರೀ ಎಸ್. ಎಸ್. ಹುಕ್ಕೇರಿ (೧೯೫೯–೧೯೬೧) ಶ್ರೀ ಕೆ. ರಾಮಚಂದ್ರ (೧೯೬೧–೬೨) ಶ್ರೀ ಎಸ್. ಎಸ್. ಕೃಷ್ಣರಾವ (೧೯೬೫–೬೬) ಶ್ರೀಮತಿ ಪಿ ಎ. ಭಾಸ್ಕರ (೧೯೬೬–೬೭) ಹಾಗೂ ಶ್ರೀ ಎಸ್. ಎಚ್. ನಾಯಿಕ (೧೯೭೦–೭೪) ಇವರು ಕೆಲವರಾಗಿದ್ದಾರೆ. ಈ ಸಂಸ್ಥೆಯು ೧೯೪೭ ರಿಂದ ೧೯೭೪ ರ ವರೆಗೆ ಅವಿ-ಶ್ರಾಂತವಾಗಿ ಜೀವನ ಶಿಕ್ಷಣದ ಪ್ರಗತಿಗಾಗಿ ಹಾಗೂ ಸಮಾಜದ ಏಳ್ಗೆಗಾಗಿ ಅನೇಕ ಮುಖವಾಗಿ ಕಾರ್ಯಮಾಡುವದರ ಜೊತೆಗೆ ಕಾರ್ಯಕರ್ತರನ್ನು ತಯಾರಿಸಿ ಅವರೊಡನೆ ಅವಿರತ ಸಂಪರ್ಕವನ್ನಿರಿಸಿಕೊಂಡು ಮಾಡಿದ ಕಾರ್ಯ ಶಿಕ್ಷಣ ಕ್ಷೇತ್ರ-ದಲ್ಲಿಯೇ ಮೈಲುಗಲ್ಲಾಗಿ ನಿಲ್ಲುವಂತೆ ಮಾಡಿದೆ. ಜಾಗತಿಕ ಶಿಕ್ಷಣ ರಂಗದ ಇತಿಹಾಸ ಪುಟಗಳಲ್ಲಿ ಜೀವನ ಶಿಕ್ಷಣಕ್ಕೆ ಒಂದು ಸ್ಥಾನ ಮೀಸಲಾಗಿದ್ದರೆ ಅದರಲ್ಲಿ ಧಾರವಾಡದ ಸ್ನಾತಕೋತ್ತರ ಜೀವನ ಶಿಕ್ಷಣ ಮಹಾವಿದ್ಯಾಲಯದ ಹೆಸರು ಅಚ್ಚಳಿಯದೆ ಧ್ರುವ

ತಾರೆಯಂತೆ ಸದಾವಕಾಲವೂ ಮಿನುಗುತ್ತ ಉಳಿಯುತ್ತದೆ. ಇಲ್ಲಿಯವರೆಗೆ ವಿವರಿಸಿದ ಕೆಲಸ ಕಾರ್ಯಗಳು ಈ ಸಂಸ್ಥೆಯ ಅಧಿಕಾರ ವ್ಯಾಪ್ತಿಯ ಕಕ್ಷೆಯಲ್ಲಿ ಬರುತ್ತಿದ್ದರೆ ಈ ಸಂಸ್ಥೆ ಕೈಗೆತ್ತಿಕೊಂಡ ಸಾಮಾಜಿಕ ಕಾರ್ಯಕ್ರಮಗಳು ಈ ಸಂಸ್ಥೆಯ ಹೆಸರು ನಿರ್ಮಲ ಮನಸ್ಸಿನ ಹಳ್ಳಿಗರ ಮನದಲ್ಲಿ ಮನೆಮಾಡಿಕೊಂಡು ಉಳಿದಿದೆ. ಧಾರವಾಡದ ಸುತ್ತಲಿನ ಹಳ್ಳಿಗಳಲ್ಲಿಯ ಹಿರಿಯರಲ್ಲನೇಕರು "ಗಾಂಧೀ ಅಜ್ಜನ ಸಾಲಿಯವರು ಕೆಲಸಕ್ಕೆ ಬರುತ್ತಿದ್ದರಲ್ಲರೀ ಅವರೀಗ್ಯಾಕೋ ಬಂದೇ ಇಲ್ಲವಲ್ಲ?" ಎನ್ನುವ ಉದ್ಗಾರ ಈ ಸಂಸ್ಥೆಯ ಬಗೆಗಿದ್ದ ಅವರ ಅಭಿಮಾನವನ್ನು ಎತ್ತಿತೋರಿಸುತ್ತದೆ. ಅಲ್ಲದೆ ಇವರು ಮಾಡಿದ ಕಾರ್ಯಗಳು ಇನ್ನೂ ಹಳ್ಳಿಗಳಲ್ಲಿ ಅನೇಕರನ್ನು ತಮ್ಮತ್ತ ಕೈಮಾಡಿ ಕರೆಯುತ್ತಲಿವೆ. ಈ ಸಂಸ್ಥೆಯು ಸ್ಥಾಪಿಸಿಕೊಂಡ "ಹಳೆಯ ವಿದ್ಯಾರ್ಥಿ ಬಳಗ" ಈ ದಿಶೆಯಲ್ಲಿ ಗಣನೀಯ ಕಾರ್ಯಗಳನ್ನು ಮಾಡಿದೆ.

ಈ ಹಳೆಯ ವಿದ್ಯಾರ್ಥಿಗಳ ಬಳಗ ಮೊದಲ ಬಾರಿಗೆ ೧೯೪೮ ರಲ್ಲಿ ರೂಪುಗೊಂಡಿತು. ಅಂದರೆ ಧಾರವಾಡದಲ್ಲಿ ಜೀವನ ಶಿಕ್ಷಣ ತರಬೇತಿಯನ್ನು ಪೂರ್ತಿಗೊಳಿಸಿ ತಮ್ಮ ಕಾರ್ಯಕ್ಷೇತ್ರಕ್ಕೆ ಮರಳುವ ಮುನ್ನಾದಿನ ನಡೆಯುವ "ದೀಪದಾನ" ಸಮಾರಂಭದ ದಿನದಂದು, ಈ ದೀಪದಾನ ಸಮಾರಂಭವು ಒಂದು ವೈಶಿಷ್ಟ್ಯಪೂರ್ಣ ಸಮಾರಂಭವಾಗಿರುತ್ತಿದ್ದಿತು. ಅಂದಿನ ದಿನ ತರಬೇತಿಯನ್ನು ಪೂರ್ತಿಗೊಳಿಸುತ್ತಿರುವವರನ್ನು ಹಳೆಯ ಬಳಗದ ಸದಸ್ಯರೊಡನೆ ಸೇರಿಸಿಕೊಳ್ಳುತ್ತಿದ್ದರು. ಅಂದಿನ ಸಮಾರಂಭದ ಅತಿಥಿಗಳು ಕೊಡಮಾಡುವ ಜ್ಯೋತಿಯನ್ನು ಕುಲಪತಿಗಳು, ಶಿಕ್ಷಕರು, ಹಳೆಯ ವಿದ್ಯಾರ್ಥಿಗಳ ಬಳಗದ ಸದಸ್ಯರಿಂದ ಮುಂದುವರಿದು ಆ ವರುಷ ತರಬೇತಿಯನ್ನು ಪೂರ್ಣಗೊಳಿಸುತ್ತಿರುವ ವಿದ್ಯಾರ್ಥಿಗಳವರೆಗೆ ಸಾಗಿದ ನಂತರ ಎಲ್ಲರೂ ಜ್ಯೋತಿಯಿರುವ ಪ್ರಣತಿಯನ್ನು ಕೈಯಲ್ಲಿ ಹಿಡಿದು—"ನನ್ನ ಶಿಕ್ಷಣ ಕ್ಷೇತ್ರದಲ್ಲಿ ಸೇರುವ ಪ್ರತಿಯೊಂದು ವ್ಯಕ್ತಿಯ ಶರೀರ, ಬುದ್ಧಿ ಮತ್ತು ಹೃದಯ ಇವುಗಳ ಸಮನ್ವಿತ ವಿಕಾಸವು ಜೀವನದ ಉಪಯುಕ್ತ ಚಟುವಟಿಕೆಗಳ ಮುಖಾಂತರ ಆಗುವಂತೆಯೂ ತನ್ಮೂಲಕ ನಮ್ಮ ಸಮಾಜದಲ್ಲಿ ಸತ್ಯ, ಅಹಿಂಸೆ, ನ್ಯಾಯ ಮತ್ತು ಸಮತೆ ಇವು ರೂಢವಾಗಿ, ಸಾತ್ವಿಕ, ವೈಜ್ಞಾನಿಕ ಮತ್ತು ಪ್ರಗತಿಶೀಲ ಸಂಘ ಶಕ್ತಿ ಬೆಳೆಯುವಂತೆಯೂ, ಜೀವ ಜೀವಗಳಲ್ಲಿ ಶೋಷಣೆ ಅಳಿಯುವಂತೆಯೂ ನಾನು ಮನ ಮುಟ್ಟಿ ಪ್ರಯತ್ನಿಸುವೆನೆಂದು ರಾಷ್ಟ್ರಪಿತನಿಂದ ಪಡೆದ ಈ ಜ್ಯೋತಿಯ ಸಾಕ್ಷಿಯಾಗಿ ಪ್ರತಿಜ್ಞೆಗೈಯುತ್ತೇನೆ." ಎಂದು ಪ್ರತಿಜ್ಞೆಗೈದನಂತರ ಕ್ರಮವಾಗಿ ಎಲ್ಲರೂ ಭಾರತದ ನಕಾಶದ ಬಾಹ್ಯರೇಷೆಯ ಮೇಲೆ ಹಾಗೂ ರಾಜ್ಯದ ಬಾಹ್ಯರೇಷೆಯ ಮೇಲೆ ತಮ್ಮ ತಮ್ಮ ಜ್ಯೋತಿಯುಕ್ತ ಹಣತೆಗಳನ್ನಿಟ್ಟು ಮೌನವಾಗಿ ನಿರ್ಗಮಿಸುತ್ತಿದ್ದರು. ಈ ದೃಶ್ಯವು ನಿಜಕ್ಕೂ ಹೃದಯ ಸ್ಪರ್ಶಿಯೂ ಭಾವಾವೇಶಪೂರಿತವೂ ಆಗಿರುತ್ತಿದ್ದಿತು. ಆ ನೆನೆಪು ಮರುಕಳಿಸಿದಾಗಲೆಲ್ಲ ದೇಹದಲ್ಲಿ ವಿದ್ಯುತ್ ಸಂಚಾರವಾದಂತಾಗಿ ಕಾರ್ಯಕರ್ತರಲ್ಲಿ ಕಾರ್ಯಪ್ರಜ್ಞೆಯನ್ನು ಜಾಗ್ರತಗೊಳಿಸುತ್ತಿದ್ದಿತು. ಪ್ರತಿವರುಷವೂ

ನಡೆಯುತ್ತಿರುವ ಈ ಕಾರ್ಯಕ್ರಮವು ಬಳಗದ ಸದಸ್ಯರನ್ನು ಕಾರ್ಯ ಪ್ರವೃತ್ತಗೊಳಿಸುವದರಲ್ಲಿ ನೆರವಾಗುತ್ತಿದ್ದಿತು.

ಹಳೆಯ ವಿದ್ಯಾರ್ಥಿಗಳ ಸಂಘವು ತನ್ನ ಕಾಲುಶತಮಾನಗಳ ಅವಧಿಯಲ್ಲಿ ಅನೇಕ ಚಟುವಟಿಕೆಗಳನ್ನು ಸಂಘಟಿಸಿದೆ. ಅದು ೧೯೫೩ "ಗಾಂಧೀ ವಿಚಾರ" ಎಂಬ ಗ್ರಂಥವನ್ನು ಪ್ರಕಟಗೊಳಿಸಿತು. ೧೯೫೮ ರಲ್ಲಿ "ಪ್ರಗತಿ ಪರಿಶೀಲನೆ" ೧೯೫೯ ರಲ್ಲಿ "ಜೀವನ ಶಿಕ್ಷಣ ವಿಚಾರ ಮಂಥನ" ೧೯೬೦ ರಲ್ಲಿ "ಜೀವನ ಶಿಕ್ಷಣ ಸಪ್ತಾಹ ದರ್ಶಿಕೆ" ಎಂಬ ಹೊತ್ತಿಗೆಗಳನ್ನು ಪ್ರಕಟಿಸುವಲ್ಲಿ ಮುಂದಾಯಿತು. ಈ ಸಂಸ್ಥೆಯು ೧೯೬೩ ರಲ್ಲಿ ರಾಷ್ಟ್ರಕ್ಕೆ ಒದಗಿದ ವಿಪತ್ತಿನ ಪ್ರಸಂಗದಲ್ಲಿ ಸ್ಥಳೀಯ ಸಂಸ್ಥೆಯೊಂದಿಗೆ ಕೂಡಿಕೊಂಡು ೧೦–೨–೬೩ ರಂದು ಒಂದು ಕಾರ್ಯಕ್ರಮವನ್ನು ಸಂಘಟಿಸಿ ರಾಷ್ಟ್ರೀಯ ರಕ್ಷಣಾ ನಿಧಿಗೆ ರೂ. ೨೯೩/– ನ್ನು ಕೂಡಿಸಿಕೊಟ್ಟು ತನ್ನ ಪಾಲಿನ ಅಳಿಲು ಸೇವೆಯನ್ನು ಸಲ್ಲಿಸಿತು. ದಿನಾಂಕ ೪–೩–೧೯೬೪ ರಂದು ಇಂಥದೇ ಇನ್ನೊಂದು ಕಾರ್ಯಕ್ರಮವನ್ನು ಸಂಘಟಿಸಿ ಆದರಿಂದ ಬಂದ ಹಣವನ್ನು ಹಾವೇರಿಯ ಆರ್ಟ್ಸ ಮತ್ತು ಸಾಯಿನ್ಸ ಕಾಲೇಜಿಗೆ ಸಲ್ಲಿಸಿ ಒಂದು ಸಂಸ್ಥೆಯು ಇನ್ನೊಂದು ಶೈಕ್ಷಣಿಕ ಸಂಸ್ಥೆಯ ಬೆಳವಣಿಗೆಗೆ ನೆರವು ನೀಡಿದ ನಿಸ್ವಾರ್ಥ ಸೇವೆಯ ಸಂಕೇತವಾಗಿ ಉಳಿದುಕೊಂಡಿದೆ. ಇಂಥ ಅನೇಕ ಶೈಕ್ಷಣಿಕ ಕಾರ್ಯಕ್ರಮಗಳನ್ನು ಈ ಸಂಸ್ಥೆಯು ಸಂಘಟಿಸುತ್ತ ಬಂದಿದೆ.

ಕಾಲಕಾಲಕ್ಕೆ ಈ ಸಂಸ್ಥೆಯನ್ನು ಸಂದರ್ಶಿಸಿದ ರಾಷ್ಟ್ರಮಟ್ಟದ ಶಿಕ್ಷಣ ತಜ್ಞರು ತಮ್ಮ ಒಳ್ಳೆಯ ಅಭಿಪ್ರಾಯಗಳನ್ನು ಬಿಟ್ಟುಹೋಗಿದ್ದಾರೆ. ಹೀಗೆ ಸಂದರ್ಶನವಿತ್ತ ಮಹನೀಯರಲ್ಲಿ ಶ್ರೀ ಪಟ್ಟಾಭಿಸೀತಾರಾಮಯ್ಯನವರು, ಯೋಜನಾ ಆಯೋಗದ ಸಲಹೆಗಾರರಾದ ಶ್ರೀ ಎಸ್. ವ್ಹಿ. ರಾಮಮೂರ್ತಿ, ಶ್ರೀ ಬಿ. ಜಿ. ಖೇರ, ಶ್ರೀ ಜಿ. ರಾಮಚಂದ್ರನ್, ಶ್ರೀ ಹುಮಾಯೂನ ಕಬೀರ, ಶ್ರೀ ಬಿ. ಡಿ. ಜತ್ತಿ, ಶ್ರೀ ಪಿ. ವ್ಹಿ. ರಾಮರಾವ, ಶ್ರೀ ಬಿ. ಎನ್. ದಾತಾರ, ಶ್ರೀ ದಿನಕರರಾವ ದೇಸಾಯಿ, ಡಾ. ಜೆ. ಸಿ. ಕುಮಾರಪ್ಪ ಮುಂತಾದವರು ಕೆಲವರಾಗಿದ್ದಾರೆ.

ಸನ್ ೧೯೬೪ ರಲ್ಲಿ ಭಾರತೀಯ ಶಿಕ್ಷಣದ ಇತಿಹಾಸದಲ್ಲಿ ಒಂದು ಅವಿಸ್ಮರಣೀಯ ವರ್ಷವಾಗಿ ಉಳಿದುಕೊಂಡಿದೆ ಅದೇ ವರುಷ ಡಾ. ಕೋಠಾರಿಯವರ ಅಧ್ಯಕ್ಷತೆಯ ಕೆಳಗೆ ಒಂದು ಶಿಕ್ಷಣ ಸಮಿತಿ ರಚನೆಯಾಯಿತು. ಆ ಸಮಿತಿಯಲ್ಲಿ ಶ್ರೀಮತಿ ಸುಲಭಾ ಪಾಣಂದೀಕರರು ಒಬ್ಬರು ಸದಸ್ಯರಾಗಿದ್ದುದು ನಮ್ಮೆಲ್ಲರಿಗೆ ಒಂದು ಹೆಮ್ಮೆಯ ವಿಷಯವಾಗಿದ್ದಿತು. ಆಗ ಅವರು ಕರ್ನಾಟಕ ವಿಶ್ವವಿದ್ಯಾಲಯದ ಬಿ. ಎಡ್. ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು. ಈ ಸಮಿತಿಯು ಅಸ್ತಿತ್ವಕ್ಕೆ ಬಂದ ಕಾಲಕ್ಕೆ ಶಿಕ್ಷಣ ಹಾಗೂ ಅದರ ಭವಿತವ್ಯವನ್ನು ಕುರಿತು ರಾಷ್ಟ್ರದ ಉದ್ದಗಲಕ್ಕೂ ಚರ್ಚೆಗಳು ನಡೆಯುತ್ತಿದ್ದವು. ಸ್ವತಂತ್ರ ಪ್ರಜಾಸತ್ತಾತ್ಮಕ ಬೃಹತ್‌ರಾಷ್ಟ್ರದ ಶಿಕ್ಷಣ ಧೋರಣೆಯನ್ನು ರೂಪಿಸುವ ಹೊಣೆ ಈ ಸಮಿತಿಯ ಮೇಲಿದ್ದಿತು. ಆ ಸಮಿತಿಯು

ಒಪ್ಪಿಸಿದ ವರದಿಯನ್ನು ರಾಷ್ಟ್ರವು ಅಂಗೀಕರಿಸಿ ಅದನ್ನು ಹಂತಹಂತವಾಗಿ ಅನುಷ್ಠಾನಕ್ಕೆ ತರುವಲ್ಲಿ ಬದ್ಧವಾಯಿತು. ರಾಷ್ಟ್ರಪಿತನಿಂದ ಪ್ರಣೀತವಾದ ಬುನಿಯಾದಿ ಶಿಕ್ಷಣ, ಮೂಲ ಶಿಕ್ಷಣ, ಜೀವನ ಶಿಕ್ಷಣ ವಿಚಾರಗಳು ಶಿಕ್ಷಣಕ್ಷೇತ್ರದಿಂದ ಕಾಲ್ಕಿಗೆಯದೆ ಆ ವಿಚಾರಗಳಿಗೆ ಒಂದು ವಿಸ್ತೃತವಾದ ತಳಹದಿಯನ್ನು ಈ ಸಮಿತಿಯು ಒದಗಿಸಿ ಕೊಟ್ಟಿತು. ಕೈಗಳಿಗೆ ಒದಗಿಸಿದ ಚಟುವಟಿಕೆ ಬುದ್ಧಿಯನ್ನು ಚುರುಕುಗೊಳಿಸಿ ಹೃದಯವನ್ನು ತಟ್ಟಿ ಅದನ್ನು ವಿಶಾಲಗೊಳಿಸುವದರಿಂದ ಮಗುವಿನ ಹಸ್ತ, ಮಸ್ತಕ, ಹೃದಯಗಳ ಸಮತೋಲ ಬೆಳವಣಿಗೆಯನ್ನು ಸಾಧಿಸುವಲ್ಲಿ ಸಮರ್ಥವಾಗುವದೆಂದು ನಂಬಿ ಶಿಕ್ಷಣದಲ್ಲಿ ಚಟುವಟಿಕೆಗಳಿಗೆ ಪ್ರಾಧಾನ್ಯತೆಯನ್ನು ಕೊಟ್ಟುದಲ್ಲದೆ ಅದನ್ನು "ಕಾರ್ಯಾನುಭವ" ವೆಂಬ ಹೆಸರಿನಿಂದ ಕರೆದರು. ಕೃತಿಯ ಮೂಲಕ ಮೂಡಿ ಬರುವ ಅನುಭವವನ್ನು ಆಧಾರವಾಗಿಟ್ಟುಕೊಂಡೇ ಶಿಕ್ಷಣದ ಕಾರ್ಯ ಮುನ್ನಡೆಯು-ವಂತಾಯಿತು. ಶಿಕ್ಷಣದ ಹೆಸರು ವಿಧಾನ ಬದಲಾದರೂ ಒಪ್ಪಿತ ತತ್ತ್ವವನ್ನು ಕೈ ಬಿಡಲಾಗಲಿಲ್ಲ. ಆ ತಾತ್ವಿಕ ವಿಚಾರವನ್ನು ಕಾರ್ಯಾಚರಣೆಯಲ್ಲಿ ಯಶಸ್ವಿಗೊಳಿಸುವ ವಿಧಾನವನ್ನು ರೂಪಿಸುವ ಹೊಣೆ ಶಿಕ್ಷಣ ತಜ್ಞರ ಮೇಲಿದೆ

ಈ ಸಂಸ್ಥೆಯು ೧೯೪೬ ರಿಂದ ತನ್ನ ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸಿ ವಿವಿಧ ಕ್ಷೇತ್ರದಲ್ಲಿ ಅಧಿಕವಾಗಿ ಪರಿಶ್ರಮಿಸಿ ಕಾರ್ಯಗೈದು ೧೯೬೩-೬೪ ರಲ್ಲಿ ತನ್ನ ಕೊನೆಯ ತರಬೇತಿಯ ಕಾರ್ಯವನ್ನು ಪೂರೈಸಿ ವಿಶ್ರಮಿಸುತ್ತಿರುವಾಗ ಇಂಥ ಒಂದು ಸಂಸ್ಥೆಯ ಲಾಭವನ್ನು ಶಿಕ್ಷಣಕ್ಷೇತ್ರಕ್ಕೆ ಯಾವರೀತಿಯಿಂದ ಒದಗಿಸಿಕೊಡಬೇಕೆಂಬು-ದನ್ನು ಕುರಿತು ಸರಕಾರ ವಿಚಾರಿಸುತ್ತಲೇ ಇದ್ದಿತು. ಏಕೆಂದರೆ ಈ ಸಂಸ್ಥೆಯ ಸುಸಜ್ಜಿತ ವಾಚನಾಲಯ ಮುಂತಾದವುಗಳ ಲಾಭವನ್ನು ಮಾಡಿಕೊಳ್ಳುವ ಉದ್ದೇಶ ದಿಂದ ಸರಕಾರದವರು ಈ ಸಂಸ್ಥೆಯನ್ನು ೧೯೬೭ ರಲ್ಲಿ "ಶಿಕ್ಷಕರ ಕೇಂದ್ರ" ವಾಗಿ ಪರಿವರ್ತಿಸಿ ಅಲ್ಲಿ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣದ ಗುಣಮಟ್ಟವನ್ನು ಎತ್ತರಿಸಲು ಶಿಕ್ಷಕರಿಗೆ, ಆಡಳಿತ ಅಧಿಕಾರಿಗಳಿಗೆ ಅವರ ಕಾರ್ಯದಲ್ಲಿ ಮಾರ್ಗದರ್ಶನ ನೀಡಬಲ್ಲ ಅಲ್ಪಾವಧಿ ತರಬೇತಿ, ವಿಚಾರಸಂಕಿರಣ, ಸಮ್ಮೇಲನ, ಚರ್ಚಾಗೋಷ್ಠಿ ಮುಂತಾದ ಶೈಕ್ಷಣಿಕ ಕಾರ್ಯನಿರ್ವಹಿಸುವ ಸಂಸ್ಥೆಯಾಗಿ ಮಾರ್ಪಡಿಸಿ ಶ್ರೀ ವಾಯ್. ಆರ್. ಅಚ್ಯುತರಾವ ಎಂಬವರನ್ನು ಇಲ್ಲಿ ಪ್ರಿನ್ಸಿಪಾಲರೆಂದು ನಿಯಮಿಸಿದರು. ಅವರು ಹಾಗೂ ಅವರ ನಂತರ ಸಧ್ಯಕ್ಕೆ ಕೆಲಸ ಮಾಡುತ್ತಿರುವ ಶ್ರೀ ಶಿವಶಂಕರ ಹಿರೇಮಠ ರವರು ಈ ಸಂಸ್ಥೆಯ ಹೆಸರನ್ನು ಅದು ಶಿಕ್ಷಣ ಕ್ಷೇತ್ರಕ್ಕೆ ಕೊಡಮಾಡುವ ಸೇವೆಯ ಮೂಲಕ ಚಿರಸ್ಥಾಯಿಯಾಗಿ ಉಳಿಯುವಂತೆ ಪ್ರಯತ್ನಿಸುತ್ತಿದ್ದಾರೆ. ಈ ಸಂಸ್ಥೆಯು ಶಿಕ್ಷಣ ಕ್ಷೇತ್ರದಲ್ಲಿಯ ಸಮಸ್ಯೆಗಳನ್ನು ಬಿಡಿಸಲು ನೆರವಾಗುವುದರ ಜೊತೆಗೆ ಸೃಜನಾತ್ಮಕ ಶೈಕ್ಷಣಿಕ ಸಾಹಿತ್ಯವನ್ನು ನಿರ್ಮಿಸುವಲ್ಲಿಯೂ ತನ್ನ ಪಾತ್ರವನ್ನು ನಿರ್ವಹಿಸುತ್ತಲಿದೆ.

ಸಂಸ್ಥೆ ವ್ಯಕ್ತಿಗಳಿಗಿಂತಲೂ ಹಿರಿದಾಗುದೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಕಾಲು ಶತಮಾನದ ಕಾಲದಲ್ಲಿ ಅದು ಸಾಧಿಸಿದ ಕಾರ್ಯವನ್ನು ಅಳೆದು ಹೇಳುವ ದೇನೂ ಸುಲಭವಾದ ಮಾತಲ್ಲ. ಅದರ ಶ್ರೇಯೋಭಿವೃದ್ಧಿಗೆ ಶ್ರಮಿಸಿದವರು ಇಲ್ಲಿ ಉಲ್ಲೇಖಿಸಿದವರನ್ನು ಬಿಟ್ಟು ಅನೇಕರಿದ್ದಾರೆಂಬುದು ನಿಶ್ಚಿತ. ಅವರೆಲ್ಲರೂ ಈ ಮಹಾನ್ ಸಂಸ್ಥೆಯ ಶ್ರೇಯಸ್ಸಿನಲ್ಲಿ ಸೇರಿಕೊಂಡಿರುವರೆಂಬುದನ್ನು ನೆನೆದು ಹಿರಿಯ ಸಂಸ್ಥೆಯ ಕಿರುಪರಿಚಯವನ್ನು ಮುಗಿಸುವ ಮೊದಲು ಈ ಲೇಖನಕ್ಕೆ ಮಾಹಿತಿ ಒದಗಿಸಿದವರೆಲ್ಲರ ಉಪಕಾರವನ್ನು ಸ್ಮರಿಸಲು ಮರೆಯದಿರಲಾರೆ.

◎◎◎

"ಚನ್ನಬಸಪ್ಪನವರು ವಿದ್ಯಾಪಕ್ಷಪಾತಿಗಳೂ, ನಿಸ್ಪೃಹರೂ, ಕರ್ನಾಟಕದ ಅಭಿಮಾನಿಗಳೂ ಕನ್ನಡ ಭಾಷೆಯ ಪ್ರೋತ್ಸಾಹಕರೂ ಆಗಿದ್ದರು........ಇವರು ಕನ್ನಡ ವಾಙ್ಮಯವನ್ನು ಬಹಳ ಪ್ರೀತಿಸುವವರೂ ನಿಜವಾದ ದೇಶಾಭಿ-ಮಾನಿಗಳೂ ಆಗಿದ್ದುದರಿಂದ ದಕ್ಷಿಣ ಭಾಗದೊಳಗಿಂದ ಮರಾಠಿ ಭಾಷೆಯ ಪ್ರಾಬಲ್ಯವನ್ನು ಕಿತ್ತು ಹಾಕುವದಕ್ಕೆ ಭಗೀರಥ ಪ್ರಯತ್ನವನ್ನು ಮಾಡಿದರು."

—ಹನಮಂತರಾವ ದೇಶಪಾಂಡೆ

(ದಿ| ಬಹದ್ದೂರ ರೊದ್ದ ಶ್ರೀನಿವಾಸರಾವರ ಚರಿತ್ರೆ)

ಉಪಾಧ್ಯಾಯರ ಸರಕಾರಿ ತರಬೇತಿ ವಿದ್ಯಾಲಯವು

ಆಚರಿಸಿದ

ಐದು ಶತಮಾನೋತ್ಸವಗಳು

—**ಶಂಕರ ಹ. ಬಟ್ಟೂರ**

ಉತ್ತರ ಕರ್ನಾಟಕದ ಶೈಕ್ಷಣಿಕ ಹಾಗು ಸಾಂಸ್ಕೃತಿಕ ಇತಿಹಾಸದಲ್ಲಿ ಉಪಾಧ್ಯಾಯರ ಸರಕಾರಿ ತರಬೇತಿ ವಿದ್ಯಾಲಯವು (ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜು) ಅತ್ಯಂತ ಮಹತ್ವದ ಪಾತ್ರವಹಿಸಿದೆ. ಈ ವಿದ್ಯಾಲಯವು ಉದಯವಾಗುವ ಮೊದಲು ಈ ಭಾಗದಲ್ಲಿ ಮರಾಠಿಯ ಪ್ರಾಬಲ್ಯವು ಬಹಳವಾಗಿತ್ತು. ಆಗ ಕೋರ್ಟು ಕಚೇರಿಗಳ ಭಾಷೆ ಮರಾಠಿಯಾಗಿತ್ತು. ವ್ಯವಹಾರವೂ ಮರಾಠಿಮಯವಾಗಿತ್ತು. ಸಾಮಾನ್ಯರೂ ಕೂಡಾ ಮರಾಠಿಯನ್ನೇ ನಿತ್ಯ ಜೀವನದಲ್ಲಿ ಉಪಯೋಗಿಸುತ್ತಿದ್ದರು. ಹೀಗಾಗಿ ಈ ಭಾಗಕ್ಕೆ ಬ್ರಿಟೀಶರು ದಕ್ಷಿಣ ಮಹಾರಾಷ್ಟ್ರವೆಂದು ಕರೆದು ಮರಾಠಿಗೆ ಅಗ್ರಸ್ಥಾನ ಕೊಟ್ಟಿದ್ದರು. ಈ ನಾಡಿನ ಜನರಿಗೆ ತಮ್ಮ ಭಾಷೆ ಕನ್ನಡವೆಂಬುದು ಸಹ ತಿಳಿಯಲಾರದಷ್ಟು ಮಟ್ಟಿಗೆ ಮರಾಠಿಯ ವರ್ಚಸ್ಸು ಮುಟ್ಟಿತ್ತು. ಕನ್ನಡಿಗರ ಸುದೈವವೆಂಬಂತೆ ಡೆ. ಚನ್ನಬಸಪ್ಪನವರು ಹಾಗೂ ವಿಲಿಯಮ್ ರಸೆಲ್‌ರು ಈ ಭಾಗದ ವಿದ್ಯಾರ್ಥಿಗಳಿಗಾಗಿ ಹತ್ತಿಪ್ಪತ್ತು ವರುಷಗಳವರೆಗೆ ಶ್ರಮವಹಿಸಿ ದುಡಿದು ಕನ್ನಡವನ್ನು ಮರಾಠಿ ಕಪಿಮುಷ್ಟಿಯಿಂದ ಬಿಡಿಸಿ ಕನ್ನಡಿಗರ ಕೃತಜ್ಞತೆಗೆ ಪಾತ್ರರಾದರು. ಈ ವಿದ್ಯಾಲಯವು ೧೮೫೫-೫೬ ರಲ್ಲಿ ಪ್ರಾರಂಭವಾಯಿತು. ಕನ್ನಡದ ಹುಲಿ ಹಾಗೂ ಕನ್ನಡ ಭಾಷಾಭೂಷಣರೆಂದು ಖ್ಯಾತಿಗೊಂಡ ಡೆ. ಚನ್ನಬಸಪ್ಪನವರು ಸಂಸ್ಥೆಯ ಪ್ರಪ್ರಥಮ ಪ್ರಾಚಾರ್ಯರಾಗಿಯೂ ಮುಂದೆ ಡೆಪ್ಯೂಟಿ ಎಜ್ಯುಕೇಶನಲ್ ಇನ್ಸ್‌ಪೆಕ್ಟರಾಗಿಯೂ ಕನ್ನಡದ ಭಾಷೆ, ಶಿಕ್ಷಣ ಹಾಗೂ ಸಾಹಿತ್ಯ ಕ್ಷೇತ್ರಗಳಿಗೆ ಅದ್ವಿತೀಯ ಸೇವೆಯನ್ನು ಸಲ್ಲಿಸಿದರು. ಅವರಿಬ್ಬರೂ ತಮ್ಮ ಶಿಕ್ಷಣ ಪ್ರಸಾರದ ಗುರಿ ಸಾಧನೆಗೆ ಈ ಸಂಸ್ಥೆಯನ್ನು ಬಹಳಷ್ಟು ಉಪಯೋಗಿಸಿಕೊಂಡರು. ಈ ರೀತಿಯಲ್ಲಿ ಈ ವಿದ್ಯಾ-ಲಯವು ೧೯೧೭ರಲ್ಲಿ ಕರ್ನಾಟಕ ಕಾಲೇಜ ಪ್ರಾರಂಭವಾಗುವವರೆಗೆ ಅತ್ಯಂತ ಮಹತ್ವದ ಶಿಕ್ಷಣ ಸಂಸ್ಥೆಯಾಗಿ ಅನೇಕ ಪಂಡಿತರು, ಸಾಹಿತಿಗಳು, ಕವಿಗಳು ಹಾಗು ಲೇಖಕರಿಗೆ ಮಾತೃಸ್ಥಾನವಾಗಿದೆ. ಕರ್ನಾಟಕ ಕಾಲೇಜ ಹಾಗು ಕರ್ನಾಟಕ ವಿಶ್ವವಿದ್ಯಾಲಯಗಳು ಈ ಸಂಸ್ಥೆಯಲ್ಲಿಯೇ ಜನ್ಮತಾಳಿದವು. ಈ ವಿದ್ಯಾಲಯದ ನಾಮಾಂಕಿತ ಪ್ರಾಚಾರ್ಯರಲ್ಲಿ ಡೆ. ಚೆನ್ನಬಸಪ್ಪ, ಭುಜಂಗರಾವ ಹುಯಿಲಗೋಳ,

---

ಗ್ರ್ಯಾಜೆಟೆಡ್ ಪ್ರೊಬೋಶನರ ಎಂದು ಸಾ. ವಿ. ಇಲಾಖೆಯಲ್ಲಿ ಕೆಲಸಕ್ಕೆ ಸೇರಿದ ಶ್ರೀ ಬಟ್ಟೂರ ಅವರಿಗೆ ಉ. ಸ. ತ. ವಿ. ಧಾರವಾಡದ ಅಧೀಕ್ಷಕರೆಂದು ಮೊದಲಸೇವೆ ಮಾಡುವ ಸೌಭಾಗ್ಯ ಪ್ರಾಪ್ತವಾಗಿದೆ. ಇಂಗ್ಲೀಷ ಭಾಷೆಯಲ್ಲಿ ಎಂ. ಎ. ಪದವೀಧರರಾದ ಶ್ರೀ ಬಟ್ಟೂರ ಅವರು ಕುಂದಗೋಳ ತಾಲೂಕಿನ ದೇವನೂರ ಗ್ರಾಮದವರು.

ವೆಂಕಟ ರಂಗೋ ಕಟ್ಟಿ, ಕರಂದಿಕರ, ಶ್ರೀನಿವಾಸ ರೊದ್ದ ಮೊದಲಾದವರು ಪ್ರಮು-ಖರು. ಶ್ರೀ ಗಂಗಾಧರ ಮಡಿವಾಳೇಶ್ವರ ತುರಮರಿ, ವೀರಭದ್ರ ಮಡಿವಾಳೇಶ್ವರ ಪಂಡಿತ, ಶಾಂತವೀರ ಕಿತ್ತೂರ, ಗಳಗನಾಥ, ಸವದಿ, ನರಸಿಂಹ ಮುಳಬಾಗಿಲ, ಶಾಂತಕವಿಗಳು ಮ. ಪ್ರ. ಪೂಜಾರ ಮೊದಲಾದವರು ಇಲ್ಲಿ ಶಿಕ್ಷಕರಾಗಿದ್ದರು. ಇಲ್ಲಿಂದ ಹೊರಬಂದವರಲ್ಲಿ ಅನೇಕರು ನಾಡಿನ ಸಾರ್ವಜನಿಕ ಜೀವನದಲ್ಲಿ ಗಣ್ಯ ಸ್ಥಾನ ಗಳಿಸಿದರು. ಒಬ್ಬರಂತೂ ಜಿಲ್ಹಾ ಕಲೆಕ್ಟರರಾಗಿದ್ದರು. ಮಡಿಕೇರಿ ಕನ್ನಡ ಸಾಹಿತ್ಯ ಸಮ್ಮೇಲನದ ಈ ವರುಷದ (೯೮೧) ಅಧ್ಯಕ್ಷರಾದ ಶ್ರೀ ಶಂ. ಬಾ. ಜೋಶಿಯವರೂ ಈ ಸಂಸ್ಥೆಯ ಹಳೆಯ ವಿದ್ಯಾರ್ಥಿಗಳಲ್ಲೊಬ್ಬರು. ಸಾಹಿತ್ಯ ಕ್ಷೇತ್ರದಲ್ಲಿ ಹೆಸರು ಗಳಿಸಿದ ಶ್ರೀ ಸಿಂಪಿ ಲಿಂಗಣ್ಣ, ಪಂಡಿತ ಕವಲಿ, ಮಿರ್ಜಿ ಅಣ್ಣಾರಾಯ ಈ ಸಂಸ್ಥೆಯ ವಿದ್ಯಾರ್ಥಿಗಳೇ. ಈಗ ಈ ವಿದ್ಯಾಲಯಕ್ಕೆ ೧೨೬ ವರುಷಗಳು ತುಂಬಿದವು. ೧೯೫೬ರಲ್ಲಿ ಒಂದು ಶತಮಾನವನ್ನು ದಾಟಿದಂದಿನಿಂದ ಇಂದಿನವರೆಗೆ ಐದು ವಿವಿಧ ಶತಮಾನೋತ್ಸವಗಳನ್ನು ಆಚರಿಸುವ ಭಾಗ್ಯವನ್ನು ಪಡೆದು ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿಯೇ ಇದು ಅದ್ವಿತೀಯ ಸಂಸ್ಥೆಯಾಗಿದೆ. ಈ ಉತ್ಸವಗಳನ್ನು ಸಂಕ್ಷೇಪಿಸಿ ವಿವರಿಸುವದೇ ಈ ಲೇಖನದ ಉದ್ದೇಶ.

ಮೊದಲನೆಯ ಶತಮಾನೋತ್ಸವ ೧೯೫೭

ಈ ಸಂಸ್ಥೆಗೆ ೧೯೫೬ರಲ್ಲಿ ನೂರು ವರುಷ ತುಂಬಿದವು. ಮರುವರುಷ ಇದರ ಶತಮಾನೋತ್ಸವವನ್ನು ಡಿಸೆಂಬರ ತಿಂಗಳ ದಿನಾಂಕ ೨೭ ಹಾಗು ೨೮ ರಂದು ಆಚರಿಸ-ಲಾಯಿತು. ಈ ಸಂಸ್ಥೆಯಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಕರ್ನಾಟಕದ ಎಲ್ಲ ಭಾಗಗಳಲ್ಲಿ ಕೆಲಸ ಮಾಡುತ್ತಿದ್ದರಾದ್ದರಿಂದ ಶತಮಾನೋತ್ಸವದ ಆಚರಣೆಗೆ ಎಲ್ಲ ರಿಂದಲೂ ಸಹಕಾರ ಸಹಾನುಭೂತಿಗಳು ತಾವಾಗಿಯೇ ದೊರೆತವು. ಆಗ ವಿದ್ಯಾಧಿ-ಕಾರಿಗಳಿಂದ ಶ್ರೀ ತೇರಗಾಂವಕರ, ಶ್ರೀ ಕೊಪ್ಪಿಕರ ಹಾಗೂ ಶ್ರೀ ಜೇವೂರ ಇವ ರಿಂದಲೂ ಸಾಕಷ್ಟು ನೆರವು ಸಿಕ್ಕಿತು. ಆಗಿನ ಜಿಲ್ಹಾ ಸ್ಕೂಲ ಬೋರ್ಡಗಳ ಚೇರಮನ್ ಹಾಗು ಅಧಿಕಾರಿಗಳೂ ಸಹಾಯಮಾಡಲು ಮುಂದೆ ಬಂದರು. ಶ್ರೀ ಸ. ಪ. ಗಾಂವಕಾರ ಅವರ ಅಧ್ಯಕ್ಷತೆಯಲ್ಲಿ ಹಿಂದಿನ ವಿದ್ಯಾರ್ಥಿಗಳನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿ, ನಿಧಿ ಸಂಗ್ರಹ ಕಾರ್ಯವನ್ನು ಪ್ರಾರಂಭಿಸಲಾಯಿತು. ಈ ಕೆಲಸವೆಷ್ಟೂ ಕಠಿಣವಾಗಲಿಲ್ಲ. ಸಮಿತಿಯವರು ಮಾಡಿದ ಅಂದಾಜಿಗಿಂತ ಹೆಚ್ಚು ಧನ ಸಂಗ್ರಹವಾಯಿತು. ಈ ಶತಮಾನೋತ್ಸವವು ಎರಡು ದಿನ ನಡೆಯಿತು. ಮೊದಲನೆಯ ದಿನ ಉದ್ಘಾಟನೆ ಹಾಗು ಸ್ಮಾರಕ ಸಂಚಿಕೆಯು ಪ್ರಕಟನೆ.ಶತಮಾನೋ ತ್ಸವದ ಪ್ರಾರಂಭೋತ್ಸವವು ಬಂಥನಾಳ ಶಿವಯೋಗಿಗಳಾದ ಶ್ರೀ ಸಂಗನಬಸವ ಮಹಾಸ್ವಾಮಿಗಳಿಂದ ನೆರವೇರಿತು.ಶತಮಾನೋತ್ಸವದ ಅಧ್ಯಕ್ಷತೆಯನ್ನು ಡಾ॥ ಡಿ ಸಿ. ಪಾವಟೆಯವರು ವಹಿಸಿದ್ದರು. ಉತ್ಸವವು ಪಾಠಾಭ್ಯಾಸ ಶಾಲೆಯ ಮುಂದೆ

ಹಾಕಲ್ಪಟ್ಟ ಭವ್ಯ ಮಂಟಪದಲ್ಲಿ ನಡೆಯಿತು. ಮಧ್ಯಾಹ್ನ ವಿದ್ಯಾಲಯದ ಹಿಂದಿನ ವಿದ್ಯಾರ್ಥಿಗಳ ಸಮ್ಮೇಲನವು ಕೂಡಿತು. ಸಾಯಂಕಾಲ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಪಂಡಿತ ವಿದ್ಯಾರತ್ನ ಕೀರ್ತನ ಕೇಸರಿ ಬಿ. ಶಿವಮೂರ್ತಿಶಾಸ್ತ್ರಿಗಳು ಸ್ಮಾರಕ ಸಂಚಿಕೆಯನ್ನು ಪ್ರಕಟಿಸಿ ಶಿಕ್ಷಕರ ಮನಮುಟ್ಟುವಂತೆ ಅಮೋಘ ಭಾಷಣ ಮಾಡಿದರು. ಮರುದಿನ ಬೆಳಗ್ಗೆ ಡೆ. ಚನ್ನಬಸಪ್ಪ, ಶ್ರೀನಿವಾಸ ರೊದ್ದ, ಶ್ರೀ ವ್ಹಿ. ಎಚ್. ನಾಯಿಕ ಹಾಗು ಡಾ. ಪಾವಟೆಯವರ ಭಾವಚಿತ್ರಗಳ ಅನಾವರಣವು ದಿವಂಗತ ಶ್ರೀ ಆಲೂರ ವೆಂಕಟರಾಯರಿಂದ ಜರುಗಿತು. ಶ್ರೀ ವ್ಹಿ. ಎಚ್. ನಾಯಕರು ೩ನೆಯ ವರುಷದ ಪರೀಕ್ಷೆಯಲ್ಲಿ ೧ನೆಯ ನಂಬರ ಪಡೆದು ಮುಂದೆ ಇಂಗ್ಲಂಡಕ್ಕೆ ಹೋಗಿ ಎಂ. ಎ. ಹಾಗು ಬಾರ-ಆ್ಯಟ-ಲಾ ಪರೀಕ್ಷೆಯಲ್ಲಿ ಪಾಸಾಗಿ ಸ್ವದೇಶಕ್ಕೆ ಬಂದು ಸಹಕಾರಿ ಸಂಘಗಳ ಪ್ರಥಮ ಭಾರತೀಯ ರಜಿಸ್ಟ್ರಾರರಾಗಿ ಆ ಮೇಲೆ ವಿಜಾಪುರ ಜಿಲ್ಹೆಯ ಕಲೆಕ್ಟರರಾಗಿದ್ದಾಗ ನಿಧನರಾದರು. ಅಂದು ಮಧ್ಯಾಹ್ನ ಜೀವನ ಶಿಕ್ಷಣದ ಪ್ರದರ್ಶನವನ್ನು ದಿವಂಗತ ರಾಮರಾವ ಹುಕ್ಕೇರಿಕರ ಇವರು ಉದ್ಘಾಟಿಸಿ ಜೀವನ ಶಿಕ್ಷಣದ ಬಗೆಗೆ ನಡೆದ ವಿಚಾರ ಸಂಕಿರಣದಲ್ಲಿ ಅಧ್ಯಕ್ಷತೆ ವಹಿಸಿದ್ದರು. ಸಂಜೆಗೆ ಡಾ. ಪಾವಟೆಯವರ ಅಧ್ಯಕ್ಷತೆಯಲ್ಲಿ ಮುಕ್ತಾಯ ಸಮಾರಂಭ ನಡೆದು ಬಹುಮಾನಗಳನ್ನು ಕೊಡಲಾಯಿತು. ಎರಡೂ ದಿನ ರಾತ್ರಿ ಕಿತ್ತೂರ ರಾಣಿ ಚನ್ನಮ್ಮನ ನಾಟಕ ಹಾಗು ಇನ್ನಿತರ ಮನರಂಜನೆ ಕಾರ್ಯಕ್ರಮಗಳು ನಡೆದವು. ಹೀಗೆ ಉತ್ಸವವು ಸರ್ವದೃಷ್ಟಿಯಿಂದಲೂ ಯಶಸ್ವಿಯಾಗಿ ನಡೆದು ಎಲ್ಲರ ಪ್ರಶಂಸೆಗೆ ಅರ್ಹವಾಯಿತು. ಉತ್ಸವಕ್ಕೆ ತಗಲಿದ ಖರ್ಚಿಗಿಂತ ನಿಧಿ ಸಂಗ್ರಹ ಹೆಚ್ಚಾಗಿದ್ದರಿಂದ ೪೦೦೦ ರೂಪಾಯಿಗಳನ್ನು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಕೊಟ್ಟು ಪ್ರಾಥಮಿಕ ಶಿಕ್ಷಕರ ಮಕ್ಕಳಿಗೆ ಬಹುಮಾನ ಕೊಡುವಂತೆ ವಿನಂತಿಸಿಕೊಳ್ಳಲಾಯಿತು. ಈ ಉತ್ಸವವು ಒಳ್ಳೇ ವೈಭವದಿಂದ ನೆರವೇರಿತಾದ್ದರಿಂದ ಅದನ್ನು ಈಗಿನವರೂ ಸಹ ನೆನಪಿಸಿಕೊಳ್ಳುತ್ತಾರೆ. ಆಗ ಶ್ರೀ ಎಸ್. ಪಿ. ಪಾಟೀಲರು ಪ್ರಿನ್ಸಿಪಾಲರಾಗಿದ್ದರು.

೨ ನೇ ಶತಮಾನೋತ್ಸವ ೧೯೬೭
" ಜೀವನ ಶಿಕ್ಷಣದ ನೂರು ವರ್ಷಗಳ ಸೇವೆ "

ಜೀವನ ಶಿಕ್ಷಣವು ಉಪಾಧ್ಯಾಯರ ಸರಕಾರಿ ತರಬೇತಿ ವಿದ್ಯಾಲಯದ ಮುಖ್ಯ ಜೀವಾಳ. ವಿದ್ಯಾಲಯದ ಭವ್ಯ ಇತಿಹಾಸ, ಅದರಿಂದಾದ ನಾಡು ನುಡಿ ಹಾಗೂ ಶಿಕ್ಷಣ ಸೇವೆಯ ನಿಜವಾದ ಕಲ್ಪನೆ ಬರಬೇಕಾದರೆ 'ಜೀವನ ಶಿಕ್ಷಣ'ದ ಪುಟಗಳನ್ನು ತಿರುವಿ ಹಾಕಬೇಕಾಗುವದು.

'ಜೀವನ ಶಿಕ್ಷಣ' ವಿದ್ಯಾಲಯದಿಂದ ಪ್ರಕಟವಾಗುತ್ತಿರುವ ಮಾಸಿಕದ ಈಗಿನ ಹೆಸರು. ಈ ಮಾಸಿಕವು ಪ್ರಪ್ರಥಮವಾಗಿ ೧೮೬೫ ರ ಮೇ ತಿಂಗಳ ೧ ರಂದು 'ಮಠ ಪತ್ರಿಕೆ'ಯೆಂಬ ಹೆಸರಿನಿಂದ ಪ್ರಾರಂಭವಾಯಿತು.

ಆಗ ವಿದ್ಯಾಲಯವು ಬೆಳಗಾವಿಯಲ್ಲಿತ್ತು. ಮುಂದೆ ೧೮೭೫ ರಲ್ಲಿ ಅದು ಧಾರವಾಡಕ್ಕೆ ಪುನಃ ಸ್ಥಳಾಂತರಿಸಲ್ಪಟ್ಟಾಗ ಮಠಪತ್ರಿಕೆಯೂ ಧಾರವಾಡಕ್ಕೆ ಬಂದಿತು. ಈ ಮಠಪತ್ರಿಕೆಯು ೧೮೬೭ ರ ಎಪ್ರಿಲ ತಿಂಗಳಿಂದ "ಶಾಲಾ" ಪತ್ರಿಕೆಯಾಗಿ ಹೊರಬಂದಿತು. ೧೮೭೧ ರಲ್ಲಿ ಆ ಹೆಸರಿನಲ್ಲಿ ಸ್ವಲ್ಪ ಬದಲಾವಣೆಯಾಗಿ "ಕನ್ನಡ ಶಾಲಾ ಪತ್ರಿಕೆ" ಎಂದು ಕರೆಯಲ್ಪಡಹತ್ತಿತು. ಈ ಹೆಸರು ೧೯೨೯ ರ ವರೆಗೆ ಹಾಗೆಯೇ ಉಳಿಯಿತು. ಅಂದಿನಿಂದ ಈ "ಕನ್ನಡ ಶಾಲಾ ಪತ್ರಿಕೆ"ಯು "ಕನ್ನಡಪ್ರಾಥಮಿಕ ಶಿಕ್ಷಣ" ವೆಂಬ ಹೆಸರನ್ನು ಪಡೆಯಿತು. ಆಗ ಮಹಿಳೆಯರಿ-ಗೋಸ್ಕರ ಪ್ರತ್ಯೇಕವಾಗಿ ಹೊರಡುತ್ತಿದ್ದ "ಕನ್ನಡ ಶಿಕ್ಷಕಿ"ಯೂ "ಕನ್ನಡದ ಪ್ರಾಥಮಿಕ ಶಿಕ್ಷಣ"ದಲ್ಲಿ ವಿಲೀನಗೊಂಡಿತು. ಈ ಹೆಸರು ೧೯೫೬ ರ ವರೆಗೆ ಉಳಿಯಿತು. ಆ ವರುಷ ನವ್ಹಂಬರ ೧ ರಂದು ಕನ್ನಡಿಗರ ಬಹುದಿನದ ಕನಸು ನನಸಾಯಿತು. ಏಕೀಕೃತ ಕರ್ನಾಟಕವಾಯಿತು. ಆಗ ಈ ಮಾಸಿಕ ಪತ್ರಿಕೆಯ ಹೆಸರನ್ನು ಬದಲಾಯಿಸ-ಲಾಯಿತು. ಅಂದಿನಿಂದ ಈ ಪತ್ರಿಕೆಯು ಜೀವನ ಶಿಕ್ಷಣವೆಂಬ ಹೆಸರಿನಿಂದ ಪ್ರಕಟವಾಗುತ್ತಿದೆ. ಈ ಪತ್ರಿಕೆಯ ಪ್ರಥಮ ಸಂಪಾದಕರು ಡೆ. ಚನ್ನಬಸಪ್ಪನವರೇ ಆಗಿದ್ದರು. ಆಗ ಇದರ ಪ್ರಕಟನೆಯ ಬಹು ಭಾಗ ಜವಾಬ್ದಾರಿಯನ್ನು ಶ್ರೀ ಗಂಗಾಧರ ಮಡಿವಾಳೇಶ್ವರ ತೂರಮರಿಯುವರೇ ವಹಿಸಿದ್ದರು. ಈ ಪತ್ರಿಕೆಯ ಮುಖಾಂತರ ನಡೆದ ಶಿಕ್ಷಣ ಸೇವೆ ಅಷ್ಟಿಷ್ಟಲ್ಲ. ಇದರ ಹಿಂದಿನ ಪುಟಗಳನ್ನು ಓದಿದರೆ ಅದರಿಂದಾದ ಅಮೋಘ ಸೇವೆಯ ಪರಿಚಯವಾಗುವದು. ಶಿಕ್ಷಕರಿಗೆ ತಮ್ಮ ಮಾರ್ಗದರ್ಶನ ಪಾಠಗಳ ಮೇಲೆ ಟಿಪ್ಪಣಿ, ಶಬ್ದಗಳ ಅರ್ಥ, ಕಾವ್ಯಗಳವಿಮರ್ಶೆ, ಕವಿತಾಶಿಕ್ಷಣ, ಕೈಬರೆಹ, ಶಬ್ದೋಚ್ಚಾರ, ಛಂದಸ್ಸು ಇನ್ನೂ ಅನೇಕ ವಿಷಯಗಳ ಜ್ಞಾನ ಮೊದಲಾದವುಗಳು ಈ ಪತ್ರಿಕೆಯಿಂದಲೇ ಶಿಕ್ಷಕರಿಗೆ ದೊರೆಯುತ್ತಿದ್ದವು. ವಿದ್ಯಾ ಇಲಾಖೆಯ ಸುತ್ತೋಲೆಗಳು ಸಹ ಇದರಲ್ಲಿ ಪ್ರಕಟವಾಗುತ್ತಿದ್ದವು. ಶಿಕ್ಷಕರು ನಿರ್ಭೀತಿಯಿಂದ ಪತ್ರಿಕೆಯಲ್ಲಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದರು. ಈ ತರದ ಶ್ರೇಷ್ಠ ಸೇವೆ ಸಲ್ಲಿಸುತ್ತಿರುವ ಜೀವನ ಶಿಕ್ಷಣಕ್ಕೆ ೧೯೬೫ ಕ್ಕೆ ನೂರುವರುಷಗಳು ತುಂಬಿದವು. ೧೯೬೭ ರ ಮಾರ್ಚ ತಿಂಗಳ ದಿನಾಂಕ ೧೯ ರಂದು ಪತ್ರಿಕೆಯ ಶತಾಬ್ದಿ ಸಮಾರಂಭವು ಜರುಗಿತು. ಅದರ ನೆನಪಿಗಾಗಿ ೧೦೦ ಪುಟಗಳುಳ್ಳ ವಿಶೇಷ ಸಂಚಿಕೆಯನ್ನು ಹೊರಡಿಸಲಾಯಿತು. ಈ ಸಮಾರಂಭವನ್ನು ದಿವಂಗತ ಡಾ. ಪಾವಟೆಯವರು ಉದ್ಘಾಟಿಸಿದರು. ಆಗಿನ ಶಿಕ್ಷಣ ಇಲಾಖೆಯ ವರಿಷ್ಠಾಧಿಕಾರಿಗಳಿಂದ ಶ್ರೀ ಎಸ್. ವ್ಹಿ. ಜೇವೂರ ಅವರು ಅಧ್ಯಕ್ಷತೆ ವಹಿಸಿದ್ದರು. ಈ ಸಮಾರಂಭದಲ್ಲಿಯೇ ವಿಶೇಷ ಸಂಚಿಕೆಯೂ ಬಿಡುಗಡೆಯಾಯಿತು. ಈ ಶತಾಬ್ದಿ ಸಮಾರಂಭ ನಡೆದಾಗ ಶ್ರೀ ಬಿ. ಡಿ. ಮೂಗಿಯವರು ವಿದ್ಯಾಲಯದ ಪ್ರಾಚಾರ್ಯರಾಗಿದ್ದರು. ಕರ್ನಾಟಕದಲ್ಲಿ ೧೦೦ ವರ್ಷಗಳ ಕಾಲ ಬದುಕಿದ ಪತ್ರಿಕೆ ಎಂಬ ಐತಿಹಾಸಿಕ ಮಹತ್ವವನ್ನು ಹೊಂದಿದ ಜೀವನ ಶಿಕ್ಷಣ ಶೈಕ್ಷಣಿಕ ಮಾಸಪತ್ರಿಕೆ ಶಿಕ್ಷಕರು ಮತ್ತು ಪ್ರಾಥಮಿಕ ಶಾಲೆಗಳ ಚಂದಾದಾರರನ್ನು

ಹೆಚ್ಚಾಗಿ ಹೊಂದಿದೆ. ಆರ್ಥಿಕ ಕಷ್ಟಗಳನ್ನು ಎದುರಿಸಿಯೂ ಪತ್ರಿಕೆ ಶಿಕ್ಷಕರ ಅಭಿಮಾನದಿಂದ ನಿರಪೇಕ್ಷ ಸೇವೆಯಿಂದ ಬದುಕಿಕೊಂಡಿದೆ. ೧೯೭೮ ರಿಂದೀಚೆಗೆ ಪತ್ರಿಕೆಯ ಸ್ಥಿತಿ ಸುಧಾರಣೆಗೊಂಡಿದ್ದು ೧ ಲಕ್ಷ ರೂಪಾಯಿಗಳ ಶಾಶ್ವತನಿಧಿಯನ್ನು ಪತ್ರಿಕೆ ಹೊಂದಿದೆ.

೩. ಪಾಠಾಭ್ಯಾಸ ಆದರ್ಶ ಪ್ರಾಥಮಿಕ ಶಾಲೆಯ ಶತಮಾನೋತ್ಸವ ೧೯೭೪

ಈ ಶಾಲೆಯ ಮೊದಲಿನ ಹೆಸರು ಪ್ರ್ಯಾಕ್ಟಿಸಿಂಗ ಸ್ಕೂಲ (ಸಂಲಗ್ನ ಪ್ರಾಯೋಗಿಕ ಶಾಲೆ) ಉಪಾಧ್ಯಾಯರ ತರಬೇತಿ ವಿದ್ಯಾಲಯವು ೧೮೭೪ ರಲ್ಲಿ ಪುನಃ ಧಾರವಾಡಕ್ಕೆ ಸ್ಥಳಾಂತರಿಸಲಾಯಿತೆಂದು ಮೇಲೆ ಹೇಳಿದೆ. ಅದೇ ವರುಷ ಶಿಕ್ಷಕ ವಿದ್ಯಾರ್ಥಿಗಳ ಪ್ರಾಯೋಗಿಕ ಪಾಠಾಭ್ಯಾಸಕ್ಕಾಗಿ ಈ ಶಾಲೆಯನ್ನು ತೆರೆಯಲಾಯಿತು. ಈ ಶಾಲೆಗೆ ೧೯೭೪ ರ ಜನೆವರಿ ತಿಂಗಳಲ್ಲಿ ಒಂದು ನೂರು ವರುಷ ತುಂಬಿದವು. ಈ ಶಾಲೆಯು ವಿದ್ಯಾಲಯದ ಮುಖ್ಯಾಂಗ. ಇದು ಮೊದಲಿನಿಂದಲೂ ಮಾದರಿಯ ಶಾಲೆಯೆಂದು ಹೆಸರು ಪಡೆದಿದೆ. ವಿದ್ವಾಂಸರ, ಗಣ್ಯವ್ಯಕ್ತಿಗಳ ಹಾಗೂ ಶಿಕ್ಷಣ ತಜ್ಞರ ಮೆಚ್ಚುಗೆಯನ್ನು ಗಳಿಸಿದೆ. ತರಬೇತಿ ವಿದ್ಯಾಲಯಕ್ಕೆ ಬರುವ ಶಿಕ್ಷಕರಿಗೆ ಪಾಠಗಳನ್ನು ಕಲಿಸುವ ಪದ್ಧತಿಯನ್ನು ತಿಳಿಸಿ ತೋರಿಸಿ ಕೊಡಲು ಈ ಶಾಲೆಯನ್ನು ಉಪಯೋಗಿಸಲಾಗುತ್ತಿದೆ. ಹೀಗಾಗಿ ಈ ಶಾಲೆಗೆ ಶಿಕ್ಷಕರನ್ನು ನೇಮಿಸುವಾಗ ವಿದ್ಯಾಧಿಕಾರಿಗಳು ಪ್ರತಿಯೊಬ್ಬನ ಯೋಗ್ಯತೆಯನ್ನು ಕೂಲಂಕಷವಾಗಿ ವಿಚಾರಿಸಬೇಕಾಗುತ್ತದೆ. ಈ ಶಾಲೆಯಲ್ಲಿ ಪ್ರವೇಶ ದೊರಕಿಸಲು ಯಾವಾಗಲೂ ಬಲವಾದ ಬೇಡಿಕೆ. ಯಾಕಂದರೆ ಅಲ್ಲಿ ಪಾಠಗಳು ಸರಿಯಾಗಿ ನಡೆಯುತ್ತವಲ್ಲದೆ, ತರಬೇತಿಗೆ ಬಂದ ಶಿಕ್ಷಕ ವಿದ್ಯಾರ್ಥಿಗಳು ತಮ್ಮ ಪಾಠಗಳನ್ನು ಒಳ್ಳೇ ಕಾಳಜಿಯಿಂದ ತಯಾರಿಸಿ ಅನೇಕ ಉಪಕರಣಗಳನ್ನು ಉಪಯೋಗಿಸಿ ಈ ಶಾಲೆಯಲ್ಲಿ ಪ್ರಾಧ್ಯಾಪಕರ ಸಮಕ್ಷಮ ಕಲಿಸಬೇಕಾಗುತ್ತದೆ. ಹೀಗಾಗಿ ಪ್ರತಿಯೊಂದು ಪಾಠವೂ ಮಾದರಿಯ ಪಾಠವೆಂಬ ತಿಳುವಳಿಕೆಯುಂಟಾಗಿದೆ. ಇಲ್ಲಿಯ ಕೆಲಸ ವೇಳಾ ಪತ್ರಿಕೆಯಂತೆ ನಡೆಯುವದಲ್ಲದೆ ಅಭ್ಯಾಸ ಪತ್ರಿಕೆಯಂತೆ ಚಾಚೂ ತಪ್ಪದೆ ನಡೆಯುತ್ತದೆ. ಶಿಸ್ತಿಗೆ ಹೆಚ್ಚು ಮಹತ್ವ ಕೊಡಲಾಗುತ್ತದೆ. ಪ್ರತಿನಿತ್ಯ ಸಾಮೂಹಿಕ ಪ್ರಾರ್ಥನೆ ನಡೆಯುತ್ತದೆ. ಈ ಶಾಲೆಯ ಗುಣಮಟ್ಟವನ್ನು ಎತ್ತರಿಸಲು ಮುಖ್ಯಾಧ್ಯಾಪಕರ ಜಾಗೆಗೆ ತರಬೇತು ಹೊಂದಿದ ಪದವೀಧರರನ್ನೇ ಆರಿಸಲಾಗುತ್ತದೆ. ಕೈಕೆಲಸ, ಶಾರೀರಿಕ ಶಿಕ್ಷಣ, ಗಾಯನ, ಒಕ್ಕಲುತನ, ಹಿಂದಿ ಮುಂತಾದ ವಿಷಯಗಳನ್ನು ಕಲಿಸಲು ನುರಿತ ಹಾಗು ಅನುಭವಿಕ ಶಿಕ್ಷಕರನ್ನು ನೇಮಿಸಲಾಗುತ್ತಿದೆ. ಮಕ್ಕಳೇ ಕಾಯಿಪಲ್ಲೆಗಳನ್ನು ಬೆಳೆಸುತ್ತಾರೆ. ಮಕ್ಕಳೇ ತಮ್ಮ ತಮ್ಮ ವರ್ಗಗಳ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಾರೆ. ಹೀಗಾಗಿ ಪ್ರಜಾಪ್ರಭುತ್ವದ ಮೂಲ ಪಾಠಗಳ ಪರಿಚಯವನ್ನು ಮಾಡಿಕೊಳ್ಳುತ್ತಾರೆ. ಮಕ್ಕಳ ಮಂತ್ರಿ ಮಂಡಲಗಳಿವೆ. ಈ ಶಾಲೆಯಲ್ಲಿ ಜೀವನ ಶಿಕ್ಷಣ ಪದ್ಧತಿಯಲ್ಲಿ ಪಾಠಗಳು ನಡೆಯುತ್ತಿವೆ.

ಈ ಶಾಲೆಯಿಂದ ಹೊರಬಿದ್ದ ವಿದ್ಯಾರ್ಥಿಗಳಲ್ಲಿ ಅನೇಕರು ಸಾರ್ವಜನಿಕ ರಂಗದಲ್ಲಿ ಉನ್ನತ ಸ್ಥಾನಗಳಲ್ಲಿದ್ದು ತಮ್ಮ ಶಾಲೆಗೆ ಕೀರ್ತಿ ತಂದಿದ್ದಾರೆ. ಈ ಶಾಲೆಯ ಹಳೆಯ ವಿದ್ಯಾರ್ಥಿಗಳೂ, ಅಭಿಮಾನಿಗಳೂ, ನಿವೃತ್ತ ಶಿಕ್ಷಕರೂ ಹಾಗೂ ಅಧಿಕಾರಿಗಳು ಕೂಡಿ ವಿಚಾರ ವಿನಿಮಯ ಮಾಡಿ ಇದರ ಶತಾಬ್ದಿ ಸಮಾರಂಭವನ್ನು ಏರ್ಪಡಿಸಬೇಕೆಂದು ನಿರ್ಧರಿಸಿ ಆ ದಿಶೆಯಲ್ಲಿ ಕಾರ್ಯೋನ್ಮುಖರಾದರು. ಈ ಸಮಾರಂಭವು ೧೯೭೫ರ ಫೆಬ್ರುವರಿ ತಿಂಗಳ ದಿನಾಂಕ ೬ ಹಾಗೂ ೭ ರಂದು ನಡೆಯಿತು. ಮೊದಲನೆಯ ದಿನ ಪ್ರಾರಂಭೋತ್ಸವವು ಹುಬ್ಬಳ್ಳಿಯ ಮೂರುಸಾವಿರಮಠದ ಜಗದ್ಗುರುಗಳಾದ ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳ ಅಮೃತ ಹಸ್ತದಿಂದ ನಡೆಯಿತು. ನಿವೃತ್ತ ಪ್ರಿನ್ಸಿಪಾಲ ಎಸ್. ಎಸ್. ಮಾಳವಾಡ ಇವರು ಅಧ್ಯಕ್ಷತೆ ವಹಿಸಿದ್ದರು ಮರುದಿನ ಸ್ಮರಣ ಸಂಚಿಕೆಯ ಬಿಡುಗಡೆ ಹಾಗು ಮುಕ್ತಾಯ ಸಮಾರಂಭ ನಡೆದವು. ಕರ್ನಾಟಕ ವಿಶ್ವವಿದ್ಯಾಲಯದ ಕುಲಸಚಿವರಾದ ಶ್ರೀ ಎಸ್. ಎಸ್. ಒಡೆಯರ ಇವರು ವಿಶೇಷ ಸಂಚಿಕೆಯನ್ನು ಪ್ರಕಟಿಸಿದರು. ನಿವೃತ್ತ ಶಿಕ್ಷಣಾಧಿಕಾರಿಗಳಾದ ಶ್ರೀ ತೇರಗಾಂವಕರರು ಶೈಕ್ಷಣಿಕ ಪ್ರದರ್ಶನವನ್ನು ಉದ್ಘಾಟಿಸಿದರು. ಮುಕ್ತಾಯ ಸಮಾರಂಭದ ಅಧ್ಯಕ್ಷತೆಯನ್ನು ದಿವಂಗತ ವರಕವಿ ಬೇಂದ್ರೆಯವರು ವಹಿಸಿದ್ದರು. ಆಗ ಕೇಂದ್ರ ಸರಕಾರದಲ್ಲಿ ಸಚಿವರಾದ ಶ್ರೀಮತಿ ಸರೋಜಿನಿ ಮಹಿಷಿಯವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಹೀಗೆ ಈ ಶಾಲೆಯ ಶತಾಬ್ದಿ ಸಮಾರಂಭವು ಸುಗಮವಾಗಿ ಸೊಗಸಾಗಿ ನಡೆಯಿತು. ಆಗ ಜಲರಡ್ಡಿಯವರು ಈ ಶಾಲೆಯ ಮುಖ್ಯ ಪ್ರಾಧ್ಯಾಪಕರಾಗಿದ್ದರು.ಮತ್ತು ಶ್ರೀ ಎಚ್. ಜಿ. ಜೋಶಿಯವರು ಉಪಾಧ್ಯಾಯರ ತರಬೇತಿ ವಿದ್ಯಾಲಯದ ಪ್ರಾಚಾರ್ಯರಾಗಿದ್ದರು. ಶ್ರೀ ಮ. ಗು. ಹಂದ್ರಾಳ ಅವರು ಉತ್ಸವ ಸಮಿತಿಯ ಅಧ್ಯಕ್ಷರಾಗಿದ್ದರು. ಶಾಲೆಯ ವಿವಿಧ ವರ್ಗಗಳಲ್ಲಿ ಮೇಲ್ದರ್ಜೆಯ ಸ್ಥಾನ ಪಡೆದವರಿಗೆ ಬಹುಮಾನ ಕೊಡಲು ಶಾಶ್ವತ ನಿಧಿಯನ್ನೂ ಈ ಸಂದರ್ಭದಲ್ಲಿ ಏರ್ಪಡಿಸಲಾಯಿತು. ೧೯೭೪ ನೆಯ ವರ್ಷದಲ್ಲಿ ಶಾಲೆಯ ಕಟ್ಟಡದ ವಿಸ್ತರಣೆಯಾಯಿತಲ್ಲದೇ ಸುಸಜ್ಜಿತವಾದ ಮಕ್ಕಳ ವಾಚನಾಲಯವನ್ನು ಪ್ರಾರಂಭಿಸಲಾಯಿತು. ಈ ಶಾಲೆಯ ವಿದ್ಯಾರ್ಥಿಗಳು ಅಖಿಲ ಕರ್ನಾಟಕ ಮಟ್ಟದಲ್ಲಿ ಮಕ್ಕಳ ನಾಟಕ ಸ್ಪರ್ಧೆಯಲ್ಲಿ ೨ ಬಾರಿ ಪ್ರಶಸ್ತಿಯನ್ನು ಪಡೆದಿದ್ದಾರೆ.

೪. ಗಂಗಾಧರ ಮಡಿವಾಳೇಶ್ವರ ತುರಮರಿ ಅವರ ಪುಣ್ಯತಿಥಿ ಶತಾಬ್ದಿ ೧೯೭೭

ದುಡಿತ ಹೆಚ್ಚು ಪ್ರತಿಫಲ ಕಡಿಮೆ ಇದ್ದ ಉದ್ಯೋಗಗಳಲ್ಲಿ ಶಿಕ್ಷಣಕ್ಕೆ ಅಗ್ರಸ್ಥಾನ. ಈ ಉದ್ಯೋಗವನ್ನು ನಿಜವಾಗಿ ಪ್ರೀತಿಸುವವರು ಮಾತ್ರ ಅದರಲ್ಲಿ ಸೇರುತ್ತಾರೆ. ಅಂಥವರು ಮಾತ್ರ ಚಿಕ್ಕ ಮಕ್ಕಳಿಗೆ ಸರಿಯಾದ ಮಾರ್ಗದರ್ಶನ ಮಾಡಿ ಪುನೀತರಾಗುತ್ತಾರೆ. ಇಂಥವರ ಸಾಲಿಗೆ ಸೇರಿದವರೆಂದರೆ ದಿವಂಗತ ಗಂಗಾಧರ ಮಡಿವಾಳೇಶ್ವರ ತೂರಮರಿಯವರು. ಖಾಸಗಿ (ಗಾವಠೀ) ಶಾಲೆಯ ಶಿಕ್ಷಕರಾಗಿ ಕಾಯಕವನ್ನು

ಪ್ರಾರಂಭಿಸಿ ಬಾಣಭಟ್ಟನ ಸಂಸ್ಕೃತ ಕಾದಂಬರಿಯನ್ನು ಕನ್ನಡಕ್ಕೆ ಅನುವಾದಿಸಿ ಅದೊಂದು ಮೂಲಕೃತಿ ಅನ್ನುವ ಹಾಗೆ ಸಾಹಿತ್ಯದ ಉನ್ನತಮಟ್ಟಕ್ಕೆ ಏರಿಸಿದ ಘನವಾದ ಕೀರ್ತಿ ಅವರದು. ತೂರಮರಿಯವರು ಇಂದಿನ ಸಾಹಿತಿಗಳಿಗೆ ಮತ್ತು ಶಿಕ್ಷಕರಿಗೆ ಒಳ್ಳೇ ಆಸ್ತಿಯನ್ನು ಬಿಟ್ಟು ಹೋಗಿದ್ದಾರೆ. ಅವರು ಸುಮಾರು ೩೦ ವರುಷಗಳವರೆಗೆ ಶಿಕ್ಷಕರಾಗಿ ಶಿಕ್ಷಣ ಹಾಗು ಸಾಹಿತ್ಯಕ್ಷೇತ್ರದಲ್ಲಿ ಅಮೋಘ ಸೇವೆ ಸಲ್ಲಿಸಿದರು. ಅವರು ಬೈಲಹೊಂಗಲದವರು. ೧೮೨೭ರಲ್ಲಿ ಜನಿಸಿದವರು. ತಮ್ಮ ಗುರುಗಳ ಮಾರ್ಗದರ್ಶನದಲ್ಲಿ ಹಳಗನ್ನಡ ಹೊಸಗನ್ನಡ ಹಾಗು ಸಂಸ್ಕೃತ ಭಾಷೆಗಳನ್ನು ಆಳವಾಗಿ ಅಭ್ಯಾಸಿಸಿ ಶಿಕ್ಷಣ ವೃತ್ತಿಯನ್ನು ಕೈಕೊಂಡರು. ಅವರು ಹುನಗುಂದದಲ್ಲಿ ಪ್ರಾಥಮಿಕ ಶಾಲೆಯ ಮುಖ್ಯಾಧ್ಯಾಪಕರಾಗಿ ಕೆಲಸ ಮಾಡುವಾಗ ಅವರ ಪಾಂಡಿತ್ಯದ ಪ್ರತಿಭೆ ಡೆ. ಚನ್ನಬಸಪ್ಪನವರನ್ನು ಆಕರ್ಷಿಸಿತು. ಅವರ ಉತ್ಕಟ ಭಾಷಾಭಿಮಾನ, ಕರ್ತವ್ಯದಕ್ಷತೆ, ಸಾದಾ ಜೀವನ ಹಾಗು ಅವಿಶ್ರಾಂತ ದುಡಿಮೆಗಳನ್ನು ಮೆಚ್ಚಿದ ಡೆಪ್ಯೂಟಿಯವರು ಅವರನ್ನು ಆಗ ಬೆಳಗಾವಿಯಲ್ಲಿದ್ದ ಟ್ರೇನಿಂಗ ಕಾಲೇಜಕ್ಕೆ ವರ್ಗಾಯಿಸಿಕೊಂಡರು. ಈ ಸಂಸ್ಥೆಯ ಸೇವೆಯಲ್ಲಿದ್ದಾಗಲೆ ೧೮೭೭ರಲ್ಲಿ ಮರಣಹೊಂದಿದರು. ಇವರು ತಮ್ಮ ಸುದೀರ್ಘವಾದ ಸೇವೆಯಲ್ಲಿ ಎದುರಾದ ಸಮಸ್ಯೆಗಳೆಲ್ಲವನ್ನೂ ಪರಿಹರಿಸಿ ತಮ್ಮ ಜೀವನದ ಸಾರ್ಥಕತೆಯನ್ನು ಪಡೆದರು. ದಿ. ತೂರಮರಿಯವರು ಶಿಕ್ಷಕರಾದಾಗ ಈ ನಾಡಿನ ಜನರಲ್ಲಿ ತಮ್ಮ ಮಾತೃಭಾಷೆಯಾದ ಕನ್ನಡದ ಬಗೆಗೆ ಅಭಿಮಾನ ಆಸಕ್ತಿಗಳು ಶೂನ್ಯವಾಗಿದ್ದವು. ಡೆ. ಚನ್ನಬಸಪ್ಪನವರ ಕಳಕಳಿಯ ಮಾರ್ಗದರ್ಶನದಲ್ಲಿ ತೂರಮರಿಯವರು ಮಾಡಿದ ಮೊದಲನೆಯ ಮಹತ್ಕಾರ್ಯವೆಂದರೆ ಕನ್ನಡ ಜನತೆಯಲ್ಲಿ ಕನ್ನಡದ ಬಗೆಗೆ ಆಸಕ್ತಿ–ಅಭಿಮಾನಗಳನ್ನು ಹುಟ್ಟಿಸಿದುದು. ಇವರು ಶಾಲಾ ಪಠ್ಯ ಪುಸ್ತಕಗಳನ್ನು ತಯಾರಿಸಿದರು. ಕವನಗಳನ್ನು ರಚಿಸಿ ಸಂಗ್ರಹಿಸಿ ಶಿಕ್ಷಕರಿಗೆ ಸಹಾಯ ಮಾಡಿದರು. ಕಠಿಣ ಶಬ್ದಗಳ ಸುಲಭ ಅರ್ಥವನ್ನು ಕೊಡುವ ನಿಘಂಟನ್ನು ತಯಾರಿಸಿದರು. ಮಠ ಪತ್ರಿಕೆಯ ಸಹಸಂಪಾದಕರಾಗಿ ತಮ್ಮ ಅನುಭವ ಹಾಗು ಪಾಂಡಿತ್ಯಪೂರ್ಣ ಲೇಖನಗಳಿಂದ ಪತ್ರಿಕೆಯ ಘನತೆಯನ್ನು ಬೆಳೆಸಿದರು. ತರಬೇತಿ ವಿದ್ಯಾಲಯದ ವ್ಹಾಯಿಸ ಪ್ರಿನ್ಸಿಪಾಲರಾದರು. ಕನ್ನಡ ಭಾಷಾಂತರಕಾರರಾಗಿಯೂ ಸೇವೆ ಸಲ್ಲಿಸಿದರು. ಶ್ರೇಷ್ಠ ಶಿಕ್ಷಕರಾಗಿ, ಗ್ರಂಥಕರ್ತರಾಗಿ ಮಠ ಪತ್ರಿಕೆಯ ಸಹ ಸಂಪಾದಕರಾಗಿ, ಕನ್ನಡ ಭಾಷಾಂತರಕಾರರಾಗಿ ಕನ್ನಡ ಭಾಷೆ, ಶಿಕ್ಷಣ ಹಾಗು ಸಾಹಿತ್ಯಗಳನ್ನು ಉದ್ಧರಿಸಿದ ಮಹಾನುಭಾವರು ತೂರಮರಿಯವರು. ಬಾಣಭಟ್ಟನ ಕಾದಂಬರಿಯನ್ನು ತಿಳಿಗನ್ನಡಕ್ಕೆ ಅನುವಾದಿಸಿ ಅದೊಂದು ಮೂಲ ಕೃತಿಯೆಂಬುವಂತೆ ಮಾಡಿ ಆಧುನಿಕ ಗದ್ಯ ಸಾಹಿತ್ಯದ ಪಿತಾಮಹರಾದರು. ಇಂಥ ಆದರ್ಶ ಶಿಕ್ಷಕರ ಪುಣ್ಯ ತಿಥಿಯ ಶತಮಾನೋತ್ಸವವನ್ನು ಉಪಾಧ್ಯಾಯರ ಸರಕಾರಿ ತರಬೇತಿ ವಿದ್ಯಾಲಯದ ಇಂದಿನ ಹಿಂದಿನ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಸಂಘದ ಬಳಗದ ಬಳ್ಳಿಯ ಪರವಾಗಿ ೧೯೭೭ರ ನವ್ಹಂಬರ ದಿನಾಂಕ ೨೮ ರಂದು

ಆಚರಿಸಿ ದಿವಂಗತ ತೂರಮರಿಯವರು ಕನ್ನಡ ಜನಾಂಗಕ್ಕೆ ಮಾಡಿದ ಮಹೋಪಕಾರವನ್ನು ಸ್ಮರಿಸಿದರು. ಅಂದಿನ ಸಮಾರಂಭಕ್ಕೆ ಪರಮಪೂಜ್ಯ ಡಾ. ಜ. ಚ. ನಿ. ಅವರು ಆಗಮಿಸಿ ಆಶೀರ್ವದಿಸಿದರು. ಆಗ ದಿ. ತೂರಮರಿಯವರ ಹುಲುಸಾದ ಸಾಹಿತ್ಯದ ಬಗೆಗೆ ವಿಚಾರ ಸಂಕಿರಣ ನಡೆಯಿತು. ಅವರಲ್ಲಿ ಪ್ರೊ. ಭೂಸನೂರಮಠ, ಜಿಲ್ಹಾ ಉಪನಿರ್ದೇಶಕರಾದ ಹಸುವೆಗೌಡ, ಡಾ. ಕೃಷ್ಣಮೂರ್ತಿ, ಎಸ್. ಪಿ. ಪಾಟೀಲ ಮೊದಲಾದವರು ಭಾಗವಹಿಸಿ ದಿವಂಗತರಿಂದ ಕನ್ನಡ ಸಾಹಿತ್ಯಕ್ಕೆ ಆದ ಘನವಾದ ಸೇವೆಯನ್ನು ವಿವರಿಸಿ ಕನ್ನಡ ಜನತೆಯ ಕೃತಜ್ಞತೆಯನ್ನರ್ಪಿಸಿದರು. ಇದು ಕಾಯಕಯೋಗಿ ಶಿಕ್ಷಕರೊಬ್ಬರಿಗೆ ಸಲ್ಲಬೇಕಾದ ಹಾರ್ದಿಕ ಗೌರವ. ಆಗ ಶ್ರೀ ಶಿವಶಂಕರ ಹಿರೇಮಠರು ವಿದ್ಯಾಲಯದ ಪ್ರಾಚಾರ್ಯರಾಗಿದ್ದರು. ತೂರಮರಿ ಅವರ ಜೀವನ ಮತ್ತು ಕೃತಿಗಳ ಪರಿಚಯ ಮಾಡಿಕೊಡುವ ಸ್ಮರಣ ಸಂಚಿಕೆಯೊಂದನ್ನು ಹೊರತರಲಾಗಿದೆಯಲ್ಲದೆ ಬೆಳಗಾಂವಿಯಲ್ಲಿ ೧೯೭೦ ರಲ್ಲಿ ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಮಂಟಪಕ್ಕೆ ಗಂಗಾಧರ ಮಡಿವಾಳೇಶ್ವರ ತೂರಮರಿ ಮಂಟಪ ಎಂದು ಹೆಸರಿಟ್ಟುದುದನ್ನೂ ಜ್ಞಾಪಿಸಿಕೊಳ್ಳಬಹುದು. ವಿದ್ಯಾಲಯದ ಬಳಗದ ಬಳ್ಳಿಯು ಸಹ ಕೆಲವು ಶೈಕ್ಷಣಿಕ ಪುಸ್ತಕಗಳನ್ನು ಹೊರತಂದಿದೆ.

೫ ಡೆಪ್ಯೂಟಿ ಚನ್ನಬಸಪ್ಪನವರ ಪುಣ್ಯ ತಿಥಿ ಶತಮಾನೋತ್ಸವ ೧೯೮೧

ಡೆಪ್ಯೂಟಿ ಚನ್ನಬಸಪ್ಪನವರು ಅನೇಕ ರಂಗಗಳಲ್ಲಿ ಪ್ರಪ್ರಥಮರು. ಎಂಜನೀಯರಿಂಗದಲ್ಲಿ ಉನ್ನತ ಪರೀಕ್ಷೆಯನ್ನು ಪ್ರಥಮಶ್ರೇಣಿಯಲ್ಲಿ ಪಾಸಾದ ಪ್ರಥಮ ಕನ್ನಡಿಗರು. ಅದೇ ಕಾಲೇಜಿನಲ್ಲಿ ಪ್ರಾಧ್ಯಾಪಕರಾದ ಕನ್ನಡಿಗರಲ್ಲಿ ಅವರೇ ಮೊದಲಿಗರು. ಉಪಾಧ್ಯಾಯರ ಸರಕಾರಿ ತರಬೇತಿ ವಿದ್ಯಾಲಯ ದಪ್ರಪ್ರಥಮ ಪ್ರಾಚಾರ್ಯರೂ ಅವರೇ. ಈ ಸಂಸ್ಥೆಯಿಂದ ಪ್ರಾರಂಭಿಸಲ್ಪಟ್ಟ ಮಠಪತ್ರಿಕೆಯ ಪ್ರಥಮ ಸಂಪಾದಕರೂ ಅವರೇ. ಬಡವಿದ್ಯಾರ್ಥಿಗಳಿಗಾಗಿ ಉಚಿತ ಪ್ರಸಾದ ನಿಲಯುವನ್ನು ಅವರೇ ಮೊದಲು ಸುರು ಮಾಡಿದರು. ಡೆಪ್ಯೂಟಿ ಎಜ್ಯುಕೇಶನಲ್ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟಕನ್ನಡಿಗರಲ್ಲಿ ಅವರೇ ಮೊದಲಿಗರು. ಹೀಗಾಗಿ ೧೮೫೬ ರಿಂದ ೧೮೮೧ ರ ವರೆಗೆ ಶಿಕ್ಷಣ ಕ್ಷೇತ್ರದಲ್ಲಿ ಅವರ ದಿವ್ಯ ಭವ್ಯ ವ್ಯಕ್ತಿತ್ವ ಪ್ರಜ್ವಲಿಸುತ್ತಿತ್ತು. ಪ್ರಾಥಮಿಕ ಹಂತದ ಪಠ್ಯಪುಸ್ತಕದಲ್ಲಿ ಅವರ ಬಗೆಗೆ ಪಾಠವೊಂದು ಸಾಮಾನ್ಯವಾಗಿ ಇದ್ದೇ ಇರುತ್ತದೆ. ಆದರೆ ಅವರ ಘನವಾದ ವ್ಯಕ್ತಿತ್ವದ ಪೂರ್ಣಪರಿಚಯ ಕೇವಲ ಒಂದು ಪಾಠದಿಂದ ಆಗಲಾರದು. ಕನ್ನಡ ನಾಡು ನುಡಿಗೆ ಅವರಿಂದಾದ ಅಪಾರವಾದ ಈ ಅಮೋಘವಾದ ಸೇವೆಯು ನಿಜವಾದ ಕಲ್ಪನೆ ಇತ್ತೀಚೆಯಿಂದ ಜನರಲ್ಲಿ ಮೂಡಹತ್ತಿದೆ. ಪಠ್ಯಪುಸ್ತಕದಲ್ಲಿ ಮಾತ್ರ ಅವರೊಬ್ಬ ಆದರ್ಶವಿದ್ಯಾರ್ಥಿ, ಕಷ್ಟಪಟ್ಟು ಅಭ್ಯಾಸಮಾಡಿದರು, ಡೆಪ್ಯೂಟಿ ಇನ್ಸ್‌ಪೆಕ್ಟರರಾಗಿ ಶ್ರಮವಹಿಸಿ ದುಡಿದು ಕನ್ನಡ ಶಿಕ್ಷಣ ಪ್ರಸಾರಮಾಡಿದರು, ಶಾಲೆಗಳ ಸಂಖ್ಯೆಯನ್ನು ಹೆಚ್ಚಿಸಿದರೆಂದು ಬರೆಯಲಾಗಿದೆ. ಇದರ ಹೊರತು ಅವರು ಮಾಡಿದ

ಮಹತ್ಕಾರ್ಯದ ಬಗೆಗೆ ಮಾಹಿತಿ ಅಲ್ಲಿ ದೊರಕುವದಿಲ್ಲ. ಅವರ ಜೀವನ ಕುರಿತು ಒಂದು ಚಿಕ್ಕ ಪುಸ್ತಕವನ್ನು ದಿವಂಗತ ಫ. ಗು. ಹಳಕಟ್ಟಿಯವರು ೧೯೧೪ ರಲ್ಲಿ ಪ್ರಕಟಿಸಿದರು. ಅದರಲ್ಲಿಯೂ ಸಹ ಡೆ. ಚನ್ನಬಸಪ್ಪನವರು ಟ್ರೇನಿಂಗ ಸ್ಕೂಲಿನ ಹೆಡ್‌ಮಾಸ್ತರರಾಗಿದ್ದಾರೆಂದು ಬರೆಯಲಾಗಿದೆ. ಅವರು ಟ್ರೇನಿಂಗ ಕಾಲೇಜದ ಪ್ರಥಮ ಪ್ರಿನ್ಸಿಪಾಲರಾಗಿದ್ದರೆಂಬ ಸಂಗತಿಯು ೧೯೫೫ ರಲ್ಲಿ ಖಚಿತವಾಯಿತು. ಆ ವರುಷ ಜನೆವರಿ ೧೩ ರಂದು ಅವರ ಭಾವಚಿತ್ರದ ಅನಾವರಣ ಸಮಾರಂಭ ಕಾಲೇಜದ ಪ್ರಾರ್ಥನಾ ಮಂದಿರದಲ್ಲಿ ನಡೆಯಿತು. ಆಗಿನ ಶಿಕ್ಷಣ ಮಂತ್ರಿಗಳಾದ ಮಾನ್ಯ ದಿನಕರ ದೇಸಾಯಿಯವರು ಮುಖ್ಯ ಅತಿಥಿಗಳಾಗಿ ಬಂದು ಭಾವಚಿತ್ರದ ಅನಾವರಣ ನೆರ-ವೇರಿಸಿದರು. ಆಗ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ದಿವಂಗತ ಡಾ. ಪಾವಟೆಯವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಅವರೇ ಈ ಸಮಾರಂಭಕ್ಕೆ ಮೂಲಕಾರಣರು. ಯಾಕೆಂದರೆ ಅವರ ಸೂಚನೆಯ ಮೇರೆಗೆ ವಿದ್ಯಾಲಯದ ಮಾಸಪತ್ರಿಕೆಯ ಹಿಂದಿನ ಸಂಚಿಕೆಗಳನ್ನು ಕೂಲಂಕಷವಾಗಿ ನೋಡುವಾಗ ಈ ಸಂಗತಿ ಹೊರಬಂತು. ಅಂದಿನಿಂದ ಅವರ ಬಗೆಗೆ ಲೇಖನಗಳು ಚಿಕ್ಕ ಪುಸ್ತಕಗಳೂ ಪ್ರಕಟವಾಗಿವೆ. ೧೯ ನೇ ಶತಮಾನದ ಕನ್ನಡ ಸಾಹಿತ್ಯದ ಬಗೆಗೆ ಬರೆಯಲ್ಪಟ್ಟ ಸಂಶೋಧನಾತ್ಮಕ ಗ್ರಂಥಗಳಲ್ಲಿ ಡೆಪ್ಯೂಟಿಯವರ ಕನ್ನಡ ಸಾಹಿತ್ಯಕ್ಕೆ ಹಾಗೂ ಶೈಕ್ಷಣಿಕ ಸೇವೆಗಳ ಬಗೆಗೆ ಹೆಚ್ಚಿನ ವಿವರಗಳು ದೊರಕಹತ್ತಿವೆ. ಈ ಮಹಾನು ಭಾವರು ಕನ್ನಡ ಭಾಷೆ ಹಾಗು ಶೈಕ್ಷಣಿಕ ಸೇವೆಗೆ ತಮ್ಮ ಇಡೀ ಜೀವನವನ್ನೇ ಮುಡುಪಾಗಿಟ್ಟು ಅವಿಶ್ರಾಂತ ಪರಿಶ್ರಮದ ಪರಿಣಾಮವಾಗಿ ಚಿಕ್ಕ ವಯಸ್ಸಿನಲ್ಲಿಯೇ (೧೮೩೩–೧೮೮೧) ನಿಧನ ಹೊಂದಿದರು. ೧೮೮೧ ರ ಜನೆವರಿ ೪ ರಂದು ಅವರು ನಿಧನಹೊಂದಿ ನೂರುವರುಷಗಳಾದವು. ೧೯೭೭ ರ ನವ್ಹಂಬರ ತಿಂಗಳ ೨೮ ರಂದು ದಿ. ಗಂಗಾಧರ ಮಡಿವಾಳೇಶ್ವರ ತೂರಮರಿಯವರ ಪುಣ್ಯ ತಿಥಿ ಶತಾಬ್ದಿ ಸಮಾರಂಭ ವನ್ನು ಉದ್ಘಾಟಿಸುವಾಗ ಪರಮಪೂಜ್ಯ ಡಾ॥ ಜ. ಚ. ನಿಯವರು ಡೆ. ಚನ್ನಬಸಪ್ಪ ನವರ ಸೇವೆಯ ಬಗೆಗೆ ಪ್ರಸ್ತಾಪಿಸಿ ಅವರ ಪುಣ್ಯತಿಥಿ ಶತಮಾನೋತ್ಸವವನ್ನು ಜರುಗಿಸಬೇಕೆಂದು ಆಶೀರ್ವಚನದಲ್ಲಿ ಹೇಳಿದರು ಆಗ ವಿದ್ಯಾಲಯದ ಪ್ರಾಚಾರ್ಯ ರಾಗಿದ್ದ ಶ್ರೀ ಶಿವಶಂಕರ ಹಿರೇಮಠರವರೂ ಸಹ ಡೆ. ಚನ್ನಬಸಪ್ಪನವರ ಪುಣ್ಯತಿಥಿ ಶತಾಬ್ದಿಯ ಬಗೆಗೆ ಆಗಾಗ ವಿಚಾರ ವಿನಿಮಯ ಮಾಡುತ್ತಿದ್ದರು. ೧೯೭೯ ರಲ್ಲಿ ನಗರದ ಗಣ್ಯವ್ಯಕ್ತಿಗಳ, ಹಾಗೂ ನಿವೃತ್ತ ಪ್ರಿನ್ಸಿಪಾಲರ ಸಭೆಯನ್ನು ಕರೆದು ಔಪಚಾರಿಕವಾಗಿ ಶತಮಾನೋತ್ಸವವನ್ನು ನೆರವೇರಿಸಬೇಕೆಂದು ಸರ್ವಾನು ಮತದಿಂದ ಒಪ್ಪಿ ಮುಂದಿನ ಕಾರ್ಯ ಕೈಕೊಳ್ಳಲು ಡೆ. ಚನ್ನಬಸಪ್ಪನವರ ಶತಮಾನೋತ್ಸವ ಸಮಿತಿಯನ್ನು ರಚಿಸಿ ಅದರ ಅಧ್ಯಕ್ಷರಾಗಲು ನಮ್ಮ ರಾಜ್ಯದ ವಿದ್ಯಾ ಸಚಿವರಾದ ಮಾನ್ಯ ಶಂಕರರಾವ ಅವರನ್ನು ವಿನಂತಿಸಿದ ಮೇರೆಗೆ ಅವರು ಸಹ ನಮ್ಮ ಯೋಜನೆ-ಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ ಸಮಿತಿಯ ಅಧ್ಯಕ್ಷರಾಗಲು ಒಪ್ಪಿದರು. ಈ

ಸಮಿತಿಯಲ್ಲಿ ಗಣ್ಯವ್ಯಕ್ತಿಗಳೂ, ಸೇವಾನಿರತ ಹಾಗು ನಿವೃತ್ತ ವಿದ್ಯಾಧಿಕಾರಿಗಳೂ ಹಾಗು ಪ್ರಾಧ್ಯಾಪಕರೂ ಇದ್ದಾರೆ. ಸಮಿತಿಯ ಸದಸ್ಯರೂ ಪದಾಧಿಕಾರಿಗಳೂ ಅದರಲ್ಲಿಯೂ ಜಿಲ್ಹಾ ಶಿಕ್ಷಣಾಧಿಕಾರಿಗಳಾದ ಶ್ರೀ ಎಸ್. ಜಿ. ಪಾಟೀಲರು, ಶಿಕ್ಷಕರ ತರಬೇತಿ ಕೇಂದ್ರದ ಪ್ರಾಚಾರ್ಯರಾದ ಶ್ರೀ ಶಿವಶಂಕರ ಹಿರೇಮಠ ಹಾಗೂ ಕೋಶಾಧ್ಯಕ್ಷರಾದ ಶ್ರೀ ಎಮ್. ಜಿ. ಹಂದ್ರಾಳರವರು ಹುರುಪು ಹುಮ್ಮಸಗಳಿಂದಲೂ ಶತಮಾನೋತ್ಸವವನ್ನು ದೊಡ್ಡ ಪ್ರಮಾಣದಲ್ಲಿ ಮಾಡಬೇಕೆಂಬ ಆಸಕ್ತಿಯಿಂದಲೂ ಕಾರ್ಯೋನ್ಮುಖರಾದರು. ನಿಧಿ ಸಂಗ್ರಹ ಕಾರ್ಯವೂ ಭರದಿಂದ ಸಾಗಿತು. ಕೆಲವೇ ತಿಂಗಳಲ್ಲಿ ಒಂದು ಲಕ್ಷಕ್ಕೂ ಮೀರಿ ಧನ ಸಂಗ್ರಹವಾಯಿತು. ಚನ್ನಬಸಪ್ಪನವರ ಕಂಚಿನ ಪ್ರತಿಮೆಯನ್ನು ಪ್ರತಿಷ್ಠಾಪಿಸುವದು, ಚನ್ನಬಸಪ್ಪನವರ ಸ್ಮಾರಕ ಗ್ರಂಥವನ್ನು ಪ್ರಕಟಿಸುವದು, ಪ್ರತಿಷ್ಠಾನವನ್ನು ರಚಿಸುವದು, ಶತಮಾನೋತ್ಸವವನ್ನು ೧೯೬೦ನೆಯ ಇಡೀ ವರ್ಷದಲ್ಲಿ ಎಲ್ಲ ಕಡೆಗೂ ಆಚರಿಸುವದು, ಈ ಪ್ರಕಾರ ಕಾರ್ಯಕ್ರಮುವನ್ನು ಹಮ್ಮಿಕೊಂಡು ಸಮಿತಿಯವರು ಮುನ್ನಡೆದರು. ೧೯೬೦ ರ ಕೊನೆಗೆ ಶತಮಾನೋತ್ಸವದ ರೂಪರೇಷೆಗಳು ಸಿದ್ಧವಾಗಿ ೧೯೬೧ ಜನೇವರಿ ೪ ರಂದು ಶತಾಬ್ದಿ ಸಮಾರಂಭವು ಪಾಠಾಭ್ಯಾಸ ಶಾಲೆಯ ಎದುರಿಗೆ ಹಾಕಲ್ಪಟ್ಟ ವಿಶಾಲವಾದ ಮಂಟಪದಲ್ಲಿ ಒಳ್ಳೇ ವೈಭವದಿಂದ ನೆರವೇರಿತು. ಶಿಕ್ಷಣ ಸಚಿವರಾದ ಮಾನ್ಯ ಶ್ರೀ ಶಂಕರರಾವ ಅವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಹಣಕಾಸಿನ ಮಂತ್ರಿಗಳಾದ ಮಾನ್ಯ ಶ್ರೀ ವೀರಪ್ಪ ಮೊಯ್ಲಿಯವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಅಂದು ಜರುಗಿದ ಶಿಕ್ಷಣ ವಿಚಾರ ಸಂಕಿರಣದಲ್ಲಿ ಹಿರಿಯರಾದ ಶ್ರೀ ಎಸ್. ವಿ. ಜೇವೂರ, ಶ್ರೀ ಕೆ. ಬಿ. ತೇರಗಾಂವಕರ, ಶ್ರೀ ಮ. ಗು. ಹಂದ್ರಾಳ, ಪ್ರಿನ್ಸಿಪಾಲ ಬಿ. ಸಿ. ಪಾಟೀಲ ಮುಂತಾದವರು ಭಾಗವಹಿಸಿದ್ದರು. ಕವಿಗೋಷ್ಠಿಗೆ ಖ್ಯಾತ ಕವಿ ಚನ್ನವೀರ ಕಣವಿಯವರು ಅಧ್ಯಕ್ಷತೆ ವಹಿಸಿದ್ದರು. ಒಂದು ಲಕ್ಷ ರೂಪಾಯಿಗಳನ್ನು ಡೆ. ಚನ್ನ-ಬಸಪ್ಪ ಪ್ರಾಥಮಿಕ ಶಿಕ್ಷಣ ಪ್ರತಿಷ್ಠಾನಕ್ಕೆ ಪ್ರಥಮ ದೇಣಿಗೆಯಾಗಿ ಅಧ್ಯಕ್ಷರ ಅಮೃತ ಹಸ್ತದಿಂದ ಕೊಡಲಾಯಿತು. ಅಂದಿನಿಂದ ಪ್ರತಿಷ್ಠಾನವು ಪ್ರಾರಂಭವಾಯಿತು. ದಿನಾಂಕ ೨೧-೨-೧೯೬೨ ರಂದು ಧಾರವಾಡದ ಕಲಾಭವನದಲ್ಲಿ ಸಂಸ್ಮರಣೆಯ ಗ್ರಂಥದ ಬಿಡುಗಡೆ ಸಮಾರಂಭವೂ ನಡೆಯುವದು. ಡೆ. ಚನ್ನಬಸಪ್ಪನವರ ಕಂಚಿನ ಪ್ರತಿಮೆ ತಯಾರಾಗಿದ್ದು ಮುಂದಿನ ತಿಂಗಳಲ್ಲಿ ಅದರ ಪ್ರತಿಷ್ಠಾಪನೆಯ ಸಮಾರಂಭವನ್ನು ಜರುಗಿಸಲು ಪ್ರಯತ್ನಗಳೂ ನಡೆದಿವೆ. ಡೆಪ್ಯುಟಿ ಚನ್ನಬಸಪ್ಪ ಪ್ರಾಥಮಿಕ ಶಿಕ್ಷಣ ಪ್ರತಿಷ್ಠಾನವು ಜಿಲ್ಹಾ ರಜಿಸ್ಟ್ರಾರರಿಂದಲೂ, ಚಾರಿಟಿ ಕಮೀಶನರರಿಂದಲೂ ನೊಂದಾಯಿಸಲ್ಪಟ್ಟಿದೆ. ಉತ್ಪನ್ನಕರ ಇಲಾಖೆಯವರಿಂದಲೂ ನೊಂದಾಯಿ-ಸಲ್ಪಟ್ಟಿದೆ ಪ್ರತಿಷ್ಠಾನವು ಈಗಾಗಲೇ ತನ್ನ ಕಾರ್ಯವನ್ನು ಪ್ರಾರಂಭಿಸಿದೆ. ಡೆಪ್ಯೂಟಿ ಚನ್ನಬಸಪ್ಪ ಗ್ರಂಥಮಾಲೆಯ ಪ್ರಥಮ ಪ್ರಕಟನೆ, ಕಡಿಮೆ ಬೆಲೆಯ ಶಾಲೋಪಯೋಗಿ ಪುಸ್ತಕ, ಅಭ್ಯಾಸ ಪುಸ್ತಕ ವಿಜ್ಞಾನ ವರ್ಗ ೬ ದಿನಾಂಕ

೪-೧-೮೨ ರಂದು ಪ್ರಕಟಗೊಂಡಿದೆ. ಅದರ ಕಚೇರಿಯು ಉಪಾಧ್ಯಾಯರ ಸರಕಾರಿ ತರಬೇತಿ ವಿದ್ಯಾಲಯದಲ್ಲಿದ್ದು ಪ್ರತಿಷ್ಠಾನದ ಪ್ರಥಮ ವಿಶ್ವಸ್ಥ ಮಂಡಳವೂ ರಚಿಸಲ್ಪಟ್ಟಿದೆ. ಶತಮಾನೋತ್ಸವದ ಕಾರ್ಯಕ್ರಮಗಳೂ ಸಹ ಎಲ್ಲ ಕಡೆಗೆ ಈಗಲೂ ನಡೆಯುತ್ತಲಿವೆ. ಈ ಮಹಾಕಾರ್ಯದಲ್ಲಿ ಶಿಕ್ಷಕರ ಸಹಾಯ ಅಪ್ರತಿಮವಾಗಿರುವದು ಅಭಿನಂದನೀಯವಾದುದು. ಸಮಿತಿಯವರು ಕೈಕೊಂಡ ಕಾರ್ಯಕ್ರಮಗಳೆಲ್ಲವೂ ಯಶಸ್ವಿಯಾಗುವಂತೆ ಸಹಕರಿಸಿದ ಸಂಘ-ಸಂಸ್ಥೆಗಳಿಗೂ, ವ್ಯಕ್ತಿಗಳಿಗೂ ನಮ್ಮ ಹೃತ್ಪೂರ್ವಕ ನಮನಗಳು. ಪ್ರತಿಷ್ಠಾನಕ್ಕೆ ಉಜ್ವಲ ಭವಿಷ್ಯ ಕಾದಿದ್ದು ಪ್ರಾಥಮಿಕ ಶಿಕ್ಷಣದ ಗುಣಮಟ್ಟವನ್ನು ಎತ್ತರಿಸುವ ಕಾರ್ಯದಲ್ಲಿ ಯಶಸ್ವಿಯಾದೆವೆಂಬ ಭರವಸೆಯನ್ನು ಹೊಂದಿ ಈ ಲೇಖನಕ್ಕೆ ವಿರಾಮ ಹಾಕುವ ಮೊದಲು ಸಮಿತಿಗೆ ಮತ್ತು ಪ್ರತಿಷ್ಠಾನಕ್ಕೆ ಮುಕ್ತ ಹಸ್ತದಿಂದ ದೇಣಿಗೆ ಕೊಡಲು ಸಾರ್ವಜನಿಕರಲ್ಲಿ ಪ್ರಾರ್ಥಿಸುವೆ.

◎◎◎

ಸ್ತ್ರೀ ಶಿಕ್ಷಣ

೧೮೭೦ ನೆಯ ಇಸವಿಯಲ್ಲಿ ಮಿ. ಜಾನ್ ಜಾರ್ಡ್ಡಾಯಿನ ಎಂಬವರು ಧಾರವಾಡದ ಕಲೆಕ್ಟರರಿದ್ದರು. ಅವರು ಸ್ತ್ರೀ ಶಿಕ್ಷಣದ ಉತ್ತೇಜನಕ್ಕಾಗಿ ಪಾರಿತೋಷಕಗಳನ್ನು ಕೊಡುವದಕ್ಕಾಗಿ ಸರಕಾರದಲ್ಲಿ ೧೦೦೦/- ರೂ.ಗಳನ್ನು ಇಟ್ಟರು. ಆ ಹಣದ ಬಡ್ಡಿಯೊಳಗಿಂದ ವರ್ಷಕ್ಕೊಮ್ಮೆ ವಿದ್ಯಾರ್ಥಿನಿಯರನ್ನು ಕನ್ನಡ ೬ನೆಯ ಇಯತ್ತೆಯಲ್ಲಿ ಪರೀಕ್ಷೆಮಾಡಿ ಮೇಲು ನಂಬರು ಪಡೆದವರಿಗೆ ಇನಾಮು ಕೊಡುತ್ತಿದ್ದರು.

—ರೊದ್ದ ಶ್ರೀನಿವಾಸರಾಯರ ಚರಿತ್ರೆ

ಉಜ್ವಲ ಪರಂಪರೆಯು
ಶಿಕ್ಷಕಿಯರ ಸರಕಾರಿ ತರಬೇತಿ ಸಂಸ್ಥೆ, ಧಾರವಾಡ.

—ಶ್ರೀಮತಿ ಎಚ್. ಆರ್. ಮಾಲತಿ

೧೮೭೦ನೆಯ ವರ್ಷ ಧಾರವಾಡದ ಕಲೆಕ್ಟರ ಜಾರ್ಡ್ಾಯಿನ ಅವರ ಹೆಸರಿನಿಂದ ಪ್ರಾಥಮಿಕ ಶಾಲೆಯ ೬ನೇ ವರ್ಗದ (ಅಂದಿನ ಪ್ರಾಥಮಿಕ ಶಿಕ್ಷಣದ ಕೊನೆಯ ವರ್ಗ) ದಲ್ಲಿ ಪ್ರಥಮಸ್ಥಾನ ಪಡೆದ ಬಾಲಕಿಯರಿಗೆ ಬಹುಮಾನ ಕೊಡುವ ಯೋಜನೆಗೆ ಆಗ ಧಾರವಾಡದ ಶಿಕ್ಷಣಾಧಿಕಾರಿಯಾಗಿದ್ದ ಡೆಪ್ಯೂಟಿ ಚನ್ನಬಸಪ್ಪನವರು ಪ್ರೇರಕರಾದರು. ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹನೆ ಕೊಡುವ ಕಾರ್ಯದ ಸುಳಿವನ್ನು ನಾವು ಚನ್ನಬಸಪ್ಪನವರ ಅಂದಿನ ಪ್ರಯತ್ನದಲ್ಲಿ ಕಾಣುತ್ತೇವೆ. ಮುಂದೆ ಕರ್ನಾಟಕದ ಪ್ರಪ್ರಥಮ ಶಿಕ್ಷಕ ತರಬೇತಿ ಸಂಸ್ಥೆ– ಉಪಾಧ್ಯಾಯರ ಸರಕಾರಿ ತರಬೇತಿ ವಿದ್ಯಾಲಯದ ಅಂಗ ಸಂಸ್ಥೆಯಾಗಿ ಹೆಣ್ಣುಮಕ್ಕಳಿಗಾಗಿಯೇ 'ಫಿಮೇಲ ಟ್ರೇನಿಂಗ ಕ್ಲಾಸ' ಎಂಬ ಹೆಸರಿನಲ್ಲಿ ೧೮೯೫ ರಲ್ಲಿ ಪ್ರಾರಂಭವಾಯಿತು. ಚನ್ನಬಸಪ್ಪನವರು ಯೋಚಿಸಿರ ಬಹುದಾದ ಕನಸು ೨೫ ವರ್ಷಗಳ ನಂತರ ಮೊಳಕೆಯೊಡೆಯಿತು. ಶುಕ್ರವಾರ ೮ ಮೇ ೧೮೯೫ ರಲ್ಲಿ ಆಗ ಧಾರವಾಡ ಜಿಲ್ಲೆಯ ಕಲೆಕ್ಟರರಾಗಿದ್ದ ಮ್ಯೂರ ಅವರು ಟ್ರೇನಿಂಗ ಕಾಲೇಜಿನ ಸಮಾರಂಭಕ್ಕೆಂದು ಬಂದಾಗ ಶ್ರೀ ಕರಂದಿಕರ ಮತ್ತು ಶ್ರೀ ರೊದ್ದ ಶ್ರೀನಿವಾಸರಾಯರ ಪರಿಶ್ರಮದಿಂದ ಇಲ್ಲಿ ಫೀಮೇಲ ಟ್ರೇನಿಂಗ ಕ್ಲಾಸ ಆರಂಭವಾಗಿದೆ ಎಂದು ತಿಳಿಸಿದುದಾಗಿ ಉಲ್ಲೇಖವಿದೆ.

೧೮೮೦ ನೆಯ ವರ್ಷದಲ್ಲಿ ಶಾಲಾ ಪತ್ರಿಕೆಗಳಲ್ಲಿ ಹಣಮಂತ ಭೀಮಸಿಂಗ ಧಾರವಾಡ, ಹೆಡ್‌ಮಾಸ್ಟರ ಹೆಣ್ಣುಮಕ್ಕಳ ಶಾಲೆ ಹುಬ್ಬಳ್ಳಿ ನಂ ೨ ಇವರು ಸ್ತ್ರೀ ಶಿಕ್ಷಣದ ವಿಷಯವಾಗಿ ಬರೆದ ಹಲವಾರು ಲೇಖನಗಳು ದೊರೆಯುತ್ತದೆ. ಸ್ತ್ರೀ ಶಿಕ್ಷಣದ ಮಹತ್ವ, ಭಾರತದಲ್ಲಿ ಸ್ತ್ರೀಯರಿಗೆ ಕೊಟ್ಟಂತಹ ಗೌರವ, ಸ್ತ್ರೀ ಧರ್ಮನೀತಿ ಮುಂತಾದ ಸಂಗತಿಗಳ ಬಗೆಗೆ ಹಣಮಂತ ಭೀಮಸಿಂಗ ಅವರು ಬರೆಯುತ್ತಾರೆ. ಹೆಣ್ಣುಮಕ್ಕಳ ಸಾಲೆಗಳ ಸುದ್ದಿಗೆ ಪ್ರಚಾರ ಕೊಡಬೇಕು ಮತ್ತು ಜಾಣ ವಿದ್ಯಾರ್ಥಿನಿಯರಿಗೆ ಪ್ರೋತ್ಸಾಹ ಕೊಡಬೇಕೆಂಬ ಉದ್ದೇಶದಿಂದ ಪತ್ರಿಕೆಯ ಹಳೆಯ ಸಂಚಿಕೆಗಳಲ್ಲಿ ಈ ಬಗೆಯ ವರದಿಗಳನ್ನೂ ಕಾಣಬಹುದಾಗಿದೆ. ಹುಬ್ಬಳ್ಳಿ ಶಾಲೆಯ ಓರ್ವ ವಿದ್ಯಾರ್ಥಿನಿಯ ಲೇಖ (ನಿಬಂಧ) ಸಹ ಶಾಲಾ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಪುಣೆ, ಮುಂಬೈ

ಸಮಾಜ ಶಿಕ್ಷಣ ಹಾಗೂ ಮಹಿಳಾ ಕಾರ್ಯಕರ್ತರ ತರಬೇತಿಯಲ್ಲಿ ಪರಿಣಿತರಾಗಿರುವ ಶ್ರೀ ಎಚ್. ಆರ್. ಮಾಲತಿಯವರು ಸಧ್ಯ ಧಾರವಾಡದ ಶಿಕ್ಷಕಿಯರ ಸರಕಾರಿ ತರಬೇತಿ ಸಂಸ್ಥೆಯ ಅಧೀಕ್ಷಿಕೆಯರೆಂದು ಕಾರ್ಯ ನಿರ್ವಹಿಸುತ್ತಿದ್ದಾರೆ.

ಅಹಮದಾಬಾದ ಕಲಕತ್ತೆ— ಮುಂತಾದ ಪಟ್ಟಣಗಳಲ್ಲಿ ನಡೆಯುವ ಮಹಿಳಾ ಸಂಘಟನೆಗಳ ಬಗೆಗೆ, ಉಚ್ಚ ಪರೀಕ್ಷೆಗಳಲ್ಲಿ ಪಾಸಾದ ಸ್ತ್ರೀಯರ ಬಗೆಗೆ ಸಂಕ್ಷಿಪ್ತ ಸುದ್ದಿಗಳನ್ನೂ ಆಗಾಗ ಹಾಕಲಾಗಿದೆ. ಸ್ತ್ರೀ ಶಿಕ್ಷಣದ ಬಗೆಗೆ ಒಳ್ಳೆಯ ಸಾಮಾಜಿಕ ವಾತಾವರಣವನ್ನು ನಿರ್ಮಿಸಲು ಶಾಲಾಪತ್ರಿಕೆ ಪ್ರಯತ್ನಿಸಿದೆ.

ಮುಂಬೈಯಲ್ಲಿ ೧೮೬೯ ರಲ್ಲಿ 'ಹೆಂಗಸರ ನಾರ್ಮಲ್ ಸ್ಕೂಲ' ಆರಂಭವಾಗಿರುವ-ದೆಂದು ಆಗ ಡಾಯರೆಕ್ಟರ ಆಗಿದ್ದ ಪೀಲ ಮತ್ತು ಇನಸ್ಪೆಕ್ಟರ ಆಗಿದ್ದ ರಸೆಲ್ಲರ ಪರಿಪತ್ರದಿಂದ ತಿಳಿಯುತ್ತದೆ. ಶಿಕ್ಷಕಿಯರ ತರಬೇತಿಗೆ ಹೋಗಬಯಸುವ ಕನ್ನಡ ಬಲ್ಲ ವಿದ್ಯಾರ್ಥಿನಿಯರಿಗೆ ೬ ವರ್ಷಗಳ ವರೆಗೆ ೧೦ ರೂ ೨೫ ರೂ. ಆಯ್ಕೆ ಆದರೆ ಸಂಬಳ ಕೊಡುವದಾಗಿ ಪರಿಪತ್ರದಲ್ಲಿ ಸೂಚಿಸಲಾಗಿದೆ. ನಂತರ ಆಗಿನ ಪ್ರತಿಷ್ಠಿತರ ಒಂದು ಸಮಿತಿ ನಾರ್ಮಲ್ ಸ್ಕೂಲಿನ ಮೇಲ್ವಿಚಾರಣೆ ಮಾಡಲು ನಿಯಮಿತವಾಗಿತ್ತೆಂದೂ ತಿಳಿಯುತ್ತದೆ. ಮುಂದೆ ಕೆಲವು ವರ್ಷಗಳಲ್ಲಿ ಅಹಮದಾಬಾದಿನಲ್ಲಿಯೂ ಹೆಣ್ಣು ಮಕ್ಕಳ ತರಬೇತಿ ಆರಂಭವಾಗಿದೆ. ಕರ್ನಾಟಕ ಮಾತ್ರ ೧೮೯೫ ಫೆಬ್ರುವರಿ ವರೆಗೆ ಕಾಯಬೇಕಾಯಿತು.

೧೯೦೩ ರಲ್ಲಿ ಟ್ರೇನಿಂಗ ಕ್ಲಾಸು ಫೀಮೇಲ ನಾರ್ಮಲ್ ಸ್ಕೂಲ ಎಂಬ ನಾಮಕರಣದೊಂದಿಗೆ ಧಾರವಾಡದ ಹೆಣ್ಣು ಮಕ್ಕಳ ನಂ. ೧ ನೆಯ ಶಾಲೆಗೆ ವರ್ಗಾಯಿ-ಸಲ್ಪಡುತ್ತದೆ. ಇದಕ್ಕೆ ಓರ್ವ ಹೆಡ್‌ಮಾಸ್ತರರನ್ನೂ ನೇಮಿಸಲಾಗುತ್ತದೆ. ೧೯೦೮ ರಲ್ಲಿ ಆಝಾದ ಪಾರ್ಕ ಪಕ್ಕದಲ್ಲಿ ಈಗಿರುವ ವಿಶಾಲವಾದ ಆವರಣದಲ್ಲಿ ಹೊಸದಾಗಿ ಕಟ್ಟಲ್ಪಟ್ಟ ಕಟ್ಟಡಗಳಿಗೆ ವಿದ್ಯಾಲಯ ಸ್ಥಳಾಂತರಗೊಳ್ಳುತ್ತದೆ. ಶಿಕ್ಷಕಿಯರಿಗೆ ವಸತಿ ಗೃಹ, ಪಾಠಾಭ್ಯಾಸ (ಪ್ರ್ಯಾಕ್ಟಿಸಿಂಗ) ಶಾಲೆ ನಾರ್ಮಲ್ ಸ್ಕೂಲಿಗೆ ಜೋಡಿಸಲ್ಪಟ್ಟು ಸಂಸ್ಥೆಗೆ ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ್ ಕಾಲೇಜು ಎಂಬ ಹೆಸರು ಬಳಕೆಯಲ್ಲಿ ಬರುತ್ತದೆ. ಮಿಸ್. ಫೇಮರ ಎಂಬ ಆಂಗ್ಲ ಮಹಿಳೆ ಸಂಸ್ಥೆಯ ಲೇಡಿ ಸುಪರಿಂಟೆಂಡೆಂಟ ಎಂದು ನೇಮಕಗೊಳ್ಳುತ್ತಾರೆ. ಆಂಗ್ಲ ಮಹಿಳೆಯರೇ ಸಂಸ್ಥೆಯ ಮುಖ್ಯಸ್ಥರಾಗಿ ಮುಂದುವರೆಯುವ ಪರಂಪರೆ ಬಹುದಿನಗಳ ಕಾಲ ಇಲ್ಲಿ ಉಳಿದು ಬಂದಿತು. ಮಿಸ್ ನ್ಯೂಲಂಡ ಎಂಬ ಮಹಿಳೆ ೧೯೦೯ ರಿಂದ ೧೯೧೭ ಮತ್ತು ೧೯೧೮ ರಿಂದ ೧೯೨೪ ಹೀಗೆ ಎರಡುಬಾರಿ ಸಂಸ್ಥೆಯ ಮುಖ್ಯಸ್ಥೆಯಾಗಿ ಕಾರ್ಯಮಾಡಿ ಅನೇಕ ಪ್ರಗತಿಪರ ಯೋಜನೆಗಳನ್ನು ಟ್ರೇನಿಂಗ ಕಾಲೇಜಿಗೆ ಹಾಕಿಕೊಟ್ಟರು. ಇವರು ಕಾಲೇಜಿನ ವಿಸ್ತರಣೆ, ಕಟ್ಟಡಗಳ ನಿರ್ಮಾಣ, ಉದ್ಯಾನಗಳ ರಚನೆ, ಹೊಸ ಹುದ್ದೆಗಳ ನಿರ್ಮಾಣ, ವಾಚನಾಲಯದ ಅಭಿವೃದ್ಧಿ, ಉತ್ತಮ ಪ್ರಾಕ್ಟೀಸಿಂಗ ಶಾಲೆ, ಶಿಕ್ಷಣ ಪುಸ್ತಕಗಳ ರಚನೆ ಮುಂತಾದ ರಂಗದಲ್ಲಿ, ಗಣನೀಯ ಸೇವೆ ಮಾಡಿದವರು, ಮಿಸ್. ನ್ಯೂಲಂಡ ಉತ್ತರ ಕರ್ನಾಟಕದಲ್ಲಿ ಶಿಕ್ಷಕಿಯರ ತರಬೇತಿ ಮತ್ತು ಬಾಲಿಕೆಯರ ಶಿಕ್ಷಣ ಕ್ರಮದಲ್ಲಿ ಶಿಸ್ತು, ವ್ಯವಸ್ಥೆ ಮತ್ತು ಉತ್ತಮ ಸಾಧನೆ ಮಾಡಿದ ಸ್ತ್ರೀ ಎಂಬ ಹೆಸರನ್ನೂ ಗಳಿಸಿ

ಕೊಂಡಿದ್ದಾರೆ. ಕನ್ನಡ ಶಿಕ್ಷಕಿ ಎಂಬ ಪತ್ರಿಕೆಯ ಪ್ರಕಟನೆಗೂ ನ್ಯೂಲಂಡ ಅವರೇ ಕಾರಣರು. ಮಿಸ್ ಮೆಕ್ಯಾಫೆಯವರು ೧೯೧೨ ರಿಂದ ೧೯೧೮ ವರೆಗೆ ಲೇಡಿ ಸುಪರಿಂ-ಟೆಂಡೆಂಟರಾಗಿದ್ದು ನಂತರ ಮಿಸ್ ಲಾಕ್ಸಟನ್ ಅವರು ಕೆಲಕಾಲ ತರಬೇತಿ ಸಂಸ್ಥೆಯ ಮುಖ್ಯಸ್ಥರಾಗಿದ್ದರು. ಕರ್ತವ್ಯ ನಿಷ್ಠೆ, ಸತತೋದ್ಯೋಗ, ಸೌಮ್ಯ ಸ್ವಭಾವ, ಪಾಂಡಿತ್ಯ, ಚಟುವಟಿಕೆ ಮುಂತಾದ ಗುಣಗಳಿಂದ ಇವರ ನೆನಪನ್ನು ಬಹಳಷ್ಟು ಜನ ಶಿಕ್ಷಕಿಯರು ಅಭಿಮಾನದಿಂದ ಸ್ಮರಿಸಿಕೊಳ್ಳುತ್ತಿದ್ದರೆಂದು ತಿಳಿದು ಬರುತ್ತದೆ ೧೯೩೫ ವರೆಗೆ ಮಿಸ್ ರಾರ್ಸ, ಶ್ರೀಮತಿ ಭಾಗವತ ಮತ್ತು ಶ್ರೀಮತಿ ಸಿಂಧೆ ಅವರುಗಳು ಲೇಡಿ ಸುಪರಿಂಟೆಂಡೆಂಟರಾಗಿದ್ದರು. ಮುಂದೆ ೧೯೩೫ ರಿಂದ ಮಿಸ್ ಎಲಾಯಿರ್ರುಫ್ ಅವರು ಅಧಿಕಾರ ವಹಿಸಿಕೊಂಡು ೧೯೪೭ ರ ವರೆಗೆ ಆ ಹುದ್ದೆಯಲ್ಲಿದ್ದರು.

ಶಿಸ್ತು, ಅಚ್ಚುಕಟ್ಟುತನ, ಸ್ವಚ್ಛತೆ, ಪ್ರಯೋಗ ಶೀಲತೆ, ಬಿಗುವು, ಕಟ್ಟುನಿಟ್ಟು ಉದ್ಯೋಗ ಶೀಲತೆಯಿಂದಾಗಿ ಯುರೋಪಿಯನ್ ಲೇಡಿ ಸುಪರಿಂಟೆಂಡೆಂಟರುಗಳು ಉತ್ತಮ ಮೇಲ್ಪಂಕ್ತಿಯನ್ನು ಹಾಕಿಕೊಟ್ಟರು. ಅದೇ ಪರಂಪರೆಯನ್ನು ಸ್ವಾತಂತ್ರ್ಯ ಪಡೆದ ನಂತರ ಲೇಡಿ ಸುಪರಿಂಟೆಂಡೆಂಟರುಗಳಾದ ಶ್ರೀಮತಿ ವಾಯ್. ಡಿ. ನಾಡಕರ್ಣಿ, ಶ್ರೀಮತಿ ಪಿ. ಎ. ಭಾಸ್ಕರ, ಶ್ರೀಮತಿ ಚನ್ನಪಟ್ಣ, ಶ್ರೀಮತಿ ಬಿ. ವ್ಹಿ. ನಾಯಡು, ಶ್ರೀಮತಿ ಹುಲಸೋಗಿ, ಶ್ರೀಮತಿ ವಾಯ್. ಎಲ್. ಕಲ್ಯಾಣ, ಶ್ರೀಮತಿ ಎಸ್. ಎಸ್. ನಾಯಕ, ಶ್ರೀಮತಿ ಎಚ್. ಆರ್. ಮಾಲತಿ, ಅವರು ಮುಂದುವರೆಯಿಸಿಕೊಂಡು ಬಂದಿದ್ದಾರೆ.

೧೯೩೫ ರಲ್ಲಿ ಗೃಹವಿಜ್ಞಾನವನ್ನು ಮೂಲೋದ್ಯೋಗ ಎಂದು ಇಲ್ಲಿ ಆರಂಭಿಸ-ಲಾಗಿತ್ತು. ನಂತರ ನೂಲು, ನೆಯ್ಗೆ, ಕೈತೋಟ, ಕಸೂತಿ ಕೈಕೆಲಸ ಮುಂತಾದ ಕಾರ್ಯಾನುಭವ ಚಟುವಟಿಕೆಗಳು ಕಾಲಕ್ರಮೇಣ ಇಲ್ಲಿಯೂ ಆರಂಭವಾದವು. ಪೂರ್ವ ಪ್ರಾಥಮಿಕ ಶಿಕ್ಷಕಿಯರ ತರಬೇತಿ (೧೯೫೮) ಉರ್ದು ಶಾಲಾ ಶಿಕ್ಷಕಿಯರ ತರಬೇತಿ ವರ್ಗ (೧೯೬೧) ಮಾದರಿ ಶಿಶುವಿಹಾರ, ಮಹಿಳಾ ಕಲ್ಯಾಣ ಸಂಘಟಕರ ತರಬೇತಿ (೧೯೬೨) ಮುಂತಾದ ಹೊಸ ಸಂಸ್ಥೆಗಳು ಶ್ರೀಮತಿ ಭಾಸ್ಕರ ಅವರ ಕಾಲದಲ್ಲಿ ಪ್ರಾರಂಭವಾಗಿ ಟ್ರೇನಿಂಗ ಕಾಲೇಜಿಗೆ ವ್ಯಾಪಕ ಸ್ವರೂಪ ಬಂದಿತು. ಹೆಣ್ಣುಮಕ್ಕಳಿಗಾಗಿ ವಿನೂತನ ವಸತಿಗೃಹದ ನಿರ್ಮಾಣ, ಶಿಶುವಿಹಾರದ ವರ್ಗದ ಕೋಣೆ ಮತ್ತು ಆವರಣದಲ್ಲಿ ವಿದ್ಯುತ್ ಪೂರೈಕೆ ಮುಂತಾದ ರಚನಾ ಕಾರ್ಯಗಳೂ ಇದೇ ಅವಧಿಯಲ್ಲಾದವು. ೧೯೬೬ ರಲ್ಲಿ ಶ್ರೀಮತಿ ಯಮುನಾಬಾಯಿ ಕಲ್ಯಾಣ ಅವರು ಅಧಿಕಾರ ವಹಿಸಿಕೊಂಡು ಉತ್ತಮ ರೀತಿಯ ಕಾರ್ಯನಿರ್ವಹಣೆಯಿಂದಾಗಿ ಎಲ್ಲರ ಮೆಚ್ಚಿಗೆ ಗಳಿಸಿಕೊಂಡರು. ತೋಟಗಾರಿಕೆ ಗೃಹವಿಜ್ಞಾನಗಳಲ್ಲಿ ಪ್ರಗತಿ ಸಾಧಿಸಿದರು. ಇವರ ಕಾಲಾವಧಿಯಲ್ಲಿಯೇ ಸಂಸ್ಥೆಯು ವಜ್ರಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿತು. ಧಾರವಾಡ ವಿಭಾಗದ ಶಿಕ್ಷಣಾಧಿಕಾರಿಗಳಿಗಾಗಿ

ನಿವೃತ್ತರಾಗಿ ವಿಧಾನ ಪರಿಷತ್ತಿನಲ್ಲಿ ಸದಸ್ಯರಾಗಿದ್ದ ಶ್ರೀ ಮ. ಗು. ಹಂದ್ರಾಳ ಅವರು ವಜ್ರಮಹೋತ್ಸವ ಸಮಿತಿಯ ಅಧ್ಯಕ್ಷರಾಗಿದ್ದರು. ವರಕವಿ ದ. ರಾ. ಬೇಂದ್ರೆ, ಖ್ಯಾತ ಪತ್ರಿಕಾಕರ್ತ ಪಾಟೀಲ ಪುಟ್ಟಪ್ಪ, ಕರ್ಮವೀರ ಗುದ್ಲೆಪ್ಪ ಹಳ್ಳಿಕೇರಿಯವರು ಅತಿಥಿಗಳಾಗಿ,ಮುಖ್ಯಮಂತ್ರಿ ವೀರೇಂದ್ರ ಪಾಟೀಲರು ಅಧ್ಯಕ್ಷರಾಗಿ ಆಗಮಿಸಿ ಸಂಸ್ಥೆಯ ಪ್ರಗತಿಯ ಬಗೆಗೆ ಮೆಚ್ಚಿಗೆ ಸೂಚಿಸಿದರು. ಸ್ಪರ್ಧಾಭಾವನೆಯಿಂದ, ಸಹೃದಯತೆ-ಯಿಂದ ನಿಗರ್ವಿಯಾಗಿ ಆಡಳಿತ ನಡೆಸಿದ ಶ್ರೀಮತಿ ಕಲ್ಯಾಣ ಅವರು ಇಲ್ಲಿಂದ ಬಡತಿ ಹೊಂದಿ ಬೆಂಗಳೂರಿಗೆ ಹೋದರು. ನಂತರ ಧಾರವಾಡ ಜಿಲ್ಲೆಯ ಉಪ-ನಿರ್ದೇಶಕರೆಂದು ಕಾರ್ಯ ನಿರ್ವಹಿಸಿ ನಿವೃತ್ತಿ ಹೊಂದಿದರು. ಇವರ ಅನಂತರದಲ್ಲಿ ಆ ಸಂಸ್ಥೆಯ ಲೇಡಿ ಸುಪರಿಂಟೆಂಡೆಂಟರಾದ ಶ್ರೀಮತಿ ಎಸ್. ಎಸ್. ನಾಯಕ ಅವರು ದಕ್ಷ ಆಡಳಿತ, ಚತುರತೆಗಳಿಂದಾಗಿ ಸಂಸ್ಥೆಯ ಪ್ರಗತಿಗೆ ಕಾರಣರಾದರು. 'ಸಂಸ್ಕಾರ' ಎಂಬ ದ್ವೈಮಾಸಿಕ ಪತ್ರಿಕೆಯ ಪ್ರಕಟನೆಯನ್ನಾರಂಭಿಸಿದರು. ಆವರಣದಲ್ಲಿ ಶ್ರೀದತ್ತ ಫಲಬನ ಎಂಬ ಹೆಸರಿನ ತೆಂಗಿನ ತೋಟವನ್ನು ವಿದ್ಯಾರ್ಥಿನಿಯರ ಸಹಾಯದಿಂದ ನಿರ್ಮಿಸಿದರು.

ಕನ್ನಡ, ಉರ್ದು, ಪೂರ್ವ ಪ್ರಾಥಮಿಕ, ಪ್ರಾಥಮಿಕ ಸೇವಾಪೂರ್ವ ತರಬೇತಿಗಾಗಿ ಬರುವ ವಿದ್ಯಾರ್ಥಿನಿಯರ ಸಮ್ಮಿಲನದಿಂದ, ಇಲ್ಲಿ ಭಾಷೆ, ಜಾತಿ, ಮತ ಪಂಥಗಳ ಸಂಕುಚಿತಭಾವ ದೂರವಾಗಿ ಪರಸ್ಪರ ಪ್ರೀತಿ, ವಿಶ್ವಾಸ ಸೌಹಾರ್ದತೆಗಳನ್ನು ಬೆಳೆಸುವ ತಾಣ ಇದಾಗಿದೆ. ಈ ಸಂಸ್ಥೆಯಲ್ಲಿ ತರಬೇತಿ ಪಡೆದ ಅನೇಕರು ಆದರ್ಶ ಶಿಕ್ಷಕಿಯ-ರಾಗಿದ್ದಾರೆ. ರಾಜ್ಯ ರಾಷ್ಟ್ರಪ್ರಶಸ್ತಿಗಳನ್ನು ಪಡೆದಿದ್ದಾರೆ. ಇಲ್ಲಿಯ ವಿದ್ಯಾರ್ಥಿನಿಯರು ಸಾಂಸ್ಕೃತಿಕ, ಶೈಕ್ಷಣಿಕ ಸ್ಪರ್ಧೆಗಳಲ್ಲಿ ಅನೇಕ ಚಿನ್ನ, ಬೆಳ್ಳಿ, ತಾಮ್ರದ ಪದಕಗಳನ್ನೂ ಪ್ರಶಸ್ತಿ ಪತ್ರಗಳನ್ನೂ ಗಳಿಸಿ ಸಂಸ್ಥೆಯ ಘನತೆಯನ್ನೂ ಹೆಚ್ಚಿಸಿದ್ದಾರೆ.

ಸೇವಾದಳ ಮತ್ತು ಗರ್ಲಗೈಡ ವಿಭಾಗವು ಇಲ್ಲಿ ಚನ್ನಾಗಿ ಕೆಲಸ ಮಾಡುತ್ತಲಿದೆ. ಪ್ರಾರಂಭದಿಂದಲೂ ಈ ಸಂಸ್ಥೆ ಅತ್ಯುತ್ತಮ ಶೈಕ್ಷಣಿಕ ಮಟ್ಟವನ್ನು ಕಾಯ್ದುಕೊಂಡು ಬಂದಿದೆ ಇದುವರೆಗೆ (೧೯೮೧) ಟಿ. ಸಿ. ಎಚ್. ಮತ್ತು ಟಿ. ಸಿ. ಎಲ್. ಕನ್ನಡ ವಿಭಾಗದಲ್ಲಿ ೪೧೦೨, ಟಿ. ಸಿ. ಎಚ್. ಉರ್ದು ವಿಭಾಗದಲ್ಲಿ ೮೩೪, ಪೂರ್ವ ಪ್ರಾಥಮಿಕ ವಿಭಾಗದಲ್ಲಿ ೫೯೧, ಸಮಾಜ ಕಲ್ಯಾಣ ಮಹಿಳಾ ಸಂಘಟನಾ ವರ್ಗದಲ್ಲಿ ೨೮೬, ಚಿತ್ರಕಲಾ ಪರೀಕ್ಷೆಯಲ್ಲಿ ೨೧೦೨ ವಿದ್ಯಾರ್ಥಿನಿಯರು ಉತ್ತೀರ್ಣಹೊಂದಿದ್ದಾರೆ. ಅರ್ಧಶತಮಾನಗಳ ಕಾಲ ಶಿಕ್ಷಕಿಯರಿಗೆ ತರಬೇತಿ ನೀಡುವ ಉತ್ತರ ಕರ್ನಾಟಕದ ಏಕೈಕ ಸಂಸ್ಥೆಯಾಗಿ ಬಾಲಿಕೆಯರ ಶಿಕ್ಷಣರಂಗದಲ್ಲಿ ಈ ವಿದ್ಯಾಸಂಸ್ಥೆ ಅತ್ಯುತ್ತಮ ಹೆಸರು ಪಡೆದಿದೆ. ಮಾಂಟೆಸರಿ ವಿಧಾನದಲ್ಲಿ ಇಲ್ಲಿ ಪ್ರಾರಂಭಿಸಲ್ಪಟ್ಟ ಪೂರ್ವ ಪ್ರಾಥಮಿಕ ಶಾಲೆ ಶ್ರೇಷ್ಠ ಉಪಕರಣಗಳಿಂದ ಸಜ್ಜುಗೊಂಡ ಪೂರ್ವ ಪ್ರಾಥಮಿಕ ಶಾಲೆಯಾದರೂ ಮಾದರಿಯಾದ ವರ್ಗಕೋಣೆ ಅದಕ್ಕಿಲ್ಲ.

ಸಭಾಭವನ, ಪ್ರಯೋಗ ಮಂದಿರ, ವಾಚನಾಲಯ, ವರ್ಗಕೋಣೆಗಳು, ಬೋಧಕ ವರ್ಗದವರಿಗೆ ಕೋಣೆಗಳು, ಸುಸಜ್ಜಿತ ಆಟದ ಬೈಲು ಮುಂತಾದ ಆವಶ್ಯಕತೆಗಳನ್ನು ಪೂರೈಸಿಕೊಳ್ಳುವದು ಸಂಸ್ಥೆಗೆ ಸಾಧ್ಯವಾಗಿಲ್ಲ. ಒಳ್ಳೆಯ ಪರಂಪರೆ, ಶಿಸ್ತು, ಅಚ್ಚುಕಟ್ಟುತನ, ರಕ್ಷಿತ ಆವರಣಗಳನ್ನು ಹೊಂದಿದ ಈ ವಿದ್ಯಾಲಯ ಬೆಳೆಯುವದಕ್ಕೆ ಅನೇಕ ಅವಕಾಶಗಳಿವೆ. ಸಾರ್ವಜನಿಕರ ಮತ್ತು ಸರಕಾರದ ಅನುಕೂಲ ಸಹಾಯ ಇದಕ್ಕೆ ದೊರೆತರೆ ಇನ್ನೂ ಹೆಚ್ಚಿನ ಸುಧಾರಣೆಗಳನ್ನು ಮಾಡಿ ಮಹಿಳಾ ಶಿಕ್ಷಣದ ಪ್ರಗತಿಯ ಆದರ್ಶ ಸಂಸ್ಥೆಯನ್ನಾಗಿ ಇದನ್ನು ಕಟ್ಟಬಹುದು.

◎◎◎

ಡೆಪ್ಯೂಟಿ ಚನ್ನಬಸಪ್ಪ ಪ್ರಾಥಮಿಕ ಶಿಕ್ಷಣ ಪ್ರತಿಷ್ಠಾನದ ಕೆಲವು ಮುಖ್ಯ ಉದ್ದೇಶಗಳು

- ಪ್ರಾಥಮಿಕ ಶಿಕ್ಷಣ ಮತ್ತು ಶಿಕ್ಷಕ ತರಬೇತಿಯ ಗುಣ ಮಟ್ಟವನ್ನು ಎತ್ತರಿಸುವ ಚಟುವಟಿಕೆಗಳನ್ನು ಸಂಘಟಿಸುವದು.

- ಡೆ॥ ಚನ್ನಬಸಪ್ಪ ಗ್ರಂಥ ಮಾಲೆಯನ್ನು ಪ್ರಾರಂಭಿಸಿ ಶಾಲಾ ಮಕ್ಕಳಿಗೆ ವಿವಿಧ ವಿಷಯಗಳ ಅಧ್ಯಯನ ಮತ್ತು ಗೃಹ ಪಾಠಗಳಿಗೆ ಉಪಯುಕ್ತವಾದ ಪಠ್ಯ ಪೋಷಕ ಪುಸ್ತಕಗಳನ್ನು ಕಾರ್ಯನಿರತ ಹಾಗೂ ನಿವೃತ್ತ ಶಿಕ್ಷಕರು, ವಿದ್ಯಾಧಿಕಾರಿಗಳು ಮತ್ತು ಶಿಕ್ಷಣ ತಜ್ಞರ ಸಹಕಾರದೊಂದಿಗೆ ಸಿದ್ಧಪಡಿಸುವದು.

ಧಾರವಾಡ ಜಿಲ್ಹೆಯಲ್ಲಿ ಶಾಲಾ ಶಿಕ್ಷಣ
೧೮೮೦ ಮತ್ತು ೧೯೮೦

—ಎಸ್. ಜಿ. ಪಾಟೀಲ

೧೮೮೦ ಡೆಪ್ಯೂಟಿ ಚನ್ನಬಸಪ್ಪನವರ ಸೇವಾವಧಿಯ ಕೊನೆಯ ವರ್ಷ. ಬ್ರಿಟಿಶ ಭಾರತದಲ್ಲಿ ಆಗಿನ ಕಾಲದಲ್ಲಿ ಭಾರತೀಯರು ಪಡೆದುಕೊಳ್ಳಬಹುದಾದ ಉಚ್ಚ ಹುದ್ದೆಯನ್ನು ಅವರು ಅವ್ಯಾಹತವಾಗಿ ೧೫ ವರ್ಷ ಪಡೆದುಕೊಂಡ ಪ್ರಥಮ ಕನ್ನಡಿಗರಾಗಿದ್ದರು. ೧೮೬೯ ರಿಂದ ಸತತವಾಗಿ ಧಾರವಾಡ ಜಿಲ್ಹೆಯ ಡೆಪ್ಯೂಟಿ ಇನಸ್ಪೆಕ್ಟರ ಹುದ್ದೆಯಲ್ಲಿಯೇ ಮುಂದುವರೆದು ಒಂದು ದಾಖಲೆಯನ್ನೇ ಸಾಧಿಸಿದ್ದರು. ಅಧಿಕಾರಿಗಳು ನಿಸ್ಪೃಹ, ದಕ್ಷ, ಪ್ರಾಮಾಣಿಕ ಮತ್ತು ಲೋಕಪ್ರಿಯನಾಗಿ ಜನಸೇವೆಯನ್ನು ಮಾಡಬೇಕೆಂಬ ದೀಕ್ಷೆಯಿಂದ ಧೈರ್ಯವಾಗಿ ದುಡಿದರೆ ಅಂಥವರಿಗೆ ಸರಕಾರ ಮೆಚ್ಚಿಗೆ ನೀಡುವದಲ್ಲದೆ ಒಂದೇ ಸ್ಥಳದಲ್ಲಿ ಅಖಂಡವಾಗಿ ಸೇವೆ ಸಲ್ಲಿಸಲು ಅವಕಾಶ ಮಾಡಿಕೊಡುತ್ತದೆ ಎಂಬ ಭಾವನೆಗೆ ಚನ್ನಬಸಪ್ಪನವರ ಸೇವೆಯೇ ಸಾಕ್ಷಿ.

ಆಂಶಿಕ ಸಹಾಯ ಧನ ಪದ್ಧತಿಯಿಂದ ಮತ್ತು ಸ್ಥಾನಿಕ ವಂತಿಗೆ ಪಡೆದು ಶಿಕ್ಷಣವನ್ನು ವಿಸ್ತರಿಸಬೇಕಾದ ಅಂದಿನ ಕಾಲದಲ್ಲಿ ೧೮೮೦ ರಲ್ಲಿ ಧಾರವಾಡ ಜಿಲ್ಲೆ ಪ್ರಾಥಮಿಕ ಶಿಕ್ಷಣ ಪ್ರಸಾರದ ವಿಷಯದಲ್ಲಿ ಇಡೀ ಮುಂಬೈ ರಾಜ್ಯಕ್ಕೆ ಪ್ರಥಮವಾಗಿತ್ತು. ೧೮೮೦ ರಲ್ಲಿ ಧಾರವಾಡ ಜಿಲ್ಲೆಗೆ ೫೦ ಹೊಸ ಶಾಲೆಗಳು ಮಂಜೂರು ಆಗುತ್ತವೆ. (ಶಾಲಾ ಪತ್ರಿಕೆ ೧೮೮೦ರ ವರದಿ) ಆಗ ಧಾರವಾಡ ಜಿಲ್ಲೆ ಮುಂಬೈ ರಾಜ್ಯದಲ್ಲಿಯೇ ಎಲ್ಲಕ್ಕೂ ಹೆಚ್ಚು ಶಾಲೆಗಳನ್ನು ಪಡೆದ ಜಿಲ್ಲೆ ಎಂಬ ಕೀರ್ತಿಗೆ ಪಾತ್ರವಾಗುತ್ತದೆ. ಅಂದಿನ (೧೮೮೦) ಮುಂಬೈ ರಾಜ್ಯದ ಗಾತ್ರವನ್ನು ಅನುಲಕ್ಷಿಸಿದಾಗ ಚನ್ನಬಸಪ್ಪನವರ ಧಾರವಾಡ ಜಿಲ್ಲೆಯ ೧೨ ವರ್ಷದ ದುಡಿಮೆಯ ಫಲದ ಅನುಭವ ನಮಗಾಗುತ್ತದೆ. ಸಿಂಧಪ್ರಾಂತ, ಇಂದಿನ ಗುಜರಾಥ, ಮಹಾರಾಷ್ಟ್ರ ಮತ್ತು ಮುಂಬೈ ಕರ್ನಾಟಕದ ಪ್ರದೇಶಗಳಲ್ಲಿ— ರಾಜ್ಯದ ದಕ್ಷಿಣದ ತುತ್ತತುದಿಯಲ್ಲಿ ಇರುವ ಜಿಲ್ಲೆಗೆ ಪ್ರಥಮ ಸ್ಥಾನ! ಒಂದು ಶಾಲೆ ಸ್ಥಾಪಿಸಬೇಕಾದರೆ ಮೊದಲ ಅವಶ್ಯಕತೆ ಸ್ಥಾನಿಕ ಸಹಾಯ. ಚನ್ನಬಸಪ್ಪನವರು ಜನಮನದೊಂದಿಗೆ ಒಂದಾಗಿ ಶಿಕ್ಷಣ ಪ್ರಸಾರಕ್ಕಾಗಿ ಜನ ದೊಡ್ಡ ಮೊತ್ತದಲ್ಲಿ ಧನ ಸಹಾಯ ಮಾಡುವಂತೆ ಪ್ರೇರೇಪಿಸುತ್ತಿದ್ದರು.

ದಕ್ಷ, ನಿಸ್ಪ್ರಹ, ಪ್ರಾಮಾಣಿಕ, ಸಾಹಿತ್ಯ ಪ್ರೇಮಿ ಆಡಳಿತಗಾರರೆಂದು ಹೆಸರು ಪಡೆದ ಶ್ರೀ ಎಸ್. ಜಿ. ಪಾಟೀಲರು ಸಧ್ಯ ಧಾರವಾಡ ಜಿಲ್ಲೆಯ ಉಪನಿರ್ದೇಶಕರಾಗಿದ್ದಾರೆ. ಅವರು ಶತಮಾನೋತ್ಸವ ಸಮಿತಿಯ ಕಾರ್ಯಾಧ್ಯಕ್ಷರೂ ಹೌದು.

ಜನರ ಪ್ರೀತಿ ಸದ್ಭಾವನೆಗಳ ಸಹಾಯದಿಂದ ಧಾರವಾಡ ಜಿಲ್ಲೆಗೆ ಪ್ರಾಥಮಿಕ ಶಿಕ್ಷಣ ಪ್ರಸಾರ ಕಾರ್ಯದಲ್ಲಿ ಮೊದಲ ಸ್ಥಾನ ದೊರಕಿಸಿಕೊಟ್ಟರು.

ಧಾರವಾಡ ಜಿಲ್ಲೆಯಲ್ಲಿ ಸ್ತ್ರೀ ಶಿಕ್ಷಣ ಪ್ರಸಾರಕ್ಕಾಗಿ ಬ್ರಿಟಿಶ ಅಧಿಕಾರಿಗಳ ಮುಂದಾಳತ್ವದಲ್ಲಿ ಏರ್ಪಡಿಸಿದ ಜೋರ್ಡಾಯಿನ ಬಹುಮಾನ (೧೮೭೦), ಧಾರವಾಡದ ಟ್ರೇನಿಂಗ ಕಾಲೇಜ ಕಟ್ಟಡಗಳಿಗಾಗಿ ಕೂಡಿಸಿದ ೫೦,೦೦೦ ರೂಪಾಯಿ ಹಣ (೧೮೭೨) ಕನ್ನಡ ಅಭ್ಯಾಸದಲ್ಲಿ ಪ್ರಾವೀಣ್ಯತೆಗಳಿಸಿದವರಿಗಾಗಿ ಕೊಡುಮಾಡುವ ೧೫೦ ರೂ. ವಾರ್ಷಿಕ ಬಹುಮಾನವುಳ್ಳ ವರ್ಥಪ್ರಾಯಿಜ ಫಂಡ, ಚಾಟಫೀಲ್ಡ ಮೆಮೋರಿಯಲ್ ಫಂಡ— ಮುಂತಾದ ದೇಣಿಗೆಗಳ ಉಗಮ ಸ್ಥಾನ ಧಾರವಾಡ ಮತ್ತು ಚನ್ನಬಸಪ್ಪನವರ ಉತ್ಸಾಹಪೂರ್ಣ ಶೈಕ್ಷಣಿಕ ಆಡಳಿತ. ಶೈಕ್ಷಣಿಕ ಚಟುವಟಿಕೆಗಳ ವಿಸ್ತಾರದಿಂದಾಗಿ, ಧಾರವಾಡ ಜಿಲ್ಲೆ ಹೆಚ್ಚಿನ ಪ್ರಾಥಮಿಕ ಶಾಲೆಗಳು ಮತ್ತು ಶಿಕ್ಷಕರಿಂದಾಗಿ, ಮುಂಬೈ ಕರ್ನಾಟಕದ ಜಿಲ್ಲೆಗಳಲ್ಲಿ ಅಗ್ರಮಾನ್ಯ ವಾಗಿತ್ತು. ಈಗ ದೊರೆತ ದಾಖಲೆಗಳಿಗನುಗುಣವಾಗಿ ೧೮೮೫ರಲ್ಲಿ ಧಾರವಾಡ ಜಿಲ್ಲೆಯ ಡೆಪ್ಯೂಟಿ ಇನಸ್ಪೆಕ್ಟರ ಆದವರಿಗೆ ೨೫೦ ರೂಪಾಯಿ, ಬೆಳಗಾಂವಿ ಜಿಲ್ಲೆಯ ಡೆಪ್ಯೂಟಿ ಇನಸ್ಪೆಕ್ಟರ ಆದವರಿಗೆ ೨೦೦ ರೂಪಾಯಿ, ಬಿಜಾಪೂರ ಜಿಲ್ಲೆಯ ಡೆಪ್ಯೂಟಿ ಇನಸ್ಪೆಕ್ಟರರಿಗೆ ೧೭೫ ರೂಪಾಯಿ, ಕಾರವಾರ ಜಿಲ್ಲೆಯ ಡೆ. ಇನಸ್ಪೆಕ್ಟರರಿಗೆ ೧೫೦ ರೂ. ಅಂದು ಸಂಬಳ ಕೊಡುತ್ತಿದ್ದರು. ಹುದ್ದೆ, ಅಧಿಕಾರ ಒಂದೇ ಆದರೂ, ಮಾಡುವ ಕೆಲಸ, ಜವಾಬ್ದಾರಿ ಮತ್ತು ಕಾರ್ಯಕ್ಷೇತ್ರದ ವಿಸ್ತಾರದಿಂದಾಗಿ ಧಾರವಾಡ ಜಿಲ್ಲೆಯ ಶಿಕ್ಷಣಾಧಿಕಾರಿಗೆ ಹೆಚ್ಚಿನ ಸಂಬಳ. ಇದು ಧಾರವಾಡ ಜಿಲ್ಲೆಯ ಹಿಂದಿನ ಹಿರಿಮೆಯನ್ನು ತೋರಿಸುತ್ತದೆ. ಹೆಚ್ಚಿನ ಸಂಬಳದ ಸ್ಥಾನವಾದರೂ ಧಾರವಾಡ ಜಿಲ್ಲೆಗೆ ಅಧಿಕಾರಿಗಳನ್ನು ಹಾಕುವಾಗ ಅಧಿಕಾರಿಗಳ ಜೇಷ್ಠತಾಪಟ್ಟಿಯನ್ನು (ಸಿನಿಯಾರಿಟಿ) ನೋಡದೆ ದಕ್ಷತೆ ಮತ್ತು ಕಾರ್ಯ ಶಕ್ತಿಗಳನ್ನು ನೋಡಿಯೇ ಶಿಕ್ಷಣಾಧಿಕಾರಿಗಳನ್ನು ನಿಯಮಿಸುತ್ತಿದ್ದರೆಂದು ರೊದ್ದ ಶ್ರೀನಿವಾಸರಾಯರ ನಿಯಮಕದ ಉದಾಹರಣೆಯಿಂದ ತಿಳಿದುಬರುತ್ತದೆ

ಇವೆಲ್ಲ ೧೮೮೦ರ ದಶಕದ ಧಾರವಾಡ ಜಿಲ್ಲೆಯ ಶೈಕ್ಷಣಿಕ ಆಡಳಿತದ ಕೆಲವು ತುಣುಕುಗಳು. ಒಂದು ಶತಮಾನದ ನಂತರದ ಪರಿಸ್ಥಿತಿಯನ್ನು ಗಮನಿಸಿದಾಗ ಧಾರವಾಡ ಜಿಲ್ಲೆ ತನ್ನ ಹಿರಿಮೆಯನ್ನು ಬಿಟ್ಟುಕೊಟ್ಟಿಲ್ಲ ಎಂಬ ಭಾವನೆ ಬರುತ್ತದೆ. ಸ್ತ್ರೀ ಶಿಕ್ಷಣ ವಿಚಾರವನ್ನೇ ತೆಗೆದುಕೊಳ್ಳುವಾ. ಧಾರವಾಡ ಜಿಲ್ಲೆಯಲ್ಲಿ ಮಹಿಳೆಯರಿಗಾಗಿಯೇ ಪ್ರತ್ಯೇಕವಾದ ೫ ಶಿಕ್ಷಕಿಯರ ತರಬೇತಿ ಸಂಸ್ಥೆಗಳು ಇವೆ. ಇದರಲ್ಲಿ ೩ ಪೂರ್ವ ಪ್ರಾಥಮಿಕ ವರ್ಗಗಳ ತರಬೇತಿ ಸಂಸ್ಥೆಗಳು. ಇಷ್ಟು ಸಂಖ್ಯೆಯ ತರಬೇತಿ ಸಂಸ್ಥೆಗಳನ್ನು ಉಳಿದಾವ ಜಿಲ್ಲೆಯೂ ಹೊಂದಿಲ್ಲ. ಕೆಲವು ಜಿಲ್ಲೆಗಳಲ್ಲಿ ಶಿಕ್ಷಕಿಯರಿಗಾಗಿ ತರಬೇತಿ ಸಂಸ್ಥೆಗಳೇ ಇಲ್ಲ. ಹೆಣ್ಣು ಮಕ್ಕಳ ಪ್ರೌಢಶಾಲೆಗಳ ಸಂಖ್ಯೆಯೂ

ಇಲ್ಲಿಯೇ ಹೆಚ್ಚಾಗಿದೆ. ಮಹಿಳಾ ಕಾಲೇಜು ಮುಂಬೈ ಕರ್ನಾಟಕದಲ್ಲಿ ಒಂದೇ ಒಂದು ಅದೂ ಹುಬ್ಬಳ್ಳಿಯಲ್ಲಿ. ಶಾಲೆಗೆ ಹೋಗುವ ಹೆಣ್ಣು ಮಕ್ಕಳ ಸಂಖ್ಯೆಯಲ್ಲಿಯೂ ಧಾರವಾಡ ಜಿಲ್ಲೆ ಅಗ್ರಸ್ಥಾನದಲ್ಲಿ. ಹೆಚ್ಚಿನ ಸಂಖ್ಯೆಯಲ್ಲಿರುವ ಪ್ರೌಢ ಶಾಲೆಗಳು, ಕಾಲೇಜುಗಳು ಸಹ, ವಿದ್ಯಾಕ್ಷೇತ್ರದಲ್ಲಿ ಧಾರವಾಡದ ಮುನ್ನಡೆಯನ್ನೂ ತೋರಿಸುತ್ತವೆ. ರಾಜ್ಯದ ಉತ್ತರ ಭಾಗದಲ್ಲಿ ಕಾಲೇಜು, ಕೃಷಿವಿದ್ಯಾಲಯ, ವಿಶ್ವವಿದ್ಯಾಲಯ, ಇಂಜನಿಯರಿಂಗ ವೈದ್ಯಕೀಯ ಕಾಲೇಜುಗಳೂ ಪ್ರಪ್ರಥಮವಾಗಿ ಧಾರವಾಡ ಜಿಲ್ಲೆಯಲ್ಲಿಯೇ ಪ್ರಾರಂಭವಾದದ್ದು ಗಮನಾರ್ಹ. ಧಾರವಾಡದ ವಿದ್ಯಾಭವನ ಗಾತ್ರ ಮತ್ತು ಅನುಕೂಲತೆಗಳ ದೃಷ್ಟಿಯಿಂದ ಶಿಕ್ಷಕರ ಸಹಾಯದಿಂದ ನಿರ್ಮಿತವಾದ ಕಟ್ಟಡಗಳಲ್ಲಿ ಭಾರತದಲ್ಲಿಯೇ ಹಿರಿಯಸ್ಥಾನ ಪಡೆದಿದೆ ಎಂದು ಶಿಕ್ಷಕ ಕಲ್ಯಾಣನಿಧಿಯ ಅಧಿಕಾರಿಗಳು ಹೇಳಿದ್ದಾರೆ. ೧೯೮೦ರಲ್ಲಿ ಶಾಲಾಭಿವೃದ್ಧಿ ಸಮಿತಿಗಳಿಂದ ಬಂದ ಸಹಾಯವನ್ನು ಗಣನೆಗೆ ತಂದುಕೊಂಡರೆ ಧಾರವಾಡ ಜಿಲ್ಲೆ ಕರ್ನಾಟಕ ರಾಜ್ಯದ ಎಲ್ಲ ಜಿಲ್ಲೆಗಳಿಗೆ ಮಾದರಿಯಾಗುವಂತೆ ಮೊದಲ ಸ್ಥಾನ ಪಡೆದಿದೆ. ಈ ಅಗ್ರಪಂಕ್ತಿಯನ್ನು ಕಳೆದ ಕೆಲ ವರ್ಷಗಳಿಂದ ಅದು ಉಳಿಸಿಕೊಂಡು ಬಂದಿದೆ.

ತಾಲೂಕಾ ಮಟ್ಟದ ಗುರುಭವನಗಳ ನಿರ್ಮಾಣ ಕಾರ್ಯದಲ್ಲಿಯ ಪ್ರಗತಿಯನ್ನು ವೀಕ್ಷಿಸಿದಾಗಲೂ ಧಾರವಾಡ ಜಿಲ್ಲೆ ಮತ್ತೆ ಪ್ರಥಮ ಸ್ಥಾನದಲ್ಲಿದೆ. ೭ ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಹಣ ತಾಲೂಕಾ ಗುರುಭವನಗಳಿಗಾಗಿ ಸಂಗ್ರಹಿತವಾಗಿದ್ದು ಇನ್ನೆರಡು ವರ್ಷಗಳಲ್ಲಿ ಪ್ರಾಯಶಃ ಧಾರವಾಡ ಜಿಲ್ಲೆಯು ಪ್ರತಿ ತಾಲೂಕು ಗುರುಭವನಗಳನ್ನು ಹೊಂದೀತು. ೧೯ ಶೈಕ್ಷಣಿಕ ರೇಂಜುಗಳಿರುವ ಈ ಜಿಲ್ಲೆ ಎಲ್ಲಕ್ಕೂ ಹೆಚ್ಚು ಸಹಾಯಕ ವಿದ್ಯಾಧಿಕಾರಿಗಳನ್ನು ಹೊಂದಿದ ಜಿಲ್ಲೆಯೂ ಆಗಿದೆ ಕರ್ನಾಟಕದಲ್ಲಿ ಶತಮಾನಗಳಕಾಲ ಬದುಕುಳಿದಿರುವ ಏಕಮೇವ ಪತ್ರಿಕೆ ಜೀವನ ಶಿಕ್ಷಣ ೧೮೭೫ರಿಂದ ಧಾರವಾಡದಿಂದ ಪ್ರಕಟವಾಗುತ್ತಿದೆ ಧಾರವಾಡದ ಉಪಾಧ್ಯಾಯರ ಸರಕಾರಿ ತರಬೇತಿ ವಿದ್ಯಾಲಯ ಮತ್ತು ಶಿಕ್ಷಕಿಯರ ಸರಕಾರಿ ತರಬೇತಿ ವಿದ್ಯಾಲಯ ರಾಜ್ಯದಲ್ಲಿಯೇ ಶಿಕ್ಷಕ ತರಬೇತಿ ಕ್ಷೇತ್ರದಲ್ಲಿ ಶ್ರೇಷ್ಠ ಕಾರ್ಯ ಮಾಡಿದ ಹಿರಿಯ ಸಂಸ್ಥೆಗಳು. ಶಿಕ್ಷಕರ ಕೇಂದ್ರ ಸಹ ತನ್ನ ವೈವಿಧ್ಯಮಯವಾದ ಕಾರ್ಯದಿಂದ ರಾಜ್ಯಮಟ್ಟದ ಹೆಮ್ಮೆಯ ಸಂಸ್ಥೆಯಾಗಿದೆ. ಧಾರವಾಡದ ಮಲ್ಲಸಜ್ಜನ ದೈಹಿಕ ಶಿಕ್ಷಣ ತರಬೇತಿ ಸಂಸ್ಥೆ- ಗದುಗಿನ ಹಾಗೂ ಧಾರವಾಡದ ಚಿತ್ರಕಲಾ ಶಾಲೆಗಳು ಸಹ ಹಿರಿಮೆ ಸಾಧಿಸಿದ ಸಂಸ್ಥೆಗಳು. ಶಿಕ್ಷಕ ತರಬೇತಿ ಕ್ಷೇತ್ರದಲ್ಲಿಯೂ ಧಾರವಾಡ ಮುಂಚೂಣಿಯಲ್ಲಿದೆ. ಪಿ. ಯು. ಸಿ., ಎಸ್. ಎಸ್. ಎಲ್. ಸಿ., ಚಿತ್ರಕಲೆ ಮುಂತಾದ ಪರೀಕ್ಷೆಗಳಲ್ಲಿ ರ್‍ಯಾಂಕ ವಿದ್ಯಾರ್ಥಿಗಳ ಪಟ್ಟಿಯಲ್ಲಿ ಧಾರವಾಡ ಜಿಲ್ಲೆ ತನ್ನ ಸ್ಥಾನವನ್ನು ಎಂದಿಗೂ ಕಳೆದುಕೊಂಡಿಲ್ಲ ಎಂಬ ಮಾತೂ, ಇಲ್ಲಿಯ ವಿದ್ಯಾ ಸಂಸ್ಥೆಗಳ, ವಿದ್ಯಾರ್ಥಿಗಳ, ಹೆಗ್ಗಳಿಕೆ.

೧೯೮೧ ರಲ್ಲಿ ಧಾರವಾಡದಲ್ಲಿ ಪ್ರಾರಂಭವಾದ ಡೆಪ್ಯೂಟಿ ಚನ್ನಬಸಪ್ಪ ಪ್ರಾಥಮಿಕ ಶಿಕ್ಷಣ ಪ್ರತಿಷ್ಠಾನವು ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಶಿಕ್ಷಕ ತರಬೇತಿಯ ಗುಣ ಮಟ್ಟವನ್ನು ಎತ್ತರಿಸುವ ಗುರಿಯನ್ನಿಟ್ಟುಕೊಂಡು ಸ್ಥಾಪಿತ ವಾದ ಪ್ರಪ್ರಥಮ ಸೇವಾ ಸಂಘಟನೆ. ವಿದ್ಯಾಧಿಕಾರಿಗಳ ವೇದಿಕೆ ಕರ್ನಾಟಕ (ವಿವೇಕ) ಧಾರವಾಡದಲ್ಲಿಯೇ ಇದೀಗ ಪ್ರಾರಂಭವಾಗಿದ್ದು ಸಾರ್ವಜನಿಕ ವಿದ್ಯಾ ಇಲಾಖೆಯ ಅಧಿಕಾರಿಗಳಲ್ಲಿ ಹೊಣೆಗಾರಿಕೆ, ಉತ್ಸಾಹ, ಸೇವಾ ಭಾವನೆ ಮತ್ತು ವೃತ್ತಿಯ ಮೇಲ್ಮೆಗಾಗಿ ಕೂಡಿ ದುಡಿಯುವ ಪ್ರೇರಣೆಯನ್ನುಂಟುಮಾಡಲು ದಟ್ಟಡಿಗಳನ್ನಿಡುತ್ತದೆ. ಡೆಪ್ಯೂಟಿ ಚನ್ನಬಸಪ್ಪನವರು ಶಿಕ್ಷಣ ಕ್ರಾಂತಿಯಿಂದ ಸಾಮಾಜಿಕ ಕ್ರಾಂತಿ ಸಾಧಿಸಬೇಕೆಂದು ದಣಿವಿಲ್ಲದೆ ದುಡಿದ ಕಾರಣದಿಂದಾಗಿ ಶಿಕ್ಷಣ ರಂಗದಲ್ಲೇ ಏಕೆ ವೈಚಾರಿಕ, ಆರ್ಥಿಕ, ರಾಜಕೀಯ, ಸಾಮಾಜಿಕ ರಂಗ-ದಲ್ಲಿಯೂ ಧಾರವಾಡ ಉಳಿದ ಜಿಲ್ಲೆಗಳಿಗಿಂತ ಪ್ರಗತಿ ಪಥದಲ್ಲಿ ಮುಂದಿದೆ ಎಂದು ಅನ್ನಿಸುತ್ತಿದೆ.

◎◎◎

ಡೆಪ್ಯೂಟಿ ಚನ್ನಬಸಪ್ಪ ಪ್ರಾಥಮಿಕ ಶಿಕ್ಷಣ ಪ್ರತಿಷ್ಠಾನದ ಕೆಲವು ಮುಖ್ಯ ಉದ್ದೇಶಗಳು

- ಶಿಕ್ಷಣ ಸಂಶೋಧನ ಮತ್ತು ತರಬೇತಿ ಮಂಡಳಗಳು, ಶಿಕ್ಷಣ ವಿಸ್ತರಣ ಸೇವಾ ಕೇಂದ್ರಗಳು, ಶಿಕ್ಷಕರ ಕೇಂದ್ರ ಹಾಗೂ ಖಾಸಗಿ ಪ್ರಯತ್ನಗಳಿಂದ ಸಿದ್ಧವಾದ ಶಾಲೋಪಯೋಗಿ ಶೈಕ್ಷಣಿಕ ಪುಸ್ತಕಗಳನ್ನು ಪರಿಶೀಲಿಸಿ ಅವರ ಒಪ್ಪಿಗೆಯೊಂದಿಗೆ ಕನ್ನಡದಲ್ಲಿ ದೊಡ್ಡ ಪ್ರಮಾಣದಲ್ಲಿ ಲಾಭಾ-ಕಾಂಕ್ಷೆ ಇಲ್ಲದೆ ಪುನರ್ಮುದ್ರಿಸುವದು.
- ಉಪನ್ಯಾಸಗಳು, ಸಮ್ಮೇಲನಗಳು, ವಿಚಾರ ಸಂಕಿರಣಗಳು, ಸಾಂಸ್ಕೃತಿಕ ಚಟುವಟಿಕೆಗಳು, ಕ್ರೀಡಾಕೂಟಗಳು, ಶಿಕ್ಷಣ ಸಂಸ್ಥೆಗಳ ಸಮೀಕ್ಷೆ, ಮೌಲ್ಯಮಾಪನ, ಪ್ರಾಯೋಗಿಕ ಯೋಜನೆ, ಮುಂತಾದ ಕಾರ್ಯ ಗಳನ್ನು ಏರ್ಪಡಿಸುವದು.

ಅನುಬಂಧ

ಡೆಪ್ಯೂಟಿ ಚನ್ನಬಸಪ್ಪನವರ ಶತಮಾನೋತ್ಸವ ಸಮಿತಿ

ಅಧ್ಯಕ್ಷರು :

೧ **ಮಾನ್ಯಶ್ರೀ ಜಿ. ಬಿ. ಶಂಕರರಾವ**
ವಿದ್ಯಾಮಂತ್ರಿಗಳು, ಕರ್ನಾಟಕ ರಾಜ್ಯ.

ಉಪಾಧ್ಯಕ್ಷರು :

೨ **ಶ್ರೀ ಪಾಟೀಲ ಪುಟ್ಟಪ್ಪ**
ಪ್ರಪಂಚ, ವಿಶ್ವವಾಣಿ ಹುಬ್ಬಳ್ಳಿ.

೩ **ಡಾ. ಬಿ. ಎಸ್. ಕುಲಕರ್ಣಿ,** ಪ್ರಾಧ್ಯಾಪಕರು,
ಕರ್ನಾಟಕ ಸಂಶೋಧನ ಮಂಡಳ ಕ. ವಿ. ವಿ. ಧಾರವಾಡ.

೪ **ಶ್ರೀ ಎಸ್. ವ್ಹಿ. ಜೇವೂರ,** ಬೆಳಗಾವಿ
ನಿವೃತ್ತ ನಿರ್ದೇಶಕರು, ವಿದ್ಯಾ ಇಲಾಖೆ.

೫ **ಶ್ರೀ ಎನ್. ಎಚ್. ನಾಯಿಕ,** ಕೂಗ್ರೆ, ಅಂಕೋಲಾ,
ನಿವೃತ್ತ ನಿರ್ದೇಶಕರು (ಪಠ್ಯ ಪುಸ್ತಕ).

೬ **ಶ್ರೀ ಕೆ. ಬಿ. ತೇರಗಾಂವಕರ,** ಇಲೆಕ್ಟ್ರಿಕ್‌ಗ್ರಿಡ್ ಹತ್ತಿರ,ಧಾರವಾಡ.
ನಿವೃತ್ತ ವಿಭಾಗೀಯ ಉಪನಿರ್ದೇಶಕರು ವಿದ್ಯಾ ಇಲಾಖೆ.

೭ **ಶ್ರೀ ಎಸ್. ಬಿ. ಪಾಟೀಲ,** ಹುಲಕೋಟಿ, ಗದಗ
ನಿವೃತ್ತ ಸಹನಿರ್ದೇಶಕರು, ವಿದ್ಯಾ ಇಲಾಖೆ.

ಕೋಶಾಧ್ಯಕ್ಷರು :

೮ **ಶ್ರೀ ಮ. ಗು. ಹಂದ್ರಾಳ,** ಕಲ್ಯಾಣ ನಗರ, ಧಾರವಾಡ
ನಿವೃತ್ತ ವಿಭಾಗೀಯ ಉಪನಿರ್ದೇಶಕರು ಹಾಗೂ ಮಾಜಿ ಶಾಸಕರು.

ಸಂಚಾಲಕರು :

೯ **ಶ್ರೀ ಎಂ. ಪಿ. ಮಂಜುನಾಥ**
ಸಹನಿರ್ದೇಶಕರು ವಿದ್ಯಾ ಇಲಾಖೆ, ಬೆಳಗಾಂವಿ ವಿಭಾಗ.

ಕಾರ್ಯಾಧ್ಯಕ್ಷರು :

೧೦ **ಶ್ರೀ ಎಸ್. ಜಿ. ಪಾಟೀಲ**
ಉಪನಿರ್ದೇಶಕರು ವಿದ್ಯಾ ಇಲಾಖೆ, ಧಾರವಾಡ ಜಿಲ್ಲೆ.

ಗೌರವ ಕಾರ್ಯದರ್ಶಿಗಳು :

೧೧ **ಶ್ರೀ ಎಸ್. ಪಿ. ಪಾಟೀಲ,** ನಿವೃತ್ತ ಯೋಜನಾಧಿಕಾರಿಗಳು ಹಾಗು ಟ್ರೇನಿಂಗ ಕಾಲೇಜಿನ ಮಾಜಿ ಪ್ರಿನ್ಸಿಪಾಲರು, ಕೆಲಗೇರಿ ರೋಡ, ಸಪ್ತಾಪುರ, ಧಾರವಾಡ.

ಕಾರ್ಯದರ್ಶಿಗಳು :

೧೨ **ಶ್ರೀ ಶಿವಶಂಕರ ಹಿರೇಮಠ,** ಪ್ರಾಚಾರ್ಯರು,
ಸರಕಾರದ ಶಿಕ್ಷಕರ ಕೇಂದ್ರ, ಧಾರವಾಡ.

೧೩ **ಶ್ರೀ ಶಂಕರ ಹ. ಬಟ್ಟೂರ,** ಸುಪರಿಂಟೆಂಡೆಂಟರು,
ಉಪಾಧ್ಯಾಯರ ಸರಕಾರಿ ತರಬೇತಿ ವಿದ್ಯಾಲಯ, ಧಾರವಾಡ.

ಸಧಸ್ಯರು :

೧೪ ಉಪನಿರ್ದೇಶಕರು ಸಾರ್ವಜನಿಕ ವಿದ್ಯಾ ಇಲಾಖೆ, ಬೆಳಗಾವಿ.

೧೫ ಉಪನಿರ್ದೇಶಕರು ಸಾರ್ವಜನಿಕ ವಿದ್ಯಾ ಇಲಾಖೆ, ಕಾರವಾರ.

೧೬ ಉಪನಿರ್ದೇಶಕರು ಸಾರ್ವಜನಿಕ ವಿದ್ಯಾ ಇಲಾಖೆ, ವಿಜಾಪುರ.

೧೭ **ಶ್ರೀ ಎಂ. ಪಿ. ಜಾಲಿ,** ನಿವೃತ್ತ ಉಪನಿರ್ದೇಶಕರು,
ಸಾ. ವಿ. ಇಲಾಖೆ, ತೋಪಲಕಟ್ಟಿ, ಹುಬ್ಬಳ್ಳಿ.

೧೮ **ಶ್ರೀ ಬಿ ಡಿ. ಮುೂಗಿ,** ನಿವೃತ್ತ ಪ್ರಿನ್ಸಿಪಾಲರು,
ಟ್ರೇನಿಂಗ ಕಾಲೇಜ ಭಾರತೀ ನಗರ, ಧಾರವಾಡ.

೧೯ **ಶ್ರೀ ಎಸ್. ಬಿ. ಪಾಟೀಲ,** ನಿವೃತ್ತ ಪ್ರಿನ್ಸಿಪಾಲರು, ಟ್ರೇನಿಂಗ ಕಾಲೇಜ C/o ಆನಂದ ಟ್ರೇಡರ್ಸ, ಸುಪರ ಮಾರ್ಕೆಟ್. ಧಾರವಾಡ.

೨೦ **ಶ್ರೀ ಕೆ. ಆರ್. ಶ್ರೀನಿವಾಸರಾವ,** ನಿವೃತ್ತ ವಿದ್ಯಾಧಿಕಾರಿಗಳು,
ತಟ್ಟಿಯವರ ಮನೆ, ಸಪ್ತಾಪುರ, ಧಾರವಾಡ.

೨೧ **ಶ್ರೀ ಎಚ್. ಜಿ. ಜೋಶಿ,** ನಿವೃತ್ತ ಪ್ರಿನ್ಸಿಪಾಲರು,
ಟ್ರೇನಿಂಗ ಕಾಲೇಜ, ಜಾನಕಿ ಕೃಪಾ, ತೇಜಸ್ವಿನಗರ, ಧಾರವಾಡ.

೨೨ **ಶ್ರೀ ಎಸ್.** ಎಂ. ಹಳ್ಳಿಕೇರಿ, ನಿವೃತ್ತ ಸಹಾಯಕ ವಿದ್ಯಾಧಿಕಾರಿಗಳು,
ಮುದವೀಡಕರ ಕಂಪೌಂಡ, ಹುಬ್ಬಳ್ಳಿ–ಧಾರವಾಡ ರೋಡ,
ಬಾಗಲಕೋಟಿ ಪೆಟ್ರೋಲ ಪಂಪ ಹತ್ತಿರ, ಧಾರವಾಡ.

೨೩ **ಶ್ರೀ ಆಯ್. ಎಸ್. ಬಿದರಿ,** ನಿವೃತ್ತ ಉಪನಿರ್ದೇಶಕರು,
ಸಾ. ವಿ. ಇಲಾಖೆ, ಸಾಧನಕೇರಿ ಧಾರವಾಡ.

೨೪ **ಶ್ರೀ ಎಸ್. ಎಚ್. ನಾಯಕ.** ನಿವೃತ್ತ ಉಪನಿರ್ದೇಶಕರು,
ಸಾ. ವಿ. ಇಲಾಖೆ, ಹುಬ್ಬಳ್ಳಿ ರೋಡ ಧಾರವಾಡ

೨೫ **ಶ್ರೀಮತಿ ನಾಯರ್. ಎಲ್. ಕಲ್ಯಾಣ,** ನಿವೃತ್ತ ಉಪನಿರ್ದೇಶಕರು,
ಸಾ. ವಿ. ಇಲಾಖೆ, ಸಿದ್ಧಾರ್ಥ ಕಾಲನಿ, ಬೆಳಗಾಂವ ರೋಡ, ಧಾರವಾಡ.

೨೬ **ಶ್ರೀ ಎಲ್. ಆರ್. ಗರಗ,** ನಿವೃತ್ತ ಸಹಾಯಕ ವಿದ್ಯಾಧಿಕಾರಿಗಳು,
ಮಾಳಮಡ್ಡಿ, ಮಹಿಷಿ ರೋಡ, ಧಾರವಾಡ.

೨೭ **ಶ್ರೀ ವ್ಹಿ. ಜಿ. ಕುಲಕರ್ಣಿ,** ನಿವೃತ್ತ ಸಹಾಯಕ ಉಪನ್ಯಾಸಕರು,
ಶಿಕ್ಷಕರ ಕೇಂದ್ರ, ಮಹಿಷಿ ರೋಡ, ಮಾಳಮಡ್ಡಿ ಧಾರವಾಡ.
(ಹನುಮಂತದೇವರ ಗುಡಿ ಹತ್ತಿರ).

೨೮ **ಶ್ರೀ ಎಸ್. ಬಿ. ಹಳಕಟ್ಟಿ,** ನಿವೃತ್ತ ಸಹಾಯಕ ವಿದ್ಯಾಧಿಕಾರಿಗಳು,
ಹೊಸಯಲ್ಲಾಪೂರ, ಧಾರವಾಡ.

೨೯ **ಶ್ರೀ ಡಿ. ಬಿ. ಯಲ್ಲರಡ್ಡಿಯವರ,** ಸಹಾಯಕ ವಿದ್ಯಾಧಿಕಾರಿಗಳು,
ಧಾರವಾಡ ಗ್ರಾಮೀಣ ರೇಂಜ, ಧಾರವಾಡ. ಹಳ್ಳಿಕೇರಿ ಚಾಳ
ಪೋಸ್ಟ ಆಫೀಸ್ ರೋಡ, ಕೆ. ಸಿ. ಪಾರ್ಕ, ಧಾರವಾಡ.

೩೦ **ಶ್ರೀ ಜಿ. ಎಚ್. ಮೂಲಿಮನಿ,** ಸಹಾಯಕ ವಿದ್ಯಾಧಿಕಾರಿಗಳು,
ಹುಬ್ಬಳ್ಳಿ-ಧಾರವಾಡ ಕಾರ್ಪೋರೇಶನ್, ಎಚ್. ಬಿ. ಕಾಲನಿ, ಹುಬ್ಬಳ್ಳಿ.

೩೧ **ಶ್ರೀ ನಿಂಗಣ್ಣ ಕುಂಟೆ,** ಪ್ರಾಥಮಿಕ ಶಿಕ್ಷಕರು,
C/o ಸರಕಾರಿ ನಿವಾಸಗಳು, ರೊದ್ದ ರಸ್ತೆ, ಧಾರವಾಡ.

೩೨ **ಶ್ರೀ ಮಾರ್ಕಂಡೇಯ ದೊಡ್ಡಮನಿ,** ಪ್ರಾಥಮಿಕ ಶಾಲಾ ಶಿಕ್ಷಕರು,
ಜಯನಗರ, ಧಾರವಾಡ.

೩೩ **ಶ್ರೀ ರೊಟ್ಟಿಗವಾಡ ಎಚ್. ವಾಯ್.,** ಪ್ರಶಿಕ್ಷಕರು,
ಉ. ಸ. ತ. ವಿ. ಧಾರವಾಡ. ಮಹೇಂದ್ರಕರ ಚಾಳ,
ಟ್ರೇನಿಂಗ ಕಾಲೇಜ ರೋಡ, ಧಾರವಾಡ-೮.

೩೪ **ಶ್ರೀಮತಿ ಎಸ್. ಎನ್. ನಾಗನೂರ**
ಚಂದ್ರಾತಪ ಮಾಳಮಡ್ಡಿ, ಧಾರವಾಡ.

೩೫ **ಶ್ರೀ ವ್ಹಿ. ಜಿ. ಮಾರಿಹಾಳ,** ಉಪನ್ಯಾಸಕರು,
ಸ್ನಾತಕೋತ್ತರ ಶಿಕ್ಷಣ ಅಧ್ಯಯನ ವಿಭಾಗ, ರೊದ್ದ ರಸ್ತೆ, ಧಾರವಾಡ.
(ಬೆಟಗೇರಿಯವರ ಮನೆ, ಹುಬ್ಬಳ್ಳಿ-ಧಾರವಾಡ ರೋಡ)

೩೬ **ಶ್ರೀ ಆರ್. ಎಸ್. ಬಂಗೇರಾ,** ನಿವೃತ್ತ ಪ್ರಿನ್ಸಿಪಾಲರು,
ಬಾ. ಮಿ. ಶಾಲೆ, ಹುಬ್ಬಳ್ಳಿ ನಾಕಾದ ಹತ್ತಿರ, ಧಾರವಾಡ.

೩೭ **ಶ್ರೀ ಚಂದ್ರಕಾಂತ ಬೆಲ್ಲದ,** ವ್ಯಾಪಾರಸ್ಥರು, ಹುಬ್ಬಳ್ಳಿ-ಧಾರವಾಡ.
ಗೌರೀಶ ಕೃಪಾ ಅಂಬೇಡಕರ ಹಾಸ್ಟೇಲ ಹತ್ತಿರ, ಧಾರವಾಡ.

೩೮ **ಶ್ರೀ ಆರ್. ಎಸ್. ಗುಡಿ,** ಗ್ಯಾಜಿಟೆಡ್ ಅಸಿಸ್ಟಂಟ,
ಉಪನಿರ್ದೇಶಕರ ಕಚೇರಿ, ಧಾರವಾಡ. C/o ಅಮ್ಮಿನಭಾವಿ, ಧಾರವಾಡ.

೩೯ **ಶ್ರೀ ಮಾಣಿಕರಾವ ಕುಲಕರ್ಣಿ,** ಸಹನಿರ್ದೇಶಕರು,
ಸಾ. ವಿ. ಇಲಾಖೆ, ಬೆಳಗಾಂವಿ ವಿಭಾಗ.

೪೦ **ಶ್ರೀ ಖತೀಬ ಎ. ಎಂ.,** ನಿವೃತ್ತ ಉಪನಿರ್ದೇಶಕರು,
ಸಾ. ವಿ. ಇಲಾಖೆ, ಕೇಶ್ವಾಪುರ ಮಸೀದೆ ಹತ್ತಿರ, ಹುಬ್ಬಳ್ಳಿ.

೪೧ **ಶ್ರೀ ಡಾ|| ಎಂ. ಎಂ. ಕಲಬುರ್ಗಿ,** ಪ್ರಾಧ್ಯಾಪಕರು,
ಬಸವಪೀಠ ಕನ್ನಡ ಅಧ್ಯಯನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೪೨ **ಶ್ರೀ ಪೋಲಿಸಗೌಡರ,** ನಿವೃತ್ತ ಇಂಜನೀಯರರು,
ಕೆಲಗೇರಿ ರೋಡ, ಸಪ್ತಾಪುರ, ಧಾರವಾಡ.

೪೩ **ಶ್ರೀ ಹನುಮಂತರಾವ,** ನಿವೃತ್ತ ಉಪನಿರ್ದೇಶಕರು,
ಮಹಾಂತನಗರ, ಮಾಳಮಾರುತಿ ಬೆಳಗಾಂವಿ.

೪೪ **ಶ್ರೀ ಮಧ್ವಾಚಾರ್ಯ ಜೋಶಿ,** ನಿವೃತ್ತ ಉಪನಿರ್ದೇಶಕರು,
ವಿಜಾಪೂರ. At Post : ಹುನಗುಂದ, ಜಿಲ್ಹಾ ವಿಜಾಪೂರ.

೪೫ **ಶ್ರೀ ಶ್ರೀನಿವಾಸ,** ಸಹನಿರ್ದೇಶಕರು, ಸಾ. ವಿ. ಇಲಾಖೆ,
ವಿಶ್ವ ಆಹಾರ ಯೋಜನೆ, ಶೇಷಾದ್ರಿಪುರಂ, ಬೆಂಗಳೂರು.

7990

ಸರ್ವ ಪತ್ರಿಕಾಕರ್ತರು ಮೇಲೆ ಬರೆದದ್ದೆಲ್ಲಾ ತಮ್ಮ ವಿಚಾರವುಳ್ಳ ಬೆಳಗಾವಿಯ ಸ್ಕೂಲ ಕಮೀಟಿಯಲ್ಲಿ ಪ್ರಸಿದ್ಧ ಮಾಡಿ; ತಮ್ಮ ವಿಚಾರಗಳನ್ನೆಲ್ಲಾ ಪ್ರಕಟ ಮಾಡಿ ಬೆಳಗಾಂವ ಜಿಲ್ಲೆಯನ್ನು ಕನ್ನಡದಿಂದ ತುಂಬುವವರೆಂದು ಅಪೇಕ್ಷಿಸುತ್ತೇನೆ- ತಾ॥ ೫ನೇ ಏಪ್ರೀಲ ೧೮೭೦

ಮುಕ್ಕಾಮ ಬೆಳಗಾಂವ } ಚಂ. ಬ. ಧಾ.

ಮಾರಾಟ :

ಡೆಪ್ಯೂಟಿ ಚನ್ನಬಸಪ್ಪ ಪ್ರಾಥಮಿಕ ಶಿಕ್ಷಣ ಪ್ರತಿಷ್ಠಾನ
ಉಪಾಧ್ಯಾಯರ ಸರಕಾರಿ ತರಬೇತಿ ವಿದ್ಯಾಲಯ,
ಧಾರವಾಡ–೮

ಬೆಲೆ : ರೂ ೨೦–೦೦